Digitization by eGangotri and Sarayu Trust. Funding by MoE-IKS

ಭವ್ಯಮಾನವ - ಕಾವ್ಯದರ್ಶನ

033,6x1,1
NO

1990

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,6x1,1 8796
NO
Bhusanur math, SS
Bhawya maanava-
Kawya darshana

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,6x1,1
NO
8786

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ

ಕಾವ್ಯದರ್ಶನ

ಗೌರವ ಪ್ರತಿ
ಶ್ರೀ ನಾಗನೂರ ರುದ್ರಾಕ್ಷಿಮಠ
ಬೆಳಗಾವಿ

★

ಸಂಪಾದನೆ:

ಡಾ. ಗುರುಲಿಂಗ ಕಾಪಸೆ, ಡಾ. ಎಸ್. ಜಿ. ಛವಾರಿ
ಪ್ರಾ. ಅಣ್ಣಪ್ಪ ಮಟ್ಟೀಕಲ್ಲಿ

★

ಪ್ರಕಾಶಕರು:

ಡಾ. ಶ್ರೀ ಶಿವಬಸವ ಸ್ವಾಮಿಗಳು, ನಾಗನೂರು.
ಶಿವಬಸವನಗರ- ಬೆಳಗಾವಿ.

1990

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamwadi Math, Varanasi
ACC No. ....5196..........

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

BHAWYA MAANAVA- KAWYADARSHANA-
A collection of critical Articles

Published by:

Dr. Sri. Shivabasava Swamiji Naaganur.
Shivabasava Nagar, BELGAUM - 590 010.

© Prof. S.S. Bhusanurmath; Paranjyoti,
Saptapur, DHARWAD - 580001

Cover Design : Sri Chandrakant Kusnoor

033, 6x1.1
NO

Printers :

Sri V. C. Malagatti
Malgatti offset Printers & Publishers
Sadashiva Nagar, BELGAUM - 590001

Price : Rs. 50/- (Rupees Fifty)

First Impression : 1000 Copies (September 1990)

Pages : 260+5+14, Demi 1/8

Editors: Dr. Gurulinga Kapase, Dr. S. G. Ghivari
& Prof. Annappa Mattikalli.

ಗ್ರಂಥ ದೊರೆಯುವ ವಿಳಾಸ :

1)
ಸರಸ್ವತಿ ಬುಕ್ ಡಿಪೋ,
ಖಡೇಬಜಾರ,
ಬೆಳಗಾವಿ, 590002.

2)
ಎ. ಆರ್. ಮಟ್ಟೀಕಲ್ಲಿ
ಮ. ನಂ. 4012, ಗಣಾಚಾರಿ ಬೀದಿ
ಬೆಳಗಾವಿ, 590002 (ಕರ್ನಾಟಕ)

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8796

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿವಿಡಿ

ಅ.ನಂ.	ತಲೆಕಟ್ಟು	ಲೇಖಕರು	ಪು.
	ಭಾಗ - 1		
	ಅರಿಕೆ	ಸಂಪಾದಕರು	
1.	ಕಲ್ಯಾಣಕಾಂಡ	ಡಾ. ಶಾಂತಾ ಇಮ್ರಾಪೂರ	1.
2.	ಶ್ರೀಶೈಲಕಾಂಡ	ನೀಲಗಿರಿ ತಳವಾರ	18.
3.	ಕತ್ತಲೆಯ ಕಾಂಡ	ಕೆ. ಗೌಡಪ್ಪ	30.
4.	ಉದಯಕಾಂಡ	ಜಿ. ಡಿ. ನಾಡಕರ್ಣಿ	43.
5.	ಉಜ್ವಲಕಾಂಡ	ರಾಮಕೃಷ್ಣ. ಎಂ. ಮರಾಠೆ	51.
6.	ಭವ್ಯಕಾಂಡ (ಮಾನವ ಭವ್ಯಕ್ಕೆ ದಿವ್ಯತೆಯ ದೀಪ್ತಿ)	ಅಣ್ಣಪ್ಪ ಮಟ್ಟೀಕಲ್ಲಿ	61
	ಭಾಗ - 2		
7.	ಭವ್ಯಮಾನವ: ಸ್ವಾಯಂಭೂಕಾವ್ಯ	ಬಿ. ಎ. ಸನದಿ	82
8.	'ಭವ್ಯಮಾನವ'ದ ಭಾವತೀವ್ರತೆ	ಚೆನ್ನವೀರ ಕಣವಿ	89
9.	''ಭವ್ಯಮಾನವ''- ಒಂದು ಹಕ್ಕಿನೋಟ	ಚಿದಂಬರ ದೀಕ್ಷಿತ	103.
10.	'ಭವ್ಯಮಾನವ' ಕಾವ್ಯಕ್ಕೆ ಪ್ರೇರಣೆ ಹಾಗೂ ಪ್ರಭಾವಗಳು	ಡಾ. ಬಿ. ಸಿ. ಜವಳಿ	111
11.	'ಭವ್ಯಮಾನವ'ದ ತಾತ್ವಿಕ ನಿಲುವು	ಬಿ. ವಿ. ಮಲ್ಲಾಪೂರ	128
12.	'ಭವ್ಯಮಾನವ'ದಲ್ಲಿ ಆಧುನಿಕತೆ	ಡಾ. ಸಾ. ಶಿ. ಮರುಳಯ್ಯ	160
	ಭಾಗ - 3		
13.	ಭವ್ಯಮಾನವ-ಕಾವ್ಯಸಮೀಕ್ಷೆ	ಕೀರ್ತಿನಾಥ ಕುರ್ತಕೋಟಿ	170
14.	ಭವ್ಯಮಾನವ ಮಹಾಕಾವ್ಯ-ವಸ್ತುವಿನ್ಯಾಸ	ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ	186
15.	ಭವ್ಯಮಾನವ- ಮಹಾಕಾವ್ಯದಲ್ಲಿ ವಿಶ್ವಪ್ರತಿಮೆಗಳು-	ಡಾ. ಬಸವರಾಜ ನಾಯ್ಕರ	194
16.	ಭವ್ಯಮಾನವ ಕಾವ್ಯಭಾಷೆ-ಒಂದು ವಿವೇಚನೆ	ಡಾ. ಸಂಗಮೇಶ ಸವದತ್ತಿಮಠ	204
17.	'ಮಾನವ ಮಹಾಸಾಗರ'-ಭವ್ಯಮಾನವ-	ಚಂದ್ರಕಾಂತ ಕುಸನೂರ	214
	ಭಾಗ - 4		
18.	'ಭವ್ಯಮಾನವ'- ಕಾವ್ಯಾವಲೋಕನ-	ಕೀರ್ತಿನಾಥ ಕುರ್ತಕೋಟಿ	233
19.	ಸಮಷ್ಟಿಪ್ರಜ್ಞೆ- ಗುರುಚೆನ್ನಮಲ್ಲ	ಡಾ. ಎಸ್. ಜಿ. ಛಿವಾರಿ.	241
20.	'ಭವ್ಯಮಾನವ' ಕಾವ್ಯದ ಆಶಯ ಮತ್ತು ದರ್ಶನ.	ಡಾ. ಗುರುಲಿಂಗ ಕಾಪಸೆ	247
21.	BHAWYA MAANAWA: A Spiritual Quest-	S. C. Bagi	I to XIV

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೇಖಕರ ವಿಳಾಸ

1. ಡಾ. ಶಾಂತಾ ಇಮ್ರಾಪೂರ, ಉಪನ್ಯಾಸಕರು,
ಎಲ್. ಇ. ಸಂಸ್ಥೆಯ ಮಹಿಳಾ ಕಾಲೇಜ, ಧಾರವಾಡ.
2. ಶ್ರೀ ನೀಲಗಿರಿ ತಳವಾರ, ಉಪನ್ಯಾಸಕರು
ಸ್ನಾತ್ತಕೋತ್ತರ ಕೇಂದ್ರ, ಕ. ವಿ. ವಿ. ಆವರಣ, ಲಿಂಗರಾಜ ಕಾಲೇಜ, ಬೆಳಗಾವಿ.
3. ಶ್ರೀ ಕೆ. ಗೌಡಪ್ಪ, ನಿವೃತ್ತ ಪ್ರಾಧ್ಯಾಪಕರು, ಬಳ್ಳಾರಿ.
4. ಶ್ರೀ ಜಿ. ಡಿ. ನಾಡಕರ್ಣಿ, ಹುಬ್ಬಳ್ಳಿ.
5. ಶ್ರೀ ರಾಮಕೃಷ್ಣ ಎಂ. ಮರಾಠೆ, ಉಪನ್ಯಾಸಕರು, ಜ್ಯೋತಿ ಕಾಲೇಜ, ಬೆಳಗಾವಿ.
6. ಶ್ರೀ ಅಣ್ಣಪ್ಪ ಮಟ್ಟೀಕಲ್ಲಿ, ನಿವೃತ್ತ ಪ್ರಾಧ್ಯಾಪಕರು,
ಗಣಾಚಾರಿ ಬೀದಿ, ಬೆಳಗಾವಿ-590002.
7. ಶ್ರೀ ಬಿ. ಎ. ಸನದಿ, 456, ಸೆಕ್ಟರ-3, ಸಿ. ಜಿ. ಕಾಲನಿ, ಮುಂಬಯಿ - 37.
8. ಶ್ರೀ ಚೆನ್ನವೀರ ಕಣವಿ, ಚೆಂಬೆಳಕು, ಕಲ್ಯಾಣನಗರ - ಧಾರವಾಡ
9. ಶ್ರೀ ಚಿದಂಬರ ದೀಕ್ಷಿತ, ಮುಂಬಯಿ
10. ಡಾ. ಬಿ. ಸಿ. ಜವಳಿ, ತೇಜಸ್ವಿ, ಕಲ್ಯಾಣನಗರ, ಧಾರವಾಡ -7
11. ಡಾ. ಬಿ. ವ್ಹಿ. ಮಲ್ಲಾಪೂರ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ. ವಿ. ಧಾರವಾಡ -3
12. ಡಾ. ಸಾ. ಶಿ. ಮರುಳಯ್ಯ, ರಾಗಿಣಿ,3, ಸರ್ವಿಸ ರಸ್ತೆ
ವಿಜಯನಗರ, 11 ಹಂತ, ಬೆಂಗಳೂರು -40
13. ಶ್ರೀ ಕೀರ್ತಿನಾಥ ಕುರ್ತಕೋಟಿ, 1, ದೇಸಾಯಿ ಕಾಲನಿ,
ಯುನಿವರ್ಸಿಟಿ ಕ್ರಾಸ್, ಧಾರವಾಡ -3
14. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ, ಶಿವಪ್ರಸಾದ
ಕಲ್ಯಾಣನಗರ, ಧಾರವಾಡ -7
15. ಡಾ. ಸಂಗಮೇಶ ಸವದತ್ತಿಮಠ, ಕನ್ನಡ ವಿಭಾಗ,
ಗುಲಬರ್ಗಾ ವಿ. ವಿ, ಗುಲಬರ್ಗಾ-585106
16. ಡಾ. ಬಸವರಾಜ ನಾಯ್ಕರ, ಇಂಗ್ಲೀಷ ಭಾಷಾ ಪ್ರವಾಚಕರು,
ಗುಲಬರ್ಗಾ ವಿ. ವಿ, ಗುಲಬರ್ಗಾ-585106.
17. ಶ್ರೀ ಚಂದ್ರಕಾಂತ ಕುಸನೂರ, 2 ನೆಯ ಹಂತ,
534, ಚೆನ್ನಮ್ಮ ನಗರ, ಬೆಳಗಾವಿ.
18. ಡಾ. ಎಸ್. ಜಿ. ಛಿವಾರಿ ನಿವೃತ್ತ ಪ್ರಾಚಾರ್ಯರು, ಸಂಗಮೇಶನಗರ, ಬೆಳಗಾವಿ.
19. ಡಾ. ಗುರುಲಿಂಗ ಕಾಪಸೆ, ದುರ್ಗಾದೇವಿ ಕಾಲನಿ.
ಸಪ್ತಾಪುರ, ಧಾರವಾಡ -580001.
20. ಶ್ರೀ ಎಸ್. ಸಿ. ಬಾಗಿ, ಪ್ರಾಧ್ಯಾಪಕರು,
ಲಿಂಗರಾಜ ಕಾಲೇಜ, ಬೆಳಗಾವಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

★ ಅರಿಕೆ ★

ಆಧುನಿಕ ಸಾಹಿತ್ಯದಲ್ಲಿ ಮಹಾಕಾವ್ಯಗಳ ಸೃಷ್ಟಿ ವಿಸ್ಮಯಕಾರಿಯಾದ ಬೆಳವಣಿಗೆಯಾಗಿದೆ. ಕುವೆಂಪುವಿನ 'ರಾಮಾಯಣ ದರ್ಶನಂ'; ಗೋಕಾಕರ 'ಭಾರತ ಸಿಂಧು ರಶ್ಮಿ'; ಭೂಸನೂರಮಠರ 'ಭವ್ಯಮಾನವ', ಆಗಲೇ ಕನ್ನಡ ಸಾಹಿತ್ಯದಲ್ಲಿ ತಮ್ಮ ತಮ್ಮ ಸ್ಥಾನಗಳನ್ನು ಸ್ಥಾಪಿಸಿಕೊಂಡಿದ್ದು, ಈ ಶತಮಾನ ಪೂರ್ಣಗೊಳ್ಳುವುದರೊಳಗೆ ಇನ್ನೂ ಒಂದೆರಡು ಮಹಾಕಾವ್ಯಗಳು ಪ್ರಕಟಗೊಳ್ಳುವ ಸಾಧ್ಯತೆಗಳು ಕೇಳಿಬರುತ್ತಲಿವೆ. ಇಂಥ ಬೃಹತ್ ಕಾವ್ಯಗಳ ಸೃಷ್ಟಿಯೇನೋ ಆಯಿತು. ಅವುಗಳನ್ನು ಓದುವ, ಅರ್ಥೈಸುವ, ವಿಶ್ಲೇಷಿಸುವ, ಮೌಲ್ಯಮಾಪನ ಮಾಡುವ ಕಾರ್ಯ್ಯ ನಡೆಯಬೇಕಾದಷ್ಟು ನಡೆದಿಲ್ಲವೆಂದೇ ಹೇಳಬೇಕು. ಈ ಸಂದರ್ಭದಲ್ಲಿ ಇಟಲಿಯ ಲೇಖಕನ ಒಂದು ಮಾತನ್ನು ಗಮನಿಸದಿರಲಿಕ್ಕಾಗದು.

> "Half of the books printed are not sold, half of the ones sold are not read, half of the ones read are not understood, and half of the ones understood are understood wrongly."
>
> -Giovanni Papini.

ವಸ್ತುಸ್ಥಿತಿ ಹೀಗಿದ್ದರೂ ಮಹಾಕಾವ್ಯಗಳ ಸಮಾಲೋಚನೆಯನ್ನು ಪ್ರಯತ್ನಪೂರ್ವಕ ವಾಗಿಯಾದರೂ ಸಾಹಿತ್ಯಾಸಕ್ತರು ಮಾಡಬೇಕಾಗುತ್ತದೆ. 'ಭವ್ಯಮಾನವ', ಮಹಾಕಾವ್ಯಗಳಲ್ಲಿ ನವೀನವೂ-ವಿಶಿಷ್ಟವೂ ಆದ ವಸ್ತುವುಳ್ಳ, ತಾತ್ವಿಕ ಹಾಗೂ ಚಿಂತನೀಯ ವಿಷಯಗಳನ್ನು ಗಂಭೀರವಾಗಿ ನಿರೂಪಿಸುವ, ಸಮಸ್ತ ಮಾನವ ಜನಾಂಗವನ್ನೇ ತನ್ನ ತೆಕ್ಕೆಗೆ ಅಳವಡಿಸಿಕೊಳ್ಳುವ, ಮಾನವ ಮೌಲ್ಯಗಳನ್ನು ಆವಿಷ್ಕರಣಗೊಳಿಸುವ ಒಂದು ಅಪೂರ್ವ ಕೃತಿಯಾಗಿದೆ. ಅದರ ಅಧ್ಯಯನಕ್ಕೆ ಮಾರ್ಗಮಾಡಿಕೊಡುವ 'ಕಾವ್ಯದರ್ಶನ' ಕೃತಿಯೊಂದನ್ನು ಪ್ರಕಟಿಸಬೇಕೆಂದು ನಾವು ನಡೆಸಿದ ಬಹುದಿನಗಳ ಪ್ರಯತ್ನ ಈಗ ಈಡೇರುತ್ತಲಿದೆ. ಪ್ರಸ್ತುತ ಕೃತಿಯು- 'ಭವ್ಯಮಾನವ'ದ ಒಟ್ಟು ವಿನ್ಯಾಸವನ್ನು ಕುರಿತು ಪರಿಚಯ ಮಾಡಿಕೊಡುವುದಲ್ಲದೆ, ಅದರಲ್ಲಿ ಅಪಾರವಾದ ವಿವಿಧ ವಿಷಯಗಳ ಬಗೆಗೆ ವಿವೇಚಿಸುವುದು. ಅಷ್ಟಾಗಿಯೂ ಇಲ್ಲಿಯ ವಿವೇಚನೆ ಸಮಗ್ರವಾದದ್ದೆಂದಾಗಲಿ, ಎಲ್ಲ ಮಗ್ಗಲುಗಳನ್ನು ಗಮನಿಸುತ್ತದೆಂದಾಗಲಿ ನಾವು ಭಾವಿಸಿಲ್ಲ. ಮೂಲ ಕಾವ್ಯವನ್ನು ಓದಿದವರು ಇನ್ನೂ ಚರ್ಚಿಸಬೇಕಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಶಗಳು ಉಳಿದುಕೊಂಡಿವೆಯೆಂದು ಭಾವಿಸಿದರೆ, ಅದು ತಳ್ಳಿಹಾಕುವ ವಿಚಾರವೇನೂ ಆಗಿಲ್ಲ. ಕಾವ್ಯಾಭ್ಯಾಸಿಗಳು, ಅನುಭಾವದಂಥ ವಿಷಯದಲ್ಲಿ ಆಸಕ್ತಿಯುಳ್ಳವರು, ತಮ್ಮ ತಮ್ಮ ದೃಷ್ಟಿಯಿಂದ 'ಭವ್ಯಮಾನವ'-ವನ್ನು ಕುರಿತು ಬರೆಯಲು ಇನ್ನೂ ಅವಕಾಶವಿದ್ದೇ ಇದೆ. ನಮ್ಮ ಈ ಪ್ರಯತ್ನವು ಮೂಲಕೃತಿಯ ಅಧ್ಯಯನಕ್ಕೆ ಸಹಾಯಕವಾಗ- ಬಲ್ಲುದು ಅಷ್ಟೆ.

ಕನ್ನಡದ ನಾಲ್ಕೂ ನಿಟ್ಟಿನ ಲೇಖಕರು ನಮ್ಮ ವಿನಂತಿಯನ್ನು ಮನ್ನಿಸಿ, ಅಭ್ಯಾಸ-ಪೂರ್ಣ ಲೇಖನಗಳನ್ನು ಬರೆದುಕಳಿಸಿದ್ದು ಈ ಗ್ರಂಥದಲ್ಲಿ ಎದ್ದು ಕಾಣುವ ಸಂಗತಿ. ಆದರಿಂದಾಗಿ 'ಭವ್ಯಮಾನವ' ದಂಥ ಬೃಹತ್‌ಕೃತಿಯ ಅಭ್ಯಾಸವು ಸುಲಭವಾಗಬಹುದೆಂದು ಭಾವಿಸಿದ್ದೇವೆ.

ನಮ್ಮ ವಿನಂತಿಯನ್ನು ಮನ್ನಿಸಿ ಲೇಖನಗಳನ್ನು ಬರೆದುಕೊಟ್ಟ ಎಲ್ಲ ಲೇಖಕರ ಪರಿಶ್ರಮವನ್ನು ಸ್ಮರಿಸಿಕೊಳ್ಳುತ್ತ, ಲೇಖನವೊಂದನ್ನು ಬರೆದುಕೊಡುವುದರ ಜೊತೆಗೆ ಮುಖಪುಟದ ವಿನ್ಯಾಸವನ್ನೂ ನೀಡಿದ ಶ್ರೀ ಚಂದ್ರಕಾಂತ ಕುಸನೂರ ಅವರ ಆತ್ಮೀಯ ನೆರವನ್ನೂ- ನೆನೆಯುತ್ತ, ಅವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವೆವು. ಗ್ರಂಥದ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಶ್ರೀ ವ್ಹಿ. ಸಿ. ಮಾಲಗತ್ತಿಯವರಿಗೂ ನಮ್ಮ ಕೃತಜ್ಞತೆಗಳು.

ಗ್ರಂಥದ ಪ್ರಕಾಶಕರಾಗಲು ಒಪ್ಪಿಕೊಂಡ ಬೆಳಗಾವಿಯ ಡಾ. ಶ್ರೀ ಶಿವಬಸವ ಸ್ವಾಮಿ-ಗಳು, ನಾಗನೂರ, ಅವರಿಗೆ ನಮ್ಮ ಅನಂತ ಪ್ರಣಾಮಗಳು.

ಡಾ. ಗುರುಲಿಂಗ ಕಾಪಸೆ ★ ಡಾ. ಎಸ್. ಜಿ. ಛವಾರಿ

ಪ್ರಾ. ಅಣ್ಣಪ್ಪ ಮಟ್ಟೀಕಲ್ಲಿ,

ಸಂಪಾದಕರು,

'ಭವ್ಯಮಾನವ'- ಕಾವ್ಯದರ್ಶನ.

ಬೆಳಗಾವಿ,
9, ಆಗಷ್ಟ್, 1990.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಯಾಣಕಾಂಡ

ಡಾ। ಶಾಂತಾ ಇಮ್ರಾಪೂರ.

ಈ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯ ಅತ್ಯಂತ ಗಮನಾರ್ಹ ಸಾಧನೆಗಳಲ್ಲಿ ಪ್ರಮುಖವಾದುದು ಮಹಾಕಾವ್ಯಗಳ ರಚನೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಸೃಷ್ಟಿಯೊಂದಿಗೆ ಪ್ರಾರಂಭವಾದ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಮೂಡಿ ಬಂದ 'ಭವ್ಯ ಮಾನವ' ಒಂದು ಮಹಾಕಾವ್ಯ. ಪ್ರೊ. ಸಂ. ಶಿ. ಭೂಸನೂರಮಠರವರ ಅಗಾಧ ಪ್ರತಿಭೆ, ಪರಿಪಕ್ವ ಚಿಂತನೆ, ವೈಜ್ಞಾನಿಕ ಧೋರಣೆ, ವೈಚಾರಿಕ ತೀಕ್ಷ್ಣತೆ ಮತ್ತು ಸ್ವಾನುಭಾವಸಿದ್ಧಿಯ ಅನುಭಾವ ದೃಷ್ಟಿಯನ್ನೊಳಗೊಂಡು ಮೂಡಿ ಬಂದಿರುವ ಅನುಭಾವ ಕಾವ್ಯವಿದು. ಕಲ್ಯಾಣಕಾಂಡ, ಶ್ರೀಶೈಲಕಾಂಡ, ಕತ್ತಲೆಯ ಕಾಂಡ, ಉದಯಕಾಂಡ, ಉಜ್ವಲಕಾಂಡ, ಭವ್ಯಕಾಂಡ- ಈ ಆರು ಕಾಂಡಗಳಲ್ಲಿ ಹರವಿಕೊಂಡಿರುವ ಈ ಕಾವ್ಯಕ್ಕೆ 'ದ್ವೈತಾದ್ವೈತಗಳ ಸೀಮೆಯನ್ನು ದಾಟಿದ ನಿರಾಲಂಬ ನಿಃಸ್ಥಲವೇ ಕಾವ್ಯದ 'ಪರವಸ್ತು'ವಾಗಿದೆ. ಸಕ್ಯದ್ದರ್ಶನಕ್ಕೆ ಮಹಾದೇವಿಯಕ್ಕ ಕಾವ್ಯನಾಯಕಿಯಾಗಿ ತೋರಿದರೂ 'ಮಾನವನೇ ಕಾವ್ಯದ ಮಹಾನಾಯಕ'ನಾಗಿದ್ದಾನೆ. ಮಾನವನಲ್ಲಿ ಮರೆಯಾದ ಮಹಾದೇವನ ವಿಶ್ವಮಾನವತೆಯ ಸಾಕಾರರೂಪವಾದ 'ಭವ್ಯ ಮಾನವ' ನೇ ಈ ಕಾವ್ಯದ ಚೈತನ್ಯ ಶಕ್ತಿಯಾಗಿ ಕಾವ್ಯವನ್ನು ವ್ಯಾಪಿಸಿದ್ದಾನೆ. ಸಮಸ್ತ ಮಾನವಕುಲವನ್ನೆಲ್ಲವನ್ನೂ ತನ್ನ ತೆಕ್ಕೆಯೊಳಗಿಂಬಿಟ್ಟುಕೊಂಡು, ಮಾನವ ಕುಲದ ಅಂತರಾಳದಲ್ಲಿ ನಿತ್ಯ ಪ್ರಜ್ವಲಿಸುತ್ತಿರುವ ಭವ್ಯ ಮಾನವತೆಯ ದಿವ್ಯ ದರ್ಶನಕ್ಕಾಗಿ ಮಿಡಿಯುವ ಉತ್ಕಟ ಹಂಬಲವು ಈ ಕಾವ್ಯದ ಬ್ರಹ್ಮಾಂಡ ವಿಸ್ತಾರದಲ್ಲೆಲ್ಲ ತುಂಬಿ ಹರಿದಿದೆ. ಜಗದಗಲ ಮಿಗೆಯಗಲವಾಗಿ ಹರವಿ ಹಬ್ಬಿರುವ ಕತ್ತಲೆಯ ಕಾಂಡದಿಂದ ಮಾನವ ಕುಲ ಸಂತತಿಯನ್ನು ಉದ್ಧಾರದ ಉಜ್ವಲಕಾಂಡಕ್ಕೆ ಕರೆದೊಯ್ಯಬೇಕೆನ್ನುವ ಭವ್ಯ ಮಹಾಂತನ ಬ್ರಹ್ಮಾನುಕಂಪ, ವಿಶ್ವವಾತ್ಸಲ್ಯಭಾವ ಕಾವ್ಯದ ಜೀವಾಳವಾಗಿದೆ. ಕಾಲ-ದೇಶ- ಭಾಷಾತೀತವಾಗಿ ವಿಶ್ವವಿಶಾಲವಾಗಿ ವಿಶ್ವದಂತರಂಗ- ಬಹಿರಂಗಗಳನ್ನೆಲ್ಲ ವ್ಯಾಪಿಸಿಕೊಂಡಿರುವ ನಿತ್ಯನಿರಾಲಂಬ, ಬ್ರಹ್ಮ ಭವ್ಯದ ಪರಂಜ್ಯೋತಿ ಪ್ರಕಾಶವನ್ನು ನಿರಾಳದ ನಿಲುವನ್ನು ಬೆಂಬತ್ತಿರುವ ಭವ್ಯ ಸಾಹಸ 'ಭವ್ಯ ಮಾನವ' ಕಾವ್ಯದುದ್ದಕ್ಕೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧುಮ್ಮಿಕ್ಕಿ ಹರಿದಿರುವುದನ್ನು ಕಾಣಬಹುದು; ಕೇಳಬಹುದು. ಅಂದಿನ ಕಣ್ಣು-ಕಿವಿಗಳಿಗೆ ಮಾತ್ರ ಗಮ್ಯವಾಗಲಿಲ್ಲ. ಈ ಲೋಕೋತ್ತರ ಸಾಹಸಯಾತ್ರೆ ನಡೆದಿದೆ 'ಭವ್ಯ ಮಾನವ' ಮಹಾಕಾವ್ಯದಲ್ಲಿ.

'ಕಲ್ಯಾಣಕಾಂಡ'- ಭವ್ಯಮಾನವ ಕಾವ್ಯದ ಪ್ರಥಮ ಕಾಂಡ. ಇಲ್ಲಿ ಬಸವಾದಿ ಶರಣರ ಸಮಕಾಲೀನ ಅನುಭಾವಿಯಾದ ಮಹಾದೇವಿಯಕ್ಕನ ಜೀವನ ಚಿತ್ರಣದೊಂದಿಗೆ, ಆಕೆಯ ಅನುಭಾವಪೂರ್ಣ ಶ್ರೀಮಂತ ವ್ಯಕ್ತಿತ್ವ ದರ್ಶನವೊದಗಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಖಚಿತ ಐತಿಹಾಸಿಕ ವಿವರಗಳ ಕೊರತೆಯಿಂದಾಗಿ, ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಮಹಾದೇವಿಯಕ್ಕನ ಜೀವನವು ಹಲವಾರು ಅತಿರಂಜಕ- ಅವಾಸ್ತವ ಘಟನೆಗಳಿಂದ ತುಂಬಿಕೊಂಡಿದೆ. ಹಲವಾರು ಭಿನ್ನಾಭಿಪ್ರಾಯಗಳು-ಭಿನ್ನಮಾರ್ಗಗಳು ಬೆಳೆದು ಬಂದಿರುವುದು ಸ್ಪಷ್ಟವಾಗಿದೆ. ಈ ರೀತಿ ಸಮಸ್ಯಾತ್ಮಕವಾಗಿರುವ ಮಹಾದೇವಿಯಕ್ಕನ ಚರಿತ್ರೆಯನ್ನು ಕನ್ನಡ ಸಾಹಿತ್ಯ ಮತ್ತು ಆಕೆಯ ಅನುಭಾವ ಸಾಹಿತ್ಯದ ಹಿನ್ನೆಲೆಯಲ್ಲಿ ಪುನಃ ಸೃಷ್ಟಿಸುವ ಒಂದು ಪ್ರಯತ್ನವಾಗಿ 'ಕಲ್ಯಾಣಕಾಂಡ' ಮೂಡಿಬಂದಿದೆ. ಪ್ರೊ. ಭೂಸನೂರಮಠ ಅವರು ಕಲ್ಯಾಣಕಾಂಡದಲ್ಲಿ ಅಕ್ಕನ ಚರಿತ್ರೆಗಿಂತ ಚಾರಿತ್ರ್ಯ-ದರ್ಶನಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದ್ದಾರೆ. ಆಕೆಯ ಸ್ವರಚಿತ ಸಾಹಿತ್ಯ ಮತ್ತು ಸಮಕಾಲೀನ ಅನುಭಾವಿಗಳ ಸಾಹಿತ್ಯದಲ್ಲಿ ಪ್ರಕಟವಾಗಿರುವ ಮಹಾದೇವಿಯಕ್ಕನ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳಾದ ಪಾರಮಾರ್ಥಿಕ ಪ್ರೇಮ, ಸಮರಸ ಭಕ್ತಿ ತೀವ್ರತೆ-ವೈರಾಗ್ಯ ಸಿದ್ಧಿಯ ಹಿರಿಮೆಯನ್ನು ಅತ್ಯಂತ ಎಚ್ಚರದಿಂದ ಕಾವ್ಯದಲ್ಲಿ ಎರಕಹೊಯ್ದಿದ್ದಾರೆ. ಸೂಕ್ತ ಸನ್ನಿವೇಶಗಳ ಸಂಯೋಜನೆಯ ಮೂಲಕ ಸ್ವಾನುಭಾವಿ ಮಹಾದೇವಿಯ ಭಕ್ತಿ- ಜ್ಞಾನ- ವೈರಾಗ್ಯದ ದರ್ಶನ ಒದಗಿಸಿದ್ದಾರೆ. ಲೋಕಕಲ್ಯಾಣದ ಕಾರುಣ್ಯಭಾವವನ್ನು ವಿಶ್ವಕಲ್ಯಾಣದ ಮಹಾವಿಸ್ತಾರವನ್ನು ಅಕ್ಕನ ವ್ಯಕ್ತಿತ್ವದಲ್ಲಿ ತುಂಬಿರುವುದು ವಿನೂತನವಾಗಿದೆ. ಮಹಾದೇವಿಯಕ್ಕನ 'ಭವ್ಯ'ತೆಯ ದರ್ಶನವೇ ಕಾವ್ಯದರ್ಶನವಾಗಿ ಕಲ್ಯಾಣಕಾಂಡದಲ್ಲಿ ಅರಳಿದೆ. ಹತ್ತೊಂಬತ್ತು ಉಪಶೀರ್ಷಿಕೆಗಳಡಿಯಲ್ಲಿ ವಿಸ್ತಾರವಾಗಿ ರೂಪುಗೊಂಡಿರುವ ಕಲ್ಯಾಣ ಕಾಂಡಕ್ಕೆ ಮಹಾದೇವಿಯಕ್ಕನ ಭವ್ಯ ಜೀವನವೇ ದರ್ಶನದ್ರವ್ಯವಾಗಿದೆ-ಕಾವ್ಯ ವಸ್ತುವಾಗಿದೆ.

ಶರಣದರ್ಶನ- ಶರಣ ಸಾಹಿತ್ಯವನ್ನು ಅನುಭವಗಮ್ಯವಾಗಿರಿಸಿಕೊಂಡಿರುವ ಕವಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಯಾಣಕಾಂಡದಲ್ಲಿ ಬಳಸಿಕೊಂಡಿರುವ ವಚನ ಸಾಹಿತ್ಯದ ಗದ್ಯಕಾವ್ಯದ ಅನಿರ್ಬಂಧಶೈಲಿ, ವಚನ ಸಾಹಿತ್ಯದ ಭಾಷೆ, ವಚನಗಳ ಸಮುಚಿತ ಬಳಕೆ, ಅನುಭಾವ ಕಾವ್ಯದ ಧ್ವನಿರಮ್ಯತೆಯನ್ನು ಪರಿಣಾಮಕಾರಿಯಾಗಿರಿಸಿದೆ. ಸರಳತೆ-ಸ್ಪಷ್ಟತೆಗಳಲ್ಲಿಯೂ, ಕಾವ್ಯದ ಜೀವಂತಿಕೆಯಿಂದ ಕಂಗೊಳಿಸುವ ಕಾವ್ಯಭಾಷೆ ಕೆಲವೊಮ್ಮೆ ನಿಗೂಢವೆನಿಸಿದರೂ ನಿರೂಪಣೆಯಲ್ಲಿರುವ ಆತ್ಮೀಯ ಧಾಟಿ ಆಕರ್ಷಕವೆನಿಸುತ್ತದೆ. ಸಹೃದಯದ ಬುದ್ಧಿ- ಭಾವ ಸಂಸ್ಕಾರದೊಂದಿಗೆ ಬೆಳೆಯುತ್ತ ವಿವಿಧ ಅರ್ಥ ಪರಿವೇಕ್ಷಗಳೊಂದಿಗೆ ವಿಕಾಸಗೊಳ್ಳುತ್ತ ಸಾಗುವ ಕಾವ್ಯಶೈಲಿಯ, ಧ್ವನ್ಯಾತ್ಮಕರೀತಿ 'ಭವ್ಯಮಾನವ' ಕಾವ್ಯದ ಅಂತೆಯೇ 'ಕಲ್ಯಾಣಕಾಂಡ'ದ ಅರ್ಥಸಂಪತ್ತನ್ನು, ದಾರ್ಶನಿಕ ಘನತೆಯನ್ನು ಬಿಂಬಿಸುವಲ್ಲಿ ಸಹಾಯಕವಾಗಿದೆ.

ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಪ್ರಭುದೇವರ ಘನ ಅಧ್ಯಕ್ಷತೆಯಲ್ಲಿ ಶರಣಸತ್ಸಂಗೋಷ್ಠಿ ನಡೆದಿದೆ. ಶರಣರ ಸತ್ಸಂಗ ಬಯಸಿ 'ಕಲ್ಯಾಣದೊಳಗೆನ್ನ ಕಲ್ಯಾಣ ಕಟ್ಟುವುದೆಂಬ' ಧೃಢ ನಿಶ್ಚಯ ಹೊತ್ತು ಕಲ್ಯಾಣಕ್ಕೆ ಬಂದ ಮಹಾದೇವಿಯಕ್ಕ ಅನುಭವಮಂಟಪ ಪ್ರವೇಶಿಸುವ ರೋಚಕ ಸನ್ನಿವೇಶದೊಂದಿಗೆ ಕಲ್ಯಾಣಕಾಂಡ ಪ್ರಾರಂಭವಾಗುತ್ತದೆ. ಕೈಮುಗಿದು ತಲೆಬಾಗಿಸುತ ಮಹಾದೇವಿಯಕ್ಕನ ದಿವ್ಯ ಶಿವತೇಜಕ್ಕೆ ಮನದೊಳಗೆ ತಲೆಬಾಗಿದ ಪ್ರಭುದೇವ ಮಹಾದೇವಿಯಕ್ಕನ ದಿವ್ಯಜೀವನ ಮಹಾತಂತ್ರದ ರಹಸ್ಯವನ್ನು ಜನ ಬದುಕಲೆಂದು ಜಗಕ್ಕೆ ಬೀರುವ ಘನೋದ್ದೇಶದಿಂದ ಆಕೆಯನ್ನು ಹಲವಾರು ಪ್ರಶ್ನೆಗಳಿಂದ ಒರೆದು ನೋಡುವ ಗಂಭೀರ ಸನ್ನಿವೇಶವು ಕಾವ್ಯಕ್ಕೆ ಪ್ರಾರಂಭದಲ್ಲಿಯೇ ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸುತ್ತದೆ. ಅನುಭವಮಂಟಪದ ಶರಣ ಸನ್ನಿಧಿಯಲ್ಲಿ ಪ್ರಭುದೇವರ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ತನ್ನ ಗತ ಕಾಲದ ಬದುಕಿನ ಒಂದೊಂದೇ ಪುಟಗಳನ್ನು ತೆರೆದಿಡುವ ರೀತಿಯು ಪ್ರಶ್ನೋತ್ತರ ರೂಪದಲ್ಲಿ ಬಿಚ್ಚಿಕೊಳ್ಳುತ್ತ ಸಾಗುವ ಕಾವ್ಯದ ನಾಟಕೀಯತೆಗೆ ಮತ್ತು ಕಥನಾತ್ಮಕ ಬೆಳವಣಿಗೆಗೆ ಪೂರಕವಾಗಿದೆ. ಕಾವ್ಯದುದ್ದಕ್ಕೂ ಬಳಕೆಯಾಗಿರುವ ಸಂಭಾಷಣಾ ತಂತ್ರವು ಅನುಭಾವ ಕಾವ್ಯದ ಸುಲಭ ಸಂವಹನೆಗೆ ಸಹಾಯಕವಾಗಿದೆ. ಹಿನ್ನೋಟದ ತಂತ್ರದ ಮೂಲಕ ಕಾವ್ಯ ತನ್ನ ಅಂತರಂಗವನ್ನು ಬಿಚ್ಚಿಕೊಳ್ಳುವ ಬಗೆ ಗಮನಾರ್ಹವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದೇವಿಯಕ್ಕನ ಜೀವನವನ್ನು ಕುರಿತಂತೆ ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಕೆಲವು ಚಾರಿತ್ರಿಕ ವಿವರಗಳನ್ನು ಕವಿಗಳು ಬಳಸಿಕೊಂಡಿದ್ದಾರೆ. ಮಹಾದೇವಿಯಕ್ಕನ ಹುಟ್ಟೂರು ಉಡುತಡಿ, ಸುಮತಿ- ನಿರ್ಮಲರು ತಾಯಿತಂದೆ, ಉಡುತಡಿಯ ದೊರೆ ಕೌಶಿಕ, ಎನ್ನುವ ಕೆಲವು ವಿವರಗಳನ್ನು ಬಿಟ್ಟರೆ, ಕಲ್ಯಾಣ ಕಾಂಡದ ಬಹುತೇಕ ಭಾಗವೆಲ್ಲವೂ ಕವಿಯ ಸ್ವತಂತ್ರ ಸೃಷ್ಟಿಯಾಗಿದೆ. ಇಲ್ಲಿ ರೂಪುಗೊಂಡಿರುವ ಮಹಾದೇವಿಯ ಭಕ್ತ ಜೀವನದ ವಿಕಾಸವನ್ನು, ಲೋಕಮಾನ್ಯ ವ್ಯಕ್ತಿತ್ವದ ಮಹೋನ್ನತಿಯನ್ನು ಗಮನಿಸಿದರೆ ಕವಿಗಳಿಗೆ ಅಕ್ಕನ ಐಹಿಕ ಜೀವನ ನಿರೂಪಣೆಗಿಂತಲೂ ಆಕೆಯ ಆಧ್ಯಾತ್ಮಿಕ ಬದುಕಿನ ಸಿದ್ಧಿಯ ಚಿತ್ರಣವೇ ಮುಖ್ಯವಾಗಿದೆ. ಇದು ಕಲ್ಯಾಣ ಕಾಂಡದ ಕಾವ್ಯೋದ್ದೇಶವಾಗಿರುವುದು ಸ್ಪಷ್ಟವಾಗಿ ವಿಹಿತವಾಗಿದೆ. ಸಾಮಾನ್ಯದ ನೆಲೆಯಿಂದ ಅಸಾಮಾನ್ಯದ ಸಿದ್ಧಿಶಿಖರವನ್ನೇರಿದ ಮಹಾದೇವಿಯ 'ಮಧುರಭಕ್ತಿ'ಯ ಪರಾಕಾಷ್ಠತೆಯನ್ನು, ವೈರಾಗ್ಯದ ಪ್ರಖರತೆಯೊಂದಿಗೆ ವಿಕಾಸಗೊಳ್ಳುವ ಸರ್ವಾರ್ಪಣಭಕ್ತಿಯ ಶ್ರೇಷ್ಠತೆಯನ್ನು ಕಲ್ಯಾಣಕಾಂಡದಲ್ಲಿ ಕಲಾತ್ಮಕ ರೀತಿಯಲ್ಲಿ ಚಿತ್ರಿಸುವ ಪ್ರಯತ್ನ ನಡೆದಿದೆ. ಅಕ್ಕನ ಅನುಭಾವ ಸಾಹಿತ್ಯದ ಹಿನ್ನೆಲೆಯಲ್ಲಿ ಆಕೆಯ ವ್ಯಕ್ತಿತ್ವ ದರ್ಶನವೊದಗಿಸುವ ಕವಿ, ಮಹಾದೇವಿಯಕ್ಕನ ಅಂತರಂಗದ ವೇದನೆ- ನಿವೇದನೆಗಳ ಹೃದಯಸ್ಪರ್ಶಿ ಚಿತ್ರವನ್ನೊದಗಿಸಿರುವುದೂ ಗಮನಾರ್ಹವಾಗಿದೆ.

ಅತಿ ಕಿರಿಯ ವಯದಲ್ಲಿಯೇ ಹಿರಿಯತನ ಸಾಧಿಸಿಕೊಂಡು 'ಕಾಮಿಯಾಗಿರ್ದು ನಿಷ್ಕಾಮಿಯಾಗಿ, ಸೀಮೆಯಲ್ಲಿದ್ದೂ ನಿಸ್ಸೀಮಳಾಗಿ ಬದುಕಿ, ಸ್ವಾನುಭವಸಿದ್ಧಿಯಿಂದ ಪ್ರಭುದೇವ- ಬಸವಾದಿ ಶರಣಗಣದ ಮನ್ನಣೆಗೆ ಪಾತ್ರಳಾದ ಮಹಾದೇವಿಯಕ್ಕನ ಬದುಕೇ ಒಂದು ಮಹಾಕಾವ್ಯ. 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ನಿರ್ಗುಣ ನಿರಾಕಾರನಿಗೊಲಿದು, ಉರಿಯುಂಡ ಕರ್ಪುರದಂತೆ ಬೆಳಗಿ ಬಯಲಾದ ಮಹಾದೇವಿಯಕ್ಕನ ಜೀವನವು ಅದ್ಭುತ ಸಾಧನೆಗಳ ಸರಮಾಲೆಯಾಗಿದೆ.

ಲೋಕ ವಿರೋಧಿ ವ್ಯಕ್ತಿತ್ವದ ವೀರವೀರಾಗಿಣಿ ಮಹಾದೇವಿಯಕ್ಕನ ಆತ್ಮ ನಿರ್ಭರತೆಗೆ, ಅಚಲ ನಿಷ್ಠೆಯ ಧೀಮಂತಿಕೆಯ ಬ್ರಹ್ಮಭವ್ಯಕ್ಕೆ ನಿಬ್ಬೆರಗುಗೊಂಡ ಕವಿ ಭೂಸನೂರಮಠರವರು ಕಾವ್ಯದ ಪೂರ್ವ ಪೀಠಿಕೆಯಲ್ಲಿ ಅಕ್ಕನ ಅತೀತ ನಿಲವಿಗೆ ವಿನೀತರಾಗಿ ಕೈ ಮುಗಿದಿದ್ದಾರೆ. ಮಹಾದೇವಿಯಕ್ಕನ 'ದಿವ್ಯದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬದುಕ'ನ್ನು ಕಾವ್ಯರೂಪಕದಲ್ಲಿ ಕಂಡರಿಸುವ ಉಜ್ವಲ ದಿವ್ಯದರ್ಶನಕ್ಕಾಗಿ ಮಹಾದೇವಿಯಕ್ಕನನ್ನು ವಿನಮ್ರತೆಯಿಂದ ಯಾಚಿಸಿದ್ದಾರೆ.

ಎಲೆ ಮಹಾಮಾತೆ,
ಎಲೆ ಮಹಾದೇವಿ, ಎಲೆ ವಿಶ್ವ ಕಲ್ಯಾಣ,
ನಮ್ಮನೋದಿದೆ ತಾಯೆ ಎನ್ನಂತರಾಳದೊಳು
ಬ್ರಹ್ಮಭವ್ಯಕೆ ನಿಮ್ಮ ನಿಬ್ಬೆರಗು ನಿಂದೆ
ಎನ್ನನೋದಿದೆ ತಾಯೆ ನಿಮ್ಮಿದಿರು ನಿಂದು
ಹಳ್ಳ ಹರಿದೆನು ಮಹಾಸಾಗರದ ಮುಂದೆ
ಗುಡಿಲು ನಾನಾದೆ ಮಹದಾಕಾಶದಿದಿರು.
ಪಾತಾಳ ಗುಹೆಯಾದೆ ಬೆಳಗುವ ನಿರಾಳದೊಳು
ನಿಮ್ಮ ಸೀಮೆಯ ಮಾತು ಸಾಧ್ಯಕ್ಕಸಾಧ್ಯ
ಭಾವಕ್ಕಗಮ್ಯ ತಾ ಗೋಚರಕಗೋಚರ
ಬುದ್ಧಿ ಪ್ರಮಾಣ ಹೋದವು ಹೊಲಬುದಪ್ಪಿ!
ಆದರು ಮಹಾತಾಯೆ
ಈ ಸುದುಷ್ಕರ ಕೃತಿಗೆ ನಾನೇಕೆ ಸುಗ್ಗಿದೆ?
ಹೃದಯ ಗಂಭೀರದತ್ತಾಚೆಗಾಚೆ
ಕಂಡು ಕಾಣದೆ ಬೆಳಗಿ ಮನದ ಜವನಿಕೆಯ ಮರೆ
ಬೇಟಗೊಳಿಸಿಹೆ ತಾಯೆ, ಈ ಮಹಾಸಾಹಸಕೆ;
----- ------ ----- ---
----- ---- --- ---- ----
ನೀವೆ ಗತಿಮತಿ ನಿಮ್ಮ ಶರಣರನುಭಾವ
ಪಥವೇ ಮಹಾಮಾರ್ಗವದೆ ನವ್ಯ ಭವ್ಯ;

(ಭ. ಮಾನವ ಪು. 6-7)

ಮಹಾದೇವಿಯ ಆಧ್ಯಾತ್ಮ ಜೀವನದ ದಿವ್ಯಾನುಭವದ ದರ್ಶನಕ್ಕೆ ಪೂರಕ ವಾಗಬಲ್ಲ ಕೆಲವು ಸ್ವತಂತ್ರ ಸನ್ನಿವೇಶಗಳ ಸಂಯೋಜನೆಯನ್ನು ಕಲ್ಯಾಣಕಾಂಡದಲ್ಲಿ ಗುರುತಿಸಬಹುದಾಗಿದೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1. ಬಾಲಕಿ ಮಹಾದೇವಿಯ ಮನದಲ್ಲಿ ದೈವೀ ಶ್ರದ್ಧೆ ಅಂಕುರಿಸುವ ಬಗೆ.

2. ಗುರು ಚೆನ್ನಮಲ್ಲಯ್ಯನವರಿಂದ ಸತಿ- ಪತಿ ಭಕ್ತಿಯ ನಿಜನೆಲೆಯನರಿವುದು.

3. ಸ್ವಪ್ನ ದರ್ಶನ - ಮೀಸಲು ಜಿಜ್ಞಾಸೆ
4. ಕೌಶಿಕನ ಪರಿವರ್ತನೆ-

ಮಹಾದೇವಿಯಕ್ಕನ ಬಗೆಗೆ ರಚಿತವಾಗಿರುವ ಈ ಪೂರ್ವ ಕೃತಿಗಳಲ್ಲಿ ಉಲ್ಲೇಖ ವಿರದ, ಮಹಾದೇವಿಯಕ್ಕನ ಸ್ವಾನುಭವ ಸಾಹಿತ್ಯದಲ್ಲಿ ಉಕ್ತವಾಗಿರುವ ಸೂಕ್ಷ್ಮ ಸುಳುಹುಗಳನ್ನಾಧರಿಸಿ ನಿರ್ಮಾಣಗೊಂಡಿರುವ ಈ ಸ್ವಾರಸ್ಯಪೂರ್ಣ ಸನ್ನಿವೇಶಗಳು ಕವಿಯ ಕಾವ್ಯಪ್ರತಿಭೆ, ಸಂವೇದನಾಶೀಲತೆಗೆ ನಿದರ್ಶನಗಳಾಗಿವೆ. ಕವಿಯ ಸೃಜನಶೀಲ ಮನಸ್ಸು ಗ್ರಹಿಸಿದ ಅಕ್ಕನ ಅನುಭಾವವು ಕಾವ್ಯಾನುಭವವಾಗಿ ರೂಪ ತಳೆದಿರುವುದು ವಿಶಿಷ್ಟವಾಗಿದೆ. ಕೆಲವು ಸನ್ನಿವೇಶಗಳ ಸ್ವಾರಸ್ಯವನ್ನು ಹೀಗೆ ಸಂಗ್ರಹಿಸಬಹುದು;

ಬಾಲಕಿ ಮಹಾದೇವಿಯ ಮುಗ್ಧ ಮನಸ್ಸಿನಲ್ಲಿ ದೈವೀಶ್ರದ್ಧೆ ಅಂಕುರಿಸಿ ದೈವೀ ಅನುರಾಗವಾಗಿ ವಿಕಾಸಗೊಳ್ಳುವ ವಿನೂತನ ಸನ್ನಿವೇಶವೊಂದು ಕಾವ್ಯ ಪ್ರಾರಂಭದಲ್ಲಿ ಮೈದಾಳಿದೆ.

ಬನಸಿರಿಯ ಮಡಿಲಲ್ಲಿ ಮಲಗಿರುವ ಉಡುತಡಿಯಲ್ಲಿ ಬಾಲಕಿ ಮಾದೇವಿ ಓರಿಗೆಯ ಗೆಳತಿಯರಾದ ಚಂಪೆ-ಚಂದ್ರಿಕೆ- ಗೌರಿ- ಮಾಧವಿಯರೊಂದಿಗೆ ಮಾಮರಗಳಡಿಯಲ್ಲಿ ನಲ್ಲನಲ್ಲೆಯರಾಟ ಆಡುತ್ತಿರುತ್ತಾಳೆ. ಚಂಪೆ ತಾನು ನಲ್ಲ- ಚೆನ್ನನಾಗುವೆನೆಂದೂ, ಮಹಾದೇವಿ ನಲ್ಲೆ- ಚೆನ್ನೆಯಾಗಬೇಕೆಂದು ಒತ್ತಾಯಿಸಿ ಮಾದೇವಿಯ ಕೈ ಹಿಡಿದೆಳೆಯುತ್ತಾಳೆ. ಆಟವಾಡಲೊಪ್ಪದೆ ಕಲ್ಲಾಗಿ ಕುಳಿತ ಮಾದೇವಿಯನ್ನು ಒಡಂಬಡಿಸಲು ಗೆಳತಿಯರು ದೇವ ಶ್ರೀಗಿರಿಯ ಚೆನ್ನಮಲ್ಲಿಕಾರ್ಜುನನ ಹಿರಿಮೆ-ಗರಿಮೆಗಳನ್ನು ಪರಿಪರಿಯಾಗಿ ಬಣ್ಣಿಸುತ್ತಾರೆ!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿರಿಚೆನ್ನಮಲ್ಲಿಕಾರ್ಜುನನೆಂದರೇನೆಂದೆ?
ಸಾಮಾನ್ಯನವನಲ್ಲ ದೇವನವನಂತೆ
ಜಗದೊಡೆಯನವನಂತೆ ಜಗವಹಡೆದವನಂತ
ದೇವ ದ್ದೇವರ ದೇವ ಮಾದೇವನವನಂತೆ!
ಚೆನ್ನ ಚೆನ್ನರಿಗೆಲ್ಲ ಬಲು ಚೆನ್ನನವನಂತೆ!
ಚೆಲುವರರೆಯನನವನ ಕೈ ಹಿಡಿವ ಸೌಭಾಗ್ಯ
ನಮ್ಮ ಲೋಕದ ಕನ್ನೆಯರಿಗಿಲ್ಲವಂತೆ!?
ಇಂಥ ನಲ್ಲನ ಕೂಡನೆಂಬ ಹಟ ಒಳಿತಲ್ಲ
ಜಗದಗಲ ಹಬ್ಬಿಹುದು ನಿನ್ನ ಚೆಲುವಿನ ಸುದ್ದಿ
---------------- -------------
---------------- -------------
ನೀನೊಲ್ಲದಿದ್ದರ ಚೆನ್ನಮಲ್ಲಿಕಾರ್ಜುನನ
ಕೈ ಹಿಡಿವ ಸೌಭಾಗ್ಯ ನಮಗಿಲ್ಲಿ?

(ಭ. ಮಾನವ ಪುಟ. 19)

ಕೆಳದಿಯರ ಈ ಮಾತುಗಳು ಬಾಲಕಿ ಮಹಾದೇವಿಯಲ್ಲಿ ಸುಪ್ತವಾಗಿರುವ ದೈವೀಪ್ರೇಮ ಅಂಕುರಿಸಲು ಭೂಮಿಕೆಯಾಗುತ್ತದೆ. ಬಾಲ್ಯದಲ್ಲಿ ಮೂಡಿದ ಈ ಸ್ನೇಹ ಭಾವವು ಮಾದೇವಿ ಬೆಳೆದಂತೆ ಬೆಳೆಯುತ್ತ ಅನುರಾಗ ಭಕ್ತಿಯಾಗಿ ವಿಕಾಸಗೊಳ್ಳುವ. ಹೃದಯಂಗಮ ಚಿತ್ರವು ಈ ಕಾವ್ಯದ ಸ್ವತಂತ್ರ ರಚನೆಯಾಗಿದೆ.

ತರುಣ ಮಹಾದೇವಿಯ, ಅಂತರಂಗ ಬಹಿರಂಗವನ್ನೆಲ್ಲ ತುಂಬಿಕೊಂಡಿರುವ ಚೆನ್ನನೊಲುಮೆಯ ಉತ್ಕಟ ಭಾವತರಂಗಗಳು ಮಾದೇವಿಯ ವ್ಯಮನವನ್ನೆಲ್ಲ ವ್ಯಾಪಿಸಿಕೊಳ್ಳುತ್ತವೆ. ಗೊತ್ತು- ಗುರಿಯಿಲ್ಲದೆ, ಹಗಲಿರುಳೆನ್ನದೆ ಚೆನ್ನಭಕ್ತಿಯ ಮಹಾಸಾಗರದಲ್ಲಿ ಮುಳುಗೇಳುತ್ತಿರುವ ಅಕ್ಕನ ಅಲೌಕಿಕ ಪ್ರೇಮಕ್ಕೆ ನಿಶ್ಚಿತ ನೆಲೆಯನ್ನು ಅರುಹುವ ಗುರುದರ್ಶನ ಭಾಗ್ಯ ಒದಗಿಬರುತ್ತದೆ. ಕಲ್ಯಾಣದಿಂದ ಶರಣಸಂದೇಶ ಸಾರುತ್ತ ಸಂಚರಿಸುವ 'ಗುರುಚೆನ್ನ ಮಲ್ಲಯ್ಯ' ನವರು ಮಾದೇವಿಯ ಮನೆಗೆ ಲಿಂಗ ಮಂಗಲವೇ ಮೈದಾಳಿ ಬಂದಂತೆ ಬರುತ್ತಾರೆ. ಗುರುವಾಗಿ ಅನುಗ್ರಹಿಸಿ ಅಂಗ-ಲಿಂಗದ ಅದ್ವೈತ ಕೂಟ ಸಮರಸಭಾವದ ಪರಮರಹಸ್ಯದ ಅರಿವನ್ನು ಮಾದೇವಿಯ ಮನದಲ್ಲಿ ಬೆಳಗುತ್ತಾರೆ. ಗುರುವಿನಿಂದ ಇಷ್ಟಲಿಂಗದ ನಿಜನೆಲೆಯು ಹೃದಯ ಗಮ್ಯವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರ್ತ್ಯಕ್ಕೆ ಮಹವನ್ನೈತರಲು ಉದಿಸಿದ ಬಸವಕಲ್ಯಾಣದ ಅಸಂಖ್ಯಾತ ಶರಣರ ಪರಿಚಯವನ್ನು, ಅವರ ಲೋಕಕಲ್ಯಾಣದ ಕಾರ್ಯಗಳನ್ನು ವಿವರಿಸುತ್ತಾರೆ. 'ಶ್ರೀಗಿರಿಯ ಚೆನ್ನನ ಕೈಹಿಡಿದು ಒಂದಾಗಿ ಒಗತನವ ಮಾಡಿ ಬೆಳಗಿನೊಳು ಬೆಳಗಾಗಿ ಬಾಳೆಂದು' ಆಶೀರ್ವದಿಸುತ್ತಾರೆ. ಗುರು ತೋರಿದ ಲಿಂಗಬೆಳಕಿನಲ್ಲಿ ಭವಿಷ್ಯದ ಬೆಳಗು ಬೆಳಗಾಗುತ್ತದೆ. ಇಷ್ಟಲಿಂಗದಲ್ಲಿ ಚಿತ್ತ-ಮನ- ಪ್ರಾಣಗಳು ಗಟ್ಟಿಗೊಳ್ಳುತ್ತವೆ. ಹಸಿವೆ- ತೃಷೆಗಳನ್ನು ಮರೆತು ಲಿಂಗಪೂಜೆ- ಲಿಂಗಧ್ಯಾನದಲ್ಲಿ ಮಾದೇವಿ ಮೈಮರೆಯುತ್ತಾಳೆ. ಬಾಲೆ ಮಾದೇವಿಯ ಮುಗ್ಧ ಭಕ್ತಿ ತರುಣಿ ಮಾದೇವಿಯಲ್ಲಿ ಶ್ರದ್ಧೆ- ನಿಷ್ಠೆಯನ್ನೊಳಗೊಂಡು ನಿಶ್ಚಿತ ಗುರಿಯತ್ತ ವಿಕಾಸಗೊಳ್ಳುವ ಈ ಭಕ್ತಿಜೀವನದ ಚಿತ್ರಣವು ಮಹಾದೇವಿಯಕ್ಕನ ಆಧ್ಯಾತ್ಮಿಕ ಬದುಕಿನ ಮಹತ್ವದ ಘಟ್ಟವಾಗಿದೆ.

'ಕರದಿಷ್ಟದೊಳು ನೆಟ್ಟ ನೋಟವನ್ನಿಟ್ಟು ಲಿಂಗಪೂಜೆಗೆ ಮನವ ಮಾರಿಕೊಂಡು ಭಾವ ಪರವಶಳಾದ ಮಹಾದೇವಿ, ಗಾಢ ನಿದ್ರೆಗೆ ಸಂದಾಗಲೊಮ್ಮೆ ಆಕೆ ಅನುಭವಿಸುವ ಸ್ವಪ್ನದರ್ಶನವು ಕಲ್ಯಾಣಕಾಂಡದ ರಮ್ಯ ಸನ್ನಿವೇಶಗಳಲ್ಲಿ ಒಂದಾಗಿದೆ. ಕನಸಿನಲ್ಲಿ ಸಾಕಾರಗೊಳ್ಳುವ ಮಾದೇವಿಯ ಅಮೂರ್ತ ಬಯಕೆಯನ್ನು ಸುಂದರ ಸಚಿತ್ರ ಸ್ವಪ್ನಕಾವ್ಯವಾಗಲಿರುವ ಕವಿಕಲ್ಪನೆ ಆಕರ್ಷಕವಾಗಿದೆ. ಮಹಾದೇವಿಯಕ್ಕನ ದೈವೀ ಪ್ರೇಮದ ಪರವಶತೆ, ಸತಿ-ಪತಿ ಭಕ್ತಿಯ ಮಧುರ ಬಾಂಧವ್ಯದ ಸೊಗಸು, ಸಮರತಿಯ ಉತ್ಕಟತೆಯನ್ನು ವರ್ಣಿಸುವಲ್ಲಿ ಪೂರಕ ಸಾಮಗ್ರಿಯಾಗಿರುವ ಈ ಸ್ವಪ್ನ ಚಿತ್ರ ಚೇತೋಹಾರಿಯಾಗಿದೆ. ಕನ್ನಡ ಸಾಹಿತ್ಯದಲ್ಲಿಯೇ ಅಪರೂಪವೆನ್ನ ಬಹುದಾದ, ಪಾರಮಾರ್ಥಿಕ ಶೃಂಗಾರ ನಿರೂಪಣೆಯಲ್ಲಿ ವ್ಯಕ್ತವಾಗಿರುವ ಕಲಾತ್ಮಕತೆ, ಕಾವ್ಯ ಶೈಲಿಯ ನಯ-ನವಿರು ಮೆಚ್ಚುವಂತಹುದಾಗಿದೆ!

ಹುಣ್ಣಿಮೆಯ ಹಾಲು ಚೆಲ್ಲಿದ ಬೆಳದಿಂಗಳು. ಬೆಳದಿಂಗಳ ಲೀಲೆ. ಮಾದೇವಿಯ ಮನಸೆಳೆಯಲು ಆಕೆ ಹಿತ್ತಲಿನ ಬಾಳೆಯ ಬನಕ್ಕೆ ಬರುತ್ತಾಳೆ. ಸುತ್ತ ಮುತ್ತೆಲ್ಲ ನಳನಳಿಸಿ ನಿಂತಿರುವ ಸುಂದರ ಪುಷ್ಪೋದ್ಯಾನ ಮೊಲ್ಲೆ- ಮಲ್ಲಿಗೆ, ಜಾಜಿ, ಬಕುಳ, ಸಂಪಿಗೆ, ಪಾರಿಜಾತ, ಕೇದಗೆ, ಹೊನ್ನ, ಮಂದಾರ ಪುಷ್ಪಕೊಳವಿಯ ಜಾತ್ರೆ. ಹರವಿ ಹಬ್ಬಿರುವ ನಿಸರ್ಗದ ಸೊಬಗಿನಲ್ಲಿ ಆನಂದ ಉಕ್ಕಿ ಹರಿಯುವುದನ್ನು ಅನುಭವಿಸಿ ಮುದಗೊಳ್ಳುತ್ತಾಳೆ. ಈ ಏಕಾಂತದ ಸುಂದರ ರಾತ್ರಿಯಲ್ಲಿ ಮನದನ್ನ, ಆನಂದನಿಧಿ ಗಿರಿಯ ಮಲ್ಲಿಕಾರ್ಜುನ ಚೆನ್ನ ನಿಂದಿಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈ ಹಿಡಿಯ ಬರಬಹುದೇ? ಆಸೆ ಮನದಲ್ಲಿ ಮೊಳೆತಾಗ ಹೃದಯ ಕೂಗಿ ಕರೆಯುತ್ತದೆ;

ಚೆನ್ನ ಬಾರಾ ಎನ್ನ ರನ್ನ ಬಾರಾ...........
ಮಲ್ಲ ಬಾರಾ ಎನ್ನ ನಲ್ಲ ಬಾರಾ..........

ತನ್ನಂತರಂಗದ ನೂರೆಂಟು ನಿರೀಕ್ಷೆಗಳು ಸುತ್ತಲಿನ ರಸಬಾಳೆಯ ಬನದಲ್ಲಿ, ಸಂಪಗೆ, ಮಲ್ಲಿಗೆ, ಬಾಳೆ-ತೆಂಗು- ಅಡಕೆಯ ಮರಗಳಲ್ಲಿ ಪ್ರತಿಫಲಿಸಿದಂತೆ, ಸಮಸ್ತ ಪ್ರಕೃತಿಯೇ ತನ್ನ ಬಯಕೆಗೆ ಪ್ರತಿಸ್ಪಂದಿಸಿದಂತೆ ಭಾವಿಸಿ ಸಂತಸಗೊಳ್ಳುತ್ತಾಳೆ.

ಬನಸಿರಿಯ ಪರಿಮಳಿಸಿ ಮಧುರ ಪುಷ್ಪೋದ್ಯಾನ;
ಮೊಲ್ಲೆ ಮಲ್ಲಿಗೆ ಜಾಜಿ ಬಕುಳ ಸಂಪಗೆ ಪಾರಿ-
ಜಾತ, ಕೇದಗೆ ಹೊನ್ನೆ ಸುರಹೊನ್ನೆ ಮಂದಾರ
ವರ್ಣ ವರ್ಣದ ಚಿತ್ರ ಪುಷ್ಪಕೋಟಿಯ ಜಾತ್ರೆ
ತೆಂಗು ಅಡಕೆಯ ನೀಳ ಸುತ್ತಮುತ್ತೆಲ್ಲ
ಮಾಂದೋಪಿನೈಸಿರಿಯು ಮತ್ತಿದೇ ಈ ಕಡೆಗೆ,
ಮಾಂಬನದೊಳೊಮ್ಮೆ ಕದಳಿಯ ಬನದೊಳೊಮ್ಮೆ
ಹೂದೋಟದೊಳಗೊಮ್ಮೆ ಹರಿಹರಿದು ನಲಿದಾಡಿ
ಬೆಳದಿಂಗಳನೆ ಹಿಡಿದು ಬೆಳಗಿನೊಡನಾಡಿ
ಸಂಪಿಗೆಯೊಳಾಡಿ ಮಲ್ಲಿಗೆಯೊಡನೆ ನಕ್ಕು
ನಲಿದಿರಲು ತನ್ನ ತಾ ಮೀರಿ ಮನ ಹಿಗ್ಗಿ,
ಬಾಳೆ ಮಲ್ಲಿಗೆ ತೆಂಗು ಅಡಕೆ ಮಾಂಬನವೆಲ್ಲ
ಜೀವಂತವಾಯಿತ್ತು ಎನ್ನಂತೆ ಪ್ರಭುರಾಯ;
ಒಳಗೊಳಗೆ ಹೊಚ್ಚ ಹೊಸ ಆನಂದ ಮೂಡಿ
ತೀಡಿತ್ತು ಹೊರಗೆಲ್ಲ ಮಂದಾನಿಲ
ಆಶೆ ಆಶೆಯು ಮೊಳೆತು ಎದೆಯೆಲ್ಲ ಬೆಳೆ ಭೂಮಿ
ಆನಂದನಿಧಿ ಗಿರಿಯ ಮಲ್ಲಿಕಾರ್ಜುನ ಚೆನ್ನ
ನೆನ್ನನಿಂದಲ್ಲಿ ಕೈ ಹಿಡಿದು ಬರಬಹುದೇ?
ಮನವೇಕೆ ನನ್ನ ಸುತ್ತಿರುವ ಬನವೇಕೆ
ಹೆಚ್ಚಿ ಹಿಗ್ಗಿಹವೇಕೆ ಆಕಾಶದಗಲ?
ಚೆನ್ನನಿರಬಹುದೇನೊ ಮರೆಯೊಳಗೆ ಮನದನ್ನ!

(ಭ. ಮಾನವ-ಪುಟ-35)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಾಂಗದಲ್ಲೆಲ್ಲ ಉಕ್ಕಿ ಹರಿದ ಬಯಕೆ ಮೂರ್ತಗೊಂಡಂತೆ, ಎದೆಗಡಲ ಗುಣ್ಪನೊಳು ಮೂಡಿತ್ತು ದಿವ್ಯ ಕಳೆ. ಬೆಳಗು ಮೂರ್ತಿಯಾಗಿ ಮನದನ್ನ-ಬಂದಿರ್ದ. ಅಂತರಂಗದ ಪ್ರೇಮ ಪುತ್ಥಳಿಯೇ ಮುಂದಿರ್ದ. ಹೃದಯ ಹೇಳಿತು ತನ್ನವನೆ ಇವನೆಂದು' ಬಣ್ಣನೆಗೆ ನಿಲುಕದಾ, ಕಲ್ಪನೆಗೆ ಸಿಲುಕದಾ ತನ್ನ ನಲ್ಲನ ಚೆಲುವಿಕೆಯನ್ನು ಕಂಡು ಮಾದೇವಿ ಮಾರು ಹೋಗುತ್ತಾಳೆ.

ಸುಲಿಪಲ್ಲ ಸುರಿದಿರುವ ಮುತ್ತು ಮಾಣಿಕವೇನು
ತೆಳುಗಲ್ಲ ಗನ್ನಡಿಯ ನುಂಪುಹೆಂಪೇನು?
ಕರ್ಣದೊಳುಂಕಾರ ಫಣಿಕುಂಡಲ
ರುಂಡಗಳ ಸರಮಾಲೆ ಕೊರಳಹಾರ
ಕೆಂಬೊಗರ ಜಡಮುಡಿಯ ಹೊಚ್ಚಹೊಸಬ
ಹುಣ್ಣಿಮೆಯ ಬೆಳದಿಂಗಳ ಕಾಯಕಾಂತಿ
ಹುಲಿದೊಮನುಟ್ಟ ಕಡುಬೆಡಗನವ ನೋಡಯ್ಯ!

(ಭ. ಮಾನವ ಪು. -37-38)

ತನಗಾಗಿ ಕಾತರಿಪಿ-ಕಳವಳಿಸಿ ಬಸವಳಿದ ವಿರಹಸಂತಪ್ತೆ ಮಾದೇವಿಯ ಬಳಿಸಾರಿ 'ಕಿರುವೆರಲ' ಹಿಡಿದು ಮುನಿಸಿಕೊಂಡ ಮಾದೇವಿಯನ್ನು ಬೆಂಬತ್ತಿ ಬಿಗಿಯಪ್ಪಿ ಸಂತೈಯಿಸುತ್ತಾನೆ. ನಾ- ನೀನೆನ್ನುವ ಉಭಯಭಾವದ ಭ್ರಮೆಯ ಬಿಡಿಸಿ, ನೀನೆ- ನಾನಾಗುವ, ನಾನೆ-ನೀನಾಗುವ ಉಭಯಕೂಟದ ಪರಮ ರಹಸ್ಯವನ್ನು ಉಸುರುತ್ತಾನೆ. ತಾನು ಆಕೆಯ ಅಂತರಂಗದ ನಿತ್ಯ ನಿಜ ನಿವಾಸಿಯೆಂದು ಸ್ಪಷ್ಟಪಡಿಸಿ ಕೊನೆಗೊಂದು ಎಚ್ಚರಿಕೆ ನುಡಿಯುತ್ತಾನೆ!

ಎಚ್ಚರಿಕೆ ಎಚ್ಚರಿಕೆ ಎಲೆ ಚೆನ್ನೆ ಮನದನ್ನೆ
ತನುವೆಲ್ಲದೆಚ್ಚರ ಸೋಂಕದಂತನ್ಯರು
ಮನವೆಲ್ಲವೆಚ್ಚರ ನೆನೆಯದಂತನ್ಯವನು
ಭಾವವೆಚ್ಚರ ಭಿನ್ನಭಾವಕೆಡೆಗುಡದಂತೆ
ಹೋಹೆನೆಲೆ ಚೆನ್ನೆ ನಿನಗನ್ಯ- ನಾನಲ್ಲ
ನೀನೆ ನಾನಾಗಿಹೆನು ನಿನ್ನಾಣೆ ಎನ್ನಾಣೆ

(ಭ. ಮಾನವ ಪುಟ- 39-40)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಲ್ಲೆಯಿಂದ ಬೀಳ್ಕೊಂಡು ಹೋಗುವಾಗ, 'ಮುತ್ತಿಟ್ಟನವ ಚೆಲುವ ಚೆಂದುಟಿಯ ಚೆನ್ನಿಗ. ಮತ್ತೊಂದು ಮತ್ತೊಮ್ಮೆ ಮುತ್ತಿಟ್ಟು ಪಾರಾದನವಧೀರ ಜಾರಿಕೊಂಡ'. ಅಂದು ಮೊದಲಾಗಿ ತ್ರಿಕರಣಗಳನ್ನು ಮೀಸಲಾಗಿರಿಸಿಕೊಂಡು (ಕಂಗಳೇ ಕರುವಾಗಿ) ನಲ್ಲನ ಬರವ ಹಾರೈಸಿಕೊಂಡಿರುತ್ತಾಳೆ.

ಒಂದು ದಿನ ಗೆಳತಿ ಚಂಪೆಯೊಂದಿಗೆ ನೀರಿಗೆ ಹೋದಾಗ ವ್ಯಾಕುಲ ಚಿತ್ತಳಾದ ಮಾದೇವಿಯ ಅಂತರಂಗದ ದಿವ್ಯದ ಬಯಕೆಯನ್ನು ಚಂಪೆ ಅರಿತುಕೊಳ್ಳುತ್ತಾಳೆ. ಮಾದೇವಿಯ ಈ ಅತೀತದ ಬಯಕೆ ಚಂಪೆಗೆ ಭ್ರಾಂತಿಯಾಗಿ ತೋರುತ್ತದೆ. ದೇವರ ದೇವ ಮಾದೇವನಿಗೂ ಮರ್ತ್ಯದ ಪುತ್ಥಳಿ ಮಾದೇವಿಗೂ ಇರುವ ನಂಟು ಆಕೆಯ ಅರಿವಿಗೆ ನಿಲುಕದೇ ಹೋದಾಗ, ಕಾಣದ- ಕೇಳದ ಬಯಲ ಭ್ರಮೆ ತೊರೆವಂತೆ ತಿಳಿಹೇಳುತ್ತಾಳೆ. ಬಾಲ್ಯದಲ್ಲಿ ತಾವಾಡಿದ ನಲ್ಲನಲ್ಲೆಯರಾಟವನ್ನು ನೆನಪಿಸುತ್ತಾಳೆ. ತಾನೇ ಚೆನ್ನ- ನಲ್ಲನೆಂದೂ, ಮಾದೇವಿಯೇ ಚೆನ್ನೆ- ನಲ್ಲೆಯೆಂದೂ ಹುಡುಗಾಟವಾಡುತ್ತ ಮಾದೇವಿಗೆ ಮುತ್ತಿಡುತ್ತಾಳೆ. ಗೆಳತಿಯ ಚೆಲ್ಲಾಟ ಮಾದೇವಿಗೆ ಪ್ರಾಣ ಸಂಕಟವಾಗುತ್ತದೆ. ನಲ್ಲ ಚೆನ್ನನ ಎಚ್ಚರಿಕೆಯ ಗಂಟೆ ಮನದಲ್ಲಿ ಮೊಳಗುತ್ತದೆ 'ತನುವೆಲ್ಲವೆಚ್ಚರ ಸೋಂಕದಂತನ್ಯರು' ಚೆನ್ನನಿಗೆ ಮೀಸಲಾಗಿರಿಸಿದ ತನುವು ಎಂಜಲಾಯಿತೆಂದು ನೊಂದು ದುಃಖಿತಳಾಗುವ ಮಾದೇವಿಯ ಮನದಲ್ಲಿ ಮೀಸಲು- ಎಂಜಲುಗಳ ಜಿಜ್ಞಾಸೆ ನಡೆಯುತ್ತದೆ:

ತಂದೆತಾಯಿಗಳೆಂಜಲೀ ದೇಹ ರೂಪೆಲ್ಲ
ಬುದ್ಧಿಯೆಂಜಲವು ಮಾನವ ವಿಚಾರಗಳೆಲ್ಲ
ಚೈತನ್ಯದೆಂಜಲ ಮಾನವನ ಕ್ರಿಯೆಯಲ್ಲ
ಅರಿವುಗುಳಿದೆಂಜಲ ನಾನೆಂಬಹಂಕಾರ
ಮತ್ತೇನು? ಎಂಜಲವನತಿಗಳೆದ ಜಗವಿಲ್ಲ

(ಭ. ಮಾನವ ಪು. 47)

ನೀರು, ನೆಲ, ಗಾಳಿ, ಬೆಳಕು, ಪಶು- ಪಕ್ಷಿಗಳು ಎಂಜಲಿಸಿದ ವಸ್ತು ಯಾವುದೂ ಪ್ರಕೃತಿಯಲಿಲ್ಲವೆನ್ನುವ ಬಚ್ಚಬರಿಯ ಸತ್ಯ ನಿಚ್ಚಳವಾಗುತ್ತದೆ. ನಿಶ್ಚಿಂತ ಭಾವದಿಂದ ಮತ್ತೆ ಚೆನ್ನಧ್ಯಾನ- ಚಿಂತನೆಗಳಲ್ಲಿ ತೊಡಗುವ ಮಾದೇವಿಯ ಮನದಲ್ಲಿ ಚೆನ್ನನ 'ಸಕೀಲಗಳನರಿಯುವ ತಾಣ'ವಾದ ಕಲ್ಯಾಣಕ್ಕೆ ಹೋಗುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ಕಟ ಹಂಬಲ ಮೂಡುತ್ತದೆ. ಕಲ್ಯಾಣಕ್ಕೆ ಹೋಗುವ ಶುಭಗಳಿಗೆಗಾಗಿ ಕಾಯ್ದುಕೊಂಡ ಸಂದರ್ಭದಲ್ಲಿಯೇ ಕೌಶಿಕನ ಪ್ರಸಂಗ ಜರುಗುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯುದ್ದಕೂ- ಮಹಾದೇವಿಯಕ್ಕನ ಅಸಾಮಾನ್ಯ ಬದುಕನ್ನು ಸುತ್ತುವರೆದಿರುವ ಹಲವಾರು ಅತಿರಂಜಕ- ಅವಾಸ್ತವ ಪೂರ್ವಗ್ರಹ ಪರಿಕಲ್ಪನೆಗಳನ್ನು ಕಲ್ಯಾಣಕಾಂಡದಲ್ಲಿ ಕೈಬಿಡಲಾಗಿದೆ. ಬಹು ಹಿಂದಿನಿಂದಲೂ ಅಕ್ಕನ ಜೀವನ ಕುರಿತಾದ ಹಲವಾರು ಅಸಮಂಜಸ ವಾದ ವಿವಾದಗಳಿಗೆ ಸಮರ್ಪಕ ಪರಿಹಾರಗಳನ್ನು ನಿರೂಪಿಸುವ ಪ್ರಯತ್ನವು ಇಲ್ಲಿ ನಡೆದಿರುವುದನ್ನು ಗ್ರಹಿಸಬಹುದಾಗಿದೆ.

ಮಹಾದೇವಿಯಕ್ಕನ ಜೀವನದ ಬಹು ದೊಡ್ಡ ಸಮಸ್ಯೆಯಾಗಿರುವ ವಿವಾಹ ಸಂದರ್ಭವನ್ನು ಮಹಾದೇವಿಯಕ್ಕನ ಘನತೆಯನ್ನು ಪ್ರಕಟಿಸುವ ಪೂರಕ ಅಂಶವಾಗಿ ಬಳಸಿಕೊಂಡಿರುವುದಂತೂ ಕವಿಯ ಸೋಪಜ್ಞತೆಗೆ ಉತ್ತಮ ನಿದರ್ಶನ.

ಕಲ್ಯಾಣ ಕಾಂಡದಲ್ಲಿ ಕೌಶಿಕನು ಮಹಾದೇವಿಯಕ್ಕನ ಮುಕ್ತಿಯ ಕಲ್ಯಾಣ ದ್ವಾರವಾಗಿ ಬಂದು ಭವಿಷ್ಯದ ಸಿದ್ಧಿಗೆ ಮುನ್ನುಡಿಯಾಗುತ್ತಾನೆ. ವಿವಾಹ ಸಂದರ್ಭವು ಆಕೆಯ ಪ್ರಾಪಂಚಿಕ ಬಂಧನಕ್ಕೆ ಬಿಡುಗಡೆಯ ಬೆಳ್ಳಿಚುಕ್ಕೆಯಾಗುತ್ತದೆ. ಉಡುತಡಿಯನ್ನು ತೊರೆದು ಕಲ್ಯಾಣಕ್ಕೆ ಹೋಗುವ ಮಾರ್ಗ ಕಾಣದೆ ತೊಳಲಾಡುತ್ತಿದ್ದ ಮಹಾದೇವಿಗೆ ಕೌಶಿಕನ ಆಗಮನವು ಮುಂದಿನ ಮಾರ್ಗವನ್ನು ನಿಚ್ಚಳವಾಗಿಸುವುದು ಕಲ್ಯಾಣಕಾಂಡದ ಹೊಸ ತಿರುವು ಎನ್ನಬಹುದು. ವಿನಾಶದ ಹೆದ್ದಾರಿಯನ್ನು ಪ್ರಗತಿಯ ರಾಜಮಾರ್ಗವನ್ನಾಗಿಸಿಕೊಳ್ಳುವ ಕಲಾತ್ಮಕತೆಯಲ್ಲಿಯೇ ಸಿದ್ಧಿಸುವ ಸಾರ್ಥಕ ಜೀವನ ದರ್ಶನದ ಒಳನೋಟವೊಂದನ್ನು ಶೋಧಿಸುವ ಈ ಸನ್ನಿವೇಶವು, ಕವಿಯ ಪರಿಪಕ್ವ ಚಿಂತನೆ, ದಟ್ಟವಾದ ಜೀವನಾನುಭವದ ಪ್ರತೀಕವೆನಿಸುತ್ತಧೆ.

'ಸಿಂಹಿಣಿಯ ಮೊಲೆವಾಲ ಗಜ ಬಯಸಿದಂತಾಯ್ತು' ಶೀರ್ಷಿಕೆಯು ಈ ವಿವಾಹ ಪ್ರಸಂಗದ ವಿಸಂಗತೆಯನ್ನು ಕೌಶಿಕನ ಬಯಕೆಯ ಅನೌಚಿತ್ಯವನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿವಾಹವಾಗ ಬಯಸಿದ ಕೌಶಿಕನ ಆಜ್ಞೆಗೆ ಪ್ರತಿಯಾಗಿ ಅರಮನೆಗೆ ಹೋದ ಮಹಾದೇವಿಯಕ್ಕ ಕೌಶಿಕನನ್ನು ಪರಿವರ್ತಿಸಲು ಪ್ರಯತ್ನಿಸುತ್ತಾಳೆ. ಕಾಯದ-ಭೋಗದ ನಿರರ್ಥಕತೆಯನ್ನು ಮನಮುಟ್ಟುವಂತೆ ವಿವರಿಸುತ್ತಾಳೆ. ಶ್ರೀ ಚೆನ್ನ ಮಲ್ಲಿಕಾರ್ಜುನನವಳಾದ ತನ್ನ ಸಮರತಿಯ ಸಮರಸಭಾವವನ್ನು ವಿವರಿಸಿ, ಚೆನ್ನ ತುಂಬಿದ ತನ್ನ ಹೃದಯದಲ್ಲಿ ಅನ್ಯಕ್ಕೆ ಇಂಬಿಲ್ಲವೆಂದು ಸ್ಪಷ್ಟಪಡಿಸುತ್ತಾಳೆ. ಕಾಮಕ್ಕೆ ಬದುಕಿ ತೃಪ್ತಿಗೆ ಸತ್ತು ಹೋಗುವ ಈ ಕಾಯಗುಣವನ್ನು ಗೆದ್ದು ಸತ್ಯ ಸಂತೃಪ್ತಿ ಸಾಗರನಾದ ಚೆನ್ನಮಲ್ಲಿಕಾರ್ಜುನನ್ನು ಅರಿವಂತೆ ಮನವೊಲಿಸುತ್ತಾಳೆ.

ಎಲೆ ಅರಸ ನಾಡವರ ಕಾಯ್ತಂದೆ ದೇವರೆ
ಕಾಮವನು ಕಿತ್ತೊಗೆದು ಕರಗಿ ಬಾಳಯ್ಯ
ಅವಗುಣವನತಿಗೆಳೆದು ನನೆದು ಬದುಕಯ್ಯ
ನನ್ನೊಳಗೆ ನೀನಿಳಿದು ತಿಳಿದು ನೋಡಯ್ಯ
----- ---- ---- -------------
---- ---- ---- ---- ------------
ಕಾಮಕ್ಕೆ ಕಣ್ಣಿಲ್ಲ ಮೋಹಕ್ಕೆ ತಲೆಯಿಲ್ಲ
ನೋಡರಸ ಹುರುಳಿಲ್ಲ, ಹುರುಳಿಲ್ಲವೀ ಕಾಯ
ವಿಷಯ ದೃಷ್ಟಿಗೆ ಕಾಂಬ ಈ ಸೊಬಗು ಸೌಂದರ್ಯ
ವಿಷಯದದೆಯೊಳು ಹೊಳೆವ ಹೊಂಗನಸು ರಸರಾಜ್ಯ
ಕ್ಷಣಿಕ ತೃಪ್ತಿಗೆ ಹಾರಿ ಮಾಯವಾಗುವುವು
ತೃಪ್ತಿ ಮುಟ್ಟದ ಮುನ್ನ ವಿಷಯಸುಖನಂದನ
ಉಂಡುಟ್ಟು ನೋಡಿದರೆ ಹಾಳು ಹಾಳು
ಹುರುಳಿಲ್ಲ ಹುರುಳಿಲ್ಲ ಎಲೆ ದೊರೆಯೇ ಈ ಕಾಯ
ಹೊಂದೊವಲ ಮರೆಗೆಲುವು ಹಾಕಿರ್ದ ಹಂದರ
ಹಂದರವ ಬಿಗಿದಿಹುದು ನರಜಾಲ ಜಾಲ
ಹರಿವ ರಕ್ತದ ಮಡು ಮಲಮೂತ್ರಭಾಂಡ
ಅಲ್ಲಲ್ಲಿ ಮಾಂಸಮಯ ಹಿರಿಕಿರಿಯ ಮುದ್ದೆ

(ಭ. ಮಾನವ ಪುಟ-63-64)

ಇತ್ಯಾದಿಯಾಗಿ ದೇಹದ ನಿಸ್ಸಾರತೆ, ಕಾಯಸುಖದ ಕ್ಷಣಿಕತೆಯನ್ನು ಮನಮುಟ್ಟುವಂತೆ ವಿವರಿಸುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೌಶಿಕನ ಕಾಮದ ಪೊರೆ ಹರಿದಂತೆ ತನ್ನ ನಿರ್ಭಾವದ ಸಹಜ ನಿರ್ವಾಣಭಾವವನ್ನು ಪ್ರಕಟಿಸಲು ದಿಗಂಬರಿಯಾಗುತ್ತಾಳೆ. ಸಮಾಜಧರ್ಮ ಪಾಲನೆಯ ಕಾಳಜಿಯಿಂದ ಕೇಶಾಂಬರಿಯಾಗಿ ನಿರ್ಗಮಿಸುವ ಮುನ್ನ ಕೌಶಿಕನಿಗೆ ಕೃತಜ್ಞತೆಯನ್ನು ಸಲ್ಲಿಸುವ ರೀತಿ ಅನ್ಯಾದೃಶವಾಗಿದೆ.

ಕಲ್ಯಾಣವೇ ಎನ್ನ
ವಂದಿಸುವ ಕೌಶಿಕನೇ ನೀ ಮಾಡಿದುಪಕಾರ
ಮೇರು ಪರ್ವತ ಮೀರಿ ಭಾರವಾಗಿಹುದಯ್ಯ
---- ---- ---- ---- ----
---- ---- ---- ---- ----
ಯಾರು ಬಲ್ಲರು ದೊರೆಯೇ ದೇವ ತಂತ್ರವನು
ನಿನ್ನ ಕಾಮವನ್ನೊಡ್ಡಿ ಜಗದ ಜಾಡ್ಯವ ಬಿಡಿಸಿ
ಕೊಂಡೆನ್ನನೊಯ್ವ ಬಿನ್ನಾಣವನು ಚೆನ್ನನಾ?
ಉಡುತಡಿಯ ಬಿಡಿಸಿ ಕಲ್ಯಾಣಕ್ಕೆ ದಬ್ಬಿರುವ
ನಿನ್ನ ಮನದಂತಸ್ಥ ನಿನಗೆ ಕತ್ತಲೆ ದೊರೆಯ!

(ಭ. ಮಾನವ ಪು. 66-67)

ಉಡುತಡಿಯ ಹೂವೊಂದು ಶ್ರೀಗಿರಿಯ ಚೆನ್ನನ ಮುಡಿಯನ್ನೇರಲು ಸಹಾಯಕವಾದ ನಿಚ್ಚಣಿಕೆಯಂತೆ ಕೌಶಿಕನನ್ನು ಬಳಸಿಕೊಂಡಿರುವ ಚೆನ್ನನ ಬಿನ್ನಾಣವನ್ನೂ ಮಹಾದೇವಿಯಕ್ಕ ಅರಿತಿದ್ದಾಳೆ.

ಅಜ್ಞಾನದ ಕತ್ತಲೆ ಸರಿದಾಗ ಕೌಶಿಕನು ಮಹಾದೇವಿಯಕ್ಕನ ಸುಜ್ಞಾನದ ಶಿವತೇಜಕ್ಕೆ ತಲೆಬಾಗುತ್ತಾನೆ. ಪ್ರವೃತ್ತಿಯ ಕೂಪದಿಂದ ಉದ್ಧರಿಸುವಂತೆ ಕೇಳಿಕೊಳ್ಳುತ್ತಾನೆ. ಪಶ್ಚಾತ್ತಾಪದಿಂದ ಪರಿಶುದ್ಧಾತ್ಮನಾದ ಕೌಶಿಕನಿಗೆ ತನ್ನ ತಾನರಿಯುವ ಅಂತರಂಗದ ವಿದ್ಯೆಯನರುಹಿ ಉಡುತಡಿಯನ್ನು ತ್ಯಜಿಸುತ್ತಾಳೆ.

ಎಲೆ ದೊರೆಯೇ ಎನ್ನ ಮುಕ್ತಿಯ ಮಹಾದ್ವಾರವೆ
ನಿನ್ನ ನೀ ತಿಳಿವನ್ನ ತಿಳಿದು ನೋಡಾ
ಎಲೆ ತಂದೆ ನಿನ್ನ ನೀ ತಿಳಿದು ನೋಡಾ.

(ಭ. ಮಾನವ. ಪು. 68)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದೇವಿಯಕ್ಕನ ಅಚಲಭಕ್ತಿ, ವೈರಾಗ್ಯ, ಸ್ವಾನುಭವದ ಎತ್ತರ- ವಿಶ್ವಕಲ್ಯಾಣ ಭಾವಗಳನ್ನು ಸಮರ್ಥವಾಗಿ ಪ್ರಟಿಸುವ ಈ ಪ್ರಸಂಗದ ಮೂಲಕ ಮಾನವನಲ್ಲಿರುವ ಪಶುತ್ವವನ್ನು ತೊಡೆದುಹಾಕಿ ದೇವತ್ವವನ್ನು ಎಚ್ಚರಿಸಬೇಕೆನ್ನುವ ಕವಿಯ ಉದಾತ್ತ ಆಶಯವು ವ್ಯಕ್ತವಾಗಿದೆ. ಇದರೊಂದಿಗೆ ಕೌಶಿಕನ ಮನಃಪರಿವರ್ತನೆ ಮನೋಜ್ಞವಾಗಿದೆ.

ಕಲ್ಯಾಣಕಾಂಡದ ಆದಿಯಿಂದ ಅಂತ್ಯದವರೆಗೆ ಅಕ್ಕನ ಬದುಕಿನೊಡನೆ ಸ್ಪಂದಿಸುವ ಪ್ರಕೃತಿ-ಚಿತ್ರಣ ಅನನ್ಯವಾಗಿದೆ. ಇಲ್ಲಿ ನಿಸರ್ಗ ಜೀವಂತ ಒಡನಾಡಿಯಾಗಿ ಮಹಾದೇವಿಯಕ್ಕನ ಜೀವನದುದ್ದಕ್ಕೂ ಅತಿ ಮಹತ್ವದ ಪಾತ್ರ ನಿರ್ವಹಿಸಿದೆ. ಪ್ರಕೃತಿಯನ್ನು ತನ್ನ ಅಧ್ಯಾತ್ಮ ಜೀವನದ ಅವಿಭಾಜ್ಯ ಅಂಗವಾಗಿರಿಸಿಕೊಂಡ ಅಕ್ಕ, ಸತಿಪತಿಭಕ್ತಿಯ ತನ್ನ ಹಲವಾರು ತುಡಿತ- ಮಿಡಿತಗಳ ನಿವೇದನೆಗೆ ಪ್ರಕೃತಿಯನ್ನೇ ಪರಿಕರವನ್ನಾಗಿಸಿಕೊಂಡಿರುವುದು ಆಕೆಯ ಅನುಭಾವ ಸಾಹಿತ್ಯದಲ್ಲಿ ಸುಸ್ಪಷ್ಟವಾಗಿ ವಿಹಿತವಾಗಿದೆ. ಅಕ್ಕನಿಗೆ ಪ್ರಕೃತಿಯು ನಿತ್ಯ ಚೈತನ್ಯಶಾಲಿಯಾದ ಶಕ್ತಿಯಾಗಿದೆ. ಪ್ರಕೃತಿಯಲ್ಲೆಲ್ಲ ಪರಮಾತ್ಮನನ್ನು ತೋರುವಂತೆ ಗಿಳಿ- ಕೋಗಿಲೆ- ಬೆಳದಿಂಗಳು, ಮಾಮರ, ಹಂಸೆ, ತುಂಬಿ, ನವಿಲುಗಳೆಲ್ಲವನ್ನೂ ಕೇಳುವ- ಮಾತನಾಡಿಸುವ ಮಹಾದೇವಿಯಕ್ಕನ ಪ್ರಕೃತಿಯೊಂದಿಗಿನ ಅವಿನಾಭಾವ ಅಪೂರ್ವವಾಗಿದೆ.

ಒಂದು ಸಂಜೆಯ ಹೊತ್ತು ಕಲ್ಯಾಣದ ಹೊರವಲಯವನ್ನು ತಲುಪಿದ ಮಹಾದೇವಿಯಕ್ಕ, ಮಾಂಬನದ ತನಿನೆರಳಿನಲ್ಲಿ ವಿಶ್ರಮಿಸಿಕೊಳ್ಳುತ್ತಿರುತ್ತಾಳೆ. ಕಲ್ಯಾಣದ ನೆಲ- ನೀರು- ಗಾಳಿ- ಬಯಲೊಳಗೆ, ನಗರೋಪವನದಲ್ಲಿ, ಮಾಂಬನದ ಸಿರಿಯಲ್ಲಿ ತೊಳಗಿ ಬೆಳಗುವ ಚೆನ್ನ ಚೈತನ್ಯವನ್ನು ಕಂಡು ಆನಂದಿಸುತ್ತಾಳೆ. ಸುತ್ತಲೂ ಹಾರಾಡುವ ಚಿತ್ರ-ವಿಚಿತ್ರ ಪಕ್ಷಿ ಸಂಕುಲದ ಕಲರವದಲ್ಲಿ, ಕೋಗಿಲೆಯ ಇಂಚರದಲ್ಲಿ ತನಗೊದಗಲಿರುವ ಸಮರತಿಯ ಸಂಭ್ರಮ ಸಮರಸದ ಸಂಗೀತ ಸುಧೆ ಹೊರಹೊಮ್ಮುತ್ತಿರುವಂತೆ ಅನುಭವಿಸಿ ಆನಂದಿಸುತ್ತಾಳೆ. ಸಮರಸಾನಂದದಿಂದ ಮರಬಳ್ಳಿ ಎಲೆಗಳು, ಸಮಸ್ತ ಪ್ರಕೃತಿ ವಿಸ್ಮಯವನ್ನೈದಿ ತಲೆದೂಗಿದಂತೆ ಭಾವಿಸಿ ಮುದಗೊಳ್ಳುತ್ತಾಳೆ. ಮಾಂಬನದ ಕಾಜಾಣ- ಕೋಗಿಲೆಯ ಕೂಗಿನಲ್ಲಿ ತನ್ನ ಅನಂತಕಾಲದ ತಪಃಸಿದ್ಧಿಯ ಝೇಂಕಾರ ಕೇಳಿಬರುತ್ತದೆ. ನಿಸರ್ಗದಲ್ಲೆಲ್ಲ ತುಂಬಿತುಳುಕಾಡುತ್ತಿರುವ ಚೆನ್ನನ 'ನೋಟದಾ ಕೂಟದಾ ಅಗಲದ ಸುಖವ' ಅನುಭವಿಸಿ ಸಂಭ್ರಮಗೊಳ್ಳುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದೇವಿಯಕ್ಕ, ಪ್ರಕೃತಿಯ ಅವಿಭಾಜ್ಯ ಅಂಗವಾಗಿ ಪರಮಾತ್ಮನನ್ನು ದರ್ಶಿಸುವ ಕವಿಯ ಅನುಭೂತಿಯು ಕಾವ್ಯರೂಪಕದಲ್ಲಿ ಮೂರ್ತಿಮತ್ತಾಗಿದೆ.

ಗಿರಿಚೆನ್ನಮಲ್ಲಯ್ಯನಾದೇಶದಂತೆ ಬೆರಸಿ ಬೇರಿಲ್ಲದಿಹಪರಿಯ ನಿಜವನು ಅರಿಯಲು ಕಲ್ಯಾಣವನ್ನು ಪ್ರವೇಶಿಸಿ, ಅನುಭವ ಮಂಟಪದತ್ತ ಸಾಗುತ್ತಾಳೆ. ಪ್ರಭುದೇವರ ಅಧ್ಯಕ್ಷತೆಯಲ್ಲಿ ಸಕಲ ಶರಣಗಣವು ಅನುಭಾವ ಸಂಗೋಷ್ಠಿಯಲ್ಲಿ ತೊಡಗಿದಾಗ ಅನುಭವ ಮಂಟಪ ಪ್ರವೇಶಿಸಿ ನೆರೆದ ಶರಣರಿಗೆ ಕೈ ಮುಗಿದು ತಲೆಬಾಗಿ ನಿಲ್ಲುತ್ತಾಳೆ. ಪ್ರಭುವಿನ ಪ್ರಶ್ನೆಗಳಿಗೆಲ್ಲ ಉತ್ತರವಾಗಿ ತನ್ನ ಜೀವನವನ್ನು ಬಿಚ್ಚಿಡುತ್ತ ಸಾಗುವ ಮಹಾದೇವಿಯಕ್ಕ, ಚೆನ್ನಮಲ್ಲಿಕಾರ್ಜುನನಿಗೊಲಿದು ಸಮರಸ ಬಾಳುವೆ ಮಾಡಿದ ತಾನು ಆತನಿಚ್ಛೆಯಂತೆ ಕಲ್ಯಾಣಕ್ಕೆ ಬಂದ ಪರಿಯನ್ನು ನಿವೇದಿಸುತ್ತಾಳೆ. ಬಸವಾದಿ ಶರಣರೆಲ್ಲರೂ ಮಹಾದೇವಿಯಕ್ಕನ ಘನ ನಿಲುವಿಗೆ ತಮ್ಮ ಗೌರವ ಸಮರ್ಪಿಸುತ್ತಾರೆ. ಆದರೂ ಲೋಕದ ಮಾಯೆಗೆ ಮಹಾದೇವಿಯಕ್ಕನ ಸಮರಸಭಕ್ತಿಯ ಅದ್ವೈತ ಕೂಟದ ಪರಮರಹಸ್ಯವನ್ನು ಪ್ರಕಟಪಡಿಸಲೆಂದು ಪ್ರಭುದೇವರು ಮಹಾದೇವಿಯಕ್ಕನನ್ನು ತಮ್ಮ ತೀಕ್ಷ್ಣ ಪ್ರಶ್ನೆಗಳಿಂದ ಮತ್ತೆ ಒರೆದೊರೆದು ನೋಡುತ್ತಾರೆ. ನಿರ್ಗುಣ ನಿರಾಕಾರ ನಿರವಯ ನಿರಂಜನನು, ನಾಮರೂಪವ ತೊಟ್ಟ ಮರ್ತ್ಯದ ಮಹಾದೇವಿಯೊಂದಿಗೆ ಸಮರಸದ ಬಾಳುವೆ ಮಾಡಿದೆನೆನ್ನುವುದು ಲೋಕವರಿಯದ ಮಾತೆಂದೂ, ಮೃತ್ಯುವಿನ ತುತ್ತಾದ ಮಹಾದೇವಿಗೂ ಮಹಾಘನ ಚೆನ್ನಮಲ್ಲಿಕಾರ್ಜುನನಿಗೂ ಸಾಧಿಸಿದ ಸಮರಸದ ಪರಿಯನ್ನು ಲೋಕವರಿವಂತೆ ವಿವರಿಸಲು ಆದೇಶಿಸುತ್ತಾರೆ. ಲೋಕದ ಸಂಶಯ ಹರಿವಂತೆ ಮಹಾದೇವಿಯನ್ನು ತನ್ನ ನಿಃಸ್ಥಲದ ನಿಲವಿನ ನಿಬ್ಬೆರಗನ್ನು ಶಬ್ದದಲ್ಲಿ ತುಂಬುತ್ತಾಳೆ :

ಶ್ರೀ ಚೆನ್ನಮಲ್ಲಿಕಾರ್ಜುನನಪ್ಪಿದೆನ್ನಂಗ
ತನ್ನ ಭಂಗವ ಕಳೆದು ನಿತ್ಯವಾಗಿದೆ ನೋಡ,
ಕರಣಗಳ ಕತ್ತಲೆಯ ಕಳೆದು ಬೆಳಗನುಟ್ಟಿಹುದು;
ಮನವನಾಹುತಿಗೊಟ್ಟು ಚೆನ್ನನರಿವಿಂಗೆ
ಮನವಳಿದು ಉನ್ಮನಿಯ ಜ್ಯೋತಿಯಾಗಿದೆ ನೋಡ;
ಚೆನ್ನನಾ ಸಂತೃಪ್ತಿಯೊಳು ಸಮರ್ಪಿತವಾಗಿ
ಭಾವವದು ನಿರ್ಭಾವದೊಳು ನಿಂದು ಬೆಳಗಿಹುದು,
ಏನಿಲ್ಲ ಏನಿಲ್ಲ, ಎಲ್ಲ ಸುಟ್ಟಿಹನಯ್ಯ
ಉರಿಯಗಂಡನ ನೆರೆದ ಕಪ್ಪುರದ ಪುತ್ಥಳಿಯ
ತೆರನಾದನೆಲ ಪ್ರಭುವೆ ಮತ್ತೆ ಬೇಕೇನು?

(ಭ. ಮಾನವ. ಪು- 87-88)

'ಅಪ್ಪುವಪ್ಪಿದ ಉಪ್ಪಿನಂತೆ ತಾನು ಶ್ರೀ ಚೆನ್ನಮಲ್ಲಿಕಾರ್ಜುನನಲ್ಲಿ ಕರಗಿ ಚೆನ್ನನಾಗಿರುವ' ಸಮರಸದ ಸಂಭ್ರಮವನ್ನು ಬಣ್ಣಿಸುತ್ತಾಳೆ. ಕಾಯವಳಿದ ಕಾಯದೊಳು ನಿಂದ ತಾನು ಕೆಂಡದ ಶವದಂತೆ, ಬೆಂದನುಲಿಯಂತೆ ಕಾಯದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಂಗು ಹರಿದುಕೊಂಡುದನ್ನು, ತನ್ನ ತನು- ಮನ- ಭಾವ- ಪ್ರಾಣಗಳೆಲ್ಲ 'ಕರ್ಪುರ ಗಿರಿಯ ಉರಿಯಕೊಂಬಂತೆ ಚೆನ್ನನೋಗರವಾಗಿ ಚೆನ್ನಗರ್ಪಿತ-ವಾದುದನ್ನು ಮನಮುಟ್ಟುವಂತೆ ವಚನಿಸುತ್ತಾಳೆ. ಮಹಾದೇವಿಯಕ್ಕನ ವಿವರಣೆಯಿಂದ ತೃಪ್ತನಾಗದ ಪ್ರಭುದೇವ ಮತ್ತೆ ಪ್ರಶ್ನಿಸುತ್ತಾನೆ.

ಕೈ ಹಿಡಿದ, ಚೆನ್ನನೊಡಗೂಡಿಯೊಡನಾಡಿ
ನೀ ಕೆಟ್ಟು ಹೋಗಿರಲು ಚೆನ್ನನವನೆಲ್ಲಿ
ನಾನಿರಲು ನೀನುಂಟು-ನಾನೆಂಬುದೇ ಸತ್ತು
ನೀನೆಂಬ ಭಾವ ತಾ ನಿಲುವ ಠಾವಲ್ಲಿ?
ನೀನಿಲ್ಲದಿರೆ ಚೆನ್ನ ತಾನಿರ್ಪನೆಂಬರಿವು
ಮೂಡಿಹುದು ತಾನೆಲ್ಲಿ ಚೆನ್ನಗಾಸರವಲ್ಲಿ?

(ಭ. ಮಾನವ ಪುಟ. 90-91)

ಎಂದು ಸಂದೇಹ ಭಾವವನ್ನು ಪ್ರಕಟಿಸುತ್ತಾರೆ. ಧೃತಿಗೆಡದ ಮಹಾದೇವಿಯಕ್ಕ ವೈಣಿಕರ ಕೈಯ ವೀಣೆಯಂತೆ ಚೆನ್ನನವಳಾದ ತಾನು ಆತ ನುಡಿಸಿದಂತೆ ನುಡಿಯುವ ತನಗೆ ಚೆನ್ನನುಳಿದ ಬೇರೊಂದು ಸ್ವಾತಂತ್ರ್ಯವಿಲ್ಲವೆಂದೂ, ಚೆನ್ನ ಮಾಡಿದ ರೀತಿ ಹಾಡಾದೆ ನಾನೆಂದು ವಿನೀತ ಭಾವದಿಂದ ವಿಸ್ತರಿಸಿ, ಚೆನ್ನನೊಡನೆ ತಾನು ಸಮರಸಗೊಂಡುದನ್ನು ಉಪಮಿಸುತ್ತಾಳೆ. 'ಚೆಂದಳಿರಗೊಂಚಲೊಳು ತಂಬೆಲರು ತೀಡುತಿರೆ ತಳಿರು ಗಾನವ ಮಾಡುವಂತೆ' ತಾನು ಆತನಾದೇಶದಂತೆ ನುಡಿದಿರುವೆನೆಂದು ತನ್ನ ನಿಲವನ್ನು ಖಚಿತಪಡಿಸಿ ಕೈಮುಗಿದು ನಿಲ್ಲುತ್ತಾಳೆ.

'ನಾಮ ಸೀಮೆಯ ದಾಟಿ, ಸರ್ವಾಂಗದೊಳು ಚೆನ್ನ ತಾನಾಗಿ ಬೆಳಗಿಹ' ಅರಿವಿನ ಪುತ್ಥಳಿ ಮಹಾದೇವಿಯಕ್ಕನ ನಿಲವಿನ ನಿರಾಳಕ್ಕೆ ಪ್ರಭುದೇವರು ಶರಣೆನ್ನುತ್ತಾರೆ. ಚೆನ್ನಬಸವಣ್ಣ, ಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಇತ್ಯಾದಿ ಶರಣರೆಲ್ಲರೂ ಅಕ್ಕನ ಭಕ್ತಿ-ಜ್ಞಾನ- ವೈರಾಗ್ಯದ ನಿಜನಿಲವನ್ನು ಕೊಂಡಾಡುತ್ತಾರೆ. ಸರ್ವಾಂಗದೊಳಹೊರಗೆಲ್ಲ ಚೆನ್ನಮಯ-ವಾಗಿರುವ ಆಕೆಯ ಶಿವಾನುಭವಸಿದ್ಧಿಗೆ ನಮನ ಸಲ್ಲಿಸುತ್ತಾರೆ. ಕೊನೆಗೆ ಶ್ರೀಶೈಲಗಿರಿಗೆ ಸಾಗಿ ಕದಳಿಯ ಬನದಲ್ಲಿ ಸಮರಸೈಕ್ಯವನ್ನು ಪಡೆವಂತೆ ಸ್ಥಾನ ನಿರ್ದೇಶನ ನೀಡುತ್ತಾರೆ. ಜೊತೆಗೆ 'ಲೋಕದೊಳು ಮಾನವ ಕುಲದೊಳಗೆ ಹುಟ್ಟಿ ಲೋಕದ, ಕುಲದ ಋಣವ ತೀರಿಸುವ ಮಣಿಹ' ಪೂರೈಸಬೇಕೆನ್ನುವ ಲಿಂಗದಾಣತಿಯ ಮಹಾಮಣಿಹದತ್ತ ಮಹಾದೇವಿಯಕ್ಕನ ಗಮನ ಸೆಳೆಯುತ್ತಾರೆ.

ಮುಂದಿನ ಮಹಾಕಾವ್ಯದ ಬೆಳವಣಿಗೆಯ ಬೀಜದಂತಿರುವ ಈ ಮಾತು ಕಲ್ಯಾಣ ಕಾಂಡದ, ಅಕ್ಕನ ಬದುಕಿನ ಮಹತ್ವದ ತಿರುವು ಎನ್ನಬಹುದು. ವ್ಯಕ್ತಿ ನಿಷ್ಠ ನೆಲೆಯಲ್ಲಿ ಮುಕ್ತಾಯಗೊಳ್ಳುವ ಆತ್ಮ ಕಲ್ಯಾಣದ, ಮಾನವನ ಮುಕ್ತಿಯ ಕಲ್ಪನೆಯನ್ನು ವಿಸ್ತಾರಗೊಳಿಸಿರುವ ಪ್ರೊ. ಭೂಸನೂರ ಮಠ ಅವರು ಉದ್ಧಾರ- ಕಲ್ಯಾಣಗಳು ಸಮಷ್ಟಿಯ ನೆಲೆಯಲ್ಲಿ ಪರಿಪೂರ್ಣತೆಯನ್ನು ಪಡೆಯಬೇಕೆನ್ನುವ ಲೋಕೋತ್ತರವಾದ ಸಮಷ್ಟಿಪ್ರಜ್ಞೆಯನ್ನು, ವಿಶ್ವಮಾನವತೆಯನ್ನು ಪ್ರಭುವಾಣಿಯಲ್ಲಿ ತುಂಬುವ ಮೂಲಕ, 'ಭವ್ಯ ಮಾನವ' ಕಾವ್ಯದ ಆಶಯವನ್ನು ಎತ್ತಿ ಹಿಡಿದಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಶೈಲ ಕಾಂಡ

ನೀಲಗಿರಿ ತಳವಾರ

ಕೌಶಿಕನ ಕಾಮವನ್ನು ತಿದ್ದಿ; ಅವನಿಗೆ ತಿಳಿವು ನೀಡಿ; ವಿರಾಗಿಣಿಯಾಗಿ ತನ್ನ ಅನುಭಾವ ಪಥವನ್ನು ಕಂಡುಕೊಳ್ಳಲು ಕಲ್ಯಾಣದ ಶರಣರ ಅನುಭವ ಮಂಟಪಕ್ಕೆ ಬರುತ್ತಾಳೆ. ಮಹಾದೇವಿಯಕ್ಕ ಅಲ್ಲಿ ಶರಣರೊಡ್ಡಿದ ಕಠಿಣತರ ಪರೀಕ್ಷೆಯನ್ನು ಜಯಿಸಿ; ಕೆಲಕಾಲ ಅನುಭಾವ ಗೋಷ್ಠಿಗಳಲ್ಲಿದ್ದು ಶರಣರ ಅಪ್ಪಣೆಯಂತೆ ಶ್ರೀಶೈಲಕ್ಕೆ ಬರುತ್ತಾಳೆ. ಇಲ್ಲಿಗೆ ಕಲ್ಯಾಣಕಾಂಡ ಮುಗಿದು ಶ್ರೀಶೈಲಕಾಂಡದ ಪ್ರಾರಂಭ.

ಅಕ್ಕನ ಬದುಕಿನಲ್ಲಿ ಮಾಡಿಕೊಂಡ ಅಪೂರ್ವ ಬದಲಾವಣೆ : ಶರಣರ ನಿರೂಪದಂತೆ ಶ್ರೀಶೈಲದ ಕದಳಿವನಕ್ಕೆ ಬಂದ ಅಕ್ಕಮಹಾದೇವಿಯು ಅಲ್ಲಿ ತನ್ನ ಮನದೊಡೆಯ ಶ್ರೀಚೆನ್ನಮಲ್ಲಿಕಾರ್ಜುನನಲ್ಲಿ ಬೆರೆತು ಬಯಲಾದಳು ಎಂಬಲ್ಲಿಗೆ ಮಹಾದೇವಿಯಕ್ಕನ ಚರಿತ್ರೆಯನ್ನು ನಿರೂಪಿಸುವ ಪ್ರಾಚೀನ ಗ್ರಂಥಗಳಲ್ಲಿ ಸಾಮಾನ್ಯವಾಗಿ ಆಕೆಯ ಜೀವನ ಚರಿತ್ರೆ ಮುಕ್ತಾಯವಾಗುತ್ತದೆ. ಆದರೆ ಈ ಮಹಾಕಾವ್ಯದಲ್ಲಿ ಅಕ್ಕನ ಚರಿತ್ರೆ ಅಲ್ಲಿಗೆ ಮುಗಿಯದೆ, ಅಲ್ಲಿಂದ ಹೊಸತೊಂದು ತಿರುವು ಪಡೆದುಕೊಂಡು ಮತ್ತೆ ಮುಂದುವರಿಯತ್ತದೆ. ಐತಿಹಾಸಿಕ ದೃಷ್ಟಿಯಿಂದ ಈ ಬದಲಾವಣೆಯನ್ನು ಪ್ರಶ್ನಿಸಬಹುದಾದರೂ ತಮ್ಮ ತಮ್ಮ ದರ್ಶನಕ್ಕನುಸಾರವಾಗಿ ಮಹಾಕವಿಗಳು ಹೊಸ ಸೃಷ್ಟಿ -ಬದಲಾವಣೆ ಮಾಡಿಕೊಳ್ಳುವದು ಸರ್ವವಿಹಿತವಾಗಿರುವುದರಿಂದ, (ಪಂಪ, ರನ್ನ, ಕುಮಾರವ್ಯಾಸ) ಹಾಗೇ ಅಂಥದೊಂದು ವಿಶೇಷವಾದ ಸ್ವಾತಂತ್ರ್ಯ ಕವಿಗೆ ಇರುವದರಿಂದ ಅಕ್ಕ ಮಹಾದೇವಿಯ ಬದುಕಿನಲ್ಲಿ ಭೂಸನೂರಮಠರು ಮಾಡಿಕೊಂಡ ಈ ಬದಲಾವಣೆಯನ್ನು ಪ್ರಶ್ನಿಸುವಂತಿಲ್ಲ. ಈ ಬಗೆಯ ಆಕ್ಷೇಪಣೆ ಬರಬಹುದು ಎಂಬುದನ್ನು ಅವರು ಕಾವ್ಯ ಸೃಷ್ಟಿಯ ಆರಂಭದಲ್ಲೇ ನಿರೀಕ್ಷಿಸಿದ್ದಾರೆ. ಕಾವ್ಯಾರಂಭದ ಪೂರ್ವಪೀಠಿಕೆಯಲ್ಲಿ ಈ ಸಮಸ್ಯೆಗೆ ವಿವರಣೆಯೂ ಬಂದಿದೆ.

ಯಾರೇನೆನ್ನಲಿ-
ಚರಿತೇತಿಹಾಸ ಜೀವನ ಪುರಾಣ
ಏನನೆನ್ನಲಿ ಮತ್ತೆ ಯಾರೇನೆನ್ನಲಿ
ಕಾವ್ಯಾನುಭಾವದರ್ಶನ ಕಂಡ ಮಾಳ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆಯಲಿ ಮಹಾಭವ್ಯದಿಚ್ಛೆ ಕಾವ್ಯ.
ಹಂಗೇಕೆ ಹರಿಯೇಕೆ ಕಟ್ಟು ನಿಟ್ಟೇಕೆ
ವ್ಯಾಕರಣ ಛಂದಸ್ಸಲಂಕಾರ ಕವಿಸಮಯ
ಗಣ ಮಾತ್ರೆ ಪ್ರಾಸ ನಿಯತಿಯ ಭಂಗ ಭಯವೇಕೆ?
ನೇಮ ನಿತ್ಯವ ಮೀರಿ ಕಾವ್ಯ ಹರಿಯಲಿ ತನ್ನ
ಸೀಮೆ ಸಂಬಂಧವನು ದಾಂಟ ದಿವ್ಯಕ್ಕೆ
ತಪ್ಪೆನ್ನ ಕ್ಷಮೆ ನಿಮ್ಮದಯ್ಯ,

ಅಕ್ಕ ಮಹಾದೇವಿಯ ಜೀವನೇತಿಹಾಸದಲ್ಲಿ ಮಾತ್ರವಲ್ಲದೆ ವ್ಯಾಕರಣ, ಅಲಂಕಾರ, ಛಂದಸ್ಸು, ಕವಿಸಮಯ ಮುಂತಾದ ಕಾವ್ಯ ಸಂಗತಿಗಳಲ್ಲಿಯೂ ತಮ್ಮ ಸರ್ವ ಸ್ವತಂತ್ರ ಮಾರ್ಗ- ಎಂದು ಕವಿ ಘೋಷಿಸಿಕೊಂಡಿರುವನು. ಜೊತೆಗೆ ತಪ್ಪೆನ್ನ ಕ್ಷಮೆ ನಿಮ್ಮದಯ್ಯ' ಎಂಬ ವಿನಯವನ್ನೂ ಮೆರೆದಿರುತ್ತಾರೆ.

ಈ ಕಾಂಡದಲ್ಲಿ ಅಕ್ಕಮಹಾದೇವಿಯ ಜೊತೆಗೆ ಗುರುಚೆನ್ನಮಲ್ಲಯ್ಯ ಹಾಗೆ ಗಿರಿಮಲ್ಲ ಎಂಬ ಮತ್ತೆರಡು ಪಾತ್ರಗಳಿರುವವು. ಇವು ಕೂಡ ಐತಿಹಾಸಿಕ ಪಾತ್ರಗಳಲ್ಲ, ಕವಿಯ ಸ್ವತಂತ್ರ ಸೃಷ್ಟಿಗಳು.

ಗುರುಚೆನ್ನಮಲ್ಲಯ್ಯ : ಶರಣ ಸಂದೇಶವನ್ನು ಮೈಗೂಡಿಸಿಕೊಂಡ ಮಹಾಸಾಧಕ ಅಲ್ಲದೇ ಕಲ್ಯಾಣದ ಶರಣರ ಅನುಭಾವದ ಬೆಳಗನ್ನು ನಾಡಿನವರ ಎದೆಯಲ್ಲಿ ಮೂಡಿಸುವ ಮಹಾಕಾಯಕ ಕೈಕೊಂಡ ಜ್ಞಾನದಾಸೋಹಿ. ಅನುಭಾವದ ಉನ್ನತ ಶಿಖರವನ್ನು ಏರಿ; ವಿಶ್ವ ಪ್ರಪಂಚವನ್ನೆಲ್ಲ ಕಂಡು; ಅಜ್ಞಾನದ ಕತ್ತಲೆಯಲ್ಲಿ ಮೂಡಿ, ಮುಳುಗುತ್ತಿರುವ ಮನುಕುಲದ ಉದ್ಧಾರವನ್ನು ಚಿಂತಿಸುವ ಪರಮಕಲ್ಯಾಣ ಮೂರ್ತಿ. ಒಂದು ರೀತಿಯಲ್ಲಿ ಈತನೇ ಈ ಕಾವ್ಯದ ಕೇಂದ್ರ ಪಾತ್ರ.

ಗಿರಿಮಲ್ಲ : ಗುರುಚೆನ್ನ ಮಲ್ಲಯ್ಯನ ಶಿಷ್ಯ ಶ್ರೀಸಾಮಾನ್ಯನ ಪ್ರತಿನಿಧಿಯಾಗಿ ಅನುಭಾವಪಥದಲ್ಲಿ ಎದುರಾಗುವ ಸಮಸ್ಯೆಗಳನ್ನು ಪ್ರಸ್ತಾಪಿಸಿ ಉತ್ತರ ಪಡೆಯುತ್ತ ಗುರುಚೆನ್ನಮಲ್ಲಯ್ಯನ ಬೆಂಬತ್ತಿ ನಡೆದವನು.

ಶ್ರೀಶೈಲ ಕಾಂಡದ ಆರಂಭ : ಗುರುಚೆನ್ನಮಲ್ಲಯ್ಯನ ಪೂರ್ವಸಾಂಗತ್ಯದೊಂದಿಗೆ ಶ್ರೀಶೈಲಕಾಂಡ ಸುರುವಾಗುತ್ತದೆ. ಇಲ್ಲಿ ಗದ್ಯದ ಒಂದು ಸಣ್ಣ ತುಣುಕಿದೆ. 'ವಸಂತದ ಯೌವನೋದಯ, ಶ್ರೀಶೈಲ ಪರ್ವತ. ಬಯಲ ವಿಸ್ತಾರವನ್ನು ಗಗನದ ಔನ್ನತ್ಯವನ್ನು ಅಳೆಯುವಂತಿರುವ. ಆ ಪರ್ವತದ ಬ್ರಹದ್ದೇಹವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಣಸೌಂದರ್ಯದಿಂದ ಸಿಂಗರಿಸುವ ನಿರ್ಝರಾನಂದದಲ್ಲಿ ನಲಿಯುತ್ತಿದ್ದಾಳೆ ಬನದೇವಿ'. ಹಿತಮಿತವಾದ ಭಾಷೆಯಲ್ಲಿನ ಇಲ್ಲಿಯ ಪ್ರಕೃತಿ ವರ್ಣನೆ ಆಕರ್ಷಕವಾಗಿದೆ. ಶ್ರೀಶೈಲ ಪರ್ವತದ ನಿರ್ಜನ ಭಯಂಕರ ಅರಣ್ಯದಲ್ಲಿ ಮಲ್ಲಿಕಾರ್ಜುನನ್ನರಸಿ ಅಕ್ಕ ಮಹಾದೇವಿಯು ಧ್ಯಾನಿಸುತ್ತಿರಲು ತುಸು ದೂರದಿಂದ-

ಸಡಿಫಡಾ· ಗಿರಿಮಲ್ಲ
ಮಾತೆತ್ತಬೇಡ
ಬೇಡ ಬೇಡಲೆಲೆಲೆ--- ಎಂಬ ಕಠೋರ ನುಡಿಗಳು ಕೇಳಿಸುತ್ತವೆ. ಯಾವುದೋ ಪರಿಚಿತವಾದ ಧ್ವನಿಯನ್ನು ಕೇಳಿದಂತಾಗುತ್ತದೆ ಅಕ್ಕನಿಗೆ. ಇಬ್ಬರು ವ್ಯಕ್ತಿಗಳು ತನ್ನ ಸಮೀಪಕ್ಕೆ ಬರುವುದನ್ನು ಕಾಣುತ್ತಾಳೆ. ಭೀಷಣವಾದ ಅರಣ್ಯದಲ್ಲಿ ಮಹಿಳೆಯೊಬ್ಬಳು ಏಕಾಂಗಿಯಾಗಿರುವದನ್ನು ಕಂಡು ಅವರಿಗೂ ಆಶ್ಚರ್ಯವೆನಿಸುತ್ತದೆ. ಪರಸ್ಪರ ಭೇಟಿಯ ನಂತರ ಅಕ್ಕಮಹಾದೇವಿಗೆ, ಅಲ್ಲಿ ಬಂದ ವ್ಯಕ್ತಿ ಬಾಲ್ಯದಲ್ಲಿ ತನಗೆ ದೀಕ್ಷೆ ನೀಡಿದ ಗುರು ಚೆನ್ನ ಮಲ್ಲಯ್ಯ, ಎಂದು ತಿಳಿಯುತ್ತದೆ. ಅಕ್ಕ ಸಂತೋಷದ ಅಲೆಗಳಲ್ಲಿ ತೇಲುತ್ತಾಳೆ. ಆದರೆ ಗುರುಚೆನ್ನಮಲ್ಲಯ್ಯನಿಗೆ ತಕ್ಷಣ ಇವಳ ಗುರುತು ಹತ್ತುವುದಿಲ್ಲ. ಅಕ್ಕಮಹಾದೇವಿಯು ಆತ ಬಸವಸಂದೇಶವನ್ನು ಸಾರುತ್ತ ತನ್ನೂರಿಗೆ ಬಂದ, ತಮ್ಮ ಮನೆಯಲ್ಲೇ ಒಂದು ದಿನ ಉಳಿದು ಸಂಭ್ರಮದ ಶಿವಪೂಜೆ ಮಾಡಿಸಿಕೊಂಡ, ತನಗೆ ಜ್ಞಾನ ದೀಕ್ಷೆ ನೀಡಿದ - ಎಲ್ಲ ವಿಷಯವನ್ನು ಸವಿವರವಾಗಿ ನೆನಪು ಮಾಡಿಕೊಡುತ್ತಾಳೆ. ಗುರು ಚೆನ್ನಮಲ್ಲಯ್ಯನಿಗೆ ಆ ಎಲ್ಲ ಪ್ರಸಂಗ ನೆನಪಾಗುವುದಾದರೂ ಅಕ್ಕನ ಹೆಸರು ನೆನಪಾಗುವುದಿಲ್ಲ; ಸ್ಮೃತಿಯನ್ನು ತಿರುವುತ್ತ ತಿರುವುತ್ತ ತೊಂದರೆಗೊಂಡು--

"......ಶಿವ ಶಿವ ಮಹಾದೇವ
(ಒಮ್ಮೆಲೆ ಧ್ಯಾನಿಸಿಕೊಂಡು) ......ಏನಮ್ಮ
ಎಲೆ ಮಗಳೆ ಮುದ್ದುಗುವರಿಯ ನಿನ್ನ
ಹೆಸರದು ಮಹಾದೇವಿಯಲ್ಲವೇನಮ್ಮ" -- ಎಂದು ಗುರುಚೆನ್ನಮಲ್ಲಯ್ಯ ಸಂತಸಗೊಳ್ಳುತ್ತಾನೆ. ''ಶಿವ ಶಿವ ಮಹಾದೇವ' ಎನ್ನುತ್ತಿರುವಂತೆ 'ಮಹಾದೇವ'ಕ್ಕೆ ಹೊಂದಿಕೊಂಡು 'ಮಹಾದೇವಿ' ಎಂಬ ಹೆಸರು ನೆನಪಾಗುವ ಆ ಚಿತ್ರ ಬಹಳ ಸ್ವಾಭಾವಿಕವಾಗಿ ಮೂಡಿಬಂದಿದೆ.

ಬಹಳ ವರ್ಷಗಳ ನಂತರದ ಭೇಟಿಯ ಸಂತೋಷವನ್ನು ಸವಿದ ಬಳಿಕ ಅಕ್ಕಮಹಾದೇವಿಯು 'ಸಡಿಫಡಾ ಗಿರಿಮಲ್ಲ' ಎಂಬ ಕಠೋರ ನುಡಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣವನ್ನು ಕೇಳುತ್ತಾಳೆ. ತನ್ನ ಬದುಕಿನ ಭೀಕರ ದುರಂತವನ್ನು ಹೇಳಲಾರದೆ ಗುರುಚೆನ್ನಮಲ್ಲಯ್ಯ ಮೂರ್ಛಿತನಾಗುತ್ತಾನೆ. ಆಗ ಗಿರಿಮಲ್ಲ ಗುರುವಿನ ಗತಕಾಲದ ಜೀವನ ಕಥೆಯನ್ನು ಅಕ್ಕನ ಮುಂದೆ ಬಿಚ್ಚಿಡುತ್ತಾನೆ;

ಸಾಕಾರ ಶಿವಭಕ್ತಿ, ಸತ್ಯನಿಧಿ ಗಂಗಮ್ಮನ ಕೈ ಹಿಡಿದು ಸಮರತಿಯ ಸುಖದಲ್ಲಿ ಹತ್ತೆಂಟು ವರ್ಷ ಕಳೆದರೂ ಗುರುಚೆನ್ನಮಲ್ಲಯ್ಯನವರ ವಂಶ ಕುಡಿಯಿಡಲಿಲ್ಲ. ಏನೆಲ್ಲ ದಾರಿಕಟ್ಟಾಗಿ ಹೋಗಿರಲು ದೇವ ಕಂದೆರೆದ ಮುಂಜಾವು ಮೂಡಿತ್ತು. ಶಿವಕರುಣೆ ಸಾಕಾರವಾಗಿ ಬಾಲಸಂಗಯ್ಯ ಹುಟ್ಟುತ್ತಾನೆ. ಮನೆಯೊಳಗೆ ಮನದೊಳಗೆ ಆನಂದ ತುಂಬಿ ತುಳುಕುತ್ತದೆ. ನಳನಳಿಸಿ ಬೆಳೆಯುವ ಬಳ್ಳಿ ಒಮ್ಮೆಲೇ ನೆಲಕ್ಕೊರಗುತ್ತದೆ. ಒಂದೆರಡು ಮೂರು ದಿನ ಬಂದ ಹೆಸರಿಲ್ಲದ ರೋಗ ಸಂಗಯ್ಯನನ್ನು ಕರೆದುಕೊಂಡೇ ಹೋಗುತ್ತದೆ. ತಾಯಿ ಗಂಗಮ್ಮ ನವೆನವೆದು ಬಾಲಸಂಗಯ್ಯನನ್ನು ಹಿಂಬಾಲಿಸುತ್ತಾಳೆ. ಸಮರತಿಯ ಸುಖ ದಾಂಪತ್ಯದಲ್ಲಿ ಪರಮಸುಖಿಯಾಗಿದ್ದ ಗುರುಚೆನ್ನಮಲ್ಲಯ್ಯನವರ ಬದುಕಿನಲ್ಲಿ ಬಿರುಗಾಳಿಯಂತೆ ಬಂದ ಮೃತ್ಯುವು ಅವರ ಬದುಕನ್ನೇ ಅಲ್ಲಾಡಿಸಿಬಿಡುತ್ತದೆ. ಮುದ್ದು ಮಗ- ಒಲವಿನ ಹೆಂಡತಿಯ ಸಾವಿನಿಂದ ನೊಂದು, ಮನೆ- ಮಾರು ತ್ಯಜಿಸಿ ಶಿಷ್ಯನಿದ್ದಡೆಗೆ ಬಂದರೂ ಶಾಂತಿ ದೊರಕದಿದ್ದಾಗ, ಮತ್ತೆ ಮನೆ ಬಿಟ್ಟು ಶ್ರೀ ಗಿರಿಯ ಮಲ್ಲಯ್ಯನೆಡೆಗೆ ಹೊರಡುತ್ತಾರೆ. 'ಬಿಸಿಲೆಂಬ ಗುರುವಿಗೆ ನೆಳಲೆಂಬ ಶಿಷ್ಯ' ಎಂಬಂತೆ ಗಿರಿಮಲ್ಲಯ್ಯ ಗುರುವನ್ನು ಬೆಂಬತ್ತಿ ಶ್ರೀಗಿರಿಗೆ ನಡೆಯುತ್ತಾನೆ. ಈ ಸಮಾಚಾರವನ್ನೆಲ್ಲ ಅಕ್ಕನಿಗೆ ವಿವರಿಸುತ್ತಾನೆ. ಅಷ್ಟರಲ್ಲಿಯೇ ಮೂರ್ಛೆ ತಿಳಿದೆದ್ದ ಗುರುಚೆನ್ನಮಲ್ಲಯ್ಯ ಅಕ್ಕಮಹಾದೇವಿಯೊಂದಿಗೆ ನಡೆಸುವ ಸಂಭಾಷಣೆಯಲ್ಲಿ ಮೃತ್ಯುವಿನ ಕರಾಳತೆಯನ್ನು ಕುರಿತು ಬರುವ ವಿವರಗಳು ಅದ್ಭುತವಾಗಿವೆ. ಮನುಕುಲವನ್ನು ಸದಾ ಬೆಂಬತ್ತಿರುವ ಸಾವಿನ ಆದಿ - ಅಂತ್ಯಗಳ ಕುರಿತಾದ 'ಮೃತ್ಯು ಮೀಮಾಂಸೆ' ವಿಶಿಷ್ಟವಾಗಿದೆ.

ನಕ್ಕು ನಲಿಯುತ್ತಿದ್ದ ಜೀವಿಗಳೆರಡನ್ನು ಹಠಾತ್ತನೆ ಹೊಸಕಿ ಹಾಕಿದ ಮೃತ್ಯುವಿನ ನಿರ್ದಯ ಪ್ರಳಯ ಶಕ್ತಿಯನ್ನು ಕಂಡು ಬೆರಗಾದ ಗುರುಚೆನ್ನಮಲ್ಲಯ್ಯ ಉತ್ತರಿಸಲಾಗದ ಸಾವಿನ ಕರಾಳ ಕತ್ತಲೆಯ ಆದಿ ಅಂತ್ಯದ ಕಥೆಯನ್ನು ಕುರಿತು ಚಿಂತಿಸುತ್ತಾರೆ. ಕಾಲಕಾಲಾಂತರದಿಂದ ಮಾನವ ಕುಲವನ್ನು ತೊತ್ತಳೆದುಳಿಯುತ್ತ ವಿಜೃಂಭಿಸುತ್ತಿರುವ, ಸಾವಿರ ಬಿಗಿ ಮುಷ್ಠಿಯಲ್ಲಿ ನುಚ್ಚುನೂರಾಗುತ್ತಿರುವ ಮನುಕುಲದ ವಿನಾಶವನ್ನು ಕುರಿತು ಚಿಂತಿಸಿ ಅಪಾರ ದುಃಖದಲ್ಲಿ ಮುಳುಗುತ್ತಾರೆ. ಸಮಸ್ತ ಜೀವ ಕೋಟಿಯನ್ನು ನುಂಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೊಣೆಯುತ್ತಿರುವ ಈ ಬ್ರಹ್ಮಾಂಡ ಕತ್ತಲೆಯಿಂದ ಪಾರಾಗಿ ಬದುಕುವ ಮಾರ್ಗಕ್ಕಾಗಿ ಪರಿತಪಿಸುವ ಚಿತ್ರಣ ಮನೋವೇದಕವಾಗಿದೆ. 'ಎರಡು ಮರಣಗಳ ಹೊತ್ತು ನಿತ್ತರಿಸುವಾ ಶಕ್ತಿ' ಕಳೆದುಕೊಂಡು ಗುರುಚೆನ್ನಮಲ್ಲಯ್ಯ, ಕಾಲಕಾಲಾಂತರದ ಮರಣದ ಮಹಾರಾಶಿ ಮುಗಿಲೆತ್ತರವಾಗಿ ಜಗದಗಲವಾಗಿ ಬಿದ್ದಿರುವದನ್ನು ಚಿಂತಿಸಿ ಕಂಗಾಲಾಗುತ್ತಾನೆ. ಹೀಗೆ ಹೆಂಡತಿ ಮಗುವಿನ ಸಾವು ಗುರುಚೆನ್ನಮಲ್ಲಯ್ಯನನ್ನು ಸಾವು-ಬದುಕಿನ, ಬೆಳಗು ಕತ್ತಲೆಯ ಹಲವಾರು ಬಿಡಿಸಲಾಗದ ಪ್ರಶ್ನೆಗಳನ್ನು ಕುರಿತು ಗಂಭೀರವಾಗಿ ಚಿಂತಿಸಲು ಪ್ರೇರೇಪಿಸುತ್ತದೆ. ವ್ಯಕ್ತಿನಿಷ್ಠನೆಲೆಯಲ್ಲಿ ಬಾಧಿಸಿದ ಸಾವಿನ ದುಃಖವು ಸಮಷ್ಟಿಯ ನೆಲೆಯಲ್ಲಿ ಮನುಕುಲದ ದುಃಖಕ್ಕೆ ಗುರುಚೆನ್ನಮಲ್ಲಯ್ಯನವರನ್ನು ಸ್ಪಂದಿಸುವಂತೆ ಮಾಡುತ್ತದೆ. ಮೃತ್ಯುವಿನ ಕರಾಳ ಹಿಡಿತದಿಂದ ಮನುಕುಲವನ್ನು ಪಾರುಮಾಡುವ ಮಾರ್ಗ ಕಂಡುಕೊಳ್ಳಲು ಪ್ರಚೋದಿಸುತ್ತದೆ.

ಅಕ್ಕನ ಬದುಕಿನ ಮಹತ್ವದ ತಿರುವಾಗಿ, ಭವ್ಯ ಭವಿಷತ್ತಿನ ಮುಂಬೆಳಗಾಗಿ ಕೌಶಿಕ ಬಂದಂತೆ ಗುರುಚೆನ್ನಮಲ್ಲಯ್ಯನ ಸಮಷ್ಟಿಕಲ್ಯಾಣದ ಮಹಾಯಾತ್ರೆಗಾಗಿ ಇಲ್ಲಿ ಮೃತ್ಯು ಮುನ್ನುಡಿಯನ್ನು ಬರೆಯುವ ಸನ್ನಿವೇಶವು ಶ್ರೀಶೈಲಕಾಂಡದ ಅತಿ ಮಹತ್ವದ ಬೆಳವಣಿಗೆಯಾಗಿದೆ. ಒಡೆಯಲಾಗದ ಸೃಷ್ಟಿಯ ಪರಮರಹಸ್ಯವಾಗಿರುವ ಮೃತ್ಯುವಿನ ಉತ್ತರ ಬಯಸಿ ಪೆಡಂಭೂತಗಳನ್ನೆಲ್ಲ ಕತ್ತಲೆಯ ಬ್ರಹ್ಮವನ್ನು ಭೇದಿಸಿ, ಲಿಂಗದ ಬೆಳಗನ್ನು ಕಂಡುಕೊಳ್ಳುವ ಭಾಗವು ತಾತ್ವಿಕ ಚಿಂತನೆಯ ಹಿನ್ನೆಲೆಯಲ್ಲಿ ಜನನ - ಮರಣದ ಚಕ್ರವ್ಯೂಹವನ್ನು ಭೇಧಿಸಬಲ್ಲ ಮಾರ್ಗವನ್ನು ವಿವರಿಸುತ್ತದೆ.

ಕವಿಯ ದಟ್ಟ ಲೋಕಾನುಭವ, ಮನೋವಿಶ್ಲೇಷಣಾತ್ಮಕ ಚಿಂತನೆ, ತಾತ್ವಿಕ ಪರಿಜ್ಞಾನಗಳ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಈ ಸನ್ನಿವೇಶದಲ್ಲಿ, ಉಳಿಯ ಹೊಡೆತಗಳಿಂದ ಶಿಲೆ- ಕಲೆಯಾಗಿ ಅರಳುವಂತೆ ದುಃಖ- ಕಷ್ಟ- ನಿಷ್ಠುರಗಳು ಮಾತ್ರ ಮನುಷ್ಯನನ್ನು ಉದ್ಧಾರದ ಮಾರ್ಗಕ್ಕೆ ಕೊಂಡೊಯ್ಯುವಲ್ಲಿ ಮಾನವನಲ್ಲಿರುವ ಮಹಾದೇವತ್ವವನ್ನು ಅರಳಿಸಬಲ್ಲ ಸಾಧನಗಳಾಗಿವೆ- ಎನ್ನುವ ಕವಿಯ ಜೀವನಾನುಭವದ ಕಲಾತ್ಮಕ ಅಭಿವ್ಯಕ್ತಿಯನ್ನು ಗುರುತಿಸಬಹುದಾಗಿದೆ. ಗುರು ಚೆನ್ನಮಲ್ಲಯ್ಯನ ಬದುಕಿನಲ್ಲಿ ನಡೆದ ಈ ಆಘಾತದ ಕಥೆಯನ್ನು ಮೃತ್ಯುವಿನ ಭೀಕರತೆಯ ಸ್ವರೂಪವನ್ನು ತಿಳಿದು ದುಃಖಿತಳಾಗುವ ಮಹದೇವಿಯಕ್ಕನ ಸಾವಿನ ಈ ವಿಕಟ ಲೀಲಾವಿಲಾಸವು ವಿಚಾರ ಮಾಡಲು ಅಣಿಗೊಳಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಟ್ಟಿಸುವ ಹೊಂದಿಸುವ ಕೇಕೆಯೊಳು ಸಂಭ್ರಮಿಸಿ
ಚಟ್ಟನೆ ಚೀರಿರುವ ಪ್ರಾಣರಾಶಿಯ ಮಾಯ
ಮಾಡುತ್ತ ಮಾಡುತ್ತ ಆಡುವುದು--

ಯಾವ ವಿಕಟಾನಂದ ಲೀಲಾ ವಿಲಾಸ!? ಎಂದು ಮತ್ತೆ ಮತ್ತೆ ಚಕಿತಗೊಳ್ಳುತ್ತಾಳೆ. ಕಾರುಣ್ಯನಿಧಿ, ಕೃಪಾವಾರಾಶಿ, ದಕ್ಷಿಣಾ ಮೂರುತಿ, ಶಂಕರ, ದಯಾಘನ, ಎಂಬ ದೇವರ ವಿಶ್ಲೇಷಣಗಳೆಲ್ಲ ಆ ಕ್ಷಣದಲ್ಲಿ ಅಕ್ಕನಿಗೆ ಹುಸಿಯಾಗಿ ತೋರುವದು. ಅದರೊಂದಿಗೆ ಈ ಎಲ್ಲ ನೋವಿನ ನಡುವೆಯೂ ದೇವನನ್ನು ಪೂಜಿಸುವ ಮಾನವ ಆಕೆಗೆ ಔದಾರ್ಯದ ಮೂರ್ತಿ ಎನಿಸುತ್ತಾನೆ. ಒಟ್ಟು ತನ್ನ ಮುಂದೆ ನಡೆದಿರುವ ದ್ವೈತ ಪ್ರಪಂಚದ ವಿಚಿತ್ರವಾದ ಆಟವನ್ನು ಕಂಡು ಆಕೆಯು ''ಅರ್ಥವಿಲ್ಲದ ಲೀಲೆ ತಾನೇಕೆ ಜಗವೇಕೆ'' ಎಂದು ವಿಚಾರಮಗ್ನಳಾಗುತ್ತಾಳೆ. ಅಕ್ಕಮಹಾದೇವಿಯ ಗಂಭೀರ ಚಿಂತಾಮಗ್ನ ಮುಖ ಮುದ್ರೆ ಗುರುವನ್ನು ಬಾಧಿಸಿದರೂ, ಅಕ್ಕನ ಭಕ್ತಿ- ವೈರಾಗ್ಯ ಜೀವನದ ಕಥೆಯನ್ನು ಕೇಳಿದ ಗುರುಚೆನ್ನ ಮಲ್ಲಯ್ಯ ಆಕೆಯ ಸಾಧನೆಯನ್ನು ಕೊಂಡಾಡುತ್ತಾನೆ.

''ಮಣ್ಣು ಹೊನ್ನಿಗೆ ಹಸಿದು, ಗಂಡು ಹೆಣ್ಣಿಗೆ ಸತ್ತು
ಮಕುಟ ಗದ್ದುಗೆ ಪಟ್ಟ ಪೀಠಕ್ಕೆ ಭೋರ್ಗರೆದು
ವಾರ್ತೆ ಕೀರ್ತಿಗೆ ತನ್ನ ತಾನೆಲ್ಲ ಬಲಿಗೊಟ್ಟು
ಲೋಭ ಮೋಹಕೆ ಕ್ರೋಧ ಮದ ಮತ್ಸರಕೆ
ತನ್ನ ಮಹದಿರವುಗಳ ಮಾರಿ ಜಗದಲ್ಪಗಳ ಕೊಂಡು''

ಮರಣ ಶೂಲದ ಮೇಲೆ ಕುಳ್ಳಿರ್ದು ಭೋಗಿಸುವಂತೆ- ಹೀಗಿರುವ ಅಜ್ಞಾನ - ಕ್ರೂರಮಯ ಮಾನುಷದ ನೆಲೆಯನ್ನು ಮೀರಿ ಶಿವಯೋಗ ಸಾಧನೆ ಮಾಡಿ, ಆಕೆ ಮಹದ ಬೆಳಗು ಪಡೆದುದನ್ನು ಸ್ಮರಿಸಿ ಸಂತಸಪಡುತ್ತಾನೆ. ಅದೇ ವೇಳೆಗೆ - ನಿಜನಿರಾಳದ ಸಮಾಧಿಯಲ್ಲಿ ನೀನೊಬ್ಬಳೆ ಮುಳುಗಿದರೆ ''ಮೃತ್ಯು ದೇವತೆಗೆ ಉತ್ತರವ ಕೊಡಬಲ್ಲ ಕಲಿ ಯಾರು?'' ಎಂದು ಅಕ್ಕನನ್ನು ಪ್ರಶ್ನಿಸುತ್ತಾನೆ. ಜೊತೆಗೆ ತಾನು ಸಂಪಾದಿಸಿದ ಅದ್ವೈತದ ಅನುಭವವನ್ನು ಪರೀಕ್ಷೆಗೆ ಒಡ್ಡುತ್ತಾನೆ. ಇಬ್ಬರೂ ಈ ವಿಶ್ವ ಪ್ರಪಂಚ - ಪ್ರಕೃತಿ ಮಾನವನನ್ನು ಕುರಿತಂತೆ ಗಂಭೀರ ಚಿಂತನೆಯಲ್ಲಿ ಮುಳುಗುತ್ತಾರೆ.

''ಗುರುದಾಯನೆಮ್ಮೊಳಗೆ ಕುಳ್ಳಿರ್ದು ಕಾಣಿಸದ
ಜಗವ ಸೃಷ್ಟಿಯ ಸುಪ್ರಸನ್ನ ಸೌಂದರ್ಯವನ್ನು
ರಚನಾ ವಿಲಾಸವನು ನೋಡಿ ನಿಬ್ಬೆರಗಾದೆ''--

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಸೃಷ್ಟಿಯ ಉಗಮ ವೃತ್ತಾಂತವನ್ನು ಅಕ್ಕಮಹಾದೇವಿಯು ವಿವರವಾಗಿ ನಿರೂಪಿಸುತ್ತಾಳೆ. ಅಖಂಡ ಪರಿಪೂರ್ಣ ಪರವಸ್ತುವು ತನ್ನ ಲೀಲಾ ವಿನೋದಕ್ಕಾಗಿ ಭಿನ್ನ ವಿಭಿನ್ನ ರೂಪ ಧರಿಸಿ ವಿಶ್ವನಾಟಕ ನಟಿಸುತ್ತದೆ.-- ಎಂಬ ವೀರಶೈವ ತಾತ್ವಿಕ ವಿಚಾರ ಸೃಷ್ಟಿಯನ್ನು ಕುರಿತು ವಿಷಯ ವಿವರವಾಗಿಯೂ, ಚಿತ್ರಮಯವಾಗಿಯೂ೫೫ಳಲ್ಲಿ ಮೂಡಿ ಬಂದಿರುವದು -ಆದಿಯಿಂದ ಇಲ್ಲಿಯವರೆಗೆ.

''ನಿಜದರಿವ ನುಂಗಿ ಚಿತ್ತುವಿನ ಚೇತನಕೆ
ಪ್ರಾಣ ನಿದ್ರೆಯನುಡಿಸಿ ಪಶುಪಕ್ಷಿಗೊಳಿಸಿ
ನಡೆದಿರುವ ಈ ಆಟ ಮಾಯೆಯ ಮಹಾ ಮಾಟ
ಬೆಳಗು ಬೆಳಗನು ಪೊತ್ತು ಹತ್ತಿಪ ಮಹಾಬೆಳಗು
ಪ್ರಾಣಕೋಟಿಯೇ ಮಹಾಪ್ರಾಣಲಿಂಗ
ತನ್ನಿಚ್ಛೆ ತನ್ನೊಲವು ತನ್ನ ಗೆಲುವಿಗೆ
ತಾನೇ ಜೀವಕೋಟಿ ನಿದ್ರೆ ಹತ್ತಿ ಮಲಗಿದರೆ
ಈ ಚಕ್ರವ್ಯೂಹವನು ಭೇದಿಸುವ ಕಲಿ ಯಾರು?''

ಎಂದು ಮಹಾದೇವಿಯಕ್ಕ ಸರ್ವವ್ಯಾಪಿಯಾಗಿರುವ ಮಾಯಾವಿಲಾಸವನ್ನು ಕಂಡು ಬೆರಗುಗೊಳ್ಳುತ್ತಾಳೆ. ಸೃಷ್ಟಿಯ ವೈಶಿಷ್ಟ್ಯಪೂರ್ಣ ಹಂತ ಮಾನವ ಪ್ರಾಣಿ.

ಎರಡು ಕಾಲಿನ ಪ್ರಾಣಿ ''ಕರಿ ತಲೆಯ ಮಾನವ!''
ತನ್ನ ಪೂರ್ವಾಶ್ರಮದ ನಿದ್ದೆಯನು ರೂಢಿಸುತೆ
ನೆಲ- ಮುಗಿಲು ಮರ - ಬಳ್ಳಿ ಪಶು- ಪಕ್ಷಿ ಗಡಸಿರ್ದ
ಮರವೆಯಾ ಮುಸುಕನ್ನು ಓರೆ ಮಾಡುತ ಮಬ್ಬು
ಗಣ್ಣನೊಳಗೆಚ್ಚರವ ಸಂಭ್ರಮದ ಸಡಗರದ
ಅರಿವು ಮರವಯ ಮುದ್ದೆ ಚಿತ್ರವಾಮನ ಮೂರ್ತಿ!

ಜಡಮಯವಾದ ಪಂಚಭೂತ ಪ್ರಕೃತಿಯಿಂದ ಹಿಡಿದು ಇಂದಿನ ಮಾನವನ ವರೆಗಿನ ಸೃಷ್ಟಿ ವಿಕಾಸದ ಹಂತ ಹಂತಗಳನ್ನು ಕೇವಲ ತಾತ್ವಿಕ ಹಿನ್ನೆಲೆಯಲ್ಲಿ ನಿರೂಪಿಸಿರದೆ, ಚಾರ್ಲ್ಸ್‌ಡಾರ್ವಿನ್ನನ ಜೀವವಿಕಾಸವಾದದ ವೈಜ್ಞಾನಿಕ ವಿಚಾರ ಬಳಸಿಕೊಂಡಿರುವದನ್ನು ಗುರುತಿಸಬಹುದು. ಇದರಿಂದಾಗಿ ಕಾವ್ಯಕ್ಕೆ ವಿಶೇಷ ಬಿಗುವು ಬಂದಿದೆ. ಭೂಸನೂರಮಠರ ವಿಚಾರಧಾರೆಯೇ ಹಾಗೆ. ವಿಜ್ಞಾನ-ತತ್ವಜ್ಞಾನಗಳನ್ನು ಜೊತೆ ಜೊತೆಯಾಗಿಯೇ ಅವರು ಹೇಳಿಕೊಂಡು ಹೋಗಬಲ್ಲರು. ಅವರ 'ಶೂನ್ಯ ಸಂಪಾದನೆಯ ಪರಾಮರ್ಶೆ' ಕೃತಿಯಲ್ಲಂತೂ ಈ ಮಾತು ಒಡೆದು ಕಾಣುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಲ, ನೀರು, ಗಾಳಿ, ಬೆಂಕಿ ಬಯಲುಗಳು ಮಾನವನ ಮೂಲಕ ತಮ್ಮ ಅರಿವಿಗೆ ತಾವು ಎಚ್ಚರಗೊಂಡಿವೆ, ಎಂಬ ಅರಿವಿನ ಫಲಶ್ರುತಿಯೇ ಈ ಮಾನವ ಪ್ರಾಣಿ. ತಾನು ಎಲ್ಲದರಲ್ಲಿ; ಎಲ್ಲ ತನ್ನಲ್ಲಿ ಎಂಬ ವಿಶಾಲ ಬುದ್ಧಿಯನ್ನು ತೊರೆದು ತಾನು ದೇಹ- ಜೀವ ಭಾವ ಇತ್ಯಾದಿ ಅಲ್ಪತೆಗಳಲ್ಲಿ ಕುಬ್ಜನಾಗಿರುವನೆಂಬ ಕೊರಗು ಕವಿಯಮನಸ್ಸಿನಲ್ಲಿದೆ.

ವಿಶ್ವರಂಗಸ್ಥಳದ ಮೇಲೆ ನಡೆದಿರುವ 'ನಾನು ಮಾನವ ಬ್ರಹ್ಮ'ನ ಭೂಮ ನಾಟಕದ ಕಲ್ಪನೆಯೊಂದು ಇಲ್ಲಿ ಗಮನ ಸೆಳೆಯುವಂತಿದೆ. ಈ ನಾಟಕವನ್ನು ಅಕ್ಕಮಹಾದೇವಿಯೂ, ಗುರು ಚೆನ್ನಮಲ್ಲಯ್ಯ ಹಾಗೂ ಗಿರಿಮಲ್ಲರಿಗೆ ತೋರಿಸುತ್ತಾಳೆ.

ಬಯಲು ಚಪ್ಪರವದಕೆ ನೆಲವೆ ನೆಲಗಟ್ಟು
ದೀಪಗಳು ಪಚ್ಚಿಹವು ನಕ್ಷತ್ರಕೋಟಿ
ಹಣತೆ ಕೈ ದೀವಿಗೆಯು ಸೂರ್ಯ ಚಂದ್ರಮರು
ವಾಯುಮಂಡಲವಿಲ್ಲಿ ಗಾಳಿಯಾಡಿಹುದು
ಕೆರೆ ತೊರೆ ಸಮುದ್ರಗಳು ಕುಡಿವ ನೀರಿನ ದೋಣಿ
ತನ್ನ ಆಹಾರಕ್ಕೆ ತರು ಮರಾದಿಗಳು
ಪಶು ಪಕ್ಷಿ ಜಲಚರವು ಭಕ್ಷ್ಯ ಭೋಜ್ಯ
ಹುಟ್ಟಿಸುವ ಹಡೆವ ಕುಲ ಗಂಡು ಹೆಣ್ಣು
ಈ ಅಗಲ ಈ ಎತ್ತರದ ಬಾಳು ಬದುಕಿನ ಮನೆಯ
ಕೂಡಿ ಕೊಂಡಿರಬಲ್ಲ ಬಲ್ಲತನವಿಲ್ಲದೀ
ನಾನು ಬ್ರಹ್ಮದ ರಾಶಿ ರಾಶಿ ಅಣು ಕೋಟಿಗಳು
ಹಂಚಿಕೊಂಡಿಹವಯ್ಯ ತಮ್ಮ ಗಾತ್ರದ ಅಳತೆ
ಮನೆ ಮಾರು ಮಠ ಮಾನ್ಯಗಳ ವಿಭಾಗಿಸಿಕೊಂಡು
ಹಳ್ಳಿ ಪಟ್ಟಣವೆಂದು ದೇಶಕೋಶವಿದೆಂದು
ಗುಂಪಾಗಿ ಗುಂಪಾಗಿ ಪಾಲುಗೊಂಡಿಹವಯ್ಯ,
ಈ ಜೀವ ಜೀವಂತ ಕಣ ಕಣದ ಕೋಟಿಗಳು
ಅಲ್ಪ ಅಕ್ಕಲ್ಪಗಳು ನಾನು ತಾನೆ ಬ್ರಹ್ಮ
ಮನೆ ಮನೆಯ ಬ್ರಹ್ಮಾಂಡ ತನ್ನದಾಗಿಹುದಯ್ಯ

ಆದರೂ ಈ ನಾನು -ಮಾನವ ಸಾಮಾನ್ಯನಲ್ಲ. ಆಕಾಶ ಅಳೆಯುತ್ತಿರುವ, ನಕ್ಷತ್ರ ಎಣಿಸುತ್ತಿರುವ ಧೀರ. ವೇದ ಓದುವ, ಯಜ್ಞ ಮಾಡಿ ದೇವರನ್ನೇ ಮನೆಗೆ ಕರೆದಿರುವ ಮಾನವನ ಸಾಹಸ ಸಣ್ಣದೇನಲ್ಲ. ಎನ್ನುತ್ತ ಅಕ್ಕಮಹಾದೇವಿಯು ಮತ್ತೆ ಮನುಷ್ಯ ಸ್ವಭಾವದ ವರ್ಣನೆಗೆ ತೊಡಗುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ ಶಕ್ತಿಯ ಮೀರಿ ಸತ್ತು ಗಳಿಸಿಹನಯ್ಯಾ
ಹೊನ್ನು ರನ್ನದ ಸಿರಿಯ ಹೆಣ್ಣು ಹೆಣ್ಣಿನ ರತಿಯ
ಹೊನ್ನು ಹೆಣ್ಣಿಗೆ ಹಬ್ಬಿ ಮಣ್ಣೊಳಗೆ ಬೆಳೆದಿಹನು
ಕಾಮ ಕ್ರೋಧದ ವೀರ ರಾಗ ದ್ವೇಷದ ಬಂಟ
ಹೊಡೆದಾಡಿ ಬಡಿದಾಡಿ ತನ್ನ ಸಂತತಿಗೆ ತಾ
ಕಾಲ ಮೃತ್ಯುವ ಆಗಿ ಸಾವಿನ ಹಬ್ಬಕ್ಕೆ
ಸಂಭ್ರಮಿಸಿ ತಾನೆ ಮೃತ್ಯುವಿಗೆ ತುತ್ತಾಗಿ
ಹೋಗಿಹನು ಹೋಗಿಹನು ಹೇಳುವರೆ ಹೆಸರಿಲ್ಲ
ಸತ್ತು ಹೆಣವಾದರೂ ವಾರ್ತೆ ಕೀರ್ತಿಯೆ ಸ್ವಪ್ನ
ಮಣ್ಣಾಗಿ ಹೋದರೂ ಪುಣ್ಯ ಸ್ವರ್ಗದ ವಾಸ॥

ಮಾನವ ಸ್ವಭಾವ- ಧ್ಯೇಯ- ಧೋರಣೆಗಳ ಯಥಾವತ್ತಾದ ಚಿತ್ರಣವು ಧ್ವನಿ ಪೂರ್ಣವಾದ ಶೈಲಿಯಲ್ಲಿ ಇಲ್ಲಿ ನಿರೂಪಿತವಾಗಿ ಇದು ಸಾಮಾನ್ಯ ಮಾನವರ ರೀತಿ ಎನ್ನುತ್ತ ಮಹಾದೇವಿಯಕ್ಕ ಗುರುಚೆನ್ನಮಲ್ಲಯ್ಯನನ್ನು ಸಂಬೋಧಿಸುತ್ತಾಳೆ.

ಲೋಕದೆಚ್ಚರ ನಿದ್ರೆ ಸ್ವಪ್ನವನು ಮೀರಿ
ಬೆಳಗುಗಳ ಬೆಳಗುವ ಮಹಾ ಬೆಳಗಿಗೆಚ್ಚತ್ತ
ನಿಮಗೆ, ಜನಮನದ ಅಜ್ಞಾನವನ್ನು
ನೀಗ ಹೊರಟ ನಿಮಗೆ
ಸೋಂಕಿಹವು ಎಂತಯ್ಯ ದುಗುಡ- ದುಮ್ಮಾನಗಳು
ನೀವೇಕೆ, ಭಯ ಮರಣ ದುಃಖದೀ ಮಾತೇಕೆ?

ಎಂದು ಪ್ರಶ್ನಿಸುತ್ತಾಳೆ, ಗಿರಿಮಲ್ಲನ ಕೂಡ
''ಮರಣಗಿರಣವದೆಲ್ಲ ಪರಮ ಪ್ರಸಾದ'' ★ದ330ರ

ಎಂದು ಹಾಡಿದ ''ನೀವು ಈಗ ಹೀಗೆ ಮಂಕುಗೊಂಡಿರುವದೇಕೆ?'' ಎಂದು ಪ್ರಶ್ನಿಸುತ್ತಾನೆ. ಮತ್ತೆ ಗುರುಚೆನ್ನಮಲ್ಲಯ್ಯ ತಾನು ಅನುಭವಿಸಿದ ದುಃಖ, ಪಡೆದ ಅನುಭವಗಳನ್ನು ನಿರೂಪಿಸುವನು. ಅಕ್ಕಮಹಾದೇವಿಯೂ ತಾನೂ ಕೌಶಿಕನ ಸಂದರ್ಭದಲ್ಲಿ ಅನುಭವಿಸಿದ ದುಃಖವನ್ನು ತೋಡಿಕೊಳ್ಳುವಳು. ಜೊತೆಗೆ ಪ್ರಕೃತಿ ಮಾತೆಯ ದರ್ಶನ ಸಂದರ್ಭವನ್ನು ವಿವರಿಸುವಳು.

ಹಸಿರು ಸಾಗರದೊಳಗೆ ಬಣ್ಣ ಬಣ್ಣದ ಹೂ
ತರೆಮರೆಯ ಮಕರಂದ ಮಾಡುತಿರ್ದುದ ಕಂಡೆ.
ಬಣ್ಣ ಬಣ್ಣದ ಹಕ್ಕಿ ತೆರೆಮರೆಯ ಗಾನವನು
ಹಾಡು ಹಾಡುತ್ತ ನಲಿಯುತಿರ್ದುದು ಕಂಡೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೆಲುಗಾಳಿ ನೆಲೆಯೊಳಗೆ ಸುಳಿದಾಡಿ ತೇಲಾಡಿ
ತಂಪಿನೊಳು ಕುಳ್ಳಿರ್ದು ಜೊಂಪಿಸುವುದನು ಕಂಡೆ
....
....
ಮಧು ಮಾಸದೊಳು ಮಧುವ ಮನವಾರೆ ಉಂಡುಂಡು
ಮುದವಲರ ಮದವೇರಿ ಮರಿದುಂಬಿಗಳ ಹಿಂಡು
ನೆಗೆನೆಗೆದು ಹಾರಾಡಿ ತಾನಿಗಾವನು ಮಾಡಿ
ಕೆಳಗಿಳಿದು ಬಿರಿಯರಲ ಚುಂಬಿಸುತ ಚುಂಬನಕೆ
ಅರದೆಲೆಯ ತನಿಸೊದೆಯ ಮಚ್ಚುಗೆಯ ಪಡೆ ಪಡೆದು
ರಸದುಂಬಿ ಪಂಕ್ತಿಯೊಳು ರಾಗಮಾಲೆಯಮಿಡಿಯೆ
ಮಲ್ಲಲರು ನಿಂದಲ್ಲಿ ಸವಿದು ತಲೆ ದೂಗುತಿದೆ
ಮಾಮರವ ಕೆಂದಳಿರ ಮೊಗವು ಕೆಂಪೇರುತಿದೆ.
ಮಲ್ಲಿಗೆಯ ಮೈಯೆಲ್ಲ ಬೆಳಂನಗೆಯ ಆನಂದ
ವಲರಿ ಹೂವಾಗಿ ಮಕರಂದ ಗೊಂಚಲಿಸುತಿದೆ
ಹಚ್ಚನೆಯ ಹುಲ್ಲೆಲ್ಲ ನಾದಕ್ಕೆ ನಲುಗಿಹುದು

ಇಲ್ಲಿ ಮೂಡಿ ಬಂದಿರುವ ಪ್ರಕೃತಿ ವರ್ಣನೆ ಭೂಸನೂರಮಠ ಅವರ ಸುಲಲಿತವಾದ ಕವಿತಾಶಕ್ತಿಗೆ ನಿದರ್ಶನ. ಕಾವ್ಯದಲ್ಲಿ ಇಂಥವುಗಳಿಗೆ ಕೊರತೆಯಿಲ್ಲ.

ಅನಂತರ, ಪ್ರಕೃತಿಮಾತೆ ದರ್ಶನ ನೀಡಿ ತನ್ನ ಅಳಲು ತೋಡಿಕೊಂಡ ತಾತ್ವಿಕ ಚಿತ್ರಣವಿದೆ. ವಿಶ್ವ ಲೀಲೆಯಲ್ಲಡಗಿ ತಾನು ಜಡವಾಗಿ ಹೋಗಿರುವದಾಗಿ ತಿಳಿಸುತ್ತ ಆಕೆ-

ಕೋಗಿಲೆಯ ಕುಕಿಲಾಗಿ ಹಾಡಿಹೆನು ಆತನನೆ
ಗಿಳಿಯ ಚಿಲಿಮಿಲಿಯೊಳಗೆ ಕರೆದಿಹೆನು ಬಾರೆಂದು
ರಸಲಯದ ಕೆಂಪಾಗಿ ಅನುರಕ್ತಿಯಾಗಿಹೆನು
ಗಿಡಮರದ ರೆಂಬೆ ಕೊಂಬೆಯ ನೆಪದಿ ಕೈಚಾಚಿ
ಸೋಂಕಲೆಳಸಿಹೆನೆನ್ನ ಸೌಭಾಗ್ಯ ಮೂರುತಿಯ

ಎಂದು ಪ್ರಕೃತಿದೇವಿಯು ಪರವಸ್ತುವನ್ನು ಕುರಿತು ಹಂಬಲಿಸುವ ಈ ಚಿತ್ರ ಒಂದು ಅದ್ಭುತರಮ್ಯ ತಾತ್ವಿಕ ಕಲ್ಪನೆ. ಪ್ರಕೃತಿ ದೇವಿಯ ಅಳಲಿಗೆ ಸಮಾಧಾನ ಹೇಳುವ ರೀತಿಯಲ್ಲಿ ಪರವಸ್ತು ಪ್ರಕಟಗೊಂಡು ನಿನ್ನ ಹಂಬಲದಂತೆ ನಿನ್ನೊಡಲಿನಿಂದಲೇ ಪೃಥ್ವಿಯನು ದ್ಯಾವಾಕ್ಕೆ ಕೊಂಡೊಯ್ವ ಬಸವಣ್ಣ, ಅಲ್ಲಮ ಪ್ರಭು ಮೊದಲಾದ ಶರಣರು ಬರುತ್ತಾರೆ ಎಂದು ಅಭಯ ನೀಡುವ ಚಿತ್ರವೂ ಇಲ್ಲಿದೆ. ಅಲ್ಲದೆ 'ಗುರು' ಎಂಬ ಕರ್ತಾರನು ಭುವಿಯನ್ನು ಶಿವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವನಕ್ಕೆ ಮೇಲೆತ್ತುವದರಲ್ಲಿ ಕಾರ್ಯನಿರತನಾಗಿದ್ದಾನೆ- ಎಂಬ ಅಭಯದ ಮಾತುಗಳನ್ನು ಆಡುವನು. ಇಲ್ಲಿ ಗುರು ಎಂದರೆ ಯಾರು? ಆತ ಹೇಗಿರಬೇಕು? ಅವನ ಮಹಿಮೆ ಹಾಗೂ ಅಮರ ಕಾಯಕದ ಸಾದ್ಯಂತವಾದ ವಿವರಣೆಯಿದೆ.

ಅವಧಾರು ಮಗಳೆ ಎನ್ನ ಭಿನ್ನಪ
ಶರಣರಡಿಯೊಳಗೆನ್ನ ಬ್ರಹ್ಮಾಂಡ ದುಃಖವ
------- --------- ------ ---
------ -------- ------- ----
ಉರಿವ ಶೋಕದ ಪ್ರಳಕಾಲಾಗ್ನಿಕಥೆಯ
ಕಲ್ಯಾಣಲಿಂಗ ಶರಣರ ಪಾದಕೊಪ್ಪಿಸು
------- ------- ------ --
ಕಲ್ಯಾಣದೊಡನಸಂಖ್ಯಾತರೊಡಗೂಡಿ
ಮರಳಿ ಬಾರಾ ತಾಯೆ ವಿಶ್ವಲೋಕದ ಮನೆಗೆ
ಲೌಕಿಕದ ಕುಲಕೆಲ್ಲ ಕಲ್ಯಾಣವ ತಾರವ್ವ.

ಪ್ರಕೃತಿದೇವಿಯ ಈ ಮನವಿಯಲ್ಲಿಯೇ ಅಕ್ಕಮಹಾದೇವಿಯ ಜೀವನ ಪರಿವರ್ತನೆಯ ಬೀಜವಿರುವುದನ್ನು ಗುರುತಿಸಬಹುದು.

ಅಕ್ಕಮಹಾದೇವಿಯು- ತಾನು ಕನಸಿನಲ್ಲಿ ಕಂಡ ಪ್ರಕೃತಿದೇವಿ ಮತ್ತು ಆಕೆ ಬಗೆ ಬಗೆಯಾಗಿ ತನ್ನ ಅಳಲು ತೋಡಿಕೊಂಡುದೆಲ್ಲವನ್ನು ವಿವರಿಸಿದ ನಂತರ ಗುರು ಚೆನ್ನಮಲ್ಲಯ್ಯ ಮತ್ತೆ ವಿಶ್ವಪ್ರಪಂಚವನ್ನು ಕುರಿತು ಮಾತನಾಡುತ್ತಾನೆ. ಪ್ರಪಂಚದಲ್ಲಿ ಬೆಳಗು ತುಂಬಿದೆ. ಆದರೆ ಬೆಳಗನ್ನು ಮೀರಿಸುವಂತೆ ಕತ್ತಲೆಯೂ ತಾಂಡವಾಡುತ್ತಿದೆ. ಈ ಕತ್ತಲೆಯನ್ನು ಕಳೆಯುವ ಮಹಾಮಣಹಕ್ಕೆ ನೀನು ಅಣಿಯಾಗಬೇಕು. ಎಂಬುದು ಅವನ ಕಳಕಳಿಯ ವಿಚಾರ.

ಎಲೆ ಮಹಾತಾಯಿ, ಮರ್ತ್ಯಕ್ಕೆ ಬಂದಿಹೆನು
ಏಕೆ ಬಂದಿಹೆ ಮಗಳೆ ಏನು ಮಣಹ?
ಎಲೆ ತಾಯೆ ಚೆನ್ನನ ಮಹಾಭಾಗ್ಯ ಸೌಭಾಗ್ಯ
ಸತಿಪತಿಯ ಸಮರಸಾನಂದಕ್ಕೆ ಓಲಾಡಿ
ನೀನೊಬ್ಬಳೆ ನಿಬ್ಬೆರಗಿನೊಳು ನಿಂದು ಮಲಗಿದರ
ನಿನ್ನ ರೂಪವ ಹಡೆದು ನಿನಗೆ ಹೆಸರಿಟ್ಟು
ನಿನ್ನ ಭಕ್ತಿಗೆ ತನ್ನ ಚೈತನ್ಯವನು ಕೊಟ್ಟು
ಸಾಕಿ ಸಲಹಿದ ಹೊತ್ತು ಹೊರೆದ
ಭುವನ ಮಾತೆಯ ಲೋಕಸಂತತಿಯ ಗತಿಯೇನು?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ವ್ಯಕ್ತಿ ಕಲ್ಯಾಣದ ಶಿವಯೋಗ ಸಮಾಧಿಯಿಂದ ಲೋಕಕಲ್ಯಾಣದ ಮಹಾಯೋಗದ ಕಡೆಗೆ ಕರೆ ತರುತ್ತಾನೆ- ಗುರು ಚೆನ್ನಮಲ್ಲಯ್ಯ. ಅಕ್ಕಮಹಾದೇವಿಯೂ ತಾನು ಕಂಡ ಬೆಳಗು, ಪಡೆದ ಜ್ಞಾನ, ಅನುಭವಿಸಿದ ಶಿವಯೋಗದ ಪರಿಣಾಮಸುಖವನ್ನು ಲೋಕದ ಕತ್ತಲೆ- ಅಜ್ಞಾನ- ದುಃಖಕ್ಕೆ ನೀಡಿದರೆ ಅಂದಾಗ ಆಕೆಯ ಸಾಧನೆ ಸಾರ್ಥಕವಾಗುತ್ತದೆ- ಎಂಬುದು ಗುರು ಚೆನ್ನಮಲ್ಲಯ್ಯನ ಅರಿವಿನ ವಿಚಾರ.

ಗುರುಚೆನ್ನಮಲ್ಲಯ್ಯ ಎಲ್ಲೆಲ್ಲಿಯೂ ಕತ್ತಲೆ ವಿಜೃಂಭಿಸುತ್ತಿರುವುದನ್ನು ವಿವರಿಸುತ್ತಾನೆ. ಕೊನೆಗೆ ಪ್ರಭುವಿನ ವಚನವನ್ನು ಉದ್ಧರಿಸುತ್ತಾನೆ.

ಅಪರಿಮಿತ ಅಪರಿಮಿತ ಅಪರಿಮಿತ ಕತ್ತಲೆ
ವಿಪರೀತ ವಿಪರೀತ ವಿಪರೀತ ಬೆಳಗು

ಉಳಿದ ಮಹಾಕಾವ್ಯಗಳಿಗಿರುವಂತೆ ಇಲ್ಲಿ ಸಿದ್ಧವಸ್ತುವಿಲ್ಲ(Readymade Plot) ಮಾನವನನ್ನು ಮಹಾದೇವನನ್ನಾಗಿ ಮಾಡುವ ಶರಣದರ್ಶನ ಇಲ್ಲಿನ ವಸ್ತು. ಆಧ್ಯಾತ್ಮದಂತಹ ಗಹನವಾದ ಸಂಗತಿಯನ್ನು ಸರಳವಾಗಿ ತನ್ನ ತೆಕ್ಕೆಯಲ್ಲಿ ಆಲಂಗಿಸಿಕೊಂಡು ಸ್ವಚ್ಛಂದವಾಗಿ, ನಿರಂತರವಾಗಿ, ಕಾವ್ಯವು ಸಾಗರವನ್ನು ಸೇರುವ ಶಾಂತ- ಗಂಭೀರ ನದಿಯಂತೆ ಪ್ರವಹಿಸುವದು ಈ ಮಹಾಕಾವ್ಯದ ವೈಶಿಷ್ಟ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತ್ತಲೆಯ ಕಾಂಡ

ಕೆ. ಗೌಡಪ್ಪ

ಅಕ್ಕಮಹಾದೇವಿಯವರ ಜೀವನಕಾವ್ಯದಲ್ಲಿ ಕವಿವರ್ಯ ಸಂ. ಶಿ. ಭೂಸನೂರಮಠ ಅವರು ತಮ್ಮ ಕಲ್ಪನೆಯ ಸಾಮರ್ಥ್ಯದಿಂದ ಒಂದು ವಿನೂತನ ಸೃಷ್ಟಿಯನ್ನು ನಿರ್ಮಿಸಿದ್ದಾರೆ. ಭವ್ಯಮಾನವ ಮಹಾಕಾವ್ಯ ಕವಿಯ ಉಜ್ವಲ ಪ್ರತಿಭೆಗೆ ನಿದರ್ಶನವಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಸೃಜನಾತ್ಮಕ ಕೃತಿಗಳಲ್ಲಿ ಭವ್ಯಮಾನವಕ್ಕೆ ಅಗ್ರಸ್ಥಾನವಿದೆಯೆಂದು ಹೇಳಲು ಸಂದೇಹವಿಲ್ಲ. ಕವಿ ಇದರಲ್ಲಿ ಪ್ರಕಟಿಸಿದ ಪ್ರಕಾಂಡ ಜ್ಞಾನ, ಮನೋವೈಜ್ಞಾನಿಕ ವಿಶ್ಲೇಷಣೆ ಮತ್ತು ಅನುಭವ ಅದ್ಭುತವಾಗಿವೆ. ಮಾನವನ ಹೃದಯಾಂತರಾಳದಲ್ಲಿ ಕಂಡು ಬರುವ ವಿಭಿನ್ನ ವಿಚಾರ ವಾಹಿನಿಯಿಂದ ಕಾವ್ಯವು ಪರಿಪ್ಲಾವಿತವಾಗಿದೆ.

ಕತ್ತಲೆಯ ಕಾಂಡದಲ್ಲಿ ಏನಿದೆ ಎಂದು ನೋಡಬೇಕಾದರೆ ಗುರುಚೆನ್ನಮಲ್ಲ ಮತ್ತು ಆತನ ಶಿಷ್ಯಂದಿರಾದ ಅಕ್ಕಮಹಾದೇವಿ ಹಾಗೂ ಗಿರಿಮಲ್ಲರೊಂದಿಗೆ ಕತ್ತಲೆಯ ಭೀಕರ ಗರ್ಭದೊಳಗೆ ನಾವು ಪ್ರವೇಶ ಮಾಡಬೇಕಾಗುತ್ತದೆ. ಇದರಲ್ಲಿ ವಿಶ್ವಮಾನವನನ್ನು ಹಾಸು- ಹೊಕ್ಕಾಗಿ ನೇಯ್ದುಕೊಂಡಿರುವ ದುಃಖದ ರಾಶಿಯತ್ತ ಗುರು ತನ್ನ ಶಿಷ್ಯರ ಗಮನ ಸೆಳೆಯುತ್ತಾನೆ. ಅಲ್ಲಿ ಒಂದಕ್ಕಿಂತಲೂ ಒಂದು ಹೃದಯ ವಿದ್ರಾವಕ ಭೀಕರ ದೃಶ್ಯಗಳನ್ನು ಕಾಣುತ್ತೇವೆ. ಕಾಮ, ಕ್ರೋಧ, ರಾಗ, ದ್ವೇಷ, ಮಾನವನ ಸುಖ, ದುಃಖ, ಹೆಣ್ಣು-ಗಂಡಿನ ರೋಗ, ಹೊನ್ನು-ಮಣ್ಣಿನ ರೋಗ, ಹಸಿವು-ತೃಷೆ ಹೋರಾಟ, ಮಾನವನ ಮನದೊಳಗೆ ಹರವಿರುವ ಕತ್ತಲೆ, ಮದ-ಮೋಹ-ಮತ್ಸರಗಳ ಭೀಭತ್ಸ ಮತ್ತು ಭಯಾನಕ ದೃಶ್ಯಗಳ ಹಾಗೂ ಮಾನವನನ್ನು ಮೆತ್ತಿರುವ ಅತ್ಯಾಸೆ, ಅನ್ಯಾಯ, ಕಪಟ, ಮೋಸ, ವಂಚನೆ, ಪಾಪ, ದುರ್ಗುಣ, ದುರಾಚಾರ ಮುಂತಾದ ಕರುಣಾಜನಕ ದೃಶ್ಯಗಳ ಮೇಲೆ ಕವಿವರ್ಯರು ವಿಹಂಗಮ ದೃಷ್ಟಿಯನ್ನು ಬೀರಿದ್ದಾರೆ. ಪ್ರತಿಯೊಬ್ಬ ಕವಿಯು ತನ್ನ ಕಾಲದ ಸೊತ್ತು ಎಂಬುದಕ್ಕೆ ಇದೊಂದು ಜ್ವಲಂತ ನಿದರ್ಶನ.

ಮಹದಾಕಾಶದ ಭವ್ಯ ಮತ್ತು ದಿವ್ಯ ವರ್ಣನೆಯೊಂದಿಗೆ ಈ ಕಾಂಡ ಪ್ರಾರಂಭ ವಾಗುತ್ತದೆ. ಅನಂತಕೋಟಿ ನಕ್ಷತ್ರಗಳು, ಶತಕೋಟಿ ಸೂರ್ಯರು ಚಂದ್ರಮರು, ಮೇಘ ಮಾಲೆಗಳು ಅನಂತಕೋಟಿ ಪ್ರಾಣ ಮುಂತಾದವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳನ್ನು ಗರ್ಭೀಕರಿಸಿಕೊಂಡು ಅಂತುಪಾರವಿಲ್ಲದೆ ವಾಚಾಮಗೋಚರವಾಗಿ ಈ ಮಹಾ ಬಯಲು ಹರಡಿಕೊಂಡಿದೆ. ಕವಿವರ್ಯರು ಮಹಾಮಾತೆ ಪೃಥ್ವಿಯ ಸೌಂದರ್ಯವನ್ನು ಅತ್ಯಂತ ಚಿತ್ರಾತ್ಮಕವಾಗಿ ಬಣ್ಣಿಸಿದ್ದಾರೆ. ಮರ -ಬಳ್ಳಿ, ಕ್ರಿಮಿಕೀಟ, ಪಶುಪಕ್ಷಿ, ಮಾನವ ಮುತ್ತು, ರತ್ನ, ವಜ್ರ, ವೈಡೂರ್ಯ, ಅನಂತ ಜಲರಾಶಿ, ಜ್ಞಾನವಿಜ್ಞಾನ, ಕಲಾ, ಸಂಪದ ಮುಂತಾದವುಗಳ ತಾಯ್ತನದ ಭಾಗ್ಯವನ್ನು ಪಡೆದ ರತ್ನಗರ್ಭೆ ವಸುಂಧರೆಯ ವರ್ಣನೆಯನ್ನು ಓದಿಯೇ ಆನಂದಿಸಬೇಕು. ಕಂಬ, ತೊಲೆ, ಬೋದು, ಗೋಡೆ ಇವುಗಳಾವೂ ಇಲ್ಲದೆ ಬಯಲೊಳಗೆ ಜೋತಾಡಿ ಸುತ್ತುತ್ತಿರುವ ಮಹಾಪುಣ್ಯವಾರಾಸಿ ಹಾಗೂ ಮೃಗಜಾತಿ, ಖಗಜಾತಿ, ಸಸ್ಯಕೋಟಿ ಮುಂತಾದವುಗಳನ್ನು ಹೆತ್ತು ಹೊತ್ತು ಭ್ರಮಿಸುತ್ತಿರುವ ವಿಶ್ವಾದ್ಭುತ ವಿಸ್ಮಯಕಾರಿ ದೃಶ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಕವಿ ಭೂಸನೂರಮಠ ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಇಷ್ಟೆಲ್ಲಾ ಭವ್ಯ ಚಿತ್ರಗಳನ್ನು ಚಿತ್ರಿಸಿ ಗುರುಚೆನ್ನಮಲ್ಲ ಜಗತ್ತಿನ ಕತ್ತಲೆಯ ರುದ್ರ ಭೀಷಣ ಗಂಭೀರ ಗರ್ತಕ್ಕೆ ತನ್ನ ಶಿಷ್ಯರನ್ನು ಕರೆದೊಯ್ಯುತ್ತಾನೆ. ಪ್ರಭುದೇವರು ಹೇಳುವಂತೆ 'ಅಪರಿಮಿತ ಕತ್ತಲೆ ವಿಪರೀತ ಬೆಳಗು' ಈ ಮಹದಾಕಾಶದ ಗರ್ಭದಲ್ಲಿ ಲೀಲೆಯಾಡುತ್ತಿರುವ ಅನಂತಕೋಟಿ ಸುಪ್ತ ಚೈತನ್ಯಗಳು ನಮಗೆ ಕತ್ತಲೆ. ಇದರಂತೆ ವಾಯುಮಂಡಲ ಅಗ್ನಿ ನೀರು ಭೂಮಿಯಲ್ಲಿ ಅಡಗಿರುವ ಅಪಾರ ಶಕ್ತಿಯ ಅರಿವು ಮಾನವನಿಗಿಲ್ಲ. ಅಷ್ಟೇ ಏಕೆ, ಮಾನವನಲ್ಲಿಯೇ ಹುದುಗಿಕೊಂಡು ವ್ಯವಹರಿಸುತ್ತಿರುವ ಸುಪ್ತ ಚೈತನ್ಯಗಳು ಮಾನವನ ಕಣ್ಣಿಗೆ ಅಪರಿಮಿತ ಕತ್ತಲೆ. ವಿಷಯ ಸಂಸಾರ ಚಕ್ರದಲ್ಲಿ ಸುತ್ತಾಡುತ್ತಿರುವ ಮಾನವನು ತನ್ನ ಸ್ವಾರ್ಥಕ್ಕಾಗಿ ಏನೆಲ್ಲ ಮಾಡುತ್ತಾನೆ. ಅವನಿಗೆ ಅನ್ನಕ್ಕೆ ಮಣ್ಣು, ಸಂತಾನಕ್ಕೆ ಹೆಣ್ಣು, ಭೋಗವಿಲಾಸಗಳಿಗೆ ಹೊನ್ನು ಬೇಕು. ಇವನ್ನು ಪಡೆಯಲು ಅವನು ಮಾಡಬಾರದ ಅನ್ಯಾಯ ಅತ್ಯಾಚಾರಗಳನ್ನು ಮಾಡುತ್ತಾನೆ. ತನಗನ್ಯರಾದವರ ಸೊತ್ತನ್ನು ದೋಚಿಕೊಂಡು ತನ್ನನ್ನು ಉಳಿಸಿ ಬೆಳೆಸಿಕೊಳ್ಳಲು ನಿರಂತರ ಯತ್ನಿಸುತ್ತಾನೆ. ಕಾಮ, ಕ್ರೋಧ ಲೋಭ ಮದ- ಮತ್ಸರಗಳಿಗೆ ದಾಸನಾಗಿ ಅನ್ಯಾಯ, ಅತ್ಯಾಚಾರ ಮುಂತಾದ ವಿಧ್ವಂಸಕಾರಿ ಕೃತ್ಯಗಳನ್ನೆಸಗುತ್ತಾನೆ. ಕವಿಯ ದೃಷ್ಟಿಯಲ್ಲಿ ಇವೆಲ್ಲವೂ ಘೋರ ಅಂಧಕಾರ. ಅರಿವಿನ ಮಾನವನು ರಾಗ ದ್ವೇಷಗಳಿಗೆ ಬಲಿಯಾಗಿ ಏನೆಲ್ಲ ನೀಚ ಕೃತ್ಯಗಳನ್ನೆಸಗುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತ್ತಲೆಯ ಕಾಂಡದಲ್ಲಿ ಕವಿವರ್ಯರು ತಮ್ಮ ಅಭಿಪ್ರಾಯದ ಸಮರ್ಥನೆಗಾಗಿ, ಕಲಾಪೂರ್ಣವಾಗಿ ಉದಹರಿಸಿರುವ ಕಥಾ ಪ್ರಸಂಗಗಳು, ಅರಿವಿನ ಮಾನವನ ಒಳಗೆ ಮತ್ತು ಹೊರಗೆ ಮೆತ್ತಿರುವ ಅಜ್ಞಾನಾಂಧಕಾರಕ್ಕೆ ಸಾಕ್ಷಿಯಾಗಿವೆ. 'ಸಾಸುವೆಯ ಸುಖಕ್ಕೆ ಸಾಗರದ ದುಃಖ' ಆದರೂ ಎಚ್ಚೆತ್ತ ಮಾನವನ ಹೃದಯದ ಒಂದು ಮೂಲೆಯಲ್ಲಿ 'ತಮಸೋಮಾ ಜ್ಯೋತಿರ್ಗಮಯ' ಎಂಬ ಅತಿಸೂಕ್ಷ್ಮ ನಿನಾದವು ಕೇಳಿಬರುತ್ತಿದೆ. ಮಾನವ ಕುಲದಲ್ಲಿ ಆಗಿಂದಾಗ್ಗೆ ಕಣ್ಬಿದ್ದೀರರು ಉದಯಿಸಿ ಶಿವಬೆಳಗಿನ ಕಡೆ ಸನ್ನೆಯ ಮಾಡಿ ತೋರಿಸಿದರೂ, ಮಾನವ ಕುಲಕೋಟಿಯನ್ನು ಎಚ್ಚರಿಸಿದರೂ ಅದು ಮಾನವನ ಬುದ್ಧಿಗೆ ಹೊಳೆಯಲ್ಲಿಲ್ಲ. ಕೋಟಿ ಮಿಂಚಿನ ಬೆಳಗೂ ಮಾನವನ ಕಣ್ಣಿಗೆ ಮರೆಯಾಯಿತು. ಏಕೆಂದರೆ ಘೋರ ತಮ ಮಾನವ ಕುಲವನ್ನು ಮೆತ್ತಿಹುದು. ಮಾನವನನ್ನು ಮುತ್ತಿರುವ ಭೀಷ್ಮಾಂಧಕಾರವನ್ನು ಒಳಹೊಕ್ಕು ನೋಡಿದರೆ ಆ ಕತ್ತಲೆಯ ಕಡಲೊಳಗೆ ಜಗದ ನಾನಾ ಬಗೆಯ ಸುಖದುಃಖಪೂರಿತ ಪಾಪ ಪುಣ್ಯವಾರಾಸಿಯ ಬಯಲಾಟಗಳು ತೆರಪಿಲ್ಲದೆ ನಡೆಯುತ್ತಲೇ ಇವೆ. ಈ ಸುಖ, ದುಃಖ- ಸಾವು -ನೋವಿನ ಜಗದಾಟವನ್ನು ಕವಿವರ್ಯರು ಅತಿ ರಸವತ್ತಾಗಿ ಚಿತ್ರಿಸಿದ್ದಾರೆ.

ತನ್ನ ಶಿಷ್ಯರನ್ನು ತಮದಿಂದ ಜ್ಯೋತಿಯತ್ತ ಕರೆದೊಯ್ಯುವ ಸದ್ಗುರು ಗುರುಚೆನ್ನ ಲೋಕ ಹೇಗೆ ಕಂಬನಿಯ ಕಡಲೊಳಗೆ ತೇಲಿ ಮುಳುಗುತ್ತಿದೆ ಎಂಬುದನ್ನು ಅವರಿಗೆ ವಿವರಿಸುತ್ತಾನೆ. ಗುರುಚೆನ್ನ ಹೇಳುವ ಮಾತುಗಳನ್ನು ಕೇಳಿ.

ಲೋಕ ಬದುಕಿತು ತಾಯ ಕತ್ತಲೆಯ ಬದುಕ
ಲೋಕ ಬದುಕಿತು ತಾಯ ಸಾವು ಸಂಗಡವಾಗಿ
ಲೋಕ ಬದುಕಿತು ತಾಯ ಉರಿಬೆಂಕಿ ಒಳಹೊರಗೆ
ಲೋಕ ಬದುಕಿತು ತಾಯ ಕಂಬನಿಯ ಕಡಲೊಳಗೆ

ದುಃಖದ ಈ ಪ್ರಳಯಾಂಧಕಾರದಲ್ಲಿ ಸುಖದ ಸವಿ ಬುರುಗು ಮಾನವ ಲೋಕವನ್ನು ಜೀವಂತವಾಗಿರಿಸಿದೆ ಎಂದು ಕವಿಯ ಅಭಿಪ್ರಾಯ. ಅವರು ಹೇಳುವಂತೆ ಮಾನವನ ಹಗಲು ಅವನೆತ್ತರ. ಆದರೆ ಅವನ ರಾತ್ರಿ ಜಗದೆತ್ತರ. ಕತ್ತಲೆಯ ಸಾಗರ ಆಕಾಶದಾಳ. ಬೇರೆ ಶಬ್ದಗಳಲ್ಲಿ ಹೇಳಬೇಕಾದರೆ ಅವನು ಅನುಭವಿಸುವ ಸುಖ ಅತಿ ಸ್ವಲ್ಪ, ಆದರೆ ಅವನು ಅನುಭವಿಸುವ ದುಃಖ ಅಪಾರ. ನರಲೋಕದ ಪ್ರಾಣಿಕೋಟಿಗಳೆಲ್ಲ ಮೃತ್ಯು ಮುಖದ ತುತ್ತಾಗಿ ಮಣ್ಣಾಗುತ್ತಿವೆ. ಕತ್ತಲೆಯ ಸಂತತಿಗೆ ಕತ್ತಲೆಯೇ ಬೆಳಕಿನಂತಿದೆ. ಮಾನವನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದೇ ತನಗೆ ಸಹಜವೆಂದು ಕತ್ತಲೆಯ ಕಡಲೊಳಗೆ ತೇಲಾಡಿ, ಈಜಾಡಿ, ಹೋರಾಡಿ ಚಟಪಟಿಸುತ್ತಿದ್ದಾನೆ. ಹುಟ್ಟು ಸಾವಿನ ದವಡೆಯೊಳಗೆ ಸಿಲುಕಿದ್ದಾನೆ. ನಾಡು ನಾಡುಗಳ, ಊರೂರು, ಮನೆಮನೆಗಳ ಹೋಳು ಮಾಡಿ ಮಾನವ ಮಾನವನನ್ನು ಬೇರೆ ಮಾಡಿ ವಿಕೃತವಾಗಿರಿಸಿರುವ ನಾನಾ ಕುತ್ಸಿತ ವಿಲಾಸಗಳು ಅತ್ಯಂತ ಘೋರವಾಗಿವೆ. ಲೋಕವನ್ನು ಕಾಲಕಾಲಾಂತರದಿಂದ ಬಾಧಿಸುತ್ತಾ ಬಂದಿರುವ ಅನೇಕ ಕ್ಲಿಷ್ಟ ಪ್ರಶ್ನೆಗಳನ್ನು ಶಿಷ್ಯರು ತಮ್ಮ ಗುರುಗಳನ್ನು ಕೇಳುತ್ತಾರೆ. ಕಾವ್ಯವೆಲ್ಲವೂ ಗುರು-ಶಿಷ್ಯರ ರಸವತ್ತಾದ ಸಂಭಾಷಣೆಗಳಿಂದ ತುಂಬಿ ತುಳುಕುತ್ತಿದೆ. ಕಾವ್ಯವು ನಾಟಕೀಯ ಸೊಗಸಿನಿಂದ ಮಿನುಗುತ್ತಿರುವುದಲ್ಲದೆ ಅತ್ಯಂತ ಕಲಾಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಪಾತ್ರಗಳ ಶೀಲ-ಸ್ವಭಾವಗಳ ಪರಿಚಯ ಮಾಡುತ್ತಾ ಹೋಗುತ್ತದೆ ಮತ್ತು ಓದುಗರ ಹೃದಯವನ್ನು ನಿರ್ಮಲಗೊಳಿಸುತ್ತದೆ. ಅದರಲ್ಲಿ ವಿಚಾರ ಸಂಪತ್ತಿದೆ, ತೀವ್ರ ಅನುಭೂತಿಯಿದೆ ಮತ್ತು ಅಭಿವ್ಯಕ್ತಿಯ ಕಲೆಯಿದೆ. ಇಲ್ಲಿ ಒಂದೊಂದಾಗಿ ಗುರುಚೆನ್ನಮಲ್ಲ ಮಾನವನನ್ನು ಮುತ್ತಿಕೊಂಡಿರುವ ಕತ್ತಲೆಯ ಅನಂತ ಕತೆಗಳನ್ನು ಹೃದಯಂಗಮವಾಗಿ ಚಿತ್ರಿಸುತ್ತಾನೆ.

೦

ಮೊದಲನೆಯದಾಗಿ ಧನ-ಧಾನ್ಯ ಸಂಪತ್ತಿನಿಂದ ಕೂಡಿದ ದೊಡ್ಡ ಮನೆ ವೀರಣ್ಣ ತನ್ನ ಒಬ್ಬನೇ ಒಬ್ಬ ಮಗನ ಮದುವೆ ಹಮ್ಮಿಕೊಂಡಿದ್ದಾನೆ. ಲಗ್ನದ ಸುದ್ದಿ ನಾಡೆಲ್ಲ ಹಬ್ಬಿದೆ. ಚನ್ನಿಗನಾದ ಚನ್ನರಾಯನಿಗೆ ತಕ್ಕ ವಿದ್ಯಾಬುದ್ಧಿ, ರೂಪ, ಗುಣ, ಶೀಲ, ಸಂಪನ್ನೆಯಾದ ಹದಿನಾಲ್ಕು ವರ್ಷದ ಕನ್ಯೆ ವೀರಣ್ಣನ ಮನೆಗೆ ವಧುವಾಗಿ ಬಂದಳು. ಶಿವದೇವ ಗೌರಮ್ಮ ಅವರ ಮಗಳು. ಹೆಸರು ಗಂಗಮ್ಮ, ಹೆಸರಿಗೆ ತಕ್ಕಂತೆ ನಿರ್ಮಲ ತೀರ್ಥದಂತಿದ್ದಳು. ಚೆನ್ನರಾಯ ಹಾಗೂ ಗಂಗಮ್ಮ ಅವರ ಮದುವೆ ಅತ್ಯಂತ ವೈಭವದಿಂದ ನೆರವೇರಿತು. ಬಂಧು-ಮಿತ್ರರು ಉಂಡು, ಉಟ್ಟು ಸಂತೃಪ್ತರಾಗಿ ಮನಸಾರೆ ಕೊಂಡಾಡುತ್ತಾ ತಮ್ಮ ತಮ್ಮ ಊರುಗಳಿಗೆ ತೆರಳಿದರು. ಹಾದಿ ಬಟ್ಟೆಯೊಳಗೆ ಮದುವೆಯ ಸುದ್ದಿಯೇ ಸುದ್ದಿ. ಕನ್ಯೆಯ ಪುಣ್ಯ, ಸಿರಿವಂತ ಪತಿ, ಮುತ್ತು- ಹವಳ ಸೇರಿಸಿದಂತಿದೆ. ಆದರೆ ಚೆನ್ನಿಗ ಚೆನ್ನರಾಯನ ವಿಷಯದಲ್ಲಿ ಏನೋ ಒಂದು ಸಂಶಯ. ಅವನ ಬಾಹ್ಯಾಕಾರ ಎಷ್ಟು ಸುಂದರವಾಗಿತ್ತೋ ಅಷ್ಟೇ ಕುರೂಪವಾಗಿತ್ತು ಅವನ ಅಂತರಂಗ. ಕವಿಯ ಮಾತಿನಲ್ಲಿ ಹೇಳುವುದಾದರೆ, 'ಬೆಳದಿಂಗಳ ಒಳಗೇ ಕತ್ತಲೆಯ ಕಾಳ' ಆ ಸಂಭ್ರಮದ ಮರೆಯಲ್ಲಿ ಏನೋ ಕೇಡು ಕುಣಿದಂತಿತ್ತು. ವಿಧಿಯ ವಿಲಾಸ! ಯಾವ ಹೊತ್ತಿನಲ್ಲಿ ಏನಾಗುವದೋ ತಿಳಿಯದು. ಗಂಗಮ್ಮ ಚೆನ್ನರಾಯನ ದಾಂಪತ್ಯ ಜೀವನ ನಾಲ್ಕಾರು ವರ್ಷ ಹಾಲುಜೇನಿನಂತೆ ಹೊಂದಿಕೊಂಡು ಸಾಗಿತು. ಅವರಿಂದ ಭುವಿಗೆ ಮತ್ತು ವಂಶಕ್ಕೆ ಹೊಸ ಜೀವಿಗಳು ಸಹ ಮೂಡಿ ಬಂದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಯ ಕಳೆದಂತೆಲ್ಲ ಚೆನ್ನರಾಯನಿಗೆ ಪತ್ನಿಯ ಸೌಂದರ್ಯ ನಿರಸವಾಯಿತು. ಅವನ ಮನಸ್ಸು ಹೆರಮನೆಯ ನಂದಿನಿಯ ಕಡೆಗೆ ಹೊರಳಿತು. ನಂದಿನಿಯು ನೇಯ್ದ ಬಲೆಗೆ ಬಿದ್ದ ಚೆನ್ನ. ಅಲ್ಲಿನ ಅಲ್ಪ ಸುಖವು ಅವನಿಗೆ ಅತ್ಯಂತ ಹಿತವಾಗಿತ್ತು. ಅವನ ಮನಸ್ಸು ಇಷ್ಟಕ್ಕೆ ತೃಪ್ತಿ ಹೊಂದಲಿಲ್ಲ. ಎಡವಿದ ಕಾಲು ಎಡಹುವುದು ಹೆಚ್ಚು ಎನ್ನುವಂತೆ ಈ ಭ್ರಮರವು ಹೂವಿನಿಂದ ಹೂವಿಗೆ ಹಾರಹತ್ತಿತು. ಹತ್ತಾರು ಕಡೆಯಿಂದ ಬೀಸುವ ಗಾಳಿಯಲ್ಲಿ ಹುಚ್ಚಾಗಿ ಹೊಯ್ದಾಡುವ ದೀಪದಂತಾಯಿತು ಅವನ ಗತಿ. ಇದನ್ನೆಲ್ಲಾ ಕಂಬನಿದುಂಬಿದ ಕಣ್ಣುಗಳಿಂದ ನೋಡುತ್ತಿದ್ದ ಸತಿ ಸಾಧ್ವಿ ಗಂಗಮ್ಮನ ಸ್ಥಿತಿ ಬೆಂಕಿಗೆ ಹಾಕಿದ ಹೂವಿನಂತಾಯಿತು. ಹುತ್ತದಲ್ಲಿನ ಸರ್ಪದಂತೆ ಅವಳ ದೇಹದಲ್ಲಿ ಚಿಂತೆ ಮನೆ ಮಾಡಿಕೊಂಡಿತು. ಅವಳು ತನ್ನ ಮದುವೆಯ ಸಮಯದಲ್ಲಿ ಕಟ್ಟಿದ ಕನಸಿನ ಮನೆ ನೆಲಸಮವಾಗುವಂತೆ ಕಂಡು ಬಂದಿತು. ಚೆನ್ನನ ಕಣ್ಣ ಮುಂದೆ ಕವಿದ ಕತ್ತಲೆಯಲ್ಲಿ ಮನೆತನದ ಮಾನಪಮಾನ ತಂದೆ- ತಾಯಿಗಳ ಹಿತವಚನ ಹೆಂಡತಿಯ ಕೊರಗು ಏನೂ ಕಾಣದಾದವು. ವೀರಣ್ಣನಿಗೆ ಮಗನ ದುರ್ವ್ಯವಹಾರ ಸಿಡಿಲೇಟಿಗಿಂತಲೂ ಬಿರುಸಾಗಿತ್ತು. ಆ ಪುಣ್ಯಾತ್ಮನ ಪುಣ್ಯ ನಾಮ ಮಣ್ಣುಪಾಲಾಯಿತು. ಮಗನ ರಾವಡರಿದ ಪಾಪಿ ಮುಖವನ್ನು ನೋಡುತ್ತಿದ್ದಂತೆ ಅವನು ಮಿಂಚು ಸೋಂಕಿದವನಂತೆ ಧೊಪ್ಪನೆ ನೆಲಕ್ಕುರುಳಿ ಕೊನೆಯುಸಿರೆಳೆದ.

ಮನೆಯ ಕಳಸವೇ ಕಳಚಿ ಹೋದಂತಾಯಿತು. ನಾಡಿಗೆ ತಂದೆಯಂತಿದ್ದ ವೀರಣ್ಣನ ವಿರಹದಿಂದ ಶೋಕತಪ್ತ ಜನಗಳ ದುಃಖ ಹೇಳತೀರದಾಯಿತು. ದೊಡ್ಡವರ ಮಗಳು, ದೊಡ್ಡ ಮನೆಯವರ ಸೊಸೆ, ಗಂಗಮ್ಮನ ಹೃದಯ ಶರಶಯ್ಯೆಯ ಮೇಲೆ ಮಲಗಿದಂತಾಯಿತು. ಅತ್ತೆ- ಸೊಸೆ ಇಬ್ಬರೂ ವೀರಣ್ಣನ ಬೆಂಬತ್ತಿ ನಡೆದರು. ಗುಣಗಳ ಹಿರಿತನದ ಮುಂದೆ ಸಿರಿತನಕ್ಕೆ ಕಾಸಿನ ಬೆಲೆ ಇಲ್ಲ ಎಂದು ನಂಬಿದ್ದ ಮೂರು ಜೀವಿಗಳು ಭೂತಲದಿಂದ ಕಣ್ಮರೆಯಾದವು. ವೀರಣ್ಣನ ಸ್ವರ್ಣಿಲ ಸಂಸಾರವನ್ನು ಘೋರ ಅಂಧಕಾರ ಆವರಿಸಿತು.

ಈ ಕಥೆಯಲ್ಲಿ ವರ್ಣನಾವಿಧಾನವು ಅತಿ ರಮಣೀಯವು, ಸ್ವಾಭಾವಿಕವೂ ಆಗಿದೆ. ಇದನ್ನು ಓದುವಾಗ ಓದುಗರು ತಮ್ಮ ತಾ ಮರೆದು ರಸಪ್ರವಾಹದಲ್ಲಿ ಮಿಂದು ತೇಲಾಡುತ್ತಾರೆ. ಕಥಾವಸ್ತು, ಪಾತ್ರ ಪೋಷಣೆ, ಕಾವ್ಯಮಾಧುರ್ಯ ಓದುಗರ ತನುಮನಗಳನ್ನು ಸೆರೆಹಿಡಿಯುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೀಕರಾಂಧಕಾರದ ಮತ್ತೊಂದು ಘಟನೆ. ಒಂದೂರಿನ ನಾಲ್ಕೈದು ಹಸುಗಳು ತಮ್ಮ ಮಂದೆಯನ್ನಗಲಿ ಬೇರೊಂದೂರಿನ ಹೊಲದಲ್ಲಿ ಮೇಯ್ದ ಕಾರಣ ಎರಡು ಊರುಗಳ ಮಧ್ಯೆ ಕುರುಕ್ಷೇತ್ರ ಯುದ್ಧವೇ ಪ್ರಾರಂಭವಾಯಿತು. ಮಾನವರು ದಾನವರಂತಾದರು. ಉಭಯ ಪಕ್ಷದ ಯುವಕರ ಮೀಸೆಗಳೆಲ್ಲಾ ಹುರಿಗೊಂಡವು. ಕಾರ್ಗತ್ತಲು ಕವಿಯಿತು. ಎತ್ತ ನೋಡಿದತ್ತ ರಕ್ತ ಲೀಲೆ. ವೈರಕ್ಕೆ ವೈರ, ದ್ವೇಷಕ್ಕೆ ದ್ವೇಷ, ಮುಯ್ಯಿಗೆ ಮುಯ್ಯಿ ತೀರಿಸತೊಡಗಿದರು. ವಾತ್ಸಲ್ಯ-ಪ್ರೇಮ-ಧರ್ಮ, ದಯೆ, ಶಾಂತಿ, ಕ್ಷಮೆ, ಎಲ್ಲಿಯೋ ಮಾಯವಾದವು. ಅರಿವಿನ ಪ್ರಗಾಢ ಅಧ್ಯಯನದ ಹಾಗೂ ಜೀವನಾನುಭವದ ರಸಘಟ್ಟ.

ಮತ್ತೊಂದು ಊರು. ಮಾರ ಪ್ರಜ್ಞೆ ತಪ್ಪಿ ಮನೆಯಲ್ಲಿ ಬಿದ್ದಿದ್ದಾನೆ. ಅವನಣ್ಣ ಕೆಂಚ ತಮ್ಮನನ್ನು ಹೊಡೆದು, ಬಡಿದು ಅವನ ಕಾಲು ಮುರಿದು ಈ ಸ್ಥಿತಿಗೆ ಗುರಿ ಮಾಡಿದ್ದಾನೆ. ಮನೆ ಮಂದಿಯೆಲ್ಲಾ ಸುತ್ತುಗಟ್ಟಿ ಕೆಂಚನನ್ನು ಶಪಿಸುತ್ತಾ ಗೋಳಿಡುತ್ತಿದ್ದಾರೆ. ಕೆಲವರು ಮಾರನು ಮಾಡಿದ ಪಾಪ- ಕೃತ್ಯಗಳನ್ನು ನೆನೆದು ಅವನು ಮಾಡಿದ ಪಾಪಗಳೇ ಅವನನ್ನು ಈ ಸ್ಥಿತಿಗೆ ಗುರಿ ಮಾಡಿದವು, ತಾನು ಬೀಸಿದ ಬಲೆ ತನ್ನ ಕೊರಳಿಗೇ ಬಿತ್ತು ಎಂದರು. ಕಲ್ಯಾಣವನ್ನು ಬಿತ್ತಿ ಕಲ್ಯಾಣವನ್ನು ಬೆಳೆದ ಸತ್ಯ ಸಾತ್ವಿಕ ಮೂರ್ತಿ ಮುದ್ದಣ್ಣನನ್ನು ಪಾಪಿ ಮಾರ ಹಾಳು ಮಾಡಿದ. ಏಳೇಳು ಜನ್ಮಗಳಲ್ಲಿ ಅವನು ನರಕದಲ್ಲಿ ಹೊರಳಾಡುವನು, ಅವನೇ ಹಚ್ಚಿದ ಬೆಂಕಿಯಲ್ಲಿ ಅವನ ಹೋಮವಾಯಿತು ಅಂದರು ಕೆಲವರು.

ಮುದ್ದಣ್ಣ ಆ-ಬಾಲ, ವೃದ್ಧರ ಕಣ್ಮಣಿಯಾಗಿದ್ದನು. ಸರ್ವರ ಇಷ್ಟಾರ್ಥಗಳನ್ನು ಈಡೇರಿಸುವ ಕಾಮಧೇನುವಿನಂತಿದ್ದನು. ತನ್ನ ತಲೆಯ ಮೇಲೆ ಛಾವಣಿ ಕುಸಿದು ಬಿದ್ದರೂ ಇತರರ ಮನೆಗಳ ಹಂಚು ಸರಿಮಾಡಲು ಹೋಗುವ ಸ್ವಭಾವ. 'ಬಯಿದವರು ಎನ್ನ ಬಂಧುಗಳು' ಎಂಬುದು ಆತನ ಶೀಲ ಸ್ವಭಾವದಿಂದ ತಿಳಿಯುತ್ತದೆ.

ಮುದ್ದಣ್ಣನ ಮಗನ ಮದುವೆ. ಸಂಭ್ರಮ, ಸಡಗರ ಹೇಳತೀರದು. ಸಕಲ ವೈಭವದೊಡನೆ ನೂರಾರು ಬಂಡಿಗಳಲ್ಲಿ ನಿಬ್ಬಣದ ಮಂದಿ ಹೊರಟರು. ದಾರಿಯಲ್ಲಿ ಮಬ್ಬುಗತ್ತಲಲ್ಲಿ ಕಳ್ಳಬೇಡರ ತಂಡ ಬಂಡಿಗಳಿಗೆ ಮುತ್ತಿಗೆ ಹಾಕಿ ಎದುರು ಬಂದವರನ್ನೆಲ್ಲಾ ಸದೆ ಬಡಿದು ಮಹಿಳೆಯರು ಧರಿಸಿದ್ದ ಬೆಳ್ಳಿ ಬಂಗಾರದೊಡವೆಗಳನ್ನು, ಮುತ್ತು- ಮಾಣಿಕ್ಯ- ವಜ್ರದ ಸರಗಳನ್ನು

CC0. In Public Domain. Jangamwadi Math Collection, Varanasi

Digitized by eGangotri and Sarayu Trust. Funding by MoE-IKS

ದೋಚಿದರು. ಸ್ತ್ರೀಯರ ಆರ್ತನಾದ ನಭೋಮಂಡಲವನ್ನು ಚೀರಿತು. ಆಗ ಮುದ್ದಣ್ಣನ ಪ್ರಸಾದವಾಣಿ ಆ ಕಾರ್ಗತ್ತಲೆಯಲ್ಲಿ ಅರಿವಿನ ಪರಿಮಳವಾಗಿ ತೇಲಿಬಂತು. ಆ ಸಮಯದಲ್ಲಿ ಮುದ್ದಣ್ಣನು ತಾಳಿದ ತಾಳ್ಮೆ, ತೋರಿದ ಜಾಣ್ಮೆ, ಬೀರಿದ ಶಾಂತಿ ಮತ್ತು ಜ್ಞಾನ ಮುಂತಾದವುಗಳನ್ನು ಪ್ರೊ. ಭೂಸನೂರಮಠ ಅವರು ಅತಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ವಿಷಯಕ್ಕೆ ತಕ್ಕಂತೆ ಭಾಷೆಯನ್ನು ಬಳಸುವ ಕಲೆಯಲ್ಲಿ ಕವಿಯು ಅತ್ಯಂತ ಕುಶಲರು. ಅವರ ಶೀಲ, ಮನೋಭಾವನೆ, ವ್ಯಕ್ತಿತ್ವ ಮೊದಲಾದ ಗುಣಗಳನ್ನು ನಾವು ಇಲ್ಲಿ ಕಾಣುತ್ತೇವೆ.

ಮುದ್ದಣ್ಣನ ಅಣತಿಯಂತೆ ನಿಬ್ಬಣದ ಸ್ತ್ರೀಯರೆಲ್ಲರೂ ಭಯಭೀತರಾಗಿ ತಮ್ಮ ತಮ್ಮ ಒಡವೆ- ವಸ್ತುಗಳನ್ನು ಕಳ್ಳರ ಮುಂದೆ ರಾಶಿ ಹಾಕಿದರು. ಮುದ್ದಣ್ಣನ ಹೆಂಡತಿಗೆ ತನ್ನ ವಜ್ರದೋಲೆಗಳೆಂದರೆ ಪ್ರಾಣ. ಅವಳು ಅವನ್ನು ಮುಚ್ಚಿಟ್ಟುಕೊಂಡದ್ದು ತಿಳಿದು ಮುದ್ದಣ್ಣನು ಸಿಟ್ಟಿನಿಂದ ಸಿಡಿದೆದ್ದು ಅವುಗಳನ್ನು ಹೆಂಡತಿಯಿಂದ ಕಸಿದು ಕಳ್ಳರಿಗೆ ಕೈಚಾಚಿ ನೀಡಹೋದನು. ಕಳ್ಳರು ತಮ್ಮ ಕಣ್ಣುಗಳನ್ನೇ ತಾವು ನಂಬದಾದರು. ಯಾವುದೋ ಸ್ವಪ್ನ ನೋಡುತ್ತಿರುವಂತೆ ಅವರಿಗೆ ಭಾಸವಾಯಿತು. ''ಹಗಲುಗಳ್ಳರು ನಾವು ರಾತ್ರಿ ಕಳ್ಳರು ನೀವು. ನಮಗೂ ನಿಮಗೂ ಬೇಧವಿಲ್ಲ' ಎಂದು ಅವರನ್ನು ಸಮಾಧಾನಪಡಿಸಿದನು. ಮುದ್ದಣ್ಣನುಚ್ಚರಿಸಿದ ನುಡಿಮುತ್ತುಗಳಿಂದ ಕಳ್ಳರ ಮನದಲ್ಲಿ ವಿದ್ಯುತ್ ಸಂಚಾರವಾಯಿತು. ಅವರು ಪುಟಕ್ಕಿಕ್ಕಿದ ಚೊಕ್ಕ ಬಂಗಾರದಂತಾದರು. ಈ ದೇವಮಾನವ ಮುದ್ದಣ್ಣನ ದೈವೀ ವರ್ತನೆಯನ್ನು ಕಂಡು ಅವರ ಹೃದಯಗಳಲ್ಲಿ ಕವಿದ ಕಾರ್ಗತ್ತಲೆಯಲ್ಲಿ ಝಗ್ಗನೆ ದೈವೀ ಪ್ರಕಾಶ ದೇದೀಪ್ಯಮಾನವಾಗಿ ಬೆಳಗಹತ್ತಿತು. ಅವರಿಗೆ ಶರಣಧರ್ಮದ ದಿವ್ಯ-ಜ್ಯೋತಿಯ ದರ್ಶನವಾದಂತಾಯಿತು. ಅವರ ದ್ವೇಷದ ಕಿಚ್ಚು ಕಣ್ಣೀರಲ್ಲಿ ಕೊಚ್ಚಿಹೋಯಿತು.

ಮುದ್ದಣ್ಣನ ದೈವಿಕ ಗುಣಗಳು ಹಾಗೂ ವಿನಯಸಂಪನ್ನತೆಯನ್ನು ಕಂಡು ಕಳ್ಳರು ''ತ್ವಮೇವ್ಯ ಶರಣಂ ಮಮ'' ಎಂದು ಮುದ್ದಣ್ಣನ ಪಾದಗಳ ಮೇಲೆ ಬಿದ್ದು ಹೊರಳಾಡಿದರು. ಮಾಡಿದ ತಪ್ಪನ್ನು ಮನ್ನಿಸಬೇಕೆಂದು ಅಂಗಲಾಚಿ ಬೇಡಿಕೊಂಡರು. ಕಳ್ಳರ ಈ ಆಕಸ್ಮಿಕ ಹೃದಯ ಪರಿವರ್ತನೆಯನ್ನು ಕಂಡು ಮುದ್ದಣ್ಣನ ಸಂತೋಷ ನೆರೆ ಬಂದ ತೊರೆಯಂತೆ ತುಂಬಿ ಹೊರಸೂಸಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಗನ ಮದುವೆಯ ಮಹಾಸಂಭ್ರಮಕ್ಕೆ ಕಳ್ಳರ ತಂಡ ನಿಬ್ಬಣಿಗರಾಗಿ ಬಂದದ್ದು ನೋಡಿ, ರಾತ್ರಿ ನಡೆದ ವಿಚಿತ್ರ ಸಂಗತಿಗಳನ್ನು ಕೇಳಿ ಸುತ್ತು ನಾಡಿನವರು ಅತ್ಯಂತ ಚಕಿತರಾದರು. ಮರ್ತ್ಯಲೋಕದ ಮಹಾಕತ್ತಲೆಯಲ್ಲಿ ಕಾರುಣ್ಯ ಮೂರ್ತಿ ಮುದ್ದಣ್ಣನ ವ್ಯಕ್ತಿತ್ವ ಪ್ರಕಾಶ ಸ್ತಂಭದಂತೆ ಎಲ್ಲೆಡೆಯಲ್ಲಿಯೂ ಬೆಳಗಹತ್ತಿತು. ಪಾಷಾಣದಲ್ಲಿ ಪರಮಾತ್ಮನನ್ನು ಕಾಣುವ ಹೃದಯ ಮುದ್ದಣ್ಣನದು. ಸಮಾಜದಲ್ಲಿ ಆದರ್ಶ ಜೀವನವನ್ನು ನಡೆಸಿ ಅಂಧಕಾರದಲ್ಲಿ ಪ್ರಕಾಶವನ್ನು ಪಸರಿಸಿದ ಮುದ್ದಣ್ಣನ ಹೆಸರು ಚಿರಸ್ಮರಣೀಯ. ಆತನು ತನ್ನ ದೈವೀ ಗುಣಗಳಿಂದ ಓದುಗರ ಹೃದಯಾಂತರಂಗದಲ್ಲಿ ಚಿರಂತನವಾಗಿ ನೆಲೆಸುವ ಪುಣ್ಯ ಮೂರ್ತಿಯಾಗಿದ್ದಾನೆ.

ಶತ್ರುಗಳನ್ನು ಸಹ ಮಿತ್ರರಂತೆ ಕಾಣಬೇಕೆಂಬ ಪರಮತತ್ವವನ್ನು ಇಲ್ಲಿ ಕವಿ ವರ್ಯರು ಪ್ರತಿಪಾದಿಸಿದ್ದಾರೆ. ಕತ್ತಲೆಯ ಕಾಂಡದಲ್ಲಿ ಅವರು ಒಂದು ಕಡೆ ಪಾಪಕೂಪವನ್ನು ಚಿತ್ರಿಸಿದ್ದಾರೆ. ಇನ್ನೊಂದು ಕಡೆ ಜ್ಞಾನದೀಪವನ್ನು ಬೆಳಗಿಸಿದ್ದಾರೆ. ಇವರ ಶಬ್ದಗಳಲ್ಲಿ ಚಮತ್ಕಾರವಿದೆ, ಸೌರಭವಿದೆ, ಭಾವಾವೇಶವಿದೆ, ತೀವ್ರ ಅನುಭೂತಿಯಿದೆ ಮತ್ತು ಹೃದಯವನ್ನು ಗದ್ಗದಗೊಳಿಸುವ ಶಕ್ತಿಯಿದೆ.

ಜಗತ್ತನ್ನು ಮೆತ್ತಿರುವ ಕಾರ್ಗತ್ತಲೆಗೆ ಕವಿವರ ಭೂಸನೂರಮಠ ಅವರು ಇನ್ನೊಂದು ಬೀಭತ್ಸ ಪ್ರಸಂಗವನ್ನು ಓದುಗರ ಮುಂದೆ ಇಡುತ್ತಾರೆ. ಸೋಯಿದೇವನ ಮಗಳು ಸೌಂದರ್ಯಚಂದ್ರಿಕೆ ಹೆಸರಿಗೆ ತಕ್ಕಂತೆ ಚೆಲುವಿಕೆಯಲ್ಲಿ ಅನ್ಯಾದೃಶ್ಯಳಾಗಿದ್ದಳು. ನೂರಾರು ಪುಷ್ಪಗಳ ಮಕರಂದವನ್ನು ಹೀರಿ ತೃಪ್ತನಾಗದ ದೊಡ್ಡ ಮಂಡಲದ ಕಾಮದೇವನ ಕುದೃಷ್ಟಿ ಸೌಂದರ್ಯ ಚಂದ್ರಿಕೆಯ ಮೇಲೆ ಬಿತ್ತು. ಅವಳ ಕೈ ಹಿಡಿಯಲು ಆಸೆ ಆಮಿಷಗಳೊಡ್ಡಿದ. ಕಾಮದೇವನ ದುರಿತ ದುರ್ಗುಣಗಳನ್ನು ಬಲ್ಲ ಸೋಯಿದೇವನು ಈ ಸಂಬಂಧಕ್ಕೆ ಒಪ್ಪಲಿಲ್ಲ. ಅವನ ಹೆದರಿಕೆ ಬೆದರಿಕೆಗೂ ಮಣಿಯಲಿಲ್ಲ. ಪ್ರಾಣ ಹೋದರೂ ಸರಿಯೇ ತನ್ನ ಗೌರವಕ್ಕೆ ಕಳಂಕ ತಂದುಕೊಳ್ಳಬಾರದೆಂದು ನಿಶ್ಚಯಿಸಿದ. ಇದೇ ಕಾರಣದಿಂದ ಉಭಯ ಪಕ್ಷಗಳ ನಡುವೆ ಭೀಕರ ಕಾಳಗವಾಯಿತು. ಸಹಸ್ರಾರು ಮಂದಿ ಸತ್ತರು, ಒಂಟಿ, ಕುದುರೆಗಳು ಆನೆಗಳು ಸಹ. ಸರ್ವತ್ರ ಹಾಹಾಕಾರ, ಚೀತ್ಕಾರ, ರಕ್ತಪಾತ. ಕಾಮದೇವನ ವಿಷಯವಾಸನೆ ತಲೆಗೇರಿ ''ದಯವೇ ಧರ್ಮದ ಮೂಲ'' ಎಂಬ ತತ್ವವನ್ನು ಕೊಂದು ಅದೆಷ್ಟೋ ಜೀವಿಗಳ ಪ್ರಾಣಹರಣ ಮಾಡಿದ. ಶೌರ್ಯಕ್ಕೆ ಹೆಸರಾದ ರಣಭಯಂಕರ ಧೀರ ವೀರಬಸವನು ಕಾಮದೇವನ ಪಡೆಯ ತೀಕ್ಷ್ಣ ಬಾಣಕ್ಕೆ ಬಲಿಯಾದ. ಅವನ ಅಂತ್ಯವೆಂದರೆ ಶಕ್ತಿ, ಸಾಹಸ, ತ್ಯಾಗ, ಬುದ್ಧಿಯ ಅಂತ್ಯವಾದಂತಾಯಿತು. ಸಪ್ತಿ ಕೈ ಹಿಡಿದ ಲಿಂಗಮ್ಮ ಸಹ ಪತಿದೇವನ ಬೆಂಬತ್ತಿ ನಡೆದಳು. ಕವಿಯ ವೀರರಸದ ಉದಾಹರಣೆಯನ್ನು ನೋಡಿ.

CC0. In Public Domain. Jangamwadi Math Collection, Varanasi

Digitized by eGangotri and Sarayu Trust. Funding by MoE-IKS

ಜಗತ್ತನ್ನು ಮೆತ್ತಿರುವ ಕಾರ್ಗತ್ತಲೆಗೆ ಕವಿವರ ಭೂಸನೂರಮಠ ಅವರು ಇನ್ನೊಂದು ಬೀಭತ್ಸ ಪ್ರಸಂಗವನ್ನು ಓದುಗರ ಮುಂದೆ ಇಡುತ್ತಾರೆ. ಸೋಯಿದೇವನ ಮಗಳು ಸೌಂದರ್ಯಚಂದ್ರಿಕೆ ಹೆಸರಿಗೆ ತಕ್ಕಂತೆ ಚೆಲುವಿಕೆಯಲ್ಲಿ ಅನ್ಯಾದೃಶ್ಯಳಾಗಿದ್ದಳು. ನೂರಾರು ಪುಷ್ಪಗಳ ಮಕರಂದವನ್ನು ಹೀರಿ ತೃಪ್ತನಾಗದ ದೊಡ್ಡ ಮಂಡಲದ ಕಾಮದೇವನ ಕುದೃಷ್ಟಿ ಸೌಂದರ್ಯ ಚಂದ್ರಿಕೆಯ ಮೇಲೆ ಬಿತ್ತು. ಅವಳ ಕೈ ಹಿಡಿಯಲು ಆಸೆ ಆಮಿಷಗಳೊಡ್ಡಿದ. ಕಾಮದೇವನ ದುರಿತ ದುರ್ಗುಣಗಳನ್ನು ಬಲ್ಲ ಸೋಯಿದೇವನು ಈ ಸಂಬಂಧಕ್ಕೆ ಒಪ್ಪಲಿಲ್ಲ. ಅವನ ಹೆದರಿಕೆ ಬೆದರಿಕೆಗೂ ಮಣಿಯಲಿಲ್ಲ. ಪ್ರಾಣ ಹೋದರೂ ಸರಿಯೇ ತನ್ನ ಗೌರವಕ್ಕೆ ಕಳಂಕ ತಂದುಕೊಳ್ಳಬಾರದೆಂದು ನಿಶ್ಚಯಿಸಿದ. ಇದೇ ಕಾರಣದಿಂದ ಉಭಯ ಪಕ್ಷಗಳ ನಡುವೆ ಭೀಕರ ಕಾಳಗವಾಯಿತು. ಸಹಸ್ರಾರು ಮಂದಿ ಸತ್ತರು, ಒಂಟೆ, ಕುದುರೆಗಳು ಆನೆಗಳು ಸಹ. ಸರ್ವತ್ರ ಹಾಹಾಕಾರ, ಚೀತ್ಕಾರ, ರಕ್ತಪಾತ. ಕಾಮದೇವನ ವಿಷಯವಾಸನೆ ತಲೆಗೇರಿ ''ದಯವೇ ಧರ್ಮದ ಮೂಲ'' ಎಂಬ ತತ್ವವನ್ನು ಕೊಂದು ಅದೆಷ್ಟೋ ಜೀವಿಗಳ ಪ್ರಾಣಹರಣ ಮಾಡಿದ. ಶೌರ್ಯಕ್ಕೆ ಹೆಸರಾದ ರಣಭಯಂಕರ ಧೀರ ವೀರಬಸವನು ಕಾಮದೇವನ ಪಡೆಯ ತೀಕ್ಷ್ಣ ಬಾಣಕ್ಕೆ ಬಲಿಯಾದ. ಅವನ ಅಂತ್ಯವೆಂದರೆ ಶಕ್ತಿ, ಸಾಹಸ, ತ್ಯಾಗ, ಬುದ್ಧಿಯ ಅಂತ್ಯವಾದಂತಾಯಿತು. ನಚ್ಚಿ ಕೈ ಹಿಡಿದ ಲಿಂಗಮ್ಮ ಸಹ ಪತಿದೇವನ ಬೆಂಬತ್ತಿ ನಡೆದಳು. ಕವಿಯ ವೀರರಸದ ಉದಾಹರಣೆಯನ್ನು ನೋಡಿ.

ಇದೋ ಇಲ್ಲಿ ಇತ್ತ ಕಡೆ ರಣಭಯಂಕರ ಧೀರ
ನಕ್ಷತ್ರಗಳ ಮೀಟಿ ಆಕಾಶವನು ಹರಿದು
ಪಾತಾಳ ಕಿತ್ತು ದಶದಿಕ್ಕು ಪಲ್ಲಟ ಮಾಡಿ
ಭೂಮಿಯನು ತೂರಿಹಾಕಿಹನೆಂಬ ಆಟೋಪ
ಆಕ್ರೋಶ - ಆಟೋಪ ಮಾತಿಲ್ಲ ಕತೆಯಿಲ್ಲ
ನಿಶ್ಶಬ್ದ ನಿಶ್ಚೇಷ್ಟ ನೆಲನಪ್ಪಿ ಮಲಗಿಹುದು.

ರಣರಂಗದ ಹೆಣದ ರಾಶಿಗಳಲ್ಲಿ ಅಪ್ರತಿಮ ವೀರ ತೇಜೋ ಮೂರ್ತಿ ಸಿಂಘಣ್ಣನ ಹೆಣ ಬಿದ್ದಿಹುದು. ಈತನೆದುರು ನಿಲ್ಲುವ ವೀರರಿಲ್ಲ. ವೀಣೆ -ಕಲೆ ಮತ್ತು ಗಾನ -ಕಲೆಯಲ್ಲಿ ಈತನನ್ನು ಸರಿಗಟ್ಟುವರಾರೂ ಇರಲ್ಲಿಲ್ಲ. ಅಪ್ರತಿಮ ಸಂಗೀತಯೋಗಿ ಸಿಂಘಣ್ಣನ ವರ್ಣನೆ ಅತ್ಯಂತ ಕರುಣಾಜನಕವಾಗಿದೆ. ಆತನ ಕೊಲೆಯಾದ ಸಂದರ್ಭವನ್ನು ಕವಿಯ ಮಾತುಗಳಿಂದಲೇ ಕೇಳಿ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನ್ಮ ಜನ್ಮಾಂತರದ ಸುಕೃತ ಸಂಚಯದಿಂದ
ಎತ್ತಾನು ಎಂದಾನು ನಕ್ಷತ್ರ ಮೂಡಿದರೆ
ಕಸ ತೆಗೆವ ಭರದೊಳಗೆ ಕಲ್ಪವೃಕ್ಷದ ಸಸಿಯ
ಕಿತ್ತೊಗೆದ ಕೈಯಂತೆ ಯಾವ ಬಾಣವು ನೆಟ್ಟು
ಯಾರ ಕೂರಸಿತರಿದು ---- -------
ನೆಲ ಕುಲದೊಳಗೊಂದು ನಕ್ಷತ್ರ ಮಾನವ
ಮರೆಯಾಯ್ತು ಮಗಳೆ ಇನ್ನಿಲ್ಲ ಸಿಂಘಣ್ಣ,

ಎಂದು ಗುರುಚೆನ್ನಮಲ್ಲ ಮಹಾದೇವಿಯಕ್ಕಗೆ ಹೇಳುತ್ತಾ ಪರಿತಪಿಸುತ್ತಾನೆ.

ಸೋಯಿದೇವನ ಪ್ರಾಣದಂತಿದ್ದ ಲಿಂಗಣ್ಣನಾಯಕನ ಅತ್ಯಂತ ರಮಣೀಯ ಹಾಗೂ ಕಮನೀಯ ಚರಿತ್ರೆಗಳನ್ನು ಕವಿವರ್ಯರು ಚಿತ್ರಿಸಿದ್ದಾರೆ. ಸ್ವಾಮಿನಿಷ್ಠೆಗೆ ಆತ ಮತ್ತೊಂದು ಹೆಸರೆಂತಲೂ ಆತನ ಪರಾಕ್ರಮಕ್ಕೆ ಕಾಮದೇವನ ಸೈನ್ಯ ಗಡಗಡ ನಡುಗಿತ್ತೆಂತಲೂ ಬಗೆ ಬಗೆಯಾಗಿ ಬಣ್ಣಿಸಿದ್ದಾರೆ. ಲಿಂಗಣ್ಣ ಕವಿ ಮಾತ್ರ ಆಗಿರಲಿಲ್ಲ. ಸಮಯ ಬಂದಾಗ ರಣರಂಗದಲ್ಲಿ ದುಮಿಕಿ ಶತ್ರುಗಳೊಡನೆ ಹೋರಾಡುತ್ತಿದ್ದನು. ಕವಿ ಈ ಪ್ರಸಂಗವನ್ನು ಅದ್ಭುತವಾಗಿ ನಿರ್ವಹಿಸಿದ್ದಾರೆ. ಕರುಣಾ ರಸದ ಕೋಡಿಯನ್ನೇ ಹರಿಸಿದ್ದಾರೆ. ಕವಿ ಲಿಂಗಣ್ಣನ ಹೃದಯದಿಂದ ಕಾವ್ಯ ಲೋಕದ ಮಹಾಸಂಪತ್ತು ಉಕ್ಕಿ ಹರಿಯುತ್ತಿತ್ತು. ವಿಧಿಯ ವಿಲಾಸ, ಲಿಂಗಣ್ಣ ಯುದ್ಧ ಭೂಮಿಯಲ್ಲಿ ವೀರಸ್ವರ್ಗವನ್ನೇರಿದ. ಆತನ ಉಜ್ವಲ ಚರಿತ್ರೆಯನ್ನು ಓದಿಯೇ ಆನಂದಿಸಬೇಕು.

ಜಗತ್ತಿನಲ್ಲಿ ಸದಾ ಸಂಘರ್ಷ ನಡೆದೇ ಇದೆ. ಹಲವು ನಾಮದ, ಹಲವು ರೂಪದ ಹೋರಾಟ ಅಹರ್ನಿಶಿ ನಡೆದೇ ಇದೆ. ದಿನ ನಿತ್ಯ ಸಾಯುವುದು ಹುಟ್ಟುವುದು ಇದ್ದೇ ಇದೆ. ಸಾವು ಬಾರದ ಮುನ್ನ ಸಾವಿರಾರು ಸಲ ಸಾಯುವ ಮನುಜರೂ ಇದ್ದಾರೆ. ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಅನುಭವಿಸುತ್ತಾರೆ. ಚಂದಿಮರಸರು ಹೇಳುವಂತೆ ಮನುಜ ಸಾವಿನ ದವಡೆಯಲ್ಲಿ ಸಿಕ್ಕಿದ್ದರೂ ತನ್ನ ಮೂಗಿನ ತುದಿಗೆ ತೊಟ್ಟಿಟ್ಟ ಹನಿ- ಜೇನ ಸವಿಯುತ್ತಾ ಆನಂದಪರವಶರಾಗುತ್ತಾನೆ.

ಗುರು ಚೆನ್ನ ತೋರಿದ ಪಾಪ ಕೂಪದ ವೃತ್ತಾಂತವನ್ನು ಕೇಳಿ ಶಿಷ್ಯರು ತಳಮಳ ಗೊಳ್ಳುತ್ತಾರೆ. ಯುಗ- ಯುಗಾಂತರದಿಂದ ಮಾನವ ಮೃತ್ಯುವಿಗೆ ಸಮನಾದ ಅನಂತ ಕಟು ಅನುಭವಗಳನ್ನು ಅನುಭವಿಸುತ್ತಾ ಬಂದಿದ್ದಾನೆ. ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಂಪರಾಗತ ಅಂಧಕಾರದ ಮಹಾಪೂರವನ್ನು ಮಾನವನು ಹೇಗೆ ಸಹಿಸುತ್ತಾ ಬಂದಿರುವನೆಂಬುದು ಅತ್ಯಂತ ವಿಸ್ಮಯಕಾರಿ.

ಸಾಹಿತ್ಯ ಮನುಷ್ಯನ ಕಲ್ಪನೆಯ ಮನೋರಮ ಸಾಮ್ರಾಜ್ಯವೆಂದು ಹೇಳಿದ್ದಾರೆ. ಪ್ರೊ. ಭೂಸನೂರಮಠ ಅವರು ಭವ್ಯಮಾನವ ಮಹಾಕಾವ್ಯದಲ್ಲಿ ಎಂದೂ ಯಾರಿಗೂ ಕಲ್ಪನೆಗೆ ನಿಲುಕದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಭಾವಕ್ಕೆ ತಕ್ಕ ಮಧುರ ಪದಗಳ ಜೋಡಣೆ ಓದುಗರ ಹೃದಯವನ್ನು ಸೂರೆಗೊಳ್ಳುತ್ತದೆ. ಕಾಲಕಾಲಾಂತರದಿಂದ ಮಾನವನು ಅನುಭವಿಸುತ್ತಾ ಬಂದಿರುವ ಸುಖ-ದುಃಖವಾರಾಶಿಯನ್ನು ಹೇಗೆ ಸಹಿಸಿದನೆಂಬುದನ್ನು ಕವಿವರ್ಯರು ವಿಸ್ಮಯಭರಿತರಾಗಿ ಹೀಗೆ ಹೇಳುತ್ತಾರೆ.

ಮೇರು ಪರ್ವತವೆದ್ದು ಇರುವೆಸಾಲಿನ ತೂತ
ಒಳಹೊಕ್ಕು ನಡೆದರೆ ಗತಿಯೇನು ಮತಿಯೇನು?
ವಾಯುಮಂಡಲ ರಾಶಿ ಕೊಳಲನೂದಿದರೆ
ಆಕಾಶ ನಡೆಗಲಿತು ನಮ್ಮನೆಯ ಹೊಕ್ಕರೆ
ಗತಿಯೇನು ಮತಿಯೇನು?
ಸಾಗರವೆ ಭೋರ್ಗರೆದು ಕೆರೆಯೊಳಗೆ ನುಗ್ಗಿದರೆ
ಅಳಿವಲ್ಲದೇ ತಾಯೆ ಉಳಿವಿಲ್ಲ ಉಳಿವಿಲ್ಲ.

ನಿಜದ ಬ್ರಹ್ಮವ ಮರೆಸಿ ವಿಶ್ವತೋಮುಖವಾಗಿ ಹರವಿರುವ ಕತ್ತಲೆಗೆ ಮಾನವ ಪ್ರಾಣ ತುತ್ತಾಗಿ ಹೋದ. ಲೌಕಿಕನೆಡೆದಿಹುದು ನೆಲದ ಮೇಲಲ್ಲ, ಕತ್ತಲೆಯ ಗವಿಯಲ್ಲಿ. ಅದೆಷ್ಟೋ ಮಹನೀಯರು, ಅವತಾರ ಪುರುಷರು, ಸಾಧು -ಸಂತರು, ಶರಣರು ಬಂದು ಹೋದರು. ಆದರೆ ಜಗತ್ತಿನ ಅನ್ಯಾಯ, ದ್ರೋಹ, ವಂಚನೆ, ಕಪಟ ಹೆಚ್ಚುತ್ತಲೇ ಹೋದವು. ಪಾಪ ಬೆಳೆಯುತ್ತಲೇ ಹೋಯಿತು. ಹೊಸ ಬದುಕು ಬಾಳಿ ದಿವ್ಯದತ್ತ ನಡೆಯಲು ಮಾರ್ಗವನ್ನು ತೋರಲು ಶಿಷ್ಯರು ತಮ್ಮ ಗುರುವನ್ನು ಅಂಗಲಾಚಿ ಬೇಡಿಕೊಳ್ಳುತ್ತಾರೆ. ಇದಕ್ಕೆ ಉತ್ತರವಾಗಿ ಗುರು ಇದ್ದ ಲೋಕವನ್ನು ಬಿಟ್ಟು ಭವಭಾರವನ್ನು ಹೊತ್ತು ಮತ್ತೊಂದು ಲೋಕಕ್ಕೆ ಹೋಗುವುದು ಸರಿಯಲ್ಲ. ಮಹಿಮಾಪುರುಷರು ಲೋಕದ ಡೊಂಕನ್ನು ತಿದ್ದದೆ ತಮ್ಮ ತಾವೆತ್ತಿ ನೆಲ ಬಿಟ್ಟು ಹೋದರೆ ಲೋಕದ ಗತಿ ಏನೆನ್ನುತ್ತಾರೆ. ಇದು ಕವಿಯ ವಿನೂತನ ವಿಚಾರ.

ಮಾನವನ ದಿವ್ಯ ಸಾಹಸಕ್ಕೆ ಎಣೆ ಇಲ್ಲ. ಅವನು ವೇದಾಂತ, ಉಪನಿಷತ್ತುಗಳನ್ನು ರಚಿಸಿದರು. ಪುರಾಣ, ಶಾಸ್ತ್ರ, ಕಾವ್ಯ, ನಾಟಕ ಸೃಷ್ಟಿಸಿದನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನಿಗಸಾಧ್ಯವಾದುದು ಯಾವುದೂ ಇಲ್ಲ. ಮಾನವನ ಸಾಹಸದ ಇತಿಹಾಸ ಅದ್ಭುತ, ಅವರ್ಣನೀಯ. ಶತಮಾನಗಳು ಕತ್ತಲಿಸಿ ಹೋದರೂ, ಯುಗಗಳು ಉರುಳಿಹೋದರೂ ರಾಮಚರಿತದ ರಾಮ- ಲಕ್ಷ್ಮಣ- ಸೀತೆ- ಭರತ -ಶತ್ರುಘ್ನ, ಎಲ್ಲಕ್ಕೂ ಮಿಗಿಲಾಗಿ ಸ್ವಾಮಿಭಕ್ತಿಯ ಸಾಕ್ಷಾತ್ ಅವತಾರ ಆಂಜನೇಯನನ್ನು ನಾವು ಮರೆಯುವಂತಿಲ್ಲ. ತರುವಾಯ ಮಹಾಭಾರತ ಯುದ್ಧ, ಪಣವಿಟ್ಟು ಜೂಜಾಡಿ ಕೌರವರ ಕಪಟಕ್ಕೆ ಬಲಿಯಾದ ಪಾಂಡವರು ರಾಜ್ಯವೈಭವ ಕಳೆದುಕೊಂಡು ಘೋರ ಕಷ್ಟವನ್ನನುಭವಿಸಿದರು. ಮಹಾಭಾರತದ ಆಗಸದಲ್ಲಿ ಧರ್ಮ, ಭೀಮ, ಅರ್ಜುನ, ನಕುಲ, ಸಹದೇವ, ವೀರ ಅಭಿಮನ್ಯು ಮುಂತಾದವರು ಎಂದೆಂದಿಗೂ ತೊಳಗಿ ಬೆಳಗುತ್ತಿಹರು. ಭೂತಕಾಲದ ಪುಣ್ಯ- ಪುರುಷರ ಜೀವಂತ ಚರಿತ್ರೆಗಳು ಕಣ್ಮರೆಯಾಗಿವೆ. ಕಶ್ಚಿದ್ಧೀರರು ಸಾಹಸ ಮಾಡಿ ಈ ದುಃಖಪೂರ್ಣ ಕತ್ತಲೆಯ ಪ್ರವಾಹದಲ್ಲಿ ದಡಕ್ಕೆ ಈಸಿ ಬಂದರು ಮತ್ತು ನಾಡಿಗೆ ಮಹಾ ಸಂಪದವ ತಂದುಕೊಟ್ಟರು :

ಸತ್ಯಂವದ, ಧರ್ಮಂಚರ
ಮಾತೃದೇವೋಭವ, ಪಿತೃದೇವೋಭವ
ಅತಿಥಿ ದೇವೋಭವ, ದಯವೇ ಧರ್ಮದ ಮೂಲ
ಆಚಾರವೇ ಸ್ವರ್ಗ, ಕಾಯಕವೇ ಕೈಲಾಸ.

ಮುಂತಾದ ದಿವ್ಯ ಸಂಪದವ ತರಲು, ಮಾನವನನ್ನು ಕತ್ತಲೆಯಿಂದ ಅನಂತ ಕಾಲ ಋಷಿ, ಮುನಿಗಳು ತಪಸ್ಸು ಮಾಡಿದರು, ಅನಂತಕಾಲ ಜಪವ ಮಾಡಿದರು. ಆದರೂ ಮಾನವನನ್ನು ಕವಿದ ಕತ್ತಲೆ ಕಡಿಮೆಯಾಗಲಿಲ್ಲ. ಪ್ರಳಯಾಂಧಕಾರದ ಭಯಾನಕ ದೃಶ್ಯಗಳನ್ನು ಕಂಡು ಮಹಾದೇವಿಯಕ್ಕ ತನ್ನ ಜೀವನದ ಹೆಗ್ಗುರಿಯನ್ನು ಮರೆತು ಜಗತ್ತನ್ನು ಕತ್ತಲೆಯಿಂದ ಅನಂತ ಬೆಳಕಿಗೆ ಕರೆದೊಯ್ಯಲು ನಿರ್ಧರಿಸುತ್ತಾಳೆ. ಜಗದಗಲ ಹರವಿರುವ ಕತ್ತಲೆಯ ಪೂರ್ಣ ಪರಿಹಾರಕ್ಕೆ ಪ್ರಯತ್ನಶೀಲಳಾಗುತ್ತಾಳೆ.

ಕನ್ನಡಕ್ಕೆ ತಮ್ಮ ಕೃತಿಗಳಿಂದ ಶ್ರೀಮಂತಿಕೆಯನ್ನೊದಗಿಸಿದ ಕವಿವರ ಭೂಸನೂರಮಠ ಅವರು ತಮ್ಮ ಆಯುಷ್ಯವನ್ನೇ ಸಾಹಿತ್ಯ ಸೇವೆಗಾಗಿ ಮುಡುಪಾಗಿಟ್ಟು ಕೊಂಡವರು. ಇವರ ಅನುಭಾವ ಶ್ರೀಗಿರಿಯ ಶಿಖರದಂತೆ ಭವ್ಯಮಾನವ ಮಹಾಕಾವ್ಯ ಪಾಂಡಿತ್ಯ, ಪ್ರತಿಭೆ ಹಾಗೂ ಕಲೆಗಳ ತ್ರಿವೇಣಿ ಸಂಗಮ. ಪಂಕ್ತಿ ಪಂಕ್ತಿಗೂ ಶಬ್ದ ತೇಜಸ್ಸು, ಶೈಲಿಯ ಓಜಸ್ಸು, ಆಂತರಿಕ ಅನುಭೂತಿ ಹಾಗೂ ವಿಷಯ ಗೌರವ ತುಂಬಿ ತುಳುಕುತ್ತಿದೆ. ಪುಟ ಪುಟಗಳಲ್ಲಿಯೂ ಕಾವ್ಯಶಕ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೋರ್ಗರೆದು ಹರಿಯುತ್ತಿದೆ. ಆದರಲ್ಲಿ ಸಮತಲದಲ್ಲಿ ಹರಿಯುವ ಗಂಗೆಯ ಪ್ರಶಾಂತತೆ ಉಂಟು, ಉತ್ತುಂಗ ಶಿಖರದಿಂದ ದುಮ್ಮಿಕ್ಕಿ ಹರಿಯುವ ರಭಸ ಉಂಟು. ಇವರ ರಚನೆಯಲ್ಲಿ ಎಲ್ಲಿ ನೋಡಿದಡಲ್ಲಿ ಉಪಮೆ, ರೂಪಕ, ದೃಷ್ಟಾಂತ, ಅತಿಶಯೋಕ್ತಿ ಮುಂತಾದ ಅಲಂಕಾರಗಳಿಂದ ಒಂದೊಂದು ಪಂಕ್ತಿಯು ಮಿಂಚಿನ ಎಳೆಯಂತೆ ಮಿನುಗುತ್ತಿದೆ. ಮತ್ತು ಓದುಗರಿಗೆ ಹಾಗೂ ಕೇಳುವವರಿಗೆ ಆನಂದವನ್ನುಂಟುಮಾಡುತ್ತದೆ. ಇವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಆಚಂದ್ರಾರ್ಕ ಸಜೀವವಾಗಿರುತ್ತದೆ.

ಕಮಲವು ಶೈವಾಲದಿಂದ ಮುಚ್ಚಲ್ಪಟ್ಟಿದ್ದರೂ ಹೇಗೆ ಅದರ ಶೋಭೆ ಹೆಚ್ಚಾಗುವುದೋ ಹಾಗೆಯೇ ಕತ್ತಲೆಯ ಕಾಂಡದಿಂದ ಭವ್ಯಮಾನವ ಕಾವ್ಯದ ಶೋಭೆ ಹೆಚ್ಚಾಗಿದೆ. ಸಮುದ್ರಮಂಥನದ ಸಮಯದಲ್ಲಿ ಅಮೃತದೊಂದಿಗೆ ವಿಷ ಸಹ ಹುಟ್ಟಿದ ಹಾಗೆ ಭವ್ಯ ಮಾನವ ಮಹಾಕಾವ್ಯದ ಸೃಷ್ಟಿಯಲ್ಲಿ ಬೆಳಗು ಕತ್ತಲೆ ಎರಡೂ ಸೇರಿಕೊಂಡಿವೆ. ಇದು ಮಹಾಕಾವ್ಯದ ಲಕ್ಷಣಗಳಲ್ಲೊಂದು. ಗುರುಚೆನ್ನ ತೋರಿಸಿದ ಭೀಭತ್ಸ ಮತ್ತು ಭಯಾನಕ ದೃಶ್ಯಗಳನ್ನು ಕಂಡು ಮಹಾದೇವಿಯಕ್ಕ ಹಾಗೂ ಗಿರಿಮಲ್ಲರು ಅತ್ಯಂತ ಚಿಂತಾ ಕ್ರಾಂತರಾದರು. ಅಕ್ಕ ಹೀಗೆಂದು ಉದ್ಗಾರ ತೆಗೆದಳು :

ಇರಬಾರದಿಲ್ಲಿ ಸತ್ಯ ಸಜ್ಜನರು
ನೋಡಬಾರದು ಕಣ್ಣು ಕೇಳಬಾರದು ಕಿವಿ
ಇರಬಾರದಿಲ್ಲಿ ಈ ಭೂಲೋಕದಲ್ಲಿ
ಇರಬಾರದಿಲ್ಲಿ ಈ ಯಮಲೋಕದಲ್ಲಿ

ಎಂದು ದುಃಖಿಸುತ್ತಿರುವಾಗ ಗುರುಚೆನ್ನಮಲ್ಲ ಬಿಸುಸುಯ್ದು :

ನೆಲದೊಳಗೆ ದೇವಕುಲ ಹುಟ್ಟಿ ಬರಲಿದೆ ತಾಯಿ
ಭಯವಿಲ್ಲ ಭಯವಿಲ್ಲ ತಾಯೇ ಗಿರಿಮಲ್ಲ
ಬಸವಣ್ಣ ಬಂದಿಹನು ಕತ್ತಲೆಯನೆತ್ತಿ ಬೆಳಗಿನ
ನಾಡಿಗೊಯ್ಯಲಿಕೆ- ಎಂದು ಸಮಾಧಾನ ಪಡಿಸುತ್ತಾನೆ.

ಗುರುಗಳ ಸಾಂತ್ವನದಿಂದ ಶಿಷ್ಯರ ಹೃದಯಕ್ಕೆ ಸ್ವಲ್ಪ ನೆಮ್ಮದಿಯಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಯ ಕಾಂಡ

ಪ್ರೊ. ಜಿ. ಡಿ. ಸಾಢಕರ್ಣೆ

ಪ್ರೊ. ಭೂಸನೂರಮಠ ಅವರು ಅನೇಕ ದೃಷ್ಟಿಯಿಂದ ವೈಶಿಷ್ಟ್ಯ ಪೂರ್ಣವಾದ 'ಭವ್ಯಮಾನವ' ಮಹಾಕಾವ್ಯವನ್ನು ರಚಿಸಿ ಆಧುನಿಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಮಹಾ ಕಾವ್ಯಪರಂಪರೆ ಹಳಗನ್ನಡ ಸಾಹಿತ್ಯದ ಒಂದು ಮಹತ್ವದ ವೈಶಿಷ್ಟ್ಯವಾಗಿದ್ದರೂ, ಮಾನವನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡು ರಚಿಸಿದ ಮೊದಲನೆಯ ಮಹಾಕಾವ್ಯವಿದು! ತನ್ನನ್ನು ಹೊರತುಪಡಿಸಿ, ಪ್ರಾಚೀನ ಕಾಲದ ವೀರರನ್ನೋ, ತ್ಯಾಗಿಗಳನ್ನೋ ಇಂದ್ರ, ಚಂದ್ರ ಎಂದು ಹೊಗಳಿ ಆಧುನಿಕ ಕಾಲದಲ್ಲಿ ಅಂಥ ಧೀರೋತ್ತರಲ್ಲ ಎಂದು ಕೊರಗುವುದು ಸಾಮಾನ್ಯ. ''ಭೂಲೋಕವೆಲ್ಲ ಮಣ್ಣಿನ ಲೋಕ. ನಶ್ವರ ಲೋಕ; ಮಾನವನು ಅಪೂರ್ಣ. ಅವನ ಜೀವನ ಕ್ಷಣಿಕ'' ಎಂದೆಲ್ಲ ಭಾವಿಸಿ ಪೂರ್ಣತೆಗಾಗಿ ಬೇರೆ ಲೋಕ, ಬೇರೆ ಕಾಲದ ಕಡೆಗೆ ಸದಾ ನೋಡುತ್ತಿರುವುದು ಅನೇಕರ ಸ್ವಭಾವವಾಗಿದೆ. ಬಾಳಿನ ಬೆಲೆಯನ್ನು ಅಲ್ಲಗಳೆದು ''ಇಲ್ಲಿ ಹುಟ್ಟಬರುವುದೇ ಪಾಪ; ಪುಣ್ಯಗಳಿಸಿ ವೈಕುಂಠ- ಕೈಲಾಸ ಮೊದಲಾದ ದಿವ್ಯ ಲೋಕಗಳಿಗೆ ಹೋಗುವುದೇ ಮಾನವನ ಗುರಿ''- ಎಂದು ಪ್ರತಿಪಾದಿಸುವ ಕಾವ್ಯಗಳೇ ನಮ್ಮಲ್ಲಿ ಹೆಚ್ಚು. ''ಭವ್ಯ ಮಾನವ'' ಅದಕ್ಕೊಂದು ಅಪವಾದ. ಇಹಲೋಕ-ಪರಲೋಕಗಳನ್ನೊಳಗೊಂಡ ಭೂಲೋಕವೇ ಸರ್ವಾಧಿಕ, ಸರ್ವಶ್ರೇಷ್ಠ ಎಂಬುದು ಈ ಮಹಾಕಾವ್ಯದ ಪ್ರತಿಜ್ಞೆಗಳಲ್ಲೊಂದು. ಅವರಂತೆ, ಮಾನವ ಜೀವನದ ವಿಲಾಸಕ್ಕೆ ಭೂಲೋಕವೆ ಪರಮ, ಚರಮರಂಗಸ್ಥಲ ಎಂಬುದು ಈ ಕಾವ್ಯದ ಇನ್ನೊಂದು ಮಹತ್ವದ ಪ್ರತಿಜ್ಞೆ. ಒಟ್ಟಿನಲ್ಲಿ ಮಾನವ ದೇವನೇ ಇಲ್ಲಿ ಅವತರಿಸಿದ್ದಾನೆ. ನಿಜವಾದ ದಿವ್ಯತೆ ಹೊರಗೆ ಇರದೆ, ಮಾನವನಲ್ಲಿದೆ. ಪ್ರತಿಯೊಬ್ಬನಲ್ಲಿದೆ ಎಂಬ ತಾತ್ವಿಕ ನಿಲುವು ಈ ಕಾವ್ಯದ ಮಹತ್ವದ ವೈಶಿಷ್ಟ್ಯ.

'ಮಾನವ' ನೇ ಈ ಕಾವ್ಯದ ಮಹಾನಾಯಕ. ಒಂದು ದೇಶ- ಪ್ರಾಂತದ ಇಲ್ಲವೆ ಕಾಲ ಅವಧಿಯ, ಧರ್ಮದರ್ಶನ ಕುಲಜಾತಿ ಮಾನವನಲ್ಲ. ಲಕ್ಷಾಂತರ ವರ್ಷಗಳ ಹಿಂದೆ ಮಣ್ಣಿನಲ್ಲಿ ಒಡೆದು ಮಾಡಿ, ಇಂದಿನವರೆಗೆ ಸತ್ತು- ಹುಟ್ಟಿ ಬೆಳೆಯುತ್ತಿರುವ, ಬಂದಿರುವ ಮತ್ತು ಮುಂದೆ ಬೆಳೆಯಲಿರುವ ಮಾನವನ ಈ ಮಾನವ, ಮಹಾಕಾವ್ಯದ ಸ್ವತಂತ್ರ ನಾಯಕ. ಮಾನವ ಕುಲದ ಇತಿಹಾಸವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಕಾವ್ಯದಲ್ಲಿ ಮಾರ್ಮಿಕವಾಗಿ ನಿರೂಪಿತವಾಗಿದೆ. ಕಲ್ಯಾಣಕಾಂಡದಿಂದ ಭವ್ಯಕಾಂಡದವರೆಗೆ ಆರು ಕಾಂಡಗಳಲ್ಲಿ ಈ ಕಾವ್ಯದ ವಸ್ತು ಹರಡಿಕೊಂಡಿದೆ. ಜಗದ ಕತ್ತಲೆಯನ್ನು ಹೊಡೆದೋಡಿಸುವ ಅನೇಕ ಧೀಮಂತ ಜ್ಞಾನಿಗಳು ಜನಿಸಿ ಜನತೆಗೆ ಬೋಧಿಸಿದರೂ ಜಗತ್ತು ಇನ್ನೂ ಸ್ವಾರ್ಥ, ಅಸೂಯೆ- ದ್ವೇಷ- ಹಿಂಸೆಗಳನ್ನು ಮೀರಿ ಏಕೆ ನಿಂತಿಲ್ಲ? ಜಗತ್ತಿನಲ್ಲಿ ಅನೇಕ ಧರ್ಮಗಳು ಜನಿಸಿ ಬೆಳಕನ್ನು ತರಲು ಪ್ರಯತ್ನಿಸಿವೆ; ಭಾರತದಲ್ಲಿ, ಕನ್ನಡನಾಡಿನಲ್ಲಿ ಋಷಿ- ಮುನಿಗಳು- ಶಿವಶರಣರು, ಆಧ್ಯಾತ್ಮದ ಪರಾಕಾಷ್ಠೆಯ ಅನುಭಾವವನ್ನು ಪಡೆದುಕೊಂಡು ಬೋಧಿಸಿದರು. ''ಸರ್ವಂ ಖಲ್ವಿದಂ ಬ್ರಹ್ಮ''. ''ಮಾನವ ಜಾತಿ ತಾನೊಂದು ವಲಂ'' ''ಇಹಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ!'' ಕಾಯಕವೇ ಕೈಲಾಸ, ಹರನೆಂಬುದೇ ಸತ್ಯ- ಎಂಬುದು ನುಡಿಮುತ್ತುಗಳ ಅನುಭಾವ ಪ್ರಪಂಚದ ಜನತೆಗೆ ಏಕೆ ಬರುತ್ತಿಲ್ಲ? ವಿಜ್ಞಾನಿಗಳ, ರಾಜಕಾರಣಿಗಳ ಹಂಬಲವು ಇನ್ನೂ ಹೆಚ್ಚು ಅಣ್ವಸ್ತ್ರಗಳನ್ನು ಸಿದ್ಧಪಡಿಸಿ, ಸಂಗ್ರಹಿಸುವುದರಲ್ಲಿಯೇ ವ್ಯಕ್ತವಾಗುತ್ತಿದೆಯಲ್ಲ? ಇದನ್ನೆಲ್ಲ ಕಂಡು, ಕವಿ ರೋಸಿ ಹೋಗಿದ್ದಾನೆ. ಆ ರೋಷ ಹೃದಯಾಂತರಾಳದ ನಿಗಿ ನಿಗಿ ಕೆಂ[illegible]ವಾಗಿ ಇಲ್ಲಿ ಸಾಲು ಸಾಲಾಗಿ ಅಭಿವ್ಯಕ್ತಗೊಂಡು ಪ್ರಜ್ವಲಿಸುತ್ತಿದೆ. ಈ ದೃಷ್ಟಿಯಿಂದ ಈ ಕಾವ್ಯವು ಅಸದೃಶವಾಗಿದೆ.

ಪ್ರಕೃತ, ಉದಯಕಾಂಡದ ಉದ್ದೇಶ, ಸಂದೇಶಗಳನ್ನು ನೋಡೋಣ. ಕತ್ತಲೆಯ ಕಾಂಡದಲ್ಲಿ ಗುರುಚೆನ್ನನು ಅನೇಕ ದುಃಖದ, ಸ್ವಾರ್ಥದ, ಹಿಂಸೆಯ ಸನ್ನಿವೇಶಗಳನ್ನು ನಿರೂಪಿಸುತ್ತಾನೆ. ಇದಕ್ಕೆ ಶಾಶ್ವತ ಪರಿಹಾರವೇನು? ಗುರುಚೆನ್ನನು ಅದಮ್ಯ ಆಶಾವಾದಿ : ಇಂದಿನ ಜಗತ್ತು ಮಾನವನ ಸ್ವಾರ್ಥದಿಂದ ನರಕಸದೃಶ್ಯವೆಂಬಂತೆ ಕಾಣುತ್ತಿದ್ದರೂ, ಅದಕ್ಕೆ ಆಶೆಯ ಭರವಸೆ ಇದೆ. ಅದು ಬರುವದು ಹೊರಗಿನಿಂದಲ್ಲ, ಒಳಗಿನಿಂದಲೇ! ''ಮಾನವಾಂತರ್ಗುಹೆಯ ಅನಿಮಿಷಯ್ಯ-ಸರ್ವಶೂನ್ಯ ಸಮಾಧಿ ಯೊಳು ನಿಂದು ನೋಡಿ, ಕತ್ತಲೆಯ ಪರಿಹಾಸ-ಪೂರ್ಣ ಪರಿಹಾರಕ್ಕೆ ಲೆಕ್ಕವನು ಹಾಕಿಹನು ಜಗದ ಮೈಯೊಳಗೆಲ್ಲಾ! ಲೆಕ್ಕ ನಡೆದಿದೆ ತಾಯೆ, ಹಗಲು ರಾತ್ರಿ; ಲೆಕ್ಕ ನಡೆದಿದೆ ತಾಯೆ ಶತಮಾನ ಶತಮಾನ!'' ಎಂಬ ಆಶಾಭಾವದಿಂದ ಕತ್ತಲೆಯ ಕಾಂಡವು ಸಮಾಪ್ತಿಯಾಗುತ್ತದೆ ''ಉದಯಕಾಂಡ''ವು ಹೆಸರಿಗೆ ತಕ್ಕಂತೆ ಮಾನವ ಕುಲದ ಉದ್ಧಾರದ ಆಶೆಯ ಉದಯವನ್ನು ಚಿತ್ರಿಸುತ್ತದೆ. (ಅದೇ ಮುಂದೆ ಉಜ್ವಲ, ಭವ್ಯ ಕಾಂಡಗಳಲ್ಲಿ ವಿಸ್ತಾರಗೊಂಡಿದೆ) ಗುರು-ಶಿಷ್ಯರು ಕತ್ತಲೆಯ ಪ್ರಪಂಚವನ್ನು ದಾಟಿ ಇದೀಗ ಬೆಳಕಿನ ಸಾಮ್ರಾಜ್ಯದ. ಆರಂಭದ ಅಂಚಿಗೆ ಆಗಮಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಡಲದ ಕೆಂಪಿನ್ನು ಹರಿದಿಲ್ಲ ಮಗನೇ
ಕಾರಿರುಳ ಕತ್ತಲೆಯ ಮುಂದು ನಸುಕು
ನಸುಗೆಂಪು ನಸುಗೆಂಪು ಅಲ್ಲಲ್ಲಿ ಕಹಿಗೆಂಪು
ಕೋಳಿ ಇನ್ನೂ ಕೂಗಿ ಗಂಟೆ ಹೊಡೆದಿಲ್ಲ

ಮಾನವದ ರಾತ್ರಿ ಮಾನವದ ನಿದ್ರೆಗೆ
ಎಚ್ಚರದ ಸ್ವಪ್ನಸುಖ ಕಣ್ಮುಂದೆ ಬಿದ್ದಿಹುದು.

ಸೃಷ್ಟಿಯಲ್ಲಿ ನೋಡಲು ವಿವಿಧತೆ ತಾರತಮ್ಯಗಳಿವೆಯೇ ಹೊರತು; ನಿಜವಾಗಿ ಅವು ಒಂದೇ ಚೈತನ್ಯದ ಅಸಂಖ್ಯ ವ್ಯಕ್ತರೂಪಗಳಾಗಿವೆ. ಒಂದೇ ಬೆಂಕಿಯಿಂದ ಸಿಡಿದು ಬಂದ ಕಿಡಿಗಳಂತೆ, ಒಂದೇ ಮಣ್ಣಿನಿಂದ ರೂಪುಗೊಂಡ ಹಲವು ಮಡಿಕೆ -ಕುಡಿಕೆಗಳಂತೆ ಪ್ರಪಂಚದ ಜೀವಿಗಳ ಮೂಲ ಸ್ವರೂಪವಿದೆ.

''ಒಂದು ತಾನಾಗಿರುವ ಒಂದೆ ಪರವಸ್ತು
ಒಂದಲ್ಲದೆರಡಿಲ್ಲದರಿವು ಪರವಸ್ತು
ತಾನೊಂದು ಪರವಸ್ತು ನಿತ್ಯ ಪರಿಪೂರ್ಣ
ತನ್ನ ಲೀಲೆಗೆ ತಾನೆ ತನ್ನಯ ವಿನೋದಕ್ಕೆ
ತನ್ನ ತಾ ಪೂಜಿಸುವ ತನ್ನ ತನಗರ್ಪಿಸುವ
ತನ್ನ ಸಂಪದ್ ಬ್ರಹ್ಮದೈಶ್ವರ್ಯವನು ಕಂಡು,
ತನ್ನೊಳಗೆ ತಾನೊಡೆದು ಮೂಡಿ ತೋರುವ''

(ಭ. ಮಾನವ. ಪುಟ . 438)

ಎಂಬ ದರ್ಶನವು ವಿರಾಟ್ ರೂಪದಲ್ಲಿ ನಿರೂಪಿತವಾಗಿದೆ. ಇದರ ಅನುಭವವು ಮಾನವನಿಗೆ ಬಂದು ಬಿಟ್ಟರೆ, ಜಗತ್ತಿನಲ್ಲಿಯ ಹಿಂಸೆ, ಅನ್ಯಾಯ-ಸ್ವಾರ್ಥಗಳೆಲ್ಲ ಮಾಯವಾಗಿ ಬಿಡುವವು! ಭೇದ, ತಾರತಮ್ಯಗಳ ಮೂಲಕವೇ ಪ್ರಪಂಚವು ದುಃಖಮಯವಾಗಿದೆ. ಅದಕ್ಕೆ ಜನಸಾಮಾನ್ಯರ ಪ್ರತಿನಿಧಿಯಾಗಿ ಗಿರಿಮಲ್ಲ ಸಂದೇಹವನ್ನು ವ್ಯಕ್ತಪಡಿಸಿದ್ದಾನೆ.

ಗುರುವೇ, ಎಲ್ಲಿಂದ ತಂದಿರೀ ಬಯಲಿನ ಪುರಾಣ?
ಕಾಣುವೀ ಜಗವೆಲ್ಲ ಕಾಣಸುವ ನಾನೆಲ್ಲ
ಬ್ರಹ್ಮದುಂಡಿಯ ಕಲ್ಲು, ವಜ್ರದುಂಡಿಯ ಕಲ್ಲು
ತಾನಾಗಿ ನಿಂದಿರಲು ಕಣ್ಮುಂದೆ ಹರವಿ
ಕಲ್ಲು ಬಯಲೆಂದರೆ-ಕಲ್ಲು ನಗುವುದು ತಂದೇ

ಮಹಾದೇವಿಯಕ್ಕನು ಅವನ ಸಂದೇಹವನ್ನು ನಿವಾರಿಸುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಲು ಬಯಲೆಂದರೆ ಮಾನವನ ಕಂಗೆ
ಹರವಿ ತೋರುವ ವ್ಯೋಮ ವಿಸ್ತಾರ ತಾನಲ್ಲ!
ಮನ ಬುದ್ಧಿಗೋಚರದ ಒಳಬಯಲ ತಾನಲ್ಲ,
ಏನು ಇಲ್ಲದ ಬಚ್ಚ ಬರಿಯ "ಇಲ್ಲವೆ"ಯಲ್ಲ!
ಎಲ್ಲ ಎಲ್ಲವೂ ಕರಗಿ ತನ್ನೊಳಗೆ ಲಯವಾಗಿ
ತಾನಿದ್ದು ತಾನಿಲ್ಲದಂತಿರುವ ಬಯಲು
ಅರಿವಿಲ್ಲ ಕುರುಹಿಲ್ಲದಿರವು ಬಯಲು
ಶರಣರನುಭಾವದ ಮಹಾಬೆಳಗನೊಳಗೊಂಡ
ಪರಮಾನುಭವದ ಮಹಾಶೂನ್ಯ ಬ್ರಹ್ಮ!

ಗುರುಚೆನ್ನಮಲ್ಲ ಅವಳ ಮಾತನ್ನು ಅನುಮೋದಿಸಿ "ವೇದಶಾಸ್ತ್ರ- ಆಗಮ-ಪುರಾಣಗಳು ಗುರುವಲ್ಲ"; ಅರಿವೆ ಗುರು ಅನುಭಾವ ಪರಮಗುರು" ಎಂದು ವಿವರಿಸುತ್ತಾನೆ. ಅದಕ್ಕೆ ಗಿರಿಮಲ್ಲನು ಮತ್ತೆ ತನ್ನ ಸಂದೇಹವನ್ನು ಮುಂದೊಡ್ಡುತ್ತಾನೆ. ಅದನ್ನು, ಅವನ ಸಂದೇಹವೆನ್ನುವುದಕ್ಕಿಂತ ಸಾಮಾನ್ಯ ಮಾನವನ ಸಂದೇಹವೇ ಅದು ಎನ್ನುವುದು ಹೆಚ್ಚು ಸೂಕ್ತ.

ನೀವು ಹೇಳುವ ಮಾತೂ ಆಕಾಶದೆತ್ತರ
ಕಂಡು ಎತ್ತರವ, ತಲೆ ಮಣಿಯಬಹುದು,
ಆದರೆ, ತಂದೆ --------
ನೆಲದ ಕೈಕಾಲಿಗೆ ಮುಗಿಲನೆತ್ತರಕೆ
ಎತ್ತಣಿಂದೆತ್ತ ಸಂಬಂಧವಯ್ಯಾ?

ಎಂದು ಪ್ರಶ್ನಿಸುತ್ತಾನೆ. ಜಗತ್ತಿನ ತುಂಬೆಲ್ಲ ಪರಮಾತ್ಮನೇ ತುಂಬಿದ್ದರೆ,

ದುರ್ದೈವ ಜಗವೇಕೆ ಈ ದೇವರೇಕೆ?
ಶಾಂತಿಯನು ಅಶಾಂತಿ ಹಿಸುಕಿ ಕೊಲ್ಲುವದೇಕೆ?
ಅಂದಳವನೇರಿ ಮಾನವನ ಧರ್ಮ
ಜಾತ್ರೆಯುತ್ಸವವಾಗಿ ಸಂಭ್ರಮಿಸುತಿಹುದೇಕೆ?
ನೀತಿ ನ್ಯಾಯದ ಕಾಲ ಮುರಿಯುತಿದೆ ಅನ್ಯಾಯ!

ಈ ಕಠೋರ ಸತ್ಯಕ್ಕೆ ಉತ್ತರವೇನು?

ಆಗ ಗುರುಚೆನ್ನನು ಸೃಷ್ಟಿಯ ಉದಯದಿಂದ ನಿರೂಪಣೆ ಪ್ರಾರಂಭಿಸುತ್ತಾನೆ. ಮೊದಲು ಒಂದೇ ಚೈತನ್ಯವಿತ್ತು; ಅದೇ ಹಲವು ರೂಪದಲ್ಲಿ ವ್ಯಕ್ತವಾಯಿತು. "ನಿರ್ವಿಕಾರದ ಲೀಲೆ ನಾನಾವಿಕಾರ" ಸಚ್ಚಿದಾನಂದ ನಿತ್ಯ ಪರಿಪೂರ್ಣವು ಶಕ್ತಿಯು ಮುಂದೆ ಹಿಡಿದ ದ್ವೈತದರ್ಪಣದ ಮೂಲಕ ಅಸಂಖ್ಯ ನಾಮರೂಪಗಳಾಗಿ ವ್ಯಕ್ತವಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಕುಣಿಯಿತ್ತು ನಾಟ್ಯ ನಡೆಯಿತ್ತು ನಾಟಕ''! ಕ್ರಮವಾಗಿ ಆಕಾಶ, ತೇಜ, ವಾಯು, ಅಪ್ಪು, ಪೃಥ್ವೀತತ್ವಗಳು ರೂಪುಗೊಂಡವು. ''ಬಯಲು ಹರವಿನೊಳು ಪೃಥ್ವಿ ಮೂಡಿ ಆಟ ನಡೆಯಿತು ಮಣ್ಣನಾಟ''. ಮಣ್ಣಿನ ಹೃದಯದಾಳದೊಳಗಿಂದೆ ಹಸಿರು ಮೊಳೆತು, ಹಸಿರೊಳಗೆ ಪ್ರಾಣಕಳೆ ಚಿಗಿತು ಸಸ್ಯಕೋಟಿ ಉದಯಿಸಿತು. ಆದರಿಂದ ಮುಂದೆ ಪ್ರಾಣವಿಲಾಸ ಜಿಗಿಯಿತು. ಕ್ರಿಮಿ, ಕೀಟ, ಮೀನ, ಮೊಸಳೆ, ಪಶು, ಪಕ್ಷಿ ಎಂಬ ಪ್ರಾಣಕೋಟಿಯ ಅನಂತ ವಿಧ ವಿಧ ವಿಲಾಸ ಮೊದಲಾಯಿತು. ಈ ಪ್ರಾಣಿಗಳೆಂದರೆ ''ಭೂಮಿ ಹಾಡಿದ ಮಹಾಭೂಮ ಕಾವ್ಯ; ಮಣ್ಣು ತಾಯಿಯ ಮಹಾ ಪುಣ್ಯ ಕಾವ್ಯ'' ಅದೇ ಚೈತನ್ಯವು ವಿಶ್ವಾದ್ಭುತ ಮಾನವ ಪ್ರಾಣಿಯಾಗಿ ಪರಿಣಮಿಸಿತು. ಇದು ಅರಿವಿನ ಜನ್ಮ. ಆದರೆ ಅದು ತಾನು, ಮೂಲ ಚೈತನ್ಯವೆಂಬುದನ್ನು ಮರೆತು ಅಜ್ಞಾನದ ಜೀವಭಾವವನ್ನೇ ಗಟ್ಟಿಯಾಗಿ ಹಿಡಿದುಕೊಂಡಿತು! ''ನಾನು ಮಾನವ ನಟಿಸಿ ನಡೆಯಿತ್ತು ನಾಟಕ''! ಎಲ್ಲಿ ಕೇಳಿದರಲ್ಲಿ ನಾನು ನಾನಿನ ಮಾತು! (ಎಂದರೆ ಅಹಂಕಾರಯುಕ್ತ ಜೀವಭಾವ) ''ಎರಡಿಲ್ಲದೊಂದೆ ತಾನಾಗಿರುವ ತನ್ನನ್ನು ಲೀಲೆಯಾಡೊಡೆ ಉಮಾಪತಿಯಾಗಿ ನಟಿಸಿದ'' ದ್ವೈತ ಲೀಲೆಗೆ ಅನ್ಯ ಭಿನ್ನ ತಂಡಗಳಾಗಿ, ಅಣುಕೋಟಿ, ಆತ್ಮರುಗಳಾಗಿ ವಿಂಗಡಿಸಿ, ಪಂಚಭೂತದ ದೇಹಕೋಟಿಯ ಧರಿಸಿ ಹೆಣ್ಣು-ಗಂಡಿನ ಸಂಗ ನಾನಾ ಭಾವದಿ ತೊಟ್ಟು ಬ್ರಹ್ಮನಾಟಕದೊಳಗೆ ನಟಿಸಿದವು. ಆದರೆ, ಮೂಲಸ್ವರೂಪ ಮರೆಯಾಗಿ, ಜೀವಭಾವವು ಸ್ಥಿರವಾಯಿತು!

ಆಗ ಶಿಷ್ಯ ಗಿರಿಮಲ್ಲನು ತನ್ನ ಸಂದೇಹವನ್ನು ಮುಂದಿರಿಸುತ್ತಾನೆ. ''ಒಂದೇ ಚೈತನ್ಯದ ನಾನಾ ರೂಪದ ಅಭಿವ್ಯಕ್ತಿಯಾಗಿದ್ದರೆ, ಅದರಲ್ಲಿ ಪಾಪ-ಅನ್ಯಾಯ, ದ್ವೈತ ರೀತಿ, ತಾನೊಬ್ಬ ಬದುಕಿ ಗಡುತರ ಬೆಳೆಯಬೇಕೆಂಬ ರಾಕ್ಷಸ ಸ್ವಾರ್ಥವೇಕೆ? ನೆಲದೊಳಗೆ ನರಕ ನಿರ್ಮಾಣವೇಕೆ? ಆಗ ಅಕ್ಕ ಮಹಾದೇವಿ ಈ ಮಾರ್ಮಿಕ ಪ್ರಶ್ನೆಗೆ ಉತ್ತರಿಸುತ್ತಾಳೆ. ''ಅಣ್ಣಯ್ಯ ಗಿರಿಮಲ್ಲಯ್ಯ! ಇದು ಕೋಟಿ ಕಾಲದ ಒಗಟು! ವೇದ-ಶಾಸ್ತ್ರ, ಸಾಧು- ಸಂತರು ಮಾನವನ ಮರೆಯ ದೇವನ ತೋರಿಸಿಕೊಟ್ಟರು. ಆದರೂ, ಮಾನವನ ಮಾನುಷ ನಾಯಿಬಾಲ! ಧರ್ಮ, ಭಕ್ತಿ, ಜ್ಞಾನ,ವೈರಾಗ್ಯಗಳನ್ನು ಹಚ್ಚಿ ಎಷ್ಟು ತಿಕ್ಕಿ ತೊಳೆದರೂ ಮಾನವನ ಪ್ರಕೃತ ಸ್ವಭಾವ ಪೂರ್ಣ ಸ್ವಚ್ಛವಾಗಿಲ್ಲ. ಮಾನವಗೆ ಹತ್ತಿರುವ ಮಾನವದ ಬಣ್ಣವಿದು, ಕೋಟಿಕಾಲದ ಕೋಟಿ ಗಟ್ಟಿ ಬಣ್ಣಾ! ''ನರಕುಲದ ನರಕ ಜಾತಿಯ ದೈತ್ಯ ಬಣ್ಣ ಬಿಡಲಿಲ್ಲ ಬಣ್ಣಾ, ಬಿಡಲಿಲ್ಲ!''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗದ ಮಾನವನಾಟಕ್ಕೆ ಇನ್ನೊಂದು ಹೆಸರು ಸಂಸಾರ! ತನ್ನ ಮಾಯಾ ಪ್ರಕೃತಿ ಕುಣಿಸಿದಂತೆ ಮಾನವ ಕುಣಿದ. ವಿಶ್ವಬ್ರಹ್ಮಾಂಡಗಳ ಹಡೆದ ಬಯಲೊಳಗೆ ನಾನು- ಮಾನವ ಬ್ರಹ್ಮ ಸಂಸಾರ ಹೂಡಿದ! ಹರವಿರ್ದ ಬಯಲಿಂಗೆ ಅಡ್ಡಗೋಡೆಯ ಕಟ್ಟಿ, ಮೇಲೆ ಚಪ್ಪರ ಹಾಕಿ ಬಯಲ ಹೊರಗಟ್ಟಿ ತನ್ನ ಸಂಸಾರ ಹೂಡಿದ, ಜಗವೆಲ್ಲ ತನಗನ್ಯ ಭಿನ್ನದಿರವಾಗಿ, ದ್ವೈತ ಭೂತಾಂಧತಮ ತಮದ ಪದರೊಳು ಹಾಯ್ದು ಈ ಅಲ್ಪ ಹಮ್ಮಿಂಗೆ ಹೊಡೆಯಿತ್ತು ಬ್ರಹ್ಮಗರ, ಅಹಂಭಾವದಿ ಬೆಳೆದು, ''ಜಗವೆಲ್ಲವನು ನುಂಗಿ ''ನಾನು'' ತುಂಬುವ ಭರ'' ವಾಗಿ ಪರಿಣಮಿಸಿತು. ಅನ್ನ, ಕಾಮಗಳ ಪ್ರಬಲೇಚ್ಛೆಗೆ ವಶನಾಗಿ, ಸ್ವಾರ್ಥಿಯಾದನು. ನಾಳೆ ನಾಡದು ಬೇಕು ಬಳಕೆಗೆಂದು ಸಂಗ್ರಹ ಪ್ರವೃತ್ತಿ ಬೆಳೆಸಿಕೊಂಡನು.

ಮುಂದೆ ಗುರುಚೆನ್ನನು ಇದೇ ಮಾತನ್ನು ಮುಂದುವರೆಸುತ್ತ, ಅಕ್ಕ ಮಹಾದೇವಿ ನುಡಿದ ಮಾತು ದಿಟವೆಂದು ಒಪ್ಪಿ, ದ್ವೈತ ಲೀಲೆಯ ನಾನು ಮಾನವನ ಹೋರಾಟ ಅವಿರತವಾಗಿ ನಡೆದುದನ್ನು ವಿವರಿಸುತ್ತಾನೆ. ಒಂದು ಪ್ರಾಣವು ಒಡೆದು ''ಎರಡು'' ಕೋಟಿಯ ಮಿಡಿತ, ತನುವೊಂದು ವಿಶ್ವತನು ಬೇರಾಗಿ, ನೀನು ಬ್ರಹ್ಮ ಪ್ರಾಣಗಳು ಆಡಿದವು. ಹೋರಾಟ ನಡೆಯಿತ್ತು ಹೊನ್ನಿಗೆ ಮಣ್ಣಿಗೆ! ನಾನು- ನಾನುಗಳೆಲ್ಲ ರಾಜ್ಯ ರಾಜ್ಯವ ಕಟ್ಟಿ, ಗೋಡೆಗಳ ಬಲವಾಗಿ ಬಿಗಿದು. ಅನ್ಯ ನಾನುಗಳನ್ನೆಲ್ಲ ವೈರಿಗಳ ಕುಲವೆಂದು ಒಳಗೊಳಗೆ ಬಗೆದು, ವಿಜೃಂಭಿಸಿದವು. ಇದಕ್ಕೆ ಕೀರ್ತಿಯ ಅಪೇಕ್ಷೆಯೊಂದು ಸೇರಿತು! ''ಕಲ್ಲು-ಕಟ್ಟಿಗೆಯೊಳಗೆ ನನ್ನ ಕೊರೆದಿಡಬೇಕು!'' ನಾನು ಹೋದರು ಸತ್ತು, ನನ್ನ ಸಾಯದ ಕೀರ್ತಿಗಾಗಿ ಮಾನವನು ಆಶೆ ಪಟ್ಟನು!'' ಜಗದ ಶಾಂತಿಯ ಕೆಡಿಸಿ ಹೆಸರೊದರಬೇಕು. ಅಧಿಕಾರ, ಪದವಿ, ಸನ್ಮಾನ - ಸತ್ಕಾರ, ಎಲ್ಲ ಎಲ್ಲರ ತಲೆಯ ಮೇಲೆ ಕಾಲಿಟ್ಟು, ಮಾನಮನ್ನಣೆ ಪೂಜೆ ನಡೆಯಬೇಕು! ಗೌರವಾನ್ವಿತ ಮೂರ್ತಿ ತಾ ಮೆರೆಯಬೇಕು! ಈ ಕೀರ್ತಿಯ ಜೊತೆಗೆ ''ನಾನು ಭಾವ''ವು ಸೂಕ್ಷ್ಮವಾಗಿ ಜಾತಿ, ಕುಲ, ಗುಂಪುಗಳಿಗೆ ವಿಸ್ತರಿಸಿತು. ನಾನುಗಳ ಗುಂಪು ''ಗುಂಪು ನಾನು''! ಕುಲ, ಜಾತಿ, ಆಶ್ರಮ, ಓಣಿ, ಊರು ನಾಡುಗಳ ದುರಭಿಮಾನವು ಕೂಡ- ಈ ''ನಾನಿನ'' ಪ್ರತಾಪವೇ! ಎಲ್ಲ ಅನರ್ಥಕ್ಕೆ ಕಾರಣವಾದ ಈ ನಾನು ಭಾವ (ಅಹಂಭಾವ) ದೇಶಪ್ರೇಮದ ಸೋಗನ್ನು ಧರಿಸಿತು. ತನ್ನದಲ್ಲದ ದೇಶವು ಪರದೇಶವಾಯಿತು; ಅದರಮೇಲೆ ಆಕ್ರಮಣ ಮಾಡುವದು ಪರಾಕ್ರಮವಾಯಿತು. ಇದರಿಂದ ದೇಶ- ದೇಶಗಳ ನಡುವೆ ರಕ್ತದ ಹೊಳೆ ಹರಿಸುವ ಯುದ್ಧಗಳು ಪ್ರಾರಂಭವಾದವು. ''ನಾನುಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೋರಾಟ ಸಹಜ ದಿನಚರಿಯಾಯ್ತು''! ಮಾನವದ ನಾನುಗಳ ಭೂಮಿಯ ಪುರಾಣ ಎಷ್ಟು ವಿಸ್ತಾರವಾಗಿದೆಯೆಂದರೆ, ಬಯಲೇ ಬಾಯಾಗಿ ಬ್ರಹ್ಮ ಬಣ್ಣಿಸಿದರೆ, ಆಕಾಶವೇ ಪತ್ರ, ಮೇರುವೇ ಕಂಠ ಹಿಡಿದು ತಾ ಬರೆದರೆ ಕೂಡ ಈ ಪುರಾಣವು ಮುಗಿಯಲಾರದು.

ಹೀಗೆ ''ಭವ್ಯ ಮಾನವ'' ಕಾವ್ಯದಲ್ಲಿ, ಮಾನವ ಕುಲದ ದುಃಖದ ಮೂಲ ಕಾರಣವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ದುಃಖದ ಕಾರಣವು ಹೊರಗೆ ಇಲ್ಲ; ಅದು ಮಾನವನ ''ನಾನು ಭಾವ'' (ಪ್ರತ್ಯೇಕಭಾವ) ದಲ್ಲಿದೆ. ತಾನೊಬ್ಬ ಬೇರೆ. ಉಳಿದ ಜಗತ್ತೆಲ್ಲ ಬೇರೆ- ಎಂಬ ತಪ್ಪು ತಿಳುವಳಿಕೆಯೆ ಎಲ್ಲಾ ಅನರ್ಥಕ್ಕೆ ಮೂಲ ಕಾರಣ! ''ಶಿವ ತಾನೆ ತಾನಾದ ದಿವ್ಯಾತ್ಮ ಪರಮಾತ್ಮ; ಒಡೆದೊಡೆದು ಚೂರಾಗಿ ಜೀವಾತ್ಮನಾದ'! (ಪುಟ 481) ಈ ತಪ್ಪು ತಿಳುವಳಿಕೆ, ಈ ಅಜ್ಞಾನ ಹೋಗಬೇಕು. ''ಎಚ್ಚರಾಗಿ, ನಾನೆಂಬ ಸಂಕೋಚ ನಿದ್ರೆಯನು ರೂಢಿಸಿ, ನನ್ನ ನಾನನು ತೆರೆದು ವಿಶ್ವವಿಸ್ತಾರಕ್ಕೆ ಮನ-ಬುದ್ಧಿ ಹೃದಯಗಳನ್ನು ತೆರೆದೊಡ್ಡಿ ಹರವಿದರೆ, ಕಾಣಬಹುದು ತಂದೇ, ಕಾಣಬಾರದುದು! ಕೇಳಬಹುದೈ, ತಂದೇ ಕೇಳಬಾರದುದು''. ಈ ಸಂದರ್ಭದಲ್ಲಿಯೇ ಅಕ್ಕಮಹಾದೇವಿ ತನ್ನ ವೈಯಕ್ತಿಕ ಮೋಕ್ಷದ ವಿಚಾರವನ್ನು ತೊರೆದು, ಮಾನವನ ದುಃಖ ನಿವಾರಣೆಗೆ ಅಣಿಯಾಗಲು, ಮಾನವರ ಮಧ್ಯದಲ್ಲಿದ್ದು ಸೇವೆ ಮಾಡಲು ನಿರ್ಧರಿಸುತ್ತಾಳೆ.

ಮಾನವನ ಲೋಕದೊಳಗೆ ನ್ಯಾಯ ಪಾಪ
ಜನನ ಮರಣದ ಭೀತಿ, ಸ್ವರ್ಗ ನರಕದ ಕಾಟ
ನೆಲದ ಮಾನವ ಕುಲವ ಕಾಡಿರುವ ಪರ್ಯಂತ
ಹಂಬಲಿಸಲೇಕಯ್ಯ ಬಯಲು ಬ್ರಹ್ಮಕ್ಕೆ?

ಇಷ್ಟಾದರೂ ಶಿಷ್ಯ ಗಿರಿಮಲ್ಲನು ಸಾಮಾನ್ಯ ಮಾನವನ ಪ್ರತಿನಿಧಿಯಾಗಿ ಸಂದೇಹಗಳನ್ನು ವ್ಯಕ್ತಪಡಿಸುತ್ತಾನೆ-- ''ದಿವ್ಯಕ್ಕೆ, ಭವ್ಯಕ್ಕೆ ಮಾನವನ ಮರ್ತ್ಯ- ಲೋಕವನ್ನೆತ್ತಿಕೊಂಡಯ್ಯ, ಶರಣ ಸಾಹಸ ಕಾಣುತಿದೆ ಹುಚ್ಚು ವ್ಯರ್ಥ!--------- ಮಾನವನ ಚಾರಿತ್ರ ಕೋಟಿ ಕಾಲದ ಡೊಂಕು. ಗಾಳಿಯನು ಬಲವಾಗಿ ಗುದ್ದಿ ಗುದ್ದಿ ಮೈ ಹಣ್ಣು ಮಾಡಿಕೊಳ್ಳುವ ಹದನು ಶರಣನದು!''

ಇದಕ್ಕೆ ಉತ್ತರವಾಗಿ ಗುರುಚೆನ್ನ, ಅಕ್ಕಮಹಾದೇವಿಯವರು ಅವನ ನಿರಾಶೆಯನ್ನು ನಿವಾರಿಸಿ, ''ಜಗದಗಲ ಹರಿದಿರುವ ಪಾಪವಾರಾಶಿಗೆ ಇದಿರಾಗಿ ಈಸಿದೆನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಶ್ಚಿದ್ ಧೀರ್; ತಾನು ಬ್ರಹ್ಮದ ತನ್ನ ನಿಜದ ನಿಲುಕಡೆಗೆ ಈಸಿದೆನು ಕಶ್ಚಿತ್ ಮಹಾಲಿಂಗ ಸಾಹಸಿ'' ಎಂದು ಭರವಸೆ ನೀಡುತ್ತಾರೆ. ಹಿಂದಿನ ಮಹಾಂತರು ಮರಣವನು ಮೀರಿ, ಮುಕ್ತಿಯೊಳು ನೆಲೆನಿಂದು, ನಿಜಭಕ್ತಿಯಾಚರಿಸಿ ಮೆರೆಯಲಿಲ್ಲವೇ? ಅವರಂತೆ ಜಗತ್ತಿನಲ್ಲಿಯ ದುಃಖಗಳು ಅನುಭವಿಸುವುದಕ್ಕೆ ಕಷ್ಟವೆನಿಸಿದರೂ, ಅವುಗಳಿಂದ ಮಾನವನಿಗೆ ತುಂಬಾ ಪ್ರಯೋಜನವಿದೆ!

ಬಂಡೆಕಲ್ಲಿನಲ್ಲಿ ಅನಂತಕಾಲ ಮಲಗಿರ್ದ ನಟರಾಜನ ಮೂರುತಿಯೇ ಸುತ್ತಿಗೆಯ ಉಳಿಯ ಮೊನೆಯೊಳಗೆ ಕೆತ್ತಿಸಿಕೊಂಡು, ಚಾಣದೊಳು ಹೊಡೆಸಿಕೊಂಡು, ನುಡಿಯಬಾರದ ಬವಣೆಗೆ ಒಳಗಾಗಿ, ನೊಂದ ಮೇಲೆಯೇ ಪ್ರಕಟವಾಗುವದಿಲ್ಲವೇ? ಆಗ ಬಂಡೆಗಲ್ಲು ಸತ್ತುಹೋಗಿ, ಒಳಗಿನಿಂದ ನಟರಾಜನ ದಿವ್ಯಮೂರ್ತಿ ಉದ್ಭವಿಸಿ ಹೊಳೆಯುವುದಿಲ್ಲವೆ? ಹಾಗೆಯೇ ಪ್ರಪಂಚದ ದುಃಖಗಳು ಮಾನವನನ್ನು ರೂಪಿಸುತ್ತವೆ. ಶ್ರೀ ರಾಮಚಂದ್ರ, ಹರಿಶ್ಚಂದ್ರ, ಸಿದ್ಧಾರ್ಥ ಮೊದಲಾದವರು ದುಃಖಗಳನ್ನು ಸಹಿಸಿಕೊಂಡೇ ದಿವ್ಯಕ್ಕೆ ಏರಲಿಲ್ಲವೆ? ಆದ್ದರಿಂದ ಧೀರನು ಜಗದ ದುಃಖಗಳಿಗೆ ಅಂಜಕೂಡದು, ನಿರಾಶನಾಗಕೂಡದು. ಸಂಸಾರ ಸಾಗರದ ನೊರೆ ತೆರೆಗೆ ಅಂಜಿ, ತಿಮಿಂಗಿಲು- ಮೊಸಳೆಗಳಿಗೆ ಅಂಜಿ, ಪಲಾಯನ ಮಾಡಬಾರದು. ಕಾವಿಯ ತೊಟ್ಟು ಕಾಡುಪಾಲಾಗಬೇಕಿಲ್ಲ.

ಈ ನೆಲಕೆ ಹೆದರಿ ಸ್ವರ್ಗಕೆ ಒಡೆಬೇಕಿಲ್ಲ
ಜಗದ ವಿಷಮಕೆ ಅಂಜಿ ಕಣ್ ಮುಚ್ಚಬೇಕಿಲ್ಲ.

ಮೃತ್ಯುಲೋಕದ ದುಃಖ, ಅಪೂರ್ಣತೆಗಳನ್ನು ಕಂಡು, ದುಃಖವಿಲ್ಲದ ಪರಿಪೂರ್ಣವಾದ ಇನ್ನೊಂದು ಸ್ವರ್ಗಾದಿ ಲೋಕವನ್ನು ಮಾನವನು ಕಲ್ಪಿಸಬೇಕಾಗಿಲ್ಲ. ಈ ಲೋಕವನ್ನೇ ಸತ್ಯ, ನಿತ್ಯ ಲೋಕವನ್ನಾಗಿ ಮಾಡಲು ಬರುತ್ತದೆ. ಬಸವಣ್ಣ ಬಂದು ನಿರ್ಭಯವ ತಂದಿದ್ದಾನೆ.; ಮರ್ತ್ಯಲೋಕಕ್ಕೆ ಸತ್ಯ ನಿತ್ಯಾಮೃತವ ತಂದಿದ್ದಾನೆ. ಉಳಿದ ಶಿವಶರಣರೂ ವಿಶ್ವದ ಮಹಾನುಭಾವರಾದ ಕ್ರಿಸ್ತ, ಬುದ್ಧ, ತೀರ್ಥಂಕರರು ಮೊದಲಾದ ಅನೇಕ ಮಹಾಂತರು ಆ ದಿವ್ಯದ ದಾರಿಯನ್ನು ತೋರಿದ್ದಾರೆ. ಆ ದಾರಿಯನ್ನು ಎಲ್ಲರೂ ಅನುಸರಿಸಿ ಭವ್ಯಮಾನವರಾಗಬೇಕು. ಇಹಕೆ ದಿವ್ಯತೆಯನ್ನು ತರಬೇಕು. ಎಂಬ ಆಶೆಯ ಉದಯವನ್ನು ''ಉದಯಕಾಂಡ'' ವು ಪ್ರಭಾವಶಾಲಿಯಾಗಿ ಚಿತ್ರಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8796

ಉಜ್ವಲ ಕಾಂಡ

ರಾಮಕೃಷ್ಣ. ಎಮ್. ಮರಾಠೆ

ಪ್ರಾ : ಸಂಶಿ. ಭೂಸನೂರಮಠರ 'ಭವ್ಯ ಮಾನವ' ಮಾನವ ಕುಲಕೋಟಿಗೆ ಬೆಳಗು ಮೂಡಿಸಲು ಬಂದ ದಾರ್ಶನಿಕ ಮಹಾಕಾವ್ಯ. ಮಾನವನೇ ಈ ಕಾವ್ಯದ ಮಹಾನಾಯಕ. ಅವನ ವ್ಯಕ್ತಿತ್ವ ವಿಲಾಸದ ವಿರಾಟ ಸ್ವರೂಪವನ್ನು ಪ್ರದರ್ಶಿಸುವ ಈ ಕಾವ್ಯ ಕನ್ನಡಕ್ಕಷ್ಟೇ ಅಲ್ಲ; ವಿಶ್ವ ಸಾಹಿತ್ಯದ ವಿಶಿಷ್ಟ ಕೃತಿಗಳ ಸಾಲಿಗೆ ಸೇರುವ ಶ್ರೇಷ್ಠ ಕೃತಿ. ಆಧ್ಯಾತ್ಮ ರಂಗದ ಜಟಿಲವಾದ ವಿಚಾರ ವಿವೇಚನೆಗಳನ್ನು ಕಾವ್ಯಕಲೆಯ ಹಂದರದಲ್ಲಿ ಹೆಣೆದು ಮಾನವನ ಭವ್ಯತೆಯ ವೈಭವವನ್ನು ಅತ್ಯಂತ ಸುಂದರ ಹಾಗೂ ಸುಭಗತೆಯಿಂದ ನಿರೂಪಿಸುವ ಈ ಕೃತಿ, ಕನ್ನಡ ಕಾವ್ಯ ಲೋಕದ ಅಪೂರ್ವ ಕೊಡುಗೆ. ದಾರ್ಶನಿಕರು, ಸಂತರು, ಶರಣರು ಸಾರಿದ ವಿಶ್ವ ಮಾನವನ ಸಂದೇಶಕ್ಕಿಂತಲೂ ಈ ಕಾವ್ಯ ಪ್ರಕಟಿಸುವ ವಿಶ್ವಮಾನವ ತತ್ವ ವಿಶಿಷ್ಟ ಹಾಗೂ ವಿಶಾಲವಾಗಿದೆ. ವಿಶ್ವವನ್ನೇ ವ್ಯಾಪಿಸಿ, ವಿಶ್ವವನ್ನೇ ತನ್ನೊಳಗಿರಿಸಿಕೊಂಡು ಗಾಳಿ- ಬೆಳಕು, ನೀರು-ನೆಲ- ಮುಗಿಲಿನ ಜೊತೆ ಸಹಬಾಳ್ವೆಯಿಂದ ಸಂಸಾರ ಸಾಗಿಸುವ 'ಇಲ್ಲಿಯ ವಿಶ್ವಮಾನವ ಕೇವಲ ಮಾನವಕೋಟಿಯನ್ನು ಪ್ರೀತಿಸುವ, ಪ್ರಾಣ-ಪ್ರಪಂಚದ ಬಗೆಗೆ ಮಾತ್ರ ಅನುಕಂಪ ಪಡುವ ವ್ಯಕ್ತಿಯಲ್ಲ; ಮನುಷ್ಯ ಪಶು- ಪಕ್ಷಿ, ವೃಕ್ಷ-ಲತೆ, ಕಲ್ಲು-ಮಣ್ಣು, ನೀರು- ಗಾಳಿ- ಬಿಸಿಲು, ಛಳಿ- ಮಳೆ------- ಇತ್ಯಾದಿ ಸಕಲ ಜಡಚೇತನಗಳ ಬಗೆಗೆ ಆದರ ಅಭಿಮಾನ, ಪ್ರೀತಿ- ವಿಶ್ವಾಸ, ಭಕ್ತಿ- ಪ್ರೇಮ, ಪೂಜ್ಯ ಭಾವನೆಯನ್ನು ತಾಳಿ, ಇವೆಲ್ಲವುಗಳ ಜೊತೆ ಸಂಬಂಧಹೊಂದಿದ ಮಹಾ ಮಾನವ. ಸೃಷ್ಟಿಯ ಎಲ್ಲ ವಸ್ತುಗಳ ಕೂಡುವಿಕೆಯೇ ಈ ವಿಶವ್ವಮಾನವನ ಲಕ್ಷಣ. ವಿಶ್ವ ಮತ್ತು ಇವನ ಸಂಬಂಧ ಬಿಚ್ಚಿ ಬೇರೆ ಮಾಡಲುಬಾರದ ಅವಿನಾಭಾವ ಸಂಬಂಧ. ಇಲ್ಲಿ ಎಲ್ಲರೂ ಒಂದೇ. ಈ ಒಂದು ತಾನು ಎಲ್ಲವೂ ಎಲ್ಲರೂ ಆಗಿದೆ.' (ಡಾ. ವೀರಣ್ಣ ರಾಜೂರ: ಬಸವಪಥ- 7-15, ಪುಟ- 12) ಕವಿಗಳು ಕಂಡ ಮಾನವನ ಈ ಘನಗಂಭೀರವಾದ ಮಹೋನ್ನತ ದರ್ಶನವು ಕಾವ್ಯದ 832 ಪುಟಗಳ ತುಂಬ ಹರವುಗೊಂಡು, ಗಾತ್ರ- ಪಾತ್ರಗಳೆರಡರಲ್ಲೂ ಭವ್ಯತೆಯನ್ನು ಮೆರೆದಿದೆ. ಹನ್ನೆರಡನೆಯ ಶತಮಾನದ ಹಿನ್ನೆಲೆ, ಮಹಾದೇವಿಯಕ್ಕನ ನಾಯಕತ್ವ, ಶರಣರ ಅನುಭಾವದ ನುಡಿಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡ ಈ ಕಾವ್ಯ ಅವೆಲ್ಲವುಗಳನ್ನು ಮೀರಿದ ದೇಶ- ಕಾಲ- ಮತಗಳಿಗೆ ಅತೀತವಾದ ಮಾನವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

- ಮಹಾಚೇತನದ ಮಹತಿಯನ್ನು ಕುರಿತು ಹಾಡುತ್ತದೆ. ಕವಿಗಳೇ ಹೇಳುವಂತೆ, 'ಲಕ್ಷಾಂತರ ವರುಷಗಳ ಹಿಂದೆ ಮಣ್ಣಿನಲ್ಲಿ ಒಡೆದು ಮೂಡಿ ಇಂದಿನವರೆಗೆ ಸತ್ತು - ಹುಟ್ಟಿ ಬೆಳೆಯುತ್ತ ಬಂದಿರುವ, ಮತ್ತು ಮುಂದೆ ಬೆಳೆಯಲಿರುವ ಮಾನವನೆ ಈ ಮಾನವ ಮಹಾಕಾವ್ಯದ ಸ್ವತಂತ್ರ ನಾಯಕ. ಈತನ ರಂಗಸ್ಥಲ ವಿಶಾಲವಾದ ವಿಶ್ವ ಪ್ರಪಂಚ. ಈತನು ಆಡಿದ, ಆಡುತ್ತಿರುವ ಆಡಲಿರುವ ಕಾಲಕ್ಕೆ ಪರಿಧಿಯಿಲ್ಲ. ಈತನ ನಾಟಕ ವಿಲಾಸ ಅನಂತ ವಿಧ; ಹೆಣ್ಣು- ಗಂಡೆನ್ನದೆ, ಜಾತಿ-ಕುಲ ದೇಶ- ಭಾಷೆ- ಧರ್ಮ- ಜನಾಂಗವೆನ್ನದೆ' ಮಾನವನ ವಿಶ್ವವ್ಯಕ್ತಿತ್ವವನ್ನು ಸಾಕ್ಷಾತ್ಕರಿಸುವ 'ಭವ್ಯ ಮಾನವ' ಒಂದು ಮೇರು ಕೃತಿಯಾಗಿದೆ.

ಆರು ಕಾಂಡಗಳಲ್ಲಿ ಹರವುಗೊಂಡ ಕಾವ್ಯದ ಮೊದಲಿನದು ಕಲ್ಯಾಣಕಾಂಡ. ಇದರಲ್ಲಿ ಮಹಾದೇವಿಯಕ್ಕನ ಜನನ- ಬಾಲ್ಯದ ವಿವಿಧ ಲೀಲೆಗಳ ವರ್ಣನೆಯಿದೆ. ಗುರುಚೆನ್ನಮಲ್ಲಯ್ಯನ ದೀಕ್ಷೆಯ ಪರಿಣಾಮವಾಗಿ ಮಹಾದೇವಿಯಕ್ಕ ಬೆಳೆಯುತ್ತಲೆ ಅವಳಲ್ಲಿ ಶಿವಭಕ್ತಿ ಬೆಳಗುತ್ತದೆ. ಮುಂದೆ ಚೆನ್ನಮಲ್ಲಿಕಾರ್ಜುನನೆ ಪತಿಯೆಂದು, ಕಾಯವಿಕಾರ ಕಳೆದು, ದಿಗಂಬರೆಯಾಗಿ ಶರಣರ ಕಲ್ಯಾಣದ ಅನುಭವ ಮಂಟಪಕ್ಕೆ ಬರುತ್ತಾಳೆ. ಶರಣರ ಅನುಭಾವದ ಬೆಳಕಲ್ಲಿ ಶಿವಭಕ್ತಿಯ ಕಳೆಯಾಗಿ ಬೆಳಗುತ್ತಿರಲು 'ವಿಶ್ವ ಕಲ್ಯಾಣದ ದಾಸೋಹವಾಗು ಮಗಳೆ' ಎಂಬ ಶರಣರ ನುಡಿ ಕೇಳಿ ಅಕ್ಕ ಶ್ರೀಶೈಲ ಮಾರ್ಗ ಕ್ರಮಿಸುತ್ತಾಳೆ. ಶ್ರೀ ಶೈಲಕಾಂಡದಲ್ಲಿ ಮಹಾದೇವಿಯಕ್ಕ ಕಾಡಡವಿ- ಗುಡ್ಡ ಗಂವ್ಹರಗಳನ್ನು ಸುತ್ತುತ್ತ ಗಿಳಿ, ಕೋಗಿಲೆಗಳಿಗೆ, ಮಲ್ಲಿಕಾರ್ಜುನನ ಠಾವು ಕೇಳುತ್ತಾ ನಡೆದಿರಲು ಮಾರ್ಗದಲ್ಲಿ ಗುರು ಚೆನ್ನಮಲ್ಲಯ್ಯ, ಗಿರಿಮಲ್ಲಯ್ಯ ಭೆಟ್ಟಿಯಾಗುತ್ತಾರೆ. ತನ್ನಲ್ಲಿ ಶಿವಭಕ್ತಿಯ- ಬೀಜವನ್ನು ಬಿತ್ತಿ ಬೆಳೆಸಿದ ಗುರುದರ್ಶನದಿಂದ ಪುನೀತಳಾದ ಅಕ್ಕ, ಅವರ ಆಹ್ವಾನದಂತೆ ಲೋಕ ಕಲ್ಯಾಣಯಾತ್ರೆಗೆ ಸಿದ್ಧಳಾಗುತ್ತಾಳೆ. ಇದರ ಮುಂದಿನ ಕಾಂಡವೆ ಕತ್ತಲೆ ಕಾಂಡ. ಇಲ್ಲಿ ದುಃಖಕೋಟಿಗಳ ಜೀವಂತ ದರ್ಶನವಿದೆ. ಮನುಕುಲದ ಹುಟ್ಟು- ಸಾವಿನ ಸಮಸ್ಯೆ, ಅನ್ಯಾಯ, ಅತ್ಯಾಚಾರ, ರೋಗ- ರುಜಿನ, ಮೋಸ- ಕಪಟ, ಬಡತನ -ಸಿರಿತನ, ಮುಂತಾದ ದ್ವೈತದಾಡಂಬರದ ದುಃಖಮಯ ಲೋಕ ಗುರು ಮತ್ತು ಮಹಾದೇವಿಯಕ್ಕನ ಅಂತಃಕರುಣ ತಟ್ಟುತ್ತದೆ. ಕತ್ತಲೆಯ ಲೊಕದಲ್ಲಿ ಬೆಳಗು ಮೂಡಿ ಬರುವ ಚಿತ್ರ ಉದಯಕಾಂಡದಲ್ಲಿದೆ. ಬೆಳಗಿನ ಬೀಜವಾದ ಮಹಾಬೆಳಗಿನ ವಿಸ್ತಾರ ಉಜ್ವಲಕಾಂಡದಲ್ಲಿ ಪ್ರಜ್ವಲಿಸಿಡೆ. ಮಾನವ, ತನ್ನೊಳಗೆ ಹುದುಗಿದ ದಿವ್ಯ ಶಕ್ತಿಯ ಬಗೆಗೆ ತಾಳಿದ ದಿವ್ಯ ನಿರ್ಲಕ್ಷ ಅಥವಾ ಅಜ್ಞಾನವನ್ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಂಧಕಾರವೆಂದೂ, ತನ್ನತನದ ಬಗೆಗಿನ ಅರಿವು ಅಥವಾ ಸುಜ್ಞಾನವನ್ನೇ 'ಬೆಳಗು' ಎಂದೂ ಸಾಮಾನ್ಯವಾಗಿ ವಿವರಿಸಬಹುದು, ಆದರೆ, ಇಲ್ಲಿ ಕವಿಗಳು ಮಾನವನ ಅಂತರಂಗದ ಅರಿವು, ಬೆಳಗಿನ ಬಗೆಗೆ ಕೊಡುವ ಚಿತ್ರ ಅಮೋಘವಾಗಿದೆ! ಸೂರ್ಯಚಂದ್ರರ ಬೆಳಕಿಗೂ ಬೆಳಕು ಕೊಡುವ, ಮತ್ತು ಅನಂತಕೋಟಿ ಸೂರ್ಯರ ಬೆಳಕನ್ನು ಮೀರಿಸುವ ಮಾನವನಂತರಂಗದ ಬೆಳಗು, ವೈಭವ ಈ ಕಾಂಡದ ತುಂಬ ವಿಜೃಂಭಿಸಿದೆ. ಆದರೆ ಈ ಬೆಳಗಿನ ಮಹಾಂತದರ್ಶನಕ್ಕಿರುವ ಅಡ್ಡಿ - ಆತಂಕಗಳ ಬಗೆಗೂ ಕಾವ್ಯದ ಚಿಂತನೆ ಹೃದಯಸ್ಪರ್ಶಿಯಾಗಿದೆ. ಅರಿವು ಇರವಿನ ಸಮಸ್ಯೆ- ಸುಖ, ದುಃಖಗಳ ಸಂಬಂಧ, ವ್ಯಷ್ಟಿ- ಸಮಷ್ಟಿಯ ಸಾಮರಸ್ಯದ ತೊಡಕುಗಳು, ಭವಿಸುಟ್ಟು ಭಕ್ತನು ಬೆಳಗುವ ಪರಿ, ಉಜ್ವಲಕಾಂಡದ ತುಂಬ ಪರಿಣಾಮಕಾರಿಯಾಗಿ ಮೂಡಿದೆ.

ಮಹಾದೇವಿಯಕ್ಕ- ಗುರುಚೆನ್ನಮಲ್ಲಯ್ಯ- ಗಿರಿಮಲ್ಲಯ್ಯರ ಲೋಕಕಲ್ಯಾಣ ಯಾತ್ರೆ ಮುನ್ನಡೆದಿದೆ. ಬೆಳಗು ನುಂಗಿದ ಕತ್ತಲೆಯ ರಹಸ್ಯ ಭೇದಿಸಿ, ಬೆಳಗಿನತ್ತ ಸಾಗಿದ್ದಾರೆ. ಅರಿವಿರುವಿನ ಸಾಮರಸ್ಯದಿಂದ ವಿಶ್ವಕಲ್ಯಾಣದ ಮಹಾಮೂರ್ತಿಗಳಾಗಿ ಬೆಳಗುತ್ತಿರುವ ಗುರು ಮತ್ತು ಮಹಾದೇವಿಯಕ್ಕನ ಅನುಭಾವ, ಗಿರಿಮಲ್ಲಯ್ಯನನ್ನು ಬೆರಗುಗೊಳಿಸಿದೆ. ಸಾಮಾನ್ಯ ಜನರ ಪ್ರತಿನಿಧಿಯಾದ ಅವನಿಗೆ ತನ್ನ ಜನಕೋಟಿಯ ದುಃಖಗಳ ಕಾರಣ ತಿಳಿಯಬೇಕಿದೆ. ಗಿರಿಮಲ್ಲಯ್ಯ ಸಾಮಾನ್ಯನಾದರೂ ಗುರುವಿನ ಸಂಗದಲ್ಲಿ ಅವನ ಅರಿವು ಎಚ್ಚತ್ತಿದೆ. ಈ ಜಗದ ದುಃಖರಾಶಿಯ ಕಾರಣ ಹುಡುಕುವ ಅವನ ಪ್ರಯತ್ನದಲ್ಲಿ ಪ್ರಜ್ಞೆಯ ಪ್ರಕಾಶ ಬೆಳಗುತ್ತಿದೆ. ಭಕ್ತನ ಪ್ರಶ್ನೆ ಗುರುವಿನ ಅಂತಃಕರಣ ಕಲಕಲು; ಭೂಲೋಕದ ಮೇಲೆ ಬೆಳಕು ಮೂಡಿ ಬಂದ ಸತ್ಯಕಥೆಯೊಂದು ಉದ್ಧೃತಗೊಳ್ಳುತ್ತದೆ. ಯಾವುದನ್ನು ಗಿರಿಮಲ್ಲಯ್ಯ ದುಃಖಮಯವೆಂದು ತಿಳಿದಿದ್ದನೋ ಅದರೊಳಗಿಂದಲೇ ಸತ್ಯನೂತನಲೋಕ ಸೃಷ್ಟಿಗೊಂಡು ಬರುವುದನ್ನು ಶರಣರ ಕಥೆಗಳ ಮೂಲಕ ಗುರು ವಿವರಿಸುತ್ತಾನೆ. ವರ್ಗ - ವರ್ಣ- ಲಿಂಗ, ಜಾತಿಗಳ ಭೇದಗಳಿಂದ ಜರ್ಜರಿತವಾದ ಜಗದಲ್ಲಿ - ಬಸವಾದಿ ಶಿವಶರಣರು- ಪ್ರಭುಲಿಂಗ, ಚೆನ್ನಬಸವಣ್ಣ, ಮಡಿವಾಳಯ್ಯ, ಅಪ್ಪಣ್ಣ, ಸೊಡ್ಡಳ ಬಾಚರಸ, ಘಟ್ಟಿವಾಳಯ್ಯ, ಲಿಂಗಮ್ಮ, ನೀಲಮ್ಮ, ಅಕ್ಕನಾಗಮ್ಮ ಮುಂತಾದವರ ಭಕ್ತಿ ಬೆಳಕಿನ ಶಕ್ತಿಯಾಗಿ ಹರಿಯಲು ನೆಲೆದ ಮೇಲೆ ನೆಲೆಗೊಳ್ಳುವ ಸತ್ಯಲೋಕದ ಚಿತ್ರವಿಸ್ತಾರ ಗುರುಚೆನ್ನಮಲ್ಲಯ್ಯನ ಸಹಜ ನುಡಿಯಿಂದಲೇ ಆಲಿಸಬೇಕು;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಸ ಹೊಸತು ಹೊಸ ಹೊಸತು ಹೊಚ್ಚ ಹೊಸತು
ಸತ್ಯ ನೂತನ ಸೃಷ್ಟಿ ಶಿವಮಾನವಲೋಕ.
ಶಿವನಂಶ ತಾನೆಂಬ ಜಗದೊಳಗೆ ಶಿವನೆಂಬ
ಅನುಭಾವ ಕಂದೆರೆಯಿತಿಲ್ಲ;
ಜಗದೊಳಗೆ ತಾನು ತನ್ನೊಳಗೆ ದೇವ
ಜಗವೆಲ್ಲ ತಾನೆಲ್ಲ ಶಿವನೊಳಗೆ ನಿಂದಿಹುದ
ಶಿವಕಳೆಯು ನಸುಕಾದ ಪ್ರತ್ಯಕ್ಷ ಬೆಳಗಿನೊಳು'..

ಹೀಗೆ ಹನ್ನೆರಡನೆಯ ಶತಮಾನದಲ್ಲಿ ಶರಣಚೇತನಗಳ ವಿಶ್ವ ಜೀವನದಿಂದ ಧರೆಯ ಮೇಲೆ ಕೈಲಾಸವೇ ನಿರ್ಮಾಣವಾಯಿತು. ಮಾನವ-ಮಹಾದೇವನಾಗಿ ನಿಲ್ಲುವ ಈ ಲೀಲೆ ಅದೆಷ್ಟು ಜನರಿಗೆ ಗೊತ್ತಿದೆ? ಲೋಗರಿಗೆ ವಿಚಿತ್ರವೆನಿಸುವ, ತೇಲುಗಣ್ಣವರಿಗಂತೂ ಕಾಣದಿರುವ ಈ ಶಿವಲೋಕದ ಸೌಂದರ್ಯ ಅನುಭವಕ್ಕೆ ಬರಬೇಕೆಂದರೆ- ಮಾನವನೊಳಗಿನ ಶುದ್ಧ ಚೇತನದ ಅರಿವು ಜಾಗೃತವಾಗಬೇಕು. ಈ ವಿಚಾರಗಳನ್ನು ಕವಿಗಳು ಮಹಾದೇವಿಯಕ್ಕನ ಮೂಲಕ ಹಾಡಿಸಿದ್ದಾರೆ.

'ಹೊರಗು ಒಳಗನೆ ನುಂಗಿ ಬೆಳಗಿರುವತೀತ
ಕಾಂಬರೆ ಆಚೆಗಣ್ ಬೇಕಲ್ಲವೆ ತಂದೆ?

ಅರಿವಿನ ಅರ್ಹತೆಯನ್ನು ಆಹ್ವಾನಿಸುವ ಕಾವ್ಯ ಪರಸ್ಪರ ಚಿಂತನ, ದರ್ಶನ, ವಿಮರ್ಶನಗಳ ಪ್ರಜ್ಞಾಪರಿಸರವನ್ನು ನಿರ್ಮಿಸುತ್ತದೆ. ಸರ್ವಸಾಮಾನ್ಯರ ಪ್ರತೀಕ ಗಿರಿಮಲ್ಲಯ್ಯನು ಸಾಮಾನ್ಯಸ್ತರದಿಂದ ಬ್ರಹ್ಮಭವ್ಯತೆಯ ಮಹೋಜ್ವಲ ಸ್ಥಲಕ್ಕೇರಲು ಕಾವ್ಯ ಒದಗಿಸಿದ ವಿಚಾರ ಸ್ವಾತಂತ್ರ್ಯವೇ ಕಾರಣ. ಹೀಗಾಗಿ ಗಿರಿಮಲ್ಲಯ್ಯನ ಮೂಲಕ ಓದುಗರೆಲ್ಲರೂ ಕಾವ್ಯದ ಪಾತ್ರಗಳಾಗಿ ಪರಿಣಮಿಸಿ ತಮ್ಮನ್ನು ಆತ್ಮೀಯವಾಗಿ ತೊಡಗಿಸಿ ಕೊಳ್ಳುತ್ತಾರೆ.

ಗುರುಚೆನ್ನಮಲ್ಲಯ್ಯ ಮುಂದೆ ಮನ- ಭಾವ- ಬುದ್ಧಿಗಳ ಸಹಜ ಸ್ಥಿತಿ ಕುರಿತು ಶುದ್ಧ ಚೇತನಾತ್ಮಕರ ಆದರ್ಶವನ್ನು ನಿರೂಪಿಸುತ್ತಾನೆ. ಹೆಣ್ಣು- ಮಣ್ಣು - ಹೊನ್ನಿಗೆ ಅಂಜಿ ಕಾವಿಯನ್ನು ಧರಿಸುವ, ಕಾಡನ್ನು ಸೇರುವ ಸನ್ಯಾಸಿಗಳ ಸಾಧನೆ ಏನು? ಎಂದು ವಿಚಾರಿಸುತ್ತ 'ಏನು ಕಂಡರು ಇವರು? ಕಾಣಲಿಲ್ಲ ಜಗವ!' ಪ್ರಕೃತಿ ಸಹಜ ಭಾವನೆಗಳನ್ನು ಶಿಕ್ಷಿಸಿ ಸನ್ಯಾಸಿಗಳು ಅನುಸರಿಸುವ ಜೀವನವಿರೋಧಿ ನೀತಿಯನ್ನು ವಿವರಿಸುತ್ತಿರಲು ಗಿರಿಮಲ್ಲಯ್ಯನಿಂದ ಉದ್ಭವಿಸುವ ಪ್ರಶ್ನೆಯಿಂದ ಕಾವ್ಯ ಬೇರೊಂದು ಚಿಂತನೆಯತ್ತ ಮುಖ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿರುಗಿಸುತ್ತದೆ. ಜ್ಞಾನಿಗಳು- ಅನುಭಾವಿಗಳು ಮೈಮರೆತು ಮಾನವ ಸಹಜ ಪ್ರವೃತ್ತಿಗಳ ಸೆಳುವಿಗೆ, ವಿಷಯಾಸಕ್ತಿಗಳ ಬಲುಮೆಗೆ ಸಿಲುಕಿಸರೆ ಶರಣರ ಆದರ್ಶ ಕೇವಲ ಪ್ರಣಾಳಿಕೆಯ ಪ್ರಚಾರವಾಗುವುದಿಲ್ಲವೆ? 'ನಾಲಿಗೆಯ ಮಾತಿಂಗೆ ಕಾಲೊಳಗೆ ಗತಿಯುಂಟೆ?' ಎಂದು ಗಿರಿಮಲ್ಲಯ್ಯ ಕೇಳುವ ಪ್ರಶ್ನೆಯಲ್ಲಿ ಅಜ್ಞಾನಕ್ಕೆ ಜಾರಬಹುದಾದ ಜ್ಞಾನಿಗೆ ಎಚ್ಚರಿಕೆ ಗಂಟೆಯಿದೆ.

ಮಹಾದೇವಿಯಕ್ಕನಿಂದಲೂ ಈ ಸಂಗತಿ ಸಮರ್ಥಗೊಳ್ಳುತ್ತದೆ. 'ಮಧ್ಯಾಹ್ನದಿಂ ಮೇಲೆ ಹಿರಿಯರಿಲ್ಲ, ಅಸ್ತಮಾನದ ಮೇಲೆ ವಿಜಿತೇಂದ್ರಿಯರು ಇಲ್ಲಾ, ನುಡಿವೀರನಾಗಿ ನಡೆವೀರನಾಗದೆ ಹೋದರೆ ಕಲ್ಯಾಣಲೋಕದ ಗತಿಯೇನು? ಎಂಬ ಗಹನ ಚರ್ಚೆ ಬಿಚ್ಚಿಕೊಳ್ಳಲು ಗುರುಚೆನ್ನ ಮಲ್ಲಯ್ಯನಿಂದ ಕವಿಗಳು ದಾರಿ ತೋರಿಸಿದ್ದಾರೆ. ಜೀವನದ ಮೂಲಭೂತ ಸಮಸ್ಯೆಗಳ ಬಗ್ಗೆ, ಸಾಧಕರಿಗೊದಗುವ ಅಗ್ನಿದಿವ್ಯಗಳ ಬಗ್ಗೆ ಕಾವ್ಯ ಮುಖಾಮುಖಿಯಾಗಿ ಚರ್ಚಿಸುತ್ತದೆ. ಒಂದು ಚೇತನ ಮಹಾಚೇತನವಾಗಿ ವಿಶ್ವವ್ಯಕ್ತಿತ್ವವನ್ನು ಭರಿಸಲು ಹೊರಟಾಗ; ಒದಗುವ ಕಷ್ಟಗಳು, ಕಾಡುವ ಪ್ರಶ್ನೆಗಳು, ವಿಪರೀತ ಸಂಶಯ ವಿರೋಧಾಭಾಸಗಳು- ಇವುಗಳಿಗೆ ಲೆಕ್ಕವಿಲ್ಲ. ಇವುಗಳಿಂದ ಪಾರಾಗಿ ವ್ಯಕ್ತಿ ವಿಶ್ವಜೀವನಕ್ಕೇರಲು ಕಾವ್ಯ ದಾರಿ ತೋರುವ ಬಗೆ ಮನನೀಯ.

'ನನಗೆ ಬೇಕೆಂಬ ಸುಖ ಎಂದಿಗೂ ಬೇಡ
ಏನಿದ್ದರೂ ಬೇಡ ಯಾರು ಕೊಟ್ಟರೂ ಬೇಡ.

ಸಂತರ ಶರಣರ, ವಿಶ್ವದ ಅನುಭಾವಿಗಳ ಅನುಭಾವದ ನೆಲೆಗಟ್ಟಿನ ಮೇಲೆ ಮತ್ತು ಸ್ವಾನುಭವದ ಬೆಳಕಿನಲ್ಲಿ ಕವಿಗಳು ಕಂಡುಕೊಂಡ ಸತ್ಯದಶೋಧ ಇಲ್ಲಿ ಹಾಡಾಗಿ ಹರಿದಿದೆ. ಸಹೃದಯರು ಮೆಚ್ಚಿ ತಲೆದೂಗುವಂತೆ ಗುರುಚೆನ್ನಮಲ್ಲಯ್ಯ ಪ್ರಾಸಾದಿಕ ನಿಲುವನ್ನು ಸಾರುತ್ತಾನೆ. ತಾನು- ತನ್ನಿಂದ- ತನಗೆ ಎಂಬ ತನ್ನತನ ಅಳಿದು ಮನುಷ್ಯ ಚೇತನ ಪರಹಿತದತ್ತ ತುಡಿಯಬೇಕು. ಮಹಾದೇವಿಯಕ್ಕನ ಅನುಭಾವದ ಹಾಡೊಂದು ಇದಕ್ಕೆ ಪುಷ್ಟಿ ನೀಡುತ್ತ ಅಂತರಂಗವನ್ನು ಆವರಿಸುತ್ತದೆ- 'ಮನೆ ಮನೆ ತಿರುಗಿ ಬೇಡುವಂತೆ ಮಾಡು, ಬೇಡಿದರೆ ಇಕ್ಕದಂತೆ, ಇಕ್ಕಿದರೆ ನೆಲಕೆ ಬೀಳುವಂತೆ, ನೆಲಕ್ಕೆ ಬಿದ್ದ ಭಿಕ್ಷಾನ್ನ ತಾನೆತ್ತಿಕೊಳ್ಳುವ ಮೊದಲು ಶುನಿಯೆತ್ತಿಕೊಳಲಿ' ಆಶೆ ಆಮಿಷಗಳಿಗಾಗಿ ಕಚ್ಚಾಡುವ ಈ ಅಶಾಂತಮಯ ಜಗತ್ತಿನಲ್ಲಿ ಅಕ್ಕನ ವಚನ ಬೆಳಗುಲಿಂಗ ವಾಗಿರುವುದನ್ನು ಗುರು ಸಪ್ರಮಾಣವಾಗಿ ನಿರೂಪಿಸುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದೆ ಸುಖ ದುಃಖಗಳ ಸೂಕ್ಷ್ಮಾತಿಸೂಕ್ಷ್ಮಗಳ ವಿವೇಚನೆಗಳಿಂದ ಉಜ್ವಲ ಕಾಂಡದ ವಿಷಯ ಕುತೂಹಲಪೂರ್ಣವಾಗಿ ಮುಂದುವರಿಯುತ್ತದೆ. 'ಸುಖವತ್ತುದೇ ದುಃಖ! ದುಃಖ ನಕ್ಕುದೇ ಸುಖ'! ಎಂದು ಮಹಾದೇವಿಯಕ್ಕ ಸುಖ- ದುಃಖಗಳಿಗಿರುವ ಸೂಕ್ಷ್ಮ ಸಂಬಂಧವನ್ನು ಪ್ರಸ್ತಾಪಿಸಿ- ಉಂಬ ತೃಪ್ತಿಯ ಸುಖಕೆ ಹಸಿವು ಆಧಾರ........ ಬಡತನದ ಮನೆಗೆ ಬರುವ ಸಿರಿ ಸ್ವರ್ಗ ಹೀಗೆ ಅವುಗಳ ತೊಡಕನ್ನು ಸ್ಪಷ್ಟಪಡಿಸುತ್ತಾಳೆ. ಇದಕ್ಕೆ ಗಿರಿಮಲ್ಲಯ್ಯನ ಪ್ರತಿಕ್ರಿಯೆ ಆಶ್ಚರ್ಯಕರವಾಗಿದೆ. ಸುಖ- ದುಃಖಗಳ ಅನುಭವ ವ್ಯಕ್ತಿಗತವಾದದ್ದೆಂದು ಹೀಗೆ ಹಾಡುತ್ತಾನೆ.

'ಕಾಗೆ ಕಂಡಿತು ಬೇವಿನೊಳಗಮೃತ ಫಲವ
ಕಂಡಿತ್ತು ಮಾವಿನೊಳು ಗಿಳಿಯಮೃತ ರುಚಿಯ
----- ------ -------- --------
ಕವಿಯ ಕಣ್ಣಿಗೆ ಸುಖದ ಸುಗ್ಗಿ ನೆಲ- ಮುಗಿಲು
ಸಾಮಾನ್ಯ ದೃಷ್ಟಿಗೆ ಹಾಳು ಮಣ್ಣು' ಹೀಗೆ ವಿಭಿನ್ನ ರುಚಿಗಳ ವಿಭಿನ್ನ ವ್ಯಕ್ತಿತ್ವಗಳ ಸಮಾಜದಲ್ಲಿ ಸುಖ- ದುಃಖಗಳ ಅನುಭವ ಎಂಥ ವಿಚಿತ್ರವಾಗಿದೆ- ಎಂಬುದು ಗಿರಿಯಯ್ಯನ ಹಾಡಿನಲ್ಲಿ ಮೂಡಿನಿಂತಿದೆ. ಚರ್ಚೆಗೆ ಪೂರಕವೆನ್ನುವಂತೆ ಗುರುಚೆನ್ನಮಲ್ಲಯ್ಯ ಸುಖ- ದುಃಖಗಳಿಗೆ ಕತ್ತಲೆಯ ಲೋಕದಲ್ಲಿ ನಡೆದಾಡಿ, ತನ್ನವರ ದುಃಖದುಮ್ಮಾನಗಳನ್ನು ಕಂಡ ಗಿರಿಮಲ್ಲಯ್ಯನಿಗೆ ದುಃಖದ ವಿಸ್ತಾರವರ್ಣನೆ ಕೇಳುವ ಮನಸ್ಸಿಲ್ಲ. ಗುರು ಮತ್ತು ಮಹಾದೇವಿಯಕ್ಕ ಏರಿದೆತ್ತರಕ್ಕೆ ತನ್ನ ನೆಲದವರು ಏರಬೇಕೆಂಬುದೇ ಅವನ ಚಿಂತನೆ. ಇಲ್ಲಿ ಗಿರಿಮಲ್ಲಯ್ಯ ಸುಖ- ದುಃಖಗಳ ಹೃದಯವನ್ನು ತೆರೆದು ನೋಡುವ ಪ್ರಜ್ಞಾಶೀಲ ವ್ಯಕ್ತಿಯಾಗಿ ಬೆಳೆದು ನಿಂತದ್ದನ್ನು ಗುರುತಿಸಬಹುದು. ಗುರುವಿನ ಲೋಕಕಲ್ಯಾಣಯಾತ್ರೆ ಮುನ್ನಡೆದಂತೆ ಅವನು ಅರಿವಿರುವಿನ ವೀರನಾಗುತ್ತ ಶುದ್ಧ ಚೇತನನಾಗಿ ಪರಿಣಮಿಸುವುದನ್ನು ಈ ಕಾಂಡ ವಿವರಿಸುತ್ತದೆ.

ಸುಖ-ದುಃಖಗಳನ್ನು ಗೆಲ್ಲುವ ಪರಿಯನ್ನು ತಿಳಿಸಲು ಗುರು, ಮಹಾದೇವಿಯಕ್ಕನ ಜೀವನವನ್ನೇ ಸಪ್ರಮಾಣವಾಗಿ ನಿರೂಪಿಸುತ್ತಾನೆ.

'ವಿಷಯ ಸುಖಗಳ ನಡೆಸಿ ತನ್ನ ಪರಿಪೂರ್ಣಕ್ಕೆ
ಎಲ್ಲ ವಸ್ತು ಪದಾರ್ಥಗಳಲ್ಲಿ ತನ್ನನಿರಿಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ವಣವ ಮಾಡಿದರೆ ಆನಂದ ಬಂದಿತ್ತು
ಪರಮಸುಖ ಪರಿಣಾಮ ತನ್ನ ಚುಂಬಿತ್ತು
------- --------- ------- -----
ತನ್ನನೆಲ್ಲವ ತುಂಬಿ ಜಗದೊಳಗೆ ತುಳುಕಿ
-------- ------ -------- -----

ಒಳಹೊರಗೆ ತಾನಿರ್ದು ಇಲ್ಲದಂತೆ ಇರುವ ಮಹಾದೇವಿಯಕ್ಕನ ಪರಮಾನಂದದ ಪರಿಪೂರ್ಣಸುಖದ ನಿಲವನ್ನು ಗುರು ಹಾಡಿ ತೋರಲು, ಆನಂದಭರಿತನಾಗಿ ಕೇಳುತ್ತಿದ್ದ ಗಿರಿಮಲ್ಲಯ್ಯನಿಗೆ ತನ್ನ ನೆಲದವರತ್ತ ಲಕ್ಷಬೀರಲು ಎದೆ ಬಿರಿಯುವಂಥ ದೃಶ್ಯ ಗೋಚರಿಸುತ್ತದೆ. ವಿಷಯ ಸುಖಗಳು ವಿಕಾರಗೊಂಡು, ಹಗಲು ರಾತ್ರಿಯಾಗಿ, ನಿದ್ರೆ ಸಾಮ್ರಾಜ್ಯವಾಳುತ್ತಿರುವ ಸುಖ- ದುಃಖಗಳ ಚಿತ್ರ ತಾಂಡವವಾಡುತ್ತದೆ. ನೆಲದವರ ಈ ಜಂಜಾಟದಲ್ಲಿ ದೇವರು ಕೂಡ ಬದುಕಿ ಪಾರಾಗುವುದೇ ಕಷ್ಟವೆಂದು 'ನೆಲಕೆ ಬಂದರೆ ದೇವ ಉಳಿದುಹೋದನೇ ಆತ?' ಎಂದು ಗಿರಿಮಲ್ಲಯ್ಯ ಕೇಳುವಲ್ಲಿ- ಈ ಭಯಂಕರವಾದ ಜಗತ್ತಿನಿಂದ ವ್ಯಕ್ತಿಗೆ ಬಿಡುಗಡೆ ಇಲ್ಲವೆ? ಎಂಬ ಚಿಂತೆ ಮನಸ್ಸನ್ನಾವರಿಸುತ್ತದೆ. ಗುರು ಭಕ್ತನ ಭಯಕ್ಕೆ ಸಮಾಧಾನ ನೀಡಲು ಒಂದು ಕಥೆಯನ್ನು ನಿರೂಪಿಸುತ್ತಾನೆ.

ಪರರ ಸುಖಗಳ ಕೊಯ್ದು ತನ್ನ ಮನೆಯೊಳಗಿಟ್ಟುಕೊಂಡು ದುಃಖಕೋಟಿಗೆ ಗುರಿಯಾಗುವ ಜನರು ಲೆಕ್ಕವಿಲ್ಲದಷ್ಟು ಇದ್ದಾರೆ. ಯಾರು ಹೇಗಿದ್ದರೇನು ತನಗೆ ತಾನು ತನ್ನ ಸುಖ-ದುಃಖಗಳಿಗೆ ತಾನೆ ಹೊಣೆಯೆಂದು ಜೋಪಾನವಾಗಿದ್ದ ಸಾಮಾನ್ಯರು ಅಸಂಖ್ಯಾತರಿದ್ದಾರೆ. ತನ್ನಂತೆ ಅನ್ಯರಿಗೆ ಸುಖಬೇಕೆಂಬ ಉಪಕಾರ ಭಾವದ ಉತ್ತಮರು ಕೆಲವರು. ತನ್ನ ಸುಖ ಅನ್ಯರಿಗೆ ಸೂರೆ ಮಾಡಿ ಬದುಕುವ ಕೋಟಿಯೊಳಗೊಬ್ಬನಾಗಿರುವ ವೀರ. ಹೀಗೆ ಅಧಮರಿಂದ ಅಸಾಮಾನ್ಯ ಅನುಭಾವಿಗಳವರೆಗೆ ಎಲ್ಲರನ್ನೊಳಗೊಳ್ಳುವ ಈ ಜಗತ್ತು ಒಳಿತು - ಕೆಡಕನ್ನೆಣಿಸದೆ ಎಲ್ಲರಿಗೂ ಸ್ಥಾನ ಕಲ್ಪಿಸಿದೆ ಎಂದು ಗುರು ಚೆನ್ನಮಲ್ಲಯ್ಯ ವಿವರಿಸುತ್ತಾನೆ. ಕೋಟಿಯೊಳಗೊಬ್ಬ ಅನುಭಾವಿ 'ಮುಗಿಲೆತ್ತರಕೆ ಮುಟ್ಟಿ ಏನು ಮಾಡಿದರೇನು - ಜಗದ ಸುಖ- ದುಃಖಗಳ ಡೊಂಕು ತಿದ್ದಬಹುದೇ? ಎಂಬುದು ಮಹಾದೇವಿಯಕ್ಕನ ವಾದ. ಈ ಲೋಕದ ಕಣ್ಣಿಗೆ ಅನುಭಾವಿಯ ಸಾಧನೆ- ಸತ್ಕಾರ್ಯಗಳು ನಗೆಗೀಡಾಗದೇ ಬೇರೆ ಗತಿಯಿಲ್ಲ ಎಂಬ ಉದಾಸ ಭಾವನೆಯಲ್ಲಿ ಅವಳು ಅನುಭವಿಸಿ ಬಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಷ್ಟಗಳ ಧ್ವನಿ ಇರುವುದನ್ನು ಗಮನಿಸಬೇಕು. ಆದರೆ ಅಕ್ಕನ ಈ ಸವಾಲಿಗೆ ಗುರುವಿನಿಂದ ದೊರೆಯುವ ಉತ್ತರ ಕೂಡ ಅಷ್ಟೇ ಸಮರ್ಪಕವಾಗಿದೆ.

ವಿಶ್ವಕಲ್ಯಾಣದ ಮಹಾಚೇತನವಾದ ಶರಣನು ಇನ್ನೊಬ್ಬರಿಗಾಗಿ ನಡೆದು ತೋರದೆ, ನುಡಿದು ಹಾರೈಸದೆ, ತನ್ನ ತಾ ನಿಜಗಂಭೀರದ ನಿಲುವಿನಲ್ಲಿ ಸಾಗುತ್ತಾನೆ. ವಿಶ್ವವನ್ನೇ ಗರ್ಭೀಕರಿಸಿಕೊಂಡು ಮುನ್ನಡೆಯುವ ಅವನ ಧೀರಗತಿಯಲ್ಲಿ ಭೇದ-ಭಾವಗಳಿಗೆ ಆಸ್ಪದವೆಲ್ಲಿ? 'ಆಕಾಶ ತಾ ತುಂಬಿ ತನ್ನೊಳು ಆಕಾಶ' ತುಂಬಿಕೊಂಡಿರುವ ಅವನ ಮಹೋನ್ನತ ನಿಲುವು ಅನಿರ್ವಚನೀಯ! ಅವನು ಜಗದೊಡನೆ ಎರಡರಿಯದೆ ಕೂಡಿ ನಡೆದ ಅದ್ಭುತದ ಬೆಡಗು ಇಂತಿದೆ.

"ಬಂದದ್ದು ಬರಲಿ ಹೋದದ್ದು ಹೋಗಲಿ
ಇದ್ದದ್ದು ಇರಲಿ ಸತ್ತದ್ದು ಸಾಯಲಿ
ನಡೆದು ಮುಂದಕ್ಕೆ ಜಗದ ಭಾರವು ಹೊತ್ತು
ನಡೆದು ಮುಂದಕ್ಕೆ ಬೆಳಗು ನಡೆಸಿದ ಕಡೆ,
ನಡೆದು ನಿಜಭಕ್ತಿ ಸರ್ವಾಂಗದೊಳು ತುಂಬಿ'

ಗಂಭೀರಗತಿಯಲ್ಲಿ ಹೆಜ್ಜೆ ಹಾಕುವ ಇಲ್ಲಿಯ ಸಾಲುಗಳು, ಭಾವಮೂರ್ತಿಗಳಾಗಿ, ಭವ್ಯ ಮಾನವನ ಭೂಮ ಚೆಲುವನ್ನು ತುಂಬಿಕೊಂಡಿದ್ದನ್ನು ಗಮನಿಸಿದರೆ; ಕಾವ್ಯ ಭಾಷೆ ಜ್ಯೋತಿರ್ಲಿಂಗವಾಗಿ ಸಹೃದಯರನ್ನು ತಲೆದೂಗಿಸುವುದು ಅನುಭವವೇದ್ಯ. ವಿಶ್ವಮಾನವನ ಊಟ -ಉಸಿರಾಟ, ನಡೆ-ನುಡಿ, ನಂಬಿಗೆ- ನಡತೆ, ಹಮ್ಮು - ಬಿಮ್ಮುಗಳ ಈ ಘನ ಗಂಭೀರ ದೃಶ್ಯ ಅತ್ಯದ್ಭುತವಾಗಿದೆ. 'ಇಷ್ಟೇ ಎತ್ತರ, ಇಷ್ಟೇ ಅಗಲ' ಇರುವ ಈ ವ್ಯಕ್ತಿಯಲ್ಲಿ ಎಂಥ ಭವ್ಯ ವ್ಯಕ್ತಿತ್ವ ಅಡಗಿದೆಯಲ್ಲ! ಎಂಬ ಅರಿವು ಉಂಟಾಗಲು ನಮ್ಮ ಬಗೆಗೆ ನಮಗೇ ಅಭಿಮಾನ ತುಂಬಿ ತುಳುಕುತ್ತದೆ. ಭವ್ಯ ಮಾನವನ ಈ ಉದ್ಬೋಧಕ ದರ್ಶನದ ಹಿಂದಿರುವ ಕವಿಯ ತಪಸ್ಸು ಕೂಡ ಗಮನಾರ್ಹವಾಗಿದೆ- 'ಮಾನವನ ಮಹಾಮನೆಯಾಗಿರುವ ದ್ಯಾವಾ ಪ್ರಥಿವಿಯ ಈ ಲೋಕದ, ಭೂಲೋಕದ ಭವ್ಯತೆ ನನ್ನ ಮನವನ್ನು ಮಾರುಗೊಂಡಿದೆ. ಅಷ್ಟೇ ಏಕೆ ದೇವರು ದೇವತೆಗಳನ್ನು ಮೀರಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವನ ಮಹಿಮಾತಿಶಯವನ್ನು ಮತ್ತು ಸತ್ಯ-ಸೌಂದರ್ಯ-ಶಿವಕಲ್ಯಾಣದ ಸಕಲ ಸನ್ಮಂಗಲಗಳನ್ನು ಒಳಗೊಂಡು ಮಹಾಭವ್ಯವಾಗಿರುವ ಈ ಭೂಲೋಕದ ನಿರತಿಶಯವಾದ ದಿವ್ಯಸೌಂದರ್ಯವನ್ನು ಕಂಡು, ನನ್ನ ದೇಹ-ಪ್ರಾಣ- ಮನ- ಬುದ್ಧಿ- ಭಾವಗಳನ್ನೆಲ್ಲ ಈ ಭವ್ಯ ಐಕ್ಯಾನಂದಕ್ಕೆ ಅರ್ಪಿಸಿಕೊಂಡಿದ್ದೇನೆ. (ಮಾನವನೊಳಗೆ ಪ್ರವೇಶ. ಭ. ಮಾ- ಪು-32) ಆಧ್ಯಾತ್ಮಿಕ ಚಿಂತನೆ, ತಾತ್ವಿಕ ಸಾಧನೆ, ಅನುಭಾವಿಗಳ ಜೊತೆಗಿನ ಸತ್ಯದ ಶೋಧನೆ ಮತ್ತು ಆತ್ಮೀಯವಾದ ಆರಾಧನೆಯಿಂದ ಕವಿಗಳು ಅಂತರಂಗದ ಭವ್ಯ ಸ್ವರೂಪ ಕಂಡು ಅನುಭವಿಸಿದ್ದರಿಂದಲೇ ಈ ಕೃತಿ ನೆಲದ ಪುಣ್ಯ ವಿಶೇಷವನ್ನುವಂತೆ ಭವ್ಯವಾಗಿಯೇ ರೂಪಗೊಂಡಿದೆ!

ಭವ್ಯಮಾನವನ ವ್ಯಕ್ತಿತ್ವ ವಿಲಾಸವನ್ನು ಗುರು ಹಾಡಿ ತೋರಿಸಲು- ಭಕ್ತನ ಮಹಾಚೇತನದ ಮಹೋಜ್ವಲ ಶಕ್ತಿಯ ಹವಣು ಗಿರಿಮಲ್ಲಯ್ಯನಿಗೆ ಸ್ಪಷ್ಟವಾಗುತ್ತದೆ. ಆದರೆ ಸಾಮಾನ್ಯನಿಗೆ ಆ ಸಿದ್ಧಿ ಸಾಧಿಸುವ ಬಗೆ ಹೇಗೆಂದು ಗುರುಚೆನ್ನಮಲ್ಲಯ್ಯನ ಗಮನ ಸೆಳೆಯುತ್ತಾನೆ. ಸಾಮಾನ್ಯ ಅಥವಾ ಅಜ್ಞಾನಿಗೂ- ಭವ್ಯ ಜೀವನದ ಸುಖ ಸಾಧ್ಯವೆಂದು ಮಹಾದೇವಿಯಕ್ಕ ಗಿರಿಮಲ್ಲಯ್ಯನ ಸಂಶಯ ನಿವಾರಿಸಲು 'ಭವಿಸುಟ್ಟು ಬೆಳಗಾಗಿ ಭಕ್ತನಾಗುವ ಪರಿ'ಯನ್ನು ಬಸವಣ್ಣನ ಜೀವನ ನಿದರ್ಶನದಿಂದ ಸ್ಪಷ್ಟಪಡಿಸುತ್ತಾಳೆ. ಕೇವಲ ಸುಜ್ಞಾನಿ- ಅನುಭಾವಿಗಳಿಗೆ ಮಾತ್ರವಲ್ಲದೆ ಅತ್ಯಂತ ಸಾಮಾನ್ಯನಿಗೂ ಪರಿಪೂರ್ಣ ದೃಷ್ಟಿಯ ಸಚ್ಚಿದಾನಂದ ಸುಖದ, ಭವ್ಯ ಜೀವನದ ಬಾಗಿಲು ತೆರೆದಿದೆ ಎಂದು ಮಹಾದೇವಿಯಕ್ಕನ ಮೂಲಕ ಕವಿಗಳು ಮನೋಜ್ಞವಾಗಿ ತಿಳಿಸಿದ್ದಾರೆ. ದಸರಯ್ಯನ ದಯೆ, ಕಾಶ್ಮೀರ ದೊರೆ ಮಹಾದೇವ ಭೂಪಾಲನಲ್ಲಿ ಮಹಾಶರಣ ಮೋಳಿಗೆಯ ಮಾರಯ್ಯ ಹುಟ್ಟಿ ಬರುವುದನ್ನು ಸಾಧಾರವಾಗಿ ವಿವರಿಸುತ್ತ ಗುರು ಚೆನ್ನಮಲ್ಲಯ್ಯನು ಮೋಟು ಮೈ, ಕಣಗಾತ್ರದ ಸಾಮಾನ್ಯನು ವಿಶ್ವವನ್ನೇ ತೆಕ್ಕೆ ಹಾಕಿಕೊಂಡು ಹೇಗೆ ಬದುಕಿದನೆಂಬುದನ್ನು ದೃಢಪಡಿಸುತ್ತಾನೆ.

ಜಗದೊಳಗೆ ತನ್ನಿರವು ತನ್ನರಿವಿನೊಳಗೆ
ಸ್ವಯಂಭು ಜ್ಯೋತಿ ಸ್ವಯಮೇವ ಪ್ರಕಾಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಯವಾದರೆ ಶರಣಲಿಂಗ ಮಾನವನೊಳಗೆ
ಆಕಾಶದದ್ಭುತವು ನಿಸ್ತೇಜವಾಯ್ತು
ಆಕಾಶ ಸಂಪದವು ಬಡಕಲಾಯ್ತು.
ಇಂಥ ಪರಮೈಶ್ವರ್ಯ ಮಾನವ ಮಹಾಲಿಂಗ
ಈ ಭವ್ಯ ವಿಶ್ವ ನಡೆದಾಡಿಹುದು ನೆಲದೊಳಗೆ!'

ಸಾಮಾನ್ಯನು ಭಕ್ತನಿಗಾಗಿ, ಭಕ್ತನು ಬ್ರಹ್ಮಚೇತನವಾಗಿ ಹರಿದಾಡುವುದನ್ನು ಗುರು ತೋರಿಸಲು ಗಿರಿಮಲ್ಲಯ್ಯ ತನ್ನವರ ಉದ್ಧಾರ ಸಾಧ್ಯತೆಯನ್ನು ಕೇಳಿ ಧನ್ಯನಾಗುತ್ತಾನೆ.

ಹೀಗೆ 'ಉಜ್ವಲಕಾಂಡ' ದಲ್ಲಿ ಮಾನವನ ಮರೆಯ ಮಹಾದೇವನ ಭವ್ಯತೆಯ ಅಸ್ತಿತ್ವ ಪ್ರಜ್ವಲಿಸಿದೆ. ಭವ್ಯಮಾನವ ಕೇವಲ ಅರಿವಿನ ಬೆರಗುಗೊಂಬೆಯಾಗಿ, ಗಂಧರ್ವಲೋಕದ ಯಕ್ಷನಾಗಿ ಅಥವಾ ನಮ್ಮ ಕಲ್ಪಕತೆಯ ಸುಂದರಮೂರ್ತಿಯಾಗಿ ಉಳಿಯದೆ, ಅವನು ನಮ್ಮೊಂದಿಗೆ, ನಮ್ಮಲ್ಲಿಯೇ ಇದ್ದು, ಇರವಿನಲ್ಲಿ ನೆಲೆಸಿ ನಡೆದಾಡುವವನಾಗಿದ್ದಾನೆ. ಈಗೋ ಕೇಳಿ ಗುರು, ಗಿರಿಮಲ್ಲಯ್ಯನಿಗೆ ಹಾರೈಸುತ್ತಿದ್ದಾನೆ.

'ತೆಕ್ಕೆ ಹಾಕುವ ಮಹಾಭಕ್ತನಾಗೆಲೆ ಕಂದಾ
ಕೋಟಿ ಮಾನವರೆದೆಯ ಬ್ರಹ್ಮಸ್ವಪ್ನವು ನೀನು
ಕೋಟಿ ಕಾಲದ ಕನಸು ನನಸು ನೀನಯ್ಯ'

ಈ ಹಾಡು ಈ ಲೋಕದ ಮಾನವ ಕುಲಕೋಟಿಯ ಪ್ರತಿವ್ಯಕ್ತಿಗಿರುವ ದಿವ್ಯ ಸಂದೇಶವಲ್ಲವೆ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಕಾಂಡ: (ಮಾನವ ಭವ್ಯಕ್ಕೆ ದಿವ್ಯತೆಯ ದೀಪ್ತಿ)

ಅಣ್ಣಪ್ಪ ಮಟ್ಟೀಕಲ್ಲಿ

'ಭವ್ಯ ಮಾನವ' ಪ್ರಾ. ಸಂ. ಶಿ. ಭೂಸನೂರಮಠರ ಮೇರುಕೃತಿ; ಮಹಾಕಾವ್ಯ. ವಿಶ್ವದ ಮಹಾಕಾವ್ಯಗಳ ಮಾಲಿಕೆಯಲ್ಲಿ ವಿಶಿಷ್ಟ ಭವ್ಯ, ಹಾಗೂ ದಿವ್ಯ. ಈ ಮಹಾಕಾವ್ಯದ ಆರು ಕಾಂಡಗಳು 'ಮಾನವಸ್ಥಲ'ದ ಹೆಗ್ಗುರುತುಗಳು. ಮಾನವ ಅಸ್ತಿತ್ವಕ್ಕೆ ಪಂಚೇಂದ್ರಿಯಗಳ ಅನಿವಾರ್ಯತೆಯೊಂದಿಗೆ ಆರನೆಯ ಇಂದ್ರಿಯವೂ ತನ್ನ ಅನಿವಾರ್ಯತೆಯನ್ನು, ಮಾನವ ಕುಲದ ಆರಭ್ಯದಿಂದಲೂ, ಸ್ಥಿರೀಕರಿಸಿರುವುದನ್ನು ತನ್ನದೇ ಆದ ರೀತಿಯಿಂದ ಮೂಡಿಸುವುದರೊಂದಿಗೆ, ಮಾನವ ದರ್ಶನದ ಭವ್ಯತೆಯನ್ನು ದಿವ್ಯತೆಯಲ್ಲಿ ಮಾರ್ಪಡಿಸುವ ಮಹಾನ್‌ಸಿದ್ಧಿಯತ್ತ ಕರೆದೊಯ್ಯಬಲ್ಲ ದಿವ್ಯ ಶಕ್ತಿಯ ದ್ಯೋತಕವೂ ಆಗಿ ನಿಲ್ಲುವುದು ಈ ಮಹಾಕಾವ್ಯ. ಈ ಸಿದ್ಧಿಯು ಸಿದ್ಧಿಸಲು ಆರನೆಯ ಇಂದ್ರಿಯದ ಅನಿವಾರ್ಯತೆಯ ಅರಿವು ಓದುಗನಿಗೆ ಆಗುವುದಲ್ಲದೆ ತನ್ನ ಆರನೆಯ ಇಂದ್ರಿಯವು ಕ್ರಿಯಾಶೀಲವಾದುದು ಅವನು ಅರಿಯದಂತೆ ಅನುಭವವೇ ದ್ಯವಾಗುವುದು.

ಇಂಥ ಅತೀಂದ್ರಿಯ ಅನುಭವವನ್ನು ಇಂದ್ರಿಯಗಳಲ್ಲಿ ಅವಿಷ್ಕಾರಗೊಳಿಸಬಲ್ಲ ಸತ್ವದಿಂದಾಗಿ ಭವ್ಯವಾದ ಮಾನವನು ದಿವ್ಯತೆಯ ದೀಪ್ತಿಯಿಂದ ಕಿಡಿಗೊಳ್ಳುತ್ತಾನೆ.

> ''ಜಗದ ಬಾಗಿಲ ತೆರೆದು ಜಗದ ಮನೆಯೊಳಗಿರ್ದು
> ನಾಟಕವ ನಡೆಸಿಹನು ನಾನು ಮಾನವ ಬ್ರಹ್ಮ''

(ಭ. ಮಾನವ ಪುಟ-137)

ಜಗದ ಬಾಗಿಲನ್ನು ತೆರೆದವನೇ ತಾನೆಂಬುದನ್ನು ಸ್ವಯಂ- ಸಿದ್ಧಗೊಳಿಸಿದ್ದಾನೆ. ಈ ಬಾಗಿಲು ತೆರೆವ ಅದ್ಭುತ-ಅತೀಂದ್ರಿಯ ಸಾಮರ್ಥ್ಯವನ್ನು ಮಾನವನು ಹೊಂದಲು ಬ್ರಹ್ಮನೇ ತಾನಾಗಿ ನಿಲ್ಲುವ ಸಾಧನೆಯನ್ನು ಸಿದ್ಧಿಸಿಕೊಂಡು ಸಿದ್ಧ-ಬ್ರಹ್ಮನೆಂಬುದನ್ನೂ ನಿದರ್ಶಿಸಿದ್ದಾನೆ. ಇದುವೇ ದಿವ್ಯತೆಯ ದೀಪ್ತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಮಲಗಿದ ಮಾನವನ ವಿಷಯ ಸಂಸಾರ, ಹಗಲುಗತ್ತಲೆಯ ದ್ವೈತ ಪ್ರಪಂಚ ಮತ್ತೆ ಎಚ್ಚೆತ್ತ ಮಾನವನ ಲಿಂಗ ಗಂಭೀರಗಳೇ". ಅಂತೆಯೇ ಈ ಕಾವ್ಯದ ಕಥಾ ವಸ್ತುವಾಗಿದೆ. "ದ್ವೈತಾದ್ವೈತಗಳ ಸೀಮೆಯನ್ನು ದಾಟುವುದೇ" ಮಾನವನ ಭವ್ಯ. "ನಿರಾಲಂಬ ನಿಃ ಸ್ಥಲವೇ ಈ ಕಾವ್ಯದ ಪರವಸ್ತು". ಅಂತೆಯೇ ಓವ್ಯಕ್ತತೆಯ ದೀಪ್ತಿಯ ಸ್ಪಂದನದ ಅನಿಸಿಕೆಯೂ ಆಗದೆ ಇರದು. ತಿಳಿಯದ, ತಿಳಿಯಲಾಗದ ಅನುಭವವನ್ನು ಅನುಭವಿಸಲು ಸಾಧ್ಯವೇ ವಿನಃ ಅಭಿವ್ಯಕ್ತಿಸುವದು ಅಸಾಧ್ಯ. ಅನುಭಾವದ ಅಮೃತವು ಈ ಮಹಾಕಾವ್ಯದ ಸಾಲುಗಳುದ್ದಕ್ಕೂ, ಶಬ್ದಗಳ ಅರ್ಥಕ್ಕೂ ಆಲೇಪಿತವಾಗಿ ಅರ್ಥಾತೀತವಾದ ಹಂತಕ್ಕೂ ನಮ್ಮನ್ನು ಎತ್ತರಿಸುವುದು.

ಈ ಮಹಾಕಾವ್ಯದ ಅಂಕುರವು ಕಲ್ಯಾಣ ಕಾಂಡದಲ್ಲಿ; ಮೊಳಕೆಯೊಡೆದುದು ಶ್ರೀಶೈಲ ಕಾಂಡದಲ್ಲಿ; ಎಲೆ-ಹೂಗಳು ಪಲ್ಲವಿಸಿದುದು ಕತ್ತಲೆಯ ಕಾಂಡದಲ್ಲಿ; ಹೂವು ಕಾಯಿಯಾಗಿ ಬೀಜಗೊಂಡುದು ಉದಯಕಾಂಡದಲ್ಲಿ, ಬೀಜಗೊಂಡ ಕಾಯಿಯು ಪುಷ್ಟಗೊಂಡುದು ಉಜ್ವಲಕಾಂಡದಲ್ಲಿ; ಕಾಯಿ ಪಕ್ವಗೊಂಡು ಬೀಜವು ಭೂಮಿಗೆ ಮತ್ತೆ ಮರಳುವುದು ಭವ್ಯ ಕಾಂಡದಲ್ಲಿಯು ಇದೊಂದು ಭೌತಿಕವಾದ ಸಾಂಕೇತಿಕ ವಿಭಜನೆಯಾಗಿ ಮಾತ್ರ ವಿಂಗಡಿತವಾಗಬಲ್ಲದು. ಆದರೂ ಈ ವಿಂಗಡಣೆಯು ಆರೂ ಹಂತಗಳ ಸೂಕ್ಷ್ಮ ಕ್ರಿಯೆಗಳನ್ನು ಸ್ಥೂಲವಾಗಿ ವಿಂಗಡಿಸಲಾರದು. ಅಂಕುರ, ಮೊಳಕೆ, ಎಲೆ-ಹೂ, ಕಾಯಿ, ಹಣ್ಣು, ಬೀಜಗಳು ಒಂದೇ ಮೂಲದ ಭಿನ್ನಕ್ರಿಯೆಗಳು, ಭಿನ್ನ ಅವಸ್ಥೆಗಳು ಅವು ಒಂದನ್ನುಳಿದು ಇನ್ನೊಂದು ಬಾರವು. ಯಾವುದರ ಲೋಪಕ್ಕೂ ಇಲ್ಲಿ ಆಸ್ಪದವಿಲ್ಲ- ಅದರಂತೆಯೇ ನೈಜ ಮಾನವ-ಸ್ಥಲವನ್ನು ಅರಿಯಲು, ಅರಿತುದನ್ನು ಅಳವಡಿಸಲು, ಅಳವಡಿಸಿದುದನ್ನು ಆವಿಷ್ಕರಿಸಲು, ಆವಿಷ್ಕರಿಸಿದುದನ್ನು ಇರಲು, ಇರವನ್ನು ಸಿದ್ಧಿಸಲು, ಸಿದ್ಧಿಸಿಕೊಂಡುದನ್ನು ಮಾನವಸ್ಥಲದ ಮೂಲದೊಂದಿಗೆ ಸಮರಸಗೊಳಿಸಿಕೊಳ್ಳಲು, ಮಾನವನ ಆರೂ ಇಂದ್ರಿಯಗಳೂ ಏಕೀಭವಿಸಿ ಏಕಕಾಲಕ್ಕೆ ಕ್ರಿಯಾಶೀಲವಾಗಲು ಈ ಮಹಾಕಾವ್ಯದ ಆರೂ ಕಾಂಡಗಳು ವಿಶಿಷ್ಟ ಪ್ರಭಾವವನ್ನು ಬೀರುತ್ತವೆ; ತನ್ನದೇ ಆದ ತಿಳಿವಳಿಕೆಯನ್ನು ಮೂಡಿಸುತ್ತವೆ. ಆರೂ ಕಾಂಡಗಳ ತಲೆಕಟ್ಟುಗಳು ಭಿನ್ನವಿದ್ದಂತೆ ತೋರಿದರೂ ಪ್ರಭಾವದಲ್ಲಿ ಏಕೀಕರಣೋದ್ಭವಿತ ಸಮರಸವು 'ಅನುಭಾವಿತ'ವಾಗುವುದು. ಈ ಕಾಂಡಗಳು ಶೂನ್ಯದಿಂದ ಶೂನ್ಯಕ್ಕೆ ಕರೆದೊಯ್ದು ನಿಃಶೂನ್ಯತ್ವವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಡುವವು. ಅದುವೇ ಕಾರಣ ಕಾಂಡಗಳ ಪಾತ್ರವನ್ನು ಕ್ರಮಬದ್ಧತೆಯಲ್ಲಿ ಎಣಿಸಿ ನಿರ್ಣಯಿಸುವುದು ದುಃಸಾಧ್ಯ. ಹೀಗೆ ಮಾಡಲು ಯತ್ನಿಸಿದ್ದೇ ಆದರೆ ಕೃತ್ರಿಮವು ಸೇರಿ ನಿಸರ್ಗ ನಿರ್ಮಿತಿ, ನಿಯಂತ್ರಣಗಳಲ್ಲಿ ತಾಳ ತಪ್ಪಿದಂತೆ ಆದೀತೇನೋ! ಆಧ್ಯಾತ್ಮಿಕ ಕ್ಷೇತ್ರದಲ್ಲಿ ಇಂದು ಮಾನವನ ಎಲ್ಲ ಚಿಂತನೆಗಳೂ ಸೇರಿ, 'ಒಂದು ತಿಳಿಯಲಾಗದುದರಿಂದ ಇನ್ನೊಂದು ತಿಳಿಯಲಾಗದುದರತ್ತ' ಕರೆದೊಯ್ಯುತ್ತಲಿವೆಯೋ ಹಾಗೆ ಚಿತ್ತಭ್ರಾಮುಕ ಸ್ಥಿತಿಯನ್ನು ಸೇರಿಸಿಕೊಳ್ಳಬಹುದು. ಇಲ್ಲವೆ, ಈ ಭ್ರಾಮುಕತೆಯು ಈಗಾಗಲೆ ನಿರ್ಮಿಸಿದ ಆಧ್ಯಾತ್ಮಿಕ ಕೊಳಗೇರಿಗಳಲ್ಲಿ ಚಿರಸ್ಥಾಯಿಯಾಗಿ, ಅಲ್ಲಿಯೇ ಭವ್ಯತೆ ಹಾಗೂ ದಿವ್ಯತೆಗಳಿಂದ ಸಾವಿರ ದೂರಾಗಿ ಕೊಳೆಯುತ್ತಲೇ ಏಳಲಾಗದಂತೆ ಬೀಳಬಹುದು. ಹೀಗಾದಲ್ಲಿ ಈ ಮಹಾಕಾವ್ಯದ ಸೃಷ್ಟಿಯೂ ನಿರರ್ಥಕ, ಅಧ್ಯಯನವೂ ಅರ್ಥಶೂನ್ಯವಾದೀತು!

ಈ ಕಾವ್ಯದ ಅಧ್ಯಯನವು ಅಚಲವಾದ ನಂಬುಗೆಯೊಂದನ್ನು ಮೂಡಿಸುವುದು, 'ಮಾನವ' ಇಲ್ಲದೆ ಹೋದರೆ ಈ ಜಗದ ವೈಚಿತ್ರ್ಯವೂ ಇಲ್ಲ; ಭಿನ್ನತೆಯೂ ಇಲ್ಲ; ಏಕತೆಯೂ ಇಲ್ಲ; ರಹಸ್ಯವೂ ಇಲ್ಲ; ನಿಗೂಢತೆಯೂ ಇಲ್ಲ; ವಿಚಾರವೂ ಇಲ್ಲ; ಆಚಾರವೂ ಇಲ್ಲ; ಚಿಂತನೆಯೂ ಇಲ್ಲ; ಆಧ್ಯಾತ್ಮವೂ ಇಲ್ಲ; ಈ ಜಗವೇ ಇಲ್ಲ; 'ಮಾನವ'ನೇ ಇಲ್ಲ ಕೊನೆಯಲ್ಲಿ' ಈ ಎಲ್ಲ ಸೃಷ್ಟಿಗೆ ಮಾನವನೇ ಮೂಲ. ಜಡ-ಚೇತನಗಳ ಕಲ್ಪನೆಗೂ ಅವನೇ ಮೂಲ; ಜಡವಾಗಿ ತೋರುವ ಚೇತನಾಂತರ್ಗತ ಜಡಕ್ಕೂ ಅವನೇ ಮೂಲ; ಅವನಲ್ಲಿರುವ ಚೇತನಕ್ಕೆ ಅವನ ಅಸ್ತಿತ್ವ ಇಲ್ಲವೆ ಅವನ ಇರವೇ ಮೂಲ. ಈ ವಿಚಾರ ಸರಣಿಯು ತನ್ನನ್ನು ತಾನು ವೈಭವೀಕರಿಸಿಕೊಂಡಂತಾಗುವದೆಂಬ ನಿಲುವಿಗೆ ತಲುಪಿಸಿ 'ಮಾನವನ ದುರಂತವೇ' ಇದು ಎಂಬ ಪ್ರಶ್ನೆಯನ್ನೂ ಚಾಚಬಹುದು. ಸೃಷ್ಟಿಯ ನಿರ್ಮಿತಿಯಾದ ಮಾನವನು ಸೃಷ್ಟಿಯ ಸಾಮರ್ಥ್ಯವನ್ನೇ ಆಹ್ವಾನಿಸುವ ಹಂತವನ್ನು ಇಂದು ತಲುಪಿದಾಗ ಈ ವೈಭವೀಕರಣವು ಸರ್ವಮಾನ್ಯತೆಯನ್ನು ಪಡೆಯುವುದು. ತನ್ನ ವೈಭವೀಕರಣವನ್ನೂ ತಾನೇ ಪ್ರಶ್ನಿಸತೊಡಗಿದರೆ ಚೈತನ್ಯವನ್ನೇ ನಿರಾಕರಿಸಿ ದಂತಾಗಬಹುದು. ಅಪ್ರತ್ಯಕ್ಷವಾಗಿ ಸೃಷ್ಟಿಯ- ಚೇತನಭರಿತ ಇರವನ್ನೂ ಆಹ್ವಾನಿಸಿದಂತಾಗಬಹುದು. ಅದುವೇ ಕಾರಣ ಮಾನವ ಚೇತನದ ಇರವನ್ನು ನಿದರ್ಶಿಸುವದು ಈ ಕಾವ್ಯದ ಪ್ರತಿಜ್ಞೆ. ಕರ್ತೃವಿನ 'ಮಾನವನೊಳಗೆ ಪ್ರವೇಶ ಪುಟ XLVI ದಲ್ಲಿಯ ಈ ಕಾವ್ಯದ ಐದು ಪ್ರತಿಜ್ಞೆಗಳೇ ಇದಕ್ಕೆ ಸಾಕ್ಷಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1) ಹೆಣ್ಣು-ಗಂಡೆನ್ನದೆ ಮಾನವದ ಗಂಭೀರ ಮಹಾದೇವ.
2) ವಿಶ್ವಪ್ರಪಂಚವೇ ತನ್ನ ಮಹಾಮನೆಯಾಗಿರುವ ಮಾನವ- ಮಹಾದೇವನೆ 'ಸರ್ವೋತ್ತಮ'

3) ಕತ್ತಲೆಯ ಪ್ರಶ್ನೆಗಳಿಗೆ ಈ ಭವ್ಯ ಮಾನವ-ಮಹಾದೇವ ಉತ್ತರ.

4) ಇಹಲೋಕ ಪರಲೋಕವನ್ನೊಳಗೊಂಡ ಭೂಲೋಕ ಸರ್ವಾಧಿಕ, ಸರ್ವಶ್ರೇಷ್ಠ.

5) ಮಾನವ ಜೀವನ ವಿಲಾಸಕ್ಕೆ ಭೂಲೋಕವೇ ಪರಮ ಚರಮ ರಂಗಸ್ಥಲ.

ಈ ಕಾವ್ಯ ಪ್ರತಿಜ್ಞೆಯು ಮಾನವನನ್ನು ನಿರ್ದೇಶಿಸಬಲ್ಲದು; ಉದ್ದೀಪನಗೊಳಿಸಬಲ್ಲದು; ಎತ್ತರಿಸಬಲ್ಲದು. ಮಾನವನಲ್ಲಿ ಭವ್ಯತೆಯಿದೆ ಯೆಂಬ ಅರಿವನ್ನು ಮೂಡಿಸಿ ಆವನಿಗೆ ದಿವ್ಯತೆಯ ದೀಪ್ತಿಯನ್ನು ಸ್ಪರ್ಶಿಸಿ ಕಿಡಿಗೊಳಿಸಬಲ್ಲದು. ಅಂತೆಯೇ ಭೂತವೂ ನನ್ನದಲ್ಲ; ಭವಿಷ್ಯವೂ ನನ್ನದಲ್ಲ. ಇಂದು ಮಾತ್ರ ನನ್ನದು' ಎಂದು ಮಹಾಕವಿಗಳೇ ಹೇಳಿದ್ದಾರೆ. ಇದನ್ನು ಉಚ್ಚರಿಸುವಷ್ಟರಲ್ಲಿಯೇ 'ಭೂತ'ವನ್ನು ಸೇರಿರುತ್ತೇವೆ. ಭವಿಷ್ಯದಲ್ಲಿ ಪ್ರವೇಶಿಸಿರುತ್ತೇವೆ. ಎಲ್ಲರೂ ಅನುಭವಿಸುವ ವಿಚಿತ್ರ, ವಿಶಿಷ್ಟ ಹಾಗೂ ಸಂದಿಗ್ಧ ಸ್ಥಿತಿ ಇದು. ಹೀಗಾಗಿ 'ಮಾನವ'ನೂ ಕಾಲಾತೀತನೆಂಬುದು ವಾಸ್ತವ ಕಠೋರವಾಗುವದು. ಕಾಲದ ಕಲ್ಪನೆಯೂ ಅನೇಕ ಸಲ ಅರ್ಥಾತೀತವಾಗುವದು. ಕಾಲವು ಸ್ಥಾನವಿಲ್ಲದೆ, (Space) ಸಾಮರ್ಥ್ಯ (Energy) ವಿಲ್ಲದೆ, ಚಲನೆ (motion) ಯಿಲ್ಲದೆ ಮಾನವ ಗ್ರಹಿಕೆಗೆ ಒಳಪಡಲಾರದು. ಮೂರನ್ನೂ ಏಕಕಾಲಕ್ಕೆ ಸಮನ್ವಯಿಸಿಕೊಂಡರೆ ಕಾಲವು ಮಿಂಚಿಹೋಗುವ ಅನಂತತ್ವದ ಅಂಶವೆಂಬುದು ಹೊಳೆಯುವದು. ಮಿಂಚಿಹೋಗುವ ಕ್ಷಣದಲ್ಲಾದರೂ ಮಾನವ ಅದರ ಅಸ್ತಿತ್ವವನ್ನು ಅಲ್ಲಗಳೆಯಲಾರ. 'ಕಾಲ'ದ ಅಸ್ತಿತ್ವಕ್ಕೆ ಬಂಧಿತನಾಗಿ ಕಾಲಾತೀತನಾಗುವ ಮಾನವನ ಒಳಗೆ ನಮ್ಮೊಂದಿಗೆ ಪ್ರವೇಶಿಸುವ ಸಾರ್ಥಕ ಮಹಾನ್ ಯತ್ನವು ಕಾವ್ಯದ ಪಂಕ್ತಿ ಪಂಕ್ತಿಗಳಲ್ಲಿ ಸ್ಫುಟಗೊಂಡಿದೆ. ಈ ಅಂಶವನ್ನು ಅರಿತುಕೊಳ್ಳಲು ಆರನೆಯ ಇಂದ್ರಿಯವು ಜಾಗೃತಗೊಳ್ಳಬೇಕಾದುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿವಾರ್ಯ. ಕಾವ್ಯದ ಐದೂ ಪ್ರತಿಜ್ಞೆಗಳು 'ಮಾನವಸ್ಥಲ'ದಲ್ಲಿ ಓದುಗನನ್ನು ನಿಸ್ಸಂದೇಹವಾಗಿಯೂ ಪ್ರತಿಷ್ಠಾಪಿಸುತ್ತವೆ. ಇದೂ ಅಲ್ಲದೆ ಅವನಿಂದ ಆರನೆಯ ಪ್ರತಿಜ್ಞೆಯನ್ನೂ ಮೂಡಿಸುತ್ತವೆ''- ನಾನು ವಿಶ್ವಚೇತನದ ಕಿಡಿ, ಕಿಡಿಗೊಂಡ ನಾನು ವಿಶ್ವಚೇತನನಾಗಬಲ್ಲೆ''.

ಅಲೌಕಿಕ ಮತ್ತು ಆಧ್ಯಾತ್ಮಗಳೆರಡೂ ಬೇರೆಯಲ್ಲ. ಇದು ಮಾನವ ಮನಸ್ಸಿನ ವಿಭಜನೆ ಮಾತ್ರ. ಕ್ಷಣಿಕವೂ ಶಾಶ್ವತದ ಅವಿಭಾಜ್ಯ ಅಂಗವಾಗಿ ಶಾಶ್ವತದಲ್ಲಿ ಭಾಗಿಯಾಗಿರುತ್ತದೆ. ಅದರಂತೆ ಪರಿಮಿತವು ಅಪರಿಮಿತದಿಂದ ಬೇರ್ಪಡದೆ ಅದರಿಂದ ಅವಿಚ್ಛಿನ್ನವಾಗಿ ಉಳಿದಿರುತ್ತದೆ. ಹಾಗೆಯೇ ಲೌಕಿಕವೂ ಆಧ್ಯಾತ್ಮದಿಂದ ಬೇರ್ಪಡದೆ ಅದರಿಂದಲೇ ಹೊಮ್ಮಿ ಅದರಲ್ಲಿಯೇ ಅವಿಭಾಜ್ಯವಾಗಿ ಉಳಿದುಕೊಂಡಿರುವದು. ಅಂತೆಯೇ ಮಾನವನು ಲೌಕಿಕಾಂತರ್ಗತ ಆಧ್ಯಾತ್ಮ, ಆಧ್ಯಾತ್ಮವಾಂತರ್ಗತ ಲೌಕಿಕಗಳ ಪ್ರತೀಕ. ಮಾನವನು 'ತಾನೇ ವಿಶ್ವ' 'ವಿಶ್ವವೇ ತಾನು'. ಆದುದರಿಂದ ಮಾನವನೇ ಸಂಕ್ಷಿಪ್ತ ಬ್ರಹ್ಮ; ಸಂಕ್ಷಿಪ್ತ ಬ್ರಹ್ಮಾಂಡ, ವಿಶ್ವ ಅಥವಾ ಬ್ರಹ್ಮ, ಇಲ್ಲವೇ ಬ್ರಹ್ಮಾಂಡವೇ ಮಾನವನ ವಿಸ್ತೃತರೂಪ. ಈ ರೂಪ ಸಿದ್ಧಿಯನ್ನು ಸಾಕಾರಗೊಳಿಸಿಕೊಳ್ಳಲು ಅನುಪಮವಾದ ದಾರಿದೀಪ 'ಭವ್ಯಕಾಂಡ'.

ಅಂತೆಯೇ 'ಭವ್ಯಮಾನವ'ನ ಅರಿವು ಸಾಧಕತೆಯನ್ನೂ ಮೀರಿಸಬಲ್ಲದು. ಈ ಮಹಾಕಾವ್ಯದ ದರ್ಶನವು ಸಾಹಿತ್ಯಿಕ, ಭಾಷಿಕ, ತಾತ್ವಿಕ, ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ದೃಷ್ಟಿಗಳನ್ನೂ ಮೀರಿಸಬಲ್ಲದು. ಇಲ್ಲವೆ ಈ ಎಲ್ಲ ದೃಷ್ಟಿಗಳಿಂದ ಸಮನ್ವಯಿತ ಸಮಗ್ರ ದೃಷ್ಟಿಯು ಈ ಕಾವ್ಯ ಸತ್ವವನ್ನು ಕಾಣಲು ಅತ್ಯಗತ್ಯ. ಹೀಗೆ ಇದೊಂದು ಕಾಲಾತೀತ, ದೇಶಾತೀತವಾದ ಕೊಡುಗೆಯಾದರೂ ಕಾಲ ಹಾಗೂ ದೇಶಗಳಲ್ಲಿ ಅದರ ಆವಿರ್ಭಾವವಾಗಿದೆ. This epic (Bhavya Manava) transcends transcendentalism'' ಎಂಬ ಉಕ್ತಿಯು ಈ ಕಾವ್ಯಕ್ಕೆ ತೀರ ಸೂಕ್ತ. ಪ್ರತಿಸಾಲಿನಲ್ಲಿಯೂ ಈ ಉಕ್ತಿಯ ಆವಿರ್ಭಾವ ತೋರುವದು. ಈ ಕಾವ್ಯವನ್ನು ಓದುವದಕ್ಕಿಂತ, ಓದಿ ತಿಳಿಯುವದಕ್ಕಿಂತ, ಓದಿ ಚಿಂತಿಸುವದು ಮೇಲು; ಓದಿ ಚಿಂತಿಸುವದಕ್ಕಿಂತ ಓದಿ ಅನುಭವಿಸುವದು ಮೇಲು. ಮಾನವನ ಪರಿಮಿತತೆಗಳನ್ನೆಲ್ಲ ಹರಿದೊಗೆದು, ಮಾನವಾತೀತ ಅಪರಿಮಿತತೆಗಳ ಸಂಕೇತಗಳಾವವು. ಹೀಗೆ 'ಶೂನ್ಯ'ವೇ ಸಂಕೇತಗೊಂಡ ಮಹಾಕಾವ್ಯವಿದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಾ- 1) ಪುಟ : 82 ಆಕಾಶದಗಲಕ್ಕೆ ಕಾಲಿಟ್ಟು ಕೈಚಾಚಿ ನಡೆದರೆ ವಿಸ್ತಾವಿದಿರುಗೊಂಡಿತ್ತು. 2) ಪುಟ 128 : ಬಯಲು ಬಯಲನೆ ಹಡೆವ ಸಂಭ್ರಮವ ನಾ ಕಂಡೆ 3) ಬಯಲು ಬಿರುಕಾದರೆ ಜೋಡಿಸುವರಾರಮ್ಮ? 4) ಪುಟ : 134 'ಬೆಳಗು ಬೆಳಗನು ಹೆತ್ತು ಹೊತ್ತಿಹ ಮಹಾಬೆಳಗು'.

ಈ ದೃಷ್ಟಿಯಿಂದ ಕವಿಯು ತನ್ನ ಮನದ ಕ್ಷಿತಿಜದ ಅಂಚಿನಲ್ಲಿ ನಿಂತು, ವಿಶ್ವಾತೀತ ತತ್ವಜ್ಞಾನವನ್ನೇ ಎರಕಹೊಯ್ದು ವಿಶ್ವಚೇತನದ ಬಯಲನ್ನೂ ಮೀರಿ ನಿಂತಿರುವ ಚಿತ್ರ ಕಟ್ಟುವದು. ಹೀಗೆ ಹೇಳುವದೂ ಈ ಕಾವ್ಯವನ್ನು ಕುರಿತು ಪರಿಮಿತ ಅಭಿವ್ಯಕ್ತಿಯಾದೀತು!

ಮಾನವನನ್ನೇ ಕೇಂದ್ರವನ್ನಾಗಿಸಿಕೊಂಡರೆ ಎಲ್ಲವೂ ಅವನನ್ನು ಸುತ್ತುವವು. ಮಾನವನು ವಿಶ್ವದ ಯೋಜನೆಯಲ್ಲಿ ಗುರುತಿಸಲಾಗದ ಅಣು ಮಾತ್ರವೆಂದಾಗ ಈ ಅಣುವನ್ನು ಕಲ್ಪನಾತೀತವಾದ ವಿಶ್ವವು ಹೇಗೆ ಸುತ್ತಬಲ್ಲದೆಂಬ ವಿಚಿತ್ರ ಭ್ರಾಮುಕ ಹಂತವೂ ನಮಗೆ ಎದುರಾಗಬಹುದು. ವಿಶ್ವದ ಕಲ್ಪನಾತೀತತೆಯೂ ಅದರ ಚಿಂತನೆಯೂ ಮಾನವನಿಲ್ಲದೆ ಇಲ್ಲ. ಈ ಚಿಂತನೆಯ ಮಾಧ್ಯಮವೂ ಭಾಷೆ. ಭಾಷೆಯ 'ಮೂಲ'ದ ಬಗೆಗಿನ ಚಿಂತನವೂ ಬಯಲಿನ ಕುರಿತ ಚಿಂತನೆಯಾಗಿ ನಿಲ್ಲುವದು. ಭಾಷೆಯ ಸಾಂಕೇತಿಕ ವ್ಯವಸ್ಥೆಯಲ್ಲಿ ಬಹುದೂರ ನಡೆದು ಬಂದ ನಾವು ಭಾಷಾತೀತವಾದ ಸಾಂಕೇತಿಕತೆಯತ್ತ ಮರಳುತ್ತಿರುವವೆಂಬ ವಾಸ್ತವ ಸತ್ಯವನ್ನೂ ಕಾಣುತ್ತಿದ್ದೇವೆ. ಹೀಗೆ ಭಾಷಾತೀತವಾದ ಇಂಥ 'ಸತ್ಯ' ಹಾಗೂ 'ಬಯಲು'ಗಳೆರಡೂ ಬೇರೆಯಾಗಲಾರವು. ಇಂಥ ಬಯಲಿನಿಂದ ಎಧ್ಯವಿಸಿ, ಬಯಲೇ ತಾನಾಗಿ ಬಯಲಿನ ಬಗೆಗೆ ಚಿಂತಿಸುವ ಮಾನವನ ಪರಿಯು ರಹಸ್ಯವೂ, ಅಭೇಧ್ಯವೂ ಆಗಿದೆ. ಅಂತೂ ಇದೊಂದು ತಿಳಿಯಲಾಗದ ವೈಚಾರಿಕ ಚಕ್ರವ್ಯೂಹ. ಈ ವ್ಯೂಹದ ರಚನೆಯ ಮಾನಸಿಕ ಹಿನ್ನೆಲೆಯನ್ನು ಸಿದ್ಧಗೊಳಿಸಿಕೊಂಡು 'ಭವ್ಯಕಾಂಡ' ದಲ್ಲಿ ಪ್ರವೇಶಿಸುವ ಯತ್ನ ಮಾಡೋಣ)

ಹಿಂದಿನ ಐದು ಕಾಂಡಗಳ ಭವ್ಯತೆಗೆ ದಿವ್ಯತ್ವದ ಸ್ಪಂದನವು ಈ ಕಾಂಡದಲ್ಲಿ ಕಾಣಬಹುದು. ಮಾನವಕುಲದ ಭವ್ಯದರ್ಶನಕ್ಕೆ 'ದಿವ್ಯ'ದ ಸ್ಪರ್ಶವಿಲ್ಲದೆ ಮಹಾದೇವಿಯಕ್ಕನ (ಪುಟ-777) ''ಮಾನವನು ಮಾನವಕೆ ಮುಗಿದನೇ ಅಯ್ಯ'', ಉಕ್ತಿಯು ಮಾನವ ಭವ್ಯತೆಗೆ ಅನಂತತ್ವದ ಸ್ಪಂದನವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಡುತ್ತದೆ. ಇದನ್ನೇ ಪುಷ್ಟಿಗೊಳಿಸಿ ಮಾನವ ಅರಿವಿನ ಅದ್ಭುತವನ್ನು ಗುರುಚೆನ್ನಮಲ್ಲನ ಮಾತುಗಳಲ್ಲಿ ನೋಡಬಹುದು. ''ಯುಗ ಯುಗವ ದಾಟಿ ಪ್ರಾಣಕೆ ಪ್ರಾಣ ಹಡೆದು ನಡೆದಿಲ್ಲವೇ ಮನುಜ ಚಾರಿತ್ರ್ಯ ಪುರುಷ? ಅರಿವು ಸಾಮಾನ್ಯವೇ ಎಲೆ ತಾಯೆ ಮಾನವನ?'' ಹೀಗೆ ಹೇಳುತ್ತ ''ಅದ್ವೈತ ಬ್ರಹ್ಮಕ್ಕೆ ಹರವಿತ್ತು ಅರಿವು'' ಎಂದು ಹೇಳಿಸಿ ''ಹರಿಯಿತು ನಿಜದರಿವು ಮೀರಿ ದೇವರನು'' ಎಂದೂ ಉಸುರಿಸಿ ಪೂರ್ಣತೆಯ ದೇವರನ್ನೂ ಮೀರಿಸುವಂತೆ ಮಾಡಿದ್ದಾರೆ ಮಾನವ- ದೇವನನ್ನು.

ಭವ್ಯ ಕಾಂಡದ ಪ್ರಾರಂಭ ಗಿರಿಮಲ್ಲಯ್ಯನಿಂದ. ದ್ವೈತವು ಮಾನವ ನಿರ್ಮಾಣ ಎಂಬುದು ಗಿರಿಮಲ್ಲಯ್ಯನಿಂದ ಖಚಿತವಾಗುವುದು. 'ಜಗ' ಹಾಗೂ 'ತಾನು' ಇಲ್ಲವೆ 'ದೇವ' ಮತ್ತು 'ತಾನು' ಎಂಬ ಪ್ರಭೇದ. ಇದುವೇ 'ಸಾಕಾರ' ಹಾಗೂ ನಿರಾಕಾರ'. ಜಗ- ದೇವರು ನಿರಾಕಾರವಾದರೆ ತಾನು- ಮಾನವನೆಂಬುದು ಸಾಕಾರ. ಜಗ- ದೇವರಾಗಲು ಸಾಕಾರವಳಿಯಬೇಕೆಂಬ ಬಲವಾದ ಪ್ರತಿಪಾದನೆ. 'ಜಗದ ಕಾಯಕದೊಳಗೆ ದಾಸೋಹದೊಳಗಿದ್ದವರು ನಿರತರಾದರೆ ಮತ್ತೆ ಜಗಕೆ ಲೇಸಲ್ಲವೆ?'' ಪ್ರಶ್ನೆ ಗಿರಿಮಲ್ಲಯ್ಯನದು. ಜಗದ ಕಾಯಕ, ದೇವಕಾರ್ಯವೇ ಸರಿ. ಇದರೊಂದಿಗೆ ದಾಸೋಹ ತತ್ವ ಏಕೀಭವಿಸಿದರೆ ಜಗಕೆ, ಜಗವನ್ನೊಳಗೊಂಡ ಮಾನವನೇ ಲೇಸು. 'ಇದೂ ಕೂಡ ತನ್ನನ್ನು ತನ್ನೊಳಗೆ ಬಂಧಿಸಿದಂತೆಯೇ ಸರಿ ಎಂಬುದು ಗುರು ಚೆನ್ನಮಲ್ಲಯ್ಯನ ನಿಲುವು. ದೇವ- ರಾಕ್ಷಸರೆಲ್ಲರೂ ತಂ-ತಮ್ಮ ಬಲೆಯಲ್ಲಿ ಬಂದಿಗಳು; ಪಾರಾಗಲಾರರು; ಎಂಬ ಮಾತಿನಲ್ಲಿ ಹೆಚ್ಚು ಸ್ಪಷ್ಟಗೊಳ್ಳುತ್ತದೆ.

ಈ ಬಂಧನದಿಂದ ಮುಕ್ತಗೊಳ್ಳಲು ಕಾಯಕ ಧ್ವಜವೊಂದೇ ಪರಿಹಾರ ಮಾರ್ಗವೆಂಬ ಮನಂಬುಗುವ ಪ್ರತಿಪಾದನೆ ಗಿರಿಮಲ್ಲಯ್ಯನದು. ಮನುಷ್ಯ ಕುಲದ ಕಲ್ಯಾಣಕ್ಕೆ ಕಾಯಕವೇ ಮೂಲವೆಂಬ ಸಮರ್ಥನೆಗೆ ನುಲಿಯ ಚಂದಯ್ಯನು ಕಾಯಕಷ್ಟದ ಸುಖವ ದೇವರಿಗೆ ತೋರಿದ ರೀತಿ, ಮಾದಾರ ಧೂಳಯ್ಯ ತನ್ನುಳಿಯ ಮೊನೆಯೊಳಗೆ ಶಿವನಾಚೆ ಹೊಳೆವ ದಿವ್ಯ ತೇಜೋಮಯತೆ, ಕಂಪಣದ ಕಾಯಕದ ಮಾದಾರ ಚೆನ್ನಯ್ಯನ ಅಂಬಲಿಯನ್ನುಂಡು ಹಸಿವು ಹಿಂಗಿಸಿಕೊಂಡ ಪರಿಯು ಚೋಳ ಭೂಪಾಲನ ರಾಜಭೋಜನವನ್ನು ಮೀರಿಸಿತೆಂದು ಎದಾಹರಿಸುವ ಪರಿಯು ಅಪ್ಯಾಯಮಾನವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಸತ್ಯಕಾಯಕ ನಿತ್ಯ ದಾಸೋಹ ತೃಪ್ತಿಯೊಳು
ನಲಿನಲಿದು ವಾಸವಿಗಿಹನಯ್ಯ ಶಿವನು.
ಎಂದೋ ಎಂತೋ ಗಳಿಸಿಟ್ಟ ಸಂಪದ
ಶಿವಸತ್ಯ ಪಾತ್ರಕ್ಕೆ ಸಲ್ಲಬಲ್ಲುದೇ ತಂದೆ?
ತಂಗುಳಯ್ಯ ದುಡ್ಡು ಹಳಸಿ ಹೋಗಿಹುದು
ಕೊಡುವಲ್ಲಿ ಮನವಿಲ್ಲ ಕೊಂಬಲ್ಲಿ ರುಚಿಯಿಲ್ಲ
'ಲ್ಲದಯ್ಯ ಶಿವನ ಸತ್ಪಾತ್ರಕೆ''

ಗಿರಿಮಲ್ಲಯ್ಯನ ಈ ಮಾತುಗಳಂತೂ ಕಾಯಕದಲ್ಲಿ ಸತ್ಯತೆಯಿದ್ದರೆ ಅದುವೇ ನಿತ್ಯ ದಾಸೋಹವೆಂಬ ಅಪೂರ್ವ ಪ್ರತಿಪಾದನೆಯಾಗಿವೆ. ಅಲ್ಲದೆ ಇಂದಿನ ಮಾನವ ಜಗತ್ತಿಗೆ ಕೈಗನ್ನಡಿಯಾಗಿವೆ. ಅಲ್ಲದೆ ಇಂದಿನ ಮಾನವ ವಾಸ್ತವ ಜಗತ್ತಿಗೆ ಕೈಗನ್ನಡಿಯಾಗಿವೆ. ಸತ್ಯವಿಲ್ಲದ ಕಾಯಕ. ಸತ್ಯವಿಲ್ಲದ ಗಳಿಕೆಗಳು ತನಗೆ ಸಲ್ಲವು; ಅಂತೆಯೇ ಶಿವಸ್ವರೂಪಿಯಾದ ತನ್ನಿಂದ ಅಸ್ವೀಕೃತ. ಕಂಕರಿಯ ಕಕ್ಕಯ್ಯನು ಶಿವನನ್ನೂ ತನ್ನೊಂದಿಗೆ ಕಾಯಕದಲ್ಲಿ ತೊಡಗಿಸಿ ಮಾನವ ಶ್ರೇಷ್ಠತೆಯನ್ನು ಶಿವನ ಮೇಲೆ ಪ್ರಭಾವಿಸಿದುದಂತೂ ಭವ್ಯತೆಗೆ ದಿವ್ಯತೆಯ ಒಪ್ಪವಿದ್ದಂತೆ. ಹೀಗೆ ಕಾಯಕದ ಕೈಲಾಸ ಕೈಲಾಸವನ್ನೇ ಮೀರಿಸಿದೆ. ಇಷ್ಟಕ್ಕೆ ನಿಲ್ಲದೇ ಮಾರನ ವೇಮಯ್ಯ- ಮಡದಿ ಗಂಗಾದೇವಿಯ ಕಾಯಕ-ದಾಸೋಹಗಳ ಸಾಮರಸ್ಯತೆಯು 'ಕಾಯಕ ನಿವೇದನೆಯ ಅತ್ಯುನ್ನತ ಶಿಖರವಾಗಿದೆ. ಕಾಯಕಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಇಂದಿನ ದೃಷ್ಟಿಯನ್ನು ಖಂಡಿಸುವ ರೀತಿಯು ಭೂಸನೂರಮಠರಿಗೇ ವಿಶಿಷ್ಟವಾದುದು. ''ಕಾಯಕಪ್ಪದ ಸುಖ ಸ್ವರ್ಗದೊಳಗಿಲ್ಲ. ಮೃಗಳ್ಳ ಮನಗಳ್ಳರಿಗೆ ಸ್ವರ್ಗ ಕೈಲಾಸ'' ಕಾಯವನ್ನು ಕಷ್ಟಕ್ಕೊಳಪಡಿಸುವ ಸುಖವು ಎಲ್ಲಿಯೂ ದೊರೆಯದೆಂಬುದು ಮಾನವ ಕುಲದ ವೈಚಾರಿಕ ಇತಿಹಾಸದ ಸಾರಸರ್ವಸ್ವವಾಗಿದೆ; ಸತ್ಯದ ಸಾಕ್ಷಾತ್ಕಾರದ ಏಕಮೇವಾದ್ವಿತೀಯ ಹೆಜ್ಜೆಯಾಗಿದೆ. ಇದೊಂದು ಅಭೂತಪೂರ್ವ ಕೊಡುಗೆ. 'ದುಡಿವುದು ಕೊಡುವುದು ದಾಸೋಹಿ ಇರುವುದು''- ಮಂತ್ರವಲ್ಲವೆ ಜನಕೆ ಶರಣತಂತ್ರ?' (ಪುಟ : 774) ಗಿರಿಮಲ್ಲನ ಧೃಢ ನಿಲುಮೆಯನ್ನು ಅಕ್ಕ ಮಹಾದೇವಿಯು ಅನುಮೋದಿಸುತ್ತ ''ದುಡಿವ ದೇವರಿಗೆ ಮುಕ್ತಿಯ ಸುಖವ ಬೀರಿರುವ'' ಅಂದರೆ ತನ್ನ (ದೇವ) ಬಂಧನದಲ್ಲಿರುವ ದೇವರಿಗೂ ಸುಖವೆಂಬ ಮಾತನ್ನು ಉಸುರಿದುದು ಕಾಯಕ- ದಾಸೋಹ ಮಹಿಮೆಯ ತುತ್ತ ತುದಿಯಾಗಿವೆ. ಹೀಗೆ ಈ ಮಹೋನ್ನತ ತತ್ವವು ಮಾನವನ ಮಾನವಕೆ ಸೀಮಿತಗೊಂಡರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವ ಸಾಧನೆಗೆ ಮಹಾನ್ ಅಡ್ಡಿ; ಅಡ್ಡ- ಬೊಡ್ಡೆಯೆಂಬ ಸಕಾಲಿಕ ಎಚ್ಚರಿಕೆಯ ಗಂಟೆ ಮಹಾದೇವಿಯಕ್ಕನದು. ಮರವೆಯನ್ನು ದಾಟಲು ಜಂಗುಳಿಯ ಹವಣಲ್ಲ, ಮಾನವನನ್ನು ದಾಟಲು ಮಾನವದ ಹವಣಲ್ಲ. ಹೀಗೆ ತುಣುಕು ಮಾನವನ ಮಾನವ ದೀಪ ಬೆಳಗುತ್ತಿದೆ. ವಿಶ್ವವಿಸ್ತಾರ ಕಲ್ಯಾಣ ಪಥವನ್ನು ಅನುಸರಿಸಲು ಕಾಲಿಲ್ಲ, ಚೇತನವಿಲ್ಲ, ಬುದ್ಧಿ ಬುದ್ಧಿಯೊಳಿಲ್ಲ, ಭಾವದೊಳು ಆತುರವಿಲ್ಲ, ಕೋಟಿಯುಗ ಮುಳುಗಿದರೂ ಕತ್ತಲೆಯ ಕಡಲ ಮೇಲೆಯೇ ಮಾನವನು ತೇಲುತ್ತಿಹನು. ನಿಜದ ಅರಿವು ಬೆಳಗು ಚೈತನ್ಯಗಳನ್ನು ಅಳವಡಿಸಿ ಮಾನವನನ್ನು 'ಮಾನವ'ದಿಂದ ಬಿಡಿಸಿ ಕರೆದೊಯ್ವರು ಯಾರೆಂಬ ಆಹ್ವಾನ ಮಹಾದೇವಿಯಕ್ಕನದು.

ಮಾನವನ ನಿಜ ಮಹಿಮೆ ದೇವರಿಗೂ ತಿಳಿಯಲಾರದು. ಅವನ ಸೃಷ್ಟಿ ಪರಮ ವಿಶ್ವಾದ್ಭುತವಾಗಿದೆ.

ಬ್ರಹ್ಮರಾಕ್ಷಸ ಸೃಷ್ಟಿಯೊಡನೆ ಹೋರಾಡಿ
ನೆಲದೊಳಗೆ ಕಾಲು ಮುಗಿಲೊಳಗೆ ತಲೆಯಿಟ್ಟು
ಯುಗ ಯುಗವ ದಾಟಿ ಪ್ರಾಣಕೆ ಪ್ರಾಣಹಡೆದು
ನಡೆದಿಲ್ಲವೇ ಮನುಜ ಚಾರಿತ್ರ ಪುರುಷ?
ಅರಿವು ಸಾಮಾನ್ಯವೇ ಎಲೆ ತಾಯೆ ಮಾನವನ?''

ಎಂಬ ಗುರುಚೆನ್ನಮಲ್ಲನ ಮಾರುತ್ತರವು ನಿಜಕ್ಕೂ ಮಾನವ ಸಾಧನೆಯ ಉತ್ತುಂಗಶಿಖರವೇ ಆಗಿದೆ. ಮಾನವ ಜೀವನ, ಮಾನವ ಕುಲದ ಬದುಕೆಲ್ಲವೂ ದ್ವೈತದಲ್ಲಿಯ ಹೋರಾಟ, ದ್ವೈತವನ್ನು ಮೀರಿ ಅದ್ವೈತವಾಗಬೇಕೆಂಬ ಉದ್ವೇಗದ ಚರಿತ್ರೆಯೇ ಆಗಿದೆ. ಹೀಗಿದ್ದೂ ಅದ್ವೈತ ಬ್ರಹ್ಮಕ್ಕೆ ಹರವಿತ್ತು ಅರಿವು' ಎಂಬುದಂತೂ ದ್ವೈತವನ್ನು ಮೀರಿದುದರ ವಿಶಿಷ್ಟ ಸಂಕೇತವೇ ಸರಿ.

ಮಾನವನ ಈ ನಿಜದರಿವು ದೇವಕಲ್ಪನೆಯನ್ನೂ ಮೀರಿ ಹರಿದಿದೆ. ಈ ಅರಿವು ಪರಿಪೂರ್ಣ ಪರಿಶುದ್ಧಿಯಿಂದ ಪ್ರಾಪ್ತವಾಗಬಲ್ಲದು. 'ತಾ ಶುದ್ಧವಾದ ಶರಣಂಗೆ ಗೊಹೇಶ್ವರನು' ಎಂಬುದೊಂದು ಕಿಂಚಿತ್ತಾಗುತ್ತದೆ. ಅಂತೆಯೇ ಪೂರ್ಣನಾದ ಅಲ್ಲಮಪ್ರಭುವು ''ನಾ ದೇವನಲ್ಲದೇ ನೀ ದೇವನೇ?'' 'ನಾ ದೇವ ಕಾಣಾ ಗೋಹೇಶ್ವರಾ' ಎಂಬ ದೇವಮೀರಿದ, ರೂಪವನ್ನು ತೋರ್ಪಡಿಸಿ 'ನರನೆಂಬ ದೇವ ತಾ ನಿರಾಳವೋ' ಎಂಬ ಮಾತಿನ ಮೂಲಕ ಮಾನವನ ನಿಜಮಹಿಮ ದೇವರಿಗೆ ತಿಳಿಯದೆಂಬ ಹಂತಕ್ಕೆ ನಿಲ್ಲುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿವಿನ ಈ ಮಾನವ ಪರಾಕ್ರಮ ನಿಜಕ್ಕೂ ಇಂದು ಅದ್ಭುತ. ಮಾನವ ಅರಿವಿನ ದರ್ಶನ ಮೂಡಿಸುವ ಪರಿಯಂತೂ ಮಾನವ ಭವ್ಯತೆಯಿಂದ ಮಾನವ ದಿವ್ಯತೆಗೆ ಕೊಂಡೊಯ್ಯುವದು. ಇಹ-ಪರ, ಕೈಲಾಸ-ಸ್ವರ್ಗ, ಹದಿನಾಲ್ಕು ಲೋಕ, ಪೂರ್ವ- ಪಶ್ಚಿಮ, ದಕ್ಷಿಣೋತ್ತರ, ಕೃತತ್ರೇತದ್ವಾಪಾರ ಕಲಿಯುಗ, ಜ್ಞಾನ -ವಿಜ್ಞಾನ, ಬೆಳಕು- ಕತ್ತಲೆ, ಆಕಾಶ- ನಕ್ಷತ್ರ ಮುಂತಾದವುಗಳೆಲ್ಲವೂ ಮಾನವ ಅರಿವಿಗೆ ಘನೀಭೂತ ಸಾಕ್ಷಿಗಳಾಗಿವೆ. ಅರಿವು ಇವೆಲ್ಲವನ್ನೂ ಮೀರಿ ನಿರಾಲಂಬ ಸರ್ವಶೂನ್ಯ ಸ್ಥಿತಿಗೆ ಅವನನ್ನು ಪ್ರವೇಶಿಸುವಂತೆ ಮಾಡಿದೆ. ನಿಜಕ್ಕೂ ಇದು ಮಾನವಾದ್ಭುತ!

ಮಾನವ ಸಾಧನೆ, ಮಾನವ ಅರಿವು ಅತ್ಯಗಾಧ. ಏಕೆಂದರೆ ಅವನು ತನ್ನ ಹಾಗೂ ಜಗದ 'ಮೂಲ'ದ ಸಂಶೋಧನೆಯಲ್ಲಿ ತನ್ನ ಅಸ್ತಿತ್ವವನ್ನೇ ಪಣಕ್ಕೆ ಹಚ್ಚಿದ್ದಾನೆಂಬುದು ಸಮಕಾಲೀನ ಪ್ರಜ್ಞೆಯ ಪ್ರತೀಕವಾಗಿ ನೆಲೆಗೊಳ್ಳುತ್ತದೆ. ಇದೊಂದು ಅರಿವಿನ ವಿಪರೀತವಾದರೆ, ಅರಿತು ಅರಿಯದಂತಿರುವುದು ವೈಪರೀತ್ಯದ ಇನ್ನೊಂದು ಮುಖವಾಗಿದೆ. ಇದುವೇ ದ್ವೈತದ ಲಕ್ಷಣ. ಎರಡೂ ವಿಪರೀತ ಅವಸ್ಥೆಗಳು. ಒಂದು ಬಿಟ್ಟೊಂದು ದೊರೆಯು ಇದೇ ಮಾನವನ ಕುರುಹು. ನಮಗಿಂದು ಎದುರಾಗಿರುವ, ಅರಿವಿನ ಮರವೆಯಲ್ಲಿರುವ ಕಠೋರ ಸತ್ಯಸ್ಥಿತಿಯ ಚಿಂತನೆಯೂ ಅಷ್ಟೇ ಹೃದಯಂಗಮವಾಗಿ ಸ್ಫುಟಗೊಂಡಿದೆ ಇಲ್ಲಿ.

ಆಹಾರ-ನಿದ್ರಾ-ಭಯ-ಮೈಥುನ- ತಾಮಸ ಪ್ರಾಣ. ಇಂದು ನಾಳೆಗೆ ಹಣಕೆ ಹೋರಾಟ- ತನ್ನ ಸಂತತಿಗಾಗಿ ಉಳಿಸುವ ಹೋರಾಟ-ದವಸಧಾನ್ಯ ಮಣ್ಣಿಗೆ ಹೋರಾಟ- ಮಣ್ಣು ಸಾಲದೆ ರಾಜ್ಯಕ್ಕಾಗಿ- ಕಾಮಾತುರಕೆ ಹೆಣ್ಣಿಗಾಗಿ ಹೋರಾಟ- ಇಂಥವರೇ ಕೋಟ್ಯಾವಧಿ. ಇವರಲ್ಲಿ ಐದಾರು ಸಜ್ಜನರೂ ಇಲ್ಲದಂತೆ ನಿಜದರಿವಿನ ಮಾನವ ವಂಶ ಸಣ್ಣಾಗಿ ಸಾಯುತ್ತಿರುವ ಚಿತ್ರ. ಯಾವ ಅಪವಾದವೂ ಇಲ್ಲದಂತೆ ಮಾನವ ಅಂಧಕಾರದಲ್ಲಿ ಸಿಲುಕಿ ಒದ್ದಾಡುತ್ತಿದ್ದಾನೆ. ಈ ಅಂಧಃಕಾರದ ಜಾತ್ರೆಯ ನೂಕುನುಗ್ಗಲಿನ ತುಳಿತಕ್ಕೆ ಅಲ್ಪ ಸಂಖ್ಯಾತ 'ಹಗಲು ಮಾನವಗಣ' ಸಿಕ್ಕಿ ಸತ್ತಿಹುದೆಂದು ಹೇಳಿ, ಇದಕ್ಕಾಗಿ ಯಾವ ಗಮನವೂ ಇಲ್ಲವೆಂಬುದನ್ನು ''ಸತ್ತರೆ ನಕ್ಕಿಹವು ಕತ್ತಲೆಯ ಕಿಲಿಕಿಲಿ!'' ಮಾತಿನಲ್ಲಿ ಬಹು ಮಾರ್ಮಿಕವಾಗಿ ನಿವೇದಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿವಿನ ಅಳಿವು ನಿಜದವರಿಗೆ ನಾಂದಿ. ಅರಿವಿನ ಅಳಿವು ಮಾನವ-ದೇವರಿಬ್ಬರಿಗೂ ಸ್ವಾಭಾವಿಕ. ಈ ಅಳಿವು ಇಲ್ಲದಿರೆ ಜೀವನವಿಲ್ಲ, ಜೀವನ ಚಕ್ರವಿಲ್ಲ, ಅಂತೆಯೇ ವಿಶ್ವಚಕ್ರವೂ ಇರದು. ಹೀಗಾಗಿ ಈ ಸಮಸ್ಯೆಗೆ 'ಪ್ರಳಯವೊಂದೇ' ಪರಿಹಾರವೆಂಬ ಸಾತ್ವಿಕ ಆವೇಶದ ನುಡಿ ಗಿರಿಮಲ್ಲಯ್ಯನಿಂದ ಹೊಮ್ಮುವದು.

> "ಸುಟ್ಟಿಹನು ಸುಟ್ಟಿಹನು ಜಗದ ಬಣವೆಯನು-
> ಬೆಂಕಿಯೊಳು ತನ್ನರಳ ಹುರಿದುಕೊಳ್ಳುವ ಭರ!
> ತನ್ನ ಬೇಳೆಯ ಬೇಯಿಸಿಕೊಂಬ ಉದ್ಯೋಗ!!
> ತಾವುಳಿದರೇ ತಾಯೆ ಮನುಜಭಸ್ಮಾಸುರರು?"

ಮಾನವನಿಂದು ಭಸ್ಮಾಸುರನಾಗಿ ನಿಂತಿದ್ದಾನೆಂಬುದು ಸಾರ್ವತ್ರಿಕಗೊಂಡ ಆರ್ತನಾದ. ಭೌತಿಕ ಸಾಧನೆಗಳನ್ನೆಲ್ಲ ಕ್ರೋಢೀಕರಿಸಿ ತನ್ನ ಸಾವನ್ನು ಮುಂದಕ್ಕೆ ಹಾಕುತ್ತಿರುವುದರೊಂದಿಗೆ ವಿಶ್ವದ ಪೊಳ್ಳಿನಲ್ಲಿಯ ಇತರೇ ಗ್ರಹಗಳಲ್ಲಿ ವಾಸಿಸಬಲ್ಲ ಸಾಧ್ಯತೆಗೆ ನಿಲುಕಿದ್ದುದು ಸರ್ವವಿದಿತ. ಈ ಮಹಾನ್ ಸಾಧನೆಯ ಕವಲು ದಾರಿಗಳಲ್ಲಿ ಸೃಷ್ಟಿಯ ನಿಯಮಗಳನ್ನು ಮುರಿಯಲು-ಮಾರ್ಪಡಿಸಲು ಮುಂದಾಗಿದ್ದಾನೆ. ಇದರಿಂದಾಗಿ ಜಗವಲ್ಲ ಕಲ್ಮಷಗೊಳ್ಳುತ್ತಲಿದ್ದು, ಈ ಭೂಮಿ ಸೃಷ್ಟಿಯ ನಿರ್ಮಿತಿಗಳ ವಾಸಕ್ಕೆ ಅಸಹನೀಯವಾಗಬಹುದೆಂಬ ಸಂದೇಹ ಧ್ವನಿತಗೊಳ್ಳುತ್ತಲಿದೆ. ಈ ಮಾನವ ಭಸ್ಮಾಸುರ ಕಾರ್ಯವು ಪ್ರಳಯಕಾರಕವಾದೀತೆಂಬ ತಿಳುವಳಿಕೆ ಅಚ್ಚೊತ್ತಿದಂತಾಗುತ್ತಿದೆ. ಪ್ರಳಯದ ಪರಿಹಾರ ಸೂಚನೆಯ ಮಧ್ಯದಲ್ಲಿಯೇ ಉರಿವ ಜಗವಿದು ಉಳಿದು ಬಾಳಲಿ ಬದುಕಲೆಂಬ ಆಶಾ ಕಿರಣವನ್ನು ಗಿರಿಮಲ್ಲ ಅಭಿವ್ಯಕ್ತಗೊಳಿಸಿದುದು ಎ. ಜೆ. ಟಾಯಂಬಿ ವಿಚಾರಕ್ಕೆ ಸಾಟಿಯಾದುದು. ಜಗದ ಹಿತಕ್ಕಾಗಿ ಅಳುವ, ಸುಟ್ಟುಕೊಳ್ಳುವ, ಸಾಯುತ್ತಿರುವ ಪ್ರಜ್ಞೆಯ ಪ್ರತೀಕವಿದು.

ಇಂಥ ಎದೆಯಳಲು, ಗಂಭೀರ ಪ್ರಾರ್ಥನೆಯು ಕಾರುಣ್ಯರಸಪಾಕವಾಗಿ ಹರಿದರೆ, ಜಗದೊಳೆಚ್ಚೆತ್ತ ಭಕ್ತಿಯ ಶಕ್ತಿ ಚೈತನ್ಯ ಹರಿದರೆ ಜಗದಕಿಚ್ಚಿನ ಕೆಂಡ ಕರಿಗೊಳ್ಳಬಹುದಲ್ಲದೆ ಬೂದಿಯೊಳು ಹೊಸ ಜಗವು ಹುಟ್ಟಬಹುದೆಂಬ ಆಶಾವಾದಿಯ ದ್ಯೋತಕವಾಗಿ ಗುರುಚೆನ್ನನುಸುರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುವೆಂಪು, ರಾಮಾಯಣ ದರ್ಶನಂ ಮಹಾಕಾವ್ಯದದಲ್ಲಿ ಹೇಳುವಂತೆ "ಬಾಳ್ಗಬ್ಬದೊಳ್ ಕರುಣೆ ತಾಂ ಬೇನೆಗುದಿದೊಡಮಲ್ತೆ ಮಹಾಕಾವ್ಯ ಶಿಶು ತಾಂ, ಪೊರಪೊಣ್ಮುತಾಂ" ವಾಸ್ತವ ಕಠೋರ ಸತ್ಯದಲ್ಲಿ ಭೂಸನೂರಮಠರ ಕರುಣಾದ್ರ್ಯ ಹೃದಯ ಬೇನೆಗುದಿದ್ದಿರುವದು ಇಲ್ಲಿ ಸಾಕ್ಷಿಭೂತಗೊಂಡಿದೆ. ಅಂತೆಯೇ ಈ ಮಹಾಕಾವ್ಯವು ಉದಯಿಸಿದೆ. ಹಗಲುಗತ್ತಲು, ನೆಳಲು-ಬೆಳಕು, ಆಶೆ-ನಿರಾಶೆ, ಜೀವನ- ಮರಣಗಳ ದ್ವಂದ್ವಕ್ಕೆ ಜಗವೆಂಬರು. ಈ ದ್ವಂದ್ವವನ್ನು ಮೀರುವುದೇ ನಿಜದರಿವು. ಈ ನಿಜದರಿವೇ ಮಾನವಸ್ಥಲ. ಅಂತೆಯೇ ಈ ಅರಿವು ದೇವನನ್ನು ಮೀರುವುದು. ಈ ಹಾತೊರಿಕೆಯೇ ಜಗದ ಲೀಲೆ. ಈ ಲೀಲೆಗೆ ಕೊನೆಯಿಲ್ಲ. ಮೊದಲಿನ ಜಂಜಡವನ್ನು ಕಟ್ಟಿಕೊಳ್ಳಬೇಕಿಲ್ಲ. ಈ ಲೀಲೆ ಕೊನೆಕೊಂಡರೆ ಎಲ್ಲವೂ ಅರ್ಥಶೂನ್ಯ.

"ಜಗದ ಲೀಲೆಯು ಮುಗಿದು ಸುಖಶಾಂತಿಯಲ್ಲಲ್ಲಿ
ನೆಲಸಿದರೆ ಮಾನವ್ಯದರ್ಥವೇನೈತಂದೆ?
ವೈಕುಂಠ ಸ್ವರ್ಗ ಕೈಲಾಸಗಳ ಮೀರಿರುವ,
ಆಕಾಶ ಭಿತ್ತಿಯೊಳು ಬರೆದ ವಿಶ್ವವಿಲಾಸ
ಬ್ರಹ್ಮಸೌಂದರ್ಯದ ತಂತ್ರಮಂತ್ರವೇನಯ್ಯ?
ವ್ಯರ್ಥವಲ್ಲವೆ ಬ್ರಹ್ಮಸೃಷ್ಟಿಯರ್ಥ?
ಒಂದೇ ಸುಖಶಾಂತಿ ಒಂದೇ ಸುಖಶಾಂತಿ
ಸವಿಯಪ್ಪುದೇ ಜಗದ ಮಾನವನ ನಾಲಿಗೆಗೆ?"

ಮಹಾದೇವಿಯಕ್ಕನ ಈ ಮಾತು ತುಮುಲ, ಹೋರಾಟ, ವಿರೋಧಾಭಾಸ ಗಳುಳ್ಳ ಮಾನವಸ್ಥಲಕ್ಕೆ ಅರ್ಥವನ್ನು ನೀಡಬಲ್ಲವು.

ಗುರುಚೆನ್ನಮಲ್ಲಯ್ಯ ಅಕ್ಕನ ಈ ಮಾತಿಗೆ ಮಾತು ಬೆಳೆಸಿ, ಮತಿತಾರ್ಥವನ್ನು ಮನಂಬುಗುವಂತೆ ಮಾಡಲೆಳಸುವನು. ಜೀವನದ ರಣರಂಗ ಅಸಮಯುದ್ಧವಾಗುತ್ತಿದ್ದು ಸತ್ಯ ಬದುಕುವ ಕಾಲ ವಿಪರೀತ ವಿಷಮವಾಗಿದೆಂದು ಹೇಳಿ ನೆಲದ ಮಾನವನುಳಿದು ಬಾಳಬೇಕಾದರೆ ಜಗದ ವಿಷಮತೆ, ವೈಪರೀತ್ಯಗಳನ್ನು ಗೆಲ್ಲಲೇ ಬೇಕು; ಇಲ್ಲವಾದರೆ ಮಾನವ ಅಧ್ಯಾಯ ಲೋಕದಲ್ಲಿ ಮುಗಿದೇ ಹೋಗುವುದೆಂಬ ಧೃಡವಾದ ನಿಲುಮೆಯನ್ನು ತಾಳುವನು. ಈ ಮಹಾಕಾರ್ಯವನ್ನು ಬಸವಣ್ಣ ಮಾಡಿದ್ದಾನೆ. ಅವನು ಕಲ್ಯಾಣವನ್ನೂ, ನಿರ್ಭಯವನ್ನೂ ತಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವನಿಗುರಿಹಚ್ಚಿ ಸುಟ್ಟು ಬೆಳಗುವ ಮಹಾ ಬೆಳಗನ್ನು ತಂದಿದ್ದಾನೆ. ಬಸವಣ್ಣ ನಿರ್ಮಿಸಿದ ಜೀವನ ಮಹಾಯುದ್ಧರಂಗವನ್ನು ಮತ್ತೆ ವಿಶ್ಲೇಷಿಸಲಾಗಿದೆ. ಈ ಯುದ್ಧದಲ್ಲಿ, 'ನಾನಿಲ್ಲ ನೀನಿಲ್ಲ ಎಲ್ಲ ತೇಜಗಳೂ ಬಯಲಾದ ಬಯಲುಗಳು', ಎಂಬ ಮಾತು ನಿಲ್ಲದ, ನಿಲ್ಲಿಸಲಾರದ, ನಿಲ್ಲಿಸಲಾಗದ ನಿತ್ಯನೂತನ ಘರ್ಷಣೆಯ ಒಪ್ಪಿಗೆ. ಯಾವುದೇ ಘರ್ಷಣೆಗೆ ಮೂಲವೊಂದಿರಲೇಬೇಕು; ಪರಮಾತ್ಮನ ಸೃಷ್ಟಿಯಲ್ಲಿ ಘರ್ಷಣೆ ಹುಟ್ಟಿಕೊಳ್ಳುವ ಪ್ರಬೇಧಗಳಿಲ್ಲದಿದ್ದರೂ, ಮಾನವನು ಕೃತಕವಾಗಿ ಎರಡು ಭೇದಗಳನ್ನು ನಿರ್ಮಿಸಿಕೊಂಡಿದ್ದಾನೆ. 1) ಜಗವ ಸಂಪಾದಿಸುವ ಭವಿಯೊಂದು ಭೇದ 2) ನಿಜವ ಸಾಧಿಪ ಭಕ್ತನೊಂದು ಭೇದವೆಂಬ ವಿಚಾರವು ದ್ವೈತ, ಎರಡು, ದ್ವಂದ್ವಗಳೆಲ್ಲ ಮಾನವಾಂತರ್ಗತ ಸೃಷ್ಟಿಯ ನಿರ್ಮಾಣವೆಂಬ ತತ್ವವನ್ನೇ ಪೋಷಿಸುವವು. ಈ ಸಮರ್ಥನೆಗೆ ಪುಟಪುಟಗಳಷ್ಟು ವಸ್ತುವನ್ನು ಒದಗಿಸುತ್ತ, ಅಗಣಿತತೆಯನ್ನೇ ತಲುಪುವರು. ಇದೊಂದು ಮುಗಿಯಲಾರದ ಲೆಕ್ಕ. ಆದರೂ ಎಲ್ಲ ದ್ವಂದ್ವದಲ್ಲಿ ಸಿಲುಕಿದವರೆಲ್ಲ ನನ್ನವರು,-ತನ್ನವರು, ಎಲ್ಲರೂ ಒಂದೇ.

ವಿಷಮತೆ, ರೌದ್ರತೆ, ಭೀಕರತೆಗಳ ಸಂಗಮನಾದ ಮಾನವನಲ್ಲಿ, ಶಿಷ್ಟತೆ, ಸೌಜನ್ಯ, ಶಾಂತಿಗಳೂ ನೆಲೆಸಿವೆಯಾದರೂ ಕೆಡುಕಿನ ಮೇಲುಗೈ ಮಾಡುತ್ತಿರುವ ಮಾನವಗೆ 'ಮನೆಯ ದೀವಿಗೆಯೆಂದು ಮುದ್ದುಕೊಟ್ಟವರುಂಟೇ?' ಎಂದು ಅಸಹನೀಯತೆಯ ಪ್ರಶ್ನೆಯನ್ನು ಗಿರಿಮಲ್ಲನ ಮುಖೇನ ಇರಿಸಿದ್ದಾರೆ. ಅಲ್ಲದೆ ದುಷ್ಟತನವನ್ನೆಲ್ಲ ಕೇಂದ್ರೀಕರಿಸಿಕೊಂಡು ಕಲ್ಯಾಣಕಾರ್ಯವನ್ನು ಹೇಗೆ ಸಾಧಿಸಬಹುದೆಂಬ ಪ್ರಶ್ನೆಯು ಸಮಸ್ಯೆಗಳ ಕೇಂದ್ರಬಿಂದುವಾಗುವುದು. ಮೈಮರೆದು ತಮ್ಮರಿವು ತಮಗಿಲ್ಲದೆ ಹಾದಿ ತಪ್ಪಿ ಕತ್ತಲೆಗೆ ಮಾನವ ನಡೆದಿದ್ದಾನೆ. ಅಕ್ಕಮಹಾದೇವಿಯಂಥ 'ಪೂರ್ಣ' ಕಳೆಗಳು ಬೆಳಗನೊತ್ತರಿಸಿ ತಂದರೆ ಸತ್ಯವಂತರಿಗೆ ಹಾದಿ ಕಾಣುವುದೆಂಬ ಸಾಂತ್ವನಪರ ನುಡಿಯೂ ಅದೇ ಉಸುರಿನಲ್ಲಿ ಒತ್ತರಿಸಿ ಬಂದಿದೆ. ಹೀಗೆ ಕತ್ತಲೆಯ ಬೆಳಗಿಸುವ ಅಸಮಾನ್ಯ ತಂತ್ರವು ಮಾನವನಲ್ಲಿಯೇ ಅಡಗಿದೆ. ಈ ತೆರನಾಗಿ ಆಕಾಶಕ್ಕೇರುತ್ತಿರುವ ಮಾನವನು ಪಾತಾಳಕ್ಕೆ ಏಕೆ ಇಳಿಯುತ್ತಿದ್ದಾನೆಂಬುದು ಮಹಾದೇವಿಯಕ್ಕನ ಮರು ಪ್ರಶ್ನೆ. ಗುರುಚೆನ್ನಮಲ್ಲನ ಮುಖಾಂತರ ಈ ಪ್ರಶ್ನೆಯನ್ನು ಎದುರಿಸುವ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1) ''ದಾಸೋಹ ಕಾಯಕವ ಲಿಂಗಕ್ಕೆ ಮಾಡಿದರೆ, ಕಲ್ಯಾಣಕಾಯಕ ಹರಿಯಿತ್ತು ವಿಶ್ವಕ್ಕೆ-'' ಲಿಂಗವನೊಳಗೊಂಡ ತನಗೇ 'ದಾಸೋಹ ಕಾಯಕ'ವನ್ನು ಮಾಡಿದರೆ 'ಕಲ್ಯಾಣಕಾಯಕ'ವು ವಿಶ್ವವನ್ನೊಳಗೊಂಡ ತನ್ನೆಡೆಗೆ ಹರಿಯುವುದು.

2) ''ಪ್ರೇಮ ವಿಶ್ವಪ್ರೇಮ, ಪ್ರೇಮ ಸತ್ಯಪ್ರೇಮ, ಹೃದಯದೊಳು ಹರವಿಹುದು ಶರಣ ಸಂತತಿಯಾ''- ಶುದ್ಧ ಪ್ರೇಮ, ಸತ್ಯಪ್ರೇಮ, ವಿಶ್ವಪ್ರೇಮ ಗಳೆಲ್ಲವೂ ಸಾಕಾರಗೊಗೊಂಡರೆ ಹೃದಯಯದಲ್ಲಿ' 'ಶರಣ' ಸಂತತಿಯು ಹರಡುವದು. ಪ್ರೇಮವು ಜೀವಕ್ಕೆ -ಜೀವಿಗೆ ಮೂಲಭೂತವಾಗಿದ್ದು ಉಳಿದೆಲ್ಲವೂ ಪ್ರೇಮೋದ್ಭೂತ. ''ದ್ವೇಷ ಬಂದರೆ ತನ್ನ ಪ್ರೇಮವಹೇ ಉತ್ತರ''. ''ದ್ವೇಷ ಭಾಷೆಗೆ, ಪ್ರೇಮಭಾಷೆ ಮಾರ್ನುಡಿವುದು''.

3) ''ಹೋರಾಡಿ ಹೋರಾಡಿ ಮೂಡಿತ್ತು ತಿಳಿವಳಿಕೆ''. ಆಂತರಿಕ- ಬಾಹ್ಯ ಹೋರಾಟಗಳು ನಿರಂತರವಾಗಿ ನಡೆದನಂತರವೇ ತಿಳಿವಳಿಕೆ ಮೂಡುವುದು. ಪ್ರೇಮ ಅಂಕುರಿಸಿ ಆವಿರ್ಭವಿಸಬಲ್ಲದು.

4) ''ಅವಗುಣವ ತಿದ್ದುವರೆ ಮಾನವನ ತೀಡುವರೆ, ಎದ್ದು ಬರಬೇಕಣ್ಣ ತನ್ನೊಳಗೆ ಗುರುಪುರುಷ''. ತನ್ನೊಳಗಿನ ಅರಿವೆಂಬ ಗುರುವ ಜಾಗೃತಗೊಳ್ಳಬೇಕು. ಪರಿಹಾರಾತ್ಮಕ ಈ ನಾಲ್ಕರ ಸೂತ್ರವನ್ನು ಅನುಷ್ಠಾನಕ್ಕೆ ತರಲು 'ಅರ್ಪಣ' ತಂತ್ರವೇ ತಾರಕವೆಂದು ಅಕ್ಕಮಹಾದೇವಿಯ ಉದಾಹರಣೆಯ ಮೂಲಕ ಸಮರ್ಥಿಸುವಳು.

''ಜಗವನೆಲ್ಲವನೆಲ್ಲವ ಕಳೆದು ಬಯಲು ಬತ್ತಲೆಯಾಗಿ
ಜಗದೊಳಗೆ ತಾನಿಂದು ಬದುಕಿ ಬಾಳಿಹಳೆಂತು?''

ಈ ಜಗತ್ತಿನಲ್ಲಿ ನಿಂತು, ಬದುಕಿ, ಬಾಳಿ, ಈ ಜಗವನ್ನೇ ಕಳೆದು ಬಯಲು ಬತ್ತಲೆಯಾಗಿರುವ (ಅಕ್ಕ) ಈ ವ್ಯಕ್ತಿಯು ಜೀವಂತ ಸಾಕ್ಷಿ. ಜಗದಿಂದ ಓಡಿ ಹೋಗದೆ, ಜಗದ ಜಂಜಡಕ್ಕೆ ತುತ್ತಾಗದೆ ಜಗವನ್ನೇ ಗೆದ್ದು ಜಗಕೇ ಮಾರ್ಗದರ್ಶನ ನೀಡುವ ಅದ್ಭುತ ಉದಾಹರಣೆಯದು. ತನಗೆ ತಾನು ಅರ್ಪಿಸಿಕೊಂಡರೆ ಜಗವೆಲ್ಲ ತನಗರ್ಪಿತ. ಅರ್ಪಿತನೇ ದೇವನನು ಮೀರಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣ. ವಿಶ್ವದಲ್ಲಿ ತುಂಬಿರುವ ಕಲ್ಯಾಣವಿಶ್ವದ ಪದರುಗಳನ್ನು ಬಿಚ್ಚುವ ಮಹಾನ್‌ಶಕ್ತಿ ಶರಣನಿಗೆ ಮಾತ್ರ ಮೀಸಲು. ಅರಿವಿನ ಮುದ್ದೆಯಾದ ಶರಣ-ಮಾನವ ಕಂದೆರೆದು ಬಯಲೊಳು ನಿಂತು ನೋಡಿದರೆ, ಒಳ-ಹೊರಗು ತುಂಬಿರುವ ವಿಶ್ವಭೂಮವೇ ಗೋಚರಿಪುದು. ಅದುವೇ ಹೊಸ ಹೊಸತು ಅರಿವಿನನುಭವದ ಸಂಪದವಾಗುವದು. 'ಜಗದ ನಿಜ ತನ್ನೊಳಗೆ, ತನ್ನ ನಿಜ ಜಗದೊಳಗೆಂಬ' ಇರವು ಹಬ್ಬಿ, ಎಲ್ಲರ ಅರಿವೂ ಹರವಿ ಪ್ರಣವ ಸೌಂದರ್ಯದ ದರ್ಶನವು ತಾನೇ ತಾನಾಗಿ ಲಭಿಸುವುದು. ಈ ದರ್ಶನವೇ ಉತ್ತುಂಗ ಸಾಧನೆಯ ತುತ್ತ ತುದಿ. ಇಂಥ ಸಾಧನೆಗೆ ನಿತ್ಯವೂ ಸಾಕ್ಷಿಯಾಗಬಲ್ಲವರು ಮಾನವರ ಮರೆಯ ದೀವಿಗೆಗಳಾಗಿ ಬೆಳಗುತಿಹರು. ಈ ಬೆಳಗು ಚೈತನ್ಯದ ತೆರೆದ ಕಣ್ಣಿನ ನೋಟದಿಂದ ಅಂಕುರಿಸಿ ಬಂದ ಮಣ್ಣಿನ ಮಹಾದೇವನಾದ ಮಾನವನೇ ಕಲ್ಯಾಣದ ಹಬ್ಬುಗೆಯ ಬಳ್ಳಿ. ತನ್ಮೂಲಕ ಪ್ರಜ್ವಲಿಪುದು ವಿಶ್ವಕಲ್ಯಾಣದ ಉರಿ.

ಗುರುಚೆನ್ನಮಲ್ಲನ ಈ ನಿಲುವಿಗೆ ಅಪೂರ್ವ ಆಹ್ವಾನ ಕಾದಿದೆ ಗಿರಿಮಲ್ಲನಿಂದ. ಆಶೆ, ಒಳಿತು, ಪ್ರೇಮವೆಂಬ ಸಾತ್ವಿಕತೆಯ ಹಿಮಾಲಯಸದೃಶ ಸಾಕ್ಷಿಗಳನ್ನೆಲ್ಲ ಅಲ್ಲಗಳೆದು ವಿಶ್ವಸಮತೋಲವನ್ನೇ ಅಲುಗಿಸುವ ಪ್ರಶ್ನಾವಳಿಗಳು ಮಾನವ ಹಾಗೂ ಈ ಜಗದ ವೈಚಿತ್ರ್ಯಗಳನ್ನೆಲ್ಲ ಸ್ಫೋಟಗೊಳಿಸುವ ಸಾಹಸಪೂರ್ಣ ಆಹ್ವಾನಗಳು. ನಾಗರಿಕತೆಯ ಸಾಂಸ್ಕೃತಿಕ ಇತಿಹಾಸವೇ ತಲೆತಗ್ಗಿಸುವ ವಾದ ವೈಖರಿಯು. ''ಎಂದು ಬರುವದು ನಿಮ್ಮ ನಿಮ್ಮ ಕಲ್ಯಾಣವಿಲ್ಲಿಗೆ'' ಎಂಬ ತಲೆಕಟ್ಟಿನಲ್ಲಿ ಸಂಗ್ರಹಿತವಾಗಿದೆ. ಕೆಳಗೆ ಬಿದ್ದವರ, ಕೆಳಗೆ ಬೀಳಿಸಿಕೊಂಡವರ ಆರ್ತನಾದವು ವಿಶ್ವಧ್ವನಿಯಲ್ಲಿ ಮೊಳಗುವಂತಿದೆ ಗಿರಿಮಲ್ಲಯ್ಯನ ಧ್ವನಿ. ಕತ್ತಲೆಯ ಕಾಂಡದ ದರ್ಶನವು ವಿಚಾರತರಂಗಗಳನ್ನು ಬಡಿದೆಬ್ಬಿಸಬಲ್ಲುದಾದರೆ, ಕತ್ತಲೆಯ ಕಾಂಡವು ಮಾನವನಿಗೆ ತನ್ನ ಬಗೆಗೆ ಅನುಕಂಪವನ್ನು ನಿರ್ಮಿಸುವಂತಾದರೆ, ಆ ವಿಚಾರತರಂಗ- ಅನುಕಂಪಗಳನ್ನು ಉಜ್ಜಿನೋಡಬಹುದಾದ ಒರೆಗಲ್ಲಾಗಿದೆ. ಗಿರಿಮಲ್ಲನ ಈ ಪ್ರಶ್ನೆಗಳ ಸರಮಾಲೆ. ವಿಶ್ವದ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ಅಧಿಕಾರಶಾಹಿ, ಪುರೋಹಿತಶಾಹಿ ಹಾಗೂ ಬಂಡವಾಳಶಾಹಿಗಳನ್ನು ಏಕ ಕಾಲಕ್ಕೆ ಕೆಣಕಿ ಅವುಗಳನ್ನು ಹಣಿದು ನಿಲ್ಲಲು ಅಣಿಗೊಂಡು, 'ತನ್ನ ತಾನರಿಯಬೇಕೆಂಬ' ಮಹೋನ್ನತ ಸಾಧನೆಯ ದಾರಿದೀಪವನ್ನೇ ಹಚ್ಚಿದ, 'ಕಲ್ಯಾಣ' ದ ಅಡಿಪಾಯವನ್ನೇ ಬುಡಮೇಲು ಮಾಡುವಂತೆ ಗಿರಿಮಲ್ಲನ ಆಹ್ವಾನವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಂತಿದೆ. ಈ ಮಹಾಕಾವ್ಯದ ಮಹಾಸಾಗರವನ್ನೇ ಆಲ್ಲೋಲಕಲ್ಲೋಲ ಮಾಡುವ ಮಾತುಗಳಿಲ್ಲಿವೆ. ಶ್ರೀ ಸಾಮಾನ್ಯನ ಪಾಡು ನಿಸರ್ಗ- ನಿರ್ಮಿತ, ನಿಸರ್ಗ- ನಿಯತ ನಿಯಮಗಳ ಉಲ್ಲಂಘನೆಯೇ? ಇಲ್ಲವೆ ಅದಕ್ಕನುಗುಣವಾಗಿ ಮುಂದುವರಿಯುತ್ತಿರುವ ಪಾಡೇ? ಈ ಪಾಡಿಗೆ ಬಲಿಯಾಗಿ ಸಾಮಾನ್ಯನು ಮುಕ್ತಿಹೊಂದಬೇಕೇ? ಕತ್ತಲೆಯ ಮನೆಯಲ್ಲಿ ಬದುಕಿರುವ ಸಾಮಾನ್ಯನು ಬೆಳಕುಕಾಣದೇ ವಿಧಿಯನ್ನು ಶಪಿಸುತ್ತ ಬದುಕಬೇಕೆ? ಈ ದಿಶೆಯಲ್ಲಿ ತಿಳಿದವರ, ಅರಿತವರ, ಸಾತ್ವಿಕರ, ಸಾಧ್ವಿಗಳ, ಸಜ್ಜನರ ಪಾತ್ರವೇನು? ಇವರೆಲ್ಲರೂ ಇದ್ದು, ಬದುಕಿ ಸಾಮಾನ್ಯನ ನರಳುವಿಕೆ, ಹೊರಳಾಟಗಳನ್ನು ಕಂಡು ಏನು ಮಾಡಿದರು? ಇಂಥವರು ಹುಟ್ಟಿದರೇಕೆ? ಸತ್ತರೇಕೆ? ಮಾನವಸ್ಥಲದ ಕೆಳಗಿರುವವರ ಹುಟ್ಟಿನ- ಸಾವಿನ ಉದ್ದೇಶವೇನು? ಮಾನವಸ್ಥಲದಲ್ಲಿ ಪವಡಿಸಿರುವ ಕಲ್ಯಾಣ ಹಾಗೂ ಅದರ ಸಂತತಿಯಾದ ಮಹಾನುಭಾವರಿಗೆ ಈ ಗವಿಲೋಕ ಕಾಣದೇ? ಅವರು ಇದಕ್ಕೆ ಹೊರತೇ? ಮಾನವಹೀನ ಪ್ರಪಾತಕ್ಕೆ ಇಳಿದು ತಿರುಗಿ ಹತ್ತಲಿಕ್ಕೆ ಇವರಿಗೆ ನಿಚ್ಚಣಿಕೆಯಿಲ್ಲವೇ? ನಿಷ್ಕಾರಣವಾಗಿ, ರೋಗ-ರುಜಿನ, ಪೀಡೆ-ಪಿಡುಗು, ಕೂಸು-ಯೌವ್ವನ-ಮುಪ್ಪು ಮುಂತಾದವುಗಳಿಗೆ ಬಲಿಯಾಗುತ್ತಿರುವ ಸಾಮಾನ್ಯರನ್ನು ಕಂಡು ದೇವರೇ ಅತ್ತು ಬಿಡುವ ಸ್ಥಿತಿಯನ್ನು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ದೇವಮೀರಿದ ಮಾನವರು ಕಾಣಲಾರರೇ? ಕಂಡರೆ ಏನು ಮಾಡಿದ್ದಾರೆ?

ನಿಜವಾಗಿಯೂ ಮಾನವ ವೈಚಾರಿಕತೆಯ ಸಂದಿಗ್ಧತೆಯೇ ಇಲ್ಲಿ ಮಡುಗಟ್ಟಿ ನಿಂತಿದೆ. ತನ್ನೆಲ್ಲ ಸಾಧನೆಯನ್ನು ಪಣಕ್ಕೆ ಹಚ್ಚಿ ನಿಂತರೂ ಬಿಡಿಸಲಾಗದ ಪ್ರಶ್ನೆಗಳಿವು. ದ್ವಂದ್ವ- ದ್ವೈತಗಳ ಅಸ್ತಿತ್ವದ ನಿರಾಕರಣೆಯನ್ನು ಹುಸಿಗೊಳಿಸಲಾಗದಂತಿರುವ ಜಟಿಲತೆಗಳಿವು.

''ಇಲ್ಲಿ ಬಿಟ್ಟಿತು ಬಿರುಕು ಒಡಕು ಒಡಮೂಡಿತ್ತು
ಎತ್ತರದ ನಿಮ್ಮವರು ಕಲ್ಯಾಣದೊಳಗಿರಲಿ
ನಮ್ಮ ಕೋಟೆಯ ಪಾಡು ನಮಗಿರಲಿ ತಂದೆ''- ಗಿರಿಮಲ್ಲನ ನಿರ್ಣಯವಿದು.

ಮಾನವ ವೈಚಾರಿಕ ಅಸಹಾಯಕತೆಯ ತುತ್ತತುದಿಯಿದು. ಯಾವ ವಿಜ್ಞಾನ, ತತ್ತ್ವಜ್ಞಾನ ಇಲ್ಲವೇ ರಹಸ್ಯಶಾಸ್ತ್ರಗಳೂ ಎದುರಿಸಲಾಗದ, ತಿಳಿಯಲಾಗದ, ತಿಳಿದರೂ ಬಿಡಿಸಲಾಗದ, ಆದಿ- ಅಂತ್ಯಗಳಲ್ಲದ ಅನೂಚಾನವಾಗಿ ಸಾಗಿ ಬಂದ ಸ್ಥಿತಿಯಿದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವ ಅರಿವು, ಅರಿವಿನ ಮೂಲಕದ ಅವನ ಸಾಧನೆಯು ಅಗಾಧ. ಇದರೊಂದಿಗೆ ಗಿರಿಮಲ್ಲನ ಬಿಡಿಸಲಾಗದ ಪ್ರಶ್ನೆಗಳು ಅತ್ಯಗಾಧ. ಹೀಗೆ ಕೋಟಿ ಕಾಲದ ಪ್ರಶ್ನೆಮೂರ್ತಿ ಗಿರಿಮಲ್ಲ. ಮತ್ತೆ ಈ ಪ್ರಶ್ನೆಗಳ ವಿಶ್ಲೇಷಣೆಗೆ ಗುರುಚೆನ್ನನನ್ನು ಅಣಿಗೊಳಿಸುವುದು. ಮಾನವಸ್ಥಲದವರು ಬೆಳಗಿನ ಮಹಾಸ್ಥಲಕೆ ನಡೆದಂತೆ ಬಿರುಕು ಕೊರಕಲಾಗಿ, ಅಂತರವು ಘನವಾಗಿ ನಿಲ್ಲುವ ಭೀಕರತೆಯು ತಲೆದೋರುವುದು. ಹೀಗೆಂದು ಮಾನವಸ್ಥಲದ ಕೆಳಗಿರುವವರನ್ನು ಅವರವರ ಪಾಡಿಗೆ ಬಿಟ್ಟುಬಿಡಬೇಕೇ? ಇದೊಂದು ವಿಶ್ವಚೇತನದ ಲೆಕ್ಕ. ಈ ಲೆಕ್ಕವನ್ನು ವಿಶ್ವಚೇತನವೇ ಬಿಡಿಸಿ ತೋರಿಸಬೇಕೆಂಬ ಗುರುಚೆನ್ನನ ನಿಲುವಿಗೆ ಮಹಾದೇವಿಯಕ್ಕ ಮಾರ್ದನಿಸುವಳು.

ಈ ಅಧೋಗತಿಯ, ನಿರಾಶೆಯ ಚಿತ್ರವನ್ನು ಅಕ್ಕ ಸ್ವೀಕರಿಸುತ್ತ ದೇವರೇ ಎಣಿಸದ ತಪ್ಪಿನ ಲೆಕ್ಕವನ್ನು ಮಾನವಸ್ಥಲದವರೇಕೆ ಇಡಬೇಕೆಂದು ಕೇಳುತ್ತಾಳೆ ಆಕೆ.

"ವಿಶ್ವ ಕಲ್ಯಾಣದೊಳು ವಿಶ್ವಪ್ರೇಮ
ವಿಶ್ವಪ್ರೇಮದೊಳು ವಿಶ್ವಕ್ಷಮಾಭಾವ
ತುಂಬಿದರೆ ಕಲ್ಯಾಣ ಪಥ ಸುಗಮವಾಯಿತು"

ಎಂಬ ಪರಿಸಮಾಪ್ತಿಯ ಪರಿಹಾರ ಸೂಚಿಸಿದರೆ, ಇಂಥ 'ಪ್ರೇಮ ಕಲ್ಯಾಣ'ಗಳೇ ಮೂರ್ತಿವೆತ್ತವರಾಗಿ ಮಾನವಸ್ಥಲದವರು ಮಾರ್ಪಾಡಾಗ ಬೇಕು. ಆದರೆ, ಅಂಥ ವೀರರು, ಧೀರರು ಇಂದಿನ ಜಗದಿ ಎಲ್ಲಿ? ಎಂಬ ಗಿರಿಮಲ್ಲನ ಧೀರೋದಾತ್ತ ವಾದ. ಜಗದ ಈ ಜಟಿಲತೆಗೆ ಗುರುವಿನ ಮಥನವೇ ಪ್ರಮಾಣವಾಗಬೇಕೆಂಬ ಒಲವು ತೋರಿದೊಡನೆ, ಗುರುಚೆನ್ನ ಮತ್ತೆ ನಿವೇದನೆಯಲ್ಲಿ ತೊಡಗುವನು.

1) ಮನೆಮನೆಗೆ ಬಂದು ದಾಸೋಹ ಮಾಡಿ
ಜಗದವರ ಪೂಜೆಗೇರಿಸಬಾರದೇಕೆ?

2) ಜಗದೊಳಗೆ ಮನೆಮನೆಯ ಬಾಗಿಲವ ತೆರೆದು
ಒಳಹೊಕ್ಕು ನಡೆದಾಡಿ ನೋಡಲಿ, ಜಗದವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

3) ವಿಶ್ವಕ್ಕೆ ಬಿಗಿದಿರ್ದ ಬಿಯ್ಯಗವು ತೆರೆದು
ವಿಶ್ವದಗಲಾಗಿರುವ ವಿಶ್ವದ ಮಹಾದ್ವಾರ
ತೆರೆದು ನೋಡಿದರೊಳಗೆ ಹೃದಯಾಂತರಂಗ
ಕಾಣಬಹುದ್ಯ ಕಂಡಾ ನಿತ್ಯನೂತನ ಸತ್ಯ
ಹಿಂದೆಂದು ಜಗವು ಕಾಣದ ಭವ್ಯನವ್ಯಗಳು

4) ತಾ ನಡೆದು ಬರಬೇಕು ಸರ್ವಸ್ವತಂತ್ರ
ತನ್ನ ನಿಜದರಿವ ತಾನಾಗಿ ಇರಬೇಕು.

5) ನೆಲದ ಮಣ್ಣಿನ ಮೂರ್ತಿಯೊಳು ದಿವ್ಯವಂಕುರಿಸಿ,
ಶಿವದ ಕಳೆ ಶಿವಬೆಳಗು ದಿವ್ಯ ಚೈತನ್ಯ
ಅಂಕುರಿಸಿ ಪಲ್ಲವಿಸಿ ಹಬ್ಬಿ ಹರವಿದರೆ
ಹುಟ್ಟಿನೊಳು ಹೊಸ ಹುಟ್ಟು ಒಡೆದು ಮೂಡಿದರೆ
ದಿವ್ಯ ದಿವ್ಯಾದ್ಭುತದ ಚೈತನ್ಯಶಕ್ತಿಗಳು
ವಿಶ್ವೇ ವಿಶ್ವ ಶಿವ ಚೈತನ್ಯ ದ್ರವ್ಯಗಳು
ಒಡೆದು ಮಾನವನ, ಚೈತನ್ಯ ಪ್ರವಾಹ
ಹರಿಯಬಲ್ಲದು ಕಂಡಾ ಮೇಲ್ವಾಯ್ಬುಜಗದವರ.

ಈ ಗುರು ನಿವೇದನೆಗೆ ಗಿರಿಮಲ್ಲನ ಮರುಪ್ರಶ್ನೆ ಮತ್ತೆ ಮರುಕಳಿಸುವದು; ವಿಶ್ವ ಚೇತನದ ದಿವ್ಯ ಶಕ್ತಿಗಳನ್ನು ಮಾನವ ಮಹಾಚೇತನಗಳು ಏಕೆ ಬಳಸುತ್ತಿಲ್ಲ? ಮಾನವಸ್ಥಲವು ಚಿರಸ್ಥಾಯಿಯಾಗುತ್ತಿರುವ ಮಾನವ ಗಣಕ್ಕೆ ಪವಾಡಗಳ ಸಾಧನೆಯ ಸರಮಾಲೆಯೇ ಹಿನ್ನೆಲೆಯಾಗಿದೆ. ದೇಶದೇಶಾಂತರದ, ಕಾಲಕಾಲಾಂತರಕೆ ಕಿವಿಗೊಟ್ಟು ಕೇಳಿದರೆ, ಈ ಹಿನ್ನೆಲೆಯು ಇಚ್ಛಿತ ಮಹಾನ್‌ಬದಲಾವಣೆಯ ಮುನ್ನೆಲೆಯಾಗಬಹುದೆಂಬ ಆಶಾವಾದದ ಅಂಕುರವು ತೋರುವದು. ಎ. ಜೆ. ಟಾಯಂಬಿ ಉಕ್ತಿ "Every history is growth, every growth is the mysterious union of permanence and change; the foreground of change thrown up against the background of permanence". ಜಗದಲ್ಲಿ, ಜಗದಮಾನವನಲ್ಲಿ ರಹಸ್ಯಮಯ ಶಕ್ತಿ ಅಡಕವಾಗಿದೆ. ಇದಕ್ಕೆ ಮಾನವನ ಬೆಳವಣಿಗೆಯ ಇತಿಹಾಸವೇ ಸಾಕ್ಷಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಕಟ್ಟಿಗೆಯ ಹೊಸೆದು ಬೆಂಕಿಯುಲುಡುವ ತೆರನಂತೆ
ತರುಮೂಲಿಕೆಯ ಬಲದಿ ರೋಗಗಳ ಕೊಲುವಂತೆ
ಪರುಷದೊಳು ಕಬ್ಬುನವ ಹೊನ್ನುಗೊಳಿಸುವ ರೀತಿ
ಗಾಳಿಯನು ಹಿಡಿದು ಯಂತ್ರವ ತಿರುಗಿಸುವ ಮಾಳ್ಕೆ
ತೆಪ್ಪ ಹಡಗವನೇರಿ ಪಡೆಯುವಂತೆ ನೀರೊಳಗೆ
ವಿಶ್ವ ಶಿವಚೇತನದ ಲೌಕಿಕದ ಶಕ್ತಿಗಳು
ವಶಕೆ ಬರಬಹುದಯ್ಯ ವಶವಾಗಬಹುದು
ಮಹಿಮಾವಂತರಿಗಮಾನುಷದ ಶಕ್ತಿಗಳು
ವಶವರ್ತಿಯಾಗಬಹುದಿಂದಿಲ್ಲ ನಾಳೆ
ಹಮ್ಮಳಿದ ದಿವ್ಯಮಾನವನ ಕೈಯೊಳಗೆ
ಪ್ರತ್ಯಕ್ಷಗಳು ಸಹಜವಾಗಬಹುದೈ ಕಂದಾ''

ಈ ತೆರನಾಗಿ ಬದಲಾವಣೆಯು ಬಂದೇ ತೀರುವದೆಂಬ ಆತ್ಮವಿಶ್ವಾಸವು ಗುರು ಚೆನ್ನನದು; ಭಾವಬುದ್ಧಿಯ ಮಿಲನ ಹಡೆಯಬಹುದ್ಭುತವ, ಎಂಬ 'ತನ್ನಲ್ಲಿ ತಾ ನಂಬಬೇಕು' ಎಂಬ ವಿಶ್ವಾಸದ ಪ್ರೇರೇಪಣೆಯ ಮೂಲಕ ಗಿರಿಮಲ್ಲನಲ್ಲಿ ಆಶಾವಾದವನ್ನು ಮೊಳೆಯಿಸುವನು. ಆದರೂ ಸುಖ- ಶಾಂತಿ- ಪ್ರೇಮಗಳು ಈ ಜಗದೊಳು ನೆಲಸಿದರೆ ಎಷ್ಟು ದಿನ ಮಾನವಗೆ ರುಚಿಸಬಹುದು? ಎಂಬ 'ವಿವಿಧತೆಯ ಸೃಷ್ಟಿಪ್ರಣೀತ ತತ್ವದ ನೆರವನ್ನು ಪಡೆದು ಇದ್ದ ಜೀವನವೇ ಸಂತೃಪ್ತಿಯೆಂಬ ಕಠೋರ ಸತ್ಯಕ್ಕೆ ತಿರುಗಿ ಬರುವನು. ವಿಶ್ವವಿಸ್ತಾರದಲ್ಲಿ ಅನಂತ ವಿವಿಧತೆಗಳು ತುಂಬಿರುವವು. ಅಧಿಕ ಅನಂತ ವಿವಿಧತೆಗಳನ್ನೇ ನೀಡುವವು. ಇದು ವಿಶ್ವದ ನಿಗೂಢವಾದ ರಹಸ್ಯ. ಈ ರಹಸ್ಯವನ್ನು ಭೇದಿಸುವ ಭರದಲ್ಲಿ, ಸ್ವರ್ಗ- ವೈಕುಂಠ- ಕೈಲಾಸಗಳನ್ನು ನಿರ್ಮಿಸಿಕೊಂಡು, ಅವುಗಳನ್ನೂ ಕಾಣದೆ, ಮುಗಿಲಿನಾಚೆ ನಡೆದು ದೇವರನ್ನು ಸಾಕ್ಷಾತ್ಕರಿಸಿಕೊಂಡರೂ ಮುಗಿಲಿನಲ್ಲಿ ಸ್ಥಿರ ಸ್ಥಾನವನ್ನು ಪಡೆಯದ ಮತ್ತೆ ಸಂದಿಗ್ಧತೆಗೆ ತುತ್ತಾಗಿ ವಿವಿಧತೆಯ ತೌರಾದ ಈ ಭೂಮಿಯನ್ನುಳಿದು 'ಒಂದೇ ಹಾಡುವ ಜಗಕೆ' ಏಕೆ ಹಂಬಲ? ಶಾಶ್ವತ ವಿವಿಧತೆಗೆ ಸುತ್ತಲೂ ಗೋಚರವಾಗುವ ವಿಶ್ವವಿಸ್ತಾರದಲ್ಲಿಯ ಚಲನೆಯೇ ಸಾಕ್ಷಿ. ಯಾವುದರ ರೂಪ, ಗಾತ್ರ, ತೇಜವೂ ಇನ್ನೊಂದರಂತಿಲ್ಲ. ಒಂದು ಇನ್ನೊಂದರಂತೆ ಚಲಿಸುವದೂ ಇಲ್ಲ; ಆ ಸಾಮರ್ಥ್ಯವೂ ಇಲ್ಲ. ಅಂತೆಯೇ ಬದಲಾವಣೆಯು ಬದಲಾಗುತ್ತಿರುವ ಪ್ರವಾಹಿ ಕುರುಹು. ಅದುವೇ ಕಾರಣ ಬದಲಾವಣೆಯೇ ಶಾಶ್ವತ. ಬದಲಾವಣೆಯು ವಿವಿಧತೆಯ ಅವಿಭಾಜ್ಯ ಸಂಕೇತ. ಬದಲಾವಣೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನೆಲೆಗೆ ವಿವಿಧತೆಯು ಹಿನ್ನೆಲೆಯನ್ನು ಒದಗಿಸುತ್ತದೆ. ಇದುವೇ ವಿಶ್ವದ ಇತಿಹಾಸ. ಮಾನವ ಕುಲದ ಇತಿಹಾಸಜ್ಞ, ಟಾಯಂಬಿ ದೃಷ್ಟಾರತನವೂ ಈ ದೃಷ್ಟಿ ಕೋನದಲ್ಲಿಯೇ ಅಡಕವಾಗಿದೆ. ಈ ದಿಸೆಯಲ್ಲಿ ಪರಿಪೂರ್ಣ ಮನಸ್ಸುಳ್ಳ ಟಾಯಂಬಿ ಮತ್ತು ಭೂಸನೂರಮಠರ ಪರಿಪಕ್ವತೆಗಳು ತಾದಾತ್ಮ್ಯವನ್ನು ಹೊಂದಿವೆ.

ದ್ವಂದ್ವಮಯ ಜಟಿಲತೆಯ ಮಧ್ಯದಲ್ಲಿಯೂ ಹೃದಯಾಂತರಂಗದಲ್ಲಿ, ಪರಿಪಕ್ವತೆಯನ್ನು, ಮಾನವರಲ್ಲಿ ಅನೇಕರು ಪಡೆದಿರುತ್ತಾರೆಂಬುದು ಸ್ವಯಂಸಿದ್ಧ. ಅಂಥವರ ದೀವಿಗೆಯನ್ನು ಮುಡಿಸುತ್ತ, ಅವರ ಹಿಂದೆ ಉಳಿದವರು ಹಿಂದೆಯೇ ಉಳಿಯದಂತೆ ಮುನ್ನಡೆಸಬೇಕೆಂದು ಗುರುಚೆನ್ನ ಮಹಾದೇವಿಯಕ್ಕನನ್ನು ಬಿನ್ನವಿಸುತ್ತಾನೆ. ಅಸಂಖ್ಯಾತ ಮಾನವರು ಜಗದ ಹಾದಿಯೊಳಿದ್ದು ನಡೆದರೂ ಹೃದಯಾಂತರಾಳದಲ್ಲಿ, ನಿಶ್ಶಬ್ದಶಬ್ದಗಳಲ್ಲಿ ದನಿಮಾಡಿ ನಿನ್ನ ಹಾದಿಗೆ ಸಮ್ಮತಿಸಿ ಕರೆಯುತ್ತಿದ್ದಾರೆ. ನಿರಾಕರಿಸದೆ ದಾರಿದೋರಬೇಕೆಂಬ ಆಣತಿಯನ್ನಿಡುವನು.

ಸಂಪ್ರದಾಯವನ್ನು ಭೇದಿಸಿ, ಉಲ್ಲಂಘಿಸಿದ ವೈಚಾರಿಕ ತಿರುವು ಈ ಹಂತದಲ್ಲೇ ಕಾಣಸಿಗುವದು.' ವ್ಯಷ್ಟಿಯು ಸಮಷ್ಟಿ ರೂಪವನ್ನು ತಾಳಿದ, ತಾಳುವ, ತಾಳಬೇಕೆಂಬ ಆದರ್ಶದ ಕೊಡುಗೆ ಇಲ್ಲಿದೆ. ಪರಿಪೂರ್ಣತೆಯನ್ನು ಪಡೆದು, ದೇವಮತ್ತಳಾಗುವ ಅಕ್ಕಮಹಾದೇವಿಯು ನೈಜ ಮಾನವ-ಮತ್ತ ದೇವರಾಗುವದು ಮೇಲೆಂಬ ಮೇಲ್ಪಂಕ್ತಿ ಇಲ್ಲಿದೆ. ಮಾನವ 'ದೇವರು' ಎಂಬ ದ್ವೈತದ ನಿರಾಕರಣೆಯ ಹಾಗೂ ಅದರ ಅನುಷ್ಠಾನದ ನಾಂದಿಯಿದು. ದೇವರೇ ನಾನಾದ ಅದ್ವೈತ ಸಾಧನೆಯು ಭೇದವನ್ನು ನಿರ್ನಾಮಗೊಳಿಸಲೇಬೇಕು. ಅದುವೇ ಕಾರಣ ಅಸಂಖ್ಯಾತ ಜನ ಕೋಟಿಯನ್ನೂ ನೈಜ ಮಾನವ-ಮತ್ತ ದೇವರನ್ನಾಗಿ ಪರಿವರ್ತನೆಯ ಪ್ರವರ್ತಕಳನ್ನಾಗಿ ಮಹಾದೇವಿಯಕ್ಕನನ್ನು ನಿಲ್ಲಿಸಿದ್ದಾರೆ. ತಾನೊಬ್ಬಳೇ ಈ ಸಾಧನೆಯ ತುದಿಯನ್ನೇರುವ ಹಮ್ಮು ತಾಳದೆ, ಅಸಂಖ್ಯಾತ ಜನ -ಕೋಟಿಯೂ ಈ ಉನ್ನತೋನ್ನತ ಮಟ್ಟವನ್ನು ಅಡರುವಂತೆ ಮಾಡಿಸಲು ಅವಳನ್ನು ಅವಳ ನಿಲುವಿನಿಂದ ವಿಚಲಿತಗೊಳಿಸುತ್ತಾರೆ. ಈ ಮೂಲಕ ಈ ಪೃಥ್ವಿ, ಈ ಭೂಮಿ, ಈ ಭೂಲೋಕದ ಸರ್ವಶ್ರೇಷ್ಠತೆಯನ್ನು ಮೆರೆಯುತ್ತಾರೆ. ಈ ಮರ್ತ್ಯಲೋಕವೊಂದೇ ಖಚಿತವಾದುದು ಮಾನವನಿಗೆ. ಉಳಿದುದೆಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿಶ್ಚಿತ, ಭ್ರಮೆ. ಮರ್ತ್ಯವೊಂದೇ ವಿವಿಧತೆಯ ಬದಲಾವಣೆಯ ಅನುಭವವನ್ನು ನೀಡಬಲ್ಲುದು; ಅನುಭಾವವನ್ನೂ ಉಣಿಸಬಲ್ಲದು. ಅಂತೆಯೇ ಇದೊಂದೇ ಲೋಕ ಮಾನವ- ದೇವನಿಗೆ ಮೀಸಲು. ಈ ಮಾನವದೇವನ ಮನೆಯೂ ಮರ್ತ್ಯವು ಮಹಾಮನೆಯಾಗಬೇಕಾದ ಆದರ್ಶವು ಸ್ಫುರಿತವಾಗುತ್ತದೆ.

''ಬಿಡಲಾರೆನಯ್ಯಾ ಮರ್ತ್ಯಲೋಕವನು
ಮರ್ತ್ಯಲೋಕವು ಮಹಾಮನೆಯಾಗದನ್ನಕ್ಕ
ಬಿಡಲಾರೆನಯ್ಯಾ ಬಿಡಲಾರೆನು''.

ಅಕ್ಕನ ಅಚಲ ನಿರ್ಧಾರವಿದು. ಬಸವಣ್ಣನ ನುಡಿ- ನಡೆಗಳೇ ಅಕ್ಕನಿಗೆ- ಪರಮಪಥ.

''ಎಲ್ಲ ಎಲ್ಲವು ಕಳೆದು ನಿಂದರು ನಿರಾಧಾರ''. ಆದುವೇಕಾರಣ ಮರ್ತ್ಯದ ಮಹಾಮನೆಯೊಳಗೆ ಇದ್ದು, ವಿಶ್ವಕಾಯದೊಳು ಕಲ್ಯಾಣಕಾಯಕವನ್ನು ಮಾಡಿ, ದಾಸೋಹ- ತತ್ವಕ್ಕೆ ಅರ್ಪಿಸಿಕೊಳ್ಳುವುದೇ ಮಾನವದೇವನ ಪರಮೋಚ್ಚ ಸಾಧನೆ. ಈ ಅರ್ಪಣೆಯಲ್ಲಿ ಅರಿವು ಅಳಿದು ನಿಜದರಿವು ಮೂಡುವುದು. ನಾನೆಂಬುದು ಕಳೆದುಕೊಳ್ಳುವದು. ನಾನಳಿದರೆ ನಮ್ಮ ಇರವು. ಇದೇ ಬ್ರಹ್ಮಭವಿಷ್ಯದ ರೂಪಿಸುವಿಕೆ. ಮಾನವ ಸ್ಥಳದಲ್ಲಿ ಮಾನವನನ್ನಿರಿಸುವ ಪರಿ. ಇದೇ ಮಾನವ ಭವ್ಯಕ್ಕೆ ದಿವ್ಯತೆಯ ದೀಪ್ತಿ. ಇದನ್ನರಿಯಲು ಆರನೇಯ ಇಂದ್ರಿಯದ ಜಾಗೃತಿ ಸೂಕ್ತ!.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ : ಸ್ವಾಯಂಭೂಕಾವ್ಯ

ಬಿ. ಎ. ಸನದಿ.

"ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸ್ಸಿನ
ಮೇರುಕೃತಿ ಮೇಣ್ ಜಗದ್ಭವ್ಯ ರಾಮಾಯಣಂ!"

ಎಂದು 'ವಿಶ್ವವಾಣಿಗೆ ಮುಡಿಯ ಮಣಿ' ತೊಡಿಸಿದಂತಿದ್ದ ತಮ್ಮ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ತಮ್ಮ ಗುರುಗಳಾದ ವೆಂಕಣ್ಣಯ್ಯನವರಿಗೆ ಅರ್ಪಿಸುತ್ತ ಶ್ರೀ ಕುವೆಂಪು ಅವರು ಉಗ್ಘಡಿಸಿದ್ದುಂಟು. ಹಾಗೆ ನೋಡಿದರೆ, ಈ ಮಾತು ಶ್ರೀ ಕುವೆಂಪು ಅವರದ್ದಾದರೂ, ಈ ಮಾತಿನ ಆಶಯ ಪ್ರೊ. ಸಂ . ಶಿ. ಭೂಸನೂರಮಠ ಅವರಿಗೆ ಹೆಚ್ಚಾಗಿ ಅನ್ವಯಿಸುವಂತೆ ತೋರುತ್ತದೆ. ಕುವೆಂಪು ಅವರೇನೋ ಕನ್ನಡ ನವೋದಯ ಕಾವ್ಯಕ್ಕೆ ಶ್ರೀಕಾರ ಹಾಕಿದ ಶ್ರೀಯವರು ಸೂಸಿದ ಹೊಸ ಕವಿಗಾಳಿಯಲ್ಲಿ ಬೆಳೆಯುತ್ತ ಬೆಳೆಯುತ್ತ ಮಹಾಕವಿಯ ಹಂತಕ್ಕೇರಿದವರು. ಆದರೆ ತಮ್ಮ ಜೀವನದುದ್ದಕ್ಕೂ ಅಧ್ಯಯನ, ಅಧ್ಯಾಪನ ಹಾಗು ಸಂಶೋಧನ ಕಾರ್ಯಗಳಲ್ಲಿ ತೊಡಗಿದ್ದು, ಸೃಜನಶೀಲ ಕಾವ್ಯರಂಗದಿಂದ ಬಲು ದೂರವೇ ನಿಂತುಕೊಂಡಿದ್ದ ಪ್ರೊ. ಭೂಸನೂರಮಠರು 1983 ರಲ್ಲಿ ಏಕಾಏಕಿ ತಮ್ಮ (ಭವ್ಯಮಾನವ) ಮಹಾಕಾವ್ಯವನ್ನು ಬೆಳಕಿಗೆ ತಂದದ್ದು ಮಾತ್ರ, ಕನ್ನಡ ಸಾರಸ್ವತ ಪ್ರಪಂಚದಲ್ಲೆಲ್ಲ ಸೋಜಿಗದ ಸಂಗತಿಯೆನಿಸಿಕೊಂಡಿತು. 'ಶೂನ್ಯ ಸಂಪಾದನೆಯ ಪರಾಮರ್ಶೆ' ಮತ್ತಿತರ ಸಂಶೋಧನ ಕೃತಿಗಳಿಂದ ಪ್ರಸಿದ್ಧರಾಗಿದ್ದ ಭೂಸನೂರಮಠರು ತಮ್ಮ ಇಳಿವಯಸ್ಸಿನಲ್ಲಿ ಒಮ್ಮಿಂದೊಮ್ಮೆ ಮಹಾಕವಿಯಾಗಿ ಪ್ರಕಟಗೊಂಡದ್ದೊಂದು ಪವಾಡವಲ್ಲ; 'ಸತ್ಯಸ್ಯ ಸತ್ಯ ಕಥನ'! ಒಂದು ದೃಷ್ಟಿಯಿಂದ ಭೂಸನೂರಮಠರ ಭವ್ಯಮಾನವವೊಂದು ಉದ್ಭವ ಕಾವ್ಯ; ಜಗದ್ಭವ್ಯ ಮಾನವನ ಮಹಾಕಾವ್ಯ. ಅಂತೆಯೇ ಇದು ತನ್ನ ಸೃಷ್ಟಿಕರ್ತನನ್ನೇ ಸೃಷ್ಟಿಸಿದ- ಭೂಸನೂರಮಠ ಅವರನ್ನು ಸೃಜಿಸಿದ- ಅಪೂರ್ವ ಕಾವ್ಯ; ಪರಮ ಭವ್ಯವನ್ನು ಕುರಿತು ಗಂಭೀರ ಭಾಷೆಯಲ್ಲಿ ರೂಪುಗೊಂಡ ದರ್ಶನಕಾವ್ಯ; ವಿಶ್ವಸಂತತಿಗೆ ದಾಸೋಹವಾಗಿ ನೀಡಲ್ಪಟ್ಟ ಸಚ್ಚಿದಾನಂದ ಕಾವ್ಯ; ನಮ್ಮ ಲಾಕ್ಷಣಿಕರ ದೃಷ್ಟಿಯಿಂದ ಮೂಲದ್ರವ್ಯವೊಂದು ನವ್ಯಭವ್ಯಾಕಾರ ತಳೆದುಬಂದ ಉತ್ಪಾದ್ಯಕಾವ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂಥ ಭಾವುಕತೆಯ ಬಣ್ಣನೆಯಿಂದ ಯಾವೊಂದು ಮಹಾಕೃತಿಯ ಘನತೆ-ಗೌರವಗಳಿಗೆ ಹೊಸ ಗರಿಗಳೇನೂ ಮೂಡಲಾರವು ನಿಜ. ಆದರೆ ಹನ್ನೆರಡನೆಯ ಶತಮಾನದ ವೀರವೀರಾಗಿಣಿ, ಸ್ವತಂತ್ರ ಧೀರ ಮಹಿಳಾಮಣಿ, ಅಕ್ಕಮಹಾದೇವಿಯ ಜೀವನದ ಅಲೌಕಿಕ ಮಹಿಮೆಯನ್ನೇ ಅವಳ ಜೀವನನಿಷ್ಠೆ ಹಾಗು ಲೌಕಿಕ ಪರಾಕಾಷ್ಠೆಗಳ ಪ್ರತಿಮೆಯನ್ನಾಗಿ ಮಾರ್ಪಡಿಸಿಕೊಂಡ ಈ ಮೇರುಕೃತಿಯ ಪ್ರತಿಭಾದರ್ಶನ ಅದ್ಭುತವಾದದ್ದು, ಅಪ್ರತಿಮವಾದದ್ದು; 'ಚಾರುತ್ವಕೆ ಚಾತುರ್ಯವು ಸೇರೆ! ಚಾರಿತ್ರ್ಯದ ಆ ಮಾರ್ಗವೇ ಬೇರೆ' ಎಂಬ ಬೇಂದ್ರೆವಾಣಿಯನ್ನು ನೆನಪಿಸಿಕೊಡುವಂತಹುದು.

" The superman shall wake in mortal man
And manifest the hidden demi-god
Or grow into God-Light and God-force
Revealing the secret deity in the cave"

ಮಹಾಕವಿ ಅರವಿಂದರ 'ಸಾವಿತ್ರಿ' ಯಲ್ಲಿ ಬರುವ ಇಂಥ ಸಾವಿರದ ಸಾಲುಗಳು ಭೂಸನೂರಮಠರ ಭವ್ಯಮಾನವನ ದರ್ಶನ-ಧ್ವನಿಯಲ್ಲಿ ಪ್ರತಿಧ್ವನಿಗೊಂಡಂತೆ ಭಾಸವಾದರೂ 'ಚಾರಿತ್ರ್ಯದ ಆ ಮಾರ್ಗವೇ ಬೇರೆ' ಎಂಬ ಮಾತಿನ ಕೈಯೇ ಮೇಲೆದ್ದು ಕಾಣಿಸುತ್ತದೆ. 'ಭವ್ಯಮಾನವ' ಕೃತಿಕಾರರ ಮಾತನ್ನೇ ಇಲ್ಲಿ ಗಮನಿಸಬಹುದು:

''ಮಾನವಗತ್ತಲೆಯಲ್ಲಿ ಹಾದಿಯನ್ನು ಹುಡುಕಿ ಹುಡುಕಿ, ಹಾದಿ ತಪ್ಪಿ ಅಡ್ಡ ಹಾದಿಗೆ ಬಿದ್ದು ತೊಳಲಿ ಬಳಲುವ ಪ್ರಸಂಗ ನಮಗೆಲ್ಲ ಪರಿಚಯದ ಅನುಭವ. ಗಹನಕ್ಕೆ ಗಹನತಮವಾದ ಇಂಥ ಕತ್ತಲೆಯ ಘೋರಾರಣ್ಯದಲ್ಲಿ ಹೆಣೆದುಕೊಂಡಿರುವ ಜಿಡುಪಿನಲ್ಲಿ, ತಮಗೆ ತಾವೆ ಬಾಯ್ಬಿಡುವ ಕಮರಿ ಕಂದರ ಗರ್ತದಲ್ಲಿ, ಗುಹಾಗಹ್ವರಗಳಲ್ಲಿ ಪಾರಾಗಿ, ಕತ್ತಲೆಗೆ ಕಣ್ ಮೂಡಿದ ಕದಿರುಬೆಳಗಿನಲ್ಲಿ ಹಾದಿ ಹಿಡಿದು ಬೆಳಗಿನ ಕಡೆ- ಮಹಾಬೆಳಗಿನ ಕಡೆ- ನಾವು ನಡೆಯಬಲ್ಲೆವೆ? ಅಸತ್ಯದಿಂದ ಸತ್ಯಕ್ಕೆ, ಅಜ್ಞಾನದಿಂದ ನಿಜಜ್ಞಾನದ ವಿಸ್ತಾರಕ್ಕೆ, ಮೃತ್ಯುವಿನ ಸೀಮೆಯಿಂದ ಅಮರ್ತ್ಯದ ಅತಿಮಾನುಷಕ್ಕೆ, ಸ್ವಾರ್ಥದಿಂದ ಪರಮಾರ್ಥಕ್ಕೆ, ಕತ್ತಲೆಯ ಮಾನವನಿಂದ ಬ್ರಹ್ಮಭವ್ಯದ ಮಹಾನಿಲವಿನ ಅನಂತ ಹರವಿಗೆ ಹರವಾಗಿ ಇರಬಲ್ಲೆವೆ? ಈ ಹರವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಂಡು ತಿಂದು ನಿದ್ರಿಸಿ, ಆತ್ಮಕಲ್ಯಾಣದ ಮತ್ತು ವಿಶ್ವಕಲ್ಯಾಣದ ಮಹಾಸಂಗಮ ಸ್ಥಲದಲ್ಲಿ ನಿತ್ಯ ನಿರಂತರವಾಗಿ ನಾವು ವಾಸಿಸಬಲ್ಲೆವೇ? ಭವ್ಯಮಾನವದ ಉದಯ- ಉಜ್ವಲ- ಭವ್ಯಕಾಂಡಗಳು ಇಲ್ಲಿ ನಿಜಪಥವನ್ನು ತೋರಿ, ನಿತ್ಯ ನಿತ್ಯದ ಸಾಮಾನ್ಯ ಬಳಕೆಗೆ ಸಮುಚಿತವಾಗಿ ಉಪಯುಕ್ತವೆನಿಸಿದರೆ 'ಭವ್ಯಮಾನವ' ದ ಕೃತಿ ಕೃತ ಕೃತ್ಯ, ಕೃತಾರ್ಥ. 'ತಾನು ತನ್ನೊಳು ಬೆಳಗಿ ಜಗವೆಲ್ಲ ಬೆಳಗಾಯ್ತು' ಎಂಬುದೇ ಈ ಮಹಾಕೃತಿಯ ಮತಿತಾರ್ಥ.

ಎಲೆ ತಾಯೆ ವಾಗ್ದೇವಿ ....
ಜಗದ ಮಾನವನ ತಲೆಯೊಳಗೆ ನಾಲಿಗೆ ಮೂಡಿ
ಬೆಳಗು ಮುಡಿಸಿದ ತಾಯ ಶಬ್ದ ಬ್ರಹ್ಮಕ್ಕೆ
ದೇಶ ಕಾಲದ ಜಗಕೆ ವಿಶ್ವಮಾನವಕೆ
ಹರಿಹರಬ್ರಹ್ಮ ದೇವಾಧಿದೇವತೆಗಳಿಗೆ

ಎಂದು ಕಾವ್ಯದ ಪೂರ್ವಪೀಠಿಕೆಯಲ್ಲಿಯೇ ಕವಿ ತನ್ನ ಶಬ್ದಬ್ರಹ್ಮಕ್ಕೆ ಬೆಳಗು ಮುಡಿಸಿದ ಪರಿಯನ್ನು ಸ್ಪಷ್ಟಗೊಳಿಸಿದ್ದು.

ಆಕಾಶ ಜಲವಗ್ನಿ ವಾಯು ಭೂದೇವಿಯರ
ಎದ್ದೇಳಿ ಎದ್ದೇಳಿ ಕಾವ್ಯದೊಳು ಬೆಳಗಾಗಿ
ಹಾಡಿರೇ ಒಮ್ಮ ತರಂಗದ ಮಹಾಕಥೆಯ
ಶಬ್ದ ಶಬ್ದದೊಳೆಲ್ಲ ಆಕಾಶ ಹರವಿ
ಅರ್ಥ ಅರ್ಥದೊಳೆಲ್ಲ ನಕ್ಷತ್ರ ಬೆಳಗಿ
ಭಾವ ಬೀಸಲಿ ತೂರಿ ಜಗದ ಗಾಳಿಯ ಕೊಚ್ಚಿ
ರಸಪೂರ ತಂಪಿಸಲಿ ಜಗದ ಬೆಂದೆದೆಯ
ಮಣ್ಣಗೊಳಗೂಡಮೂಡಿ ಸ್ವಾಯಂಭೂಕಾವ್ಯ ......

ಎಂಬ ಮಾತಿನಲ್ಲಿ ಮಣ್ಣನೊಡಲ ಒಳಗಣ್ಣಾಗಿ ಮೂಡಿ ಬಂದ ಸ್ವಾಯಂಭೂಕಾವ್ಯದಲ್ಲಿ ಪಂಚಮಹಾಭೂತಗಳ ಅಂತರಂಗದ ಪ್ರತಿಬಿಂಬವನ್ನೇ ಕಾಣಬಹುದೆಂದೂ ಸೂಚಿಸಿದ್ದಾರೆ.

ಕತ್ತಲೆಯ ಕೂಸಿಂಗೆ ಬೆಳಗುಕನಸು
ಕಾಡೆದೆಗೆ ಕನವರಿಕೆ ರಸಪೂರಕಾವ್ಯ
ನೆಲಕೆ ಸ್ವರ್ಗದ ಮಹಾಸೌಂದರ್ಯಸ್ವಪ್ನ
ಮಣ್ಣನೊಳು ಮುಕ್ತಿಸುಖ ಸಾಮ್ರಾಜ್ಯದಾಸೆ-
ನಿಂದಲ್ಲಿ ನಿಲ್ಲಲೀಯದ ಹಲವು ಹಂಬಲ
ಹಗಲಿರುಳು ಹುಚ್ಚುಗಳ ಹೊಡೆದ ಭವ್ಯಾಕಾಂಕ್ಷೆ
ಎಳೆತಂದಿಹುದು ದೇವಿ ನಿಮ್ಮ ಸನ್ನಿಧಿಗೆ ....

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಕವಿ ತನ್ನ ಕಾವ್ಯೋದ್ಯೋಗದ ಮೂಲ ಪ್ರೇರಣೆಯ ಸುಳುಹು ಕೊಡುತ್ತಲೇ ಮನುಷ್ಯ ಜೀವನದ ವಿಕಾಸಕ್ರಮವನ್ನೂ ಅದು ಕಲಾಕೃ ಗಳಲ್ಲಿ ಅಭಿವ್ಯಕ್ತಿಗೊಳ್ಳುವ ಪರಿಯನ್ನೂ ಒಟ್ಟಿಗೇ ಸಂಕೇತಿಸಿದ್ದಾನೆ. ಇಲ್ಲಿಯು 'ಮಣ್ಣಿನೊಳು ಮುಕ್ತಿಸುಖ ಸಾಮ್ರಾಜ್ಯದಾಸೆ'ಗೆ ಹಲವು ಹತ್ತು ಸ್ತರಗಳಲ್ಲಿ ಅರ್ಥವನ್ನರಸಬಹುದು ಭವ್ಯಮಾನವ'ದ ಪೂರ್ವಪೀಠಿಕೆ ಓದುತಿದ್ದಂತೆ,

......what in me is dark
illumine, what is low rise and support
That, to the height of this great argument
I may assert Eternal providence
And justify the ways of God to men

ಎಂಬ ಮಿಲ್ಟನ್ ಮಹಾಕವಿಯ 'ಪ್ಯಾರಡೈಜ್ ಲಾಸ್ಟ್' ಕಾವ್ಯದ ಪೀಠಿಕಾಸಾಲುಗಳು ನೆನಪಾದರೆ ಆಶ್ಚರ್ಯವೇನಿಲ್ಲ. ಆದರೆ, ''ಆನೆ ಕೆಸರಿನಲ್ಲಿ ಬಿದ್ದರೆ ತನ್ನ ತಾನೆತ್ತಿಕೊಳ್ಳಬೇಕು; ಕತ್ತಲೆಯಲ್ಲಿ ಬೀಳುತ್ತಿರುವ ಮಾನವ ತನ್ನನ್ನು ತಾನೆತ್ತಿಕೊಂಡು 'ಬೆಳಕಿನ, ಬೆಳಗಿನ, ಬಯಲಿನ ಸೀಮೆಗೆ ಬರಬೇಕು............ ಎಚ್ಚರಿಸಿಕೊಳ್ಳಬೇಕು. ತನ್ನೊಳಗೆ ತನ್ನ ದಿವ್ಯವನ್ನು ಮತ್ತು ಭವ್ಯವನ್ನು. ದಿವ್ಯದಲ್ಲಿ ಸಮರಸ್ಯೈಕ್ಯವನ್ನು ಪಡೆದು, ಲೋಕವನ್ನು ಬಿಡದೆ, ಲೋಕ ತಾನೆಂಬ ಭವ್ಯ ಸಾಮರಸ್ಯಕ್ಕೆ ಹೆಣಗಬೇಕು'- ಭೂಸನೂರಮಠ ಅವರ ಈ ಮಾತಿನಲ್ಲಿ 'ಭವ್ಯಮಾನವ'ದ ಆಶಯ ಮಾತ್ರ ಮಿಲ್ಟನ್‌ನ 'ಪ್ಯಾರ್‌ಡೈಜ್ ಲಾಸ್ಟ್' ಮಹಾಕಾವ್ಯದ ಆಶಯಕ್ಕಿಂತಲೂ ಭಿನ್ನವಾದದ್ದೆಂದು ಸೂಚಿತವಾದದ್ದು.

ಮರ್ತ್ಯಲೋಕವು ಮಹಾಮನೆಯಾಗದನ್ನಕ್ಕ
ಮರ್ತ್ಯಲೋಕದ ಮನುಜಕುಲವೆದ್ದು ಬೆಳಗಿನೊಳು
ನಿತ್ಯರಾಗಿರುವ ಗಣತಿಂಥಿಣಿಯಹನ್ನಕ್ಕೆ
ಮಾನವಗಣಂಗಳು ಮಹಾಮನೆಯೊಳಿರ್ದು
ಉಂಡುಟ್ಟು ಕಲ್ಯಾಣಸುಖದೊಳಿರದನ್ನಕ್ಕ
ಬಿಡಲಾರೆನಯ್ಯಾ ಮರ್ತ್ಯಲೋಕವನು-

ಎಂಬ 'ಭವ್ಯಮಾನವ'ದ ಭರತ ವಾಕ್ಯಾಂಶದಲ್ಲಿ ಸಮರ್ಥನೆಯನ್ನೂ ಪಡೆಯುತ್ತದೆ. ಇಲ್ಲಿ ಈ ಮರ್ತ್ಯಲೋಕವನ್ನು ಬಿಡಲಾರೆನೆಂಬ ಪಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೊಡುವುದು ಶಬ್ದ ಮಹಾದೇವಿಯಕ್ಕನಲ್ಲಿ, ಯಾವೊಬ್ಬ ವ್ಯಕ್ತಿಯಲ್ಲ; ಇಡಿಯ ಮನುಷ್ಯಕುಲ, ವಿಶ್ವಸಂತತಿ! ಈ ಅಪೂರ್ವ ಆಶಾವಾದ ಹಾಗು ಜ್ವಲಂತ ಜೀವನನಿಷ್ಠೆಗಳೇ ಈ ಕಾವ್ಯದ ಆಶಯದ ಹೆಗ್ಗಳಿಕೆ...... Its uniqueness is that in tune with the evolution and progress of thought and culture over the years, its hero is not one man, one class or clan or one nation, but man, the chief hero of the world's drama. It is a Saga of Mankind'.

'ಭವ್ಯಮಾನವ'ದ ಆಶಯವೇನೋ ಭವ್ಯವಾದದ್ದೆ. ಆದರೆ ಕಾವ್ಯಕೃತಿಯ ಆಶಯವೊಂದೇ ಅದರ ಯಶಸ್ಸಿನ ಮಾನದಂಡವಲ್ಲ. ಆಶಯದಂತೆ ಅಭಿವ್ಯಕ್ತಿ, ವಸ್ತುವಿನಂತೆ ವಿನ್ಯಾಸ, ಧೋರಣೆಯಂತೆ ದರ್ಶನ, ಭಾಷೆಯಂತೆ ಶೈಲಿ- ಇವೆಲ್ಲ ಹೊಂದಿಕೊಂಡಾಗ ಮಾತ್ರ ಕಾವ್ಯಾಕೃತಿಗೆ ಘನತೆಯೊದಗಿ ಬರುತ್ತದೆ. ಭೂಸನೂರಮಠರು 1957 ರಲ್ಲಿ ಆರಂಭಿಸಿ, ನಿಲ್ಲಿಸಿ, ಮತ್ತೆ ಇಪ್ಪತ್ತು ವರ್ಷಗಳ ನಂತರ ಬರೆಯಲಾರಂಭಿಸಿದ ಈ ಕಾವ್ಯ ಮಹಾದೇವಿಯಕ್ಕನ ಜೀವನಗಾಥೆಯನ್ನಾಧರಿಸಿದ್ದು. ಡಾ|| ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳುವಂತೆ 'ಅಕ್ಕಮಹಾದೇವಿಯಂತಹ ಅಸಾಮಾನ್ಯ ಚೇತನ ಯಾವ ಪುರುಷಸಾಧಕನ ವೈರಾಗ್ಯಕ್ಕೂ ಕಡಿಮೆಯಲ್ಲದ ತೀವ್ರತೆಯಿಂದ ಸಿಡಿದುನಿಂತು ಗಗನಗಾಮಿಯಾಯಿತು. (ವಚನ ಚಳುವಳಿ ಪು. 33) ಆದರೆ ಈ ಗಗನಗಾಮೀ ಚೇತನಕ್ಕೆ 'ಮಣ್ಣಿನೊಳು ಮುಕ್ತಿಸುಖಸಾಮ್ರಾಜ್ಯ' ಸೃಷ್ಟಿಸುವ ದೀಕ್ಷೆ ನೀಡಿದ ಶ್ರೇಯಸ್ಸು ಭೂಸನೂರಮಠರದು. ಶ್ರೀಶೈಲದ ಕದಳೀವನದಲ್ಲಿ ಭವಹರನಲ್ಲಿ ಬೆರೆಯುವ ಬದಲು, ಭವ್ಯಮಾನವದ ಮಹಾದೇವಿ 'ಬಿಡಲಾರೆನಯ್ಯಾ ಮರ್ತ್ಯಲೋಕವನು' ಎಂಬ ದಿಟ್ಟ ನಿಲುಮೆಗೆ ಬಂದು ತಲುಪುತ್ತಾಳೆ! ಯಾಕೆ? 'ಪುರಾಣ ಚರಿತ ಇತಿಹಾಸ ರಗಳೆಗಳ ಮಹಾದೇವಿಯಕ್ಕನ ಮಹಾದ್ಭುತ ವ್ಯಕ್ತಿ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೊಡನೆ 'ಸಮರಸ'ವಾಗಿ ಮಾನವಕುಲಕ್ಕೆ ಮರೆಯಾಗಿ ಮಾಯವಾಗಿ ಹೋಗಬಹುದೇ? ಮಹಾನುಭಾವಿಗಳ ಜೀವನದ ಮಣಹ ತಮ್ಮ ನಿಜದಲ್ಲಿ ಸಮರಸವಾಗಿ, ಬಯಲಾಗಿ, ನಿರವಯಲಾಗಿ ಹೋದರೆ ಅವರ ಮಹಾಂತ ಜೀವನದ ಮಣಹ ಪೂರೈಸಿತೆ? ಮನಸ್ಸು ಒಪ್ಪಲಿಲ್ಲ'- ಎಂಬ ಕವಿಯ ಮಾತಿನಲ್ಲಿ ನಮಗೆ ಉತ್ತರ ದೊರೆಯುತ್ತದೆ. ಶತಕಾನುಶತಕಗಳಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರ್ದನಿಗೊಳ್ಳುತ್ತ ಬಂದ ಅದೇ ಪ್ರಶ್ನೆಗೆ ಈವರೆಗೆ ಸರ್ವಸಮ್ಮತವೆನ್ನಿಸಿಕೊಂಡ ಅದೇ ಉತ್ತರ ನೀಡಲೊಪ್ಪದ ಕವಿಮನದ ಬಂಡಾಯ ಪ್ರವೃತ್ತಿ ಅಥವಾ ಪ್ರತಿಭಟನಾ ಶಕ್ತಿಯಲ್ಲಿ 'ಭವ್ಯಮಾನವ'ದ ಹೊಸ ಧೋರಣೆಯ ಮೂಲಪ್ರೇರಣೆಯಿದ್ದುದು ಸ್ಪಷ್ಟವಿದೆ. ಅಂತೆಯೇ ಪರಂಪರೆಯ ಪರದೆಯಾಚೆಗಿರುವ ಮಹಾದೇವಿಯ ಮಹಾವ್ಯಕ್ತಿತ್ವದರ್ಶನ ಮೂಡಿಸುವ ಪಣ ತೊಟ್ಟು ಕಾವ್ಯದ ಕಣಕ್ಕಿಳಿದ ಇಳಿವಯಸ್ಸಿನ ಈ ಕವಿಯ ಯುವಚೇತನಕ್ಕೆ ಶರಣು ಶರಣಾರ್ಥಿ ಎಂದು ಮಣಿಯಬೇಕೆಂದೆನಿಸುತ್ತದೆ.

ಮಹಾದೇವಿಯ ಈ ಮಹಾಪರಿವರ್ತನೆಗೆ ಕಾರಣರಾದವರು ಯಾರು? ಬಸವಣ್ಣನವರೇ? ಅಲ್ಲಮಪ್ರಭುಗಳೇ?? ಅಲ್ಲ, ಮಹಾದೇವಿಯ ಮೊದಲ ಗುರು ಗುರುಚೆನ್ನಮಲ್ಲಯ್ಯ!

ಎಲೆ ತಾಯೆ ಎಲೆ ದೇವಿ
ಒಪ್ಪುಗೊಂಡಿಹರಮ್ಮ ಶರಣರೆಲ್ಲಾ ನಿನ್ನ
ಒಪ್ಪಿಸಿಹರಮ್ಮ ಚೆನ್ನನ ಪಾದಪದ್ಮದೊಳು
ನಡೆ ತಾಯೆ ನಡೆ ಮುಂದೆ ಶ್ರೀಶೈಲ ಪರ್ವತಕೆ
ಶ್ರೀ ಚೆನ್ನಮಲ್ಲಿಕಾರ್ಜುನನ ಕದಳೀಬನಕ್ಕೆ
ಅದೆ ನಿಮ್ಮ ಸಮರಸೈಕ್ಯದ ಠಾವು ತಾಯೆ'

ಎಂದು ಅನುಭವ ಮಂಟಪದಿಂದ ಬೀಳ್ಕೊಡುವ ಸಂದರ್ಭದಲ್ಲಿ ಅಕ್ಕನಿಗೆ ಮುಕ್ತಿಯ ಮಾರ್ಗ ತೋರಿಸಿದ ಅಲ್ಲಮಪ್ರಭು ಒಂದು ತೂಕವಾದರೆ,

ನಡೆಸು ತಾಯೆ ಜಗವ ಭವ್ಯದ ಭವಿಷ್ಯಕ್ಕೆ
ನಿಜಭಕ್ತಿರೂಪಿಣಿಯ ನಡೆಸು ನಿಜದರಿವಿಗೆ
....
ನಡೆ ತಾಯೆ ಎಲೆ ಮಹಾಬೆಳಗು ಚೈತನ್ಯವೆ
ನಿನ್ನವರ ಹಿಂದಿರ್ದು ಶರಣುಬಂದವರ
ಹೃದಯಾಂತರಂಗದೊಳು ಪರಿಪಕ್ವ ಮಾನವರ
ದೀವಿಗೆಯ ಮುಡಿಸುತ್ತೆ ನಡೆ ತಾಯೆ ಮುಂದೆ
ಕಲ್ಯಾಣನಕ್ಷತ್ರ, ಹರವಿ ಗಗನಾಂಗಣದಿ
ಗಾಳಿಯೊಳು ಕಲ್ಯಾಣವಾಗಿ ನೀ ಬೀಸಿ
ನೀರಿನೊಳು ಕಲ್ಯಾಣಜಲವಾಗಿ ಹರಿದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಲದೊಳಗೆ ಕಲ್ಯಾಣ ಬೆಳೆಗಳನು ನೀ ಬೆಳೆದು
ನಡೆ ತಾಯೆ ನೀ ಮುಂದೆ ನಡೆಸು ಜಗವ-

ಎಂದು ಇಹದ ಮಹತಿಯನು ಮನವರಿಕೆ ಮಾಡಿಕೊಟ್ಟು, ಮಹಾದೇವಿಯ ಮನೋಪರಿವರ್ತನೆಗೈದು, ಜನಕಲ್ಯಾಣದ ಮಹಾಮಣಿಹಕ್ಕೆ ತೊಡಗಿಸಿದ ಗುರುಚೆನ್ನಮಲ್ಲಯ್ಯನದು ಹತ್ತು ತೂಕವೆನಿಸಿರುವಷ್ಟು ಕೌತುಕಪೂರ್ಣ ಕಥಾಪ್ರಪಂಚವನ್ನು ಸೃಷ್ಟಿಸಿ, ನಾಟ್ಯಮಯವಾಗಿ ನಿರೂಪಿಸಿದ ಭೂಸನೂರಮಠರ ಕಾವ್ಯಕೌಶಲ್ಯ ಬೆರಗುಗೊಳಿಸುತ್ತದೆ. ಈ ಬಂಡಾಯ ಪ್ರವೃತ್ತಿಯ ಮಹಾಕಾವ್ಯದ ಮಹತಿಯಿರುವುದು ಬಸವಣ್ಣ- ಅಲ್ಲಮಪ್ರಭು- ಅಕ್ಕಮಹಾದೇವಿಯವರ ತ್ರಿಕೂಟ-ದೊಳಗಲ್ಲ; ಹಾಗೂ ಅದರಿಂದ ಮಹಾದೇವಿಯಲ್ಲಿ ಉಂಟಾದ ಭವ್ಯಮಾನವನ ಸಾಕ್ಷಾತ್ಕಾರದಲ್ಲಿ! ಗುರುಚೆನ್ನಮಲ್ಲಯ್ಯ- ಗಿರಿಮಲ್ಲಯ್ಯ- ಅಕ್ಕಮಹಾದೇವಿಯರ ಮಹಾಕೂಟದಲ್ಲಿ, ನಿರಾಳ ನಿಜಧರ್ಮವೊಂದರ ಪ್ರತಿಪಾದನೆಯಲ್ಲಿ!! ಈ ಮಹಾಕಾವ್ಯದ ಇತರ ಕಾವ್ಯಾಂಶಗಳ ಕುರಿತಾಗಿ ಹೇಳಬಹುದಾದ್ದು ಸಾಕಷ್ಟಿದ್ದರೂ ಈ ಲೇಖನದ ಪರಿಮಿತಿಯಲ್ಲಿ ಸ್ವಯಂಭೂ ಕಾವ್ಯದ ಒಂದೆರಡು ಅಂಶಗಳನ್ನು ಮಾತ್ರವೇ ಚರ್ಚಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ'ದ : ಭಾವತೀವ್ರತೆ

ಚೆನ್ನವೀರ ಕಣವಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಾವಗೀತ ಪ್ರಕಾರ ತನ್ನ ಅತ್ಯುನ್ನತ ಸಿದ್ಧಿಯನ್ನು ಪಡೆದು ಮಹಾಕಾವ್ಯದ ಯುಗ ಇನ್ನೇನು ಮುಗಿದು ಹೋಯಿತೆಂಬ ಮಾತಿಗೆ ಇಂಬುಗೊಟ್ಟಾಗ, ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಪ್ರಕಟವಾಗಿ ವಿಮರ್ಶಕರು ಹುಬ್ಬೇರಿಸುವಂತಾಯಿತು. ಕನ್ನಡದಲ್ಲಿ ಮಹಾಕಾವ್ಯದ ಪರಂಪರೆಯನ್ನು ಪುನರ್ನಿರ್ಮಿಸಿದ ಶ್ರೇಯಸ್ಸು ಈ ಕೃತಿಗಿರುವದನ್ನು ಅವರು ಒಪ್ಪಿಕೊಳ್ಳಬೇಕಾಯಿತು. ಕನ್ನಡ ಮತ್ತು ಪಾಶ್ಚಾತ್ಯ ಮಹಾಕಾವ್ಯ ಪರಂಪರೆಯ ಸಮನ್ವಯದೊಂದಿಗೆ ಹಳಗನ್ನಡ ಭಾಷಾ ಸಂಪತ್ತನ್ನು ಸೂರೆಗೊಂಡು, ಸರಳ ರಗಳೆಯ ಛಂದದಲ್ಲಿ ತನ್ನ ಶೈಲಿ ಸ್ವರೂಪವನ್ನು ಕಂಡುಕೊಂಡ ಈ ಕಾವ್ಯ ಭಾರತೀಯ ಸಂಸ್ಕೃತಿಯ ಆಳವಾದ ಅನುಭವದೊಂದಿಗೆ ತನ್ನ ಯುಗದ ದರ್ಶನವನ್ನು ಅಭಿವ್ಯಕ್ತಿಸಿದ್ದು ''ಆಧುನಿಕ ಕನ್ನಡ ಸಾಹಿತ್ಯದ ಅಸಾಮಾನ್ಯ ಸಾಧನೆಗಳಲ್ಲೊಂದು'' ಎನಿಸಿತು. (1. ಜಿ. ಎಸ್. ಆಮೂರ : ''ಶ್ರೀ ರಾಮಾಯಣದರ್ಶನಂ'' 'ಕನ್ನಡ ಭಾರತಿ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು) - 1984 ಮುಂದೆ ಮೂರು ದಶಕಗಳಲ್ಲಿಯೇ ಮತ್ತೆರಡು ಮಹಾಕಾವ್ಯಗಳು - ವಿನಾಯಕರ 'ಭಾರತ-ಸಿಂಧು- ರಶ್ಮಿ' ಹಾಗೂ ಪ್ರೊ. ಭೂಸನೂರಮಠರ 'ಭವ್ಯಮಾನವ' - ಪ್ರಕಟಗೊಂಡು ಕನ್ನಡ ಕಾವ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿರುವದಲ್ಲದೆ ಮಹಾಕಾವ್ಯದಂಥ ಒಂದು ಮಹತ್ವದ ಅಭಿವ್ಯಕ್ತಿಯ ಸಾಧ್ಯತೆಯನ್ನು ಆಧುನಿಕ ಯುಗದಲ್ಲಿಯೂ ಅಲ್ಲಗಳೆಯುವುದು ಸಾಧ್ಯವಿಲ್ಲವೆಂಬುದನ್ನು ಅವು ತೋರಿಸಿಕೊಟ್ಟಿವೆ. ಕಥೆ, ಕಾದಂಬರಿ, ಚರಿತ್ರೆ ಮೊದಲಾದ ವಿವಿಧ ಪ್ರಕಾರಗಳು ಇಂದಿನ ಸಾಹಿತ್ಯದಲ್ಲಿ ಸಮೃದ್ಧವಾಗಿ ಬೆಳೆದು ಬರುತ್ತಿವೆಯಾದ್ದರಿಂದ ಹಿಂದಿನ ಕಾಲದಲ್ಲಿಯಂತೆ ಮಹಾಕಾವ್ಯವೊಂದನ್ನೇ ಬರೆಯುವ ಅನಿವಾರ್ಯತೆ ಈಗ ಉಳಿದಿಲ್ಲವೆಂಬುದು ನಿಜ; ಆದರೆ ಆ ಕಾರಣಕ್ಕಾಗಿ, ಮಹಾಕಾವ್ಯ ರಚನೆಯೇ ಅಸಾಧ್ಯ ಎನ್ನುವದು ಸರಿಯಲ್ಲ. ''ಇದರ ಅರ್ಥ ಮಹಾಕಾವ್ಯದ ಪರಂಪರೆ ಇನ್ನೂ ಚಿರಂತನವಾಗಿದೆ. (2. ಜಿ. ಎಸ್. ಶಿವರುದ್ರಪ್ಪ : 'ಮಹಾಕಾವ್ಯ ಸ್ವರೂಪ' - ಪುಟ 116 ಕರ್ನಾಟಕ ವಿ. ವಿ.-1976)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತೀಯ ಮತ್ತು ಪಾಶ್ಚಾತ್ಯ ಮಹಾಕಾವ್ಯ ಪರಂಪರೆಗಳನ್ನು ಯಥೋಚಿತವಾಗಿ ಬೆಳೆಸಿಕೊಂಡು, ವೈದಿಕ ಸಾಹಿತ್ಯ. ಪುರಾಣ ಮತ್ತು ಇತಿಹಾಸಗಳ ಅಧ್ಯಯನದಿಂದ ಒಂದು ಸಾರ್ವಕಾಲಿಕ ದರ್ಶನಕ್ಕೂ ಸಮಕಾಲೀನ ಭಾರತದ ಅಗತ್ಯಕ್ಕೂ ಅಭಿವ್ಯಕ್ತಿ ನೀಡುವ ಮಹತ್ವಾಕಾಂಕ್ಷೆಯನ್ನು 'ಭಾರತ - ಸಿಂಧು-ರಶ್ಮಿ' ಹೊಂದಿದೆ. ಕುವೆಂಪು, ತಾವು ಮೊದಲಿನಿಂದಲೂ ಸಾಧಿಸುತ್ತ ಬಂದಿದ್ದ ಸರಳ ರಗಳೆಗಳನ್ನು 'ಮಹಾಛಂದ'ಕ್ಕಾಗಿ ಪರಿಷ್ಕರಿಸಿಕೊಂಡರೆ, ವಿನಾಯಕರು ಅದೇ ಸರಳ ರಗಳೆಯನ್ನು ತಮ್ಮ ವಿಧಾನದಲ್ಲಿ ಹರಳುಗೊಳಿಸಿಕೊಂಡು 'ಸಂಕೀರ್ಣ ಛಂದಸ್ಸೆಂದು'' ಕರೆಯುವಲ್ಲಿ ಸಮಕಾಲೀನ ಸಂಕೀರ್ಣತೆಯನ್ನು ಲಕ್ಷದಲ್ಲಿಟ್ಟಿರಬೇಕೆಂದು ತೋರುತ್ತದೆ. ಆದರಲ್ಲಿ ಆದಷ್ಟು ಮಟ್ಟಿಗೆ ಆಡು ಮಾತಿನ ಲಯವನ್ನು ಸಾಧಿಸಲು ಅವರು ಪ್ರಯತ್ನಿಸಿರುವುದು ಗಮನಿಸಬೇಕಾದ ಸಂಗತಿ.

'ಭವ್ಯಮಾನವ'ದ ಕಥಾವಸ್ತು ಇವೆರಡು ಕಾವ್ಯಗಳಿಗಿಂತ ಭಿನ್ನವಾಗಿ, ಚಾರಿತ್ರಿಕ ವ್ಯಕ್ತಿಗಳಾದ ಮಹಾದೇವಿಯಕ್ಕ ಹಾಗೂ ಇತರ ಶಿವಶರಣರ ಜೀವನ ದರ್ಶನವನ್ನು ಅವಲಂಬಿಸಿದೆ. ''ವಿಶ್ವ ಪ್ರಪಂಚವೆ ತನ್ನ ಮಹಾಮನೆಯಾಗಿರುವ ಮಾನವ- ಮಹಾದೇವನೇ ಸರ್ವೋತ್ತಮ'' ಎಂಬುದು ಈ ಕಾವ್ಯದ ಪ್ರತಿಜ್ಞೆಗಳಲ್ಲಿ ಒಂದು. ಲೇಖಕರೇ ಹೇಳುವಂತೆ ''ಸಕೃದ್ದರ್ಶನಕ್ಕೆ 'ಭವ್ಯಮಾನವ' ಕಾವ್ಯದ ಕಥಾ ನಾಯಿಕೆ ಮಹಾದೇವಿಯಕ್ಕನೆಂದು ತೋರಬಹುದು. ಆದರೆ, ಕಾವ್ಯದೊಳಗೆ ಪ್ರವೇಶಮಾಡಿ ಅರ್ಥಪೂರ್ಣವಾಗಿ ಅದನ್ನು ಓದಿದರೆ 'ಮಾನವ' ನೇ ಕಾವ್ಯದ ಮಹಾನಾಯಕನೆಂಬ ಮಾತು ತಾನೇ ಮನವರಿಕೆಯಾಗುತ್ತದೆ'' ('ಭವ್ಯಮಾನವ' -ಪ್ರಸ್ತಾವನೆ ಪುಟ XLiii) ಮಹಾದೇವಿಯಕ್ಕ ಹಾಗೂ ಕಲ್ಯಾಣದ ಅಸಂಖ್ಯಾತ ಅನುಭಾವಿಗಳ ಮಹಾಜೀವನದ ರೀತಿ, ದಿವ್ಯ ಮಾನವದ ಹುಲುಸಾದ ಬೆಳೆ ಕವಿಯ ಮನಸ್ಸನ್ನು ಆಮೂಲಾಗ್ರವಾಗಿ ಸೆಳೆದುಕೊಂಡಿದೆ. 'ಭವ್ಯಮಾನವದ ಸಾಕಾರ ಸ್ವಪ್ನ'ಗಳಂತಿರುವ ಅವರ ಬದುಕಿನ ಬೆಳಕಿನಲ್ಲಿ ಇಡೀ ಮಾನವ ಕುಲದ ಬಗ್ಗೆ, 'ಮಾನವ' ನ ಬಗ್ಗೆ ತಮ್ಮ ಚಿಂತನ- ಮಂಥನವನ್ನು ಅನುಭವದ ನೆಲೆಯಲ್ಲಿ ಕಂಡು, ವಿಸ್ತಾರವಾದ ಹರಹಿನಲ್ಲಿ, ಸುದೀರ್ಘವಾದ ಕಾವ್ಯದ ಓಘದಲ್ಲಿ ಅದನ್ನು ಪ್ರವಹಿಸುವಂತೆ ಮಾಡಿದ್ದಾರೆ. ಹಾಗೆ ನೋಡಿದರೆ ಯಾವುದೇ ಭಾರತೀಯ ಇಲ್ಲವೆ ಪಾಶ್ಚಾತ್ಯ ಮಹಾಕಾವ್ಯದ ಲಕ್ಷಣಗಳನ್ನನುಸರಿಸಿ ರಚಿತವಾದ ಕಾವ್ಯ ಇದಲ್ಲ. ಇಲ್ಲಿಯದು 'ಸಹಜ ಸ್ವಚ್ಛಂದ ಸ್ವತಂತ್ರ ಭಾವ'. 'ಭಾಷೆ ಬಿಗುವಾಗಿರಬೇಕೆಂಬ ಹವ್ಯಾಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನಗಿಲ್ಲ'. 'ಕಾವ್ಯ ಭಾವದ ಸಹಜ ಪ್ರವಾಹದ ಮಹಾಪೂರಕ್ಕೆ ಅದರ ಸ್ವಚ್ಛಂದ ಗತಿಗೆ, ಶಾಸ್ತ್ರ- ಬುದ್ಧಿಯ ಸೂತ್ರನಿಯಮಗಳು ಅಡೆತಡೆಗಳಿದ್ದಂತೆ' - ಇತ್ಯಾದಿ ಮಾತುಗಳನ್ನು 'ಪ್ರವೇಶ' ದಲ್ಲಿ ಕವಿ ಹೇಳಿಕೊಂಡಿದ್ದಾರೆ. ವಚನಕಾರರಿಂದ ಹದಗೊಂಡ ಕನ್ನಡ ಭಾಷೆಯ ಜೀವಂತಿಕೆ, ಹರಿಹರನ ರಗಳೆಗಳ ಉತ್ಸಾಹಪೂರ್ಣವಾದ ನಿರರ್ಗಳ ಓಟ ಎರಡೂ ಇಲ್ಲಿ ಸಮಯೋಚಿತವಾಗಿ ಮೇಳವಿಸಿ ಕಾವ್ಯದ ಆರು ಕಾಂಡಗಳು ತಮ್ಮಷ್ಟಕ್ಕೆ ಸ್ವಯಂಪೂರ್ಣ ವೆನಿಸಿರುವದು. ಕಾವ್ಯದ ಸಮಗ್ರತೆಗೆ ಬಾಧೆಯನ್ನುಂಟು ಮಾಡಿರದೆ ವಿಶಿಷ್ಟ ಸ್ವರೂಪವನ್ನು ತಂದು ಕೊಟ್ಟಿದೆ. 'ಶೂನ್ಯ ಸಂಪಾದನೆಯ ಪರಾಮರ್ಶೆ'ಯನ್ನೋದಿದವರಿಗೆ ಅಲ್ಲಿ ತಾತ್ವಿಕ ಚಿಂತನೆ ಹಾಗೂ ದರ್ಶನಗಳ ವ್ಯಾಪ್ತಿ ಈ ಕಾವ್ಯದ ಅಂಗಾಂಗಗಳಲ್ಲಿ ವ್ಯಾಪಿಸಿರುವುದು ಕಂಡುಬಾರದಿರದು. ಅಭಿವ್ಯಕ್ತಿಯ ನೂತನ ಕ್ರಮದಿಂದಾಗಿ ಮಹಾಕಾವ್ಯದ ಸಾಮಾನ್ಯಲಕ್ಷಣಗಳಿಗೆ 'ಭವ್ಯಮಾನವ' ಬದ್ಧವಾಗಿರದಿದ್ದರೂ ಆಂತರಿಕ ಸತ್ವದಲ್ಲಿ ವಿಶಿಷ್ಟ ಪ್ರತಿಭೆಯೊಂದು ಕೆಲಸ ಮಾಡಿರುವುದನ್ನು ಕಾಣಬಹುದು.

ಈ ಕಾವ್ಯದ ಉದ್ದಕ್ಕೂ ಹೆಣೆದುಕೊಂಡು ಬಂದಿರುವ ಸಂಭಾಷಣೆಗಳು ಅರಿಸ್ಟಾಟಲ್ ಅಪೇಕ್ಷಿಸುವಂತೆ ನಾಟಕೀಯ ಸಂವಾದ ಭಾಗಗಳಾಗಿರದಿದ್ದರೂ ಇಲ್ಲಿ ಬೇರೊಂದು ಉದ್ದೇಶವನ್ನು ಸಾಧಿಸಲು ಅವನ್ನು ದುಡಿಸಿಕೊಳ್ಳಲಾಗಿದೆ. ಆಧ್ಯಾತ್ಮವನ್ನು ಬದುಕಿನ ಸಂದರ್ಭದಲ್ಲಿ ಕಾರ್ಯರೂಪಕ್ಕಿಳಿಸುವ ಕಾರ್ಯದಲ್ಲಿ ತೊಡಗಿದ ಕವಿಯ ತತ್ವಜಿಜ್ಞಾಸೆಗೆ ಅದು ಯೋಗ್ಯ ಮಾಧ್ಯಮವಾಗಿ ಪರಿಣಮಿಸಿದೆ. ಗುರು ಚೆನ್ನ-ಮಹಾದೇವಿಯಕ್ಕ- ಗಿರಿಮಲ್ಲ ಇವರ ಸಂಭಾಷಣೆಗಳೇ ಈ ಕಾವ್ಯದ ಜೀವಾಳ- ಎನ್ನುವಷ್ಟರ ಮಟ್ಟಿಗೆ ಆ ತಂತ್ರದ ಸದುಪಯೋಗವಾಗಿದೆ. ಪಾತ್ರಗಳ ಮೂಲಕ ತನ್ನ ಭಾವನೆಗಳನ್ನು ಪ್ರಕಟಪಡಿಸಲು ಇದರಿಂದ ಸಾಕಷ್ಟು ಅವಕಾಶ ಒದಗಿದೆ.

ಕವಿಯ ಈ ಜಿಜ್ಞಾಸೆಯ ಮೂಲ ಯಾವುದು? ''ಮಹಾತ್ಮರು ನಿಜಸಮಾಧಿಯಿಂದ ಎಚ್ಚತ್ತು ಲೋಕದ ಕತ್ತಲೆಗೆ ಕಂದೆರೆದು ಈ ತಮ್ಮ ಕುಲ ಸಂತತಿಯನ್ನು ತಾವಿದ್ದ ಸ್ಥಲಕ್ಕೆ ಎತ್ತಿಕೊಳ್ಳಬಾರದೇಕೋ?'' ನಿಜಕ್ಕೂ ಸೂಕ್ತ ವಿಚಾರ. ಹಾಗೆಯೇ ದೊಡ್ಡಪ್ರಶ್ನೆ. ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯವಾಗಲು ಶ್ರೀಶೈಲಕ್ಕೆ ಹೊರಟ ಮಹಾದೇವಿ ಗುರುಚೆನ್ನಮಲ್ಲನು ತೋರಿಸಿದ ಮಾನವನ ಅನಂತ ಕಷ್ಟಪಾಡುಗಳನ್ನು ಕಂಡು, ಸಾಮಾನ್ಯ ಜೀವಿಯ ಪ್ರತಿನಿಧಿಯಂತಿರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಿರಿಮಲ್ಲನ ವಾಸ್ತವ ಪ್ರಶ್ನೆಗಳಿಂದ ಅಂತರಾಳಕ್ಕಿಳಿದು, ತನ್ನ ವ್ಯಕ್ತಿತ್ವಕ್ಕೆ ಮುಖವೊಂದನ್ನು ಪಡೆದು ಕಲ್ಯಾಣದಲ್ಲಿ ಕಂಡು ಅನುಭವಿಸಿದ ಕಾಯಕ-ದಾಸೋಹವೆಂಬ ಎರಡು ಅಮೋಘವಾದ ಶರಣತತ್ವಗಳನ್ನು ಸ್ವತಃ ಬದುಕಿ ಬಾಳಲು ಮತ್ತೆ ಪ್ರಪಂಚಕ್ಕೆ ಹಿಂದಿರುಗಲು ನಿರ್ಧರಿಸಿರುವುದು 'ಭವ್ಯಮಾನವ'ದ ಸ್ಥೂಲವಾದ ಕಥೆ. ಮಹಾದೇವಿಯಕ್ಕನಂತಹ 'ವಿಲಕ್ಷಣ ಮಹಾದ್ಭುತ ವ್ಯಕ್ತಿ' ಮಲ್ಲಿಕಾರ್ಜುನನಲ್ಲಿ ಸಮರಸ ಹೊಂದಿ ಮಾನವ ಕುಲಕ್ಕೆ ಮರೆಯಾಗಿ ಹೋಗದಂತೆ ಮಾಡುವದು ಹಾಗೂ 'ಲೋಕವನ್ನು ಬಿಡದೆ, ಲೋಕ ತಾನೆಂಬ ಭವ್ಯಸಾಮರಸ್ಯಕ್ಕೊಯ್ಯುವದು ಕವಿಯ ಇಲ್ಲಿಯ ಮಹತ್ವಾಕಾಂಕ್ಷೆಯಾಗಿದೆ. ಈ ಮಹತ್ವದ ಬದಲಾವಣೆಯನ್ನು ಸಮರ್ಥಿಸಲು ಗುರುಚೆನ್ನ- ಗಿರಿಮಲ್ಲರ ನೂತನ ಪಾತ್ರ ಸೃಷ್ಟಿ. ಅದಕ್ಕೆ ಸಂಬಂಧಿಸಿದಂತೆ ಮಹಾದೇವಿಯ ಪಾತ್ರ ಪುಷ್ಟಿಗಾಗಿ ಹಲವು ಸಂಭಾವ್ಯ ಸನ್ನಿವೇಶಗಳ ಕಲ್ಪನೆ. ಶ್ರೀಶೈಲ ಶಿಖರದ ಶಿವಾನುಭವವನ್ನು ಲೋಕಾಭಿಮುಖವಾಗಿಸಿ, ಸಾಮಾನ್ಯರ ಸುಖದುಃಖಕ್ಕೆ ಸ್ಪಂದಿಸಿ ಅವರನ್ನು ಕತ್ತಲೆಯಿಂದ ಮೇಲೆತ್ತುವ ಸಾರ್ಥಕ ಜೀವನದತ್ತ ಕವಿಯ ಸಂಪೂರ್ಣ ಒಲವು. ಅದರಿಂದಲೇ ಕಾವ್ಯಕ್ಕೆ ಗೆಲುವು. ಆದುದರಿಂದಲೇ ಮನುಕುಲದ ಭೂತ, ವರ್ತಮಾನ ಹಾಗೂ ಭವಿಷ್ಯಗಳು ಅವರ ಚಿಂತನೆಯಲ್ಲಿ ಸಮರಸಗೊಂಡು, ಇಹಲೋಕ ಪರಲೋಕ-ಗಳನ್ನೊಳಗೊಂಡ ಭೂಲೋಕ ಸರ್ವಾಧಿಕವೆನ್ನುವಂತೆ ಬಾಳಿ ತೋರಿದ ಶರಣರ ಜೀವನ ದರ್ಶನವೇ ಇಲ್ಲಿಯ ಆದರ್ಶವಾಗಿದೆ. ಹಾಗೆಯೇ ''ಎಲ್ಲ ಧರ್ಮಗಳನ್ನು ಮೀರಿದ ಸಹಜ, 'ನಿರಾಳ' 'ನಿಜಧರ್ಮ' ಈ ಕವಿಯ ಮನೋಧರ್ಮವಾಗಿರುವದನ್ನು ಮರೆಯುವಂತಿಲ್ಲ.

'ಭವ್ಯಮಾನವ' ಕೃತಿ ಇಷ್ಟೊಂದು ದೀರ್ಘವಾಗಿದ್ದರೂ (256 ಅಧ್ಯಾಯಗಳು, 832 ಪುಟಗಳು) ನಿರರ್ಗಳವಾಗಿ ಓದಿಸಿಕೊಳ್ಳುವ ಗುಣವನ್ನು ಪಡೆದಿರಲು ಕಾರಣ ಅದರ ಅಭಿವ್ಯಕ್ತಿಯಲ್ಲಿರುವ ಭಾವತೀವ್ರತೆ. ಮಹಾದೇವಿಯಕ್ಕನ ಜೀವನವೇ ಕಾವ್ಯಮಯವಾಗಿ, ಆಕೆಯ ತೀವ್ರವಾದ ಆಧ್ಯಾತ್ಮಿಕ ಹಂಬಲದ ವಚನಗಳು ಉತ್ತಮ ಭಾವಗೀತೆಗಳೇ ಆಗಿರುವದರಿಂದ ಕವಿ ಅದನ್ನು ಸಮರ್ಥವಾಗಿ ಕೈಗೂಡಿಸಿಕೊಂಡಿದ್ದಾರೆ. ''ಲೌಕಿಕ ಅಥವಾ ಧಾರ್ಮಿಕ ವಿಷಯಗಳ ಅನುಭೂತಿಗಿಂತ 'ಆತ್ಮವನ್ನು ಆಧರಿಸಿ ನಡೆವ ನುಡಿವ ಅನುಭಾವ ಹೆಚ್ಚು -ತೀವ್ರ, ತೀಕ್ಷ್ಣ, ವಿಶಾಲ- ಗಂಭೀರ; ಮತ್ತೆ ಉನ್ನತೋನ್ನತ''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

('ಭವ್ಯಮಾನವ'- ಪ್ರಸ್ತಾವನೆ ಪುಟ- 12) ಎಂಬ ಕವಿಯ ಆತ್ಮವಿಶ್ವಾಸ ಕಾವ್ಯಮುಖದಲ್ಲಿ ಪ್ರಕಟಗೊಳ್ಳುವಾಗ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ಕೆಲವೇ ನಿದರ್ಶನಗಳಿಂದ ಇಲ್ಲಿ ಕಂಡುಕೊಳ್ಳಬಹುದು.

ಪೂರ್ವ ಪೀಠಿಕೆಯಲ್ಲಿ ಕವಿ 'ಪರಶಿವ ಪರಬ್ರಹ್ಮ ಪರಮಾತ್ಮಲಿಂಗ'ದ ಜೊತೆಗೆ 'ನಿತ್ಯನಿಜ ಪರಿಪೂರ್ಣ ಕಾವ್ಯಾನಂದ' ವನ್ನು ಆಹ್ವಾನಿಸಿರುವುದಲ್ಲದೆ ವಾಗ್ದೇವಿಯನ್ನು 'ವಾಙ್ಮಹಾದೇವಿ' ಎಂದೂ ಸಂಬೋಧಿಸಿರುವದು ಕಾವ್ಯವಸ್ತುವಿನ ದೃಷ್ಟಿಯಿಂದ ಗಮನಾರ್ಹವಾಗಿದೆ. ಇದು ಚರಿತೆ, ಇತಿಹಾಸ, ಜೀವನ, ಪುರಾಣ ಎಂದು ಯಾರು ಏನೇ ಅಂದರೂ 'ಕಾವ್ಯಾನುಭವದರ್ಶನ ಕಂಡ ಮಾಳ್ಕೆಯತ್ತವೇ ಅವರ ಲಕ್ಷ. ಅದಕ್ಕಾಗಿ ವ್ಯಾಕರಣ, ಛಂದಸ್ಸು, ಕಟ್ಟು-ನಿಟ್ಟುಗಳ ಹಂಗನ್ನು ಹರಿದರೂ ಚಿಂತೆಯಿಲ್ಲ;

ನೇಮ ನಿತ್ಯವ ಮೀರಿ ಕಾವ್ಯ ಹರಿಯಲಿ ತನ್ನ
ಸೀಮೆ ಸಂಬಂಧವನು ದಾಟಿ ದಿವ್ಯಕ್ಕೆ.

(ಪುಟ : 6)

ಎಂದು ಆಶಿಸಿರುವದು ಸಹಜವಾಗಿದೆ.

ತನ್ನ ಈ ಮಹಾಸಾಹಸಕ್ಕೆ ಕಾರಣವನ್ನು ಸಾರವತ್ತಾಗಿ ನಿವೇದಿಸಲಾಗಿದೆ;

ಕತ್ತಲೆಯ ಕೂಸಿಂಗೆ ಬೆಳಗು ಕನಸು
ಕಾಡದೆಗೆ ಕನವರಿಕೆ ರಸಪೂರ ಕಾವ್ಯ
ನೆಲಕೆ ಸ್ವರ್ಗದ ಮಹಾಸೌಂದರ್ಯ ಸ್ವಪ್ನ
ಮಣ್ಣನೊಳು ಮುಕ್ತಸುಖ ಸಾಮ್ರಾಜ್ಯದಾಸ-
ನಿಂದಲ್ಲ ನಿಲ್ಲಲೀಯದ ಹಲವು ಹಂಬಲ
ಹಗಲಿರುಳು ಹುಟ್ಟುಗರು ಹೊಡೆದ ಭವ್ಯಾಕಾಂಕ್ಷೆ.

(ಪುಟ : 7)

ಸನ್ನಿವೇಶಕ್ಕೆ ತಕ್ಕ ಸುಂದರ ವರ್ಣನೆಗಳು ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ಭಾವಕ್ಕೆ ತಕ್ಕ ಭಾಷೆ; ಅವೆರಡರ ಸಾಮರಸ್ಯದಿಂದ ನಿರರ್ಗಳ ಹರಿವ ಛಂದ;

ಪರಮ ವಿಶ್ವಾದ್ಭುತದ ವಿಶ್ವ ವಿಸ್ತಾರದೊಳು
ಎಲ್ಲ ಎಲ್ಲವ ಮೀರಿ ನಿಂದಿರುವನಂತದೊಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೋಟಿ ಕೋಟಿಗಳಾಚೆ ಹೊಳೆವ ನಕ್ಷತ್ರಗಳೆ
ಕಣ್ಣಾಗಿ ತನ್ನ ತಾ ನೋಡುವಾಕಾಶದೊಳು
ಧರೆಯೊಂದು ಕನ್ನೆಯಾಟದ ಸಣ್ಣ ಕೈಸೆಂಡು
ಚಂದ್ರ ಸೂರ್ಯರ ನಗೆಗೆ ನಗುವ ಗೋಲಿಯ ಗುಂಡು
ಅಲ್ಲೊಂದು ಪರಮಾಣು ಉಡುತಡಿಯ ಗ್ರಾಮ.

(ಪುಟ : 17)

ಪ್ರಾಚೀನ ಕಾವ್ಯಗಳಲ್ಲಿ ಬರುವ ಅಷ್ಟಾದಶ ವರ್ಣನೆಗಳಿಗೂ ವಿಜ್ಞಾನ ಯುಗದಲ್ಲಿ ಬಾಳುತ್ತಿರುವ ಪ್ರಜ್ಞಾವಂತ ಕವಿಯ ಅನುಭವಕ್ಕೂ ಇರುವ ವ್ಯತ್ಯಾಸ ಇಲ್ಲಿ ತಟ್ಟನೆ ಗೋಚರವಾಗದಿರದು.

ಕವಿಯ ಕಲ್ಪನಾ ಚಾತುರ್ಯ ಕಾವ್ಯದುದ್ದಕ್ಕೂ ಚೈತನ್ಯಯುತವಾಗಿ ಕೆಲಸ ಮಾಡಿದೆ. ಇಷ್ಟಲಿಂಗ ಪೂಜೆಯ ಆನಂದದಲ್ಲಿ ಮಹಾದೇವಿ ಮುಳುಗಿರುವಾಗ- 'ಈ ಭಕ್ತಿಯಾನಂದ ಜಗದ ಬಲೆಯೊಳಗಿಂದ ತೆಗೆಯಬಹುದೆ? ಎನ್ನನುದ್ಧರಿಸಬಹುದೆ?' ಎಂಬ ಸಂದೇಹ ಆಕೆಯ ಮನದಲ್ಲಿ ಮೂಡಿದಾಗ, ಲಿಂಗ ಮಸ್ತಕದ ಮಲ್ಲಿಗೆಯೊಂದು ಹೀಗೆ ನುಡಿಯಿತಂತೆ: ಅದು ನುಡಿಯಲ್ಲಿ 'ಮೆಲ್ಲನೆ ಹಾಡಿತ್ತು ಪರಿಮಳದ ಗಾನ:

ನೋಡಿಲ್ಲಿ ಮಾದೇವಿ ಸಲ್ಲಿರುವ ಲಿಂಗಕ್ಕೆ
ಬಿದ್ದು ಹೋಗುವ ನಾನು ಶಿವಪೂಜೆಯಾಗಿರುವೆ
ಲಿಂಗದಾನಂದದೊಳು ಬೆಳಗಿರುವ ಜಂಗಮಕೆ
ಸಲ್ಲಿರುವ ಪರಿಮಳವ ಸಲ್ಲಿಸಿರುವೆ.
ಲಿಂಗಜಂಗಮದಾತ್ಮದೊಳಗೆನ್ನ ಜೀವನವ
ಸಮರಸ ಸಮರ್ಪಣವ ಮಾಡಿ ಬದುಕಿರುವೆ.
ಅರಳಿಯರ್ಪಿತವಾಗಿ ಬಾಳಮ್ಮ ನನ್ನಂತೆ
ಅರ್ಪಿತಾನಂದದೊಳು ಬಾಳಿ ಬದುಕಮ್ಮ

(ಪುಟ : 27)

ಈ ಮಾತಿಗೆ ಸಾಕ್ಷಿ ನಿಂದಂತಿತ್ತಂತೆ. 'ನಿಶೆಯ ಗಾಂಭೀರ್ಯವನು ಬೆಳಗಿರುವ ದೀಪ' ಎಲ್ಲೆಲ್ಲಿ ಕಾವ್ಯಮಯ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಿದೆಯೊ ಅಲ್ಲಲ್ಲಿ ಅದನ್ನು ಹುಸಿ ಹೋಗದಂತೆ ನೋಡಿಕೊಳ್ಳಲಾಗಿದೆ. ಹಿಂದೆಂದೂ ಕಂಡಿರದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ ಸವಿಗನಸನ್ನು ಮಹಾದೇವಿ ಪ್ರಮಥವರ್ಯರಿಗೆ ನಿರೂಪಿಸುವದು ಇಂಥ ಒಂದು ನಿದರ್ಶನ. 'ಕನಸಾದರೇನಂತೆ ಇಲ್ಲಿಯೋ ಕಣ್‌ಮುಂದೆ ಕಟ್ಟಿದಂತಿಹುದಯ್ಯಾ' ಎಂದು ಓದುಗರು ಹೇಳುವಂತಿದೆ. (ಪುಟ : 34-40) ಈ ಬಗೆಯ ಕನಸಿನ ತಂತ್ರ ಕಾವ್ಯಕ್ಕೆ ಮೆರುಗನ್ನು ನೀಡಿದೆ.

ವಚನಗಳ ಭಾವ, ಭಾಷೆ, ಶೈಲಿಯನ್ನು ಅರಗಿಸಿಕೊಂಡು ತಮ್ಮದನ್ನಾಗಿ ಮಾಡಿಕೊಂಡಿರುವ ಕವಿಯ ಮಾತಿನಲ್ಲಿ ಅದೇ ಸಹಜತೆ ಹಾಗೂ ಆತ್ಮೀಯತೆಯನ್ನು ಕಾಣುತ್ತೇವೆ. ಕೌಶಿಕನ ಮನಸ್ಸನ್ನು ಪರಿವರ್ತನೆಗೊಳಿಸುವ ಸಂದರ್ಭದಲ್ಲಿ:-

ಸಂಪ್ರದಾಯದ ಮೂಢ ಕಲ್ಪಿತದ ಹೊದಿಕೆಯನು
ಕಳೆದೊಗೆದು ಬೆಳಗುವಾಗುಸದಂತೆ ನಿಂದಿರುವ
ಶಕ್ತಿ ಸಾಮರ್ಥ್ಯವನು ನೀಡಿದ್ಯೆ ನೀನೆನಗೆ

ಎಂದು ಅಕ್ಕಮಹಾದೇವಿ ಅವನ ಉಪಕಾರವನ್ನು ನೆನೆಯುವಲ್ಲಿ ಆಕೆಯ ವ್ಯಕ್ತಿತ್ವದ ಘನತೆಯನ್ನು ಹೆಚ್ಚಿಸಲು ಕವಿ ಪ್ರಯತ್ನಿಸಿದ್ದಾನೆ. (ಕೌಶಿಕನ ಮನಸ್ಸನ್ನು ಪರಿವರ್ತನಗೊಳಿಸಿದ್ದು ಕವಿಯ ಸ್ವಂತ ಕಲ್ಪನೆಯೆಂಬುದನ್ನು ಇಲ್ಲಿ ನೆನಪಿಡಬೇಕು.)

ಹೇಳರಸ ಹೇಳರಸ ಗಾಳಿಯುಟ್ಟಿಹುದೇನು?
ಬೆಳದಿಂಗಳುಟ್ಟ ಬಟ್ಟೆಯ ಬಣ್ಣವೇನಯ್ಯಾ?
ಗಿಡುಬಳ್ಳಿಕಿರೆಬಾವಿಸಾಗರಕೆ ಹೊದಿಕೆಯೆ?
ಅರೆಗಿಳಿಗೆ ಕೋಗಿಲೆಗೆ ಸೀರೆ ಕುಪ್ಪಸವೆಂಥ
ಸೂರ್ಯನಕ್ಷತ್ರಗಳಿಗಾಭರಣವೇನಯ್ಯಾ
ತಾಯಿ ನೆಲನುಟ್ಟಿಹಳೆ ಚೀನ ಚೀನಾಂಬರವ
ತೊಟ್ಟಿಹಳೆ ಕುಪ್ಪಸವ ಕಿವಿಯೋಲೆ ವಜ್ರಗಳ?
ಕಲ್ಪಿತವು ದೊರೆ, ದಿಟಕೆ ಮಾನವನ ಕಲ್ಪಿತ-
ಅವಗುಣವ ಬಯ್ತಿಡುವ ಹೊಸತು ಮಾನವ ಯುಕ್ತಿ.

(ಪುಟ : 67)

ತಾನು ಮಾಯ ಕಲ್ಪಿತವ ಕಳೆದಿಟ್ಟುದನ್ನು, ಲೌಕಿಕದ ಕೃತಕವನ್ನು ಹರಿದು ಹಾಕಿದ್ದನ್ನು ಹಾಗೂ 'ತಾಯಿ ನೆಲ'ದ ಪ್ರತಿಮೆಯ ಮೂಲಕ ಕಾಮವಾಸನೆಯ ಸೋಂಕಿಲ್ಲದ ಸ್ಥಿತಿಗಳನ್ನು ಸೂಚಿಸಿ, ತನ್ನನ್ನು ತಾನು ತಿಳಿದು ನೋಡುವಂತೆ ಮಾಡಿ, ವಂದಿಸಿ ಬೀಳ್ಕೊಡುವ ಪ್ರಸಂಗ ನಾಟ್ಯಮಯವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾತ್ವಿಕ ಜಿಜ್ಞಾಸೆಯನ್ನು, ಜೀವನಾನುಭವದ ವಿಶ್ಲೇಷಣೆಯನ್ನು ಗುರುಚೆನ್ನ-ಗಿರಿಮಲ್ಲರ ಸಂಭಾಷಣೆಯ ಮೂಲಕ ವಾಸ್ತವದ ನೆಲೆಯಲ್ಲಿ ನಡೆಸುವಾಗ ಆದಷ್ಟು ನೀರಸವಾಗದಂತೆ ಕವಿ ನೋಡಿಕೊಂಡಿರುವುದು ಮೆಚ್ಚತಕ್ಕ ಸಂಗತಿ. ''ಭವ್ಯಮಾನವ''ದ ಹಿಂದೆ ಕೆಲಸ ಮಾಡುತ್ತಿರುವದು ಇತಿಹಾಸ ಪ್ರಜ್ಞೆಯಲ್ಲ. ಮೃತ್ಯು ಪ್ರಜ್ಞೆ ಮತ್ತು ಲೋಕ ಪ್ರೀತಿ'' (ಎಚ್. ಆರ್. ಅಮರನಾಥ- 'ಮೂರು ಮಹಾಕಾವ್ಯಗಳು' -ಪುಟ: 65-1987) ಎಂದು ವಿಮರ್ಶಕರು ಸರಿಯಾಗಿ ಗುರುತಿಸಿದ್ದಾರೆ.

ನಿಂದುದ ನಿವಾಸವಾ ಬಂದುದ ಪ್ರಸಾದ-
ವೆಂಬ ಭಾವದೊಳಿರುವ ನಿಷ್ಠೆ ನೆಲಸಿರಲು
ಯಾವ ಸೀಮೆಯ ಮೃತ್ಯು ಏಕೆ ಬಂದಿತು ಮಗಳೆ?

(ಪುಟ : 121)

ಎಂದು ಗುರುಚೆನ್ನನೇ ಪ್ರಶ್ನೆ ಕೇಳಿಕೊಳ್ಳುತ್ತ ನಿಶ್ಚೇಷ್ಟೆಯೊಳಗೆ ಮುಳುಗಿ ತೇಲುತ್ತಿರುವಾಗ, ಮಹಾದೇವಿಗೆ ದುಃಖತಪ್ತಳಾಗಿ ಬದುಕು ಬಾಳುವೆಯ ಮುರಿದಿಟ್ಟು ಹದಗೆಡಿಸುವ ಲೀಲೆಯಲ್ಲಿ ಎಂಥ ಆನಂದವೊ ಎಂಬ ಉದ್ಗಾರದಲ್ಲಿ ಆರ್ತಭಾವದ ವ್ಯಂಗ್ಯ ಅತ್ಯಂತ ಪರಿಣಾಮಕಾರಿಯಾಗಿದೆ.

ರೋದನದ ಪರ್ವತಕೆ ಬ್ರಹ್ಮಶಿಖರವನಿಟ್ಟು,
ಕಂಬನಿಯ ಕಗ್ಗಡಲ ರಾಶಿರಾಶಿಯ ಮೇಲೆ
ಹಾಸ್ಯದ ತರಂಗಗಳ ಕೋಟಿ ಕೋಟಿಯ ಹೂಡಿ
ಎದೆಯಳಲ ಆಗಸಕೆ ನಗುವ ನಕ್ಷತ್ರಗಳ
ಸಿಂಗರಿಸಿ, ಇರವಿನಾಳವ ಕೊಂದು ಕೂಗಿರುವ
ಸಂತಾಪಜ್ವಾಲೆಗೆ- ಶಾಂತಿ ಮಂತ್ರವನೂದಿ,
ಸುಡುಗಾಡು ಹುಗಿಗಾಡುಗಳ ಮೇಲೆ ವಿಜೃಂಭಿಸಿ
ಪ್ರಳಯ ನಾಟ್ಯವನಾಡಿ ತಿರ್ರನೆ ತಿರುಗುವದು
ಹುಟ್ಟಿಸುವ ಹೊಂದಿಸುವ ಕೇಗೆಯೊಳು ಸಂಭ್ರಮಿಸಿ
ಚಿಟ್ಟನೇ ಚೀರಿರುವ ಪ್ರಾಣರಾಶಿಯ ಮಾಯ
ಮಾಡುತ್ತೆ ಮಾಡುತ್ತೆ ನೋಡುತ್ತೆ ಆಡುವದು.
ಯಾವ ವಿಕಟಾನಂದ ಲೀಲಾ ವಿಲಾಸ?!

(ಪುಟ : 123)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆನಂದ ಪರಿಣಾಮ ಸುಖ ಸಮಾಧಿಯಲ್ಲಿ ತಾನೊಬ್ಬನೆ ಮಲಗಿ ತನ್ನ ವಿಶ್ವಾಂಗಕ್ಕೆ ಮೈಮರೆದು ಒರಗಿದರೆ ಜಗಕರ್ಥವೇನು? ಆದರ ಕತ್ತಲೆಯನ್ನು ಪರಿಹರಿಸುವರಾರು?- ಎಂದು ಅವಳ ಮರ್ತ್ಯದ ಮಣಹ ಪೂರೈಸಿಲ್ಲವೆಂದು ಅಕ್ಕನಿಗೆ ಗುರುಚೆನ್ನ ಎಚ್ಚರಿಸಿ ಆಕೆಯನ್ನು ಲೋಕಾಭಿಮುಖವಾಗಿ ಹೊರಳಿಸುವದು ಈ ಕಾವ್ಯ ವಸ್ತುವಿನ ಮಹತ್ವದ ತಿರುವು. ಈ ಬಗ್ಗೆ ಆಕೆಯ ಚರಿತ್ರೆಯಲ್ಲಿ ಯಾವ ಪೂರ್ವ ಸೂಚನೆಯೂ ಇಲ್ಲದಿರುವಾಗ ಅದನ್ನು ನಿಭಾಯಿಸುವದು ಇನ್ನು ದುಸ್ತರವಾದದ್ದು.

ಮರ್ತ್ಯದ ಮಹಾಗಾಢ ಘನಘೋರ ಕತ್ತಲೆಗೆ-
ಜಗದಗಲ ಮಿಗೆಯಗಲವಾಗಿ ಬಾಯ್ದೆರೆದು
ಕ್ಷಣಕೆ ಕೋಟಿಯ ಕೊಂದು ಸತ್ತ ಕತ್ತಲೆಯ
ಒಳಯಿಂಕೆ ನೂಕುವೀ ಕ್ರೂರ ಕರ್ಕಶ ಮೃತ್ಯು-
ದೇವತೆಗೆ ಉತ್ತರವ ಕೊಡಬಲ್ಲ ಕಲಿಯಾರು ?

(ಪುಟ : 127)

ಮಹಾದೇವಿಯಲ್ಲಿಯೂ ಅಂಥದೇ ಪ್ರತಿಕ್ರಿಯೆ; ಅರಿವು ಮರವೆಯ ಮುದ್ದೆ ಮಾನವ ಪ್ರಾಣಿ ಮೈಮರೆದು ಎದ್ದೇಳುತಿರುವದು - 'ಏನು ಎಚ್ಚರ, ವರದನಿದ್ರೆ' ಎಂಬ ಬೆಡಗು.

ಮಾನವನ ಎತ್ತರದ ಈ ಬೆಳಗುದೀಪಕ್ಕೆ
ಎಲ್ಲ ತಾನಾಗಿರ್ದ ತಾನೊಂದು ನಾನಾಗಿ
ನಿಂದಿರುವ ದೇಹಾತ್ಮ ಪ್ರಾಣಾತ್ಮ ಜೀವಾತ್ಮ-
ಭಾವಿಯಾಗಿರುವರಿರಿವಿನೀ ವಾಮನಂಗೆ
ಹೊರಗೆಲ್ಲ ತಾನೆಂಬ ತನ್ನೊಳಗೆ ಹೊರಗೆಂಬ
ಪ್ರಜ್ವಲಿಸಿ ಬೆಳಗುವ ಸ್ವಯಂಜ್ಯೋತಿ ನಿಲುಕಿರದ,
ಹೊರಗೊಳಗ ಬಿಚ್ಚಿ ಬೇರಿಟ್ಟಿರುವ ಕತ್ತಲೆಯ
ಬೆಳಗಿನೊಳಗಿಟ್ಟಿರುವ ಈ ದೀಪ, ಈ ಅರಿವು.
ವಿಶ್ವದ ವಿಚಿತ್ರ ಘನಘೋರ ಅದ್ಭುತ-
ಆದರೂ ನಿದ್ದೆಗಣ್ಣೊಳಗಿರ್ದ ಕತ್ತಲೆಗೆ
ಎಚ್ಚತ್ತ ಈ ಪ್ರಾಣ ದೇವಜಾತಿ!

(ಪುಟ : 125)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಚೆನ್ನನಿಗೂ ಜಗದಾಟದೊಳಗೆ ಶಿವನಾಟ ನಡೆದಿಹುದೆಂಬ ಮಾತು ಸಮಾಧಾನ ತಂದಿಲ್ಲ. ಈ ಮಹಾ ವಿಷಮದಾಟಕ್ಕೆ ಶಿವಲೀಲೆ ಎಂದರೆ ಮಾನವನ ಗತಿಯೇನು?

ಹುಟ್ಟು ಹುಟ್ಟುವ ಮುನ್ನ ಬೆಳೆ ಬೆಳೆವ ಮುನ್ನ
ಕೊಂದು ಹಾಕುವೆನೆಂಬ ಕೊಯ್ದು ಹಾಕುವೆನೆಂಬ
ತನ್ನ ಸೃಷ್ಟಿಯ ತಾನು ರೂಪಾದ ಸಂತತಿಯ
ತರಿತರಿದು ಕೊರೆ ಕೊರೆದು ಹಿಂಡಿ ಹಿಸುಕಿ
ವಾತ್ಸಲ್ಯ ಬಾಂಧವ್ಯ ಪ್ರೇಮದಾಂಪತ್ಯವನು
ತೊಟ್ಟಿಲವ ತೂಗುತ್ತ ಚಿವುಟಿ ರಕ್ತದೊಳಳಿಸಿ
ಲೀಲಾ ವಿನೋದವನು ಒಡ್ಡಿಹನು ಶಿವನೆಂಬ
ಮಾತು ಶ್ರೋತಕೆ ಚಂದ, ತತ್ವಬುದ್ಧಿಗೆ ಚಂದ.
ಆದರೆ..........ಆದರೆ ....
ರಕ್ತಮಾಂಸದ ಪಾಣ ಪ್ರಾಣಗಳ ಪಾಡೇನು?

(ಪುಟ : 257-258)

ಹೀಗೆ ಜೀವನದ ಆಳವಾದ ಚಿಂತನೆಗೆ ಬೆಳಗುಮಾಡುವ ಈ ಕಾವ್ಯ ಭಾಗದಲ್ಲಿ ಕವಿಯ ಆಳವಾದ ಜೀವನಾನುಭವ ಕಾವ್ಯದೊಡನೆ ಸಮರಸವಾಗಿಯೇ ಹರಿದಿದೆ.

ಭಯವಿಲ್ಲ ಭಯವಿಲ್ಲ ಬಸವಣ್ಣ ಬಂದಿಹನು
ಕತ್ತಲೆಯನೆತ್ತಿ ಬೆಳಗಿನ ಸಾಡಿಗೊಯ್ಯಲಿಕೆ

(ಪುಟ : 226)

ಬಸವಣ್ಣ ಬಂದ ಹೊಸ ಬೆಳಗ ತಂದ
ವಿಶ್ವಮಾನವ ಲಿಂಗವನು ಬೆಳಗಿ ಕೊಟ್ಟ

(ಪುಟ : 632)

ಈ ಕಾವ್ಯದ ಅಂತರಂಗದಲ್ಲಿ ಮೊರೆಯುವ ಧ್ವನಿ, ಅಭಯವಾಣಿ ಇದು! 'ಸಾತ್ವಿಕ ಭಕ್ತಿಯ ಮೂರ್ತಮಾನವ ರೂಪ' ಬಸವಣ್ಣನ ಜೀವನಾದರ್ಶಕ್ಕೆ ಕವಿ ಕೊಟ್ಟಿರುವ ಸ್ಥಾನಮಾನ ಇಲ್ಲಿ ವ್ಯಕ್ತವಾಗುವದಲ್ಲದೆ, 'ವಿಶ್ವಮಾನವ ಲಿಂಗವನು ಬೆಳಗಿಕೊಟ್ಟ' ಎಂಬ ಒಂದೇ ಮಾತಿನಲ್ಲಿ ಆತನ ಮಹಾವ್ಯಕ್ತಿತ್ವ ಬೆಳಗುವಂತೆ ಮಾಡಿದ್ದಾರೆ. ಬಸವಣ್ಣನನ್ನು ನೆನೆಯುತ್ತ, ಅವನ ಜೀವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೌಲ್ಯಗಳನ್ನು ಮನಗಾಣಿಸುತ್ತ ಗುರುಚೆನ್ನ ಮಹಾದೇವಿಯನ್ನು ಮುನ್ನಡೆಸಿದಂತೆಯೇ ತನ್ನ ಕಾವ್ಯವನ್ನು ಮುನ್ನಡೆಸಿರುವಲ್ಲಿ ಕವಿಯ ಕೌಶಲವನ್ನು ಕಾಣಬಹುದು.

ಪುರಾತನ ಮಾನವರ ಸಾರಾಂಶವಾದ ಕಲ್ಯಾಣದ ಅನುಭಾವಿಗಳ ಮಹಾ ಜೀವನದ ರೀತಿ, ಮಾನವನಲ್ಲಿ ಹುದುಗಿರುವ ಬ್ರಹ್ಮಮಾನವಭವ್ಯಕ್ಕೆ ಅವರು ಕಟ್ಟಿದ ಮಾರ್ಗ ಕವಿಗೆ ಸ್ಪಷ್ಟವಾಗಿ ಹೊಳೆದಿದೆ. ಕಾಲಾನಂತರದಲ್ಲಿ ಅದರ ಮೇಲೆ ಬಿದ್ದಿರುವ ಕಲ್ಲು ಮಣ್ಣನ್ನು ತೆಗೆದು, ಆ ಮಾರ್ಗದ ಎಡ ಬಲಗಳಲ್ಲಿ, ಅವರಿಂದಲೇ ಪಡೆದ ಬೀಜಗಳನ್ನೂರಿ ಹೂವಿನ ಗಿಡಗಳನ್ನು ಬೆಳೆಸುವ ಕಾರ್ಯವನ್ನು ಕವಿ ನಿಷ್ಠೆಯಿಂದ ನೆರವೇರಿಸಿದಂತಿದೆ. ಕಾವ್ಯದಲ್ಲಿ ಸಂದರ್ಭೋಚಿತವಾಗಿ ಅರಳಿರುವ ನುಡಿಗಳಲ್ಲಿ ಕೆಲವನ್ನು ನೋಡಿದರೂ ಸಾಕು ಅದರ ಸುಗಂಧ ನಮ್ಮನ್ನು ಆವರಿಸಿಕೊಳ್ಳುತ್ತದೆ.

ಎಲೆ ಬಯಲೆ ಎಲೆ ಮಹಾಬ್ರಹ್ಮ ಪುರುಷಾ,
ನಿನ್ನೆದೆಯನಪ್ಪಿ ಅಗಲದೆ ಆಡಿ ಬಾಳಿರುವ
ವಿಶ್ವಪ್ರಪಂಚದೀ ಬ್ರಹ್ಮಾಂಡ ಸಂಪದವು
ನಿನ್ನದಲ್ಲವೆ ದೇವಾ ಆಕಾಶಪುರುಷಾ?
ಬುದ್ಧಿ ಕಲ್ಪನೆ ಭಾವ ಭಾವನೆ ವಿಚಾರಗಳ
ಕಣ್ಣು ಕಿವಿ ಮೂಗು ನಾಲಗೆ ತೊವಲು ಕಿಂಡಿಗಳ
ಮುರಿದಿಕ್ಕಿ ತುಳಿ ತುಳಿದು ಹಾಕಿ ಮಿಗೆ ಮೀರಿ.
ಮರೆದಿರುವಗಮ್ಯ-

(ಪುಟ - 231)

ಮಾಡಿಟ್ಟ ದೇವರನೆ ನುಂಗಿರ್ದ ಕತ್ತಲೆಗೆ
ಕಡೆಯಿಲ್ಲ ಮೊದಲಿಲ್ಲ ಮೇಲಿಲ್ಲ ಕೆಳಗಿಲ್ಲ;
ಆಕಾಶ ಪಾತಾಳ ಒಂದೆ ಪಾತಾಳಗವಿ
ಕತ್ತಲೆಯ ಕಗ್ಗಂಟು- ದೊಡ್ಡ ಒಗಟು
ದೇವರಿಗೆ ಬಿಟ್ಟಿಲ್ಲ, ಮಾನವನ ಎದೆಯಾ!

(ಪುಟ-401)

ಮಣ್ಣು ಮಾನವನುರಿದು ಚಿಜ್ಜ್ಯೋತಿ ಬೆಳಗುವರೆ
ವಿಸು ಯಜ್ಞದ ಅಗ್ನಿಕುಂಡಕಾಹುತಿಯಾಗಿ
ಬೆಂದು ಬಂದಳು ತಾಯಿ ಭೂಮಿದೇವಿ!

(ಪುಟ-405)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಲು ಬೆಳಗಿನನಂತನಿಸ್ಸೀಮೆಯೊಳು ನಿಂದು
ಬಯಲು ಬ್ರಹ್ಮಾಂಡಗಳ ಉದಯಾಸ್ತಮಾನವನು
-ತನ್ನೊಳಗೆ ತೇಲಿ ಮುಳುಗಾಡಿರುವ ತನುವನು-
ಕಂಡಿರುವ ಬಯಲೆ ಗಂಭೀರ ಅನುಭಾವ.

(ಪುಟ-443)

ದುಃಖ ದುಃಖದ ಹಿಂದೆ ದೇವ ದೇವನ ತಂತ್ರ-
ತನ್ನಲ್ಪ ಸಂಕೋಚ ಹೀನತನ ದೀನತನ
ತನ್ನ ಮದ ತನ್ನಹಂಭಾವ ಗರ್ವ
ತನ್ನಂಘುಡೊಂಕು ತನ್ನಾಸೆ ಆಮಿಷ
ದುರಿತ ದುರ್ಗುಣ ತನ್ನ ದುಶ್ಚರಿತ ದುಷ್ಕರ್ಮ,
ತಾನಿರುವ ಮನೆಯ ಕತ್ತಲೆ ಮಾಡಿ ತನ್ನ
ಗೂಡಿನಿರವನೆ ಬ್ರಹ್ಮದಿರವ ಮಾಡಿ
ಅದೆ ಬಣ್ಣ ಬೆಳಕೆಂದು ಮೋಹಿಸುವ ಮಾನವನ
ಅವಲೋಹವನು ಕಳೆಯಲೆಂದು
ಕುಲುಮ ಬೆಂಕಿಯೊಳಿಟ್ಟು ಕಾಸಿ ಕಾಸಿ
ಕಡಿ ಕಡಿದು ಕರಗಿಸಿ ಬಡಿ ಬಡಿದು ಹಿಗ್ಗಿಸಿ
ಮಾನವನ ಮಿಸುಗಿಚಿನ್ನದ ಮಹಾಮಾನವನ
ಮಾಡಿ ವಿಶ್ವದ ವಿಶಾಲಕ್ಕೆ ಮಾನವನ ಕುಲವ
ಎತ್ತುವ ಮಹಾ ಕಪಟ ತಂತ್ರವಲ್ಲವೆ ದುಃಖ?

(ಪುಟ-609-610)

ಜಗದೊಳಗೆ ಮಾನುಷದ ಎದೆಯೊಳಗೆ
ಕಾಯಕಷ್ಟವ ಬಿತ್ತಿ ದಾಸೋಹವನು ಬೆಳೆದು
ಬಂದ ಫಲವನು ಕೊಂಡು ಸಂತೃಪ್ತಿಯೊಳು ಬದುಕಿ
ಬಾಳಿರುವ ತಂತ್ರ, ತಾರಕವಲ್ಲವೇ ಕುಲಕೆ?

(ಪುಟ-775)

ಇಂಥ ಒಂದು ಬೃಹತ್ ಕೃತಿಯ ವಿಸ್ತಾರದಲ್ಲಿ ಭಾವತೀವ್ರತೆಯನ್ನು ಒಂದೇ ಸಮನಾಗಿ ಕಾಪಾಡಿಕೊಳ್ಳುವದು ಕಷ್ಟ. ಏರಿಳಿತಗಳು ಸ್ವಾಭಾವಿಕ- ವಾದ್ದರಿಂದ ಅದನ್ನೊಂದು ದೋಷವೆಂದು ಕರೆಯಲಾಗದು. ಈ ಸಂದರ್ಭದಲ್ಲಿ ವಿಮರ್ಶಕ ಎ. ಸಿ. ಬ್ರಾಡ್ಲೆ ಹೇಳುವ- ಮಾತು ಗಮನಾರ್ಹ. "ಮುಖದಲ್ಲಿ, ಕಣ್ಣುಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣುವ ಜೀವಕಳೆ ಬೇರೆಲ್ಲೂ ಕಾಣದ ಕಾರಣ, ಇಡೀ ಮುಖದ ತುಂಬ ಕಣ್ಣುಗಳೇ ಇರಬೇಕಾಗಿತ್ತು ಎಂದು ವಾದಿಸಿದ ಹಾಗೆ 'ಭವ್ಯ ಮಾನವ'ದ ಒಂದು ಒಡೆದು ಕಾಣುವ ಗುಣ, ವೈಚಾರಿಕತೆಯನ್ನು ಕಡೆಗಾಣಿಸದ ಭಾವತೀವ್ರತೆಯೆನ್ನಬಹುದು. ಅಧ್ಯಾಯಗಳಿಗಿಟ್ಟಿರುವ ಹೆಸರುಗಳನ್ನು ಅವಲೋಕಿಸಿದರೂ ಸಾಕು- ಬಹುಮಟ್ಟಿಗೆ ಆಯಾ ಅಧ್ಯಾಯಗಳ ಸಾರವನ್ನು ಹಿಡಿದಿಟ್ಟ, ಅನುಭಾವದ ಬೆಳಕನ್ನು ಹೊಮ್ಮಿಸುವ, ಕಾವ್ಯತೈಲವನ್ನುಂಡ, ಹಣತೆಯ ಸಾಲುಗಳಂತೆ ಅವು ಕಂಗೊಳಿಸುತ್ತವೆ- ಉದಾಹರಣೆಗೆ:-

'ಎಲೆಲೆ ಮಾನವ- ಮಹೋಜ್ವಲ ಭವಿಷ್ಯಂತಿಯ'
'ಸತ್ತು ಬಂದಳು ಮಗಳೆ ಬದುಕಿ ಬಂದ'
ಬಯಲ ಹರವಿಗೆ ರೆಕ್ಕೆ ಹಾರಲಾರದ ಪ್ರಾಣ'
ಪ್ರಶ್ನೆಗುತ್ತರ ಬಯಲು, ಪ್ರಶ್ನೆಯೇ ಬಯಲು!
ಕತ್ತಲೆಗೆ ನಕ್ಷತ್ರ ನಂದಿದರ ಚೆರಗಾದ
ಜಗದೆಲ್ಲವನು ನುಂಗಿ 'ನಾನು' ತುಂಬುವ ಭರ!
ಗೆಲಬಹುದು ದೇವರನ್ನು ಜಗವ ಗೆಲಲಾಗದು'
ಸುಖವತ್ತುದೇ ದುಃಖ, ದುಃಖ ನಕ್ಕುದೇ ಸುಖ'
'ಅಲ್ಪಕ್ಕೆ ಮನಸೋತು ಆಕಾಶ ಮರೆಯದಿರಿ,
ದುಡಿವ ದೇವರಿಗೆ ಮುಕ್ತಿಯ ಸುಖವ ಬೀರಿರುವ'

'ನೀರನಿಕ್ಕುಡಿ' ಭಜನೆ ಕೆಟ್ಟಿತು ಇತ್ಯಾದಿ ದೇಸಿ ನುಡಿಗಟ್ಟನ್ನು ಸಂದರ್ಭಾನುಸಾರ ಅರ್ಥಪೂರ್ಣವಾಗಿ ಬಳಸಲಾಗಿದೆ. ಹೊಸಪದಗಳನ್ನು ರೂಢಿಸಿಕೊಳ್ಳುವಲ್ಲಿಯೂ ಹಿಂದೆಮುಂದೆ ನೋಡಿಲ್ಲ- ಉದಾ- ಚೆಂದಂಪು, ಇಂಬೆಳಗು, ಮುಂಗೆಂಪು, ತೊಡುಗೊರೆ, ಹುಗಿಗಾಡು, ಕರ್ಗತ್ತ, ಬ್ರಹ್ಮಾಂಧಕಾರ, ನಕ್ಷತ್ರನಿಮಿಷ, ಲಿಂಗಪ್ರಭಾತ- ಇತ್ಯಾದಿ.

ಆಧುನಿಕ ಕನ್ನಡ ಸಾಹಿತ್ಯದ ಮೂರು ಮಹಾಕಾವ್ಯಗಳೂ ಅಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುವುದು ಗಮನಾರ್ಹ. ಹಾಗೆಯೇ ಮೂರು ಕೃತಿಗಳಲ್ಲಿಯೂ ಕವಿಯು ಕೇಂದ್ರ ಸ್ಥಾನದಲ್ಲಿದ್ದು ಕೆಲಸ ಮಾಡಿರುವದು ಕಂಡು ಬರುತ್ತದೆ. 'ಭವ್ಯಮಾನವ' ದೇಸಿಯ ಬೆಡಗಿನೊಂದಿಗೆ ಕನ್ನಡ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸಿ ಕಾವ್ಯವೆಂದು ಖಂಡಿತವಾಗಿ ಹೇಳಬಹುದು. ಇದು ಮಾನವ ಬದುಕಿನ ಚಿರಂತನ ಸಮಸ್ಯೆಗಳಿಗೆ ತನ್ನನ್ನು ಒಡ್ಡಿಕೊಂಡಿರುವ ಕಾವ್ಯ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರ ದೀರ್ಘತೆ ಉದ್ದೇಶಪೂರ್ವಕವಾಗಿದ್ದರೂ ಅದನ್ನು ಭಟ್ಟಿಯಿಳಿಸುವದು ಸಾಧ್ಯವಿತ್ತೆಂಬುದು ಕಾವ್ಯದ ಹಲವಾರು ಪುಟಗಳಲ್ಲಿ ಬರುವ ಪುನರುಕ್ತಿಗಳನ್ನು ಕಂಡಾಗ ಅನಿಸದಿರದು. ಇದು ಅನಿಸಿಕೆಯ ಮಾತಾಯಿತು. ಇನ್ನು ಈ ಕಾವ್ಯವನ್ನು ಓದಿದಾಗ ಉಂಟಾಗುವ ಅನುಭವ ಎಂಥದು? 'ಕತ್ತಲೆಯ ಕಾಂಡ'ದಲ್ಲಿ 'ಅಪ್ರತಿಮ ಕಾವ್ಯದೃಷ್ಟಾರ' ಲಿಂಗಣ್ಣ ಕವಿಯ ಕಾವ್ಯದ ಬಗ್ಗೆ ಗುರುಚೆನ್ನ ಹೇಳುವ ಮಾತಿನ ಮೂಲಕವೇ ಅದನ್ನು ಹೇಳಬಹುದು;

ನೂರು ಸಾವಿರ ಕಾಲ
ಮಾನವನ ಒಳಹೊರಗೆ ಅಡ್ಡಾಡಿ ನಡೆದಿರುವ
ಹೊರಲೋಕ ಒಳಲೋಕದಂಥ ಸಾಮಾನ್ಯವನು
ಕಿತ್ತೊಗೆದು ಚೆಲ್ಲಿದರೆ ಚೆಲುವು- ಬೆಳಗು
ಮತ್ತೇನು ಮತ್ತೇನು ಪ್ರತಿಯಿಲ್ಲದ ಪ್ರತಿಮ
ಕಾವ್ಯ ಪ್ರತಿಭೆಯು ಹೊಯ್ದ ಬೆಳದಿಂಗಳಲ್ಲವೆ?
------ ----- ------- -----
------ ---- --------- ----
ಮಾನವರ ಎದೆಯ ವೀಣೆಯು ಮಿಡಿದು ತನ್ನದೆಯ
ಅನುಭವವ ನುಡಿಸಿದರೆ
ಅದ್ಭುತಕೆ ಅದ್ಭುತವು ಗೊಂಚಲಿಟ್ಟಿತು ಮಗಳೆ!
----- --------- ------ ----
---- ---------- ------ ------
ಹೃದಯ ಹೃದಯದ ಮಹಾ ಸಂಗಮ ಕ್ಷೇತ್ರದೊಳು
ಹಾಡಿತ್ತು ಕಾವ್ಯ ಕೇಳಿತ್ತು ಎದೆಯ ಕಿವಿ
ಕಂಡಿತು ಮಹಾಜಗದ ಭವ್ಯ ಕಾವ್ಯ!
------ --------- ------- -----
---- -------- ------ -------
ಶಬ್ದ ಕಂಬನಿಗರೆದು ಅತ್ತಿಹವು ತಾಯೇ-!

(ಪುಟ : 337-351)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಭವ್ಯಮಾನವ''-ಒಂದು ಹಕ್ಕಿ ನೋಟ

ಚಿದಂಬರ ದೀಕ್ಷಿತ್

ಸಾಹಿತ್ಯಕ್ಕೆ ಕೊಡಲಿಏಟು ಬೀಳುವ ಈ ಕಾಲದಲ್ಲಿ ಮಹಾಕಾವ್ಯ ಕನಸಿನ ಗಂಟು. ಆದರೆ ಈ ಕನಸನ್ನು ನನಸಾಗಿಸಿದ ಶ್ರೇಯಸ್ಸು ಕನ್ನಡದ ಮೂವರು ಮಹಾನುಭಾವರಿಗೆ ಸಂದು ಕನ್ನಡ ಕಾವ್ಯ ದೀಧೀತಿ ಭಾರತೀಯ ಸಾರಸ್ವತೋಪಾಸನೆಗೆ ಆರ್ತಿಕ್ಯ ಮೂಡಿಸಿದೆ. ಕುವೆಂಪು ಅವರ ''ಶ್ರೀ ರಾಮಾಯಣದರ್ಶನಂ'', ವಿನಾಯಕರ ''ಭಾರತ ಸಿಂಧು ರಶ್ಮಿ'' ಮತ್ತು ಭೂಸನೂರಮಠರ ''ಭವ್ಯಮಾನವ'' ಒಂದೊಂದು ಬಗೆಯಲ್ಲಿ ತಮ್ಮ ಪ್ರಕಾಶ ಬೀರಿ ಆಧುನಿಕ ಕನ್ನಡ ಕಾವ್ಯದ ದೀಪ ಸ್ತಂಭಗಳಾಗಿವೆ. ಕುವೆಂಪು, ವಿನಾಯಕರ ಕಾವ್ಯ ಸೃಷ್ಟಿ ಅವರ ಹರೆಯದಿಂದಲೇ ನಡೆದು ಬಂದದ್ದು. ಅವರನ್ನು ನಾವು ನಾಲ್ಕೈದು ದಶಕಗಳಿಂದ ಪ್ರತಿಭಾವಂತ ಕವಿಗಳೆಂದು ಗೌರವಿಸುತ್ತ ಬಂದಿದ್ದೇವೆ. ಆದರೆ ಭೂಸನೂರಮಠರ ಕಾವ್ಯೋದ್ಯೋಗ ಅವರ ವಾರ್ಧಕ್ಯದ ಮಹಾ ತಪಸ್ಸಿನ ಫಲ. ಅವರು ಈ ಮೊದಲು ಕಾವ್ಯ ಬರೆದಿರಲಿಲ್ಲವೆಂಬುದು ನ್ಯೂನತೆ ಅಲ್ಲ. ಪ್ರತಿಭೆಗೆ ಕಣ್ಣೊಡೆಯಲು ವಯೋಮಾನದ ಬಂಧನವಿಲ್ಲ. ಅವರು ಈ ಕೃತಿ ರಚನೆಗೆ ತೊಡಗುವ ಕಾಲಕ್ಕೆ ಮೊದಲೇ ಆಳವಾದ ಅನುಭವ, ಚಿಂತನೆ, ಅಧ್ಯಯನಗಳು ಮುಪ್ಪುರಿಗೊಂಡು ಬರಹದ ಹೊಣೆ ಹೆಚ್ಚಿ, ತೂಕದ ನಡೆಯಲು, ವಿಮರ್ಶೆಯ ಅರಿವು ಹಾಸು-ಹೊಕ್ಕಾಗಿ ನೆಲೆನಿಂತು, ಸಮಗ್ರ ಶಿಲ್ಪ ಅಖಂಡ ಭಾವ ಸಂವೇದನೆಗೆ ಸಹಕಾರಿಯಾಗಿ ತನ್ನ ವೈಶಿಷ್ಟ್ಯವನ್ನು ಅಚ್ಚಳಿಯದೇ ನಿಲ್ಲಿಸಿದೆ. ಕುವೆಂಪು ಮಹಾಕಾವ್ಯಕ್ಕೆ ವಾಲ್ಮೀಕಿ ರಾಮಾಯಣ ಆಕರ; ವಿನಾಯಕರ ಕೃತಿಗೆ ವೇದ ಸೂಕ್ತಗಳು ಮತ್ತು ಆ ಸೂಕ್ತಗಳಿಗೆ ಸಂಬಂಧಿಸಿದ ಕತೆ, ಉಪಕತೆಗಳು ಆಕರ; ಈ ಇಬ್ಬರು ತಮ್ಮ ತಮ್ಮ ನಿಲವಿನಲ್ಲಿ ಹೊಸ ಸೃಷ್ಟಿಯನ್ನು ನಿರ್ಮಾಣ ಮಾಡಿದ್ದಾರೆ. ಭೂಸನೂರಮಠರ ಕಾವ್ಯಕ್ಕೆ ಶಿವಶರಣರ ಅನುಭಾವ ಜೀವನ ಪ್ರೇರಕ ಶಕ್ತಿ ಆಗಿದೆ. ಹೊರನೋಟದಲ್ಲಿ ಮಹಾದೇವಿಯಕ್ಕನ ಭವ್ಯ ಜೀವನ ಕಥಾವಸ್ತು ಎಂದರೂ ಚಿಂತನ, ಮಂಥನದ ಕ್ರಿಯೆಯಲ್ಲಿ ಶರಣರ ಅನುಭಾವದ ದಿವ್ಯಜ್ಯೋತಿ ಏಕರೂಪವಾಗಿ ಬೆಳಗಿದೆ. ಕಾವ್ಯದ ಚೌಕಟ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರ ದೀರ್ಘತೆ ಉದ್ದೇಶಪೂರ್ವಕವಾಗಿದ್ದರೂ ಅದನ್ನು ಛಟ್ಟೆಯಿಳಿಸುವದು ಸಾಧ್ಯವಿತ್ತೆಂಬುದು ಕಾವ್ಯದ ಹಲವಾರು ಪುಟಗಳಲ್ಲಿ ಬರುವ ಪುನರುಕ್ತಿಗಳನ್ನು ಕಂಡಾಗ ಅನಿಸದಿರದು. ಇದು ಅನಿಸಿಕೆಯ ಮಾತಾಯಿತು. ಇನ್ನು ಈ ಕಾವ್ಯವನ್ನು ಓದಿದಾಗ ಉಂಟಾಗುವ ಅನುಭವ ಎಂಥದು? 'ಕತ್ತಲೆಯ ಕಾಂಡ'ದಲ್ಲಿ 'ಅಪ್ರತಿಮ ಕಾವ್ಯದ್ರಷ್ಟಾರ' ಲಿಂಗಣ್ಣ ಕವಿಯ ಕಾವ್ಯದ ಬಗ್ಗೆ ಗುರುಚೆನ್ನ ಹೇಳುವ ಮಾತಿನ ಮೂಲಕವೇ ಅದನ್ನು ಹೇಳಬಹುದು;

ನೂರು ಸಾವಿರ ಕಾಲ
ಮಾನವನ ಒಳಹೊರಗೆ ಅಡ್ಡಾಡಿ ನಡೆದಿರುವ
ಹೊರಲೋಕ ಒಳಲೋಕದಂಥ ಸಾಮಾನ್ಯವನು
ಕಿತ್ತೊಗೆದು ಚೆಲ್ಲಿದರೆ ಚೆಲುವು- ಬೆಳಗು
ಮತ್ತೇನು ಮತ್ತೇನು ಪ್ರತಿಯಿಲ್ಲದ ಪ್ರತಿಮ
ಕಾವ್ಯ ಪ್ರತಿಭೆಯು ಹೊಯ್ದ ಬೆಳದಿಂಗಳಲ್ಲವೆ?
------ ----- ------- -----
------ ---- --------- ----
ಮಾನವರ ಎದೆಯ ವೀಣೆಯು ಮಿಡಿದು ತನ್ನದೆಯ
ಅನುಭವವ ನುಡಿಸಿದರೆ
ಅದ್ಭುತಕೆ ಅದ್ಭುತವು ಗೊಂಚಲಿಟ್ಟಿತು ಮಗಳೆ!
----- --------- ------ ----
---- ---------- ------ ------
ಹೃದಯ ಹೃದಯದ ಮಹಾ ಸಂಗಮ ಕ್ಷೇತ್ರದೊಳು
ಹಾಡಿತ್ತು ಕಾವ್ಯ ಕೇಳಿತ್ತು ಎದೆಯ ಕಿವಿ
ಕಂಡಿತು ಮಹಾಜಗದ ಭವ್ಯ ಕಾವ್ಯ!
------ --------- ------- -----
---- -------- ------ -------
ಶಬ್ದ ಕಂಬನಿಗರೆದು ಅತ್ತಿಹವು ತಾಯೇ-!

(ಪುಟ : 337-351)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಭವ್ಯಮಾನವ"-ಒಂದು ಹಕ್ಕಿ ನೋಟ

ಪಿದಂಬರ ದೀಕ್ಷಿತ್

ಸಾಹಿತ್ಯಕ್ಕೆ ಕೊಡಲಿಏಟು ಬೀಳುವ ಈ ಕಾಲದಲ್ಲಿ ಮಹಾಕಾವ್ಯ ಕನಸಿನ ಗಂಟು. ಆದರೆ ಈ ಕನಸನ್ನು ನನಸಾಗಿಸಿದ ಶ್ರೇಯಸ್ಸು ಕನ್ನಡದ ಮೂವರು ಮಹಾನುಭಾವರಿಗೆ ಸಂದು ಕನ್ನಡ ಕಾವ್ಯ ದೀಧೀತಿ ಭಾರತೀಯ ಸಾರಸ್ವತೋಪಾಸನೆಗೆ ಆರ್ತಿಕ್ಯ ಮೂಡಿಸಿದೆ. ಕುವೆಂಪು ಅವರ "ಶ್ರೀ ರಾಮಾಯಣದರ್ಶನಂ", ವಿನಾಯಕರ "ಭಾರತ ಸಿಂಧು ರಶ್ಮಿ" ಮತ್ತು ಭೂಸನೂರಮಠರ "ಭವ್ಯಮಾನವ" ಒಂದೊಂದು ಬಗೆಯಲ್ಲಿ ತಮ್ಮ ಪ್ರಕಾಶ ಬೀರಿ ಆಧುನಿಕ ಕನ್ನಡ ಕಾವ್ಯದ ದೀಪ ಸ್ತಂಭಗಳಾಗಿವೆ. ಕುವೆಂಪು, ವಿನಾಯಕರ ಕಾವ್ಯ ಸೃಷ್ಟಿ ಅವರ ಹರೆಯದಿಂದಲೇ ನಡೆದು ಬಂದದ್ದು. ಅವರನ್ನು ನಾವು ನಾಲ್ಕೈದು ದಶಕಗಳಿಂದ ಪ್ರತಿಭಾವಂತ ಕವಿಗಳೆಂದು ಗೌರವಿಸುತ್ತ ಬಂದಿದ್ದೇವೆ. ಆದರೆ ಭೂಸನೂರಮಠರ ಕಾವ್ಯೋದ್ಯೋಗ ಅವರ ವಾರ್ಧಕ್ಯದ ಮಹಾ ತಪಸ್ಸಿನ ಫಲ. ಅವರು ಈ ಮೊದಲು ಕಾವ್ಯ ಬರೆದಿರಲಿಲ್ಲವೆಂಬುದು ನ್ಯೂನತೆ ಅಲ್ಲ. ಪ್ರತಿಭೆಗೆ ಕಣ್ಣೊಡೆಯಲು ವಯೋಮಾನದ ಬಂಧನವಿಲ್ಲ. ಅವರು ಈ ಕೃತಿ ರಚನೆಗೆ ತೊಡಗುವ ಕಾಲಕ್ಕೆ ಮೊದಲೇ ಆಳವಾದ ಅನುಭವ, ಚಿಂತನೆ, ಅಧ್ಯಯನಗಳು ಮುಪ್ಪುರಿಗೊಂಡು ಬರಹದ ಹೊಣೆ ಹೆಚ್ಚಿ, ತೂಕದ ನಡೆಯಲು, ವಿಮರ್ಶೆಯ ಅರಿವು ಹಾಸು-ಹೊಕ್ಕಾಗಿ ನೆಲೆನಿಂತು, ಸಮಗ್ರ ಶಿಲ್ಪ ಅಖಂಡ ಭಾವ ಸಂವೇದನೆಗೆ ಸಹಕಾರಿಯಾಗಿ ತನ್ನ ವೈಶಿಷ್ಟ್ಯವನ್ನು ಅಚ್ಚಳಿಯದೇ ನಿಲ್ಲಿಸಿದೆ. ಕುವೆಂಪು ಮಹಾಕಾವ್ಯಕ್ಕೆ ವಾಲ್ಮೀಕಿ ರಾಮಾಯಣ ಆಕರ; ವಿನಾಯಕರ ಕೃತಿಗೆ ವೇದ ಸೂಕ್ತಗಳು ಮತ್ತು ಆ ಸೂಕ್ತಗಳಿಗೆ ಸಂಬಂಧಿಸಿದ ಕತೆ, ಉಪಕತೆಗಳು ಆಕರ; ಈ ಇಬ್ಬರು ತಮ್ಮ ತಮ್ಮ ನಿಲವಿನಲ್ಲಿ ಹೊಸ ಸೃಷ್ಟಿಯನ್ನು ನಿರ್ಮಾಣ ಮಾಡಿದ್ದಾರೆ. ಭೂಸನೂರಮಠರ ಕಾವ್ಯಕ್ಕೆ ಶಿವಶರಣರ ಅನುಭಾವ ಜೀವನ ಪ್ರೇರಕ ಶಕ್ತಿ ಆಗಿದೆ. ಹೊರನೋಟದಲ್ಲಿ ಮಹಾದೇವಿಯಕ್ಕನ ಭವ್ಯ ಜೀವನ ಕಥಾವಸ್ತು ಎಂದರೂ ಚಿಂತನ, ಮಂಥನದ ಕ್ರಿಯೆಯಲ್ಲಿ ಶರಣರ ಅನುಭಾವದ ದಿವ್ಯಜ್ಯೋತಿ ಏಕರೂಪವಾಗಿ ಬೆಳಗಿದೆ. ಕಾವ್ಯದ ಚೌಕಟ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಸೀಮೆಯದು; ಅಂದರೆ ಅದರ ಧಾರ್ಮಿಕ ಪ್ರಕ್ರಿಯೆಗೆ ಸೇರಿದ ಚರಿತೆ, ಕಥೆ, ಪರಿಭಾಷೆಗಳ ಹಿನ್ನೆಲೆಯಲ್ಲಿ, ವಚನಗಳ ಪ್ರತೀತಿಯ ಆವರಣದಲ್ಲಿ ಕಥೆಯ ಹಂದರ ರೂಪಗೊಂಡಿದೆ. ಇದನ್ನು ಪರಿಮಿತಿಯೆನ್ನುವುದು ತಪ್ಪು. ಆಧ್ಯಾತ್ಮ ಕ್ರಿಯೆಯಲ್ಲಿ ಮೈಗೊಳ್ಳದಿದ್ದ ನಮಗೆ ಅಂದರೆ ಸಾಮಾನ್ಯರಾದ ನಮ್ಮಗೆ- ಕನ್ನಡಿಯ ಗಂಟಾಗಿ, ಅರಗದ ಬೋಧವಾಗಿ ಬದುಕಿಗೆ ತಲ್ಲೀನತೆ ತರುವುದಿಲ್ಲ. ಧಾರ್ಮಿಕತೆ ಅದಕ್ಕೆ ಮಾಧ್ಯಮವಾದಾಗ ಶ್ರದ್ಧೆಯ ಬಲ ಒದಗಿ ಆಲೋಚನೆಯು ತಿಳಿಗೊಳ್ಳುವದು. ಶರಣ ಸಾಹಿತ್ಯದಲ್ಲಿ ಕನ್ನಡದ ಚಿಂತನದ ಮಹಾಸಾಧನೆ ಇದ್ದು ನಮಗ ಸಹಜವಾಗಿ ದೊರೆತ ಬಳುವಳಿಯಾಗಿದೆ. ಈ ಸಾಧನೆಯನ್ನು ಕವಿ ಭೂಸನೂರಮಠರು ಅಳವಡಿಸಿಕೊಂಡಿರುವಲ್ಲಿ ಸಫಲರಾಗಿದ್ದಾರೆ.

ಚೌಕಟ್ಟೇ ಕಾವ್ಯವಲ್ಲ; ಅಲ್ಲದೆ ಶರಣರ ಚಿಂತನ-ಮಂಥನಗಳು ಮತೀಯ ಅಡ್ಡಗೋಡೆಗಳನ್ನೊಡೆದು ಮಾನವ ಪ್ರಕಲ್ಪಕ್ಕೆ ಸೇರಿದವುಗಳಾಗಿವೆ. ಜೀವ-ಜಗತ್ತು-ಈಶ್ವರ ಎಂಬ ಪ್ರಮೇಯ ಸರ್ವಧರ್ಮಗಳ ಮೂಲ ಸ್ರೋತವಾಗಿದ್ದು ಅಭಿವ್ಯಕ್ತಿ ಸ್ವರೂಪದಲ್ಲಿ ಬೇರೆ ಬೇರೆ ಎಂದೆನಿಸಬಹುದು; ಆದರೆ ಮಾನವ್ಯ ಸರ್ವಾಂಶವಾಗಿದೆ. ಭೂಸನೂರಮಠರು ಆಧುನಿಕ ಅರಿವಿನ ನೆಲೆಯವರು; ಪ್ರಪಂಚದ ಬೇರೆ ಬೇರೆ ವಿಚಾರವಂತರ ನಿಲುಮೆಯನ್ನು ತೆರೆ ಮನಸ್ಸಿನಿಂದ ಅರಿತು ಅವುಗಳ ಸಾರಭೂತ ತಿಳಿವಳಿಕೆಯಿಂದ ಇಂದಿನ ವಿಚಾರ ಭೂಮಿಕೆಗೆ ಹದ ತಂದುಕೊಂಡಿದ್ದಾರೆ; ಆ ಮೂಲಕ ಹೊಸ ಚಿಂತನೆ ನಡೆಸಿ ತಾದಾತ್ಮ್ಯ ಹೊಂದಿ ಕೃತಿ ರಚಿಸಿದ್ದಾರೆ. ಭಾರತೀಯ ಪ್ರಣಾಲಿ ಆಲೋಚನೆಯ ವೀರ್ಯ; ಶಿವಾಗಮ ಅದರ ಕಾರ್ಯ. ಇವೆರಡೂ ಒಂದೇ ಅನುಭೂತಿಗೆ ಸೇರಿದವು ಎಂದು ಅವರು ಒಕ್ಕಣಿಸದಿದ್ದರೂ ನಂಬಿಬಂದವರಾಗಿದ್ದಾರೆ. ಸ್ವತಂತ್ರ ಆಲೋಚನೆಯನ್ನು ಅಳವಡಿಸಿಕೊಂಡೂ, ಇದೇ ಅವರ ವಿಶ್ವದರ್ಶನದ ಪ್ರಧಾನ ಸತ್ವ. ಈ ಕಾರಣದಿಂದ "ಭವ್ಯ ಮಾನವ" ಕಾವ್ಯಸೃಷ್ಟಿ ಪ್ರಪಂಚದ ಅನುಭೂತಿಪರ ಹಿರಿಯ ಕೃತಿಗಳಲ್ಲೊಂದಾಗಿದೆ ಯೆಂದು ಭಾವಿಸಬಹುದು.

ಸಮಗ್ರವಾದ ಲೌಕಿಕ ಕೃತಿವಿಮರ್ಶೆಯಿಂದ ಈ ಮಾತಲ್ಲ; ಆಶಯದ ಅರಿ ಲಕ್ಷಣವನ್ನು ಗಮನಿಸಿ ಹೇಳಿದೆ. ಒಂದು ಒಳ್ಳೆಯ ಕೃತಿಗೆ ಅದರದರ ಘನತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುಚಿ, ಸೌಂದರ್ಯಬೋಧೆಗಳಿರುತ್ತವೆ. 'ಭವ್ಯ ಮಾನವ'' ತನ್ನ ವೈಶಿಷ್ಟ್ಯದಿಂದ ಈ ಗರಿಮೆ ಪಡೆದಿದೆ. ಇಲ್ಲಿರುವ ಚರಿತ್ರೆಗನುಸಾರವಾದ ಮಹಾದೇವಿಯಕ್ಕನ ಕಥೆ ದೊಡ್ಡದಲ್ಲ. ಉಡುತಡಿಯ ಶಿವಭಕ್ತರಾದ ಸುಮತಿದೇವಿ ಮತ್ತು ನಿರ್ಮಲಶೆಟ್ಟಿಯವರ ಮಗಳಾದ ಅಕ್ಕ ಜನ್ಮಜಾತವಾಗಿ ಭಕ್ತಿಯ ತೊಟ್ಟಿಲಿನಲ್ಲಿಯೆ ಬೆಳೆದವಳು. ಗುರು ಚೆನ್ನಮಲ್ಲಯ್ಯನ ಕೃಪಾಪ್ರಸಾದದಿಂದ ಒಳಗನ್ನು ಬೆಳಗಿಸಿಕೊಂಡವಳು. ರಾಜ ಕೌಶಿಕನು ಇವಳ ಸಹಜ ಸೌಂದರ್ಯಕ್ಕೆ ಮಾರುಹೋಗಿ ಮದುವೆಯಾಗಲು ಬಯಸಿದನು. ಅವನ ಕಾಮವಾಸನೆಗೆ ಜಗ್ಗದ ಅಕ್ಕ ಆತನನ್ನೇ ಪರಿವರ್ತಿಸಿದುದು ಒಂದು ಅಗಾಧ. ಮದುವೆ ನಿಲ್ಲದೆ ದೇಹಭಾವವನ್ನೇ ಕಳಚಿ ಒಗೆದಂತೆ- ತನ್ನ ಬಟ್ಟೆಗಳನ್ನು ಚೆಲ್ಲಿ ಕೊಟ್ಟು, ಬಿಡಿಜಡೆಯಿಂದ ಕಲ್ಯಾಣಕ್ಕೆ ಬಂದು ಅನುಭವ ಮಂಟಪದ ಅನುಭಾವಿಗಳ ಒರೆಗಲ್ಲಿಗೆ ಸೋಲದೆ, ಪ್ರಭುವಿನ ಅಪ್ಪಣೆಯಂತೆ ತನ್ನ ಪತಿ ಶ್ರೀ ಚೆನ್ನಮಲ್ಲಿಕಾರ್ಜುನನ್ನು ಸೇರಲು ಶ್ರೀಗಿರಿಗೆ ಹೊರಟಳು. ಇದೆಲ್ಲ ಪರಂಪರೆಯಿಂದ ತಿಳಿದ ಕಥೆ. ಆದರೆ ಅನುಭವ ಮಂಟಪದಲ್ಲಿ ಸೂಳ್ನುಡಿಯ ಹಂದರವೇರ್ಪಟ್ಟು ಅವರ ದರ್ಶನಾಭಿಲಾಷೆ ಎಲ್ಲರನ್ನೂ ಮಿಡಿಯಿತು. ಈ ಸನ್ನಿವೇಶದ ಭಾವಚಿತ್ರಣದಲ್ಲಿ ಕವಿಯ ಪ್ರತಿಭೆ ಮಿಂಚಿದೆ; ಇಷ್ಟೇ ಅಲ್ಲ, ಕಾವ್ಯದುದ್ದಕ್ಕೂ ಹೊಮ್ಮಿ ಬಂದ ಸಂವಾದ ಸೃಷ್ಟಿ ವಿವೇಕದ ಕೆಚ್ಚನ್ನು ಕೆನೆಗಟ್ಟಿಸಿದುದು ಭೂಸನೂರಮಠರ ತಂತ್ರ, ಇಲ್ಲವೆ ಶೈಲಿಯ ವೈಶಿಷ್ಟ್ಯವಾಗಿದೆ. ಪರಂಪರೆಯಲ್ಲಿ ಇಲ್ಲದ, ಈ ಕಾವ್ಯನಿರ್ಮಾಣದಲ್ಲಿಯೇ ರೂಪುಗೊಂಡ ಕೆಲವು ಅಂಶಗಳನ್ನು ನಾವೀಗ ಪರಿಶೀಲಿಸಬಹುದು. ಗುರುಚೆನ್ನಮಲ್ಲಯ್ಯ ಒಬ್ಬ ದ್ರಷ್ಟಾರ. ಇವನು ಶರಣರ ಅನುಭಾವ ವಾತಾವರಣದಲ್ಲಿ ಬೆಳೆದು ಬಂದು, ಕಲ್ಯಾಣದ ಗುರಿಯಿಂದ ಸಂಚರಿಸುತ್ತ ಉಡುತಡಿಗೆ ಬಂದು, ಒಂದು ದಿನ ಅನುಭಾವ ಗೋಷ್ಠಿ ನಡೆಸಿದನು. ಇವನು ಅಕ್ಕನ ಚಿತ್ಕಳೆಯನ್ನು ಮಾತ್ರ ಮಿಂಚಿಸಲಿಲ್ಲ. ಶ್ರೀಶೈಲದ ಪುಣ್ಯ ಭೂಮಿಯಲ್ಲಿ ಅವಳನ್ನು ಮತ್ತೆ ಸಂಧಿಸಿ ಶಿವಾಂತರ್ಗತವಾಗುವುದೇ ಅನುಭಾವದ ಚರಮ ಗುರಿಯಲ್ಲ. ದೀನ ದಲಿತರ ದುಃಖ ಶಮನ, ನಡೆವಳಿಯ ಜಾಣು ಮತ್ತು ಶಿವತತ್ವದ ತಿಳಿವನ್ನು ಒದಗಿಸುವದು ಶಿವೋಪಾಸನೆಯಷ್ಟೇ ಏಕೆ, ಅದಕ್ಕಿಂತ ಘನವಾದುದು ಎಂಬ ಪ್ರಜ್ಞೆಯುಂಟು ಮಾಡಿ ಅವಳನ್ನು ಲೋಕ ಕಲ್ಯಾಣಕ್ಕೆ ತೊಡಗಿಸುತ್ತಾನೆ. ಇದು ಕವಿ ಕಲ್ಪಿಸಿಕೊಂಡ ಮಹತ್ತರ ತಿರುವು ಮಾತ್ರವಾಗಿರದೆ, ಈ ನಿಮಿತ್ತವಾಗಿ ಜೀವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಮರ್ಶೆ ನಡೆದು ಕಾವ್ಯದ ಸ್ವರೂಪವನ್ನೇ ಬದಲಿಸಿದೆ. ''ಭವ್ಯ ಮಾನವ'' ನ ಕನಸು ಕಾಣಿಸಿದೆ. ಗಿರಿಮಲ್ಲ ಕವಿಸ್ಪೃಷ್ಟಿಯ ಇನ್ನೊಂದು ಪಾತ್ರ. ಈತನು ಗುರು ಚೆನ್ನಮಲ್ಲಯ್ಯನ ಪರಮಶಿಷ್ಯ. ಆದರೆ ಇವನು ಜನಸಾಮಾನ್ಯರ ಪ್ರತಿನಿಧಿಯಂತಿದ್ದು ವ್ಯವಹಾರ ಧರ್ಮದ ಕುಂದು-ಕೊರತೆಗಳನ್ನು, ಒಡಕು-ತೊಡಕುಗಳನ್ನು ವ್ಯಂಜಿಸುವಲ್ಲಿ ಕಾವ್ಯಕ್ಕೆ ವಾಸ್ತವದ ನೆಲೆ ದೊರೆತು ಉಪಾದೇಯವಾಗಿದೆ. ಜ್ಞಾನ- ಭಕ್ತಿ- ಕ್ರಿಯಾಚರಣೆ ಸಾಧನದ ಗಾಯತ್ರಿಯಂತಿದ್ದು ''ಭವ್ಯಮಾನವ'' ದ ದಾರ್ಶನಿಕ ನಿಲವಿಗೆ ಪುಷ್ಟಿ ದೊರೆತು ಕಾವ್ಯ ವಸ್ತುವನ್ನು ಮೂರ್ತಗೊಳಿಸಿದೆ.

ಬ್ರಹ್ಮ ಇಲ್ಲವೆ ಶಿವಸಾಕ್ಷಾತ್ಕಾರವು ಅನುಭಾವಿಯ ಚರಮ ಗುರಿಯಲ್ಲ; ಅದೊಂದು ಸ್ಥಲ. ಆ ಸ್ಥಲದ ಆಚೆಗೆ, ತನ್ನ ಇರವಿನ ಅರಿವನ್ನು ಬಿಡದೆ, ಅದೇ ಈಶ್ವರಕೃತವಾದ ಈ ಪ್ರಪಂಚವನ್ನು ಶಿವಾತ್ಮಕಗೊಳಿಸಬೇಕೆಂಬ ಆಶಯ ಹೊಸತಲ್ಲ. ಇದನ್ನೇ ಪ್ರಾಚೀನರು ಪರಮಾರ್ಥವೆಂದರು. ಲೋಕಸಂಗ್ರಹ ಇದರ ಇನ್ನೊಂದು ಆವಿಷ್ಕಾರ. ಬುದ್ಧ, ಏಸು, ಶಂಕರ, ಬಸವ ಮೊದಲಾದವರು ಅಷ್ಟೇ ಏಕೆ- ಈ ಪ್ರಪಂಚದ ಯಾವುದೇ ಭಾಗದಲ್ಲಿ ಹುಟ್ಟಿ ಬೆಳೆದು ಬಂದ ಋಷಿ, ಮುನಿ, ಆಚಾರ್ಯ ಮೊದಲಾದ- ಪುರುಷರು, ಆಯಾ ಸನ್ನಿವೇಶ ಬದ್ಧರಾಗಿ ಈ ಕ್ರಿಯೆಯನ್ನು ನಡೆಸುತ್ತಲೇ ಬಂದಿದ್ದಾರೆ. ಇಂಥದನ್ನು ಭೂಸನೂರಮಠರು ನಿಕೃಷ್ಟವೆಂದು ಭಾವಿಸಿಲ್ಲ. ಆದರೆ 12 ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಶರಣರ ಕ್ರಾಂತದರ್ಶನ ಸಂಸ್ಕಾರಪಶದಿಂದ ತಮಗೆ ಅನುಗುಣವಾಗಿರುವ ನಿಮಿತ್ತ ಈ ತಾದಾತ್ಮ್ಯವು ಸಹಜವಾಗಿ ಒಗ್ಗಿಕೊಂಡು ಇದರ ಬೆಳಕಿನ ಮೂಲಕ ವಿಶ್ವಲೀಲಾವಿಲಾಸವನ್ನು ಚಿತ್ತರಿಸುವ ಪ್ರಥೆಯನ್ನು ಭಾವಬಂಧುರವಾದ ಬಗೆಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಇದರ ಆಂತರ್ಯದಲ್ಲಿ ಆನುಷಂಗಿಕ ಫಲವೊಂದುಂಟು. ಈ ಚಿಂತನದ ಉನ್ನತಿ ಮತ್ತು ಉದಾತ್ತತೆಗಳು ಸಕಲ ಮಾನವ್ಯಕ್ಕೆ ಅನುಬಂಧಿಸಿರುವ ಕಾರಣ ಪ್ರಪಂಚದ ಹರಹಿನಲ್ಲಿ ಈ ದರ್ಶನದ ಅನುಭೂತಿ ಸ್ವಾಯತ್ತವಷ್ಟೇ ಅಲ್ಲ; ಸರ್ವಂಕುಷ ಕಲ್ಯಾಣಕ್ಕೆ ಉಳಿದ ದರ್ಶನಗಳೊಡನೆ ಹೆಗಲಿಗೆಣೆಯಾಗಿ ನಿಲ್ಲಬಲ್ಲದು ಎಂಬ ಪ್ರತೀತಿಯುಂಟಾಗುವದು. ಕನ್ನಡವು ದೇವಭಾಷೆಯಲ್ಲ ಎನ್ನುವವರಿಗೆ ಇದೊಂದು ಸಮಂಜಸ ಉತ್ತರವೆನ್ನಬಹುದು. ಇದು ಜಾತಿ, ಮತ, ಕುಲ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಥ ದೇಶಕಾಲಾತೀತವಾದ ಬ್ರಹ್ಮದರ್ಶನದ ಅಭ್ಯುದಯದ ಹಾದಿಯಲ್ಲಿ, ರಾಗ- ದ್ವೇಷಪೀಡಿತವಾದ ಅಜ್ಞಾನವೆಂಬ ಕತ್ತಲೆಯ ರಾತ್ರಿಯಲ್ಲಿ, ಉರಿಃ ಪಂಜಿನಂತೆ ಬೆಳಕು ಚೆಲುವದಷ್ಟೇ ಅಲ್ಲ, ಕ್ಲೀಷೆಗಳನ್ನು ಹುರಿದು ಹಾಕುವ ಸಾಮರ್ಥ್ಯವುಳ್ಳದ್ದು ಎಂಬ ಬಲವಾದ ಪ್ರತಿಪಾದನ ಕಾವ್ಯದುದ್ದಕ್ಕೂ ತನಿಯಾಗಿ ಮಿಂಚಿದೆ. ಇದು ಬದುಕನ್ನು ನಿರಾಕರಿಸುವದಿಲ್ಲ. ಈ ಬದುಕಿನಲ್ಲಿ ಅಂತರ್ಗತವಾದ ದ್ವೈತಭಾವನೆಯನ್ನು ಮೆಚ್ಚಿ ನಿಲ್ಲಲು ಹವಣಿಸುವದು. ಅದ್ವೈತ, ಅದರಲ್ಲೂ ಶಿವಾದ್ವೈತ ''ಭವ್ಯಮಾನವ'' ನ ದರ್ಶನದ ಸಾರವಾಗಿದೆ.

ಕವಿ ಭೂಸನೂರಮಠರ ನಿಲವಿನ ಭಿತ್ತಿಯಂತೆ ಮಾನವ ಜೀವನದ ಕರಾಳ ಆಗು- ಹೋಗುಗಳ ಪರಾಮರ್ಶೆ ಈ ಕಾವ್ಯದ ಇನ್ನೊಂದು ಮುಖ. ವಿಶ್ವರೂಪಗೊಂಡ ಬಗೆಯಲ್ಲಿ ಮನುಷ್ಯ ಸೃಷ್ಟಿ ನಿಸರ್ಗದ ಪ್ರತಿಮ ನಿದರ್ಶನ. ಕೋಟಿಗಟ್ಟಲೇ ವರ್ಷಗಳ ಅಪ್ರತಿಹತ ಉತ್ಕ್ರಾಂತಿಯ ಫಲವಾಗಿ ಮನುಷ್ಯ ದೇವಭಾವದ ಜಾಗರಿಕ ಸ್ವಪ್ನದಂತಿದ್ದು ಶಿವಾನುಸಂಧಾನ ಆತನ ಏಕ ಮಾತ್ರ ಲಕ್ಷ್ಯವಾಗಬೇಕು. ಆದರೆ, ಅವನ ಪಾಶವೀ ಮುಖಕ್ಕೆ ನಿಲುಗಡೆಯಿಲ್ಲದಂತೆ ಸ್ವಾರ್ಥಮೂಲ ಪಿಪಾಶೆಗಳು ಪಿಶಾಚಿಯೋಪಾದಿಯಲ್ಲಿ ಅವನನ್ನು ಗ್ರಸ್ತಗೊಳಿಸಿ ಇತಿಹಾಸವು ರಕ್ತರಂಜಿತವಾಗಿದೆ. ಇದರಿಂದ ಬಿಡುಗಡೆಯಿಲ್ಲವೆ? ಭಾರತೀಯ ಪ್ರಣಾಲಿಯ ಗೀತೆ, ಉಪನಿಷತ್ತು, ಬುದ್ಧ- ಮಹಾವೀರರ ಜೀವನ ಬೋಧೆ ಶರಣರ ಸೂಳ್ನುಡಿಗಳು, ಅಷ್ಟೇ ಏಕೆ ಇದೇ ಯುಗದ ಪರಮಹಂಸ, ಗಾಂಧೀಜಿ, ಅರವಿಂದ ಘೋಷರಂಥ ಮೇಧಾವಿಗಳ ಬಾಳಸಂದೇಶ ಮಾನವನ ಮಾನವ್ಯವನ್ನು ಕಾಯ್ದುಕೊಳ್ಳಲು ನಿಲುಗಡೆಯನ್ನು ತಿಳಿಸುತ್ತದೆ. ಇದು ಭಾವಾವಿಷ್ಕಾರದ ಕಾರ್ಯ; ಇದು ಸುಸಂಗತವಾಗಿ ರೂಢಿಗೊಳ್ಳಬೇಕು; ಇದು ಆಗುತ್ತಿದೆಯೇ? ಮಾನವ ಬುದ್ಧಿ ಅಗಾಧ. ಅವನ ಶೋಧದಿಂದ ರೂಪಗೊಂಡ ಇಂದಿನ ವಿಜ್ಞಾನ ವಿಸ್ಮಯಕರವಾದ- ಅನುಕೂಲಗಳನ್ನು ಒದಗಿಸಿದೆ. ಆದರೆ ಇದೇ ವಿಜ್ಞಾನ ಪ್ರಚ್ಛನ್ನ ಶತೃವಿನಂತೆ ಸರ್ವನಾಶವೂ ಒತ್ತುಬಿರಡಿಯ ಅಧೀನವಾಗಿದ್ದು ಮರ್ಕಟಲೀಲೆ ತಾಂಡವವಾಡುವ ಸಾಧ್ಯತೆಯುಂಟು; ಅದರ ರುಚಿಯ ಬಿಸಿ ಇನ್ನೂ ಆರಿಲ್ಲ. ಈ ವಿಜ್ಞಾನ ಸಿದ್ಧಿಗಳನ್ನು ಚೆಲ್ಲಿ ಕೊಡಬೇಕೆ? ಇವನ್ನು ಸಾದುಗೊಳಿಸಿ ಮನುಷ್ಯನ ಅಂತಃಸ್ತರದ ವಿಕಾಸಕ್ಕೆ ಅನ್ವಯವಾಗುವಂತೆ ಬಳಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಳ್ಳಬಹುದೆ? ಈ ಪ್ರಶ್ನೆಯನ್ನು ಕವಿ ನೇರವಾಗಿ ಪ್ರಸ್ತುತಗೊಳಿಸಿಲ್ಲ. ಆದರ ಗುರುಚೆನ್ನಮಲ್ಲ- ಮಹಾದೇವಿಯಕ್ಕ- ಗಿರಿಮಲ್ಲರ ಸಂವಾದ ಕಲ್ಪನೆಯಲ್ಲಿ ಅಂತರ್ಗತಗೊಂಡಂತಿದ್ದು ಬದುಕಿನ ಅಭಿರಾಮತೆಗೆ ಇವು ಹೇಗೆ ತೊಡಕುಂಟು ಮಾಡುತ್ತಿವೆಯೆಂಬುದರ ಸುಳಿವುಂಟು. ಬೌದ್ಧಿಕ ಜಿಜ್ಞಾಸೆ ಮತ್ತು ಭಾವಿಕ ಸಂಪತ್ತಿನ ಸಮನ್ವಯ ಏರ್ಪಡಬೇಕು. ಅದು ಸಾಧ್ಯವೆ? ''ಭವ್ಯಮಾನವ''ದ ಕಟ್ಟಡ ಈ ಬಗೆಯದು ಇದರ ನಿರ್ವಹಣದಲ್ಲಿ ಕಾಲಕಾಲಕ್ಕೆ ಜರುಗಿದ ಪ್ರಪಂಚದ ಮಹಾನುಭಾವರ, ವಿಚಾರವಂತರ ಆಲೋಚನೆಯ ಹದ, ಮರುಗುಗೊಂಡು ಕವಿಪ್ರತಿಭೆಯ ಕುಂಚ ಬಣ್ಣಗಾಣಿಸಿದೆ. ಇಲ್ಲೆಲ್ಲ ವ್ಯುತ್ಪತ್ತಿ ಪ್ರತಿಭೆಗಳ ಅನ್ಯೋನ್ಯತೆ ಒಡಮೂಡಿ ಕಾವ್ಯದ ಎತ್ತರ- ಬಿತ್ತರಗಳು ಸಕೃದ್ದರ್ಶನದ ಅನುಭೂತಿಯನ್ನು ಅರಳಿಸುವದು. ಕಾವ್ಯದ ಅಳತೆಗೋಲು ಇದನ್ನು ಅಸಡ್ಡೆ ಮಾಡದೆ, ವಿಮರ್ಶೆ ತನಿಗೊಳ್ಳಬೇಕು. ಈ ಕ್ಷಣದ ಭೂಮಿಕೆಗೆ ಇದು ದೊಡ್ಡ ತುತ್ತು. ಆ ಕಾರಣ ಅಂಥವರ ಗೊಡವೆಗೆ ಹೋಗದೆ, ಇನ್ನೆರಡು ಅಂಶಗಳನ್ನು ದಿಕ್ಸೂಚಿಯಾಗಿ ಈ ಸಂದರ್ಭದಲ್ಲಿ ಗಮನಿಸೋಣ.

ಕಾವ್ಯತಂತ್ರದ ಆಕೃತಿಯ ಪರಿಯೋಜನೆಯಲ್ಲಿ ''ಕನ್ನಡ ಕಾವ್ಯ ಸಂಪ್ರದಾಯವನ್ನು ಗಮನಿಸದೆ ಪುರಾತನ ಕವಿಗಳನ್ನು ಸ್ಮರಿಸದ ಈ ಕವಿ ಸಮಗ್ರ ಕಾವ್ಯದಲ್ಲಿ ಎಲ್ಲಿಯೂ ತಮ್ಮ ಹೆಸರನ್ನೇ ಎತ್ತಿಕೊಂಡಿಲ್ಲ'' ವೆಂದು ಪ್ರಕಾಶಕರು ತಿಳಿಸಿದ್ದಾರೆ. ಇದು ಕೃತಿಯ ಅಪೌರುಷೇಯದ ಸಂಕೇತವಿರಬಹುದು ಎಂದು ಅವರ ಸೂಚನೆ. 'ಪೌರುಷೇಯ' ವೆಂಬ ಮಾತು ಆಧುನಿಕ ಪ್ರಣಾಲಿಯದಲ್ಲ. ಪುರುಷ ಸ್ವರೂಪೀ ಶಿವನ ನೆಲೆಯಿಂದ ಈ ಕಾವ್ಯದ ಉಗಮವಾಗಿದೆಯೆಂದು ನಾವು ಸಮನ್ವಯಿಸಿ ಹೇಳಬಹುದು. ಪರಶಿವ, ಸರಸ್ವತಿ ಮುಂತಾದ ಅಧಿದೇವತೆಗಳ ಪ್ರೇರಣೆಯನ್ನು ಬಯಸುವುದರೊಂದಿಗೆ ಅನುಭಾವೀ ಶರಣರಿಗೂ ನಾಂದಿಯಲ್ಲಿ ವಂದನೆಯುಂಟು. ಕಾವ್ಯದಲ್ಲಿಯೆ ಕವಿ ತನ್ನ ಕುರಿತು ಪ್ರಸ್ತಾಪಿಸುವದು ಒಂದು ಪರಿಪಾಠ. ಕಾಲಿದಾಸಾದಿಗಳ ಕೃತಿಗಳಲ್ಲಿ ಇಂಥದ್ದು ಇಲ್ಲವಲ್ಲ! ಇದು ಕೂಡ ಔಪಚಾರಿಕವಾದ ಅಂಶವೇ ಹೊರತು ಕೃತಿಯ ಒಡಲಿನಲ್ಲಿ ಸೇರಬೇಕಾದ ಸಂಗತಿಯಾಗಬೇಕಿಲ್ಲ. ಒಮ್ಮೊಮ್ಮೆ ಓದುಗನಿಗೆ ಕವಿ ತನ್ನ ಮನೋಭಾವವನ್ನು ದಿಕ್ಸೂಚಿಯಾಗಿ ತಿಳಿಸುವಲ್ಲಿ ಅರ್ಥಗ್ರಹಣಕ್ಕೆ, ಸೌಕರ್ಯವೊದಗುವುದು. ಈ ಕಾರ್ಯವನ್ನು ''ಮಾನವನೊಳಗೆ ಪ್ರವೇಶ- ನಿಮ್ಮೊಡನೆ'' ಎಂಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸ್ತಾವನೆಯಲ್ಲಿ ಸಮರ್ಥವಾಗಿ ಜರುಗಿಸಿದ್ದಾರೆ. ಕಾಂಡಗಳ ಯೋಜನೆ ಕಾವ್ಯದ ಅಖಂಡ ಬೆಸುಗೆಯನ್ನು ಸೂತ್ರೀಕರಿಸಿದೆ. ಮಾತಿನ ಮೇಳ ಶರಣರ ವಚನಗಳ ಆವಿಷ್ಕಾರ ಹೊತ್ತು ಅನುಭಾವದ ಶ್ರುತಿ ಮಿಡಿಯುವುದು. ಸಂವಾದ ಪ್ರಕ್ರಿಯೆಯೂ ಪರಂಪರೆಯಿಂದ ಹೊರತಾದದ್ದಲ್ಲ. ಶೂನ್ಯ ಸಂಪಾದನೆಯ ಕುರಿತು ಪ್ರಾ. ಭೂಸನೂರಮಠರು ಮಹತ್ತರವಾದ ಕಾರ್ಯ ಮಾಡಿದ್ದಾರೆಂಬುದನ್ನು ನಾವೆಲ್ಲ ಬಲ್ಲೆವು. ಅಲ್ಲಿಯ ಸಂವಾದ ಸಿದ್ಧಿಯನ್ನು ''ಭವ್ಯಮಾನವ'' ಕಾವ್ಯದಲ್ಲಿ ಕಥಾನಕದ ಒಡಲಿನಲ್ಲಿ ಬಳಸಿಕೊಂಡುದು, ಈ ಬಳಕೆ- ಸಪ್ರಯೋಜಕವಾಗಿ ಕಾವ್ಯದ ಸ್ವರೂಪವನ್ನು ನಿರ್ಣಯಿಸಿರುವದು ಹೊಸತು. ಅಧ್ಯಾತ್ಮ- ಕಾವ್ಯದ ಹೂರಣವಾಗಿ ಕ್ರಿಯಾವೈಶಿಷ್ಟ್ಯಗೊಂಡುದು ''ಭವ್ಯಮಾನವ'' ದ ಅಭಿವ್ಯಕ್ತಿಯ ತಳಿರುತೋರಣವಾಗಿದೆ.

ಭಾಷೆ ಮತ್ತು ಛಂದೋಬಂಧದ ಕುರಿತು ಕವಿ ವ್ಯಾಕರಣ, ಗಣನಿಯಮಗಳ ಸೂತ್ರಗಳು ನಿಷ್ಕೃಷ್ಟವಾಗಿ ನೆರವೇರಿಲ್ಲವೆಂದು ಮುಜುಗರಪಟ್ಟಿದ್ದಾರೆ. ಈ ಅನಿಸಿಕೆ ಪ್ರಾಧ್ಯಾಪಕರಿಗೆ ಸಹಜವೇ ಎನ್ನೋಣ. ಆದರೆ ಕಾವ್ಯದ ನಿರರ್ಗಳ ಓಟದಲ್ಲಿ ಸಹಜ ಬಂಧುರತೆಯಿದೆ. ನಾಟ್ಯಾಲಯಕ್ಕನು- ಗುಣವಾಗಿ ಮಾತಿನ ಪಯಣಿಕೆಯಿದ್ದು ಕಾವ್ಯದ ಸಸಂಮುಖತೆಯನ್ನು ಪರಿಣಾಮರಮಣೀಯವಾಗಿ ಸಾಧಿಸಿದೆ. ಚಿತ್- ಪ್ರಕಾಶಕ್ಕೆ ಅಡ್ಡಗೋಡೆಗಳೇಕೆ? ಆ ಪ್ರವಾಹವನ್ನನುಸರಿಸಿ, ನಿಯಮಗಳ ವ್ಯಾಖ್ಯೆ ಮಾಡುವದು ಶಾಸ್ತ್ರದ ಕೆಲಸ. ಇಲ್ಲಿರುವದು ಕವಿ ಭೂಸನೂರಮಠರ ಪ್ರತಿಭಾವಿಲಾಸದ ಉದ್ಬುದ್ಧ ಗಂಗಾತರಂಗದ ಲೀಲಾವಿನ್ಯಾಸ. ಇದು ದೇವಗಂಗೆ; ಇದರ ಮಣಹಕ್ಕೆ ನಾವು ಬಾಗೋಣ.

ಮಹಾದೇವಿಯಕ್ಕನ ಅನುಭಾವದ ಕೆಚ್ಚು ಭಕ್ತಿಯ ಭಾವಪಾರಮ್ಯದಲ್ಲಿ ಆವಶವಾಗುವ ಇಲ್ಲವೆ ಅನುಸೃಷ್ಟಿಗೊಳ್ಳುವ ನಿದರ್ಶನದಿಂದ ಈ ಬರಹಕ್ಕೆ ಮಂಗಳ ಹಾಡುವುದು ಉಚಿತವಾದುದು. ಈ ಆರ್ಯೆ ಶಿವಭಾರ್ಯೆಗೆ ಸಲ್ಲಿಸುವ ಬಿನ್ನಹ.

ಶಿವ ಶಿವಾ! ಶಿವ ಶಿವಾ'
ಪರಮಭಾಗ್ಯವೆ ಬಂದು ನಿಂದಿಹುದು ಮುಂದೆ,
ಕಾಲಕಾಲಾಂತರದ ಪುಣ್ಯದ ಮಹಾರಾಶಿ
ಬೆಳಗುವೀ ರೂಪಾಗಿ ತೊಳ ತೊಳಗಿ ಹೊಳೆದಿಹುದು,
ಮರೆಹೊಕ್ಕೆ ಮರೆಹೊಕ್ಕೆನೆಲೆ ತಾಯ ಎಳೆ ತವರೆ
ಶರಣು ಬಂದೆನು ಜಗನ್ಮಾತೆ- ಪರಶಿವನರಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವನ ಪರಶಕ್ತಿ ನಿನ್ನಡಿಗೆ ಬಿದ್ದಿಹೆನು
ಕಾಯುವದು ಕೊಲ್ಲುವದು ನಿನ್ನಧರ್ಮ
ನಿಮಗೆನ್ನನೊಪ್ಪಿಸಿಹೆ ಸರ್ವಮಂಗಲೆಯೆ.
ಸೆರಗೊಡ್ಡಿ ಬೇಡುವೆನು ಉಡಿಯೊಡ್ಡಿ ಬೇಡುವೆನು
ಎನ್ನಾಣೆ ಎರಡಿಲ್ಲ ಒಂದನೇ ಬೇಡುವೆನು
ಅದೊ ಕೇಳು ತಾಯೆ ಕುಹೂಕುಹೂ-
ಸರವೆತ್ತಿ ಪಾಡುವೀ ಪಿಕದಾಣೆ ಶಿವನಾಣೆ
ಮೌನದೊಳು ನಿಂದಿರುವ ಪರ್ವತಯ್ಯನೆ ಸಾಕ್ಷಿ.
ಬನದೊಳಗೆ ಸುಳಿದಾಡಿ ನಿಬ್ಬೆರಗಿನೊಳಗಿಲ್ಲಿ
ನಿಂದಿರುವ ತೆಂಗಾಳಿ ತಣ್ಣೆಲರೆ ಸಾಕ್ಷಿ.
ಒಂದ ಬೇಡುವೆ ತಾಯೆ ಲೋಕ ಮಾತೆ-
ನಿನ್ನಂತೆ - ನಿನ್ನಂತೆ- ಎಲೆ ಪರಾಶಕ್ತಿಯೆ
ನಿನ್ನಂತೆ ನಿನ್ನಂತೆ ಜಗದಾದಿ ಶಕ್ತಿಯೆ
ಎಲೆಲೆ ಚಿದ್‌ಬೆಳಗೆ ಚಿಚ್ಛೈತನ್ಯಶಕ್ತಿಯೆ
ಆಕಾಶವಿತ್ತಿತ್ತ ಮಣಿ ಮುಕುಟವತ್ತತ್ತ
ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ
ಎಲ್ಲ ಎಲ್ಲರನಪ್ಪಿ ಅತ್ತತ್ತ ಅತ್ತಾಚೆ,
ಒಳಗಲ್ಲ ಹೊರಗಲ್ಲ ಮಿಗೆ ಮೀರಿ ನಿಂದಿರುವ
ಮಿಗೆ ಮೀರಿ ಬೆಳಗಿರುವ ಬಯಲೆಲ್ಲ ಬೆಳಗಿರುವ
ಬಯಲಿಂಗೆ ಮರೆಯೊಡ್ಡಿ ಬಯಲಾಚೆ ಬೆಳಗಿರುವ
ಶ್ರೀ ಮನ್ನಿರಂಜನ ಪರಂಜ್ಯೋತಿ ಚೆನ್ನನ
ಶ್ರೀಗಿರಿಯ ಶ್ರೀಚೆನ್ನಮಲ್ಲಿಕಾರ್ಜುನನಪ್ಪಿ
ಎಂದಿಗೂ ಎಂದಿಗೂ ಎಂದೆಂದಿಗೂ ಅಪ್ಪಿ
ಅಗಲದಂತಿರುವ ಸಮರತಿಯ ಸಮರಸದ
ಪರಮ ಪರಮಾನಂದದೊಳು ಅಪ್ಪಿ ಅಗಲದಿಹ
ನಿನ್ನಂತೆ ನಿನ್ನಂತೆ ಸೌಭಾಗ್ಯವತಿಯಾಗಿ
ಸರ್ವಾಂಗ ಸರ್ವಾಂಗ ಚೆನ್ನನಾಲಿಂಗನಕೆ
ಕರಗಿ ನಾನೆಂಬುದಕೆ ಎರಡಿಲ್ಲದೆ ಕರಗಿ
ಎನ್ನ ನಿರ್ಭರರತಿಯ ತಕ್ಕೆಯೊಳಗವ ಸಿಲುಕಿ
ಕರಗಿ ನೀರಾಗಿ ಇರ್ದಿಹೆವು ಒಂದಾಗಿ
ಇರುವಂತೆ ಒಂದಾಗಿ ಇರುವಂತೆ ಮಾಡವ್ವ!

ಅಕ್ಕನ ವಚನಗಳ ತನಿಬೆಳಗು, ಹರಿಹರ ಮಹಾಕವಿಯ ಕಾವ್ಯ ಶಿಖರದ ಬೆಡಗು, ಸ್ವಯಂ- ಕವಿಯ ಉತ್‌ಸ್ಫೂರ್ತ ಭಾವದ ಮೆರಗು, ಏಕತಾನವಾಗಿ ಮಿಡಿಯುವ ಈ ಕಾವ್ಯಶಿಲ್ಪದಲ್ಲಿ, ಉಕ್ತಿಗಳ ಶ್ರೇಣಿ ಅನಿವಾರ್ಯವಾದ ಅನುಭೂತಿಯನ್ನು ಮೂರ್ತಗೊಳಿಸುವಲ್ಲಿ ತಂತಾನೆ ಒಡಮೂಡಿ ನಿಲ್ಲುವದು. ಇದು ಕಡಿಮೆ ಸಿದ್ಧಿಯಲ್ಲ. ಈ ಶಿವಕವಿಗೆ ನಮೋ ನಮಃ!! ಶಿವಾತ್ಮಕರಾದ ನಿಮಗೂ ನಮಸ್ಕಾರ ಓಂ ಸ್ವಸ್ತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' ಕಾವ್ಯಕ್ಕೆ ಪ್ರೇರಣೆ ಹಾಗೂ ಪ್ರಭಾವಗಳು

ಬಿ. ಸಿ. ಜವಳಿ

ಒಂದು ಗ್ರಂಥದ ಶ್ರೇಷ್ಠತೆಯನ್ನು ಎತ್ತಿ ತೋರಿಸಲು ಇರುವ ಮಾನದಂಡಗಳು ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತ ಬಂದರೂ ಎಲ್ಲ ಕಾಲಕ್ಕೂ ಅನ್ವಯಿಸುವ ಕೆಲವು ಅಂಶಗಳಾದರೂ ಇರುತ್ತವೆ. ಅವುಗಳಲ್ಲಿ ಕೆಲವೊಂದನ್ನು ಓದುಗರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ಬಾಳಿನ ಸುಖ-ದುಃಖಗಳ ಸಮಗ್ರ ವಿವೇಚನೆ; ಬದುಕಿನ ನಯ- ನಾಜೂಕುಗಳ ಕಲ್ಪನೆ; ಲೌಕಿಕ-ಪಾರಮಾರ್ಥಿಕ ಜೀವನದ ಪರಸ್ಪರಾವಲಂಬನ ಭಾಷೆಯ ಸಜೀವತೆ; ಅಪಾರ ಜ್ಞಾನ, ಪ್ರಾಚೀನ ಹಾಗೂ ಭವ್ಯ ಪರಂಪರೆಯ ಪರಿಕಲ್ಪನೆ; ವ್ಯಕ್ತಿಗಳು ಸನ್ಮಾರ್ಗದತ್ತ ನಡೆಯುವಂತೆ ನೀಡುವ ಪ್ರೇರಣೆ; ಮೌಲ್ಯಗಳ ಬಗೆಗೆ ನೀಡುವ ದರ್ಶನ; ವ್ಯಕ್ತಿ ಹಾಗೂ ಸಾಮೂಹಿಕ ಹಿತ; ಮಾನವತೆ, ವಿಶ್ವಮಾನವತೆ- ಇವುಗಳ ಬಗೆಗೆ ನೀಡುವ ಮಾಹಿತಿ- ಇಂತಹ ಗುಣಗಳಿಂದ ಕಾವ್ಯಕ್ಕೆ ಚಿರಂತನತೆ ಹಾಗೂ ಶ್ರೇಷ್ಠತೆ ಒದಗುತ್ತದೆ. ಈ ಹಿನ್ನೆಲೆಯಲ್ಲಿ ''ಭವ್ಯಮಾನವ'' ಕಲಾಕೃತಿಯ ವಿಶ್ಲೇಷಣೆಯು ಈ ಕೆಳಗಿನಂತಿದೆ.

ಎರಡನೆಯದಾಗಿ 'ಮಹಾಕಾವ್ಯ'ದ ಬಗೆಗೆ ಬಂದ ಅಭಿಪ್ರಾಯಗಳನ್ನು ನೋಡಿದರೆ ಅಲ್ಲಿಯೂ ಭಿನ್ನಾಭಿಪ್ರಾಯಕ್ಕೆ ಎಡೆ ಇದೆ. ಮಹಾಕಾವ್ಯ, ಮಹಾಕವಿ ಇವರ ಬಗೆಗೂ ಕಾವ್ಯ ಮೀಮಾಂಸೆಯಲ್ಲಿ ಕಾಲಕಾಲಕ್ಕೆ ಚರ್ಚೆಯಾಗುತ್ತಲೇ ಬಂದಿದೆ. ಹೀಗೆಯೇ ಎಂದು ನಿರ್ಣಯಿಸುವುದು ದುಸ್ತರ. ಆದರೂ ಮಹಾಕಾವ್ಯದ ಬಗೆಗೆ ವಿದ್ವಾಂಸರಲ್ಲಿರುವ ನಿಲವನ್ನು ಕುರಿತು ಹೀಗೆ ಹೇಳಬಹುದು; ಚಿರಂತನ ವಸ್ತು, ರಾಷ್ಟ್ರೀಯ ವ್ಯಾಪ್ತಿ, ವಿಸ್ಮಯಕಾರಿ ಕಾವ್ಯದ ರೀತಿ, ದಂಗುಬಡಿಸುವ ಕಾವ್ಯದ ಹರಹು - ಇವೆಲ್ಲ ಮಹಾಕಾವ್ಯದಲ್ಲಿ ಕಾಣಬೇಕು; ಸರ್ಗಗಳು ಇರಬೇಕು; ಪುರುಷಾರ್ಥಸಾಧನೆಗಳ ತಿಳುವಳಿಕೆ ಮೂಡಿಸಬೇಕು; ಸಮಕಾಲೀನ ಪ್ರಜ್ಞೆ ಇರಬೇಕು; ನಾನಾವರ್ಣನೆ, ಸಾಲಂಕೃತ ಭಾಷೆ, ನಾನಾರಸಗಳ ನಿರೂಪಣೆ- ಇದ್ದರೆ ಅದನ್ನು ಮಹಾ ಕಾವ್ಯದ ಚೌಕಟ್ಟಿನಲ್ಲಿ ಸೇರಿಸಬಹುದು. ಕಾವ್ಯದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವ ಭಾಗವನ್ನು ಸ್ಪರ್ಶಿಸಿದರೂ ಅದು ನಮ್ಮ ಅನುಭವಗಳಿಗೆ ಸ್ಪಂದಿಸುವಂತಿರಬೇಕು- ಹೀಗಿದ್ದರೆ ಅದನ್ನು ಮಹಾಕಾವ್ಯದ ಪರಿಮಿತಿಯಲ್ಲಿ ಸ್ವೀಕರಿಸಬೇಕಾಗುತ್ತದೆ. 'ಭವ್ಯ ಮಾನವ' ಕೃತಿಯ ಗರ್ಭಕ್ಕೆ ಪ್ರವೇಶಮಾಡಿದವರಿಗೆ ಈ ಭಾವನೆಗಳು ಬರುತ್ತವೆಯೋ ಇಲ್ಲವೋ ಎಂಬುದನ್ನು ನೋಡುವುದೂ ಈ ಪುಟ್ಟ ಲೇಖನದ ಗುರಿಯಾಗಿದೆ.

ಯಾವುದೇ ಕಾಲದಲ್ಲಾಗಲಿ ಒಂದು ಮಹಾಕಾವ್ಯ ಬಂದಾಗ, ಓದುಗರಲ್ಲಿ ಮಿಶ್ರಪ್ರತಿಕ್ರಿಯೆಗಳು ಬರುವುದು ಸ್ವಾಭಾವಿಕ. ಅದೇ ರೀತಿಯಲ್ಲಿ ಪ್ರೊ. ಸಂ. ಶಿ. ಭೂಸನೂರಮಠ ಅವರ ''ಭವ್ಯಮಾನವ'' ಕೃತಿಯ ಬಗೆಗೂ ಬಂದಿದ್ದರೆ ನಾವು ಅಚ್ಚರಿಪಡಬೇಕಾಗಿಲ್ಲ. ಕವಿ ಕಣ್ಮರೆಯಾದರೂ ಕೃತಿ ಉಳಿಯುತ್ತದೆ. ಕಾಲವೇ ನಿರ್ಣಯಿಸುತ್ತದೆ- ಕೃತಿಯ ಶ್ರೇಷ್ಠತೆಯನ್ನು, ಈ ಕೃತಿಯ ಬಗೆಗೆ ಕೃತಿಕಾರರೇ ಒಂದೆಡೆಗೆ ಹೀಗೆ ಬರೆದಿದ್ದಾರೆ; ''ಭವ್ಯಮಾನವನನ್ನು ಓದಿದ ಮತ್ತು ಓದುತ್ತಿರುವ ಹಲಕೆಲವು ಸಹೃದಯ ವಿಮರ್ಶಕ ಮಿತ್ರರು, ಅದನ್ನು ಮೆಚ್ಚಿದ್ದಾರೆ; ಅತಿಯಾಗಿ ಪ್ರಶಂಸೆ ಮಾಡಿದ್ದಾರೆ; ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲ, ಜಾಗತಿಕ ಸಾಹಿತ್ಯದ ಶ್ರೇಷ್ಠ ಮಹಾಕಾವ್ಯಗಳ ಪಂಕ್ತಿಯಲ್ಲಿ ಇದಕ್ಕೊಂದು ವಿಶಿಷ್ಟ- ಉನ್ನತ ಸ್ಥಾನವಿದೆ'' ಎಂದು ಹೇಳುವ ಮಟ್ಟದಲ್ಲಿದ್ದಾರೆ. ಇನ್ನು ಕೆಲವರು ''ಇದೇನು ಮಹಾ, ಎಂದು ಓದದೇ ತಮ್ಮ ನಿರ್ಣಯವನ್ನು ಸಾರುವ ಗಣ್ಯಮಿತ್ರರೂ ಇದ್ದಾರೆ'' ('ಗೌರವ' - ಸಂ. ಶಿ. ಭೂಸನೂರಮಠ ಅವರ ಅಭಿನಂದನ ಗ್ರಂಥ- ಪುಟ-51 (1989) ಯಾರು ಏನೇ ಹೇಳಿದರೂ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಪ್ರೊ. ಸಂ. ಶಿ. ಭೂಸನೂರಮಠ ಅವರ ಕೃತಿ 'ಮಹಾಕಾವ್ಯಗಳಲ್ಲೊಂದು' ಎಂದು ಉಲ್ಲೇಖ ಪಡೆಯದೆ ಇರಲು ಸಾಧ್ಯವೇ ಇಲ್ಲ. ಬಿಡಿ ಕವಿತೆಗಳ ಈ ಯುಗದಲ್ಲೂ (ಕಾಲದಲ್ಲೂ) ಮಹಾಕಾವ್ಯಗಳಿಗೆ ಬೇಡಿಕೆ ಇದೆ ಎಂಬುದನ್ನು ಸಾವರಿಯದೇ ಇರಲಾರೆವು.

(2)

ಕನ್ನಡ ಕಾವ್ಯಪರಂಪರೆಯಲ್ಲೂ ವೈವಿಧ್ಯತೆಯಿದೆ. ಪಂಪ, ಕುಮಾರವ್ಯಾಸ, ಪುರಂದರದಾಸ, ರತ್ನಾಕರ, ಹರಿಹರ, ರಾಘವಾಂಕ, ಷಡಕ್ಷರದೇವ, ನಿಜಗುಣಶಿವಯೋಗಿ, ಸರ್ವಜ್ಞ; ಬಸವಣ್ಣ ಅಲ್ಲಮಪ್ರಭು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದೇವಿಯಕ್ಕ, ತೋಂಟದ ಸಿದ್ಧಲಿಂಗಯತಿ, ಕುವೆಂಪು, ಬೇಂದ್ರೆ, ಗೋಕಾಕ, ಅಡಿಗ, ಸಂ. ಶಿ. ಭೂಸನೂರಮಠ, ಕಾರಂತ, ಅನಕೃ, ಬಸವರಾಜ ಕಟ್ಟೀಮನಿ, ಕೈಲಾಸಂ, ಶ್ರೀರಂಗ, ಮಾಸ್ತಿ, ಗೋರೂರು- ಈ ಎಲ್ಲರ ಕೃತಿಯಲ್ಲೂ ಸಾಹಿತ್ಯಿಕ ಸ್ವರೂಪ, ಧೋರಣೆ ಭಿನ್ನವಿರುತ್ತವೆ. ಎಂದ ಮೇಲೆ ಯಾವುದೇ ಕಾವ್ಯಕ್ಕೆ ಕೆಲವೇ ಮಾನದಂಡಗಳನ್ನು ಅನ್ವಯಿಸುವುದು ಹೇಗೆ? ಸಾಹಿತ್ಯ ವಿಮರ್ಶೆಯಲ್ಲೂ ಯಾವ ಕಾಲಕ್ಕೂ ಒಂದೇ ದೃಷ್ಟಿ ಇಲ್ಲ. ರಸತತ್ವದ ಹಿನ್ನೆಲೆಯಲ್ಲಿ ಕಾವ್ಯದಲ್ಲಿ ಆನಂದ, ಕಾಂತಾಸಮ್ಮಿತಿಗೆ ಪ್ರಾಮುಖ್ಯತೆ ಇದ್ದರೆ, ಸಾಮಾಜಿಕ ಮೌಲ್ಯಪ್ರತಿಪಾದನೆಯ ಹಿನ್ನೆಲೆಯಲ್ಲಿ ರಾಜಕೀಯ ಸಿದ್ಧಾಂತ ಪ್ರತಿಪಾದನೆ, ಆರ್ಥಿಕ ಸ್ವರೂಪ, ಧಾರ್ಮಿಕ ಹಿನ್ನೆಲೆಯಲ್ಲಿ ಭಗವಂತನ ಸಾಕ್ಷಾತ್ಕಾರ, ಶಾಂತಿಸ್ಥಿತಿ ನಿರೂಪಣೆ, ಪಾಪ-ಪುಣ್ಯಗಳ ಪ್ರತಿಪಾದನೆ- ಇತ್ಯಾದಿ ಮೌಲ್ಯಗಳತ್ತ ಲಕ್ಷ್ಯವೀಯಬೇಕಾಗುತ್ತದೆ. ಸಂಗೀತಪ್ರಧಾನ ಕೃತಿಯಲ್ಲಿ ಸಾಹಿತ್ಯದ ಅಂಶಗಳನ್ನು, ಸಾಹಿತ್ಯಪ್ರಧಾನ ಕೃತಿಗಳಲ್ಲಿ ಸಂಗೀತದ ಅಂಶಗಳನ್ನು ಒತ್ತುಕೊಟ್ಟು ನೋಡುವುದು ಸಮಂಜಸವೆನಿಸಲಾರದು. ಹಾಗೆಯೇ ''ಭವ್ಯಮಾನವ'' ಕೃತಿಯನ್ನು ತಾತ್ವಿಕ ಕಾವ್ಯಗಳ ಹಿನ್ನೆಲೆಯಲ್ಲಿ ಪರೀಕ್ಷಿಸಬೇಕಾಗುತ್ತದೆ; ಮೌಲ್ಯಮಾಪನ ಮಾಡಬೇಕಾಗುತ್ತದೆ.

ಆತ್ಮವನ್ನು ಅಧಿಕ ಮಾಡಿ ನಡೆವ, ನುಡಿವ- ಅನುಭಾವ, ಹೆಚ್ಚು ತೀವ್ರ ಹಾಗೂ ತೀಕ್ಷ್ಣ; ವಿಶಾಲ, ಗಂಭೀರ, ಉನ್ನತೋನ್ನತ; ತನ್ನೊಳಗೆ ಸುಳಿದು, ಹೊಳೆದಾಡಿ, ತನ್ನ ಲೌಕಿಕ, ಧಾರ್ಮಿಕ, ಆಧಿಭೌತಿಕ, ಆಧಿದೈವಿಕದಲ್ಲಿ ಮುಳುಗಿರುವ ತನ್ನನ್ನು, ಮೀರಿದ ವಿಶಾಲಕ್ಕೆತ್ತಿ, ತನ್ನಾಳದ ಗಂಭೀರಕ್ಕಿಳಿಸಿಕೊಡಬಲ್ಲ ವಿಷಯವೇ ಆಧ್ಯಾತ್ಮ. ಅಂತಹ ಆಧ್ಯಾತ್ಮ ಜೀವಿ; ಅನುಭಾವಿ- ಅಕ್ಕಮಹಾದೇವಿಯ ಜೀವನ ದರ್ಶನವನ್ನು ಕಾವ್ಯದಲ್ಲಿ ಪಡಿಮೂಡಿಸಬೇಕೆಂಬ ಹಂಬಲದಿಂದ ಹೊರಹೊಮ್ಮಿದ ''ಭವ್ಯಮಾನವ'' ಮಹಾಕಾವ್ಯ.

'ಈ ಕೃತಿಗೆ ಮಹಾದೇವಿಯಕ್ಕನೇ ಮೂಲ ಪೀಠಿಕೆ' ಯೆಂದು ಕೃತಿಕಾರರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. (ಭವ್ಯಮಾನವ- ಪ್ರಸ್ತಾವನೆ- ಪುಟ- 22) ಕವಿ ಪ್ರೊ. ಸಂ. ಶಿ. ಭೂಸನೂರಮಠ ಅವರು ಶರಣ ಸಾಹಿತ್ಯ, ಶರಣ ಧರ್ಮದ ಮರ್ಮವನ್ನು ಅರಿತು ಅರಗಿಸಿಕೊಂಡವರಷ್ಟೇ ಅಲ್ಲದೆ, ''ಜಗತ್ತಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೋಟಿಕಾಲದ ಸಂಸ್ಕಾರ ನನ್ನಲ್ಲಿ ಹರಿದುಬಂದಿದೆ. ಬರುತ್ತಿದೆ'' ಎಂದು ಕವಿ ಹೇಳಿರುವ ಮಾತಿನ ('ಗ್ಔರವ'- ಪುಟ- 57) ಅನುಭವ ನಮಗೂ ಆಗುತ್ತದೆ ಈ ಮಹಾಕಾವ್ಯ ಓದುತ್ತಿದ್ದಾಗ. ಕಾವ್ಯಕ್ಕೆ ಅಕ್ಕಮಹಾದೇವಿ ನಿಮಿತ್ತ ಮಾತ್ರ ಕಥಾವಸ್ತು; ಆದರೆ ಕಾವ್ಯ ಪ್ರತಿಪಾದಿಸುವುದು 'ಮಾನವ ಕುಲದ ಮಹಾತ್ಮೆ'ಯನ್ನು. ಮಾನವ ಕುಲದ ಸಾವಿರ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ ಈ ಕಾವ್ಯ. ಅಜ್ಞಾನದಿಂದ ಸುಜ್ಞಾನದತ್ತ ಕರೆದೊಯ್ಯಬಲ್ಲ ಕೈದೀವಿಗೆಯಾಗಿ ಕೆಲಸ ಮಾಡುತ್ತದೆ ಈ 'ಭವ್ಯಮಾನವಕೃತಿ'. ಕವಿಗೆ ಮಾನವನನ್ನು ಉನ್ನತ ಆದರ್ಶಗಳತ್ತ, ಉನ್ನತ ಹಾಗೂ ಧೀಮಂತ ಸಂಸ್ಕೃತಿಯತ್ತ ಕೊಂಡೊಯ್ಯುವ ಬಲವಾದ ಸದಿಚ್ಛೆ, ಈ ಕಾವ್ಯಕ್ಕೆ ಪ್ರೇರಕವಾಗಿದೆ. ಮಾನವತ್ವದ ಉಳಿವಿಗೆ ಸಾಹಿತ್ಯವೊಂದು ಮಹತ್ವದ ಸಾಧನೆಯೆಂದು ತಿಳಿದ ಸಂ. ಶಿ. ಭೂಸನೂರಮಠ ಅವರು, ''ಭವ್ಯವ ಸಾಧಿಸಿದ ಮಾನವನೇ ಭವ್ಯ'' ಎಂಬ ಭಾವನೆಯಿಂದೊಡಗೂಡಿ, ಅಂತಹ ವ್ಯಕ್ತಿಗಳನ್ನೆಲ್ಲ ಮೂಲಕಥೆಯೊಡನೆ ಹೆಣೆದು ಸರಳಗೊಳಿಸಿದ್ದಾರೆ. ಇಂತಹ 'ಭವ್ಯಮಾನವ'ನೇ ಈ ಕಾವ್ಯದ ಮುಖ್ಯವ್ಯಕ್ತಿ. (ಭವ್ಯಮಾನವ- 58-) ಮಲಗಿದ ಮಾನವನ ವಿಷಯ ಸಂಸಾರ, ಹಗಲುಗತ್ತಲೆಯ ದ್ವೈತ ಪ್ರಪಂಚ, ಎಚ್ಚತ್ತ ಮಾನವನ ಲಿಂಗಗಂಭೀರದ ಬ್ರಹ್ಮವಿಸ್ತಾರ- ಇವು ಈ ಕಾವ್ಯದ ಮುಖ್ಯ ಅಂಶಗಳು. ಕವಿ ಚಿಂತನಪರನಾಗಿ ಧೀಮಂತನಾಗಿಯೂ, ಭಾಷಾಪ್ರಭುವಾಗಿ ಶ್ರೀಮಂತನಾಗಿಯೂ ಕಂಗೊಳಿಸುತ್ತಾನೆ. ಕನ್ನಡ ಭಾಷೆ, ಛಂದಸ್ಸು, ಅಲಂಕಾರ, ವ್ಯಾಕರಣಗಳನ್ನು ಬಲ್ಲಿದನಾಗಿ ಇಲ್ಲಿ ಬಳಸಿದ್ದಾನೆ. ಅಕ್ಕಮಹಾದೇವಿಯ ದೈವೀಪ್ರೇಮದ ಘನತೆಯನ್ನು, ಶರಣರು ಅರಿತು ಆಚರಿಸಿದ ಬದುಕಿನ ನಿಲವನ್ನು, ಶರಣ ಸ್ವಾನುಭಾವದ ಹುರುಳನ್ನು, ನಿತ್ಯಾನಂದದ ಅವರ ಅರಿವಿನ ಬಾಳನ್ನು ಇಲ್ಲಿ ಕಾವ್ಯರೂಪದಲ್ಲಿ ವಿವರಿಸಲಾಗಿದೆ. ಇಲ್ಲಿಯ ವ್ಯಕ್ತಿಗಳಾಗಲಿ ಅವರ ಹೆಸರುಗಳಾಗಲಿ ಕೇವಲ ವಾಚ್ಯಾರ್ಥದಲ್ಲಿ ನಿಲ್ಲದೆ, ಗಾಢ ಕತ್ತಲೆ ಮತ್ತು ಬೆಳಕುಗಳ ಸಂಕೇತಗಳಾಗಿ ಹೊರ ಹೊಮ್ಮಿವೆ. ದಟ್ಟ ಕತ್ತಲೆ- ಮಿನುಗುಬೆಳಕುಗಳ ಬೆಳವಣಿಗೆ ಲೋಕವನ್ನು ಸಂಚರಿಸಿ, ಕಂಡ ದುಃಖವನ್ನು ಇಲ್ಲಿ ಕಥೆ ಮಾಡಿ ವಿವರಿಸಲಾಗಿದೆ. ಅಕ್ಕಮಹಾದೇವಿ, ಪ್ರಭುದೇವ, ದಸರಯ್ಯ ಮೊದಲಾದ ಶರಣರ ಅನುಭಾವದ ನಿಲವನ್ನು ವಿವರಿಸಲಾಗಿದೆ. ಗುರುಚೆನ್ನರು ಶ್ರೇಷ್ಠ ಗುರುವಿನ ಸುಪ್ರತೀಕವಾಗಿ, ಅದ್ಭುತ ಗುರುಮೂರ್ತಿಯಾಗಿ ಕಂಗೊಳಿಸುತ್ತಾರೆ. ಗಿರಿಮಲ್ಲನು ಮಾನವ ಕುಲಕೋಟಿಯ ಹೃದಯದ ಕೂಗಾಗಿ, ಆರ್ತನಾದವಾಗ ಪ್ರಕಟವಾಗಿದ್ದಾನೆ ಇಲ್ಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಜಗದ ಜಡತನವ ಕೊಚ್ಚಿ ಜಗಕೆಲ್ಲ ಲಿಂಗವ ಕಟ್ಟಬಹುದೇ?
ಲೋಕ ಲೌಕಿಕದ ಭೂಮಾಂಧತಮವನು ಕಿತ್ತುಹಾಕಿ
ಬೆಳಕಿನ ಸಾಮ್ರಾಜ್ಯವನು ನೆಲದಮೇಲೆ ನೆಲೆಗೊಳಿಸಿ
ನಿಲಬಲ್ಲ ಬೆಳಗುಂಟೇ?'' ಎಂಬುದು ಕವಿಯ ಪ್ರಶ್ನೆ.

(ಭವ್ಯಮಾನವ- ಪುಟ - 509)

ಈ ಲೋಕದ ಶರಣರು ಬುವಿಯಲ್ಲಿ ಜನಿಸಿ, ಎಚ್ಚತ್ತು, ಲೋಕದ ಅಜ್ಞಾನಕ್ಕೆ ಕಣ್ತೆರೆದು, ದುಃಖದಾರಿದ್ರ್ಯಗಳಿಗೆ ಚಿಂತಿಸಿ, ಕಲ್ಯಾಣವ ಮಾಡುವ ಮಣಹಕ್ಕೆ ಕೈ ಹಾಕಿದರು; ಈ ಮಣಹದಲ್ಲಿ ಭಾಗಿಯಾದ ಮಹಾದೇವಿಯಕ್ಕನಿಂದಲೂ ಈ ಕಾರ್ಯ ಈ ಲೋಕದಲ್ಲಿ ಪಸರಿಸಿತು- ಎಂಬುದನ್ನು ಆರು ಕಾಂಡಗಳಲ್ಲಿ, ಚಿಕ್ಕ ಚಿಕ್ಕ ತಲೆಬರಹಗಳಿಂದ ಕೂಡಿ, ವಿಸ್ತೃತವಾಗಿ ವಿವರಿಸಲಾಗಿದೆ. ಕತ್ತಲೆಯಿಂದ ಬೆಳಕಿನತ್ತ ನಡೆದು ಪರಿಪೂರ್ಣತೆಯತ್ತ ಸಾಗಿದ ವಿಶ್ವಾನುಭಾವಿಗಳ ಕೃತಿ ಇದಾಗಿರುವುದರಿಂದ, ವಿಶ್ವಾನುಭಾವಿಗಳ ಬದುಕೇ ಈ ಕಾವ್ಯಕ್ಕೆ ಪ್ರೇರಕ ಶಕ್ತಿಯಾಗಿದೆ. ವಿಶ್ವಕಲ್ಯಾಣಭಾವವೇ, ಕವಿಗೆ, ಕಾವ್ಯದ ಆವಿರ್ಭಾವಕ್ಕೆ ಕಾರಣವಾಗಿದೆ. ತಲೆಯೊಳಗೆ ನಾಲಗೆ ಮೂಡಿ, ಬೆಳಗು ಮುಡಿಸಿದೆ. ಮರ್ತ್ಯಸತ್ಯಗಳು ಒಂದುಗೂಡಿಸುವ ಸಮರಸವೇ ಕಾವ್ಯಾಂತರಂಗವಾಗಿದೆ. ವೈಜ್ಞಾನಿಕವಾಗಿ, ಇಂದು ಮಾನವರು ಕ್ಷಿಪಣಿಯಿಂದ ಖಂಡಾಂತರಕ್ಕೆ ಹಾರಿದರೂ, ಚಂದ್ರಲೋಕ ಪ್ರವೇಶಿಸಿದರೂ ಅವನು ಆಂತರಿಕವಾಗಿ ಸಾಧಿಸಿದುದು ಕಡಿಮೆ. ಹಿಂದೆ ಅಸುರರೆನಿಸಿಕೊಂಡವರೂ ಇಂತಹ ಸಿದ್ಧಿ ಪಡೆದಿದ್ದರು. ಅವರಿಗೂ ಇವರಿಗೂ ವ್ಯತ್ಯಾಸವಿಲ್ಲ. ವೈಜ್ಞಾನಿಕ ಸಾಧನೆ ಮಾಡಿದವನು ದಿವ್ಯನೂ ಅಲ್ಲ, ಭವ್ಯನೂ ಅಲ್ಲ ಎಂಬ ಭಾವ ಕವಿಗಿದ್ದಂತಿದೆ. ಆದುದರಿಂದ ''ಅನುಭಾವಿಯೇ ಭವ್ಯಮಾನವ'' ಅವನ ಆಂತರಿಕ ಸಾಧನೆಯೇ ಅದ್ಭುತ, ಅಪ್ರತಿಮ ಎನ್ನುವಂತೆ ಕಾವ್ಯದ ಕಥೆ ಸಾಗುತ್ತದೆ. ಅನುಭಾವಿಗಳ ಅನುಭಾವಪಥವೇ ಮಹಾಮಾರ್ಗವಾಗಿದೆ ಇಲ್ಲಿ.

3

ಇನ್ನು ಕಾವ್ಯದ ಅಂತರಂಗವನ್ನು ಪ್ರವೇಶಿಸುವಾ. ಮೊದಲನೆಯ ಕಾಂಡದ ಹೆಸರೇ ಕಲ್ಯಾಣಕಾಂಡ. ಕಾವ್ಯದ ಪ್ರಥಮದಲ್ಲಿಯೇ ಕವಿ, ಕಲ್ಯಾಣದ ಮಹತಿ, ಕಲ್ಯಾಣದ ಹನ್ನೆರಡನೆಯ ಶತಮಾನದ ಶಿವಶರಣರ ಕಲ್ಯಾಣಕಾಂಕ್ಷೆಯನ್ನು

CC0. In Public Domain. Jangamwadi Math Collection, Varanasi

. Digitization by eGangotri and Sarayu Trust. Funding by MoE-IKS

ಹೀಗೆ ತಿಳಿಸಿದ್ದಾರೆ. ''ಭವ್ಯ ಮಾನವದ ಸಾಕಾರ ಸ್ವಪ್ನಗಳೀ'' (ಭ. ಮಾ. ಪುಟ -42) ಶರಣರು ಎಂದು ತಿಳಿಸುತ್ತ, ಅವರಿಂದ ಸದ್ಭಕ್ತಿ ಸುಜ್ಞಾನ, ವೈರಾಗ್ಯ ಬೆಳಗಿದವು. ಕಲ್ಯಾಣಪಟ್ಟಣವು ಮನದ ಕತ್ತಲೆಯ ಕಳೆವ ಕಲ್ಯಾಣ, ಬದುಕಿನ ನಿರಾಳದಾ ಕಲ್ಯಾಣ, ಸೂತಕವ ಕಳೆದ ಕಲ್ಯಾಣವಾಗಿತ್ತು. ಅಲ್ಲಿಯೇ ಲಿಂಗನಿಷ್ಠಾಮೂರ್ತಿ, ವೈರಾಗ್ಯದ ಶಿರೋಮಣಿ, 'ನಾ, ನೀ, ಜಗ' ಎಂಬ ದ್ವೈತಾಂಧಕಾರವ ಕಳೆ ಎಂದು ದೇವರಲ್ಲಿ ಪ್ರಾರ್ಥಿಸಿದ ಅಕ್ಕಮಹಾದೇವಿ ಮೆರೆದುದು. ಅಣ್ಣ ಬಸವಣ್ಣ ನಿರ್ಮಿಸಿದ ಅನುಭಾವ ಮಂಟಪದಲ್ಲಿ ದಿವ್ಯ ದೀಪ್ತಿಯಾಗಿ, ಭವ್ಯ ಬ್ರಹ್ಮೋಜ್ವಲ ಸುಜ್ಞಾನ ಚೈತನ್ಯದ ಮೂರ್ತಿಯಾಗಿ, ಪರಂಜ್ಯೋತಿಯಾಗಿ, ಅನುಭಾವಿಯಾಗಿ ಮೆರೆದವಳು. ಚೆನ್ನಮಲ್ಲಿಕಾರ್ಜುನನ ಬೆನ್ನುಹತ್ತಿ ನೊಂದವಳು. ಚೆನ್ನಮಲ್ಲಿಕಾರ್ಜುನ ದೇವನ ಬೆನ್ನುಹತ್ತಿ ಮನೆ -ಮಾರು, ದೇಶ-ಕೋಶ, ಸಮಸ್ತವ ತೊರೆದವಳು. ಪೂಜೆಗೆ ಅರ್ಪಿತವಾದ ಮಲ್ಲಿಗೆಯಂತೆ- ಮಲ್ಲಿಕಾರ್ಜುನನಿಗೆ ಸರ್ವವನ್ನೂ ಅರ್ಪಿಸಿ ಅರಳಿದವಳು. ''ಕತ್ತಲೆಗೆ ಕೋಟಿ ಕೋಟಿ ತುತ್ತಾಗದಿರಲಿ'' ಎಂಬ ಬಸವಣ್ಣನ ತತ್ವಕ್ಕೆ ಮಾರುಹೋದ, 'ಕಲ್ಯಾಣದ ಈ ತೇಜ' ಏನನ್ನು ಮೇಲೆತ್ತದೇ?- ಎಂಬ ಭಾವದಲ್ಲಿ ಒಲಿದವಳು. ಲಿಂಗಭಕ್ತಿಯಿಂದ ಬೆಳಕಿನ ಮಾರ್ಗವ ಕಂಡವಳು. ದಿನದಿನವೂ ಕನಸಿನಲ್ಲಿ ಚೆನ್ನಮಲ್ಲಿಕಾರ್ಜುನನ ದರುಶನವ ಪಡೆದವಳು. ಮನದಲ್ಲಿ ಚೆನ್ನಮಲ್ಲಿಕಾರ್ಜುನನೇ ಆವರಿಸಿ, ಕೈಹಿಡಿದು ಮಾತನಾಡಿಸಿದ ಅನುಭವ, ಮೊಗದೊಳು ಮುತ್ತಿಟ್ಟ ದೈವೀ ಅನುಭವ ಅಕ್ಕನದು. ಈಕೆಯೇ ಕೌಶಿಕನನ್ನು ತಿಳಿಹೇಳಿ ಧರ್ಮೋಪದೇಶ ಮಾಡಿ ಅವನ ಮನಪರಿವರ್ತಿಸಿದಳು. (ಭ. ಮಾ. ಪುಟ- 83) ಕಲ್ಯಾಣದಲ್ಲಿ ಬೆಳಕಿನ ನಿಧಿಯಾಗಿ ಪ್ರಕಾಶಗೊಂಡು, ಸತ್ಯಜ್ಯೋತಿಯಾಗಿ ಶ್ರೀ ಗಿರಿಗೆ- ಕದಳಿಬನಕ್ಕೆ- ಸಮರಸದ ತಾವಿಗೆ ನಡೆದಳು. ಕೆಡುವೊಡಲಭಂಗುರದ ಸಂಗದೊಳು ಕಳೆಯದೆ, 'ಕಾಯವೇ ಕೈಲಾಸ'ವೆಂಬುದ ತೋರಿಸಿದರು ಶರಣರು. ಕಾಯವಿಕಾರ, ಮನೋವಿಕಾರಗಳ ತೊಡೆದು, ಆಸೆಯ ಪಾಶದಲ್ಲಿ ಬೀಳದೆ, ಸರ್ವಾಂಗದಲ್ಲಿ ಲಿಂಗಜ್ಯೋತಿಯ ಬೆಳಗಿದರು ಶರಣರು. ಇಂತಹ ಶರಣರ ಸಂಗದಿಂದ ಪರಮಸುಖಿಯಾದ ಮಹಾದೇವಿಯಕ್ಕನೇ ಈ ಕಾಂಡದ ಮೂಲಕಥಾವಸ್ತು, ಶರಣರೇ ಇಲ್ಲಿ ಮಹತ್ವದ ಪಾತ್ರಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡನೆಯ ಕಾಂಡದ ಶೀರ್ಷಿಕೆ ಶ್ರೀಶೈಲಕಾಂಡ. ಅಕ್ಕನ ಸಮರಸದ ಪರಮ ಪರಂಧಾಮ. ಕಲ್ಯಾಣಕಾಂಡದಿಂದ ಅಕ್ಕನ ಕಥೆ ಮುಂದುವರಿಯುತ್ತದೆ- ಶ್ರೀಶೈಲ ಕಾಂಡಕ್ಕೆ. ಗುರುಚೆನ್ನಮಲ್ಲ, ಅವನ ಶಿಷ್ಯ ಗಿರಿಮಲ್ಲ ಶ್ರೀಶೈಲಕ್ಕೆ ಆಗಮಿಸಿದಾಗ ಅಲ್ಲಿಯೇ ಇದ್ದ ಅಕ್ಕಮಹಾದೇವಿಗೆ ಕಾಣಿಸಿಕೊಳ್ಳುತ್ತಾರೆ. ಗುರುಚೆನ್ನಮಲ್ಲರು ಅಕ್ಕನಿಗೆ ಗುರುವಾಗುತ್ತಾರೆ. ಆ ಗುರುವಿಗೆ ಅಕ್ಕಮಹಾದೇವಿ ''ಶಿವತೇಜಸಾರಾಯಮೂರ್ತಿ'ಯಾಗಿ ಕಂಗೊಳಿಸುತ್ತಾಳೆ; 'ಚೆನ್ನಮಲ್ಲಿಕಾರ್ಜುನಂಗೆ ತನ್ನ ತಾ ಒಪ್ಪಿಸಲು ಬಂದಳಂತೆ' ಗುರುಚೆನ್ನ ಗೃಹಸ್ಥ; ಮುದ್ದುಮಡದಿ, ಮಗುವ ಕಳೆದುಕೊಂಡು ಜಂಗಮಮೂರ್ತಿಯಾದವ. ಗಿರಿಮಲ್ಲ ಮಡದಿಮಕ್ಕಳ ಬಿಟ್ಟು, ಗುರುಚೆನ್ನಮಲ್ಲರ ಹಿಂದೆ ನಡೆದವ. ಗುರುಚೆನ್ನಮಲ್ಲ ಶಿಷ್ಯರ ಯೋಗ್ಯತೆಯನ್ನರಿತವ ನಿಜಗುರು- ನಿಜ ಜಂಗಮ. ಅವನು ಸಾಮಾನ್ಯ ಗುರುವಲ್ಲ.

''ಜಗದ ಜಾತಿಗೆ ಮಹದ ಬೆಳಗ ತೀಡುತ ಸುಳಿದ''-

(ಭ. ಮಾ. ಪುಟ -126)

ಎಂಬ ಧ್ಯೇಯವಿದ್ದವ, ಸಾಮೂಹಿಕ ಒಳಿತಿಗಾಗಿ ಶರಣಜೀವನವಿದ್ದ ಭವ್ಯಮಾನವ. ಸಿದ್ಧಾಂತ ಹೊಂದಿದವ. ಈ ತೆರನಿಂದಲೇ ಶರಣನ ಮರ್ತ್ಯದಮಣಿಹ ಪೂರ್ಣವಾಗುತ್ತದೆಯೆಂಬ ನಿಲವನ್ನು ಅಕ್ಕಮಹಾದೇವಿಗೆ ತಿಳಿಸಿಹೇಳುತ್ತಾನೆ. ಸರ್ವರಲಿ ಬ್ರಹ್ಮವನು 'ತತ್ವಮಸಿ' ಎಂಬುದನು ಕಂಡವನು. ಶರಣನು ಪಶುಪ್ರಾಣಿಪಕ್ಷಿಗಳು ಕಾಣದ ದೇವರನ್ನು ಕಂಡಿರುವುದರಿಂದ, ಅವನೇ ಶ್ರೇಷ್ಠನು ಎಂಬ ತತ್ವವನ್ನು ಅಕ್ಕನಿಗೆ ತಿಳಿಹೇಳಿದವನು. (ಭ. ಮಾ. ಪುಟ- 132) ಈ ಸಾಧನೆ ಅಕ್ಕಮಹಾದೇವಿಗೆ ಅದ್ಭುತವಾಗಿ ಕಂಡಿತು. ಹಿರಿಯ ಚೇತನವೊಂದು ಇನ್ನೊಂದು ಗುರು-ಚೇತನವ ಸಂಧಿಸಿದ ಪ್ರಸಂಗ ಈ ಕಾಂಡದಲ್ಲಿದೆ. ಸಾವಿರಬಾರಿ ಸತ್ತು ಸತ್ತು ಹುಟ್ಟಿ- ಹುಟ್ಟುವುದೇ ಮಾಯೆ; ಈ ಮಾಯೆಯಿಂದ ಎಚ್ಚತ್ತಶರಣನೇ 'ಭವ್ಯಮಾನವ'; 'ದೇವಮಾನವ'. ಗುರುಚೆನ್ನಮಲ್ಲನು ಬಸವಣ್ಣನ ಮಹಾಘನವನ್ನು ಅಕ್ಕನಿಗೆ ಹೀಗೆ ತಿಳಿಸುತ್ತಾನೆ.

ಬಸವಣ್ಣ ಸಂಕುಚಿತತನವ ನೀಗಿಸಿದವ; ಮರ್ತ್ಯಕ್ಕೆ ಮಹಾಘನವ
ತಂದವ; ಸರ್ವವ, ಶಿವಾಧೀನವೆಂದವ, ಶಿವನು ಭಕ್ತರಿಗೊಡ್ಡುವ
ಅಡ್ಡಿಗಳೆಲ್ಲವನ್ನೂ ಗೆಲಿದವ; ಇಂತಹರೇ ಶರಣರು; ಇವರೇ ಭವ್ಯ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವರು. ತಾನು ಬಸವಣ್ಣನ ಪ್ರಭಾವಕ್ಕೊಳಗಾದುದನ್ನೂ ಅಕ್ಕಮಹಾದೇವಿಗೆ ನಿರೂಪಿಸಿದರು ಗುರುಚೆನ್ನರು. ಆಕಾಶ ಪಾತಾಳ ಬೆಚ್ಚಿ ಬೆದರಿದ ರೀತಿ ಬಸವಣ್ಣನದು ಎಂದು ಅರಿತ ಅಕ್ಕ 'ನಾ' ಎಂಬುದನ್ನು ಹರಿದೂಗೆದು ಪ್ರಕೃತಿಯೆಲ್ಲವೂ ವಿಶ್ವಾತ್ಮನೇ ಎಂಬ ಭಾವನೆ ತಾಳಿದಳು. ಮಾನವನಿರ್ಮಿತ ಕುಲಜಾತಿಗಳ ಬಂಧನವ ಕಿತ್ತೆಸೆದು, ಭೇದಭಾವವ ತೊಡೆದು, ಪೂರ್ವಜನ್ಮವ ಅಳಿಸಿ, ದಿವ್ಯದ ಜನಮನದಲ್ಲಿ ಬಿತ್ತಿ ಬೆಳೆದವರು ಶರಣರು; ಅವರ ಇರವಿನ ರೀತಿ ಲಿಂಗರೀತಿ; ಸರ್ವವೂ ತಾನಿದ್ದಲ್ಲಿ ಎಂದವರು ಶರಣರು; ಕಾಯವನ್ನು ಗೆಲಿದವರು ಶರಣರು- ಎಂಬುದನ್ನು 'ಭವ್ಯ ಮಾನವ' ಕಾವ್ಯ ಈ ಪ್ರಸಂಗದಲ್ಲಿ ವಿವರಿಸುತ್ತದೆ.. ಈ ರೀತಿಯ ಬದುಕಿಗೆ ಬಸವಣ್ಣನೊಂದು ಮಾದರಿಯೆಂಬುದನ್ನೂ ತಿಳಿಸುತ್ತದೆ.

> ''ಬಸವಣ್ಣ ಲಿಂಗೋಜ, ಗುರು; ಲೋಕದ ಬಾಗಿಲು ತೆರೆಯಲು ಬಂದವ;
> ಮರ್ತ್ಯದ ಕತ್ತಲೆಗೆ ಅರ್ಥವ ತಂದವ (ಭವ್ಯಮಾನವ ಪುಟ- 183);
> ಲೋಕದ ದ್ವೇಷ, ಅರಿಷಡ್ವರ್ಗಗಳ ಅಳಿಸಲು ಬಂದವ; ಹೊರಗಿನ ಅರಿವಿಗಿಂತ
> ಅಂತರಂಗದ ಅರಿವು ಮುಖ್ಯವೆಂದು ತಿಳಿಸಿದವ; ಲೋಕಕ್ಕೆ ಭಕ್ತಿ, ಅರ್ಪಣೆ
> ಯೆಂದರೇನೆಂಬುದನ್ನು ತಿಳಿಸಿದವ; ಬ್ರಹ್ಮಪೂಜೆಯ ಬ್ರಹ್ಮವಿಸ್ತಾರವ
> ತೋರಿಸಿದವ; ಇಂದ್ರಿಯಗಳನ್ನು ದಾಸರಂತೆ ಉಪಯೋಗಿಸಕೊಳ್ಳುವುದ
> ಕಲಿಸಿದವ (ಭ.ಮಾ. ಪುಟ -203); ಹಿಂದಣವರು ಕಾಣದ ಬೆಳಕ
> ಕಂಡವ;..........''ಇತ್ಯಾದಿ.

ವ್ಯಕ್ತಿ ಅಜ್ಞಾನದಿಂದ ಎಚ್ಚೆತ್ತು ಸುಜ್ಞಾನದತ್ತ ತಿರುಗಿದುದರ ವಿವರಗಳನ್ನು ಈ ಕಾಂಡವು ವಿವರಿಸುತ್ತದೆ.

ಮೂರನೆಯ ಕಾಂಡವು ಕತ್ತಲೆಯ ಕಾಂಡ. ಜಗತ್ತಿನಲ್ಲಿ ಎಲ್ಲೆಡೆಗೂ ಕತ್ತಲೆ ಆವರಿಸಿದೆ. 'ಅಹಂ' ಎಂಬುದೂ ಒಂದು ಕತ್ತಲೆ. ಅನೇಕ ಅದ್ಭುತಗಳಿಗೆ ಆಗರವಾಗಿದ್ದ ಈ ಪೃಥ್ವಿ, 'ನಾ' ಎನ್ನುವ ಮಾನವನನ್ನು ರೂಪಿಸಿದಂತೆ-ಭವ್ಯಮಾನವನನ್ನೂ ಸೃಷ್ಟಿಸಿದೆ. ಸರ್ವಚೈತನ್ಯಕ್ಕೆ ಚೇತನವ ನೀಡಿ, ಸರ್ವಾಂಧಕಾರವನು ಅಂಧಗೊಳಿಸಿ, ದ್ವೈತಕೋಟಿಯ ದ್ವೈತಭಾವದೊಳು ನೆಲೆಗೊಳಿಸಿ ಆಡಿದನು ಲಿಂಗಯ್ಯ. ಹೂಡಿದನು ಸಂಸಾರನಾಟಕವನು; ಕತ್ತಲೆಗೆ ಕತ್ತಲೆಯು ಹೋರಾಡಿ ಮಡಿದವು ಹೆಣದ ರಾಶಿ! ಇದನ್ನೆಲ್ಲ ಶಿಷ್ಯರಿಗೆ ವಿವರಿಸಿದ ಗುರುಚೆನ್ನಮಲ್ಲರು ಪ್ರಪಂಚವನ್ನು ಮುತ್ತಿದ ಸಮಸ್ಯೆಗಳನ್ನು ತಿಳಿದು ಹೀಗೆ ಹೇಳುತ್ತಾರೆ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1) ಮಾನವ ಅಹಂಜೀವಿ; ಮಣ್ಣಬೊಂಬೆ.
2) ಮಾನವರು ಹೊರಗೆ ದೊಡ್ಡವರು; ಒಳಗೆ ಕ್ಷುದ್ರರು.
3) ಪ್ರೇಮದ ಸ್ಥಳದಲ್ಲಿ ಕಾಮವನ್ನು ತುಂಬಿಕೊಂಡವರು.
4) ಜಗದಲ್ಲಿ ದುಃಖವು ಎಲ್ಲೆಡೆಗೂ ಆವರಿಸಿದೆ.
5) ನನ್ನೂರು, ನನ್ನ ಧರ್ಮ, ನನ್ನಭಾಷೆ ಎಂಬವೆಲ್ಲ ಸಂಕುಚಿತ ಹಾಗೂ ಅರ್ಥಹೀನ ವಿಚಾರದವು.
6) ಮನುಜಜಾತಿಗೆ ರಕ್ಕಸರ ಸಂತತಿ ಹುಟ್ಟಬೇಕೇ?

ಕೊಲೆ, ಮಾನವಧರ್ಮವಾದರೆ ಹೇಗೆ? ಎಲ್ಲೆಲ್ಲೂ ವೈರ ಆವರಿಸಿದರೆ ಹೇಗೆ? ಬುದ್ಧೀ ಹೇಳಲು ಹೋದವರನ್ನೇ ಕೊಂದರೆ ಹೇಗೆ? ಇತ್ಯಾದಿ.

ಇವೆಲ್ಲ ಪರಮಾತ್ಮನನ್ನು ಅರಿಯದವರ ರೀತಿ- ಎಂದೂ, ಕತ್ತಲೆ ಆವರಿಸಿದ ಪ್ರಪಂಚದ ನಾನಾ ದೃಶ್ಯಗಳ ಸರಮಾಲೆಯನ್ನೇ ವಿವರಿಸಿದ. ಈ ಕತ್ತಲೆಕಾಂಡದಲ್ಲಿ ಹೋರಾಟದ ಕತ್ತಲೆ ಬೆಳಕನುಂಗಿದೆ! ಅರಿಷಡ್ವರ್ಗ ಪ್ರಪಂಚಕ್ಕೆ ಕವಿಯ ಮನನೊಂದಿದೆ. ಈ ಕತ್ತಲೆಯಿಂದ ಹೊರಬಂದು ಶಾಂತಿ, ಸೈರಣೆ, ಸಮತೆ, ಸಮಾಧಾನ, ಕಲ್ಯಾಣ, ಉಪಕಾರಗಳೇ ಈ ಕಾವ್ಯದ ಧ್ಯೇಯಗಳಾಗಿವೆ. ಈ ಮಹಾಜಗವನ್ನು, ಜಗದ ರಕ್ತಸಂಬಂಧವನ್ನು ಕಾಣುವ ಆಸೆ ಕವಿಯದು; ಅನಂತಯುಗದ ಭವ್ಯದ ಆಸೆ ಕನಸಾಗಬೇಕೆಂಬ ಹಂಬಲ ಕವಿಯದು. "ಹೊಸ ಪ್ರಪಂಚವ ನಿರ್ಮಿಸುವ ಗುರು ಬೇಕು. ಶಿವಸಂತತಿ, ಕಲ್ಯಾಣಸಂತತಿ ಮುಂದುವರಿಸಬೇಕು"- ಶ್ರೀ ಪರ್ವತದ ಅಡಿಯಲ್ಲಿ, ಮನುಕುಲದ ಕತೆ, ಹಿಂದಣ ಚರಿತೆ, ಸತ್ಯ ಸಂಗತಿಗಳನ್ನು ವಿವರಿಸುತ್ತಾರೆ- ಗುರು ಚೆನ್ನರು. ದೇವಮಾನವರ ನಡೆನುಡಿಗಳೇ ಬೆಳಕಿನ ದಾರಿ ಎಂಬುದನ್ನು ನಿರೂಪಿಸಿದ್ದಾರೆ ಇಲ್ಲಿ.

ನಾಲ್ಕನೆಯ ಕಾಂಡದ ವಸ್ತು ಉದಯವಾಗುವುದು- ಉದಯಕಾಂಡ. ಮಾನವ ರಾತ್ರಿಗೆ ಎಚ್ಚರದ ಸ್ವಪ್ನಸುಖ. ಯುಗಯುಗದಿಂದಲೂ ಮಾನವನು ಹೀಗೆಯೇ ಇರುವಾಗ 'ಲಿಂಗಯ್ಯನೇ ತಾನು ಲೀಲೆ ಮಾಡಬೇಕು'' ಅರಿವಿನ ಮೂಲಕ ದಾರಿದೋರಬೇಕು; 'ಅರಿವೇ ಗುರು, ಅನುಭಾವವೇ ಪರಮಗುರು' ಇಲ್ಲಿ ಎಷ್ಟೋ ಮನುಜರು ಜನಿಸಿ, ದಿವ್ಯೋಪದೇಶ ಮಾಡಿದರೂ, 'ನಾಯಿ ಬಾಲ ಡೊಂಕೆಂಬಂತೆ' 'ನಾ' ಎಂಬುದರ ತಾಂಡವ ಎಲ್ಲ ಕಡೆಗೆ. ಇದೇ ದೇವನಿಕ್ಕಿದ ಲೀಲೆ! ಅರಿಷಡ್ವರ್ಗಗಳ ನಿರ್ಮಿಸಿ, ಮಾನವರನ್ನು ಹೋರಾಟಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಣಗೊಳಿಸಿದ್ದಾನೆ. ಹೀಗಿದ್ದಾಗ ತನ್ನೊಳಗಿಂದಲೇ ಅರಿವು ಮೂಡಬೇಕು. ತನ್ನಂತೆಯೇ ಅನ್ಯರೂ ಎಂಬ ಭಾವ ಬಲಿತು, ಅರಿವು ದೀಪಿಸಬೇಕು. ತನ್ನೊಳಗೆ ಪ್ರವೇಶಿಸಿ ನೋಡಿದಾಗ ಅಲ್ಲಿಯೇ ಭವ್ಯ ಮಾನವನ ಗುಣ ತೋರುತ್ತದೆ. 'ನಾ' ಅಲ್ಪ ಎಂಬ ಭಾವ ಬಲಿತು, ಭೂಮಕ್ಕೆ ಹೊರಗಾದವ ಎಂಬ ತಿಳಿವು ತೀಡಬೇಕು. ಈ ತಿಳಿವು ತಿಳಿದು- ಪಥ ವಿಸ್ತಾರವಾಗಲು ಅನುಭಾವಿಗಳ ಹಾದಿಯೇ ಬೆಳಕು ನೀಡುತ್ತದೆ. ಈ ರೀತಿ (ಭ. ಮಾ. ಪುಟ-494-495) ನಡೆದ ಅಕ್ಕ ಮಹಾದೇವಿಯ ಬದುಕೇ ಭವ್ಯವಾಗಿ ಕಾಣುತ್ತದೆ. (ಭ.ಮಾ. ಪುಟ-497) ಒಳ ಹೊರಗೆ ದೇವಭಾವ ಬಲಿತು, ಅಜ್ಞಾನದ ಆಡಂಬರ ತೊಲಗಬೇಕು. ಗುರುವಿನ ದರುಶನದಿಂದ ಅರಿವು ಬಲಿಯುತ್ತದೆ. ದೈವೀ ಅನುಭಾವದಿಂದ ಕತ್ತಲೆನಾಶ ಹೊಂದುತ್ತದೆ. ದಿವ್ಯದ ಬಾಳುವೆಗೆ ಸದ್ಭಕ್ತಿ, ಶಿವಯೋಗ, ಸುಜ್ಞಾನ, ಸತ್ಕ್ರಿಯೆ ಬೇಕು. ಕರ್ಮವಾಸನೆ ಸುಟ್ಟು ಲಿಂಗಕ್ರಿಯೆ ನಡೆಯಬೇಕು. ಶಿವಕಾಮನೆ ಕೋಟಿಕಾಲದ ನೆಂಟನ್ನು ಅಳಿಸುತ್ತದೆ. ಸದ್ಗುರುವೇ ಶಿವಕಾಮನೆಯ ಹಾದೀ ಹಿಡಿಸುತ್ತಾನೆ; ಭಕ್ತಿ ಇದಕ್ಕೆ ಬೇಕು. ಭಕ್ತಿ ಸಾಮಾನ್ಯವಲ್ಲ, ನೆನೆದವರ ಲಿಂಗವ ಮೂಡುತ್ತದೆ. ಕಾಯದ ಕಳವಳ, ಮಾಯದ ಮದಗಳ ತೊಲಗಿಸುತ್ತದೆ. ಪರಂಜ್ಯೋತಿ ಸ್ವರೂಪನನ್ನು ಮಾಡುತ್ತದೆ. ಆ ಭಕ್ತಿಗೂ ಶಿವನೊಲುಮೆ ಬೇಕು. ಕಾಯಗುಣನಾಶವು ಶಿವಾರ್ಪಣಭಾವದಿಂದ ಸಾಧಿಸುತ್ತದೆ. ಅಕ್ಕ ಮಹಾದೇವಿಯ ಕಥೆ ಇಂತಹ ಭಕ್ತಿ- ಜ್ಞಾನಗಳ ಕಥೆ; ಎಲ್ಲೆಲ್ಲೂ ಲಿಂಗ ಚೈತನ್ಯ ವ್ಯಕ್ತವಾದ ಕಥೆ. ಐಕ್ಯ ಸ್ಥಿತಿಯ ಶರಣ ಮೃತ್ಯುವ ಗೆಲಿದ, ಇದ್ದೂ ಇಲ್ಲದ ಮಹಂತ! ಬದುಕಿನಲ್ಲಿ ಸುಖ- ದುಃಖಗಳೂ ದೈವದ ಕೈವಾಡದಿಂದ ಸಾಗುತ್ತವೆ. ಮಹಾನುಭಾವರ ಚರಿತೆ ದುಃಖವನ್ನುಂಡವರ ಚರಿತ್ರೆ; ಮಹಾನುಭಾವರು ದುಃಖದಲ್ಲಿಯೇ ಸುಖವನ್ನುಂಡವರು. ಲೋಕದೊಳಗೆ ಆತ್ಮ ಕಲ್ಯಾಣವ ಸಾಧಿಸಿದವರು ಭವ್ಯಮಾನವರು.

5 ನೆಯ ಕಾಂಡವು ಉಜ್ವಲಕಾಂಡ : ಬಸವಣ್ಣ ಮೊದಲಾದವರ ಹೊಸಬೆಳಕನ್ನು ಭುವಿಗೆ ತಂದ ಉಜ್ವಲ ವ್ಯಕ್ತಿಗಳ ಕಥೆ ನಿರೂಪಿತವಾಗಿದೆ ಇಲ್ಲಿ. ಶಿವಬೆಳಗು ಬೆಳಗಿ, ನೂತನ ದೃಷ್ಟಿ ತಂದಿದ್ದಾರೆ ಈ ಶರಣರು. ಎಲ್ಲರ ಮೂಲ ಉಗಮ ಒಂದೇ- ಜ್ಞಾನದಿಂದ ಅಜ್ಞಾನವು ದೂರ ಎಂಬ ಅಂಶಗಳು ಒಳಹೊಕ್ಕು ನೋಡಿದರೆ ಗೋಚರಿಸುತ್ತವೆ. ಸುಖ-ದುಃಖಗಳ ಗೆಲ್ಲುವುದೇ ಮಾನವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರಿ. "ಜಗದ ಮಾನವನೆದ್ದು, ಬೆಳಗಿನೊಳು ಬದುಕಿ, ಸುಖ-ದುಃಖಗಳನ್ನುಂಡು, ಹೋರಾಡಿ, ಸುಖ-ದುಃಖಗಳ ಗೆಲ್ದು, ಸತ್ಯಸುಖಸಾಮ್ರಾಜ್ಯದೊಳಗಿರುವ ನಿತ್ಯ ಪರಿಪೂರ್ಣ ಮಹಾಂತವನ್ನು ಬಿಚ್ಚಿ ತೋರುವವನೇ ಭವ್ಯಮಾನವ" (ಭವ್ಯಮಾನವ ಪುಟ- 633) ಅಕ್ಕ ಮಹಾದೇವಿ ಮೇರು ಶರಣೆ. ಸ್ವಾರ್ಥ ತ್ಯಾಗವೇ ಶರಣ ಮಾನವನ ಲಕ್ಷಣ. ಇವನು ಪರೋಪಕಾರಿ. ಇರವಿನೊಳು ಪರಶಿವ, ಶರಣ; ಭವಿತ್ವವ ಸುಟ್ಟು ಭಕ್ತನಾದ ಜನರೆಲ್ಲ ತಾವೆಲ್ಲಿ ಒಂದೇ ಮೂಲದವರೆಂಬ ಭಾವವು ಬಲಿಯದೇ ಹೋರಾಡುತ್ತಿದ್ದುದೇ ದುಃಖಕ್ಕೆ ಕಾರಣ. ಭವ್ಯಮಾನವನು ಮಾತ್ರ ಆಧ್ಯಾತ್ಮಿಕ ಮಾನವನು; ದಿಗಂತದಾಚೆಯನ್ನೂ ಕಾಣುವವ ಶಿವನನ್ನು ಸದಾ ಹಿಡಿದಿರಿಸಿಕೊಂಡವ. ಕಾಮನನ್ನು ಸೋಮಧರನ ಪ್ರೀತಿಗೆ ತಿರುಗಿಸಿದವ. ಭವದಲ್ಲಿದ್ದು ಭವವ ಗೆಲಿದವ ಶರಣರ ಬದುಕೇ ಒಂದು ಆದರ್ಶ ಅವರ ವಿಶ್ವಪ್ರೇಮ ಅಹಿಂಸೆ, ಬ್ರಹ್ಮವನು ಕಂಡ ಕಣ್ಣು, ನಿಜನಿಷ್ಠೆ, ಮರ್ತ್ಯದಲ್ಲಿ ಶಿವಲೋಕವನು ಬೆಳೆವ ಸದಿಚ್ಛೆ, ಜೀವನ ಶುಚಿತ್ವ, ನಿತ್ಯ ತೃಪ್ತಿ, ನಿರ್ಭಯ ಇವೇ ಅವರು ಸಾಧಿಸಿದ ಮೌಲ್ಯಗಳು'.

6 ನೆಯ ಕಾಂಡವೇ ಭವ್ಯಕಾಂಡ. ಮೇದಾರ ಕೇತಯ್ಯ, ನುಲಿಯಚಂದಯ್ಯಾದಿಗಳ ಕಾಯಕಮಹಿಮೆ, ಅದರಿಂದ ಪಡೆದ ಸುಖ, ಪರಮ ಪದವಿಗಳು, ಕಾಯಕಮೀರಿ ಗುರು ಲಿಂಗ ಜಂಗಮರಿಲ್ಲ (ಭವ್ಯಮಾನವ ಪುಟ-771) ಎಂಬ ಮನೋಧರ್ಮ, ಕಾಯಕವಮಾಡಿ ಪರರಿಗೆ ಕೊಡುವುದು- ಇದರಿಂದ 'ತಾನೇದೇವ' ಎಂಬ ಭಾವ ಬೆಳೆಯುವುದು. ಈ ಅಂಶಗಳನ್ನು ಹೇಳಲಾಗಿದೆ. ಪ್ರಾರ್ಥನೆಯಿಂದಲೇ ಶಿವದ ಉದಯವಾಗಿ, ಶರಣರ ಕಾರ್ಯವೇ ಲೋಕಹಿತಕೆ ದಾರಿ; ಶರಣರದು ಕತ್ತಲೆಯ ಬೆಳಗಿಸುವ ತಂತ್ರ, ಅದುವೇ ಕಾಮಾದಿಗಳ ಗೆಲಿವುದಕ್ಕೆ ಹಾದಿ ಎಂಬ ಅಂಶಗಳನ್ನು ವಿವರಿಸಲಾಗಿದೆ. ಅಕ್ಕನ ಬದುಕಿನ ವೃತ್ತಾಂತದೊಂದಿಗೆ ಪ್ರಾರಂಭಗೊಂಡ ಈ ಕಾವ್ಯ, ಆಕೆಯ ತೀಕ್ಷ್ಣ ನಿರೀಕ್ಷಣ ಶಕ್ತಿ, ಈಶ್ವರನಲ್ಲಿದ್ದ ಸಹಜ ಭಕ್ತಿ, ಅಚಲನಿಷ್ಠೆ, ಕೌಶಿಕನ ಮನಃಪರಿವರ್ತನೆಯ ನಿರೂಪಣೆಯೊಂದಿಗೆ ಶಿವಶರಣರ ದಿವ್ಯ ಸಂದೇಶದಿಂದ ಉದ್ದೀಪ್ತರಾದ ಗುರುಚೆನ್ನಮಲ್ಲರು ಸಂಚಾರ ಮಾಡುತ್ತ, ಶರಣ ಸಂದೇಶ ಸಾರುತ್ತ ಅಕ್ಕನಲ್ಲಿಗೆ ಬಂದು ಶಿವಬೀಜವನ್ನು ಬಿತ್ತಿ, ಅಲ್ಲಿಂದ ಬೇರೆಡೆಗೆ ಹೋಗಿದ್ದಾರೆ. ನಂತರ ಅಕ್ಕ ಕೌಶಿಕನನ್ನು ಗೆಲಿದು ಕಲ್ಯಾಣಕ್ಕೆ ನಡೆದು, ಶರಣರ ದರ್ಶನ ಭಾಗ್ಯ ಪಡೆದು ಅನುಭಾವಿಯಾದುದರ ಸುಂದರ ಶಿಲ್ಪ ಈ ಕಾಂಡದ ಮುಖ್ಯ ಚಿತ್ರ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶೈಲದ ಬಳಿಯ 'ತಿಳಿವಳ್ಳಿ'ಯ ಗುರುಚೆನ್ನಮಲ್ಲ, ಆತನ ಪತ್ನಿ ಗಂಗಮ್ಮ, ಒಂದೇ ಮಗು ಬಾಲಸಂಗಯ್ಯರಿಂದೊಡಗೂಡಿದ ಕುಟುಂಬ. ಬಾಲಸಂಗಯ್ಯನ ಅಕಾಲಿಕ ಮರಣ, ತದನಂತರದ ಗಂಗಮ್ಮನ ಮರಣಗಳಿಂದ ದಿಗ್ಭ್ರಾಂತರಾದ ಗುರುಚೆನ್ನಮಲ್ಲರು ಶರಣಸಂದೇಶವ ಬಿತ್ತರಿಸ ಸಂಚಾರಕ್ಕೆ ಹೊರಟು, 'ತಿಳಿವಳ್ಳಿ' ಯ ನೆರೆಯ ಗ್ರಾಮ 'ಕೊಪ್ಪ' ದಲ್ಲಿದ್ದ ಶಿಷ್ಯ ಗಿರಿಮಲ್ಲನೂ ಗುರುಪ್ರಭಾ ಒಳಗಾದ; ಕೆಲದಿವಸಗಳ ಮೇಲೆ ಗುರು-ಶಿಷ್ಯ ಇಬ್ಬರೂ ಮನೆಯಿಂದ ಟಟಾಗ, ಶ್ರೀಗಿರಿಯ ಪರ್ವತದಡಿಯಲ್ಲಿ ಸಮಾಧಿಗೆ ಕುಳಿತ ಅಕ್ಕಮಹಾದೇ 'ಸಡಿಘಡಾ ಗಿರಿಮಲ್ಲ' ಎಂಬ ಮಾತು ಕೇಳಿಸಿತು. ಪರಸ್ಪರರ ಪರಿಚ ಸುವಾಯಿತು. ಇಬ್ಬರಿಗೂ ಅಕ್ಕನ ನಿಲುವು ಬೆರಗನ್ನುಂಟು ಮಾಡಿತು. ಈ ಮುಸಿವರೂ ಸೇರಿ ಜಗದ ಮುಂದಿದ್ದ ಕತ್ತಲೆಗೆ, ಮಾನವಕುಲದ ಹುಟ್ಟು ಸಾವಿನ ಸಮಸ್ಯೆಗೆ ಪರಿಹಾರ ಸೂಚಿಸಲು ಮುಂದಾದರು. ಇಲ್ಲಿ ಅವರ ವೈಯಕ್ತಿಕ ಸಾಧನೆಗಿಂತ ಸಾಮೂಹಿಕ ಸಿದ್ಧಿಯ ಯೋಚನೆ ಕಂಡು ಬರುತ್ತದೆ.

ಕತ್ತಲೆ ಕಾಂಡದಲ್ಲಿ ಆಕಾಶ ಹುಟ್ಟಿದುದು ಹೇಗೆ? ಮಾನವನ ಮಾನಸಾಕಾಶದಲ್ಲಿ ತಾನಿರುವೆನೆಂಬ ಅರಿವಿದೆಯೇ? ಹೊರಗಿನ ಬಯಲು ಒಳಗಿನ ಬಯಲಿಗೆ ಸಂಬಂಧವಿದೆಯೇ? ಒಳಹೊರಗೂ ವಾಯು ಅಗ್ನಿಗಳ ಪ್ರಸರಣ, ಈ ಸೃಷ್ಟಿಯಲ್ಲಿ 'ಮಾನವನೇ ಮಹಾಶಿಖರ' ಎಂಬಂಶ ಅಹಂಕಾರಿ ಮಾನವ, ಕತ್ತಲೆಯ ನುಂಗಿ, ಆತ್ಮಜ್ಞಾನ ಪಡೆಯಬೇಕೆಂಬ ವಿಷಯವು ಬಲವಾಗಿ ಪ್ರತಿಪಾದಿತವಾಗಿದೆ. ಕತ್ತಲೆಯ ದುಷ್ಪರಿಣಾಮ ಪ್ರಭಾವಯುತವಾಗಿ ಚಿತ್ರಿತವಾಗಿದೆ. ಜಗದ ಅಜ್ಞಾನದ ದಟ್ಟ ಪ್ರಭಾವವೇ ಮಾನವನನ್ನು ಬೆಳಕಿನತ್ತ ಕೊಂಡೊಯ್ಯುತ್ತದೆಯೆಂಬ ಭಾವ ಇಲ್ಲಿ ಹೊರಹೊಮ್ಮಿದೆ. ಕತ್ತಲೆಯನಂತರ ಬೆಳಗು ಬರುವಂತೆ ಮಹಾನುಭಾವಿಗಳು ಮೆರೆದುದನ್ನು ಮಹಾಸತ್ಯ ಪ್ರತ್ಯಕ್ಷವಾದುದನ್ನೂ, ಕರ್ನಾಟಕದ ಶರಣರು, ಭಾರತದ ಇತರ ಸಂತರು ಮೆರೆದುದನ್ನೂ ಎಲ್ಲ ಕಡೆಗೆ ಬ್ರಹ್ಮಬೀಜ ಬಿತ್ತಿದುದನ್ನೂ ಉದಯಕಾಂಡವು ಚಿತ್ರಿಸುತ್ತದೆ. ಮಾನವನ ಭೀತಿಗೆ ಆಶಾಜ್ಯೋತಿಯ ಕಿರಣವನ್ನು ಬೆಳಗಿಸುತ್ತದೆ. ಈ ಕಾಂಡವೇ 'ಭವ್ಯಮಾನವನ ಭವ್ಯಸೌಧ''. ಶರಣರ ಮಣ್ಣಿನಿಂದ ಹೊಸ ಶರಣರು ಮೂಡಬಾರದೇಕೆ? - ಈ ಕನಸು ಶರಣ ಧರ್ಮ, ಶರಣ ತತ್ವ, ವಿಶ್ವಮಾನವ ಧರ್ಮವಾಗಬಾರದೇ? ಎಂಬ ಕವಿಯ ಹಂಬಲವು ಇಲ್ಲಿ ಪ್ರಕಟವಾಗಿವೆ. ಎಲ್ಲ ಧರ್ಮಗಳನ್ನೂ ಮೀರಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಜಧರ್ಮವೊಂದಿದೆ. ಅದೇ ಅನುಭಾವಮಾರ್ಗ; ಅದೇ ಬೆಳಕಿನತ್ತ ಕೊಂಡೊಯ್ಯುವುದು ಎಂಬ ಆಸೆ ಇಲ್ಲಿ ಪ್ರಕಟವಾಗಿದೆ. ಹೀಗೆ ಹಂಬಲಿಸಿದ ಮಾನವ, ಬೆಳಗನ್ನು ಅರಿತು ಬೆಳಗು ಆಗಬೇಕು. ಪರಬ್ರಹ್ಮದಿರವಿನ ಪ್ರತ್ಯಕ್ಷ ಸಾಕಾರಮೂರ್ತಿಯಾಗಬೇಕು; ವಿಜ್ಞಾನಿಗಳನ್ನು ಕವಿ, ಇಲ್ಲಿ ಅನುಭಾವಿಗಳೊಡನೆ ತೂಗಿ ನೋಡಿದ್ದಾರೆ; ವಿಜ್ಞಾನದ ಪ್ರಗತಿಯಿಂದಾದ ದುಷ್ಪರಿಣಾಮಕ್ಕೆ ಕವಿಮನ ನೊಂದಿದೆ. ಈ ಸನ್ನಿವೇಶದಲ್ಲಿ ಕವಿ ಭಾರತೀಯ ಆಧ್ಯಾತ್ಮಿಕ ಪರಂಪರೆಯೊಂದೇ ಮನುಕುಲದ ಅಭ್ಯುದಯಕ್ಕೆ ದಾರಿ ಎಂಬ ನಿರ್ಣಯಕ್ಕೆ ಬಂದುದು ಅಚ್ಚರಿಗೊಳಿಸುವ ವಿಷಯವಾಗಿದೆ. ಅನುಭಾವಿಗಳು ತೋರಿದ ಪ್ರಪಂಚಕ್ಕೆ ಕಾಲಿರಿಸಿದರೆ ನಮ್ಮ ಪ್ರಪಂಚದ ಬಣ್ಣವೇ ಬದಲಾಗಿ ಕಾಣುತ್ತದೆ. ಹುಚ್ಚು ಜಗತ್ತಿಗೆ 'ಭವ್ಯಮಾನವ' ಕಣ್ಮುಚ್ಚಿಕೊಂಡಿರಲಾರ. ಈತನ ಗುರಿಯೇ ಜಗತ್ಕಲ್ಯಾಣ; ಈತನೇ ವಿಶ್ವಮಾನವ; ತನ್ನನ್ನು ತಾನರ್ಚಿಸಿಕೊಳ್ಳುವ ದಿವ್ಯ ಪುರುಷ ಎಂಬುದೇ ಕವಿಯ ಕೊನೆಯ ಮಾತು.

5

ಅಧಮಾಸೂಯೆ, ರಾಗದ್ವೇಷಗಳ ಬಳಿ ಸುಳಿಯಬಾರದು. ಲೋಕವನು, ಬೆಳಗು ಕಬಳಿಸಿ ಕತ್ತಲೆ ಆವರಿಸಿದೆ. ಅರಿವಿನ ಮಾನವರು ಕತ್ತಲೆಯ ಕೊಂದವರು. 'ವೀರಸ್ವರ್ಗ'ವೆಂದು ಹುರಿದುಂಬಿಸಿಕೊಂಡಿದ್ದಾರೆ- ಕೋಟಿ- ಕೋಟಿಜನರನ್ನು ಹುರಿಗೊಂಡು ನಟಿಸಿಹುದು ರಕ್ತರಸ ನಾಟಕ! ಹೆಣ್ಣಿಗಾಗಿ ನಡೆದ ಯುದ್ಧಗಳು ಕಾಮದೇವನವು- ಇವೇ ಮೊದಲಾದವುಗಳಿಂದ ಎಚ್ಚೆತ್ತ ಮಾನವನು ಬೆಳಗನ್ನುಂಡು ತೃಪ್ತಿಹೊಂದಿದವನು- ಎಂಬುದು ಕಾವ್ಯದಲ್ಲಿ ಧ್ವನಿತವಾಗುವ ಅಂಶ.

ಕವಿಯ ಮಾತಿನ ಶಕ್ತಿ ಮಂತ್ರಶಕ್ತಿಯಾಗಿದೆ; ಕಾವ್ಯ ಹೊರಗಣ್ಣುಕೀಲಿಸಿ ಒಳಗಣ್ಣು ಮೂಡಿಸುತ್ತದೆ; ಜಡತ್ವವನತಿಗಳೆದ ಅದ್ಭುತರ, ಅಲ್ಪವನತಿಗಳೆದ ಮಹಾತ್ಮರ, ದುರ್ಘಟನೆಗಳನ್ನು ನೂಂಕಿ ಶಿವಘಟನೆಗಳತ್ತ ಸಾಗಿದವರ ಘಟನೆಗಳಿಂದ ಕಾವ್ಯ, ಭವ್ಯತೆಯತ್ತ ಓದುಗರನ್ನು ಸಾಗಿಸುತ್ತದೆ.

ಮಾನವನ ನವ್ಯಚರಿತೆಗೆ, ಭಕ್ತಿಭಾವಕ್ಕೆ, ಸತ್ಯ, ಧರ್ಮ, ಆಚಾರಗಳಿಗೆ, ಬಡತನ- ಸಿರಿತನಗಳಿಗೆ, ರಾಗದ್ವೇಷ- ಮಾತ್ಸರ್ಯಗಳಿಗೆ, ಔದಾರ್ಯ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಪತೆಗಳಿಗೆ ಕಾವ್ಯವು ಅಲ್ಲಲ್ಲಿ ಎಡೆಮಾಡಿಕೊಂಡು, ದುಷ್ಟಶಕ್ತಿ- ಶಿಷ್ಟಶಕ್ತಿಗಳ ಹೊಲಬನ್ನು ಓದುಗನ ಮನೋಭಿತ್ತಿಯ ಮೇಲೆ ಬಿಂಬಿಸುತ್ತದೆ. ಸತ್ಕಾವ್ಯವಾಗಿ ಈ ಕಾವ್ಯ, ಮಾನವಕುಲಕೋಟಿಯ- ಭವಿಷ್ಯ ಮಾನವನ ರೂಪುರೇಷೆಗಳನ್ನೊದಗಿಸುತ್ತದೆ. ಇಲ್ಲಿಯ ಲಿಂಗಣ್ಣ 'ಕವಿ ಕುಲದ ಸ್ವಪ್ನ' (ಭವ್ಯ ಮಾನವ, ಪುಟ- 343); ಇಲ್ಲಿಯ ಮುದ್ದಣ್ಣ ಶರಣರ ಸಂಸಾರಿಕ ಜೀವನದ ಉದಾತ್ತಮೂರ್ತಿ (ಭ.ಮಾ.ಪುಟ- 299); ಇಲ್ಲಿಯ ಲಿಂಗಣ್ಣ, ಮುದ್ದಣ್ಣ- ಮೊದಲಾದ ವ್ಯಕ್ತಿಗಳು ಉಜ್ವಲತತ್ವಗಳ ಪ್ರತೀಕವಾಗಿದ್ದಾರೆ. ಹೀಗಾಗಿ ಇಲ್ಲಿ ವ್ಯಕ್ತಿಗಳ ಕಥೆ ಇದೆಯೆನ್ನುವದಕ್ಕಿಂತ ತಾತ್ವಿಕ ಮೌಲ್ಯಗಳ ಪ್ರತಿಪಾದನೆಯ ಕಥೆ ಇದೆ ಎನ್ನಬಹುದು.

'ಭವ್ಯಮಾನವ', ಒಬ್ಬ ಮಾನವನಲ್ಲ, ಅವನು ಕಾವ್ಯದ ತುಂಬೆಲ್ಲ ಬೇರೆ ಬೇರೆ ಸಾಂಕೇತಿಕ ಹೆಸರುಗಳಿಂದ ಪ್ರಕಟಗೊಳ್ಳುತ್ತಾನೆ. ಒಮ್ಮೆ ನೈತಿಕವಾಗಿ, ಒಮ್ಮೆ ಸೈದ್ಧಾಂತಿಕವಾಗಿ, ಒಮ್ಮೆ ವೈಯಕ್ತಿಕವಾಗಿ, ಮತ್ತೊಮ್ಮೆ ಸಾಮಾಜಿಕವಾಗಿ- ಹೀಗೆ ನಾನಾರೂಪಗಳಲ್ಲಿ ಭವ್ಯತೆ ಕಾವ್ಯದ ತುಂಬೆಲ್ಲ ಪ್ರಕಟವಾಗಿದೆ. ಒಬ್ಬ ರಾಮನಲ್ಲಿ ಕಾಣುವ, ಒಬ್ಬ ಬುದ್ಧ- ಒಬ್ಬ ಕೃಷ್ಣನಲ್ಲಿ ಕಾಣುವ- ಗುಣಗಳೆಲ್ಲವನ್ನೂ ಭವ್ಯಮಾನವ ಕಾವ್ಯ ನೀಡುತ್ತ ಹೋಗುವುದರಿಂದ ಕಾವ್ಯ ವೈಭವೋಪೇತವಾಗಿ ಎಂಟುನೂರಾ ಮೂವತ್ತೆರಡು ಪುಟಗಳಲ್ಲಿ ಹರಡಿಕೊಂಡಿದೆ.

6

ಕವಿಗೆ, ತಮ್ಮ ಬದುಕಿನ ಅನುಭವಗಳನ್ನು, ಚಿಂತನೆಯ ಫಲಗಳನ್ನು ಹಾಗೂ ವ್ಯಾಸಂಗದ ಫಲವನ್ನು ಮುಂದಿನ ಸಂತಾನಕ್ಕೆ ಹಂಚಬೇಕೆಂಬ ಸದಿಚ್ಛೆ- ಈ ಕಾವ್ಯಕ್ಕೆ ಪ್ರೇರಣೆ ನೀಡಿದೆ. ವಿಶ್ವಕಲ್ಯಾಣದ ಅಪೇಕ್ಷೆ, ಕವಿಯ ಅಂತಃಪ್ರೇರಣೆಯ ಮೂಲಕ, ಕಾವ್ಯದ ಆವಿರ್ಭಾವಕ್ಕೆ ಕಾರಣವಾಗಿದೆ; ಸರಸ್ವತಿಗೆ 'ಹೃದಯವಾನಂದಸಾಗರದಿ ಆಳಲಮ್ಮಾ' ಎಂದು ಪ್ರಾರ್ಥಿಸಿದ್ದಾರೆ; ಸತ್ಯವನ್ನು ಕಾಣುವ ದೃಷ್ಟಿಯಿಂದ ಹೊರಹೊಮ್ಮಿದೆ ಈ ಕಾವ್ಯ. ಎಲೆ ಮಹಾಮಾತೆ, ಮಹಾದೇವಿ, ವಿಶ್ವಕಲ್ಯಾಣ, 'ಮಲಗಿರುವ ಹೃದಯುಗಂಭೀರವನು ಎಚ್ಚರಿಸಿ, ಎನ್ನೊಳಗೆ ನೀ ತುಂಬಿ, ನಿನ್ನೊಳಗೆ ನಾತುಂಬಿ ಬೆಳಗಿ ನೀನೆನ್ನೊಳಗೆ ಬೆಳಗು ಬೆಳಗಾಗಿ' ಎಂದು ಜಗನ್ಮಾತೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೋರಿದ್ದಾರೆ. 'ವಿಶ್ವತೋಕಲ್ಯಾಣ', ಧ್ವನಿಯೇಳಲಿ ಎಂದು ಪ್ರಾರ್ಥಿಸಿದ್ದಾರೆ; ಕವಿ ಬಹುಕಾಲ ಚಿಂತಿಸಿದ್ದು, ಮನನ ಮಾಡಿದ್ದು ಶಿವಶರಣರ ವಚನಗಳನ್ನು; ಅನುಭಾವಿಗಳ ಮಾತನ್ನು. ಆದುದರಿಂದ ವಚನಕಾರರಲ್ಲಿ, ಬಸವಣ್ಣ, ಪ್ರಭುದೇವ, ಮಡಿವಾಳ, ಮಾಚರಸ, ಹಡಪದಪ್ಪಣ್ಣ, ಶಿವಯೋಗಿ ಸಿದ್ಧರಾಮಯ್ಯ, ಅಕ್ಕನಾಗಮ್ಮ, ಲಕ್ಷ್ಮಮ್ಮ, ಲಿಂಗಮ್ಮ ಈ ಮೊದಲಾದ ಶರಣಗಣದ ವಚನಗಳು ಹಾಡಿದವರಿಗೆ ಆನಂದ, ಕೇಳಿದವರಿಗೆ ತನಿರಸದ ಸವಿಸೊದೆ, ಸದ್ಭಕ್ತಿ ಸುಜ್ಞಾನವುಂಟಾಗಿ, ಮಾನವರ ಕತ್ತಲೆಯ ಮನಕೆ ಬೆಳಕುನೀಡಿದುದನ್ನು ಅನುಭವಿಸಿ, ಆ 'ಶರಣರ ಪ್ರೇರಣೆಯಿಂದಲೇ ತಾವು ಅನುಭವಿಸಿದ ಆನಂದವನ್ನು ಇತರರಿಗೂ ಹಂಚಬೇಕೆಂಬ ಬಲವಾದ ಹಂಬಲದಿಂದ ಈ ಕಾವ್ಯ ನಿರ್ಮಿಸಿದ್ದಾರೆ. ಆಯಾ ಶರಣರಿಂದ ಅಕ್ಕ ಮಹಾದೇವಿ ಪಡೆದ ಸಿದ್ಧಿಯನ್ನು ಶರಣಗಣದೆದುರು ಕಾವ್ಯದಲ್ಲಿ ಹೇಳಿದ ಹೇರಳ ಉದಾಹರಣೆ ಈ ಮಾತಿಗೆ ಸಾಕ್ಷಿ;

1) "ವಿಷಯವಿಕಾರ ತಲೆಗೇರಿ ಕಾಡಿಹಮನದ ಸಂಗದೂಳೊಂದಿಸದೆ, ಮನದ, ಮಂಗಲಮೂರ್ತಿ ಚೆನ್ನಮಲ್ಲನೊಳೆನ್ನಮನದೊಡನ್ನ ಒಪ್ಪಗೊಟ್ಟರಿ ತಂದೆ".

2) "ಆಸೆಯಾ ಹಗ್ಗವನು ಹೊಸೆ ಹೊಸದು ಹುರಿಗೊಳಿಸಿ ತಮ್ಮ ತಮ್ಮ ತನುಮನವ ತಂತಾವೆ ಬಿಗಿಬಿಗಿದು ಕಟ್ಟು ಕಟ್ಟುತ ಸತ್ತು ಹುಟ್ಟುವಾ ಬಾಳ್ವೆಣಗಳೊಡನಾಟವೇಕಯ್ಯಾ" ಇತ್ಯಾದಿ. ಶರಣರ ಘನತೆ ಇರುವುದು ಕೇವಲ ವೈಯಕ್ತಿಕ ಸಿದ್ಧಿಯಲ್ಲಲ್ಲ, ಸಾಮೂಹಿಕವಾಗಿ, ಸಮಾಜವನ್ನು ತಮ್ಮೊಡನೆ ಮೇಲೆತ್ತಬೇಕೆಂಬ ಸರ್ವೋದಯಭಾವದಲ್ಲಿ, ಕವಿಯನ್ನು, ಈ ಭಾವ, ಈ ನೂತನ ಅಂಶದತ್ತ ಪ್ರೇರೇಪಿಸಿದೆ. ಉದಾಹರಣೆಗೆ ಗುರುಚೆನ್ನಮಲ್ಲರು ಅಕ್ಕ ಮಹಾದೇವಿಗೆ ತಿಳಿಸಿದ ಈ ಮಾತನ್ನು ನೋಡಿರಿ;

3) "ನಿನ್ನ ಮರ್ತ್ಯದಮಣಹ ಪೂರೈಸಿಲ್ಲ ಮಗು;
ಒಬ್ಬಳೇ ಬೆಳಗಾಗಿ ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣ
ಚೈತನ್ಯದಗಲಕ್ಕೆ ಹಬ್ಬಿ, ಖಂಡಿತವ ಕಳೆದೊಗೆದಖಂಡವೇ ಇರವಾಗಿ,
ಬಯಲೆಲ್ಲ ಬೆಳಗಾಗಿ ಬಯಲಾಚೆ ಬೆಳಗಿದರೆ
ನಿರವಲಯ ನಿಜ ನಿರಾಳವೆ ನಿನ್ನನಿಲವಾಗಿ ನಿಂದಿರ್ದರೇನಮ್ಮ?-
ಜಗಕರ್ಥವೇನು"

ಇಂತಹದೇ ಇನ್ನೊಂದು ಉದಾಹರಣೆ ನೋಡಿ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

4) "ಇರುವುದೊಂದೇ ಊರು "ಮಣ್ಣೂರು"
ಇರುವುದೊಂದೇ ಗ್ರಾಮ "ಭೂತಗ್ರಾಮ"
ಮಾನವನಕುಲಕೋಟಿ ಒಂದೆ ಕೋಟಿ;
ಕೋಟಿಮನ ಕೋಟಿ ಬುದ್ಧಿಗಳ ತೆರೆದು
ಈ ಜಾತಿಪ್ರಾಣಗಳ ಕೋಟಿ ಎದೆಯನು ಬಿಚ್ಚಿ,
ಕೋಟಿ ದೇಹದ ಕೋಟಿ ಪ್ರಾಣಗಳ ಮುಸುಕ-
ನೋಸರಿಸಿ, ಒಳಗಿಳಿದು ನೋಡಿದರೆ, ನೋಡಿದರೆ,
ಮಾನವನ ಊರು ಒಂದೂರು, ಒಂದು ಬಾಳುವೆ, ಬದುಕು--"

ದ್ವೇಷಕ್ಕೆ ಹೇಗೆ ಕುಲಜಾತಿಗಳಿಲ್ಲವೋ ಪ್ರೀತಿಗೂ ಹಾಗೆಯೇ ಕುಲಜಾತಿಗಳಿಲ್ಲ. ವೈರವೊಂದು ರೋಗವಾಗಿ ಉಲ್ಬಣಿಸುತ್ತಲಿದೆ; ಈ ರೋಗಕ್ಕೆ ಪ್ರೀತಿಯೇ ಮದ್ದು. ಜೀವಾತ್ಮರೊಳು ಶಿವನಿದ್ದಾನೆಂಬ ತತ್ವ ಪ್ರಸಾರದ ಉದ್ದೇಶವನ್ನು ಕವಿ ಸಾಧಿಸಿದ್ದಾನೆ ಇಲ್ಲಿ. 'ಬ್ರಹಸೃಷ್ಟಿಯೊಳೊಂದು ಸಸಿಯನುಲುಕಿದರೆ ಅಲುಗಿದ್ದ ಬ್ರಹ್ಮ- ಲಿಂಗಕ್ಕೆ ನೋವು'- ಎಂಬ ಶರಣರ ತಾತ್ವಿಕ ನಿಲುವಿನಿಂದ ಕವಿ ಪ್ರೇರಣೆ ಪಡೆದಿದ್ದಾರೆ.

5) ಕವಿಯ ಹೃದಯ, ಭಾರತೀಯ ಸತ್ಪರಂಪರೆಗೆ ಮಾರು ಹೋಗಿ, ಅಂತಹ ಧೀಮಂತ ಸಂಸ್ಕೃತಿಯನ್ನು ಮರೆತು ಕತ್ತಲೆಯ ಕೂಪದೊಳು ಮುಳುಗಿರುವ ಮಾನವನಿಗೆ 'ಅರಿವಿನ ಆಳಕ್ಕೆ ಇಳಿದು, ಮನುಕುಲವ ಸಮಸ್ತ ಸೃಷ್ಟಿಯ ನೋಡಬೇಕೆಂಬ ಉಪದೇಶವ ನೀಡುವ ಹಿನ್ನೆಲೆಯಲ್ಲಿ ಈ ಕಾವ್ಯಸೃಷ್ಟಿಯಾಗಿದೆ. ಒಂದು ದೃಷ್ಟಿಯಿಂದ ಈ ಕಾವ್ಯ ಮಾನವವಿಕಾಸದ ಕಥೆಯನ್ನು, ಸಮಕಾಲೀನ ಕವಿಪ್ರಜ್ಞೆಯನ್ನು ಪ್ರತಿನಿಧಿಸುತ್ತದೆನ್ನಬಹುದು". ಕತ್ತಲೆಯ ಕಾಂಡದಲ್ಲಿ ಇದರ ವಿವರಗಳೆಲ್ಲವೂ ನಿರೂಪಿತವಾಗಿವೆ.

"ಒಬ್ಬೊಬ್ಬ ಜಿನ ಬುದ್ಧ ತತ್ವದೃಷ್ಟಾರ
ಋಷಿವರ್ಯ ಅನುಭಾವಿ ಮನುಮುನೀಶ್ವರರು,
ಒಬ್ಬ ವಾಲ್ಮೀಕಿ-ವೇದವ್ಯಾಸನೊಬ್ಬ,
ನೆಲವ ಭೇಧಿಸಿ ನೆಲದಕುಲದೊಳೊಡೆದು
ಮೂಡಿ ಬರುವರ, ಮೂಡಿ ನೆಲದ ಕುಲಕ್ಕೆಲ್ಲ
ಬೆಳಗುವ ಮಹಾ ದಿವ್ಯನಿಧಿನಿಧಾನವ ತರಲು
ಭೂದೇವಿ ಪಾಪೇಷುಕೋಟಿ ತಪಿಸಿರಬಹುದು?"

(ಭವ್ಯಮಾನವ, ಪುಟ-405)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ದುಃಖಸಾಗರದಿಂದಲೇ ಅನೇಕ ಮಹಾಂತರು ಒಡಮೂಡಿದ್ದಾರೆಂಬುದನ್ನು ಕವಿ ಅರಿತಿದ್ದಾರೆ; ಅದನ್ನಿಲ್ಲಿ ಚಿತ್ತರಿಸಿದ್ದಾರೆ. ಭಾರತೀಯರ ಮಹಾಲೋಪಗಳೊಂದಿಗೆ ಮಹಾಸತ್ವರಂಪರೆಯ ಭವ್ಯ ಚಿತ್ರವನ್ನು ಕಂಡ ಕವಿ, ಇದು 'ದೈವಲೀಲೆ' ಯೆಂದರಿತು, 'ಬದುಕು ದೈವದ ಲೀಲಾ ವಿಲಾಸ!' ವೆಂಬುದರ ಅಭಿಪ್ರಾಯಗಳಿಗೆ ಶರಣುಹೋಗಿದ್ದಾನೆ. ಭಾರತದ ಅನೇಕ ಧರ್ಮಗಳು, ದೃಷ್ಟಾರರು, ಕವಿಗಳು, ಸಂತರು ಕವಿ ಭೂಸನೂರಮಠ ಅವರ ಮೇಲೆ ದಟ್ಟವಾದ ಪ್ರಭಾವ ಬೀರಿರುವುದಲ್ಲದೆ, ಶರಣಸಾಹಿತ್ಯ, ವಚನಸಾಹಿತ್ಯ ಸಾಗರದಲ್ಲಿ ಮುಳುಗಿ ಅಲ್ಲಿಂದ ಅನೇಕ ಸುಪ್ರಾಣಿ ಮುತ್ತುಗಳನ್ನು ಆಯ್ದು ತಂದು ಮುತ್ತಿನ ಹಾರ ಮಾಡಿದ್ದಾರೆ. ಈ ಕಾವ್ಯದಲ್ಲಿ, ಶರಣರ ಬದುಕಿನ ಅನುಭವ ಹೊಸರೂಪಗೊಂಡು ಮೂರ್ತಿವೆತ್ತಿದೆ.

"ನಾನು ಮಾನವ ಮೊಗ್ಗು ಹೂ ಬಿರಿದು ತೋರಿದರೆ
ಕಂಡಿತ್ತು ಮಾನವನ ದಿವ್ಯಾದ್ಭುತ"-

ಎಂಬ ದಿವ್ಯವಾಣಿ, ಮಾನವ ಜನ್ಮ ಸಾಧಿಸಬೇಕಾದುದರ ಮಹತ್ತಾದ ಗುರಿ ಎನ್ನಬೇಕು. ಈ 'ನಾನು' ಮಾನವ ಪ್ರಕೃತಿಯ ಕೂಸು ಎಂಬುದನ್ನು ಅರಿತು ನಡೆಯಬೇಕು. ಅನುಭಾವಿಗಳ ಹಾದಿಯೇ ಬೆಳಕಿನತ್ತ ಕೊಂಡೊಯ್ಯುವ ಸಾಧನೆ. ಉಳಿ ಮುಟ್ಟದಾ ಜನುಮ ಕಳೆಗೊಳ್ಳಬಲ್ಲುದೇ? ಬಾಣ ಸತ್ತಿಗೆಯಿಲ್ಲ, ಕಡಿಹಬಡಿಹಗಳಿಲ್ಲ. ತಿದ್ದುತೀಡಿಕೆಯಿಲ್ಲ ಕುಟ್ಟು ಹಿಸುಕುಗಳಿಲ್ಲ; ಮೂರುತಿಯ ಕಳೆಕಾಂತಿ ತೋರಬಲ್ಲುದೇ? ಮಾನವನೊಳೊಡೆದು ಶಿವಮಾನವನು ಏಳುವರೆಃ ದುಃಖಬೇಕೆಲೆ ಮಗನೆ" ಎನ್ನುವ ಬದುಕಿನ ಅನುಭವ, ಇವೆಲ್ಲ ಕಾವ್ಯಾಂತರ್ಗತವಾಗಿ ಓದುಗನಿಗೆ ಆನಂದ, ಸಂತಸ ನೀಡುತ್ತವೆ.

ಈ ಶತಮಾನದಲ್ಲೊಂದು ವಿಶ್ವಮಾನವ ಮಹಾಕಾವ್ಯ ನೀಡಿ, ಶತಮಾನಕ್ಕೇ ಭರತವಾಕ್ಯವ ಹಾಡಿದ ಈ ಕವಿಗೆ ನಮೋ ನಮೋ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' ದ ತಾತ್ವಿಕ ನಿಲುವು

ಬಿ. ವಿ. ಮಲ್ಲಾಪೂರ

1

ವೇದಪೂರ್ವಯುಗ, ವೇದಯುಗದಿಂದ ಮೊದಲುಗೊಂಡು ಹನ್ನೆರಡನೆಯ ಶತಮಾನದವರೆಗೆ ತತ್ವಚಿಂತನೆ ಅವ್ಯಾಹತವಾಗಿ ಸಾಗಿ ಬಂದಿದೆ. (ಹನ್ನೆರಡನೆಯ ಶತಮಾನದ ಅನಂತರವೂ ಇಂದಿನವರೆಗೆ ತಾತ್ವಿಕ ಚಿಂತನೆ ಮುಂದುವರೆದುಕೊಂಡು ಬಂದಿದೆ. ಹೊಸ ಹೊಸ ಪಂಥಗಳು ಹುಟ್ಟಿಕೊಂಡಿವೆ, ಹುಟ್ಟಿಕೊಳ್ಳುತ್ತಿವೆ. ಅದೊಂದು ನಿರಂತರ ಪ್ರವಾಹ. 'ಭವ್ಯಮಾನವ' ಕೃತಿಯ ತಾತ್ವಿಕ ನಿಲುವಿನ ಪರಿಶೀಲನೆಗೆ, ಹನ್ನೆರಡನೆಯ ಶತಮಾನದವರೆಗಿನ ತಾತ್ವಿಕ ಚಿಂತನೆಯ ಹಂತಗಳು ಮುಖ್ಯವೆಂಬ ಕಾರಣದಿಂದ, ಅಲ್ಲಿಗೇ ನಿಲ್ಲಿಸಲಾಗಿದೆ.- 'ಭವ್ಯಮಾನವ' ಪುಟ : 12 ಮತ್ತು 13) ಈ ಹಿನ್ನೆಲೆಯಲ್ಲಿ, ಪ್ರೊ. ಸಂ. ಶಿ. ಭೂಸನೂರಮಠ ಅವರ ಪ್ರಸ್ತುತ ಕೃತಿ 'ಭವ್ಯಮಾನವ'ದ ತಾತ್ವಿಕ ನಿಲುವನ್ನು ಕುರಿತ ಚಿಂತನೆ.

'ಭವ್ಯ ಮಾನವ' ಮಹಾಕಾವ್ಯವನ್ನು ಆಮೂಲಾಗ್ರ ಓದಿದಾಗ, ಬಸವಾದಿ ಶರಣರ ತಾತ್ವಿಕ ನಿಲುವೇ ಇಲ್ಲಿ ಬಹುಮಟ್ಟಿಗೆ ಪ್ರತಿಪಾದನೆಗೊಂಡಿರುವುದು ಕಂಡು ಬರುತ್ತದೆ. ಕಾವ್ಯದುದ್ದಕ್ಕೂ ಬೇರೆ ಬೇರೆ ಪಾತ್ರಗಳ ಮೂಲಕ ಬಂದಿರುವ ತತ್ವನಿರೂಪಣೆಯಲ್ಲಿ ಶರಣರ ವಚನಗಳನ್ನೇ ಸ್ವಲ್ಪ ಮಾರ್ಪಾಡಿನೊಂದಿಗೆ ಹೆಚ್ಚಾಗಿ ಉದ್ಧರಿಸುತ್ತ ಹೋಗಿರುವುದು ಈ ಮಾತಿಗೆ ಪುಷ್ಟಿಯನ್ನೀಯುತ್ತದೆ. 'ಭವ್ಯಮಾನವ' ಕೃತಿಗೆ ಮುನ್ನುಡಿಯಂತಿರುವ 'ಮಾನವನೊಳಗೆ ಪ್ರವೇಶ-ನಿಮ್ಮೊಡನೆ' ಎಂಬ ಭಾಗದಲ್ಲಿ, (ಭ. ಮಾ. ಪುಟ : 12-13) ಕೃತಿಕಾರ ಶ್ರೀ ಭೂಸನೂರಮಠ ಅವರು, ವೇದ- ಬ್ರಾಹ್ಮಣಗಳ ಕಾಲದಿಂದಲೂ ಮಾನವ ಕುಲ ತತ್ವಜಿಜ್ಞಾಸೆಗೆ ತೊಡಗಿರುವುದನ್ನೂ ಕ್ರಮೇಣ ಅದು ಬೆಳೆಯುತ್ತ ಬಂದಿರುವುದನ್ನೂ ವಿವರಿಸುತ್ತ "ಜ್ಞಾನಕ್ಕೆ ಜ್ಞಾನ, ಯೋಗಕ್ಕೆ ಯೋಗ, ಭಕ್ತಿಗೆ- ಭಕ್ತಿ, ಕರ್ಮಕ್ಕೆ ಕ್ರಿಯಾಚರಣೆ ಕುಡಿಯಿಡುತ್ತ ಬಂದಿಲ್ಲವೆ? ಯಜ್ಞ-ಯಾಗ, ಹೋಮ- ಹವನ, ಆ ದೇವರು ಈ ದಿಂಡರು, ಆ ತಪ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಜಪ, ಮಂತ್ರಗಳ ಪುರಾತನ ಬಂಧನವನ್ನು ಬಿಡಿಸಿಕೊಂಡು ಸರ್ವಸ್ವತಂತ್ರ ಮೂರ್ತಿಗಳಾಗಿ ಬ್ರಹ್ಮದತ್ತರವನ್ನು 'ಅಯಮಾತ್ಮಾಬ್ರಹ್ಮ'ಕ್ಕೆ ಹವಣು ಮಾಡಿಕೊಟ್ಟಿಲ್ಲವೆ ಉಪನಿಷತ್ ದ್ರಷ್ಟಾರರು, ಕಶ್ಚಿದ್‌ಧೀರರು, ಕ್ವಚಿತ್ ಸಾಹಸಿಗಳು?'' ಎಂದು ಹೇಳಿ ಹಾಗೆಯೇ ಮುಂದುವರಿದು ''ಅತ್ಯಂತ ಪುರಾತನ ಕಾಲದ ಶೈವಾಗಮಗಳನ್ನು ಮೂಲಾಧಾರ ಮಾಡಿಕೊಂಡು, ಹಿಂದಿನ ಜೀವನಧರ್ಮವಿಜ್ಞಾನಿಗಳ ಅನುಭವಗಳ ಕುಂದುಕೊರತೆಗಳನ್ನು ಗುರುತಿಟ್ಟುಕೊಂಡು, ಅವರೆಲ್ಲರ ಸಾರಸತ್ವವನ್ನು ಬಳಸಿಕೊಂಡು ಕೋಟಿಕಾಲದ ಕತ್ತಲೆಯ ಮಾನವಕುಲವನ್ನು ಸಕಲಬಂಧನಗಳಿಂದ ಮುಕ್ತಮಾಡಿ, ನೆಲದ ಮರೆಯ ನಿಧಾನದಂತಿದ್ದ ಬ್ರಹ್ಮ ಬೀಜವನ್ನು ಮಾನವ ಕ್ಷೇತ್ರದಲ್ಲಿ ಬಗಿದು, ಬಿತ್ತಿ ದಿವ್ಯ ಮಾನವದ ಹುಲುಸಾದ ಬೆಳೆಯನ್ನು ಬೆಳೆಸಲು ಹವಣಿಸಿದರು- ಹನ್ನೆರಡನೆಯ ಶತಮಾನದ ಕಲ್ಯಾಣದ ಅಸಂಖ್ಯಾತ ಅನುಭಾವಿಗಳು. ಪುರಾತನ ಮಾನವದ ಸಾರಾಂಶವಾದ ಇವರ ಮಹಾಜೀವನದ ರೀತಿ, ಮಾನವನಲ್ಲಿ ಹುದುಗಿರುವ ಬ್ರಹ್ಮಮಾನವದ ಭವ್ಯಕ್ಕೆ ಇವರು ಕಟ್ಟಿದ ಮಾರ್ಗ ಅಥವಾ 'ನಿರ್ಮಾರ್ಗ' ಬಲವಾಗಿ ಮನಸೆಳೆಯಿತು ನನ್ನ'' ಎಂದು ಸ್ವತಃ ಅವರೇ ಹೇಳಿರುವುದನ್ನು ಗಮನಿಸಬೇಕು.

ಮುನ್ನುಡಿಯಲ್ಲಿಯೆ ಅವರು ಮತ್ತೊಂದೆಡೆ ''ಸಂತಃ ಪರೀಕ್ಷ್ಯ ಅನ್ಯತರದ್ ಭಜಂತೆ- ಎಂಬ ಮಾತು ಎಂದಿಗೂ ಎಲ್ಲಿಯೂ ಹೊಳೆದಾಡುತ್ತಿದೆ ನನ್ನ ಹೃದಯಾಂತರಾಳದಲ್ಲಿ. ಅವರವರ ಪ್ರಕೃತಿಯ ಗುಣಧರ್ಮದಂತೆ ಅವರವರ ಸ್ವ-ಭಾವ, ಸ್ವ-ಧರ್ಮ, ಸ್ವ-ಅನುಭಾವದ ಸ್ವಯಂ ಮಾರ್ಗವನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಈ ಸ್ವಾತಂತ್ರ್ಯವನ್ನು ನಾನೂ ಕಳೆದುಕೊಂಡಿಲ್ಲ- ಒಂದು ಕಾಲದ ಅನುಭವೋಜ್ವಲದ ವ್ಯಾಮೋಹದಿಂದ, ಶರಣರ ಬೂದಿಯೊಳಗಿಂದ ಹೊಸ ಶರಣರು ಮೂಡಬಾರದೇಕೆ? ಒಂದು ಕಾಲದ ಅನುಭಾವ ಮುಂದುಮುಂದಕ್ಕೆ ಕುಡಿಯಿಟ್ಟು ಹಬ್ಬಿ ಇನ್ನೂ ಬ್ರಹ್ಮಭವ್ಯದ ವಿಸ್ತಾರಕ್ಕೆ ಹರವಬಾರದೇಕೆ?'' ಎಂದು ಹೇಳಿರುವುದೂ ಉಂಟು. (ಭ. ಮಾ. ಪುಟ- 13) ಶರಣ ಪ್ರತಿಪಾದಿತ ತತ್ವಗಳನ್ನು ಸ್ವತಂತ್ರರೀತಿಯಲ್ಲಿ- ಪ್ರಪಂಚದ ಮತ್ತು ಭಾರತದ ಇತರ ಅನುಭಾವಿಗಳ ಅನುಭಾವದ ಹಿನ್ನೆಲೆಯಲ್ಲಿ- ಲೇಖಕರು ಆಲೋಚನೆಗೆ ಗುರಿಪಡಿಸಿ ತತ್ಫಲವಾಗಿ ಹೊಳೆದುದನ್ನು ತಮ್ಮ 'ಭವ್ಯಮಾನವ' ಕಾವ್ಯದಲ್ಲಿ ಎರಕಹೊಯ್ದುದರ ಸೂಚನೆಯಿದಾಗಿದೆಯೆಂದು ನನ್ನ ಅನಿಸಿಕೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಾದಿ ಶರಣರು ಸಕಲಜೀವಾತ್ಮರ ಲೇಸಿಗಾಗಿ ಪ್ರತಿಪಾದಿಸಿದ ತತ್ವಗಳೇ 'ಭವ್ಯಮಾನವ' ಕಾವ್ಯಕ್ಕೆ ಮೂಲ ಆಕರವಾಗಿದ್ದರೂ, ವಾಲ್ಮೀಕಿಯ 'ರಾಮಾಯಣ' ರಾಷ್ಟ್ರಕವಿ ಕುವೆಂಪು ಅವರ ಗಂಭೀರ ಆಲೋಚನೆ ಮತ್ತು ಸೂಕ್ಷ್ಮ ವೈಚಾರಿಕತೆಯ ಫಲವಾಗಿ 'ರಾಮಾಯಣ ದರ್ಶನಂ' ಆಗಿ ಹೊಸಹುಟ್ಟು ಪಡೆದಂತೆ, ಪ್ರೊ. ಭೂಸನೂರಮಠ ಅವರ ಗಾಢ ಮತ್ತು ತೀಕ್ಷ್ಣ ತತ್ವಾವಲೋಕನದ ಫಲವಾಗಿ ಬಸವಾದಿ ಪ್ರಮಥರ ತತ್ವಗಳು, ಅಕ್ಕಮಹಾದೇವಿಯ ಕಥೆಯ ಮೂಲಕ ಒಂದು ಬಗೆಯ ಹೊಸ ರೂಪ, ಹೊಸ ಆಯಾಮ, ಹೊಸ ವಚೋವಿನ್ಯಾಸ ಪಡೆದು ವಚನ ತತ್ವದ ದರ್ಶನವಾಗಿ 'ಭವ್ಯಮಾನವ' ರೂಪದಲ್ಲಿ ಆವಿರ್ಭವಿಸಿವೆ.

'ಭವ್ಯಮಾನವ' ಕೃತಿಯ ರಚನಾವಿನ್ಯಾಸ ಕೆಲಮಟ್ಟಿಗೆ 'ಶೂನ್ಯಸಂಪಾದನೆ' ಗ್ರಂಥವನ್ನು ನೆನಪಿಗೆ ತರುವುದಾದರೂ, ಅಲ್ಲಿಯಷ್ಟು ಶರಣರು ಇಲ್ಲಿಲ್ಲ. ಮೊದಲ 'ಕಲ್ಯಾಣಕಾಂಡ'ವೊಂದನ್ನು ಬಿಟ್ಟರೆ, ಉಳಿದೈದು ಕಾಂಡಗಳುದ್ದಕ್ಕೂ ತತ್ವಪ್ರತಿಪಾದನೆಯಲ್ಲಿ ಹೆಚ್ಚಾಗಿ ಪಾಲುಗೊಳ್ಳುವವರು ಇಬ್ಬರೇ, ಮಹಾದೇವಿಯಕ್ಕ ಮತ್ತು ಗುರು ಚೆನ್ನಮಲ್ಲ. ಗಿರಿಮಲ್ಲ ಅಲ್ಲಿರುವನಾದರೂ, ಅಕ್ಕಮಹಾದೇವಿ ಹಾಗೂ ಗುರುಚೆನ್ನಮಲ್ಲರು ಪ್ರಸ್ತಾಪಿಸುವ ಗಹನ ತಾತ್ವಿಕ ವಿಷಯಗಳು ತನ್ನ ತಲೆಗೆ ಹತ್ತದೆ ಹೋದಾಗ, ಮತ್ತು ಅವರು ಪ್ರತಿಪಾದಿಸುವ ತತ್ವಗಳ ಅನುಷ್ಠಾನ ಬಹುಜನಕ್ಕೆ ಸಾಧ್ಯವೆ? ಎಂಬ ಸಂಶಯ ತಲೆದೋರಿದಾಗ ಮಾತ್ರ ಆ ಬಗ್ಗೆ ಅರ್ಥಪೂರ್ಣವಾಗಿ ಪ್ರಶ್ನಿಸುವ ಕೆಲಸ ಅವನದು. ಅಂತರ್ವಾಣಿ ತಂತ್ರವನ್ನು ಅಲ್ಲಲ್ಲಿ ಬಳಸಲಾಗಿದೆ. ಈ ಬಗೆಯ ತಂತ್ರದಿಂದಾಗಿ ತತ್ವವಿವೇಚನೆ, ಕ್ಲಿಷ್ಟತೆ ಮತ್ತು ಸಂದಿಗ್ಧತೆಗಳನ್ನು ಬಹುಮಟ್ಟಿಗೆ ಕಳಚಿಕೊಂಡು, ಸರಳತೆ ಹಾಗೂ ಸ್ಪಷ್ಟತೆಗಳನ್ನು ಮೈಗೂಡಿಸಿಕೊಳ್ಳುತ್ತ ಮುಂದುವರಿದಿದೆ. ಅದಕ್ಕೆ ಕಾವ್ಯಸಂಸ್ಪರ್ಶವೂ ಒದಗಿ ಬಂದುದರ ಫಲವಾಗಿ ತತ್ವವಿವೇಚನೆಗೆ ಒಂದು ರೀತಿಯ ಆತ್ಮೀಯ ವಚೋವಿನ್ಯಾಸವುಂಟಾಗಿದೆ.

''ಭವ್ಯಮಾನವ'' ಕೃತಿಗೆ ಲೇಖಕರೇ ಹೇಳುವಂತೆ ಮಹಾದೇವಿಯಕ್ಕನೇ ಮೂಲ ಪೀಠಿಕೆಯಾದರೂ ಅವಳ ಚರಿತೇತಿಹಾಸದ ಮುಖ್ಯ ಘಟನೆಗಳೆಲ್ಲ ಮೊದಲನೆಯ 'ಕಲ್ಯಾಣಕಾಂಡ'ದಲ್ಲಿಯೆ ಮುಗಿದು ಹೋಗುತ್ತವೆ. ಅನುಭವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂಟಪದ ಶರಣ- ಶರಣೆಯರಿಂದ ಬೀಳ್ಕೊಂಡು, ಪ್ರಭುದೇವನ ಸೂಚನೆಯಂತೆ ಶ್ರೀಶೈಲದತ್ತ ನಡೆದ ಮಹಾದೇವಿ, ಹಾದಿಯಲ್ಲಿ ಗುರುಚೆನ್ನಮಲ್ಲ ಮತ್ತು ಅವರ ಶಿಷ್ಯ ಗಿರಿಮಲ್ಲರನ್ನು ಕಾಣುತ್ತಾಳೆ. ಗುರುಚೆನ್ನಮಲ್ಲಯ್ಯನ ಪೂರ್ವಸಾಂಗತ್ಯದೊಡನೆ ಆರಂಭವಾಗುವ 'ಶ್ರೀಶೈಲಕಾಂಡ' ತದನಂತರ 'ಕತ್ತಲೆಯ ಕಾಂಡ' 'ಉದಯಕಾಂಡ' 'ಉಜ್ವಲಕಾಂಡ' ಮತ್ತು 'ಭವ್ಯಕಾಂಡ'- ಇವೆಲ್ಲ ಸಂಪೂರ್ಣ ತತ್ವವಿವೇಚನೆಗೆ ಮೀಸಲಾಗಿವೆ. ಮಧ್ಯದಲ್ಲಿ ಕಥೆಗಳು ಬರುತ್ತವಾದರೂ ಅವು ತತ್ವಾರ್ಥ ಸ್ಪಷ್ಟನೆಗೆ ಪೂರಕವಾದವುಗಳು. ಈ ಕಾಂಡಗಳಲ್ಲಿ ''ಪ್ರಪಂಚದ, ಭಾರತದ ಮತ್ತು ಅನುಭಾವಿಗಳ ದಿವ್ಯಾನುಭವದ ಬೆಂಬಳಿವಿಡಿದು'' ನಡೆದ ಕೃತಿಕಾರರು ಅಲ್ಲಿ ತಾವು ಕಂಡು ಅರಗಿಸಿಕೊಂಡುದುದನ್ನು, ತಮ್ಮ ಕಾವ್ಯಾನುಭವದ ಮೂಸೆಯಲ್ಲಿ ಕರಗಿಸಿ ಎರಕಹೊಯ್ದಿದ್ದಾರೆ. ಕತ್ತಲೆಯಲ್ಲಿ ತೊಳಲುತ್ತಿರುವ ಮಾನವನಲ್ಲಿ ಹುದುಗಿರುವ 'ಭವ್ಯಗಂಭೀರ', ಗುರುಕೃಪೆಯಿಂದ ಮೆಲ್ಲಮೆಲ್ಲನೆ ಬಿಚ್ಚಿಕೊಳ್ಳುತ್ತ, ಬೆಳೆಯುತ್ತ ಹೋದಂತೆ, 'ಮಾನವಸ್ಥಲ' ಹಂತಹಂತವಾಗಿ 'ಭವ್ಯಮಾನವಸ್ಥಲ'ಕ್ಕೇರುವ ಅನಂತವಿಸ್ತಾರದ ಕಥೆ ಮಹಾದೇವಿಯಕ್ಕ- ಗುರುಚೆನ್ನಮಲ್ಲ ಮತ್ತು ಗಿರಿಮಲ್ಲರ ವಾದ- ಸಂವಾದ- ಸಂಭಾಷಣೆಯ ರೂಪದಲ್ಲಿ ಈ ಅಯ್ದು ಕಾಂಡಗಳುದ್ದಕ್ಕೂ ಹರವಿ ನಿಂದಿದೆ. ಆದುದರಿಂದ ಈ ಮಹತ್ಕೃತಿಯಲ್ಲಿರುವುದು ಒಂದರ್ಥದಲ್ಲಿ ನಮ್ಮ ನಿಮ್ಮೆಲ್ಲರ ಕಥೆ, ಮಾನವನ ಮಹಾಪ್ರಸ್ಥಾನದ ಕಥೆ. ಸ್ವತಃ ಗ್ರಂಥಕರ್ತರೆ ''ಸಕೃದ್ದರ್ಶನಕ್ಕೆ 'ಭವ್ಯಮಾನವ' ಕಾವ್ಯದ ಕಥಾನಾಯಿಕೆ ಮಹಾದೇವಿಯಕ್ಕನೆಂದು ತೋರಬಹುದು. ಆದರೆ ಕಾವ್ಯದೊಳಗೆ ಪ್ರವೇಶಮಾಡಿ ಆಪೂರ್ಣವಾಗಿ ಅದನ್ನು ಓದಿದರೆ ಮಾನವನೆ ಕಾವ್ಯದ ಮಹಾನಾಯಕನೆಂಬ ಮಾತು ತಾನೆ ಮನವರಿಕೆಯಾಗುತ್ತದೆ...... ... ಮಲಗಿದ ಮಾನವನ ವಿಷಯಸಂಸಾರ, ಹಗಲುಗತ್ತಲೆಯ ದ್ವೈತ ಪ್ರಪಂಚ, 'ಮತ್ತೆ ಎಚ್ಚತ್ತ ಮಾನವನ ಲಿಂಗಗಂಭೀರದ ಬ್ರಹ್ಮ ವಿಸ್ತಾರಗಳೇ ಕಾವ್ಯದ ಕಥಾ ವಸ್ತು''- (ಭ. ಮಾ. ಪುಟ-13) ಎಂದು ಅದನ್ನು ಸ್ಪಷ್ಟ ಪಡಿಸಿದ್ದಾರೆ.

2

ನಾವು ನೀವೆಲ್ಲ ತಿಳಿದಿರುವ, ಕಂಡಿರುವ, ಹಾಗೂ ಈಗ ಕಾಣುತ್ತಿರುವ ಮಾನವ ಜೀವನದ ವಿವರಣೆ ಹಾಗೂ ಹಿನ್ನಲೆಯೊಂದಿಗೆ 'ಭವ್ಯಮಾನವ' ಕಾವ್ಯ ತಾತ್ವಿಕ ವಿವೇಚನೆಗೆ ತೊಡಗುತ್ತದೆ. ಇದು 'ಕಂಡದುದರಿಂದ ಕಾಣದುದರತ್ತ ಸಾಗುವ' ವಿಧಾನ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಲೇ ಚಪ್ಪರ, ನೆಲವೇ ನೆಲಗಟ್ಟು, ನಕ್ಷತ್ರಕೋಟಿಗಳೇ ಉರಿವದೀಪ, ಸೂರ್ಯ-ಚಂದ್ರರೆ ಹಣತೆ, ಕೈದೀವಿಗೆ, ಕೆರ-ತೊರೆ ಸಮುದ್ರಗಳೆ ಕುಡಿವ ನೀರದೋಣಿ, ತರುಮರಾದಿಗಳೆ ಆಹಾರ ಒದಗಿಸುವ ಸಾಧನ, ಪಶು-ಪಕ್ಷಿ- ಜಲಚರಗಳೇ ಭಕ್ಷ್ಯ- ಭೋಜನವಾಗಿರಲು ವಿಶ್ವವಿಶಾಲ ಜಗದಮನೆಯಲ್ಲಿ ತನ್ನ ಬಾಳನ್ನು ಆರಂಭಿಸಿದ ಗಂಡು- ಹೆಣ್ಣುರೂಪದ ಈ ಮಾನವ ಕಾಲ ಕಳೆದಂತೆ 'ನಾನು' 'ನನ್ನದು' 'ನನಗೆ' ಎಂಬ 'ಅಹಂ' ಮತ್ತು ಸ್ವಾರ್ಥಕ್ಕೆ ಒಳಗಾಗಿ ವಿಸ್ತಾರವಾದ ಇಳೆಯನ್ನು ಮನೆ- ಮಾರು, ಮಠ- ಮಾನ್ಯ, ಹಳ್ಳಿ- ಪಟ್ಟಣ, ದೇಶ- ಕೋಶ ಮುಂತಾಗಿ ವಿಭಾಗಿಸಕೊಂಡು, ಅರಸಾಗಿ ಆಳಾಗಿ ಭೂಸುರ, ಕ್ಷತ್ರಿಯ ವೈಶ್ಯ ಶೂದ್ರರೆಂಬ ಹಲವು ಹತ್ತು ಜಾತಿಗಳಿಗೆ ಹುಟ್ಟುಹಾಕಿ ನಡೆಸಿರುವ ಕರಾಮತ್ತಿನ ಅದ್ಭುತ ಚಿತ್ರಣ 'ಭವ್ಯಮಾನವ' ಕಾವ್ಯದಲ್ಲಿ ಬಹಳ ಆಕರ್ಷಕವಾಗಿದೆ;

''ಆಕಾಶವನು ಓದಿ ನಕ್ಷತ್ರಗಳ ಎಣಿಸಿ
ವಾಯುಮಂಡಲವೇರಿ ದಿಗ್‌ದಿಗಂತವಕಂಡು
ಸಾಗರವ ದಾಂಟ ಭೂಮಿಯ ಸುತ್ತಿಬಂದು
ಮಳೆಗಾಳಿ ಮಿಂಚು ಸಿಡಿಲಿನ ಕಾರ್ಮೋಡಗಳ
ಮಂತ್ರ ಯಂತ್ರವ ಮಾಡಿ ಕಟ್ಟಿ ಬಿಗಿದಿಹನು.

ವೇದಗಳನೋದಿ ನಾದವ ಮಾಡಿ, ಬೆಂಕಿಯೊಳು ಹಾಲು ತುಪ್ಪವನೆರೆದು, ಪಶುಗಳನೆ ಬಲಿಕೊಟ್ಟು'' ದೇವತೆಗಳನ್ನೇ ತನ್ನ ಮನೆಗೆ ಆಹ್ವಾನಿಸುವ ಸತ್ವಶಾಲಿಯಾಗಿದ್ದಾನೆ. ಆ ಮಾನವ, ಹೊನ್ನು ರನ್ನದ ಸಿರಿ, ಹೆಣ್ಣು ಹೆಣ್ಣಿನ ರತಿಗೆ ಪಕ್ಕಾಗಿ, ಕಾಮ ಕ್ರೋಧ ವೀರ ರಾಗ ದ್ವೇಷಳ ಈ ಬಂಟ ಹೊಡೆದಾಡಿ ಬಡಿದಾಡಿ ತನ್ನ ಸಂತತಿಗೆ ತಾನೆ ಕಾಲ ಮೃತ್ಯುವಾಗಿ, ಕೊನೆಗೆ ತಾನೇ ಮೃತ್ಯುವಿಗೆ ತುತ್ತಾಗಿ ಹೋಗುತ್ತಿದ್ದಾನೆ.

''ಸತ್ತು ಹೆಣನಾದರೂ ವಾರ್ತೆ ಕೀರ್ತಿಯ ಸ್ವಪ್ನ
ಮಣ್ಣಾಗಿ ಹೋದರೂ ಪುಣ್ಯಸ್ವರ್ಗದ ವಾಸ
ಪಾಪವನು ಬಿತ್ತಿ ಪುಣ್ಯವ ಬೆಳಗುವೆನೆಂಬ
ರಾಗ- ದ್ವೇಷದ ಉರಿಗೆ ಎಣ್ಣೆಯಾಗುತೆ ತಾನೆ
ಲೋಕದುದ್ಧಾರ ತನ್ನುದ್ಧಾರವದ''-

ಎಂಬ ಹಮ್ಮನ್ನು ಮರೆಯುತ್ತ, ಭಕ್ತಿಯನ್ನು ಕತ್ತಲಿಸಿರುವ ಮಾನವನ ಅದ್ಭುತ ಚರಿತ್ರೆಯನ್ನು (ಭ. ಮಾ. ಪುಟ- 137-139) ಎಷ್ಟು ಬಣ್ಣಿಸಿದರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೇಖಕರಿಗೆ ತೃಪ್ತಿಯಿಲ್ಲ. ಭೂಮಿಯಲ್ಲಿ ಹುಟ್ಟಿ ಭೂಮಿಗಾಗಿ ಸತ್ತು, ಅನ್ನಚಕ್ರ, ಹೊನ್ನುಚಕ್ರ, ಮಣ್ಣುಚಕ್ರ, ಹೆಣ್ಣುಚಕ್ರ, ಸಂಸಾರಚಕ್ರ ಇತ್ಯಾದಿ ಚಕ್ರಗಳಿಗೆ ಸಿಲುಕಿ ತಿರ್ರನೆ ತಿರುಗುತ್ತಿರುವ ಮಾನವ ಪ್ರಾಣಿಯ ಪರಿಭ್ರಮಣದ ಕಥೆ, (ಭ. ಮಾ. ಪುಟ-170-171) ಅವನ ದೊಡ್ಡಾಟ ಸಣ್ಣಾಟಗಳ ಥಕತೋಂ ಧಿತ್ತೋಂ ಕುಣಿತದ ಆರ್ಭಟ, ಭಲೇ ಸಾರಥಿ ಎಂಬ ಕರ್ಕಶ ಕೂಗು- (ಭ. ಮಾ. ಪುಟ- 259) ಇವೆಲ್ಲದರ ನೋಟ ಈ ಕಾವ್ಯದಲ್ಲಿ ನಮಗೆ ಅನೇಕ ಕಡೆ ಕಾಣದೊರೆಯುತ್ತದೆ. 'ನಾನು- ಮಾನವ'ನ ಆಸೆ ಕುಡಿಯಿಟ್ಟು ಆಕಾಶದವರೆಗೂ ಹಬ್ಬುತ್ತ ಹೋದಂತೆ, ಸರ್ವನಾಶ ಹೂಂಕರಿಸಿ ಹರಿದುದರ ರುದ್ರಭೀಕರ ಚಿತ್ರಣವೂ ಇಲ್ಲಿದೆ.,(ಭ. ಮಾ. ಪುಟ- 466-480)

ಮಾನವನ ಈ ಬಗೆಯ ವಿಕಟಾಟ್ಟಹಾಸಕ್ಕೆ ಕಾರಣ, ಕೃತಿಕಾರರ ಪ್ರಕಾರ- ಅವನಿಗೆ ನಿಜದ ಅರಿವು ಇಲ್ಲದಿರುವುದು, ಅವನು ಕರಿತಲೆಯ ಮಾನವನಾಗಿರುವುದು, ಮತ್ತು ಅವನನ್ನು ಅಜ್ಞಾನತಮಂಧ ಒಳಗೂ ಹೊರಗೂ ಆವರಿಸಿರುವುದು. ಕತ್ತಲೆಯ ಕಡಲು ಮಾನವನ ಎದೆಯಾಳದಲ್ಲಷ್ಟೇ ಭೋರ್ಗರೆಯುತ್ತಿಲ್ಲ, ಜಗದ ಮಹಾಲೀಲಾರಂಗವನ್ನು ಹಡೆದ ವಿಶ್ವಶಕ್ತಿದೇವತೆ, ಆ ಮಹಾ ಪ್ರಕೃತಿಮಾತೆಯ ಉಡಿಯಲ್ಲಿ, ಮುಡಿಯಲ್ಲಿ ಕೂಡ ಕತ್ತಲೆ ತುಂಬಿದೆಯೆಂದು ಪ್ರೊ. ಭೂಸನೂರಮಠ ಅವರು ಹೇಳುತ್ತಾರೆ. ಅವಳನ್ನು ಸುತ್ತಿ ಮುತ್ತಿದ ಕತ್ತಲೆ ಅವಳಿಗೆ ದಿಕ್ಕುತಪ್ಪಿಸಿದೆ. ಅವಳು ಹಾಕಿದ ಕಣ್ಣಿ ಅವಳಿಗೇ ಮುಳುವಾಗಿದೆ, ಅವಳ ಕುತ್ತಿಗೆಗೆ ಉರುಲಾಗಿದೆ. ವಿಶ್ವಮಾತೆಗೆ ತನ್ನರಿವೇ ತನಗಿಲ್ಲದುದರ, ಅವಳನ್ನು ಮರುಹುಗತ್ತಲೆ ಸಂಪೂರ್ಣ ಆವರಿಸಿರುವ ವಿವರ 'ಭವ್ಯಮಾನವ' ಕೃತಿಯಲ್ಲಿ ತುಂಬಾ ಅರ್ಥವತ್ತಾಗಿ ಬಂದಿದೆ.- ಆಕಾಶದ ಕೋಟಿ ಕೋಟಿ ಕಂಗಳಿಗೆ ತಾವು ಬೆಳಕಾಗಿರುವ ಅರಿವು ಸೂರ್ಯಚಂದ್ರರಿಗಿಲ್ಲ, ವಾಯುದೇವನಿಗೆ ತನ್ನ ಪ್ರಾಣದ ಅರಿವು ಕುರುಹಿಲ್ಲ, ಹರಿವ ನೀರಿಗೆ ಪರಶಿವನ ಚಿದ್ರಸವೆ ತನ್ನ ನಿಜಮೂಲವೆಂಬ ತಿಳಿವಿಲ್ಲ, ಜೀವಕೋಟಿಗೆಲ್ಲ ತಾನು ಮೃತ್ತಿಕಾಪಿಂಡವಾಗಿರುವ ರಹಸ್ಯ ಪೃಥ್ವೀದೇವಿಗೆ ತಿಳಿದಿಲ್ಲ (ಪುಟ - 216-17) ಮುಂತಾಗಿ ಹೇಳಿರುವ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಈ ಕೃತಿಯ 'ಕತ್ತಲೆಯ ಕಾಂಡ' ದಲ್ಲಿ ಗುರುಚೆನ್ನಮಲ್ಲರು ಮಹಾದೇವಿಯಕ್ಕನಿಗೆ ಪಂಚಭೂತಗಳನ್ನಾವರಿಸಿರುವ ''ಮರವೆಯ ಮಹಾಂಧಕಾರದ ಕಾಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾತ್ರಿ'ಯ ಪರಿಚಯ ಮಾಡಿಸುವ ಸಂದರ್ಭದಲ್ಲಿ ಪೃಥಿವ್ಯಾದಿಗಳನ್ನು ಕುರಿತು ಹಾಕುವ ಒಂದೊಂದು ಪ್ರಶ್ನೆಯೂ ಅವುಗಳ ಅಜ್ಞಾನದ ಕತ್ತಲೆಗೆ ಹಿಡಿದ ಕನ್ನಡಿಯಂತಿದೆ. (ಪುಟ 228 ರಿಂದ 244) ಉದಾಹರಣೆಗಾಗಿ, ಬಯಲ ಬೆಳಗಿನಲ್ಲಿ ಕಣ್ಣಿಗೆ ಕಾಣಸದೆ ಸುಳಿದು ಬೀಸುತ್ತಿರುವ ವಾಯುವನ್ನುದ್ದೇಶಿಸಿ,

"ಬಯಲು ಹುಟ್ಟದ ಮುನ್ನ ನೀನೆಲ್ಲಿ ಹುದುಗಿರ್ದೆ
ಯಾವದೇವಿಯ ಸಂಗಮಾಡಿ ಎಲೆ ದೇವಾ --
ಹಡೆದ ದೇವನು ಯಾರು? ನೀನೆಂದು ಹುಟ್ಟಿದೆ?
....
ಆಕಾಶದೊಳು ನಿನ್ನ ಜನ್ಮತಿಥಿ ನಕ್ಷತ್ರ
ಉಲ್ಲೇಖವಾಗಿಹವೆ? ಯಾವ ಭಾಷೆ?
ಪ್ರಾಣಕೋಟಿಯ ಪ್ರಾಣಬ್ರಹ್ಮ ನೀನಾಗಿ!
ನಿನಗೆ ಪ್ರಾಣವನೂದಿ, ಪ್ರಾಣಚೇತನವಿತ್ತು
ಪ್ರಾಣವಂತನ ಮಾಡಿ ಹಡೆದಳೇ ತಾಯಿ?

(ಪುಟ 234, 35)

ಎಂದೂ, ಇದೇ ರೀತಿ ಆಕಾಶದೇವತೆಯನ್ನು ಕುರಿತು "ನಕ್ಷತ್ರ ಬ್ರಹ್ಮಾಂಡ ಪೃಥಿವಿಜಲವಾಯುಗಳು ನಿನ್ನ ಹರವಿನ ಬಯಲ ಮನೆಯೊಳಗೆ- ನೆಲಸಿರ್ದು ------- ಸಂಸರಿಸುತಿರುವ ಭಾವ ನಿನಗುಂಟೇನು? ಇವರಾರು? -------- ನಿನ್ನ ಗರ್ಭದೊಳೊಗೆದ ನಿನ್ನ ಸಂತತಿಯೇನು? ------------ ಯಾವ ನಂಟಿಲ್ಲದೆ ಹೇಗೆ ಬಾಳಿದಿರಿ?" ಎಂದೂ (ಪುಟ 229) ಹಾಗೆಯೇ ಭೂದೇವಿಯನ್ನು ಕುರಿತು "ಎಲೆ ದೇವಿ, ಎಲೆ ಭೂಮಿತಾಯ! ಕಂಬಗದ್ದುಗೆಯಿಲ್ಲ ಗೋಡೆ ತರ ಚಪ್ಪರದ ಹಂಗಿಲ್ಲ ಹರಿಯಿಲ್ಲ! ಬಯಲ ಹರವಿಗೆ ನೀಲಿ ಸುಟ್ಟ ಬಣ್ಣವ ಬಳಿದು! ಬತ್ತಿ ಎಣ್ಣೆಯ ಇಲ್ಲ. ಹಣತೆ ಮಾಡಗಳಿಲ್ಲ! ಕೋಟಿ ಲೆಕ್ಕದ ದೀಪ ಹಚ್ಚಿಟ್ಟು ಅಂತರದಿ! ಬಯಲ ಮನೆಯನು ಕಟ್ಟಿ ನಿನಗೆ ಕೊಟ್ಟವರಾರು?! ನೆಲಗಟ್ಟು ಆಧಾರವಿಲ್ಲದೀ ಮನೆಯ! ಬಯಲೊಳಗೆ ಜೋತಾಡಿ ನಿಂತು ತಿರುಗುತ್ತಿರುವ! ಇಂದ್ರ- ಜಾಲವ ನಿನಗೆ ಓದಿಸಿದರಾರು?" ಎಂದೂ (ಪುಟ-238), ಗುರುಚೆನ್ನಮಲ್ಲ ಕೇಳುತ್ತ ಹೋಗಿರುವುದನ್ನು ನೋಡಬಹುದು. ಅವನ ಒಂದೊಂದು ಪ್ರಶ್ನೆಯೂ ಇಲ್ಲಿ ಕಾವ್ಯಸಂಸ್ಪರ್ಶ ಪಡೆದು ಒಂದೊಂದು ಬಿಡಿ ಭಾವಗೀತೆಯಂತೆ ಆಹ್ಲಾದಕರವಾಗಿದೆ, ಚೇತೋಹಾರಿಯಾಗಿದೆ. ಆಧ್ಯಾತ್ಮ, ಕಾವ್ಯವಾಗಬಹುದೆಂಬುದಕ್ಕೆ ಕೃತಿಯ ಈ ಭಾಗ ಒಳ್ಳೆಯ ಉದಾಹರಣೆಯಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ನಿಜಮೂಲದ ಅರಿವಿಲ್ಲದ ಕಾರಣದಿಂದಾಗಿ, ಆಕಾಶಾದಿಗಳನ್ನು ತನ್ಮೂಲಕ ವಿಶ್ವಮಾತೆ, ಪ್ರಕೃತಿಮಾತೆಯನ್ನು ಕತ್ತಲೆಯಾವರಿಸಿದೆಯೆಂದು ಹೇಳಿರುವಲ್ಲಿ ಗ್ರಂಥಕರ್ತರ ವಿಶಿಷ್ಟ ಬಗೆಯ ತಾತ್ವಿಕ ನಿಲುವನ್ನು ಕಾಣಬಹುದು.

ಭೂತಪ್ರಪಂಚದ ಮಾತು ಹಾಗಿರಲಿ, ವಿಶ್ವಸೃಷ್ಟಿಯ ಉತ್ತುಂಗ ಶಿಖರದಂತಿರುವ ಮಾನವನ ಸ್ಥಿತಿಯೇನು? ದೇಹ ಕರಣ ಪ್ರಾಣ ಇಂದ್ರಿಯ ಅಹಂಭಾವಾದಿಗಳ ಗಂಭೀರಗರ್ಭದಲ್ಲಿ ಸಿಲುಕಿಕೊಂಡು ವ್ಯವಹರಿಸುತ್ತಿರುವ ಈ ಮಾನವಜೀವಕ್ಕೆ, ವಿಷಯ ಸಂಸಾರ ಚಕ್ರದಲ್ಲಿ ತಿರುಗುತ್ತಿರುವ ಈ 'ಕರಿತಲೆಯ ಮಾನವ'ನಿಗೆ, ತನ್ನ ಸ್ವಾರ್ಥಕ್ಕಾಗಿ ತನಗನ್ಯರಾದವರನ್ನು ಮುರಿದಿಕ್ಕಿ ತಾನು ಬೆಳೆಯುವ ಪ್ರಯತ್ನದಲ್ಲಿ ನಿರತನಾಗಿರುವ ಈ 'ನಾನು- ಮಾನವ'ನಿಗೆ ತನ್ನಲ್ಲಿಯೆ ಹುದುಗಿರುವ ಶಿವಬೆಳಗಿನ ಅರಿವಿದೆಯೇ? ತನ್ನ ಮತ್ತು ಜಗದಿರವಿನ ಸತ್ಯ ಸ್ವರೂಪವನ್ನು ಕಾಣದ ಈ "ನರಮಾನವನ" ಕಂಗಳ ಒಳಗೆ ಕತ್ತಲೆ, ಕಂಗಳ ಹೊರಗೆ ಕತ್ತಲೆ!

ಹೀಗೆ ಮಾನವನ ಮತ್ತು ವಿಶ್ವದ ಒಳಹೊರಗನ್ನು ಎಡೆಬಿಡದೆ ಆವರಿಸಿರುವ ಕತ್ತಲೆಯ ಮೊತ್ತಕ್ಕೆ ಕಾರಣವೇನು? ಇದಕ್ಕೆ ಲೇಖಕರ ಉತ್ತರ ಅವುಗಳಲ್ಲಿ ಅದ್ವೈತ ಭಾವನೆ ಮರೆಯಾಗಿ ದ್ವೈತಭಾವನೆ ಮೂಡಿದ್ದು. ಆ ದ್ವೈತಭಾವಕ್ಕೆ ಕಾರಣ? ಪರಶಿವನು ತನ್ನ ಚಿಚ್ಛಕ್ತಿಯನ್ನು ಮುಂದಿಟ್ಟು ಒಂದು ಎರಡಾಗಿ ಆಡಬಯಸಿದ ಲೀಲೆ. ವೀರಶೈವ ಶರಣರು ತಮ್ಮ ಅನುಭಾವದ ಅರಿವಿನಲ್ಲಿ ಕಂಡ ಆ ಲೀಲೆಯನ್ನು, ಅವರ ಆ ತಾತ್ವಿಕ ನಿಲುವನ್ನು ಗ್ರಂಥಕರ್ತರೂ ಒಪ್ಪಿ, ಪರಶಿವಲಿಂಗದ ಆ ಲೀಲಾವಿಲಾಸವನ್ನು, ಅವರ ಪ್ರಭಾವ ಪರಿಣಾಮಗಳನ್ನು ಒಮ್ಮೆ ಪ್ರಕೃತಿ ಮಾತೆಯ ಮೂಲಕ (ಪುಟ 166-212), ಒಮ್ಮೆ ಗುರುಚೆನ್ನಮಲ್ಲನ ಮೂಲಕ (ಪುಟ- 256, 450-459, 494-95, 701-703 ಇತ್ಯಾದಿ) ಮತ್ತೊಮ್ಮೆ ಮಹಾದೇವಿಯ ಮೂಲಕ (ಪುಟ 480-81, 583, 708)- ಹೀಗೆ ಮತ್ತೆ ಮತ್ತೆ ಪ್ರಸಂಗಗಳನ್ನು ಕಲ್ಪಿಸಿಕೊಂಡು ಹೇಳುತ್ತಲೇ ಹೋಗಿದ್ದಾರೆ. ಅಲ್ಲಲ್ಲಿ ಶಕ್ತಿತತ್ವ ಶಿವತತ್ವವನ್ನು ಕುರಿತಂತೆ ಹಲವಾರು ಅಂಶಗಳು ಕಾವ್ಯಮಯವಾಗಿ ನಿರೂಪಣೆಗೊಂಡಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವನ ಲೀಲಾವಿಲಾಸದ ಅಂಗವಾಗಿ, ಅವನ ಮಹಿಮಾ ಪ್ರದರ್ಶನಕ್ಕಾಗಿಯೆ ಅವನ ಇಚ್ಛೆಯಂತೆಯೆ ಚಿಚ್ಛಕ್ತಿಯ ಒಂದಂಶ ಅವನಿಂದ ಬೇರೆಯಾಯಿತು, ಅರ್ಥಾತ್ ದ್ವೈತದ ಕತ್ತಲೆಗೆ ಬಿದ್ದಿತು. ಅಂತಹ ಅಂಧಶಕ್ತಿ ನಿರ್ಮಿತ ದೇಹವನ್ನು ಆಶ್ರಯಿಸಿದ ಜೀವಕ್ಕೂ ಕತ್ತಲೆಯನ್ನು ಬಿಟ್ಟು ಗತಿಯೇನು? ಅದಕ್ಕೂ ಆರುಹು ಹಾರಿ ಮರುಹುಗತ್ತಲೆ ಆವರಿಸಿತು. ಹೀಗೆ ದ್ವೈತಾಂಧದಿಂದ ಆವೃತವಾದ ಮಾಯಾಶಕ್ತಿ ಮತ್ತು ಕರಿತಲೆಯ ಮಾನವ- ಇಬ್ಬರೂ ನಡೆಸಿದ ಲೀಲಾವಿಲಾಸ ವೈಭವಗಳ ಅದ್ಭುತ ಚಿತ್ರಣವನ್ನು ಎಷ್ಟು ಸಲ ಕೊಟ್ಟರೂ, ಎಷ್ಟುದ್ದ ಕೊಟ್ಟರೂ ಲೇಖಕರಿಗೆ ತೃಪ್ತಿಯಿಲ್ಲ. ಪ್ರತಿಯೊಂದು ಕಾಂಡದಲ್ಲೂ ಇದು ಒಂದಿಲ್ಲೊಂದು ರೀತಿಯಲ್ಲಿ ಇಣುಕಿದೆ. ಕೆಲವರಿಗೆ ಇದು 'ಅತಿ' ಎನಿಸಬಹುದು. ಆದರೆ ಇದರ ಹಿಂದಿರುವ ಉದ್ದೇಶ ಓದುಗರಿಗೆ ಅದು ಮನವರಿಕೆಯಾಗಬೇಕೆಂಬುದೇ ವಿನಾ ಪಾಂಡಿತ್ಯ ಪ್ರದರ್ಶನದ ಚಾಪಲ್ಯವಲ್ಲವೆಂಬುದನ್ನು ಮರೆಯಲಾಗದು.

ತನ್ನ ಅರಿವು ಇರವುಗಳ ಕತ್ತಲಿಸಿರುವ ಮಾನವನ ಹೃದಯಸಂಸ್ಥಿತನಾದ ಪರಶಿವನೇ, ವಿಶ್ವಾಂಧಕಾರವನ್ನು ಪ್ರೇರಿಸುತ್ತ ತನ್ನ ರೂಪಾದ ತನ್ನ ಸಂತತಿಯನ್ನೇ ಹಿಂಡಿ ಹಿಸುಕುತ್ತ, ಸುಖ- ದುಃಖ, ಸಾವು- ನೋವಿನ ವಿಷಮ ವಿಷದಾಟದಲ್ಲಿ ತೊಡಗಿರುವುದನ್ನು 'ಶಿವಲೀಲೆ' ಎಂದು ಕರೆಯುವುದು ಸಂಮಂಜಸವೆ? ಎಂಬ ಪ್ರಶ್ನೆ ಲೇಖಕರನ್ನು ಕಾಡಿದೆ. ಅದನ್ನು ಅವರು "ತೊಟ್ಟಿಲವ ತೂಗುತ್ತ ಚಿವುಟಿ ರಕ್ತದೊಳಳಿಸಿ ಲೀಲಾವಿನೋದವನು ಒಡ್ಡಿಹನು ಶಿವನೆಂಬ ಮಾತು, ಶ್ರೋತ್ರಕೆ ಚಂದ, ತತ್ತ್ವಬುದ್ಧಿಗೆ ಚಂದ, ಆದರೆ--------- ರಕ್ತಮಾಂಸದ ಪ್ರಾಣ ಪ್ರಾಣಿಗಳ ಪಾಡೇನು?" (ಪುಟ- 258) ಎಂಬ ಗುರುಚೆನ್ನಮಲ್ಲನ ಮಾತಿನ ಮೂಲಕ ಸೂಚಿಸಿದ್ದಾರೆಂದು ನನ್ನ ಅನಿಸಿಕೆ.

ಅದೇನೇ ಇರಲಿ, ಪರಶಿವನು ಲೀಲೆಗಾಗಿ ಶಕ್ತಿಯನ್ನು ಮುಂದಿಟ್ಟುಕೊಂಡು ಜೀವ ಜಗತ್ತುಗಳನ್ನು ನಿರ್ಮಿಸಿ ಅವೆಲ್ಲವನ್ನು ಕತ್ತಲೆಯ ಗರ್ತಕ್ಕೆ ತೂಡಿದುದನ್ನೂ ಅದರ ಪರಿಣಾಮವನ್ನೂ ಪ್ರೊ. ಭೂಸನೂರಮಠ ಅವರ ಕಾವ್ಯಕುಂಚ ಹೇಗೆ ತಿದ್ದಿ ತೀಡಿ ಚೇತೋಹಾರಿಯಾಗುವಂತೆ ಬಣ್ಣವಿಟ್ಟಿದೆಯೆಂಬುದನ್ನು ಸ್ವಲ್ಪ ನೋಡೋಣ. ಇಲ್ಲಿಯೂ ತತ್ತ್ವ ಕಾವ್ಯವಾಗಿ ಹರಿದುಬರ ಅನುಭವ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಶ್ಶೂನ್ಯ ನಿರವಯಲು ನಿಜನಿರಾಳದಿಂದ ಚಿತ್ತುವೆಂಬ ಬಿತ್ತು ಬಲಿದು ತಾನೆರಡಾಗಿ ಲಿಂಗಕಳೆಯಂಕುರಿಸಿತು. ಆ ಲಿಂಗಮೂರ್ತಿಯ ಗರ್ಭಾಂತರಂಗದಲ್ಲಿದ್ದ ಭೂತ ಪ್ರಪಂಚಸೃಷ್ಟಿಯ ಮೂಲರಸದ್ರವ್ಯ ಚೇತನಿಸಿ ವಿಶ್ವಬ್ರಹ್ಮಾಂಡಗಳನ್ನು ರಚಿಸಿತು. ಅದೇ ಅಜ್ಞಾನ ಜಡದ ಅಂಧತಮ ಶಕ್ತಿ, ಅದೇ ದ್ವೈತಲೀಲೆಯ ಕುಣಿವ ಮಾಯಾಶಕ್ತಿ, ಪ್ರಕೃತಶಕ್ತಿ (ಪುಟ- 451). ಪ್ರವೃತ್ತಿ ಸ್ವಭಾವದ ಈ ಮಾಯಾಶಕ್ತಿ ನಿಜವಲ್ಲಭನನ್ನು ಮರೆತು ಭೂತ ಭೌತಿಕದ ವಿಶ್ವರೂಪ ತೊಟ್ಟು ಜಡ ಜಗವಾಗಿ ಪರಿಣಮಿಸಿದಳು. ಜಗತ್ ಸೃಷ್ಟಿಗೆ ಮುನ್ನ ಮಾಯಾಶಕ್ತಿ ಪರಶಿವನನ್ನು ಅಗಲದೆ ಅವನಲ್ಲಿ ಒಂದಾಗಿರ್ದುದನ್ನು ಸ್ವತಃ ಪ್ರಕೃತಿಮಾತೆಯ ಮೂಲಕ ಮಹಾದೇವಿಗೆ ಮತ್ತು ಶಿವನಿಗೆ ಗ್ರಂಥಕರ್ತರು ಹೇಳಿಸಿರುವ ಜೊತೆಗೆ ಶಿವನಿಂದಲೂ ಆ ಕಾರ್ಯ ಮಾಡಿಸಿದ್ದಾರೆ.

"ಶ್ರೀಮನ್ನಿರಂಜನ ರಂಜನೆಯ ರೂಪಾನು! ----
ಪರಮನೊಳು ಹಿಂಗದಿಹ ಪರಮ ಶಕ್ತಿಯೆ ನಾನು
ಚಿನ್ನವನ್ನು ಬಿಟ್ಟೆಂತು ಬಣ್ಣವಿರಬಹುದು------ ಎಂದೆಂದಿಗೂ
ಅಪ್ಪಿ ಅಗಲದಿರ್ದೆನು ಪರವ"-

(ಪ್ರಕೃತಿಮಾತೆ ಮಾದೇವಿಗೆ ಹೇಳಿದ್ದು ಪುಟ -161)

"ವಿಶ್ವರಚನೆ ಇಲ್ಲದ ಮುನ್ನ ನಿನ್ನನ್ನು! ಸರ್ವಾಂಗದೊಳಗಪ್ಪಿ ಬೆರಸಿ ಬೇರೆನಿಸದೆ----
ನಿನ್ನಾದಿಶಕ್ತಿ ಚಿಚ್ಛಕ್ತಿಯಾನಾಗಿ। ವಿಶ್ವಪತಿಯ ನಿನಗೆ ವರರಮಣಿಯಾಗಿ ಇರ್ದೆ ----

(ಪ್ರಕೃತಿದೇವಿ ಶಿವನಿಗೆ ಹೇಳಿದ್ದು, ಪುಟ -164)

ಇಲ್ಲಿ ಶಿವಶಕ್ತಿಯರ ಅವಿನಾಭಾವ ಸಂಬಂಧ, ವಿಶ್ವರಚನೆಯ ಪೂರ್ವದಲ್ಲಿ ಅವೆರಡೂ ತತ್ತ್ವಗಳು ಒಂದನ್ನು ಬಿಟ್ಟು ಒಂದಿರದ ಸ್ಥಿತಿ, ಸಾರ್ಥಕ ಉಪಮೆಗಳ ಮೂಲಕ ನಿರೂಪಣೆಗೊಂಡಿದೆ. ಶಿವನು ಪ್ರಕೃತಿಯನ್ನುದ್ದೇಶಿಸಿ ಹೇಳುವ,

"------ ಎರಡಿಲ್ಲ ಎರಡಲ್ಲ ಒಂದೇ ಒಂದಾಗಿರುವ
ಶಿವ- ಶಕ್ತಿ, ನಾ-ನೀನು, ಒಂದಖಂಡಿತ"

(ಪುಟ- 166)

"ನಾ ನೀನು ಏಕೈಕರಸವಾದ ನಿಲುವು ---------
- ತೋರಿ ಅಡಗುವ ನಿನ್ನ ಸಾಮರ್ಥ್ಯ ಸಂಪದವನೊಳಗೊಂಡು ನಿಂದಿರ್ದ
------- ಖಂಡಿಸದಖಂಡ ನಿಜನಿತ್ಯ ಪರಿಪೂರ್ಣ (ನಾನು)-

(ಪುಟ- 168)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತ್ಯಾದಿ ಮಾತುಗಳಲ್ಲಿ- 'ಶಿವಶಕ್ತಿಗಳು' ಒಂದು, ಅಖಂಡಿತ ತೋರಿ ಅಡಗುವ ಮಾಯಾಶಕ್ತಿಯ ಸಾಮರ್ಥ್ಯಸಂಪದವನ್ನೊಳಗೊಂಡು ನಿಂದಿರುವ ಖಂಡಿಸದಖಂಡ ನಿತ್ಯಪರಿಪೂರ್ಣಮೂರ್ತಿ ಆ ಪರಶಿವ, ತನ್ನ ಲೀಲಾವಿಲಾಸ ಮುಗಿದ ಮೇಲೆ ಮಾಯಾ ಶಕ್ತಿ ಮತ್ತೆ ಶಿವನಲ್ಲೇ ಅಡಗಬೇಕು. ಅವನನ್ನು ಬಿಟ್ಟು ಅದಕ್ಕೆ ಬೇರೆ ಗತಿಯಿಲ್ಲ- ಇವೇ ಮೊದಲಾದ ಮಹತ್ವಪೂರ್ಣ ತಾತ್ವಿಕ ಅಂಶಗಳು ವಿವರಣೆಗೊಂಡಿರುವುದನ್ನು ಕಾಣಬಹುದು. ಮಾಯಾಶಕ್ತಿಯಿಂದಲೆ ಜಗದುತ್ಪತ್ತಿಯೆಂಬುದನ್ನು ಶಿವನ ಬಾಯಿಂದ ಲೇಖಕರು ಹೀಗೆ ಹೇಳಿಸಿದ್ದಾರೆ.

"ಎಲೆ ವಿಶ್ವಸುಂದರಿಯ। ವಿಶ್ವರೂಪವ ತೊಟ್ಟ ವಿಶ್ವರೂಪಿಣಿಯ।
ವಿಶ್ವಬ್ರಹ್ಮಾಂಡಗಳ ರೂಪಿಸಿದ ರೂವಾರಿ।
ಸಕಲ ಕೋಟಿಯ ಹೆತ್ತು ಹೊರವ ವಿಶ್ವಂಭರಿಯ।
ಏನೆಂಥ ಪರಮ ಪರಮಾದ್ಭುತವು ನೀನು। ------
ಇಚ್ಛಾ ಕ್ರಿಯಾಜ್ಞಾನ ಶಕ್ತಿಯೆ
------- ಎನ್ನಷ್ಟತನು ಮೂರ್ತಿ ಶಕ್ತಿ ಸೌಭಾಗ್ಯವೆ"---

(ಪುಟ - 165)

" --------- ವಿಶ್ವನಾಮವ ತೋರಿ ವಿಶ್ವಕ್ರಿಯೆಗಳ ಬೀರಿ।
ಬ್ರಹ್ಮಾಂಡ ನಾಟಕವನಾಡಿರುವ ------- ವಿಶ್ವಲೀಲಾ ವಿಲಾಸಿಯೆ"-

(ಪುಟ -168)

ಪರಶಿವನ ಲೀಲಾವಿಲಾಸದ ಪ್ರದರ್ಶನಕ್ಕೆಂದು ಅವನಿಚ್ಛೆಯಂತೆ ಅವನಿಂದ ಹೊರಹೊಮ್ಮಿದ ಮಾಯಾಶಕ್ತಿ, ನಿಜವಲ್ಲಭನನ್ನು ಮರೆತು ದ್ವೈತಲೀಲೆಯಲ್ಲಿ ತೊಡಗಿ, ಭೂತ ಭೌತಿಕದ ವಿಶ್ವರೂಪತೊಟ್ಟು ಕತ್ತಲೆಯಲ್ಲಿ ತಾನೂ ಕುಣಿದು ಜಗತ್ತನ್ನು, ಕುಣಿಸಿದ ಅದ್ಭುತತೆ ಅದ್ಭುತವಾದ ಚಿತ್ರ 'ಭವ್ಯಮಾನವ' ಕೃತಿಯಲ್ಲಿ ಅತ್ಯದ್ಭುತವಾಗಿಯೆ ಬಂದಿದೆ;

"ಗಂಭೀರ ಗಂಭೀರ ವಿಸ್ತಾರವಾರಿಧಿ। ಬಿರುಗಾಳಿ ಬೀಸಿದರೆ ಪ್ರಕ್ಷುಬ್ಧವಾಗಿ।
ಎದ್ದಿತ್ತು ಎದ್ದಿತ್ತು ಮೈ ಮುರಿದು ಕೋಟಿ ಕೋಟಿ ತರಂಗ -------
ನಿರ್ವಿಕಾರದ ಲೀಲೆ ನಾನಾವಿಕಾರ -----------। ಸೃಷ್ಟಿಯಂಕುರಿಸಿತ್ತು
-------- ತನ್ನ ಶಕ್ತಿಯನಂತ ಲೀಲೆಯಾಡಿತ್ತು --------
ಆಕಾಶ ಕುಣಿಯಿತ್ತು ತನ್ನ ಮೈ ಮರೆದು। -----------
ಹರಿಹರಿದು ಕುಣಿಯಿತ್ತು ವಾಯುನಾಟ್ಯ
ಮಾಡಿದುವು ಆಡಿದುವನಂತ ತೇಜಃ ಪುಂಜ। ನಟಿಸಿತ್ತು ಜಲನಾಟ್ಯ।
---------- ಬಯಲ ಹರವಿನೊಳೊಂದು ಪೃಥಿವಿ ಮೂಡಿ।
ಆಟ ನಡೆಯಿತು, ಮಣ್ಣನಾಟ
--- ಎದ್ದು ಆಡಿತು ನೆಲದ ಲೀಲಾ ವಿಲಾಸ ------

(ಪುಟ - 450-55)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಆಕಾಶದಂಗಳಕೆ ನಕ್ಷತ್ರಗಳ ಹರವಿ। ----ತಿರುಗಿಸಿದೆ ತಿರುಗಿಸಿದೆ
ನಿಮಿಷಾರ್ಧವಡೆಬಿಡದೆ ತಿರುಗಿಸಿದೆ ಎಲೆ ರಮಣಿ।
ನಕ್ಷತ್ರ ಬ್ರಹ್ಮಾಂಡ ಸೂರ್ಯಚಂದ್ರಮರ। ಪರ್ವತ
ಸಮುದ್ರಮಂಡಲ ಭೂಮಿ ವಾಯುಗಳ।
ಬಯಲ ವಿಸ್ತಾರದೊಳು ಚಕ್ರಗಳ ತಿರುಗಿಸಿದ। -----ಪಶುಪಕ್ಷಿ ಕ್ರಿಮಿಕೀಟ ಪ್ರಾಣಜಾಲವನು
------ ಮತ್ತೆ ಹೊಸ ಹೊಸ ಕೋಟಿ ಕೋಟಿಯ ಪಡೆದು। ಹುಲು ಮಣ್ಣು ಎಲೆ ಕಾಯಿ ಕುತ್ತನಿಕ್ಕಿ
----ಕೆರೆ ಬಾವಿ ಹೊಳೆ ಹಳ್ಳ ಸಾಗರವ ಗುಟುಗಿಕ್ಕಿ। ಆಹಾರ ನಿದ್ರೆ ಭಯ ಮೈಥುನದ ಮಡಿಲೊಳಗೆ
ಬೈತಟ್ಟು ತಿರುಗಿಸಿದೆ ತಿರುಗಿಸಿದ'-

(ಶಿವನೇ ಹೇಳಿದ್ದು ಪುಟ -168-170)

ಮಾಯಾಶಕ್ತಿಯಿಂದ ಆಕಾಶ, ವಾಯು, ತೇಜ, ಅಪ್ಪು, ಪೃಥಿವಿಗಳು, ಪೃಥ್ವಿಯಲ್ಲಿ ಸಸ್ಯಕೋಟಿ ಅವುಗಳಿಂದ ಹೂವು ಹಣ್ಣಿನ ರಸಚಕ್ರ, ಪಶುಪಕ್ಷಿ ಕ್ರಿಮಿಕೀಟ ಪ್ರಾಣಿಜಾಲ- ಇವೆಲ್ಲ ಹುಟ್ಟಿ ಬ್ರಹ್ಮಾಂಡಜಾಲ ಹೆಣೆದುಕೊಂಡ ಬಗೆ ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿತವಾಗಿದೆ. ಇಷ್ಟೆಲ್ಲವನ್ನು ಸೃಷ್ಟಿಸಿದ ಮಾಯಾಶಕ್ತಿ ಜಡ ಜಗತ್ತಿನಲ್ಲಿ ತಾನೂ ಜಡವಾಗಿ ಮೈಮರೆತು ಹೋದಳು.

ತನ್ನ ಅದ್ಭುತ ಸೃಷ್ಟಿಗೆ ಕಲಶವಿಟ್ಟಂತೆ ಮಾನವಪ್ರಾಣಿಯನ್ನು, ಮಾಯಾ ಶಕ್ತಿ ನೆಲದಲ್ಲಿ ಮೂಡಿಸಿ ಮರಹಿನ ಮಹಾಕತ್ತಲೆಗೆ ಅವನನ್ನು ಸೂಕ್ಷ್ಮ ಹುಟ್ಟು-ಸಾವುಗಳ ಚಕ್ರದಲ್ಲಿ ತಿರುಗಿಸುತ್ತಿರುವ ವಿವರ, ಆ ಕತ್ತಲೆಯ ಮಾನವ ಸ್ವಾರ್ಥ ಪ್ರೇರಿತನಾಗಿ ಆಡುತ್ತಿರುವ ಹಲವಾರು ಬಗೆಯ ಡೊಂಬರಾಟಗಳ ಚಿತ್ರಣ-ತುಂಬಾ ಚೆನ್ನಾಗಿ ಈ ಕಾವ್ಯದಲ್ಲಿ ಬಂದಿದೆ.

"ಏನು ಮಾಯಾಜಾಲ ರಮಣಿ ನಿನ್ನ;------ ನೆಲದೊಳಗೆ ಮೂಡಿಸಿದೆ ಪ್ರಾಣ ಮಾನವನ।
ನಿನ್ನ ಅದ್ಭುತಗಳಿಗೆ ಕಲಶವಿಟ್ಟ। ಹಸಿವೆಗನ್ನವನುಣಿಸಿ ತೃಷೆಗೆ ನೀರನು ಹಣಿಸಿ
ಈ ಪ್ರಾಣರಾಜನಿಗೆ ಹಮ್ಮು ಮನಭಾವ। ಚಿತ್ತ ಬುದ್ಧಿಯ ತಲೆಯನೆತ್ತರಿಸಿಕೊಟ್ಟು।
----- ಜಗವ ತಿರುಹುತ್ತಿಹುದು ನಿನ್ನ ಮಾಯಾಚಕ್ರ" -

(ಶಿವ ಹೇಳಿದ್ದು, ಪುಟ 170)

ಮಾನವನ ಒಳಗಿರುವ ಶಿವಾಂಶಕ್ಕೆ, ದೇಹಪ್ರಾಣಗಳ ಲೆಪ್ಪವಿಟ್ಟು, ಅದಕ್ಕೂ ದ್ವೈತಭಾವನೆ ಮೂಡಿಸಿದ ಮಾಯಾಶಕ್ತಿಯ ಪ್ರಭಾವ ನಿಜಕ್ಕೂ ಅದ್ಭುತ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ದಿವ್ಯಕಳೆ ದಿವ್ಯಾಂಶ ದಿವ್ಯಕಿರಣಕ್ಕೆ। ಜಾಲ ಹೆಣೆಯಿತು ಒಂದ ಎರಡು ಮಾಡಿದ ಜಾಲ।
ತನ್ನ ಇಚ್ಛಾ ಶಕ್ತಿ ಅಂಧಕಾರವ ನೆಯ್ದು। ಸೂಕ್ಷ್ಮಮಾಯಾಂಬರವ ಉಂಟಿಲ್ಲವೆನಿಸಿ
ತೊಡಸಿದಳು ಬೆಳಕಿಗೆ, ಉಡಿಸಿದಳು ಕತ್ತಲೆಯ। -----
ಲೆಪ್ಪಕ್ಕೆ ಹೊರಗಾದ ನಿರ್ಮಲ ನಿರಂಜನಕೆ। ಲೆಪ್ಪವಾಯಿತು ------ ದೇಹಪ್ರಾಣ।
ಲೆಪ್ಪವಾಯಿತು ರಕ್ತ ಮಾಂಸ ಮಜ್ಜ। ಕೈಕಾಲು ಕಿವಿ, ಕಿಂಡಿ ಮೂಡಿದವು
ಮನ ಬುದ್ಧಿಗಳು ಮುಸುಕನೊಡ್ಡಿ ಶಿವಕಳೆಗೆ। ಕವಿಯಿತ್ತು ಮಂಜು ಚಿತ್ಕಳೆಯ ಪ್ರಜ್ವಲಕೆ।
------ ದ್ವೈತಾಂಧತಿಮಿರದೊಳು ಎಲ್ಲ ಎಲ್ಲವು ಹುಗಿದು।
ನಟಿಸಿದವು ಭೂತಗಣ, ನಾನು, ನೀನು''-

(ಮಹಾದೇವಿ ಹೇಳಿದ್ದು ಪುಟ- 480)

ಇಲ್ಲಿ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಸಂಕೋಚಗೊಂಡು ಮಾನವನಲ್ಲಿರುವ ದಿವ್ಯ ಕಳೆಗೆ ಆವರಣಗಳಾಗಿ- ಕಾರಣ, ಸೂಕ್ಷ್ಮ, ಸ್ಥೂಲ ತನುಗಳ ರೂಪದಲ್ಲಿ ಅವನನ್ನು ಲೆಪ್ಪಿಸಿದ ಸೂಕ್ಷ್ಮಾತಿಸೂಕ್ಷ್ಮ ತತ್ವವಿವೇಚನೆ ಅತ್ಯಂತ ಅರ್ಥಪೂರ್ಣವಾಗಿ ಬಂದಿದೆ.

ವಿಶ್ವಾದ್ಭುತದ ಈ ಮಾನವ ಪ್ರಾಣಿ, ಮಣ್ಣೊಳಗೆ ಒಡೆದು ಮೂಡಿದ ಮನ, ಅರಿವು, ಬುದ್ಧಿಗಳ ಈ ವಿಶಿಷ್ಟ ಪ್ರಾಣಿ, ವಿಷಯದಾಟದ ಗರ ಹೊಡೆದು ತನ್ನನ್ನು ತಾನು ಮರೆತು ನಾಟಕವಾಡಲಾರಂಭಿಸಿದಾಗ ''ಮಣ್ಣೊಳಗೆ ಆಡಿತ್ತು ಮನಸೋಲ್ಲಾಸ। -------- ಮೊದಲಾಯ್ತು ಹೊಸಲೀಲೆ ಸೃಷ್ಟಿಯಾಧ್ಯಾಯದೊಳು'' ಎಂದು ಗುರು ಚೆನ್ನಮಲ್ಲ ಉದ್ಗಾರವೆತ್ತಿದ್ದಾನೆ.

(ಪುಟ 556-57)

ಸ್ವಾರ್ಥಿಯಾದ ಈ 'ನಾನು- ಮಾನವ' ನಡೆಸಿದ ಆಟ, ಮಾಡಿದ ಹೋರಾಟ, ಗೆಯ್ದ ಸರ್ವನಾಶಗಳ ಚಿತ್ರಣ 'ಕತ್ತಲೆಯ ಕಾಂಡ'ದಲ್ಲಿಯಂತೂ ಸರಿಯೆ, 'ಉದಯಕಾಂಡ'ದಲ್ಲಿಯೂ ಸಾಕಷ್ಟು ಬಂದಿದೆ. (ಪುಟ -657, 460-478)

ಮಾಯಾಶಕ್ತಿ ಪರಶಿವನಲ್ಲಿ ಕೂಡ ತೊಣೆಯದೆ ಬಿಟ್ಟಿಲ್ಲ. ಅವನನ್ನು ಅಷ್ಟತನು ಮೂರ್ತಿಯಾಗಿ ಮಾಡಿದವಳು; ಉಮಾಪತಿಯನ್ನಾಗಿ ರೂಪಿಸಿದವಳು; ಹಲವು ಆತ್ಮಗಳಾಗಿ ವಿಂಗಡಿಸಿದವಳು ಮಾಯಾಶಕ್ತಿಯೆಂದೇ ಲೇಖಕರ ಅಭಿಪ್ರಾಯ. ಒಂದೇ ಒಂದಾಗಿದ್ದ ಪರಶಿವನು ಲೀಲೆಗೆಂದು ಎರಡಾದುದರಿಂದಲೆ ಮಾಯಾಶಕ್ತಿಗೆ ತನ್ನ ಲೀಲಾವಿಲಾಸವನ್ನು ಮೆರೆಯುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಕಾಶ ದೊರೆಯಿತು. ತನ್ನ ಶಕ್ತಿಗೆ ತಾನೆ ವಶಗತನಾಗಿ ಪರಶಿವನು ಅನುಭವಿಸಿದ ಪರಿಭವದ ಕಥೆ 'ಭವ್ಯಮಾನವ' ಕೃತಿಯಲ್ಲಿ ಹೀಗೆ ಬಂದಿದೆ:

"ತನ್ನ ಇಚ್ಛೆಗೆ ತಾನೇ ಶಕ್ತಿವಶಗತನಾಗಿ-------- ತನ್ನ ನಿಜಮೂಲವನು ನಿಜಶಕ್ತಿ ಮುಚ್ಚಿದರೆ।
------ಮರಹುಗತ್ತಲೆಯೊಳಗೆ ಎರಡಾಗಿ ಕುಣದ।
ಉಮೆಯಧೀನದ ವಿಶ್ವಪತಿಯಾಗಿ ಕುಣದ। -------
ದ್ವೈತ ಲೀಲೆಗೆ ಅನ್ಯಭಿನ್ನತಂಡಗಳಾಗಿ। ಒಡೆದೊಡದು ಬೇರಾಗಿ ಚೂರು ಚೂರಾಗಿ।
ಅಣುಕೋಟಿ ಆತ್ಮರುಗಳಾಗಿ ವಿಂಗಡಿಸಿ। ಪಂಚಭೂತದ ಸಂಗ ದೇಹಕೋಟಿಯಧರಿಸಿ
-------- ಬಿರುಕು ಬಿಟ್ಟಾಡಿದವು ಭಿನ್ನ- ನಾನುಗಳು"-

(ಪುಟ -458-59)

"ಹಲವು ಜಗವನು ಒಂದು ತಾನು ತನ್ನೊಳಗೆ।
ತನ್ನ ನೇಹದ ಜಿಗುಟಿನೊಳು ನೆಯ್ದುಕೊಂಡ।
ವಿಶ್ವಮೂರ್ತಿಯನಂತ ಲೀಲೆಯನ ಕಂಡೆ।
ವಿಶ್ವಲೀಲೆಯ ಮಹಾ ಭವ್ಯನಾಟಕದೊಳಗೆ।
ಬ್ರಹ್ಮಾಂಡನಾಯಕನ ಪರಿಭವವ ಕಂಡೆ।
ತಾನಿಟ್ಟ ಬೇತಾಳ ತನ್ನನ್ನೆ ನುಂಗಿತ್ತು।
ತನ್ನ ರಚನೆಯ ಕಪಟ ತನಗೆ ಮುಳುವಾಯಿತ್ತು।
-------- ತನ್ನ ತಾನೇ ಒಡೆದು ತನ್ನೊಳಗೆ ಬಿರುಕಾಗಿ।
ನಾನಾಗಿ ನೀನಾಗಿ ಆತನಾಗಿ।
------ ನಿಜ ಮೂಲವನು ಮರೆದು ಹಗಲುಗತ್ತಲೆಯೊಳಗೆ। ---
ನಿತ್ಯಸತ್ಯಾರ್ಥಕ್ಕೆ ಹೊರಗಾಗಿ ಹೊರತಾಗಿ।
ಜಗದೊಳಗೆ ಮುಳುಗಿ ಸುಖ-ದುಃಖವನು ಕುಡಿದು।
ಪಾಪ ಪುಣ್ಯವನುಂಡು ಜಗದೊಳಗೆ ಜಗವಾಗಿ। ತೊಳಲಿರುವ ದೇವರನು ಕಂಡೆ।-

(ಗುರುಚೆನ್ನ ಹೇಳಿದ್ದು ಪುಟ- 701-702)

ಒಟ್ಟಿನಲ್ಲಿ- ಪರಶಿವನ ಲೀಲಾವಿಲಾಸದ ಪ್ರದರ್ಶನಕ್ಕೆಂದು, ಅವನಿಂದಲೇ ಹೊರಹೊಮ್ಮಿದ ಜಗದಾದಿಶಕ್ತಿ ಮಾಯಾಶಕ್ತಿ ದ್ವೈತಕೋಟಿಯ ಹಡೆದು, ಮನಬಂದಂತೆ ಅದನ್ನು ಕುಣಿಸಿ, ಮೃತ್ಯುವಿನ ಗರ್ತಗಂಭೀರಕ್ಕೆ ನೂಕಿ, ಅದರೊಡನೆ ತಾನೂ ಕತ್ತಲೆಯ ಕಮರಿಗೆ ಬಿದ್ದು ಅದರಲ್ಲಿಯೇ ಮುಳುಗಿಹೋದಳು, ವಿಶ್ವಲೀಲೆಯಲ್ಲಡಗಿ ಜಡವಾಗಿ ಹೋದಳು, ಕತ್ತಲೆಯ ಕರಾಳದಲ್ಲಿ ಸತ್ತುಬಿದ್ದಳು- ಇದು ಮಾಯಾ ಶಕ್ತಿಯ ಗತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದೇ ಒಂದಾದ, ಭಿನ್ನವಿಲ್ಲದ ಅಖಂಡ ಪರಂಜ್ಯೋತಿ ಸ್ವರೂಪ ಪರಶಿವನು, ಪೂಜ್ಯ -ಪೂಜ್ಯಕ ಲೀಲೆಗೋಸುಗ ಎರಡಾಗಿ ದ್ವೈತ ಲೀಲೆಗೆ ತೊಡಗಿ ಮತ್ತೆ ಒಡೆದು ಅಣಾಕೋಟಿ ಆತ್ಮರುಗಳಾಗಿ, ಹೆಣ್ಣು-ಗಂಡುಗಳಾಗಿ ವಿಂಗಡಣೆಗೊಂಡು, ತನ್ನ ನಿಜದ ಮೂಲವನ್ನು ನಿಜಶಕ್ತಿಯೆ ಮುಚ್ಚಲು- ತಾನಿಟ್ಟ ಬೇತಾಳ ತನ್ನನ್ನೇ ನುಂಗಿದಂತೆ- ತನ್ನ ರಚನೆಯ ಕಪಟ ತನಗೇ ಮುಳುವಾಗಲು ಪರಿಭವಕ್ಕೆ ತುತ್ತಾಗಿ, ಅವನೂ ಒಂದೇ ಸಮನೆ ತೊಳಲಿ ಬಳಲುತ್ತಿದ್ದಾನೆ- ಇದು ಪರಶಿವನ ಗತಿ.

ಇನ್ನು ಇವರಿಬ್ಬರ ಕೂಸಾದ, 'ಅರ್ಧರಕ್ಕಸದೇವ' ಮಾನವನ ಲೀಲಾ- ವಿಲಾಸ ವಂತೂ ಹೇಳತೀರದು. ಅವನು ಆಡುತ್ತಿರುವ ನಾಟಕ ಪರಶಿವನನ್ನೂ ಬೆರಗುಗೊಳಿಸುವಂತಹದು. ಹಮ್ಮಿನಿಂದ ಕೂಡಿದ ಈ 'ನಾನು- ಮಾನವ'ನಿಗೆ ಹಿಂದಣ ಗೊತ್ತು ಮುಂದಣ ಗುರಿ ಎಲ್ಲ ಮಬ್ಬು ಮಬ್ಬು. ತನ್ನೊಳಗೆ ಹೂಳಿರ್ದ ಬೆಳಗಿನ ನಿಧಾನಕ್ಕೆ ಸಂಪೂರ್ಣ ಕುರುಡಾಗಿರುವ ಈ ಕರಿತಲೆಯ ಮಾಸವ ದೇಹವೇ ನಾನೆಂಬ ಭ್ರಮೆಗೆ ಒಳಗಾಗಿ, ಕೆಳಮುಖವಾಗಿ ತಿರುಗುತ್ತಿರುವ ಸಂಸಾರ ಚಕ್ರಕ್ಕೆ ಸಿಲುಕಿ ಕಾಲು ಹೊರಗಾಗಿ ತಲೆಯು ಕೆಳಗಾಗಿ ಕತ್ತಲೆಯ ಕಡಲಲ್ಲಿ ತೇಲಿ ಮುಳುಗುತ್ತಿದ್ದಾನೆ-- ಇದು ಜೀವನ ಗತಿ.

'ಭವ್ಯಮಾನವ' ಕಾವ್ಯದಲ್ಲಿ ಸವಿಸ್ತಾರವಾಗಿ ನಿರೂಪಣೆಗೊಂಡಿರುವ ಈ ವಿವರ ಗಳೆಲ್ಲವನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೆಲವು ಮಹತ್ವಪೂರ್ಣ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಮಾಯಾಶಕ್ತಿ ಶಿವನ ಅಂಶವಾದರೂ- ಕಲ್ಲಾಗಿ ಮಣ್ಣಾಗಿ ಗುಡ್ಡಪರ್ವತವಾಗಿ, ಹೊಳೆಸಾಗರವಾಗಿ, ಗಾಳಿ ಬೆಂಕಿಯಾಗಿ, ಗಿಡ ಮರವಾಗಿ, ಮೃಗಪಕ್ಷಿಪ್ರಾಣಿಯಾಗಿ, ಜಡಜಗತ್ತಾಗಿ ಕತ್ತಲೆಗೆ ತುತ್ತಾದುದಕ್ಕೆ ಅವಳು ಶಿವನಿಂದ ಅಗಲಿ, ದ್ವೈತವಾಗಿ, ತನ್ನ ಮೂಲವನ್ನು ಮರೆತುದೇ ಕಾರಣ.

ಪರಶಿವನ ಪರಿಭವಕ್ಕೂ- ಒಂದೇ ಒಂದಾದ ಅವನು ಲೀಲೆಗೋಸುಗ ಎರಡಾಗಿ ಒಡೆದು ಮತ್ತೆ ತುಂಡುತುಣುಕಾಗಿ ಹಲವು ಆತ್ಮರುಗಳಾಗಿ, ಮಾಯಾಶಕ್ತಿಯ ಸೃಷ್ಟಿಯಾದ ದೇಹವನ್ನು ಆಶ್ರಯಿಸಿದುದೇ ಕಾರಣ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದೇ ರೀತಿ ಮಾನವನು ಕರಿತಲೆಯ ಮಾನವನಾಗಿರುವುದಕ್ಕೆ, ಅವನಲ್ಲಿ ಮೂಡಿದ 'ಅಹಂ' ಭಾವನೆ, ಅವನಿಗೆ ಹೊಡೆದ ವಿಷಯ ಸುಖದ ಗರ, ಮತ್ತು ತನ್ನ ಭಾವದ ಮರೆಯ ಬ್ರಹ್ಮದ ಬಗೆಗೆ ಅವನಿಗಿರುವ ಅಜ್ಞಾನಗಳೇ ಕಾರಣ.

ಇದರಿಂದ ಗ್ರಂಥಕಾರರ ಪ್ರಕಾರ 'ದ್ವೈತ'ವೇ ಎರಡೆಂಬ ಭಾವನೆ ಎಲ್ಲ ಅನಾಹುತಗಳಿಗೂ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಆದರೆ ದ್ವೈತದ ಪ್ರತಿಪಾದಕರು, ಮತ್ತು ಉಪಾಸಕರು ಜಗದ ಹಿತಕ್ಕಾಗಿ ಶ್ರಮಿಸಿದುದನ್ನು ಅವರು ನಿರಾಕರಿಸುವುದಿಲ್ಲ. ಅದಕ್ಕೆ ಆದರದೇ ಆದ ಒಂದು ಸ್ಥಾನವಿದೆಯೆಂದು ಅವರ ಅಭಿಪ್ರಾಯ. ''ದ್ವೈತ ಪ್ರಪಂಚದ ದ್ರಷ್ಟಾರರೀ ಮಹಿಮರು। ಸತ್ಯಕಾಮರು ಸತ್ಯನಿಷ್ಠ ಜಿಜ್ಞಾಸುಗಳು।----- ಜಗದಿರವ ಭೇದಿಸಿಹ ಲೋಕವಿಜ್ಞಾನಿಗಳು। ದುಡಿದು ಕೊಡುತಿಹರಿವರು ಜಗದಕಲ್ಯಾಣಕ್ಕೆ। ತಪವ ಮಾಡಿದ ಮಹಾತಪಸ್ವಿಗಳಿವರು। ---- ಧೀರ ಸನ್ಯಾಸಿಗಳು ವೈರಾಗ್ಯ ಮೂರ್ತಿಗಳು। ಋಷಿ ಮಹರ್ಷಿಗಳಿವರು ದ್ವೈತ ಲೋಕಋಷಿಗಳು। ದುಡಿದಿಹರು ದುಡಿದಿಹರು ಲೋಕದ ಹಿತಕಾಗಿ''- (ಗುರುಚೆನ್ನ ಹೇಳಿದ್ದು ಪುಟ 820)- ಮುಂತಾಗಿ, ದ್ವೈತಿಗಳಾದ ವಿಜ್ಞಾನಿಗಳನ್ನು ಕುರಿತು ಪ್ರೊ. ಭೂಸನೂರಮಠ ಅವರು ಗುರುಚೆನ್ನಮಲ್ಲರಿಂದ ಹೇಳಿಸಿರುವುದನ್ನು ಗಮನಿಸಬೇಕು. ಅವರೇ ಮುಂದೆ ಅದೇ ಗುರುಚೆನ್ನರ ಮೂಲಕ ''ಆದರೂ-----। ನಿತ್ಯಕಲ್ಯಾಣಕ್ಕೆ ಸತ್ಯಕಲ್ಯಾಣಕ್ಕೆ ವಿಶ್ವಕಲ್ಯಾಣಕ್ಕೆ ಸಾಲರಿವರು। ಏಕ ಮೇವಾದ್ವಿತೀಯದ ವಿದ್ಯೆ ತಮಗೆ ಕಾಂಬ ಕಣ್ಣಿಲ್ಲದೀ ದ್ವೈತ ದ್ರಷ್ಟಾರರು। ಎಲ್ಲವರು ತನ್ನವರು ತಾನೆಂಬ ಗಂಭೀರ ನಿಜಕೆ ನಿಲುಕದವರಿವರು।------ ಹಿತವಿವರ ಸುಖವಿವರ ಕಲ್ಯಾಣವಿವರ। ತೇಲಿಹವು ತೇಲಿಹವು ಮಾನವನ ಮೇಲೆ। ಒಳಗೆ ಮಾನವನುಳಿದ ದುಃಖಸಂಗಾತ''।- ಎಂದು ಮಹಾದೇವಿಯಕ್ಕನಿಗೆ ಹೇಳಿಸಿ ತಮ್ಮ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಹೀಗೆ, ದ್ವೈತದ ಇಚ್ಛೆ, ದ್ವೈತಭಾವ, ದ್ವೈತಪೂಜೆ, ದ್ವೈತಭಕ್ತಿಗಳ ದಸರಿದೊಡಕಿಗೆ ಸಿಲುಕಿದ ಶಿವ, ಜೀವ, ಜಗತ್ತುಗಳಿಗೆ ಬಿಡುಗಡೆಯ ಮಾರ್ಗವನ್ನು ಕಂಡುಹಿಡಿದವರು ಜಗತ್ತಿನ ಎಲ್ಲ ಅನುಭಾವಿಗಳೆಂದು ಲೇಖಕರ ನಂಬಿಕೆ, ಅಜ್ಞಾನ ಕತ್ತಲೆಯ ದ್ವೈತದೇವ, ಸಾಗರದ ಮೇಲಿರುವ ತೆರೆಗಳನ್ನು ಮಾತ್ರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣುತ್ತಾನೆಯೆ ವಿನಾ ತೆರೆಯ ಮರೆಯಲ್ಲಿರುವ ಸಾಗರದ ಗಂಭೀರವನ್ನು ಕಾಣಲಾರೆನೆಂಬ ಸತ್ಯವನ್ನು ಶರಣರು, ಅನುಭಾವಿಗಳು ತಮ್ಮ ಒಳಹೊಕ್ಕು, ಜಗದ ಒಳಹೊಕ್ಕು ಕಂಡುಕೊಂಡರು. ತೆರೆ, ಸಾಗರಗಳು ಬೇರೆ ಬೇರೆಯಲ್ಲ. ಅಲ್ಲಿ ದ್ವೈತವಿಲ್ಲ, ಅದ್ವೈತವಿದೆಯೆಂಬುದನ್ನು ಆಗ ಅವರು ಅನುಭವಿಸಿದರು. ಆಮೇಲೆ ಅದ್ವೈತಭಾವ, ಅದ್ವೈತ ಭಕ್ತಿ, ಅದ್ವೈತ ಪೂಜೆಯಿಂದಲೆ ಅಜ್ಞಾನದ ಕರಾಳ ಕತ್ತಲೆಯ ನಿವಾರಣೆ, ಎಲ್ಲ ಎಲ್ಲರ ಎಲ್ಲಂದದ ಬಂಧ- ಬಂಧನಗಳ ಬಿಡುಗಡೆಯೆಂದು ಸಾರಿದರು.

ಪ್ರಸ್ತುತದಲ್ಲಿ ನಾವಿರುವುದು ಎಲ್ಲವೂ ಇರುವುದು ದ್ವೈತದಲ್ಲಿಯೆ, ನಾವು ಕಾಣುತ್ತಿರುವುದು ಕೂಡ ದ್ವೈತವನ್ನೆ. ಸುಖ-ದುಃಖ, ಹಸಿವು- ತೃಪ್ತಿ, ಸೃಷ್ಟಿ-ಪ್ರಳಯ, ನಾನು-ಅವನು, ಇವೆಲ್ಲ ದ್ವೈತದ ಪರಿಣಾಮಗಳು. ಇವು ಒಂದು ಬಿಟ್ಟೊಂದಿಲ್ಲ; ಇದು ಬ್ರಹ್ಮಗಂಟು. ಇವನ್ನು ಹಿಡಿದೇ ನಿಜವನ್ನರಿಯಬೇಕು. ತನ್ನಲ್ಲಿರುವ ನಿಧಿನಿಧಾನವನ್ನು, ವಿಶ್ವಸಂಪದವನ್ನು ಕಂಡು ಪಿಂಡಾಂಡ-ಬ್ರಹ್ಮಾಂಡಗಳೆರಡೂ ರಕ್ತಸಂಬಂಧಿಗಳೆಂಬ ಅರಿವು ಮೂಡಲು, ಸುಖ-ದುಃಖ, ಬೆಳಗು- ಕತ್ತಲೆ ಬೇಕೆಂದು ಶರಣರು ಹೇಳುತ್ತಾರೆ. (ಪುಟ- 613, ಗುರುಚೆನ್ನ ಹೇಳಿದ್ದು). ''ಬೆಂಕಿಕಟ್ಟಿಗೆ ಕೂಡಿ ಆಟವಾಡಿರುವಂತೆ ಭವಿಯೊಳಗೆ ಭಕ್ತ ಭಕ್ತನೊಳು ಭವಿಯಾಡಿಹನು''------ ಭವಿ ಸುಟ್ಟು ಬೆಳಗಾಗಿ ಭಕ್ತನಾದ''- ಎಂದು ತಿಳಿಸಿಕೊಟ್ಟವರು ಶರಣರು (ಮಹಾದೇವಿಯಕ್ಕ ಹೇಳಿದ್ದು ಪುಟ- 699). ಹೀಗೆ ದ್ವೈತದ ಮೂಲಕ ಅದ್ವೈತವನ್ನು ಕಾಣಬೇಕೆಂದು ಪ್ರತಿಪಾದಿಸುವ ಶರಣರು, ಅನುಭಾವಿಗಳು, ದ್ವೈತದ ಕತ್ತಲೆಯನ್ನು, ಬೆಳಗಾಗಿಸಲು ಅರ್ಚನ, ಅರ್ಪಣ, ಅನುಭಾವಗಳಿಂದ ಕೂಡಿದ ಮಾರ್ಗವೊಂದನ್ನೂ ತತ್ವಪ್ರಪಂಚದಲ್ಲಿ ಹೊಸದಾಗಿ ತೆರೆದರು. ಕಾಯಕವನ್ನೂ ಅದಕ್ಕೆ ಜೋಡಿಸಿದರು. ಪ್ರಭುಜಂಗಮನ ಸನ್ನಿಧಿಯಲ್ಲಿ, ಗುರುಬಸವನ ನೇತೃತ್ವದಲ್ಲಿ, ಕಲ್ಯಾಣಕ್ಷೇತ್ರದಲ್ಲಿ, ಹಿಂದಣ ಅನುಭಾವಿಗಳ ಅನುಭವವನ್ನು ಹಿನ್ನಲೆಯಾಗಿಟ್ಟುಕೊಂಡು, ಈ ಮಹಾಕಾರ್ಯ ನಡೆಯಿತೆಂಬುದು ಸ್ವಯಂಸಿದ್ಧವೆಂಬ ನಂಬಿಕೆ ಗ್ರಂಥಕರ್ತರದು. ವಿಶ್ವದಲ್ಲೆಲ್ಲ ಹರಡಿರುವ ದ್ವೈತಗತ್ತಲೆಯನ್ನು ಅದ್ವೈತದ ಬೆಳಕಾಗಿ ಪರಿವರ್ತಿಸಲು ಬಸವಾದಿ ಶರಣರು ಮಾಡಿದ ಪ್ರಯತ್ನ 'ಭವ್ಯಮಾನವ' ಕಾವ್ಯದಲ್ಲಿ ವಿಸ್ತಾರವಾಗಿ ಬಂದಿದೆ. ಅದರ ಸಿಂಹಾವಲೋಕನ ಮಾತ್ರ, ಇಲ್ಲಿ ಸಾಧ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವೈತಲೀಲೆಯಾಡಿ ಜಗವಾಗಿ ಜಡವಾಗಿ ಕತ್ತಲೆಯ ಗರ್ತದಲ್ಲಿ ಬಿದ್ದು ತಮದಿಂದ ಅಂಧತಮಂಧದೆಡೆ ಇಳಿದಿರುವ ಪರಶಿವನ ತಾಮಸಶಕ್ತಿ ಮಹಾಮಾಯೆಗೆ ಶಿವಾದ್ವೈತಭಕ್ತಿಯ ದೀಕ್ಷೆಕೊಟ್ಟು, ದ್ವೈತಪ್ರಪಂಚದ ರಭಸದ ಮಹಾಪೂರದಿಂದ, ಬೆಳಗನ್ನು ತೆಗೆದೆತ್ತಿ, ನೆಲದಿಂದ ಮುಗಿಲಾಚೆ ಬೆಳಗಿರುವ ಏಕಮೇವಾದ್ವಿತೀಯ ಬೆಳಗನ್ನು ಬೆರೆಯಲು ಸೇತುವೆ ಕಟ್ಟಿದವರು ಶರಣರು (ಮಹಾದೇವಿ ಹೇಳಿದ್ದು ಪುಟ- 709). ಅದನ್ನವರು ಅರ್ಪಣ ವಿಧಾನದಿಂದ ಸಾಧಿಸಿದರು.

ಶಿವನ ಮಾಯಾಶಕ್ತಿ ಪ್ರಕೃತಿಮಾತೆ ಸೃಷ್ಟಿಸಿದ ಪಂಚ-ಭೂತಗಳನ್ನು, ತನ್ಮಾತ್ರಗಳಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಪದಾರ್ಥಗಳನ್ನು ಅದ್ವೈತಲಿಂಗ ರೂಪದ ಶಿವನಿಗಿತ್ತು ಪ್ರಸಾದವಾಗಿಸಿದಾಗ ಪಂಚಭೂತ ಗಳನ್ನಾವರಿಸಿದ ಕತ್ತಲೆ ಕಳೆಯುತ್ತದೆ. ಕತ್ತಲೆಯನ್ನು ಬೆಳಗುಮಾಡಿ ಪ್ರಸಾದವಾಗಿಸುವ ತಂತ್ರವನ್ನು ಕಂಡು ಹಿಡಿದವರು ಶರಣರು.

"ಕರತಲದಿ ಬೆಳಗಿರುವ ಕರದಿಷ್ಟಲಿಂಗವೆ।
ಮುತ್ತಿರ್ದಕತ್ತಲೆಯ ಬೆಳಗು ಮಾಡುವ ತಂತ್ರ।
--------- ಕತ್ತಲೆಯ ಕೊಂಡೊಯ್ದು ಲಿಂಗಕ್ಕೆ ಪೂಜಿಸುವ
ಕತ್ತಲೆಯನರ್ಪಿಸುತೆ ಬೆಳಗಿನಾ ಮುಖದೊಳಗೆ।
ಕತ್ತಲೆಯು ಬೆಳಗಾಗಿ ಬಂದ ಪ್ರಸಾದವನು।
ಉಂಡುಟ್ಟು ಸುಖಿಸಿರುವ ಸದ್ಭಕ್ತ। ತಂತ್ರವಲ್ಲವೆ ತಂದೆ,
ಸತ್ತ ಕತ್ತಲೆಯನೆತ್ತುವ ಮಹಾಮಂತ್ರ"-

(ಮಹಾದೇವಿ ಹೇಳಿದ್ದು ಪುಟ- 538)

ಹೀಗೆ ಶಿವಾದ್ವೈತಭಕ್ತಿಯ ಆಚರಣೆಯಲ್ಲಿ ಅರ್ಪಣವಿಧಾನವನ್ನಳವಡಿಸಿ, ಶಿವನ ಮಾಯಾಶಕ್ತಿಯ ಅಧೋಸೃಷ್ಟಿಯ ಕತ್ತಲೆಯನ್ನು ಬೆಳಗುಗೊಳಿಸಿ ತನ್ಮೂಲಕ ಅವಳು ನಿಜರಮಣನನ್ನು ಕೂಡುವ ತಂತ್ರವನ್ನು ರೂಪಿಸಿದವರು ಶರಣರೆಂಬುದನ್ನು ಗ್ರಂಥಕರ್ತರು ಮಹಾದೇವಿಯಿಂದ ಹೇಳಿಸಿ ಸ್ಪಷ್ಟಪಡಿಸಿದ್ದಾರೆ.

ಒಂದಿದ್ದುದೆರಡಾಗಿ ತನ್ನ ತಾನೇ ಒಡೆದು ಸಂಕೋಚಗೊಂಡು ಜಗದೊಡನೆ ಜಗವಾಗಿ ಹಿಗ್ಗಿಕುಗ್ಗಿರುವ ದೇವನಿಗೆ ತನ್ನ ಹಿಂದಡಗಿರುವ ಬ್ರಹ್ಮಭವ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಧಾನದ ನಿಜಮೂಲ ಸಂಪರ್ಕ ತಪ್ಪಿಲ್ಲವೆಂಬುದನ್ನು (ಪುಟ- 706) ತಮ್ಮ ಜೀವನದ ಮೂಲಕವೆ ಶರಣರು ತೋರಿಸಿಕೊಟ್ಟರು. ''ದ್ವೈತದೇವನೊಳಡಗಿ ಹರವಿದದ್ವೈತ। ಎರಡಾದ ದೇವಂಗೆ ಏಕಮೇವಾಧಾರ'' (ಪುಟ- 704) - ಎಂದು ಗುರುಚೆನ್ನಮಲ್ಲ ಹೇಳಿರುವುದು ಬಹಳ ಅರ್ಥಗರ್ಭಿತವಾಗಿದೆ.

'ನಾನು' 'ನನ್ನದು' ಎಂಬ ಹಮ್ಮಿನಿಂದ ಕೂಡಿನ ಈ 'ನಾನು- ಮಾನವ' ತನ್ನೊಳಗಿರುವ ಸಂಪದವನ್ನರಿಯದೆ, ಹೊರಸಂಪತ್ತಿನ ಬೆನ್ನುಹತ್ತಿ, ಸುಖವೆಂದರೆ ಸಂಸಾರಸುಖ ಅದನ್ನು ಬಿಟ್ಟು ಬೇರೊಂದು ಸುಖವಿಲ್ಲವೆಂಬ ಭ್ರಮಗೊಳಗಾಗಿ, ಹಲವು ಬಗೆಯ ದೊಡ್ಡಾಟ ಸಣ್ಣಾಟಗಳ ರಿಂಗಣಗುಣಿತ ಕುಣಯುತ್ತಿರುವ ಈ ಕರಿತಲೆಯ ಮಾನವನ ಹೃದಯಗಂಭೀರದಲ್ಲಿ ಹೂಳಿರುವ ಬೆಳಕಿನ ಗುಟ್ಟನ್ನು ರಟ್ಟು ಮಾಡಿದವರು ಶರಣರು. ನೆಲದ ಮರೆಯ ನಿಧಾನದಂತೆ ಮಾನವಸ್ಥಲದಲ್ಲಿ ಹುದುಗಿರುವ ಭಕ್ತಿಶಕ್ತಿಯನ್ನು ಜಾಗ್ರತಗೊಳಿಸಿ ಅದನ್ನು ವಿಕಾಸಗೊಳಿಸುತ್ತ ಹೋದಂತೆ ನಮ್ಮಲ್ಲಿ ಅದ್ವೈತವಾಗಿರುವ ಲಿಂಗಕಳೆಯೂ ನಳನಳಿಸಿ ಬೆಳೆಯುತ್ತ ಹೋಗಿ, ಲಿಂಗಶಕ್ತಿ ಅಂಗಭಕ್ತಿಗಳು ಸಂಗಮಿಸಿ ಶಿವ- ಜೀವರು ಬೆರೆತು ಬೇರಿಲ್ಲವಾಗುವ ಅನುಪಮಮಾರ್ಗವನ್ನು ತೆರೆದು ತೋರಿದವರು ಬಸವಾದಿ ಪ್ರಮಥರು.

ಸಂಸಾರ ಸಂಮುಖನಾಗಿ ಮರಹುಗತ್ತಲೆಯಲ್ಲಿ ತಿರುಗದ ದಾರಿ ಹಿಡಿದು ಹೋಗುತ್ತಿರುವ ಈ ನಿಮಿಷ ಮಾನವ, ತನ್ನ ಕಳ್ಳುಬಳ್ಳಿಯೆಂಬುದನ್ನು ಪರಶಿವ ಮರೆತಿಲ್ಲ. ಅವನನ್ನು ಮೇಲುಗಡೆಗೇರಿಸಲು, ಅವನನ್ನುದ್ಧರಿಸಲು ಸತ್-ಚಿತ್- ಆನಂದರೂಪನಾದ ಅವನು ಗುರು-ಲಿಂಗ- ಜಂಗಮವಾಗಿ ಬರುತ್ತಾನೆಂದು ಶರಣಸಿದ್ಧಾಂತ ಹೇಳುತ್ತದೆ. ಅದನ್ನೇ 'ಭವ್ಯಮಾನವ' ಕಾವ್ಯದಲ್ಲಿ,

''ಮೇಲುಗಡೆಗೇರಿಸಲು ಜಗದ ಪ್ರಾಣಗಳ।
ನಿಜಮೂಲದೆಡೆ ನಡೆಸಿ ಬದುಕಿಸಲು ಮಾನವನ।
ಒಳಗೆ ಪಾಠವ ಕಲಿಸಿ ತಿದ್ದಿ ತೀಡಿ।
ವಿಶ್ವಾಂತರಂಗ, ಗುರು-ಲಿಂಗ- ಜಂಗಮದೇವ।
ವಿಶ್ವವನು ನಿಯಾಮಿಸುತ ನಿಂದಿಹನು ದೇವ''।

(ಪುಟ- 708)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಮಹಾದೇವಿಯಕ್ಕನ ಮೂಲಕ ಪ್ರೊ. ಘೂಸನೂರಮಠ ಅವರು ಹೇಳಿಸಿದ್ದಾರೆ.

ಸಚ್ಚಿದಾನಂದಸ್ವರೂಪ ಪರಶಿವನ ಸಪ್ರೂಪಸುದ 'ಗುರು'- ಶಿವನ ದ್ವೈತಾಂಧಶಕ್ತಿಗೆ ಪ್ರತಿದ್ವಂದ್ವಿ ಶಿವಾದ್ವೈತ ಭಕ್ತಿ, ಆ ದ್ವೈತಾಂಧವನ್ನು ಈ ಅದ್ವೈತ ಭಕ್ತಿ ಬೆಳಗಬಲ್ಲದು, ಮಾನವ ತನ್ನ ಭವಿತ್ವವನ್ನು ನೀಗಿ ಭಕ್ತನಾಗಿ ಅದ್ವೈತ ಪೂಜೆಗೆ ತೊಡಗುವುದು ಈ ಶಿವಾದ್ವೈತಭಕ್ತಿಯ ಮೂಲಕವೆ, ಆದುದರಿಂದ ಅದು ಪಂಚಮಪುರುಷಾರ್ಥ, ಅಂತಹ ಭಕ್ತಿಶಕ್ತಿ ಹುದುಗಿರುವುದು ಆತ್ಮನಲ್ಲಿ, ಅದು ಮಾನವನ ಮರೆಯ ದಿವ್ಯ ವಿಧಾನ-ಮುಂತಾಗಿ ಉಪದೇಶಿಸಿ, ಅದನ್ನು ಕಾಣುವ 'ಅರಿವುಗಣ್' ಶಿಷ್ಯನಲ್ಲಿ ತೆರೆಯುವಂತೆ ಮಾಡುತ್ತಾನೆ. ''ತನ್ನಿರವು ಜಗದಿರವು ಒಂದೇ ಅಖಂಡ। ಹರುಕಿಲ್ಲ ಬಿರುಕಿಲ್ಲ ಅಲ್ಲಲ್ಲಿ ಎಲ್ಲೆಂಬ'' (ಪುಟ- 546) ತಿಳಿವಳಿಕೆಯನ್ನು, ಶಿವ- ಜೀವ- ಜಗತ್ತು ಒಂದೇ ಅಖಂಡವೆಂಬ ಅರಿವನ್ನು ನೀಡುವವನೂ ಸದ್ಗುರುವೇ.

ಅಂತಹ 'ಗುರುತತ್ವ'ದ ಪ್ರತಿನಿಧಿ ಬಸವಣ್ಣನೆಂದು ಲೇಖಕರ ನಂಬಿಕೆ. ''ಮರ್ತ್ಯದ ಕತ್ತಲೆಗರ್ಥವ ತಂದ। ಕತ್ತಲೆ ಲಿಂಗವ ಬೆಳಗುಲಿಂಗವ ಮಾಡಿ। ಕತ್ತಲೆ ಬೆಳಕಿನ ಬಿರುಕು ಮುಚ್ಚಲು ಬಂದ। (ಪುಟ- 183) ಎಂದು ಬಸವ ಗುರುವಿನ ಮಹತ್ ಕಾರ್ಯವನ್ನು ಪ್ರಕೃತಿಮಾತೆಯ ಅಂತರ್ವಾಣಿ ರೂಪದ ಶಿವನಿಂದ ಪ್ರಕೃತಿಮಾತೆಗೆ ಲೇಖಕರು ಹೇಳಿಸಿ, ಮುಂದೆ ಉದ್ದಕ್ಕೂ ಬಸವಣ್ಣ ಧಾರ್ಮಿಕ ಇತಿಹಾಸದಲ್ಲಿ, ತತ್ವಪ್ರಪಂಚದಲ್ಲಿ ಒಂದು ಹೊಸ ಹಾದಿಯನ್ನು, ಒಂದು ಹೊಸ ಆಯಾಮವನ್ನು ಹೇಗೆ ತೆರೆದನೆಂಬುದನ್ನು ವಿವರಿಸುತ್ತ ಹೋಗಿದ್ದಾರೆ. ಆ ವಿವರಣೆಯಲ್ಲಿ:-

ವೇದ- ಆಗಮ- ಪುರಾಣ- ತರ್ಕಶಾಸ್ತ್ರಾದಿಗಳು ಹೇಳುವ ವಿಧಿವಿಧಾನ ನೀತಿ-ಆಚಾರಗಳ ವಿಚಿತ್ರವನ್ನು ಕಂಡು ಬಸವನು ನಕ್ಕದ್ದು- ಹೊನ್ನು ಹೆಣ್ಣು, ಮಣ್ಣು, ಮತ್ತು ಅರಿಷಡ್ವರ್ಗಗಳ ಬಲೆಯಲ್ಲಿ ಸಿಲುಕಿ ಮಾನವ ಒದ್ದಾಡುತ್ತಿರುವುದನ್ನು ಕಂಡು ಅವನು ಕಣ್ಣೀರಿಟ್ಟುದು- ಪೂಜಾರಿಗಳಿಂದಾಗಿ ದೇವರಿಗೆ ಬಂದ ಸೆರೆಮನೆವಾಸ, ಮಠದ ಮಹಾಂತರು ಆಚಾರ್ಯರು ಎರಡು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತ್ತಲೆಗೆ ಒಳಗಾಗಿ ನಡೆಸಿರುವ ನಾಟಕಾದಿಗಳನ್ನು ಕಂಡು 'ವಿಪರೀತ ವಿಪರೀತ' ಎಂದು ಉದ್ಗರಿಸಿದ್ದು- ಇತ್ಯಾದಿಗಳು ಬರುವ ಜೊತೆಗೆ ಮಾನುಷ ಪುತ್ರ ತನ್ನ ಉದ್ಧಾರಕ್ಕಾಗಿ ಹಿಡಿದ ಹತ್ತು ಹಲವು ದಾರಿಗಳ ಭೂತಕಾಲದ ಕಥೆಯೂ ಬರುತ್ತದೆ. ಅಲ್ಲಿ ಭಯವನ್ನೇ ಭಕ್ತಿಯೆಂದು ತಿಳಿದು ಮಾನವಪ್ರಾಣ ಗುಡುಗು, ಮಿಂಚು, ಗಾಳಿ, ಮಳೆ, ನದಿ, ಬೆಂಕಿ, ಇತ್ಯಾದಿ ಕೋಟಿ ಕೋಟಿ ಸಂಖ್ಯೆಯ ದೇವತೆಗಳನ್ನು 'ಕಾವುದು ಕಾವುದು' ಎಂದು ಆತ್ತೂತ್ತಕರೆದು ಬೇಡಿಕೊಳ್ಳುವ- ಅವರ ಕಾಲಿಗೆ ಬೀಳುವ- ಮಂತ್ರ-ತಂತ್ರಗಳ ಮೂಲಕ ಅವರನ್ನು ಕೂಗಿ ಮೊರೆಯಿಡುವ- ಶಿರ ಕಡಿದು ಕರ ಕಡಿದು, ಕರುಳು ಕತ್ತರಿಸಿ ಅವರಿಗೆ ಹರಕೆಯೊಪ್ಪಿಸುವ- ಸತಿಸುತ, ಧನಕನಕಾದಿಗಳ ಹಂಗು ಹರಿದು ಅವೆಲ್ಲವನ್ನು ಆ ದೇವತೆಗಳಿಗರ್ಪಿಸಿ, ವೀರನಿಷ್ಠೆ ಉಗ್ರಭಕ್ತಿಗಳನ್ನು ಮೆರೆಯುವ- ಮತ್ತೆ ಆ ದೇವತೆಗಳ ಮಹಿಮೆಯನ್ನು ಹೇಳುತ್ತ ಕೇಳುತ್ತ, ಹಾಡುತ್ತ ಕೀರ್ತಿಸುತ್ತ ನವವಿಧ ಭಕ್ತಿಯನ್ನು ತೋರಿಸುವ- ವಿಚಿತ್ರ ಚಿತ್ರಣವಿದೆ. ಬುದ್ಧಿ ಬಲಿತ ಮಾನವ ತನ್ನ ಕಲ್ಪನಾಶಕ್ತಿಯ ಬಲದಿಂದ ಹರಿ-ಹರ- ಬ್ರಹ್ಮರನ್ನು ಸೃಷ್ಟಿಸಿ, ಅವರಿಗೆ ವಾಸಕ್ಕಾಗಿ ವೈಕುಂಠ, ಕೈಲಾಸ, ಸ್ವರ್ಗಗಳನ್ನು ಕಟ್ಟಿದುದನ್ನೂ- ಅಗಾಧ ಶಕ್ತಿವಂತನಾಗಲು, ಪರಬ್ರಹ್ಮವನ್ನು ಕಾಣಲು ಅದೇ ಮಾನವ ಯಮನಿಯಮಾದಿ ಅಷ್ಟಾಂಗ ಯೋಗದತ್ತ ತಿರುಗಿ, ಷಡುಚಕ್ರ ನವಚಕ್ರಗಳ ಶ್ರೇಣಿಯೇರಿ, ಹಠ, ಲಯ, ಮಂತ್ರ, ರಾಜಯೋಗಗಳಲ್ಲಿ ತೊಡಗಿ ನಾದಪ್ರಪಂಚ, ಬೆಳಗಿನ ಚಿತ್ರ, ಚೈತನ್ಯದಾಟವನ್ನು ಕಾಣುತ್ತ ಯೋಗಾನಂದದಲ್ಲಿ ಲೀನನಾದುದನ್ನೂ- ತುಂಬಾ ಚೆನ್ನಾಗಿ ನಿರೂಪಿಸಲಾಗಿದೆ. ಶಾಶ್ವತ ಸುಖಾನಂದಕ್ಕಾಗಿ ಮಾನವ ನಡೆಸಿದ ಈ ಪ್ರಯತ್ನಗಳೆಲ್ಲ ದ್ವೈತ ಭಕ್ತಿಯಿಂದ ಕೂಡಿದವು. ಕೆಲವಂತೂ ಪರಮಾತ್ಮ ಹೊರಗಿದ್ದಾನೆ, ಒಳಗಿಲ್ಲವೆಂಬ ಗೃಹೀತದಿಂದ ನಡೆದಂತಹವು. ಅಂಥವರು ಬರೀ ಹೊರಗಿದ್ದು ಹೊರಗನೆ ಕೊಯ್ದು ಹೊರಗನೆ ಉಂಡುಟ್ಟು ಸುಖಿಸಿದರೆ ವಿನಾ ಒಳಗಿನ ಬೆಳಕನ್ನೇ ಕಾಣಲಿಲ್ಲ. ಅವರಿಂದಾಗಿ ಒಳಗು ಬೂರಲವಾಗಿ ಅಂತರಂಗ ಹಾಳು ಸುರಿಯುವಂತಾಯಿತೆಂಬ ವಿವರಣೆ ಕೂಡ ಅಲ್ಲಿದೆ.

ಹೀಗೆ ಎದುರಿಟ್ಟು ಅರಸುವ, ದ್ವೈತಭಕ್ತಿ- ಪೂಜೆ- ಯೋಗಗಳೆಲ್ಲವೂ ನಿರರ್ಥಕ ವೆಂಬುದನ್ನು- ಕೋಟಿ ಕೋಟಿಕಾಲದಿಂದಲೂ ತನಗೆ ಕವಿದ ನಿದ್ದೆಯನ್ನೊರಸಿ ಬೆಳಗಿನ ದಿಕ್ಕಿಗೆ ಬಿಗಿದ ಒಳಬಾಗಿಲವ ತೆರೆಯಲೆಂದು ಜಪ್ಪಿಸಿ ಕುಳಿತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಣ್ಯಪಿಂಡಕ್ಕೆ --ಗುರು (ಬಸವ) ತಿಳಿಸಿಕೊಟ್ಟಂತೆ 'ಭವ್ಯಮಾನವ' ಕೃತಿಯಲ್ಲಿ ಬರುತ್ತದೆ (ಪುಟ- 185). ತದನಂತರ ಬೆಳಕಿಗಾಗಿ ಹಂಬಲಿಸುತ್ತಿರುವ ಬ್ರಹ್ಮದ ಶಿಶುವಿನ ಮಸ್ತಕಕ್ಕೆ ಗುರು ತನ್ನ ಹಸ್ತವನ್ನು ಸಂಯೋಗಿಸುತ್ತಾನೆ. ಆಗ ನಡೆಯುವ ಪರಮಾದ್ಭುತದ ವರ್ಣನೆ 'ಭವ್ಯಮಾನವ' ಕೃತಿಯಲ್ಲಿ ಹೀಗಿದೆ;

''ಜ್ಯೋತಿರ್ಮಯಲಿಂಗ ಶ್ರೀ ಗುರುವಿನ ಹಸ್ತ। ಶಿಷ್ಯನ ಮಸ್ತಕ ಸೋಂಕಿದರೆ।
ಕೋಟಿಕೋಟ್ಯಂತರಕಾಲ ಕೀಲಿಸಿದ। ಮಾನವಹೃದಯದ ಬಾಗಿಲು ತೆರೆಯಿತು।
ಬೆಳಗಿನ ಬೆಳಗು ಮಹಾಬೆಳಗಿನ ಕಳೆ। ನಿಜದಿರವಿಗೆ ಕಣ್ಣು ದೀಪಿಸಿತು।

(ಪುಟ- 194)

ಹೀಗೆ ಶ್ರೀ ಗುರುವಿನ ಹಸ್ತ ಶಿಷ್ಯನ ಮಸ್ತಕವನ್ನು ಸಂಯೋಗಿಸಿದಾಗ ಮಾನವ ಹೃದಯದ ಬಾಗಿಲು ತೆರೆದು ಅಲ್ಲಿ ಬೆಳಗಿನ ಬೆಳಗು ಮಹಾಬೆಳಗು ದೀಪಿಸಿತೆಂದು ಹೇಳುವ ಈ ವರ್ಣನಾಭಾಗ ಮುಂದುವರಿದು, ಆಗ ಮಾನವಭಾವಬುದ್ಧಿಯ ರಾತ್ರಿ ತೊಲಗಿ ತನ್ನತಾನರಿವ ಬೆಳಗು ಬಯಲಿಗೆ ಬಿತ್ತೆಂದೂ, ಹಾಗೆಯೆ ಮಾನವ ಪ್ರಾಣದ ಬಾಗಿಲು ತೆರೆದು ಪ್ರಾಣಲಿಂಗದಕಳೆ ಪ್ರಾಣ ಚೈತನ್ಯವನ್ನು ದೀಪಿಸಿತೆಂದೂ, ಕಂಗಳ ಬಾಗಿಲು ತೆರೆದು ಒಳಗೆ ಕಳೆಯೆದ್ದು ಕಣ್ಣಿಗೆ ಲಿಂಗವನ್ನು ಮೂಡಿಸಿತೆಂದೂ- ಅತ್ಯಂತ ಹೃದ್ಯವಾಗಿ ತಿಳಿಸಿಕೊಡುತ್ತದೆ. ನಿಜದ ಬೆಳಗಿನ ಕುರುಹಾಗಿ ಶ್ರೀ ಗುರುವಿತ್ತ ಇಷ್ಟಲಿಂಗವನ್ನು ತನ್ನ ಕರಕಮಲದಲ್ಲಿಟ್ಟು ಶಿಷ್ಯ ಅದ್ಭುತ ಪೂಜೆಗೆ ತೊಡಗುತ್ತಾನೆ.

ಅರ್ಚನ, ಅರ್ಪಣ, ಅನುಭಾವ ಮತ್ತು ಯೋಗಗಳು ಮೇಳವಿಸಿರುವ ಅದ್ಭುತ ಪೂಜೆ ನಿರಂತರ ಮುಂದುವರಿದಾಗ ಭಕ್ತಿ-ಶಕ್ತಿ, ಶ್ರದ್ಧೆಯಿಂದ ನಿಷ್ಠೆಗೆ, ನಿಷ್ಠೆಯಿಂದ ಅವಧಾನಕ್ಕೆ, ಅವಧಾನದಿಂದ ಅನುಭವಕ್ಕೆ, ಅನುಭವದಿಂದ ಆನಂದಕ್ಕೆ, ಆನಂದದಿಂದ ಸಮರಸಕ್ಕೇರಿ, ಮಹಾಲಿಂಗದಲ್ಲಿ ಸಮರಸಗೊಂಡು, ಉರಿಯುಂಡ ಕರ್ಪೂರದಂತಾಗುವ ರಸಚಿತ್ರ ಸತಿ- ಪತಿ-ಭಾವ ಶೃಂಗಾರದ ಬೆನ್ನೇರಿ ಅತ್ಯಂತ ಹೃದಯಂಗಮವಾಗಿ 'ಭವ್ಯಮಾನವ' ಕೃತಿಯಲ್ಲಿ ಬಂದಿದೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಅಂತರಂಗದ ಭಕ್ತಿಯಂಗನೆ ಕಳೆಯೇರಿ
ಬೆಳಗಿಗೆ ಒಳಗನರ್ಪಿಸಿ ಪೂಜಿಸುವ
ಸಿರಿಸಿಂಗರವಾಗಿ ಉರಿಯ ರಮಣಂಗೆ
ಒನಪು ಒಯ್ಯಾರ ಮಾಡಿದಳು
ನಲ್ಲನನೊಲಿಸುವ ತಂತ್ರ ಹೂಡಿದಳು"

"ಅಂತರಂಗದ ಬೆಳೆ ಸೃಷ್ಟಿಸಂಪದವ। ಅಂತರಂಗದ ಸೌಂದರ್ಯ ವಿಶಾಲವ।
ಅಂತರಂಗದ ವಸ್ತುದ್ರವ್ಯ ಪದಾರ್ಥವ। ರಾಶಿರಾಶಿಯ ತಂದು ಪೂಜೆಯ ರಚಿಸಿ।
ಅಂತರಂಗದ ಬ್ರಹ್ಮಾರ್ಥವ ಕಂಡು। ಭಕ್ತಿಯಂಗನೆ ತನ್ನ ಉರಿಯನಲ್ಲನ ಕಂಡು।
---- ಒಳಹೊರಗೊಪ್ಪಿಸಿ ಭಕ್ತಿಯಂಗನೆ ತನ್ನ। ನಿರ್ಭರತಿಯ ಪೂಜೆಯನೊಡ್ಡಿದಳಲ್ಲಾ।
--------- ------------ ---------- ----------
--------- ---------- ------------ ---------------
ಪರಿಪೂರ್ಣ ಪ್ರಾಣ ಬ್ರಹ್ಮಕೆ ತನ್ನನೊಪ್ಪಿಸಿ। ಪ್ರಾಣರತಿಯಸುಖ ಪರಮಪ್ರಸಾದವ।
ಭೋಗಿಸಿ ಭೋಗಿಸಿ ಮೈಯ ಮರೆದಳಲ್ಲಾ। ಪ್ರಾಣಭಕ್ತಿಯ ಸೊಲ್ಲು ಅಡಗಿತಲ್ಲಾ।
ಉರಿಯುಂಡ ಕರ್ಪುರವಾದಳಲ್ಲಾ"।-

(ಪುಟ- 205-206)

ಈ ವರ್ಣನೆ ಹೀಗೆ ಇನ್ನೂ ಮುಂದುವರೆದಿದೆ. ದೀಕ್ಷಾ ಸಂಸ್ಕಾರ, ಶಕ್ತಿ- ಭಕ್ತಿ ಸಂಯೋಗ ರೂಪದ ಶಿವಯೋಗದಂತಹ ತಾತ್ವಿಕ ವಿಷಯಗಳು, ಶಾಸ್ತ್ರಿಯೊಬ್ಬನಿಂದ ಶುಷ್ಕಾತಿಶುಷ್ಕವಾಗಿ ನಿರೂಪಣೆಗೊಂಡಿರುವುದು ಅನೇಕರಿಗೆ ಅನುಭವವೇದ್ಯ. ಪ್ರೊ. ಭೂಸನೂರಮಠ ಅವರು ಶಾಸ್ತ್ರವನ್ನು ಬಲ್ಲವರು. ಆದರೆ ಇಲ್ಲಿ ಅವರು ಶುಷ್ಕ ಶಾಸ್ತ್ರಿಯನ್ನು ಮೂಲೆಗೆ ಕೂಡಿಸಿ ಕವಿಶಾಸ್ತ್ರಿಯನ್ನು ಮುಂದೆ ಬಿಟ್ಟಿದ್ದಾರೆ. ಅದರಿಂದಾಗಿ ಶುಷ್ಕ ತತ್ವಶಾಸ್ತ್ರ ರಸಮಯಕಾವ್ಯವಾಗಿ ಇಲ್ಲಿ ತಾನೇ ತಾನಾಗಿ ವಿಹರಿಸಿದೆ. ಇಂತಹ ತತ್ವರಸಚಿತ್ರಗಳು 'ಭವ್ಯಮಾನವ' ಕಾವ್ಯದಲ್ಲಿ ಹಲವಾರು. ಅದಿರಲಿ.

ಮಾನವನಲ್ಲಿ ಕೆಳಮುಖವಾಗಿ ಮಲಗಿದ್ದ ಶಕ್ತಿಯನ್ನು ಎಚ್ಚರಿಸಿ, ಅದಕ್ಕೆ ಭಕ್ತಿಯ ದೀಕ್ಷೆಯಿತ್ತು ಮೇಲುಮುಖವಾಗಿಸುವ, ಬೆಳಗಿನ ಬಯಲಿಗೆ ಅದನ್ನು ಮೆಲ್ಲಮೆಲ್ಲನೆ ಕೊಂಡೊಯ್ಯುವ, ಬೆಳಗಾದ ಅದು ಮಹಾಬೆಳಗಿನಲ್ಲಿ ಕೂಡಿಹೋಗುವ ಅಪರೂಪದ ಉಪಾಸನಾ ವಿಧಾನವನ್ನು ಶರಣರು-ಅನುಭಾವಿಗಳು ತಮ್ಮ ಅನುಭಾವದ ಹಿನ್ನೆಲೆಯಲ್ಲಿ ಕಂಡು ಹಿಡಿದರು. ಅವರ ಆ ಉಪಾಸನಾ ಮಾರ್ಗ ಮತ್ತು ಅದಕ್ಕೆ ಹಿನ್ನೆಲೆಯಾಗಿರುವ ತಾತ್ವಿಕ ನಿಲುವುಗಳು ಪ್ರೊ. ಭೂಸನೂರಮಠ ಅವರಿಗೆ ಒಪ್ಪಿತ. ಆದುದರಿಂದಲೇ ಅವನ್ನವರು ಹಲವಾರು ಪುಟಗಳುದ್ದಕ್ಕೂ (182-220) ವಿವರಿಸಿದ್ದಾರೆ. ಬೇರೆಡೆಯಲ್ಲಿಯೂ ಪ್ರಸಂಗಾನುಸಾರ ಅವುಗಳ ನಿರೂಪಣೆ ಇದ್ದೇ ಇದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಾದಿ ಶರಣರು ಕಾಯಕವನ್ನು ತತ್ವದ ಪಟ್ಟಕ್ಕೇರಿಸಿದುದು ಸರ್ವವಿದಿತ. ಗುರು, ಲಿಂಗ, ಜಂಗಮಕ್ಕೂ ಕಾಯಕತಪ್ಪಿದ್ದಲ್ಲವೆಂದು ಅವರು ಸಾರಿದರು. ನುಲಿಯ ಚಂದಯ್ಯ ಲಿಂಗಕ್ಕೆ ನಾರು ಹೊಸೆದು ನುಲಿ ಮಾಡಿ ಮಾರುವ ಕಾಯಕವಿತ್ತಿದ್ದ. ಶರಣ ವೇಮಯ್ಯ ಜಂಗಮವೇಷದ ಶಿವನಿಗೆ ಮೊರನ ಕಾಯಕ ಮಾಡಲು ಹಚ್ಚಿದ್ದ. ಕಾಯಕವನ್ನು ಕುರಿತು ಶರಣರು ಹೇಳಿರುವುದಕ್ಕೆ ಪ್ರೊ. ಭೂಸನೂರಮಠ ಅವರೂ ತಮ್ಮ ದನಿ ಕೂಡಿಸಿದ್ದಾರೆ. 'ಭವ್ಯ ಮಾನವ' ಕೃತಿಯ 'ಭವ್ಯಕಾಂಡ'

''ಕಾಯಕಷ್ಟವ ಮಾಡಿ ಜಗಕುಣಸಲೆಂದು। ಹರಿಹರ ಬ್ರಹ್ಮದೇವಾನುದೇವತೆಗಳು।
ನೆಲಕ್ಕಿಳಿದು ಬಂದರೆ ಹಾನಿಯೇನವರಿಗೆ? ಜಗದ ಕಾಯಕದೊಳಗೆ ದಾಸೋಹದೊಳಗಿವರು।
ನಿರತರಾದರೆ ಮತ್ತೆ ಜಗಕೆ ಲೇಸಲ್ಲವೆ?

(ಪುಟ- 763)

ಎಂಬ ಕಾಯಕಕ್ಕೆ ಸಂಬಂಧಿಸಿದ ಗಿರಿಮಲ್ಲನ ಪ್ರಶ್ನೆಯಿಂದಲೆ ಆರಂಭವಾಗುತ್ತದೆ. ಇಲ್ಲಿ ಅವನು ಹರಿಹರಬ್ರಹ್ಮಾದಿಗಳು ಕಾಯಕವ ಮಾಡಿ ಜಗಕುಣಿಸಲು ನೆಲಕ್ಕಿಳಿದು ಬಂದರೆ ಅವರಿಗಾಗುವ ಹಾನಿಯೇನು? ಎಂದು ಪ್ರಶ್ನಿಸಿರುವುದು ಬಹಳ ಅರ್ಥಪೂರ್ಣವಾಗಿದೆ. ಆದಕ್ಕೆ ಉತ್ತರವಾಗಿ ಹರಿ-ಹರ-ಬ್ರಹ್ಮ ಮತ್ತು ಉಳಿದ ದೇವ- ದೇವತೆಗಳೆಲ್ಲ ತಂತಮ್ಮ ಪದವಿಗಳ ಬಲೆಯಲ್ಲಿ ಸಿಲುಕಿಕೊಂಡವರು, ತಾವುಂಡು ತಣದು ಪರಿಣಾಮದೊಳಗಿರುವವರು ಆದುದರಿಂದ ''ಹರಿಯಜಾಸುರರ ಹವಣಲ್ಲವೀ ಕಾಯಕ'' (ಪುಟ-764) ಎಂದು ಗುರುಚೆನ್ನ ಹೇಳಿರುವುದು ಇನ್ನೂ ಅರ್ಥವತ್ತಾಗಿದೆ. ಕಾಯಕತತ್ವವನ್ನು ಜೀವಿಸುವದು ಶರಣರಿಂದ ಮಾತ್ರ ಸಾಧ್ಯವೆಂಬ ಧ್ವನಿ ಇಲ್ಲಿದೆ. ''ಬಾರಯ್ಯ ಮಗನೆ ಕೈಲಾಸಕೆ'' ಎಂದು ಶಿವನು ಕಂಕರಿಯ ಕಕ್ಕಯ್ಯನನ್ನು ಕರೆದಾಗ ಅವನು,

''ನಿನ್ನ ಕೈಲಾಸ ನಿನಗಿರಲಿ ಬೇಕಿದ್ದರೆ! ನಿನ್ನ ಒಕ್ಕಲು ಸಹಿತ ಕೈಲಾಸದಿಂದಿಳಿದು।
ಬಾರಯ್ಯ ಮರ್ತ್ಯಕ್ಕೆ ಭಕ್ತಕಾಯಕ ಮಾಡು! ಕಾಯಕಷ್ಟದೊಳಿರುವ ಕೈಲಾಸವನು ನೋಡು!
ಮೈಮುರಿದು-ದುಡಿದುಡಿದು- ಮಾಡಿರುವ ಕಾಯಕದ ಸವಿಸುಖವು ನಿನಗೆಲ್ಲಿ?।
ತಂದ ಸುಯಿಧಾನವನು·ಜಗದ ಜಂಗಮಕಿತ್ತು! ಜಗದಗಲ ಪ್ರಾಣ ಸಂತೃಪ್ತಿಗೊಂಡಿರುವ
ದಾಸೋಹ ನಡೆಸ ಬಾರಯ್ಯ---- ಸಕಲ ಜೀವಾತ್ಮ ಸಂತೃಪ್ತಿಯಾನಂದ।
ಕೈಲಾಸದೊಳು ನಿಮಗೆ ಉಂಟೇನು ಹೇಳಯ್ಯ?-

(ಪುಟ-768)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಶಿವನನ್ನು ಕಾಯಕಮಾಡಲು ಇಲ್ಲಿಗೆ ಆಹ್ವಾನಿಸಿರುವುದು, ಕಾಯಕದ ಸುಖ ಕೈಲಾಸದವರಾದ ನಿಮಗೆ ಇದೆಯೇ? ಎಂದು ಪ್ರಶ್ನಿಸಿರುವುದು ಕಾಯಕದ ಬಗೆಗಿನ ಲೇಖಕರ ನಿಲುವನ್ನು ಸ್ಪಷ್ಟಪಡಿಸುತ್ತದೆ. ಮೊರನ ವೇಮಯ್ಯನ ಕಾಯಕಪ್ರಭೆಯನ್ನು ಕುರಿತು,

"ಅಂಧಭಾವದ ದ್ವೈತವ್ಯಾಪಾರ ಕ್ರಿಯೆಯೆಲ್ಲ
ಬೆಳಗಾಯ್ತು ಕಾಯಕದ ಅನುಭಾವ ಪ್ರಭೆಯೊಳಗೆ"-

(ಪುಟ- 771)

ಎಂದು ಲೇಖಕರು ಹೇಳಿರುವ ಮಾತು, ಕಾಯಕತತ್ವದ ಬಗೆಗೆ ಅವರು ತಾಳಿರುವ ಹೊಸ ನಿಲುವಿನ, ಹೊಸದೃಷ್ಟಿಯ ಸೂಚಕವಾಗಿದೆ. ದ್ವೈತಾಂಧತಮವೆಲ್ಲ ಕಾಯಕದ ಅನುಭಾವದ ಪ್ರಭೆಯಲ್ಲಿ ಇಲ್ಲವಾಗುತ್ತದೆಂಬ ಸೂತ್ರಪ್ರಾಯ ಮಾತಿನಲ್ಲಿ ಕಾಯಕದ ಸಾರಸರ್ವಸ್ವವನ್ನೇ ಭಟ್ಟಿಯಿಳಿಸಲಾಗಿದೆ. ಮಾನವನ ಹೃದಯ ಗಂಭೀರದಲ್ಲಿರುವ ಬೆಳಗು ಪ್ರಜ್ವಲಸಿ ಅವನು ಪ್ರಕಾಶಕಾಯನಾಗಲು ಕಾಯಕ ಸಹಾಯಕಾರಿಯೆಂಬ ನಿಲುವು ಪ್ರೊ. ಭೂಸನೂರಮಠ ಅವರದು.

ಕತ್ತಲೆಗೆ ಕಾರಣವಾದ ದ್ವೈತದ ಲವಲೇಶವಿಲ್ಲದ, ಅದ್ವೈತಭಾವ- ಅದ್ವೈತಪೂಜೆ- ಅದ್ವೈತ ಭಕ್ತಿ ಮತ್ತು ಅದ್ವೈತಕಾಯಕವಿಡಿದು ಮುನ್ನಡೆದು ಬೆಳಗಿನ ಪುಂಜಗಳಾದ ಮಹಾನುಭಾವರು, (ಇಂತಹ ಶರಣನ ವಿರಾಡ್ರೂಪದ ವರ್ಣನೆ ಶರಣತತ್ವದ ಅರ್ಥವಿಸ್ತಾರ, 'ಭವ್ಯಮಾನವ' ಕಾವದಲ್ಲಿ ಮತ್ತೆ ಮತ್ತೆ ಬಂದಿದೆ, ನೋಡಿ: ಪುಟ-516, 538, 586- 89, 599, 714-716, 720, 735, 643-646, 692-694 ಇತ್ಯಾದಿ ಹಾಗೆಯೆ,
ಗುರುಮಹತ್ವಕ್ಕೆ ಪುಟ- 110, 112, 114, 120, 131, 443, 510-13, 540, 549, 550, 639, 660, 676-79 ಇತ್ಯಾದಿ ನೋಡಿ.
ಭಕ್ತ ಮಹತಿಗೆ ಪುಟ- 145, 553, 555, 562 ಇತ್ಯಾದಿ ನೋಡಿ) ಶಿವಶರಣರು ಲೋಕವನ್ನು, ಲೋಕದ ಜನರನ್ನು ಅವರ ಪಾಡಿಗೆಬಿಟ್ಟು ತಮ್ಮಷ್ಟಕ್ಕೆ ತಾವು ಮಹಾಬೆಳಗಿನಲ್ಲಿ ಒಂದಾಗಿಹೋದರೆ ಸಾಲದೆಂಬ ವಿಶಿಷ್ಟ ನಿಲುವಿನ ಪ್ರತಿಪಾದನೆ 'ಭವ್ಯಮಾನವ' ಕಾವ್ಯದಲ್ಲಿದೆ. ಮಾನವಸ್ಥಲದಿಂದ ದಿವ್ಯಮಾನವಸ್ಥಲಕ್ಕೇರಿದ ಆ ಶರಣರು ಇಲ್ಲಿ, ಈ ನೆಲದಲ್ಲಿ ನಿಂದು ಕತ್ತಲೆಯ ಸುಳಿಯಲ್ಲಿ ಸಿಕ್ಕು ತೊಳಲುತ್ತಿರುವ ಮಾನವಕುಲಕ್ಕೆ ಹಾದಿ ತೋರಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರುಣೆಯ ಮೂರ್ತಿಗಳಾದ ಅವರು ಕರಿತಲೆಯ ಮಾನವನ ಕೈ ಹಿಡಿದು ಬೆಳಗಿನತ್ತ ನಡೆಸಬೇಕು. ಇದನ್ನು ಬಿಟ್ಟು ಮತ್ತೇನು ಕೆಲಸ ಅವರಿಗೆ?- ಈ ಅಭಿಪ್ರಾಯದ ಹಲವಾರು ಮಾತುಗಳು ಪ್ರಸ್ತುತ ಕೃತಿಯಲ್ಲಿ ಅನೇಕ ಸಂದರ್ಭಗಳಲ್ಲಿ ಬಂದಿವೆ;

''ಒಬ್ಬಳೇ ಬೆಳಗಾಗಿ, ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಚೈತನ್ಯದಗಲಕೆ ಹಬ್ಬಿ।
----ಬಯಲೆಲ್ಲ ಬೆಳಗಾಗಿ------- ನಿರವಯಲ ನಿಜನಿರಾಳವೆ ನಿನ್ನನಿಲವಾಗಿ।
ನಿಂದಿರ್ದರೇನಮ್ಮ? ಜಗಕರ್ಥವೇನು?...................
ಆನಂದ ಪರಿಣಾಮ ಸುಖ ಸಮಾಧಿಯೊಳು। ತಾನೊಬ್ಬನೇ ಮಲಗಿ ತನ್ನ ವಿಶ್ವಾಂಗಕ್ಕೆ।
ಮೈಮರೆದು ಜಾಗಿದರೆ------ ಮೃತ್ಯುದೇವತೆಗೆ ಉತ್ತರವ ಕೊಡಬಲ್ಲ ಕಲಿಯಾರು''?

(ಗುರು ಚೆನ್ನಮಲ್ಲ ಮಹಾದೇವಿಗೆ ಕೇಳಿದ್ದು ಪುಟ- 127)

''ಸತಿಪತಿಯ ಸಮರಸಾನಂದಕ್ಕೆ ಓಲಾಡಿ। ಒಬ್ಬಳೇ ನಿಬ್ಬೆರಗಿನೊಳು ನಿಂದು ಮಲಗಿದರೆ।

ಭುವನಮಾತೆಯ ಲೋಕಸಂತತಿಯ ಗತಿಯೇನು?''

(ಗುರುಚೆನ್ನ ಮಹಾದೇವಿಗೆ ಕೇಳಿದ್ದು, ಪುಟ- 214)

ಇಲ್ಲಿ ಗುರುಚೆನ್ನಮಲ್ಲ- ಒಳಗೆಲ್ಲ ಬೆಳಗಾದ ತನ್ನ ನಿಜನಿರಾಳದ ನಿಲುವಿನಲ್ಲಿ ತಾನು ನಿಂತರೆ ಕತ್ತಲೆಯ ಲೋಕಸಂತತಿಯ ಗತಿಯೇನೆಂದು ಮಹಾದೇವಿಯನ್ನು ಕೇಳಿದ್ದರೆ, ಗಿರಿಮಲ್ಲನಂತೂ ಕಲ್ಯಾಣದ ಶರಣರು ವಿಶ್ವಕಲ್ಯಾಣಕ್ಕೆ ಟೊಂಕ ಕಟ್ಟಿದ್ದಾರೆಂಬ ತನ್ನ ಗುರುವಿನ ಮಾತು ಕೇಳಿ ''ನೆಲದವರ ಕಷ್ಟನಷ್ಟದ ದುಃಖಸಾಗರದ ಅರಿವುಂಟೆ ಎಲೆ ಅಯ್ಯ ನಿಮ್ಮ ಗಣ ಸಂತತಿಗೆ'' (ಪುಟ- 812) ''ಮಾನವಸ್ಥಲದ ಕೆಳಗಿರುವ ಕತ್ತಲೆಯೊಳಗೆ ಒದ್ದಾಡುತಿಹವಯ್ಯ ಪಶುಕಲ್ಪ ಪ್ರಾಣಿಗಳು, ನಿಮ್ಮ ಕಲ್ಯಾಣಕೀ ಗವಿಲೋಕ ಹೊರತೆ?'' (ಪುಟ- 813) ಎಂದು ಅವರನ್ನು ಪ್ರಶ್ನಿಸಿ ಕತ್ತಲೆಯ ಗವಿಯ ಮಾನವರಿಗೆ ಕಲ್ಯಾಣದ ಶರಣರು ಬೆಳಕಾಗಿ ಬರಬೇಕೆಂಬ ತನ್ನ ಮನದಿಂಗಿತವನ್ನು ಪರ್ಯಾಯವಾಗಿ ಸೂಚಿಸಿದ್ದಾನೆ.

ಭಕ್ತಿಯಿಲ್ಲದ ಭವಿಗಳೆಂದು, ಪಾಪಿಚಾಂಡಾಲರೆಂದು, ಕ್ರೂರಕರ್ಮಿಗಳೆಂದು ಜಗದ ಜನರನ್ನು ಕತ್ತಲೆಯಿಂದ ಕತ್ತಲೆಯ ಆಳಕ್ಕೆ ಹೋಗಲು ಬಿಟ್ಟು, ನೀನು ಮೇಲು ಮೇಲಕ್ಕೆ ಸಾಗಿದರೆ ಅವರನ್ನು ''ಎತ್ತ ಬಲ್ಲವರಾರು ತಾಯೆ ನೀನಲ್ಲದೆ?'' ಎಂದು ಮತ್ತೆ ಮತ್ತೆ ಪ್ರಶ್ನಿಸುವ ಗುರುಚೆನ್ನಮಲ್ಲರಿಗೆ, ಗಿರಿಮಲ್ಲನಿಗೆ ಮಹಾದೇವಿಯಕ್ಕ ''ದೇಹಪ್ರಾಣಾದಿಗಳ ಹೊತ್ತ ಜೀವಾತ್ಮರಿಗೆ ದೇಹಾದಿ ಗುಣಧರ್ಮ ಮುತ್ತಿಹುದು ಸಹಜ------- ಪ್ರಾಕೃತದ ಮಾನವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಸರ್ಗಧರ್ಮ ಕರಕಷ್ಟ ತಂದೇ ಇವ ಕಳೆದು ನಿಲ್ಲುವುದು''. (ಪುಟ-816) ''ಅಣ್ಣಯ್ಯ ಗಿರಿತಂದೆ ಅಂಜುವೆನು ನಾ ನಿಮ್ಮ ಜಗದ ಜಟಿಲಕ್ಕೆ'' (ಪುಟ-818)- ಎಂದುಸುರಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ. ಆದರೆ ಗುರುಚೆನ್ನಮಲ್ಲ ತನ್ನ ಪಟ್ಟು ಬಿಡದೆ,

''ಮಾನವನ ಒಳಗೆ ಮನೆಮಾಡಿಕೊಂಡಿರ್ದು, ಮಾನವನ
ಕೊಂದು ತಿನುತಿರುವ ರಾಕ್ಷಸಕುಲವ
ಬ್ರಹ್ಮರಾಕ್ಷಸಧರ್ಮ ಗುಣಧರ್ಮ ಕರ್ಮಗಳ ಕೆಡಿಸಿಕೊಂದಿಕ್ಕಿ,
ರಾಕ್ಷಸಗರ್ಭದೊಳು ಮಲಗಿರುವ ಕಲ್ಯಾಣಶಕ್ತಿಗಳನೆಚ್ಚರಿಸಿ,
ಮಾನವನ ಮುತ್ತಿರುವ ನೂರುಸಾವಿರ ಲಕ್ಷ ಮುಖದ ದುಃಖ ಕೋಟೆಗಳ
ನಿನ್ನ ವಿಜ್ಞಾನಿಗಳು ಪರಿಹರಿಸದಿನ್ನೇನು ಮಣಿಹದವರಿಗೆ ತಾಯೆ?
ಅದ್ವೈತ ಪ್ರಭೆಯೊಳಗೆ ದ್ವೈತಬ್ರಹ್ಮವ ಬೆಳಗಿ,
ಎರಡಾಗಿ ಆಡಿರುವ ಜಗದ ಜೀವಾತ್ಮರಿಗೆ,
ನೆಲದೊಳಗೆ ಬೆಳೆದು ಕಲ್ಯಾಣ ರಾಶಿಗಳ ಮನೆಮನೆಗೆ ಬಂದು ದಾಸೋಹ ಮಾಡಿ
ಜಗದವರ ಪೂಜೆಗೇರಿಸಬಾರದೇಕೆ?''

(ಪುಟ- 819)

ಎಂದು ಅವಳು ಮತ್ತು ಶರಣರು ಮಾಡಬೇಕಾದ ಕರ್ತವ್ಯದ ಬಗ್ಗೆ ತಿಳಿಸಿಕೊಡುತ್ತಾನೆ. ಪ್ರೊ. ಭೂಸನೂರಮಠ ಅವರೇ ಗುರು ಚೆನ್ನಮಲ್ಲ-ನೊಳಗಿರ್ದು ಈ ಮಾತುಗಳನ್ನಾಡಿಸಿದ್ದಾರೆಂದು ನನ್ನ ಅನಿಸಿಕೆ. ಹಿಂದೆ 'ಕಲ್ಯಾಣಕಾಂಡ'ದಲ್ಲಿಯೆ ಕಲ್ಯಾಣದ ಶರಣರಿಂದ ಅಕ್ಕಮಹಾದೇವಿ ಬೀಳ್ಕೊಳ್ಳುವ ಸಂದರ್ಭದಲ್ಲಿ ಪ್ರಭುದೇವ ಅವಳಿಗೆ, ಶ್ರೀಶೈಲದ ಕದಳಿಯ ಕಳದ ಒಳಗೆ ತೊಳಗಿ ಬೆಳಗುತ್ತಿರುವ ಜ್ಯೋತಿಯತ್ತ ನಡೆಯೆಂದು ಹೇಳುವ ಜೊತೆಗೆ ಇನ್ನೂ ಒಂದು ಮಾತು ಸೇರಿಸುತ್ತಾನೆ,

''ಮತ್ತೊಂದು ಮಾತು ತಾಯೆ, ಲಿಂಗದಾಣತಿ ಗುಹೇಶ್ವರಲಿಂಗದಪ್ಪಣೆ।
ಆದೇಶ ಬಂದಿಹುದು ಚೆನ್ನನ ನಿರೂಪ। ನಿನ್ನ ಬರವನೆ ಹಾರಿ ಗಿರಿಚೆನ್ನಮಲ್ಲಯ್ಯ।
ನಿಂದಿಹನು ಪರ್ವತಮಹಾದ್ವಾರದೊಳು ಮುಂದೆ।
ಲೋಕದೊಳು ಮಾನವನ ಕುಲದೊಳಗೆ ನೀ ಹುಟ್ಟಿ।
ಕುಲದ ಲೋಕದ ಋಣವ ತೀರಿಸುವ ಮಣಿಹ।
ಪೂರೈಸಬೇಕೆಲೆ ಮಗಳೆ- ಭಾರ ನಿನ್ನದು ತಾಯೆ ಜಗದ ಭಾರ
ನಿತ್ತರಿಸುವಾ ಶಕ್ತಿ ನೀನು ತಾಯೆ। ನಡೆ ತಾಯೆ ಮುಂದಕ್ಕೆ ಶರಣಾರ್ಥಿ''

(ಪುಟ- 96)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ಭೂಸನೂರಮಠ ಅವರ ಪ್ರಭುದೇವನ ಮಾತು. ಹಿಂದಾವ ಕೃತಿಯಲ್ಲಿಯೂ ಅಕ್ಕಮಹಾದೇವಿಗೆ ಕುಲದ, ಲೋಕದ ಋಣ ತೀರಿಸುವ ನಿರ್ದೇಶನವನ್ನು ಪ್ರಭುದೇವ ಕೊಟ್ಟಂತೆ ಬಂದಿಲ್ಲ. ರಾಘವಾಂಕನ ಪ್ರಭುದೇವನಂತೂ, "ಸಾಕ್ಾರ ನಿಷ್ಠೆ ಭೂತಂಗಳೊಳನುಕಂಪೆ ತಾನೆ ಪರಬೊಮ್ಮ" ಎಂದು ನಂಬಿ ಲೋಕೋಪಕಾರದ ಕಾರ್ಯಗಳಲ್ಲಿ ನಿರತನಾದ ಸಿದ್ಧರಾಮನಿಗೆ "ಜಗದ ನಡುವಿರಲು ಬೇಡ ಸಿದ್ಧೇಂದ್ರ" ಎಂದು ಎಚ್ಚರಿಸಿದ್ದಾನೆ. ತದ್ವಿರುದ್ಧವಾಗಿ ಇಲ್ಲಿ 'ಭವ್ಯಮಾನವ'ದ ಪ್ರಭುದೇವ ಮಹಾದೇವಿಗೆ ಲೋಕದ ಋಣ, ಕುಲದ ಋಣ ತೀರಿಸಲು ಆದೇಶಿಸಿದ್ದಾನೆ. ಇಲ್ಲಿ ಪ್ರೊ. ಭೂಸನೂರಮಠ ಅವರ ಹೊಸ ದೃಷ್ಟಿ ಮತ್ತು ಹೊಸ ಬಗೆಯ ನಿಲುವನ್ನು ಯಾರಾದರೂ ಓದಿಕೊಳ್ಳಬಹುದಾಗಿದೆ. ಇದರಿಂದಾಗಿ ಮಹಾದೇವಿಯ ಪಾತ್ರಕ್ಕೊಂದು ಹೊಸ ತಿರುವು ಉಂಟಾಗಿದೆ, ಹೊಸ ಮೆರಗು ಪ್ರಾಪ್ತಿಸಿದೆ.

'ಭವ್ಯಮಾನವ' ಕೃತಿಯ ಕೊನೆಯ ದೃಶ್ಯದಲ್ಲಿಯೂ, ಲೇಖಕರು ಬೆಳಗು ಮಾನವರಿಂದ, ಶರಣಸ್ಥಲದವರಿಂದ ಏನು ಅಪೇಕ್ಷಿಸುವರೆಂಬುದೇ ಮುಂದುವರಿದಿದೆ. ಗುರುಚೆನ್ನಮಲ್ಲ- ಜಗದವರ ನಾನಾ ದರಿದ್ರರೂಪಗಳ ನಿನ್ನವರು ತಿದ್ದಿ ತೀಡಲಿ ತಾಯೆ. ನಿನ್ನವರ ಸಂಗ ನಿನ್ನವರ ಕಾರುಣ್ಯ ಪರಮಪ್ರಸಾದ ನೆಲದ ಮಾನವನನ್ನು ಎಚ್ಚರಿಸಿದರೆ, ಅವನಲ್ಲಿ ಆ ನೆಲದ ಮಣ್ಣಿನ ಮೂರ್ತಿಯಲ್ಲಿ ಶಿವದ ಕಳೆ ಶಿವಬೆಳಗು ಅಂಕುರಿಸಿ ಪಲ್ಲವಿಸಿ ಹರವುತ್ತವೆ ಮಗಳೆ- ಮುಂತಾಗಿ ಶರಣಶಕ್ತಿ ಎಂತಹ ಅದ್ಭುತಗಳನ್ನು ಸೃಷ್ಟಿಸಬಲ್ಲದೆಂಬುದನ್ನು ಮಹಾದೇವಿಗೆ ನೆನಪಿಸಿಕೊಟ್ಟು ಹಾಗೆಯೇ ಮುಂದುವರಿದು "ನಡೆ ತಾಯೆ ಎಲೆ ಮಹಾಬೆಳಗು ಚೈತನ್ಯವೆ ನಿನ್ನವರ ಹಿಂದಿರ್ದು ಶರಣು ಬಂದವರ ಹೃದಯಾಂತರಂಗದೊಳು ಪರಿಪಕ್ವಮಾನವರ ದೀವಿಗೆಯ ಮುಡಿಸುತ್ತ ಹೃದಯಾಂತರಂಗದೊಳು ಪರಿಪಕ್ವ ಮಾನವರ ದೀವಿಗೆಯ ಮುಡಿಸುತ್ತ ನಡೆ ತಾಯ ಮುಂದೆ------------- ನೆಲದೊಳಗೆ ಕಲ್ಯಾಣ ಬೆಳೆಗಳನು ನೀ ಬೆಳೆದು, ನಡೆ ತಾಯೆ ನೀ ಮುಂದೆ ನಡೆಸು ಜಗವ. ನೀ ಮುಂದೆ, ನಿನ್ನ ಬೆಳಗುಗಳು ನಿನ್ನವರು ಶರಣಾರ್ಥಿ ಮಾನವರು ನಿನ್ನ ಹಿಂದೆ. ಅವರ ಬೆಂಬಳಿಯಲ್ಲಿ ಈ ಗಿರಿಯತಂದೆ ಕಂಡ ಭಕ್ತಂಗೆ ಕೈ ಮುಗಿಯುವಾತ ಭಕ್ತ. ನಿಮಗೆಲ್ಲ ಶರಣು ಶರಣಾರ್ಥಿಗಯೆಂದೆನುತ ನಾನು ಬಂದಿಹೆನು ಮಹಾತಾಯೆ ಹಾದಿಯೊಳು ನೀ ಬೆಳಗು" ಎಂದು ಬೇಡಿಕೊಳ್ಳುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಗುರುವಿನ ಹಾರೈಕೆಯ ಅಂತರಂಗದ ಅರ್ಥ ಮಹಾದೇವಿಯ ಮನವನ್ನು ವೇದಿಸುತ್ತಿರುವ ಹೊತ್ತಿಗೆ ಬಸವಮಹಾಗುರುವಿನ "ಬಿಡಲಾರೆನು ಮರ್ತ್ಯಲೋಕದ ರುಚಿಯನು, ಬಿಡಲಾರೆನು ಗಣತಿಂಥಿಣಿಯ, ಬಿಡಲಾರೆನು ಗುರುಲಿಂಗಜಂಗಮದ ಒಕ್ಕು ಮಿಕ್ಕುದನು------" ಎಂಬ ಸತ್ಯಸ್ಯ ಸತ್ಯವಾಣಿ ಅವಳ ನೆನಪಿಗೆ ಬರುತ್ತದೆ. ಕೂಡಲೆ ಗುರುವಿನಾಣತಿಯಂತೆ ನಡೆವ ನಿರ್ಧಾರ ತೆಗೆದುಕೊಂಡು-

"ಬಿಡಲಾರೆನಯ್ಯಾ ಮರ್ತ್ಯಲೋಕವನು
ಮರ್ತ್ಯ ಲೋಕವು ಮಹಾಮನೆಯಾಗದನ್ನಕ್ಕ
------- --------- -------- ------
ಮರ್ತ್ಯದ ಮಹಾಮನೆಯ ದಿವ್ಯಪ್ರಸಾದ
ನಮಗುಂಟೆ ತಂದೆ ಆ ಲೋಕದಲ್ಲಿ?
ನಮಗುಂಟೆ ಲಿಂಗಾಂಗಸಮರಸಾನಂದದೊಳು?
------ ------------ --------- -----
ದೇಹ ಬಿದ್ದರೂ ಹರಣ ಹಾರಿದರು ಮನವಾರಿ
ಹೋದರೂ ಹೋಗಲಿ ಬಿಡಲಾರೆ ಮರ್ತ್ಯವನು
----- --------- -------- -----
ನಾನಿರ್ದು ಮರ್ತ್ಯ ಲೋಕದ ಮಹಾಮನೆಯೊಳಗೆ
ವಿಶ್ವಕಾಯದೊಳಾನು ಕಲ್ಯಾಣಕಾಯಕವ ಮಾಡಿಹೆನು
ಪಡಿಯ ಲೋಕಕ್ಕೆ ನೀಡಿಹೆನು.
---------- --------- ------ -----
ಶಿವಗಣಂಗಳು ಕೊಟ್ಟ ಶೇಷದೊಳು ಬದುಕಿಹೆನು
ವಿಶ್ವಲೋಕವೆ ಎನಗೆ ಗುರು- ಲಿಂಗ- ಜಂಗಮ
ವಿಶ್ವವಿಸ್ತಾರವೇ ನೀವಯ್ಯ ತಂದೆ
ಇದೆ ವಿಶ್ವಕಲ್ಯಾಣ ಭವ್ಯಶಿವಪೂಜೆ"

(ಪುಟ- 831-32)

ಹೀಗೆ, ಗುರುವಿಗೆ ನೀಡುವ ಮಹಾದೇವಿಯ ಆಶ್ವಾಸನೆಯೊಂದಿಗೆ ಕಾವ್ಯಕ್ಕೆ ಮಂಗಲವಾಗುತ್ತದೆ.

'ಮರ್ತ್ಯಲೋಕವನು ನಾನು ಬಿಡಲಾರೆ' ಎಂದು ಮಹಾದೇವಿ ಆಶ್ವಾಸನೆ ಕೊಟ್ಟುದರ ಅರ್ಥ, ಅವಳು ದೇಹಧಾರಿಯಾಗಿ ಎಂಟುನೂರು ವರ್ಷಗಳ ಮುಪ್ಪಾನುಮುದುಕಿಯಾಗಿ ಇನ್ನೂ ಇದ್ದಾಳೆಯೆಂದಲ್ಲ. ಲೇಖಕರ ದೃಷ್ಟಿಯಲ್ಲಿ ಮಹಾದೇವಿ ಒಬ್ಬ ವ್ಯಕ್ತಿಯಲ್ಲ ಅವಳು ಶಕ್ತಿ ತತ್ವದ ಸಂಕೇತ, ವಿಶ್ವಶಕ್ತಿಯ ಪ್ರತೀಕ. ಆ ಮಹಾಚೈತನ್ಯಶಕ್ತಿ ಪರಮಾತ್ಮನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೀಲಾಶಕ್ತಿಯಾಗಿ, ಜೀವಾತ್ಮನಲ್ಲಿ ಭಕ್ತಿಶಕ್ತಿಯಾಗಿ ಜಗತ್ತಿನಲ್ಲಿ ಭೋಜ್ಯವಾಗುವ ಪದಾರ್ಥಶಕ್ತಿಯಾಗಿ ಸರ್ವತ್ರ ವ್ಯಾಪಿಸಿದೆ. ಮೂಲತಃ ಇರುವುದು ಒಂದೇ ಶಕ್ತಿಯಾದರೂ ಕ್ರಿಯಾಭೇಧದಿಂದಾಗಿ ಹೆಸರು ಬೇರೆ ಬೇರೆಯಾಗಿವೆ ಅಷ್ಟೆ.

ಪ್ರಸ್ತುತದಲ್ಲಿ ನಾವು ಆಲೋಚಿಸಬೇಕಾಗಿರುವುದು ಜೀವಾತ್ಮದಲ್ಲಿರುವ ಭಕ್ತಿ-ಶಕ್ತಿಯನ್ನು ಕುರಿತು. ಚಿದಂಶನಾದ ಆತ್ಮನಿಗೆ ದೇಹ (ಪಿಂಡ) ದ ಸಂಪರ್ಕವುಂಟಾದಾಗ ಪ್ರಾಣದೊಡನೆ ಅರಿವು ಮೂಡಿ ಚಿತ್ತ ಮನ ಬುದ್ಧಿ ಅಹಂಕಾರಗಳು ಚಿಗುರುತ್ತವೆ. ಅವೆಲ್ಲವುಗಳ ಸಹವಾಸದ ಫಲವಾಗಿ ಆ 'ನಾನು ಚಿದಂಶ, ಚಿತ್‌ಶಕ್ತಿಯ ಒಂದಂಶವಾದ ಭಕ್ತಿ -ಶಕ್ತಿ ನನ್ನಲ್ಲಿ ಬೆಳಗುತ್ತದೆ' ಎಂಬ ನಿಜದ ಅರಿವು ಮಾಯವಾಗಿ ಆತ್ಮನಿಗೆ ಮರವೆ ಆವರಿಸಿ ಅವನು ಮರವೆಯ ಮಾನವನಾಗುತ್ತಾನೆ. ಹೀಗೆ ಅರುಹನ್ನು ಅಜ್ಞಾನ, ಬೆಳಗನ್ನು ಕತ್ತಲೆ ಆವರಿಸಿದ ಮಾನವಜೀವನದ ಸ್ಥಿತಿಯನ್ನು ಪ್ರಭುದೇವ 'ಅಪರಿಮಿತದ ಕತ್ತಲೆ' ವಿಪರೀತದ ಬೆಳಗು' ಎಂದು ಬಹಳ ಅರ್ಥವತ್ತಾಗಿ ಬಣ್ಣಿಸಿದ್ದಾನೆ.

ಬೆಳಗಿಗೆ ವಿಮುಖನಾಗಿ ಕತ್ತಲೆಗೆ ಸಂಮುಖನಾದ ಮಾನವ ಕತ್ತಲೆಯಿಂದ ಇನ್ನೂ ಕರಾಳಕತ್ತಲೆಗಿಳಿಯುತ್ತ ಆಡಿದ ಆಡುತ್ತಿರುವ ವಿಚಿತ್ರತರ ರುದ್ರಭೀಕರ ದೊಡ್ಡಾಟ ಸಣ್ಣಾಟಗಳ ಸವಿಸ್ತಾರ ವರ್ಣನೆ ಪ್ರಸ್ತುತ ಕೃತಿಯ 'ಕತ್ತಲೆಯ ಕಾಂಡ'ದಲ್ಲಿದ್ದರೆ, ಕೋಟಿಕೋಟಿಕಾಲ ಕತ್ತಲೆಯಲ್ಲಿದ್ದ ಮಾನವ ಸಕಲ ಬಂಧನಗಳಿಂದ ಮುಕ್ತನಾಗಿ, ನೆಲದ ಮರೆಯ ನಿಧಾನದಂತೆ ತನ್ನಲ್ಲಿಯೆ ಹುದುಗಿರುವ ಭಕ್ತಿಶಕ್ತಿಯನ್ನು ವಿಕಾಸಗೊಳಿಸುತ್ತ ದಿವ್ಯಮಾನವಸ್ಥಲಕ್ಕೇರಲು ಕಲ್ಯಾಣದ ಅಸಂಖ್ಯಾತ ಅನುಭಾವಿಗಳು ತೋರಿದ ಮಾರ್ಗ ಅಥವಾ 'ನಿರ್‌ಮಾರ್ಗ'ದ ವಿವರ ಈ ಕೃತಿಯ 'ಉದಯಕಾಂಡ'ದಲ್ಲಿ ಬಂದಿದೆ.

ಶರಣಮಾರ್ಗದ ಅನುವಿಡಿದು, ಸಚ್ಚಿದಾನಂದ ಸ್ವರೂಪ ಪರಶಿವನ ಸದ್ರೂಪನಾದ ಗುರು, ದೀಕ್ಷಾಸಂಸ್ಕಾರದ ಮೂಲಕ ಶಿಷ್ಯನ ಜೀವಭಾವದಲ್ಲಿ ಮಲಗಿದ್ದ ಶಿವಭಾವವನ್ನು ಎಚ್ಚರಿಸಿದಾಗ ಅವನ ಹೃದಯಗಂಭೀರದಲ್ಲಿದ್ದ ಶಿವಕಳೆ (ಭಕ್ತಿಶಕ್ತಿ) ಎದ್ದು, ಅದು ಚಿದ್ರೂಪಲಿಂಗದ ಉಪಾಸನೆ, ಆನಂದರೂಪ ಜಂಗಮದ ಪ್ರಸಾದ ಸೇವನೆಯಿಂದ ವಿಕಾಸಗೊಳ್ಳುತ್ತ ಬೆಳಗಿನಿಂದ ಮಹಾಬೆಳಗಾಗಿ ಪ್ರಜ್ವಲಿಸುತ್ತ ಹೋಗುವ ರಹಸ್ಯದ ನಿರೂಪಣೆ 'ಉಜ್ವಲಕಾಂಡ'ದಲ್ಲಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಪ್ರಜ್ವಲಿಸುವ ಬೆಳಗು ಸಾಕಾರವಾಗಿ ನಿಂದಿರುವ ಮಾನವನೆ ಶರಣಸ್ಥಲದಲ್ಲಿ ನಿಂದ ದಿವ್ಯ ಮಾನವ, ಮಾನವ ಮಹಾಂತ. ಇವನಿಗೆ ಜಗತ್ತೆಲ್ಲ ಶಿವಮಯ. ನಾನು, ನೀನು, ಅವನು, ಅವಳು ಎಂಬ ದ್ವೈತಭಾವ, ಇವನಲ್ಲಿ ಸುಳಿಯದು. ಎಲ್ಲರೂ ಇವನಿಗೆ ಶಿವಸ್ವರೂಪಿಗಳೆ. ಬೇಕು ಬೇಡಗಳ ಗೊಡವೆ ಇವನಿಗಿಲ್ಲ. ಬಂದುದೆಲ್ಲ ಇವನಿಗೆ ಶಿವಪ್ರಸಾದ. ಇವನು ನಡೆದರೆ ಹೆಜ್ಜೆಯಿಲ್ಲ, ಸುಳಿದರೆ ನೆರಳಿಲ್ಲ. ಈ ಶರಣನ "ಪ್ರಜ್ವಲಕ್ಕೆ ಉದಯಾಸ್ತಮಾನವಿಲ್ಲ ಹೆಚ್ಚು-ಕುಂದೆಂಬ ಮಾತಿಲ್ಲ"- ದಿವ್ಯಾನುಭವದ ಇಂತಹ ನಿರಾಳಶರಣ ತನ್ನಷ್ಟಕ್ಕೆ ತಾನೆ "ತನ್ನ ದಿವ್ಯದ ಮಹಾಶ್ರೀಮಂತಿಕೆಯಲ್ಲಿ ಮುಳುಗಿ ತನ್ನ ಶಿವಾದ್ವೈತದ ಆನಂದದಲ್ಲಿ ಮೈಮರೆತರೆ" ಕತ್ತಲೆಯ ಗರ್ತದಲ್ಲಿ ತಿರ್ರನೆ ತಿರುಗುತ್ತಿರುವ ದ್ವೈತಪ್ರಪಂಚದ ಮಾನವಕುಲದ ಗತಿಯೇನು? ದ್ವೈತವಾಗಿ ಹರವಿಕೊಂಡಿರುವ ಈ ವಿಸ್ತಾರ ಜಗತ್ತೆಲ್ಲ ಈ ಜಗದ ಮಾನವರೆಲ್ಲ ತನ್ನಂತೆಯೆ ಅದ್ವೈತಬ್ರಹ್ಮದ ಸೃಷ್ಟಿಯಲ್ಲವೆ? ಅದ್ವೈತವೆ ದ್ವೈತ ಪ್ರಪಂಚದ ತಂದೆತಾಯಿಯಲ್ಲವೆ? ಇದನ್ನು ತಿಳಿದೂ, ತನ್ನ ರಕ್ತ ಸಂಬಂಧಿ ದ್ವೈತ ಪ್ರಪಂಚದ ಕರಿತಲೆಯ ಮಾನವರೆಲ್ಲ ಅಂಧ ಪಾತಾಳದಲ್ಲಿರುವಾಗ, ದಿವ್ಯ ಮಾನವನಾದ ಈ ಶರಣ ತಾನೊಬ್ಬನೆ ನಿಜಾನುಭವದ ಗೌರೀಶಂಕರದ ಮೇಲೆ ಕುಳಿತುಕೊಳ್ಳುವುದು ಸರಿಯೆ? ಆ ಗೌರೀಶಂಕರ ಶಿಖರದಿಂದ ಧರೆಗಿಳಿದು ಬಂದು ಇಲ್ಲಿಯ ನೆಲದ ಮಾನವನ ಕತ್ತಲೆಗೆ ದಿವ್ಯದ ದೀಪ ಮೂಡಿಸಿ, ನಿಜಕಲ್ಯಾಣ ಪ್ರಾಂತ ಅವರಿಗೂ ನಿಲುಕುವಂತೆ ಮಾಡುವ ಸತ್ಕಾಯಕ ಈ ದಿವ್ಯಮಾನವನದಲ್ಲವೆ?- ಲೇಖಕರ ಈ ಬಗೆಯ ಸದಾಲೋಚನೆಯ, ತತ್ವಚಿಂತನೆಯ ಹಿನ್ನೆಲೆಯಲ್ಲಿ ಮೂಡಿ ಬಂದಿದೆ ಪ್ರಸ್ತುತ ಕೃತಿಯ 'ಭವ್ಯಕಾಂಡ'.

'ಮಾನವಸ್ಥಲ' ದಿಂದ 'ದಿವ್ಯಮಾನವಸ್ಥಲ'ಕ್ಕೇರಿ ನಿಜಾನಂದದಲ್ಲಿ ಲೋಲಾಡಿದ ಮಾತ್ರಕ್ಕೆ, ಸತಿಪತಿಭಾವದ ಸಮರಸಾನಂದಸುಖ ಅನುಭವಿಸಿದ ಮಾತ್ರಕ್ಕೆ ಅವನು ಭವ್ಯ ಮಾನವನಾಗಲಾರ, ದಿವ್ಯಮಾನವಸ್ಥಲದಾಚೆಯಿದೆ ಭವ್ಯಮಾನವಸ್ಥಲ ಅದನ್ನು ತಲುಪಲು ದಿವ್ಯ ಮಾನವ ತನ್ನ ದಿವ್ಯದಲ್ಲಿಯೆ ಮುಳುಗಿರದೆ, ಮರ್ತ್ಯಲೋಕದ ಕತ್ತಲೆಯನ್ನು ಇಲ್ಲವಾಗಿಸುವ, ಪಾತಾಳಗತ್ತಲೆಯ ದ್ವೈತಮಾನವನನ್ನು ಶಿವಾದ್ವೈತ ಭಕ್ತಿಯ ಮೂಲಕ ಆಕಾಶದೆತ್ತರಕ್ಕೆತ್ತುವ ಮಹಾಮಣಿಹದಲ್ಲಿ ತನ್ನನ್ನು ತಾನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೊಡಗಿಸಿಕೊಳ್ಳಬೇಕು. (ಜೈನದರ್ಶನದ ತೀರ್ಥಂಕರನ ಪರಿಕಲ್ಪನೆಯಲ್ಲಿ ಈ ಬಗೆಯ ತಾತ್ವಿಕನಿಲುವಿದೆಯೆ?) ಆಗ ಮಾನವನು 'ದಿವ್ಯಮಾನವಸ್ಥಲ'ದಿಂದ 'ಭವ್ಯಮಾನವ ಸ್ಥಲ' ಕ್ಕೇರುತ್ತಾನೆ. ಪ್ರೊ. ಭೂಸನೂರಮಠ ಅವರ ಈ ತಾತ್ವಿಕ ನಿಲುವೇ 'ಭವ್ಯಕಾಂಡ'ದಲ್ಲಿ ನಿರೂಪಣೆಗೊಂಡಿದೆ. ಅವರ ಪ್ರಕಾರ ಇದೇ 'ಭವ್ಯಮಾನವ'ದ ತಾತ್ವಿಕ ನಿಲುವು. ದೇವತತ್ವ- ಶರಣತತ್ವ- ವಿಶ್ವತತ್ವಗಳ ಸಮನ್ವಯವೇ ಭವ್ಯಮಾನವನ ಮಹಾಸ್ಥಲ. ಅನುಭಾವಿಗಳ, ಬಸವಾದಿ ಪ್ರಮಥರ ತಾತ್ವಿಕ ನಿಲುವನ್ನು ಒಪ್ಪಿ, ತತ್ವಚಿಂತನೆಯನ್ನು ಪ್ರೊ. ಭೂಸನೂರಮಠ ಅವರು ಇನ್ನಷ್ಟು ಮುಂದುವರೆಸಿದಾಗ ಅವರಿಗೆ ಭವ್ಯಮಾನವನ ತಾತ್ವಿಕ ನಿಲುವು ಹೊಳೆದಿದೆ.ಅದನ್ನು ತಮ್ಮ 'ಭವ್ಯಮಾನವ' ಮಹತ್ಕೃತಿಯಲ್ಲಿ ಗುರು ಚೆನ್ನಮಲ್ಲನ ಮೂಲಕ ಮಹಾದೇವಿಗೆ ಹೇಳಿಸಿದ್ದಾರೆ. ಅದರಲ್ಲಿರುವ ತಥ್ಯವನ್ನರಿತ ದಿವ್ಯಮಾನವಸ್ಥಲದ ಮಹಾದೇವಿ, ''ವಿಶ್ವಕಲ್ಯಾಣ, ಭವ್ಯಶಿವಪೂಜೆ'' ಎಂದು ಭಾವಿಸಿ, ವಿಶ್ವದ ಮಾನವರ ಕಲ್ಯಾಣಕ್ಕಾಗಿ ಮತ್ತೆ ಮರ್ತ್ಯಲೋಕದ ಮಹಾಮನೆಗೆ ಸಂಮುಖಳಾಗುತ್ತಾಳೆ, 'ಭವ್ಯಮಾನಸ್ಥಲ'ಕ್ಕೇರುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವನಲ್ಲಿ ಆಧುನಿಕತೆ

ಡಾ. ಸಾ. ಶಿ. ಮರುಳಯ್ಯ

ನಾಯಕ ನನ್ನನಾಗೆ ಕೃತಿ ವಿಶ್ರುತ ಮಾಗ ದುದಾತ್ತ ರಾಘವಂ
ನಾಯಕನಾಗೆ ವಿಶ್ರುತವೆನಿಪ್ಪುದು ವಿಸ್ಮಯಕಾರಿಯಲ್ತು ಕಾ
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತು ಪಾ
ದೇಯ ಮನಿಕ್ಕುಮೇ ವಿಷಯಮೊಪ್ಪದೊಡಾವುದುಮೊಪ್ಪಲಾರ್ಕುಮೇ।

ಮಹಾಕಾವ್ಯವನ್ನು ಕುರಿತ ಅಭಿನವ ಪಂಪನ ಈ ಪದ್ಯದಲ್ಲಿ ಎರಡು ಅಂಶಗಳು ಸ್ಫುಟಗೊಳ್ಳುತ್ತವೆ. ಒಂದು ಪಾತ್ರ (character) ಮತ್ತೊಂದು ವಿಷಯ ಅಥವಾ ಕಥಾವಸ್ತು (story). ಇವೆರಡೂ ಉದಾತ್ತವಾದವುಗಳಾದರೆ ಸಾಕು ಕಾವ್ಯ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ; ತುಂಬಾ ವಿಶ್ರುತವಾಗುತ್ತದೆ ಎಂಬುದು ಕವಿಯ ನಂಬಿಕೆ. ಈ ನಂಬಿಕೆ ಪಾಶ್ಚಾತ್ಯ ಕಾವ್ಯ ಮೀಮಾಂಸಕರಲ್ಲೂ ಇದೆ. ಅವರಲ್ಲಿ ಸಕಲಕ್ಕೂ ಪ್ರಮಾಣಭೂತ ವ್ಯಕ್ತಿಯಾದ ಅರಿಸ್ಟಾಟಲ್ ಮಹಾಕಾವ್ಯದ ಕಥಾವಸ್ತು ಮತ್ತು ಪಾತ್ರ ಕುರಿತ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಿದ್ದಾನೆ. ಅವುಗಳನ್ನು ಕ್ರೋಢೀಕರಿಸಿದಾಗ ಈ ಕೆಲ ಅಂಶಗಳು ವೇದ್ಯವಾಗುತ್ತವೆ:

ಮಹಾಕಾವ್ಯವೆನ್ನುವುದು ಕವಿಯ ಕಥನರೂಪೀ ಕಲಾಕೃತಿ. ಅದು ಒಂದೇ ಛಂದಸ್ಸಿನ ಬಳಕೆಯಿಂದ ರಚಿತವಾದದ್ದು. ಅದರ ಕಥಾವಸ್ತು ವಿನ್ಯಾಸದಲ್ಲಿ ಆದಿ, ಮಧ್ಯ ಮತ್ತು ಅಂತ್ಯಗಳನ್ನೊಳಗೊಂಡ ಅಖಂಡ ಕ್ರಿಯೆ ಅಳವಟ್ಟಿರಬೇಕು; ಆದಿಗೂ ಅಂತ್ಯಕ್ಕೂ ಮುಕ್ತ ಹೊಂದಾಣಿಕೆ ಇರಬೇಕು; ಅಲ್ಲಿ ಮೆರೆವ ಪಾತ್ರಗಳು ಭೂಮವಾದುವಾಗಿರಬೇಕು; ನಿರೂಪಣೆಯಲ್ಲಿ ಸಾತತ್ಯವಿರಬೇಕು; ಕಥಾವಸ್ತು ಮತ್ತು ಪಾತ್ರ- ಇವುಗಳ ಬೆಳವಣಿಗೆಯಲ್ಲಿ ಚಾರಿತ್ರಿಕ ದೃಷ್ಟಿಗಿಂತ ಹೆಚ್ಚಾಗಿ ನಿತ್ಯ ಸತ್ಯದ ಕಡೆಗೆ ಗಮನವಿರಬೇಕು, ಕಥಾವಸ್ತುವು ನಂಬಬಹುದಾದ ಅಸಾಧ್ಯತೆ (conniving impossibility) ಯನ್ನು ರೂಪಿಸಬೇಕೇ ಹೊರತು, ನಂಬಲಾಗದ ಸಾಧ್ಯತೆ (conniving possibility) ಯನ್ನು ಚಿತ್ರಿಸದಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಸ್ಟಾಟಲನ ಈ ಅಭಿಪ್ರಾಯವನ್ನು ಅನುಮೋದಿಸುತ್ತಾ ಸಿ. ಎಂ. ಬಾರಾ ತನ್ನ 'Heroic Poetry'ಯಲ್ಲಿ, 'ಮಹಾಕಾವ್ಯ ಒಂದು ವಸ್ತುನಿಷ್ಠ ಕಾವ್ಯ:(Objective poetry) ಅದರಲ್ಲಿ ನಾಟಕೀಯತೆ ಇರಬೇಕು; ಛಂದಸ್ಸಿನಲ್ಲಿ ಏಕತೆ ಇರಬೇಕು; ಕಥಾವಸ್ತುವಿಗೆ ಹೆಚ್ಚು ಪ್ರಾಧಾನ್ಯವಿರಬೇಕು ಎಂದು ಹೇಳಿದ್ದಾನೆ.

ಈ ಎಲ್ಲ ಹೇಳಿಕೆಗಳ ಒಟ್ಟಭಿಪ್ರಾಯ ಮಹಾಕಾವ್ಯದಲ್ಲಿನ ಕಥಾವಸ್ತು ಮತ್ತು ಪಾತ್ರಗಳಿಗೆ ಸಂಬಂಧಿಸಿದ್ದು. ಮಹಾಕಾವ್ಯದಲ್ಲಿ ಕಥೆಯ ಪಾತ್ರವೇನು? ಎಂಬುದನ್ನು ಪರಿಶೀಲಿಸ ಹೊರಟರೆ ಅದು ಕಾವ್ಯ ಶರೀರದ ಮೂಳೆ ಎನ್ನಬೇಕಾಗುತ್ತದೆ. ಮೂಳೆ ಇಲ್ಲದಿದ್ದರೆ ಮನುಷ್ಯ ಮಾಂಸದ ಮುದ್ದೆಯಾಗಿಬಿಡುತ್ತಾನೆ. ಅವನನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅದೇ ರೀತಿ ಕಥೆಯಿಲ್ಲದೆ ಮಹಾಕಾವ್ಯ ಇಲ್ಲ. ಇದು ನಾಟಕ, ಸಣ್ಣಕತೆ, ಕಾದಂಬರಿ ಮೊದಲಾದ ಪ್ರಕಾರಗಳಿಗೂ ಅನ್ವಯಿಸುತ್ತದೆ. ಈ ಸಾಹಿತ್ಯ ಪ್ರಕಾರಗಳಲ್ಲಿ ಕಥೆಯೇ ಮೂಲಾಧಾರ ; ಅಥವಾ ಲತಾವಿತಾನದ ಹಂದರ. ಆ ಹಂದರದ ಮೇಲೆ ಅಲಂಕಾರಿಕ ಕಾವ್ಯವಲ್ಲರಿ ಹಬ್ಬಿಕೊಂಡಿರುತ್ತದೆ. ಕಥೆಯನ್ನಾಶ್ರಯಿಸಿಕೊಂಡೇ ವಿಕಾಸಗೊಳ್ಳುವ ಮತ್ತೊಂದು ಅಂಶವೆಂದರೆ ಅದರಲ್ಲಿನ ಪಾತ್ರ (character). ಇದು ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಜೀವಂತ ಪ್ರತಿಮೆ; ಆದರ್ಶದ ಪ್ರತೀಕವೂ ಹೌದು. ಕಥೆ ಶ್ರೋತೃವನ್ನು ಸಮ್ಮೋಹಿಸಿದರೆ, ಪಾತ್ರ ಅವನಲ್ಲಿ ಆತ್ಮೀಯತೆಯನ್ನು ತುಂಬುತ್ತದೆ, ಅವನ ತನಕ್ಕೆ ಹತ್ತಿರವಾಗುತ್ತಾ ಬರುತ್ತದೆ. ಅವನನ್ನು ಒಲಿಸಿಕೊಂಡು, ಒಲವರದ ಮೂಲಕವೇ ತನ್ನ ಗೆಲವನ್ನೂ ಸಾಧಿಸಿಕೊಳ್ಳುತ್ತದೆ. ಅರಿಸ್ಟಾಟಲ್ ತನ್ನ ಕಾವ್ಯ ಮೀಮಾಂಸೆಯಲ್ಲಿ ಮಹಾಕಾವ್ಯ (Epic poetry) ಮತ್ತು ರುದ್ರನಾಟಕ (Tragedy) ಗಳನ್ನು ಪರಸ್ಪರ ಹೋಲಿಸುತ್ತಾ, ಈ ರುದ್ರನಾಟಕ ಪಾತ್ರ ಪ್ರಧಾನ ಎನ್ನುತ್ತಾನೆ. ಆದರೂ ಎರಡರಲ್ಲೂ ಪಾತ್ರ ಮತ್ತು ವಸ್ತು ಅನ್ಯೋನ್ಯ ಎಂಬುದು ಸ್ವಯಂವೇದ್ಯ.

ಈ ರಚನೆಗಳಲ್ಲಿ ಕಥೆ (Story) ಮತ್ತು ಪಾತ್ರ (Character) ಇವು ಗಣನೀಯ ಅಂಶಗಳು ನಿಜ. ಆದರೆ ಮತ್ತೊಂದು ಅಂಶ ಇದರೊಡನೆ ತೆಕ್ಕೆ ಬಿದ್ದು ಪ್ರಕಟವಾಗುತ್ತದೆ. ಅದೇ ವಸ್ತು (theme). 'ವಸ್ತು' ಎಂದರೆ ಕಾವ್ಯ ಅಥವಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಟಕ ಅಥವಾ ಕಥೆ ಅಥವಾ ಕಾದಂಬರಿ ಇವುಗಳಲ್ಲಿ ಬರುವ ಕಥೆ ಅಲ್ಲಿ ಕವಿಯ ಅನಿಸಿಕೆ. ಅಥವಾ ಅನುಭೂತಿಯ ಮೊತ್ತ, ಅವನ ಪ್ರತಿಭೆ ಮತ್ತು ಉತ್ಪತ್ತಿಗಳ ಪ್ರದರ್ಶನ. ಇದು ಪ್ರತಿಯೊಬ್ಬ ಕವಿಯ ಸ್ವೋಪಜ್ಞತೆಗೆ ಸಾಕ್ಷಿ. ಕವಿ ತನ್ನ ಕಾವ್ಯಕ್ಕೆ ಕಥಾ ವಸ್ತುವನ್ನು ಎಲ್ಲಿಂದಲೇ ತೆಗೆದುಕೊಂಡಿರಲಿ, ಯಾವ ಕಾವ್ಯದಿಂದಲೇ ಆಯ್ದುಕೊಂಡಿರಲಿ ಅದನ್ನು ತನ್ನದಾಗಿಸಿಕೊಂಡು ತನ್ನ ದೃಷ್ಟಿಗೆ ತಕ್ಕಂತೆ ಸೃಷ್ಟಿ ಮಾಡುತ್ತಾನೆ; ಮೂಲ ಕಥೆ ಅವನಿಗೆ ಕೇವಲ ಒಂದು ಆಲಂಬನ- ಅದರಲ್ಲಿ ಅಭಿವ್ಯಕ್ತಿಸುವ ಎಲ್ಲ ಅಂಶವೂ ಅವನದು. ಅವನದೇ ಭಾವನೆ, ಚಿಂತನ, ಕಲ್ಪನ, ದರ್ಶನ ಅವನದಾದ ಈ ಅಭಿವ್ಯಕ್ತಿಯನ್ನೇ ವಸ್ತು (theme) ಎಂದು ಕರೆಯುವುದು. ಮಹಾಕಾವ್ಯ ಸಂದರ್ಭದಲ್ಲಿ ಈ ಬಗೆಯ ಸ್ವೀಕರಣ ಕ್ರಿಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಗುರುತಿಸುವುದು. ಜನಪದವನ್ನೇ ತನ್ನ ಮಾತೃಗರ್ಭವಾಗಿರಿಸಿಕೊಂಡ ಮೂಲ ಮಹಾಕಾವ್ಯ (Premitive or Natural epic) ಚಾರಣದಿಂದ (The Bards) ಅಭಿವ್ಯಕ್ತಿಸಿಕೊಂಡು ಮುಂದಿನ ಸಾಹಿತ್ಯಿಕ ಮಹಾಕಾವ್ಯಗಳಿಗೆ (Literary epics) ಮೂಲ ಮಾತೃಕೆಯಾಗುತ್ತದೆ. ಈ ಸಾಹಿತ್ಯಿಕ ಮಹಾಕಾವ್ಯದ ಕವಿಗಳು ಮೂಲ ಕಥೆಯ ಮೇಲೆ ಕುಸುರಿ ಕೆಲಸದ ಕಲಾ ಕೈವಾಡವನ್ನು ನಡೆಸುತ್ತಾರೆ; ಅದಕ್ಕೆ ಹೊಸ ಹೊಸ ಆಯಾಮಗಳನ್ನು ಒದಗಿಸಿ ಅದೊಂದು ವಿನೂತನ ಸೃಷ್ಟಿಯಾಗುವಂತೆ ಮಾಡುತ್ತಾರೆ. ಇಂತಾಗಲು ಅವರು ಕೊಡುವ ವಸ್ತು (theme) ಮುಖ್ಯವೆನಿಸುತ್ತದೆ.

ಅಲ್ಲಿ ಭಿತ್ತಿ ಮಾತ್ರವಾಗಿ ನಿಲ್ಲುತ್ತದೆ ಮೂಲಕಥೆ. ಸಾಹಿತ್ಯಿಕ ಕಾವ್ಯದ ಮಹಾ ಕವಿಯ (theme) ವಸ್ತು ಆ ಭಿತ್ತಿಯ ಮೇಲೆ ಬರೆದ ಚಿತ್ರವಾಗುತ್ತದೆ. ಕಥೆ ಪ್ರಾಚೀನ, ವಸ್ತು ಅರ್ವಾಚೀನ; ಅದು ನೆಲೆ ನಿಂತದ್ದು. ಇದು ಸದಾ ಪರಿವರ್ತನಶೀಲವುಳ್ಳದ್ದು. ಸ್ವೀಕರಣ ಸಂದರ್ಭದಲ್ಲಿ ಸೃಜನಶೀಲ ಕವಿ ಮೂಲಕವಿ-ಯಿಂದ ಸ್ಥೂಲ ಕಥೆಯನ್ನಷ್ಟೇ ಎರವಲಾಗಿ ಪಡೆಯುತ್ತಾನೆ. ಅದರಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾನೆ, ಅಭಿವ್ಯಕ್ತಿಸುತ್ತಾನೆ, ಅನಾವರಣಗೊಳಿಸಿ - ಕೊಳ್ಳುತ್ತಾನೆ. ಅದರ ಮುಖಪುಟದಲ್ಲೂ ತಾನು ಕುಳಿತಿರುತ್ತಾನೆ, ಹೇಳುತ್ತಾನೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ
ಕಥೆ ನಿನ್ನದಾದೊಡಂ ನೀನೆ ಮೇಣಾಶೀರ್ವದಿಸಿ
ಮತಿಗೆ ಬೋಧನವಿತ್ತೊಡಂ ಕೃತಿ ನನ್ನ ದರ್ಶನಂ!
ಎಂದು.

ಈ ಆತ್ಮಪ್ರತ್ಯಯದ ಫಲವಾಗಿ ರಾಮಾಯಣದ ಮೇಲೆ ರಾಮಾಯಣಗಳು ಹುಟ್ಟಿದವು. ಫಣಿರಾಯ ತಿಣುಕುವಷ್ಟು ಜನ ರಾಮಾಯಣದ ಕವಿಗಳು ಹುಟ್ಟಿಕೊಂಡರು. ಶ್ರೀ ಕುವೆಂಪು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವಿತ್ತರು. ಮಾಸ್ತಿ 'ಶ್ರೀರಾಮ ಪಟ್ಟಾಭಿಷೇಕ'ವನ್ನು ವಿನೂತನಗೊಳಿಸಿದರು. ತಮ್ಮದಾದ ತಂತ್ರ ಪ್ರಯೋಗದ ನೆರವಿನಿಂದ, ವೇದ ಕಾಲದ ಬದುಕಿಗೆ ಹೊಸ ಹುಟ್ಟುಕೊಟ್ಟರು. ವಿ. ಕೃ ಗೋಕಾಕ, ಭಾಗವತವನ್ನು ಭವ್ಯಗೊಳಿಸಿದರು. ಪು. ತಿ. ನ. ಅಶ್ವಘೋಷನ 'ಬುದ್ಧ ಚರಿತ' ಕ್ಕೆ ಭದ್ರ ಮಂಗಳ ಆಯಾಮ ನಿರ್ಮಿಸಿದರು. ಕಾಶಿವಿಶ್ವನಾಥ ಶೆಟ್ಟಿ; ಇದೇ ಮಾಲಿಕೆಯಲ್ಲಿ ಬರುವ ಕೃತಿ ರತ್ನ ಸಂ. ಶಿ. ಭೂಸನೂರಮಠರ 'ಭವ್ಯಮಾನವ' ಅನುಭಾವದ ಮೇರು. ಅಕ್ಕನ ಆಧ್ಯಾತ್ಮ ಜೀವನಕ್ಕೆ ಆಧುನಿಕತೆಯನ್ನು ಜೋಡಿಸಿ ಒಂದು ಬೃಹತ್ ಕಾವ್ಯವನ್ನಾಗಿಸಿದ್ದಾರೆ.

ಪ್ರಸ್ತುತದಲ್ಲಿ ಸಂಗಯ್ಯ ಭೂಸನೂರಮಠರ 'ಭವ್ಯಮಾನವ' ದಲ್ಲಿ ಸ್ವೀಕರಣ ಎಷ್ಟು? ಸ್ವತಿಕೆ ಎಷ್ಟು? ಅದರ ವೈಭವ, ವೈಶಿಷ್ಟತೆಗಳೇನು? ಎಂಬ ಬಗ್ಗೆ ಒಂದು ಸ್ಥೂಲ ಅವಲೋಕನ ಮಾಡೋಣ.

ಭವ್ಯಮಾನವ ಶಿಲ್ಪದಲ್ಲಿ ಕೈಥಿಲ್ಯವಿದ್ದರೂ ಕಥಾವಸ್ತು, (ಸ್ಟೋರಿ) ಮತ್ತು ಕವಿಯ ವಸ್ತು (ಥೀಮ) ಇವುಗಳ ಸುಯೋಗದಲ್ಲಿ ಒಂದು ವಿನೂತನ ಸಿದ್ಧಿ ಇದೆ. ಕವಿ ಕಥೆಯನ್ನು ಇತಿಹಾಸದಿಂದಲೇ ಆಯ್ದಿದ್ದಾರೆ. ಹನ್ನೆರಡನೇಯ ಶತಮಾನದಲ್ಲಿ ಬದುಕು ಮಾಡಿದ ಮಹಾಮಾನವರಲ್ಲಿ ಒಬ್ಬಳಾದ ಅಕ್ಕನ ಆಧ್ಯಾತ್ಮ ಜೀವನವನ್ನು ಕೈಗೆತ್ತಿಕೊಂಡಿದ್ದಾರೆ. ಅವಳ ಅತ್ಯಂತ ಜನಪ್ರಿಯ ಕಥೆಗೆ ಗುರುಚೆನ್ನಮಲ್ಲ ಮತ್ತು ಶಿಷ್ಯ ಗಿರಿಮಲ್ಲರ ಕಥಾನಕಗಳನ್ನು ಜೋಡಿಸಿದ್ದಾರೆ. ಮೊದಲು ಮೂಡಿ ಬಂದ 'ಸಮರಸ' ಎಂಬ ಶೀರ್ಷಿಕೆಯ ನೀಳ್ಗವನ, ಇಪತ್ತು ವರ್ಷಗಳಾದ ಮೇಲೆ 'ಭವ್ಯಮಾನವ'ಕ್ಕೆ ಪೀಠಿಕೆಯಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಕಲ್ಯಾಣಕಾಂಡ' ವೆಂಬ- ಭಿದಾನತಳೆದು ಮುಂದೆ ಆರು ಕಾಂಡಗಳ, ಸುಮಾರು ಒಂಬೈನೂರು ಪುಟಗಳ ಬೃಹತ್ ಕಾವ್ಯರೂಪ ಧರಿಸಿತು. ಅಕ್ಕ, ಗುರುಮಲ್ಲ ಮತ್ತು ಗಿರಿಮಲ್ಲರಷ್ಟೇ ಸಮಗ್ರ ಕಾವ್ಯವನ್ನು ನಡೆಸಿಕೊಡುತ್ತಾರೆ. ಗುರುಮಲ್ಲರು ಲೋಕಾ- ಭಿಲೋಕಗಳನ್ನು, ಕಲೆ- ವಿಜ್ಞಾನಗಳನ್ನು ಬಲ್ಲ ಮಹಾ- ಮೇಧಾವಿ ಪುರುಷರಾಗಿ ಚಿತ್ರಿತರಾಗಿದ್ದಾರೆ. ಅವರ ಬೋಧೆಯಲ್ಲಿ ನಯವಿದೆ, ನೀತಿಯಿದೆ, ವಿಜ್ಞಾನವಿದೆ, ವೈಚಾರಿಕತೆ ಇದೆ. ಅನುಭವವಿದೆ, ಅಧ್ಯಾತ್ಮವಿದೆ, ಆಧುನಿಕತೆ ಎದ್ದು ಕಾಣುವಷ್ಟಿದೆ. ಅವರು ವಿಚಾರವಾದಿಗಳು; ಅಷ್ಟೇ ಮಟ್ಟದ ತ್ರಿಕಾಲ ಜ್ಞಾನಿಗಳು; ಭವ್ಯಮಾನವ ಪ್ರಜ್ಞೆ ಉಳ್ಳವರು; ಸಮಷ್ಟಿಯ ವ್ಯಷ್ಟಿರೂಪ ಅಥವಾ ವ್ಯಕ್ತರೂಪ ಅವರ ಅನುಭವ, ಅಕ್ಕನ ಅನುಭಾವ ಗಿರಿಮಲ್ಲನ ಅನುಷ್ಠಾನ ಇವುಗಳಿಂದ ಮುಪ್ಪುರಿಗೊಂಡಿದೆ ಈ ಮಹಾಕಾವ್ಯ.

ತನ್ನರಿವು ತನಗಿಲ್ಲ, ತನ್ನರವು ತನಗಿಲ್ಲ
ತನ್ನೊಳಗೆ ತಿರುಗಾಡಿ ಬಾಳುವೆಯ ನಡೆಸಿರುವ
ವಿಶ್ವಬ್ರಹ್ಮಾಂಡಗಳ ತನ್ನ ಸಂಪದದರಿವು
ತನಗಿಲ್ಲ ತನಗಿಲ್ಲ ಕೋಟಿ ನೇತ್ರದ ಕುರುಡು
ಆಕಾಶ ಬ್ರಹ್ಮ ರಾತ್ರಿಯ ಮಹಾ ಕತ್ತಲೆಗೆ

(ಪುಟ- 242)

ಅಂತಹ ಕತ್ತಲೆಯ ಕಾಂಡದಿಂದ ಕಲ್ಯಾಣದೆಡೆಗೆ ಬರಬೇಕು.
ಜಗದ್ದೇಹ್ಯ ನಿಜಃ ಕಾಯಃ
ಸ್ವಯಂಬ್ರಹ್ಮೇತಿ ವೇದನಾತ್

(ಯಾವಾಗ ತಾನೇ ಬ್ರಹ್ಮ ಎಂಬ ಅರಿವು ಮೂಡಿತೋ ಆಗಲೇ ತನ್ನ ಕಾಯ ಆಯಿತು) ಅಂದಬಳಿಕ ಜಗತ್ತಿನ ಯಾವುದೇ ಮೂಲೆಯಲ್ಲಿ ಏನೇ ನೋವು ನಲಿವಾಗಲಿ, ಅದು ತನ್ನಲ್ಲಾದ, ತನಗಾದ ನೋವು, ನಲಿವು ಎಂಬ ಭಾವನೆ ಬಲಿಯಬೇಕು. ಪ್ರಾಣ ಪ್ರಪಂಚಕ್ಕಷ್ಟೇ ಅಲ್ಲ, ವೃಕ್ಷ ಪ್ರಪಂಚಕ್ಕೆ ನೋವಾದರೂ ತನಗೆ ನೋವಾದಂತೆ ಎಂದು ಭಾವಿಸಿ ಸಕಲಕ್ಕೂ ಸ್ಪಂದಿಸುವ ಮನೋಧರ್ಮ ಮೂಲಭೂತವಾದದ್ದಾಗಿರಬೇಕು. ವಿಶ್ವವಿಸ್ತಾರವೂ ತಾನು, ಬ್ರಹ್ಮಮಯಣ ತಾನು ಎಂಬ ಭವ್ಯ ಭಾವನೆ ಇಲ್ಲಿನ ಭವ್ಯಮಾನವನದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಕಾವ್ಯದ ಭವ್ಯಮಾನವ ಕಲ್ಪನೆಯೇ ಅದ್ಭುತವಾದುದು. ಕವಿಕೊಟ್ಟ ಭವ್ಯಮಾನವದ ಅರ್ಥ ಭವಿಷ್ಯ ಮಾನವ ಎಂದು, ಭವ್ಯಮಾನವ ಅಥವಾ ಇಂಗ್ಲೀಷಿನ (ಸುಪರಮ್ಯಾನ್) ಎಂದಲ್ಲ. ಮನುಕುಲಕ್ಕಾಗಿ ಮೀಸಲಿರುವ (ದಿ ಗ್ರ್ಯಾಂಡ ಫ್ಯೂಚರ) ಅಂದರೆ ಪರಮಭವ್ಯಕ್ಕೆ ಭೂತ ಮತ್ತು ವರ್ತಮಾನಗಳು ಯಾವ ಭವಿಷ್ಯದ ಕಡೆಗೆ ನಡೆದಿವೆ, ನಡೆಯಬೇಕು ಎಂಬ ಸೂಚನೆ. ಜೀವಾತ್ಮ ವಿಶ್ವಾತ್ಮನಾಗಬೇಕು ಎಂಬ ಹಂಬಲ; ಅಪೂರ್ಣ ಪರಿಪೂರ್ಣತ್ವಕ್ಕೆ 'ಮಾನವತೆಯೇ ಅಡಿಗಲ್ಲು, ಭವ್ಯಮೌಲ್ಯಗಳು ಬೆಳಗಬೇಕು. ಜಾತಿ ಎಂಬ ಸೂತಕ, ಸ್ವಾರ್ಥವೆಂಬ ಮೈಲಿಗೆಗಳನ್ನು ಕಳಚಿ ದೂರ ಬೀಸಾಡಬೇಕು. ದೇಶ, ಭಾಷೆ, ಮತ, ಮತವನ್ನು ಪ್ರಬಲಿಸುವ ವಿಚಿತ್ರ ದೈವನಿರ್ಮಾಣ ಇವೆಲ್ಲವುಗಳಿಗೂ ಅತೀತವಾಗಬೇಕು. ಸಂಕುಚಿತತೆಯ ಕೋಟೆಯಲ್ಲಿ ಸ್ಥಗಿತವಾಗಬಾರದು, ಅವನು ವಿಶ್ವಾತ್ಮನಾಗಬೇಕು, ವಿಶ್ವಮಾನವನೆನಿಸಬೇಕು.

ಆದರೆ ವಾಸ್ತವತೆಯನ್ನು ಮರೆತು ಮೆರೆಯಬೇಕೆಂದು ಅರ್ಥವಲ್ಲ. ನೆಲಬಿಟ್ಟು ಸಾಧನೆ ಇಲ್ಲ, ಪಂಚಭೂತಗಳಾದ ಗಾಳಿ, ನೀರು, ನೆಲ, ಬೆಳಕು, ಆವರಣ ಇವುಗಳನ್ನು ಬಿಡಲು ಬರುವುದಿಲ್ಲ, ಅವುಗಳನ್ನೇ ಬಳಸಿಕೊಂಡು ಮಾನವ ಬೆಳೆಯಬೇಕು, ಬೆಳಗಬೇಕು.

'ಬಯಲು ಬೆಂಕಿಯನೊಡೆದು ನೀರು ಗಾಳಿಯಸೀಳಿ,
ಮಣ್ಣಮುಚ್ಚಳ ಕೆರೆದು ಮೂಡಿಹುದು ಮೂಡಿಹುದು
ಪ್ರಾಣವಿಲ್ಲದ ಪಂಚಭೂತಗರ್ಭವದಾಟ
ಉದ್ಭವಿಸಿ ತೋರಿಹವು ನವ್ಯ ನಿರ್ಮಾಣ.

(ಪುಟ- 249)

ಈ ಪರಿಭಾವನೆಯೇ ಇಲ್ಲಿಯ ಭವ್ಯ!
ಹೇಗೆ ಸ್ವಪ್ರಕಾಶಿತ ವಸ್ತುವಾದ ಸೂರ್ಯನಿಂದ ಸಕಲ ಸೃಷ್ಟಿ ಅಂಕುರಿಸಿತೊ ಹಾಗೆ ಮಾನವನ ಮೇಧಾವಿತನದಿಂದ ವಿಶ್ವ, ಜಗತ್ತಿನ ಸಮಗ್ರ ಪ್ರಗತಿ; ಸರ್ವೋತ್ಕೃಷ್ಟ ಸಾಧನೆ. ಅವನ ಸಾಹಸ ಸೀಮೆಯರಿಯದ್ದು, ಭೂಮಿಯಿಂದ ಭೂಮದವರೆಗೆ, ಅಣುವಿನಿಂದ ಘನದವರೆಗೆ ಸೂರ್ಯ, ಚಂದ್ರ, ತಾರಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಹಾರಿಕೆಗಳನ್ನು ಸುತ್ತಿ ಬರಬಲ್ಲ ಅದಮ್ಯ ಪ್ರವೃತ್ತಿ ಅದರದು. ಚಂದ್ರಲೋಕಕ್ಕೆ ಚೈತ್ರಯಾತ್ರೆ ಹೋಗಿ ಚುಕ್ಕೆಗಳ ಕೂಡ ಚಕ್ಕಂದ ಆಡಿಬರುವ ಪ್ರಚಂಡ ಸಾಹಸಿ ಇದ್ದಾನೆ ಇಂದು ಮಾನವ, ಸುರಲೋಕವನ್ನು ನಿರ್ಮಿಸಿದವನೂ ಅವನೇ, ಸ್ವರ್ಗವನ್ನು ಭೂಮಿಗಿಳಿಸಿದವನೂ ಅವನೇ; ರಾಕೆಟ್ ಹಡೆದವನೂ ಅವನೇ, ರಾಮಾಯಣವನ್ನು ಬರೆದವನೂ ಅವನೇ; ಗೀತೆಯನ್ನು ಭೋಧಿಸುವವನು ಅವನೇ, ಗೆಲಾಕ್ಸಿಯಲ್ಲಿ ವಿಹರಿಸುವವನೂ ಅವನೇ; ಬುದ್ಧ, ಬಸವ, ಶಂಕರ, ಏಸು, ಪೈಗಂಬರ, ಜೋರಾತುಷ್ಟ ಎಲ್ಲರೂ ಮಾನವರೆ- ಆದರೆ ತಮ್ಮ ಸೇವೆ, ಸಾಧನೆಗಳಿಂದಾಗಿ ಮಹಾಮಾನವರಾದ ವರು. ಮಾನವನಿಗೆ ಅಸಾಧ್ಯವೆಂಬುದೇ ಇಲ್ಲ. ಅವನೇ ಎಲ್ಲ ಸೃಷ್ಟಿ. ಸ್ಥಿತಿ, ಲಯಕಾರರ ಪ್ರತಿರೂಪಿಯಾಗಿ ನಿಂತಿದ್ದಾನೆ ಇಂದು ಮಾನವ. ಅವನ ಸಾಹಸದ ಕಕ್ಷೆಗೆ ಅಳವಡದ ಕಾಯಕವೇ ಇಲ್ಲ, ತಾನೆಲ್ಲವನ್ನೂ ಸಾಧಿಸಿ ತೋರಿಸುವ, ಸಿದ್ಧಿಸಿಕೊಳ್ಳುವ ಪ್ರಚಂಡ ಸಾಹಸ ಪ್ರವೃತ್ತಿ ಅವನಲ್ಲಿದೆ. ಮನಬಂದರೆ ಬದುಕು ಕೊಡಬಲ್ಲ, ಬೇಡವಾದರೆ ಅದನ್ನು ಕಿತ್ತುಕೊಳ್ಳಲೂ ಬಲ್ಲ. ಆದ್ದರಿಂದ ಮಾನವ ಸರ್ವೋತ್ತಮನಾಗಿದ್ದಾನೆ.

ಸಾಗರದ ಕಲೆ ಮಸಗಿ ಮುಖವನಪ್ಪಳಿಸಿದರು, ಮೀನು, ಮೊಸಳೆಗಳೆದ್ದು ನುಂಗಬರಲಿ, ಬಿರುಗಾಳಿ ಬೀಸಲಿ, ಆಕಾಶ ಗುಡುಗಲಿ, ಪ್ರಳಯಕಾಲದ ಮೋಡ ಒಡೆದು ಬೀಳಲಿ ಮೇಲೆ, ಕತ್ತಲೆಯ ಸಾಗರವನ್ನೀಸುತ್ತ ಮೇಲುಗಡೆ ನಿಜಬೆಳಗು ಮೆಲ್ಲಮೆಲ್ಲಗೆ ಕಂದೆರವ ಕಡೆ ಉರಿಬರಲಿ, ಸಿರಿಬರಲಿ ದಿವ್ಯಭವ್ಯಕಂಡೆ ಸರ್ವಾಂಗದೊಳು ತನ್ನ ಎಚ್ಚರದೊಳಿರ್ದು ಮೇಲೇರಿ ಈಸಿಹನು ನಿಜ ನಿರಾಳದ ಕಡೆ.

(ಪುಟ- 718)

ಆದ್ದರಿಂದ ಶಿವಸರ್ವೋತ್ತಮನಲ್ಲ, ವಿಷ್ಣು ಸರ್ವೋತ್ತಮನಲ್ಲ, ಯಾವ ಕಲ್ಪನೆಯ ಕುಸುಮವೂ ಸರ್ವೋತ್ತಮ ಅಲ್ಲ; ಆದರೆ ಮಾನವ ಸರ್ವೋತ್ತಮ, ಸರ್ವಶ್ರೇಷ್ಠ, ಅವನು ಬಯಲು ಬ್ರಹ್ಮ, ವಿಯತ್ ಪುರುಷ, ವಿರಾಟ್ ಪುರುಷ.

ಶಿವನು ಆಡಿದ ಲೀಲೆ ಕೃಷ್ಣ ಮಾಡಿದ ಕ್ರೀಡೆ
ಜೈನ ತೀರ್ಥಂಕರರು ಗೌತಮ ಮಹಾಬುದ್ಧ
ಮನು ಮುನೀಶ್ವರ ತಪಸ್ವಿಗಳು ದ್ರಷ್ಟಾರರು
ಕಣ್ಣ ಮುಂದಿದ್ದುವದೇ? ನಡೆ ನಡೆಯುತಿಹರೆಂತು?
ವರ್ತಮಾನವು ಅಂತೆ ವರ್ತಿಷ್ಯ ಮಾನವು
ಹೀಗೆ ಮೂಡಲಿಹುದು ಬೆಳೆದಾಡುವಂತಿಹುತೆಂತು?

(ಪುಟ- 233)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಹ ನಿತ್ಯ ಸಾಕ್ಷಿಯಾಗಿ ನಿಂತವನು ಮಾನವ. ಈ ಬಗೆಯ ಮಾನವ ಪಾರಮ್ಯ ಪ್ರತಿಪಾದನೆಯೇ ಭವ್ಯ ಮಾನವ ದರ್ಶನ ಅಥವಾ ಕವಿ ಕಂಡು ಕಂಡರಿಸಿದ ಆಧುನಿಕತೆ. ಇದು ಇಂದು ನಾಳಿನಕಡೆಗೆ ಕೈಚಾಚುವಂತಹುದು.

ಪ್ರ॥ ಭೂಸನೂರಮಠರು ಬಳಸಿಕೊಂಡ ಭಾಷೆ, ದುಡಿಸಿಕೊಂಡ ಶೈಲಿ. ಅನ್ಯಾದೃಶ ಅಧ್ಯಾತ್ಮಗರ್ಭಿತ ರಚನೆಗೆ ಅದರಲ್ಲೂ ಮಹಾಕಾವ್ಯ ರಚನೆಗೆ ಸಂಸ್ಕೃತ ಭೂಯಿಷ್ಟ ಪ್ರೌಢ ಶೈಲಿಯೇ ಆಗಬೇಕು. ಅದು ಅನಿವಾರ್ಯ ಎನ್ನುವಷ್ಟು ಮಟ್ಟಕ್ಕೇರಿದೆ. ಆದರೆ ಭೂಸನೂರಮಠರ ಭಾಷೆ ಕೇವಲ ಕನ್ನಡ, ತಿಳಿಗನ್ನಡ, ನುಡಿಗನ್ನಡ, ಕಸುವುಳ್ಳಕಮನೀಯ ಕನ್ನಡ.

ಎಲೆ ಮೋಳಿಗೆಯ ಕಂಡ,
ನೀವಯ್ಯ ಜನ್ಮದಾ ಕಡೆಗಂಡು ಬಂದವರು
ಚರಮಾಂಕದಂಚಿನೊಳು ನಿಂದವರು ನೀವಯ್ಯ
ಮರಣ ಸತ್ತಿತ್ತಿಲ್ಲಿ ಹುಟ್ಟು ಕೆಟ್ಟಿತ್ತು,
ದಾಟಿ ಬಂದಿಹಿರಯ್ಯಾ ಜಡ ಭೂತ ಪ್ರಕೃತಿಯೊಳು
------------ --------- --------
ಕಾಯಕಿಲ್ಲಾ ನಿಮ್ಮ ಕಷ್ಟಲಿಂಗ
ಪ್ರಾಣವೆಲ್ಲಾ ನಿಮ್ಮ ಬೆಳಗುಲಿಂಗ
ಭಾವವೆಲ್ಲ ಭಕ್ತಿ ದಾಸೋಹಲಿಂಗ
ಎಂಥ ಇರವೀ ಮಹಾದೇವನಿರವು

ಈ ಕನ್ನಡಕ್ಕೆ ಬೆಡಗು ಗೊತ್ತಿಲ್ಲ, ಬಿನ್ನಾಣ ತಿಳಿದಿಲ್ಲ. ಎಲ್ಲೆಡೆಯೂ ನೆಲೆ ಸಹಜ. ಆದರೆ ಪರಿಣಾಮಕಾರೀ ಪದ ಪ್ರಯೋಗ ಅವರದು. ಹದವರಿತ, ಔಚಿತ್ಯವರಿತ ಶಬ್ದ ಪ್ರವೇಶ, 'ಸತ್ತರೆ ಶಿವರಾತ್ರಿ ಬದುಕಿದರೆ ಬಯಲು!', 'ನಾನುಗಳ ನಡುವೊಂದು ತಾನು ನಾನು' 'ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ', 'ನೋಡಿಲ್ಲಿ ಮಾದೇವಿ ಸಲ್ಲಿಸಿರುವೆ ಲಿಂಗಕ್ಕೆ', 'ಬಿದ್ದು ಹೋಗುವ ನಾನು ಶಿವಪೂಜೆಯಾಗಿರುವೆ', 'ಇಂಥವನಿಕೋ ಪ್ರಭಾವಶಾಲೀ ಪ್ರಯೋಗಸೂಕ್ತಿ ಉಂಟು', 'ಮತ್ತೆ ಬಳ್ಳಿಗರುಡರ ಸೇರಿ ಹಳ್ಳವನು ಬಿದ್ದಂತೆ' 'ತಾಯಿಬಳ್ಳಿಗೆ ತಾಯಿ ದಿಮ್ಮಿತ್ತೆ', 'ಕೈಗಡಗ ಕಾಂಬುದಕೆ ಕನ್ನಡಿಯ ಹಂಗೇಕೆ?'! ಮೊದಲಾದ ಮಾತುಗಳಲ್ಲಿ ನೂರಾರು ವಚನ/ ರಗಳೆಗಳ ಉಧೃತಿಯಲ್ಲಿ ಕನ್ನಡ ಭಾಷೆಯ ಸೊಗಡು ಬೀದಿವರಿಯುತ್ತದೆ. ವಚನ ಸಂಪಾದಕರಾಗಿ, ಸಂಗ್ರಹಕಾರರಾಗಿ ದುಡಿದ ಈ ಕವಿಗೆ ವಚನಗಳ ಪ್ರಭಾವ ಸಾಕಷ್ಟಾಗಿದೆ. ತಮ್ಮದಾದ 'ಶೂನ್ಯ ಛಂದಿಸ್ಸಿ'ನಲ್ಲಿ (ಅಂದರೆ ಇಲ್ಲವಾದದ್ದಲ್ಲ ಎಲ್ಲವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಛಂದಸ್ಸು) ನೂರಾರು ವಚನಗಳು ಓತ ಪ್ರೋತವಾಗಿ ಹರಿದು ಬಂದಿವೆ. ಅಲ್ಲಮನ ವಚನವೊಂದು ಹೇಗೆ ಮಹಾಕಾವ್ಯದಲ್ಲಿ ರೂಪುದಳೆದಿದೆ ಎಂಬುದನ್ನು ಈ ಸಾಲುಗಳಲ್ಲಿ ಗುರುತಿಸಬಹುದು.

ವಿಷಯದಾಸೆಗೆ ಸತ್ತು ಹೋಯಿತ್ತು ಕೋಟಿ
ಹೊಲಸು ಮಲ ಸುಖಕಾಗಿ ಸತ್ತು ಹೋಯಿತ್ತು ಕೋಟಿ
ತಾಮಸದ ತೃಪ್ತಿಯೊಳು ಸತ್ತು ಹೋಯಿತು ಕೋಟಿ;
ಬ್ರಹ್ಮಾಂಡ ಬ್ರಹ್ಮಾಂಡ ಗುಹೆಯೊಳಗೆ ಬೆಳಗಿರುವ
ಎಲೆ ಗುಹೇಶ್ವರ ಲಿಂಗ ಕೇಳು ಕೇಳಯ್ಯಾ
ನಿಮಗಾಗಿ ಸತ್ತವರನಾರನೂ ಕಾಣೆ!
ನಿಮಗಾಗಿ ಸತ್ತವರು ಸತ್ತರೇನಯ್ಯಾ?-

(ಪುಟ- 422-23)

ಇಲ್ಲಿ 'ನಿಮಗಾಗಿ ಸತ್ತವರು ಸತ್ತರೇನಯ್ಯಾ?' ಎಂಬ ಕಡೆಯಸಾಲಿನ ದರ್ಶನ ಧ್ವನಿ' ಕವಿಯಿತ್ತ ಸ್ವಂತದ ಕಾಣಕೆ.

ಈ ಕವಿಯ ಮೇಲೆ ವಚನಗಳಲ್ಲದೆ ರಾಘವಾಂಕನ ನಾಟಕೀಯತೆ ಪ್ರಭಾವ ಬೀರಿದೆ. ಇಡೀ ಕಾವ್ಯದಲ್ಲಿ ನಾಟಕೀಯತೆ ಗರಿವಡೆದು ಮೂಡಿದೆ. ಆದರೂ ಎಲ್ಲೆಡೆಯೂ ಕವಿಯ ಸ್ವೋಪಜ್ಞತೆ ಮೆರೆದಿದೆ, ಶೈಲಿ ನಾಟಕೀಯವಾಗಿದ್ದರೆ, ಛಂದಸ್ಸು ಆದಿ ಅಂತ್ಯ ಪ್ರಾಸಗಳನ್ನು ಕಿತ್ತ ಬೋಳು ರಗಳೆಯ ಸಾಲು, ಅದಕ್ಕಿಷ್ಟು ಲಯದ ವೈವಿಧ್ಯ; ಒಟ್ಟಿನಲ್ಲಿ ಲಲಿತ ರಗಳೆಯನ್ನು ಮುರಿದು ಮಾಡಿದ ಚಿಕ್ಕ ಅಚ್ಚು! ಇದು ಹೊಸಗನ್ನಡದ ಹೊಸಕಾವ್ಯ.

ಸಂಪಾದಕ ಸಂ. ಶಿ. ಭೂಸನೂರಮಠರವರಲ್ಲಿ ಕವಿಸಹಜವಾದ ಪ್ರತಿಭೆ ಇದೆ. ವಿಮರ್ಶನಯೋಗ್ಯ ಚಿಕಿತ್ಸಕ ಪ್ರಜ್ಞೆ ಇದೆ. ಅವರದು ನವನವೋಲ್ಲೇಖಶಾಲಿ ನಿತ್ವವುಳ್ಳ ಪ್ರಾಂಜಲ ಪ್ರತಿಭೆ. ತೂಕತಪ್ಪದ ವಿಮರ್ಶಾ ಪ್ರಜ್ಞೆ. ಅವರ 'ಪರಾಮರ್ಶೆ ಬಹುಶ್ರುತತ್ವಕ್ಕೆ ಸಾಕ್ಷಿ, 'ಶೂನ್ಯ ಸಂಪಾದನೆ' ನೆಲದ ಅಚ್ಚರಿಯಾದರೆ, ಅವರ ಶೂನ್ಯ ಸಂಪಾದನೆಯ ಪರಾಮರ್ಶೆ ಅಚ್ಚರಿಯ ಅಚ್ಚರಿ! ಅವರ ಶುದ್ಧ ಚೇತನ ಕೆತ್ತಿದ ಕಾವಿ ಧ್ವಜ; ಅದು ಆಧ್ಯಾತ್ಮ ಸಾಹಿತ್ಯದ ವೈಜಯಂತಿಯೂ ಹೌದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ

ದಾರ್ಶನಿಕ ಕವಿ. ಸಂ. ಶಿ. ಭೂಸನೂರಮಠರ ಶುಭಕಾಮನೆಯೊಂದಿಗೆ ಈ ಪ್ರಬಂಧಕ್ಕೆ ಮಂಗಲ ಹಾಡಬಹುದು.

ಅದ್ಯತನ ಮಾನವನ ಮನಬುದ್ಧಿ ಭಾವಗಳು
ಮುಗಿದು ಮಂಗಲ ಮಹಾರತಿಯ ಬೆಳಗಿದರೆ
ಗುಹ್ಯಕ್ಕೆ ಗುಹ್ಯಕರ ಗೋಹೇಶ್ವರೇಚ್ಛೆ
ಜಗದ ಮುನ್ನಡೆಯನೊಡೆದು ತಾನೆದ್ದು ಬರಬಹುದು
ಈ ಮಹಾಕಾವ್ಯ ಭವಿಕವ್ಯ ಸೃಷ್ಟಿಗೆ
ಬೇಹರೆ ಅಮಾನುಷದ ಉದಯ ಶಕ್ತಿಗಳು
ಕಲೆದೋರಬಹುದಯ್ಯ ತನತನಗೆ ಸಹಜ. ಆ ಬ್ರಹ್ಮ ಭವ್ಯದ ಭವಿಷ್ಯ ನಿರ್ಮಾಣಕ್ಕೆ
ಆ ಬ್ರಹ್ಮ ಭವ್ಯ ಕಲ್ಯಾಣ ಸಾಮ್ರಾಜ್ಯಕ್ಕೆ
ನಡೆಸಯ್ಯಾ ತಂದೆ ನೀ ನಡೆಸುವಂತೆ.

(ಪುಟ- 829)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ-ಕಾವ್ಯ ಸಮೀಕ್ಷೆ

ಕೀರ್ತಿನಾಥ ಕುರ್ತಕೋಟಿ.

ಶ್ರೀ ಭೂಸನೂರಮಠರ 'ಭವ್ಯಮಾನವ' ಈ ಶತಮಾನದಲ್ಲಿ ಹುಟ್ಟಿ ಬಂದಿರುವ ಮಹಾಕಾವ್ಯಗಳಲ್ಲಿ ಒಂದಾಗಿದೆ. ಶ್ರೀ. ಕುವೆಂಪುರವರ 'ರಾಮಾಯಣ ದರ್ಶನಂ' ಪ್ರಕಟವಾದಂದಿನಿಂದ ಅದೇ ಮಾದರಿಯಲ್ಲಿ ಮೂರುನಾಲ್ಕು ಮಹಾಕಾವ್ಯಗಳು ಪ್ರಕಟವಾಗಿವೆ. ಮಿಲ್ಟನ್‌ನ 'ಪ್ಯಾರಡೈಜ ಲಾಸ್ಟ' ಮತ್ತು ಶ್ರೀ ಅರವಿಂದರ 'ಸಾವಿತ್ರಿ' ಇಂಥ ದೊಡ್ಡ ಕಾವ್ಯಕೃತಿಗಳು. ಈ ಕಾಲದಲ್ಲಿ ಕೂಡ ಮಹಾಕಾವ್ಯಗಳ ಸಂಭಾವ್ಯತೆಯನ್ನು ನಿರ್ದೇಶಿಸಿದವು. ನಮ್ಮ ಹಳೆಯ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಂತೆ ಈ ಹೊಸ ಮಹಾಕಾವ್ಯಗಳು ವೀರಗಾಥೆಗಳಲ್ಲ ಇವೆಲ್ಲ ಹೆಚ್ಚಾಗಿ ಆಧ್ಯಾತ್ಮಿಕ ಸತ್ವದಿಂದ ಕೂಡಿದ ಕೃತಿಗಳಾಗಿವೆ.

ಭೂಸನೂರಮಠರ ಕಾವ್ಯದ ವಸ್ತು ಈ ದೃಷ್ಟಿಯಿಂದ ನೋಡಿದಾಗ ಹೊಸದೆಂದೇ ಹೇಳಬೇಕು. ಈ ಕೃತಿಯ ಉದ್ದೇಶ ಭವ್ಯ ಅಥವಾ ಭವಿತವ್ಯದ ಮನುಷ್ಯನ ರೂಪಲಕ್ಷಣಗಳನ್ನು ನಿರೂಪಿಸುವದಾಗಿರುವುದರಿಂದ, ಈ ಕೃತಿಗೆ ಭವಿಷ್ಯದಲ್ಲಿರುವಷ್ಟು ಆಸಕ್ತಿ ಭೂತಕಾಲದಲ್ಲಿಲ್ಲ. ಹನ್ನೆರಡನೆಯ ಶತಮಾನದ ವೀರಶೈವ ಶರಣರ ಆಧ್ಯಾತ್ಮಿಕ ಉನ್ನತಿ ಈಗ ಐತಿಹಾಸಿಕ ಸಂಗತಿಯಾಗಿದ್ದರೂ ಆ ಶರಣರ ಬೂದಿಯೊಳಗಿಂದ ಹೊಸಮಾನವ ಹುಟ್ಟಿಬರಬಾರದೇಕೆ ಎಂಬ ಮಹತ್ವದ ಪ್ರಶ್ನೆ ಈ ಕಾವ್ಯದ ಕೊನೆಯಲ್ಲಿದೆ. ಅದಕ್ಕೆ ಉತ್ತರವಾಗಿ ಗುರುಚೆನ್ನಮಲ್ಲ 'ಬೂದಿಯೊಳು ಹೊಸ ಜಗವು ಹುಟ್ಟಿ ಬರಬಹುದು' ಎಂದು ಧೃಡವಾದ ನಂಬಿಕೆಯಿಂದ ನುಡಿಯುತ್ತಾನೆ. ಉಡುತಡಿಯ ಅಕ್ಕಮಹಾದೇವಿಯ ಕತೆಯನ್ನು ವ್ಯಾಜವಾಗಿಟ್ಟುಕೊಂಡು, ಅಕ್ಕನ ಜೀವದ ಆಧ್ಯಾತ್ಮಿಕ ಸತ್ವವನ್ನು ಸಾಮಗ್ರಿಯನ್ನಾಗಿ ಮಾಡಿಕೊಂಡು ಈ ಕೃತಿ ಮನುಷ್ಯ ಜೀವನದ ಪದರು ಪದರುಗಳನ್ನು ಬಿಚ್ಚುತ್ತ, ಮನುಷ್ಯ ಹಾಗೂ ಪರತತ್ವಗಳ ಗಹನ ಸಂಬಂಧವನ್ನು ಬೆಳಕು- ಕತ್ತಲೆ, ಹಗಲು- ರಾತ್ರಿ, ಮಣ್ಣು- ಆಕಾಶ ಇಂಥ ಅನೇಕ ಬಗೆಯ ದ್ವಂದ್ವಗಳ ಪರಿಭಾಷೆಯ ಮೂಲಕ ಬೆಳೆಯತೊಡಗುತ್ತದೆ. ಆರು ಕಾಂಡಗಳಲ್ಲಿ ಹಬ್ಬಿರುವ ಈ ಕಾವ್ಯದ ಗಾತ್ರ ಉಳಿದ ಕೆಲವು ಕಾವ್ಯಗಳೊಂದಿಗೆ ಹೋಲಿಸಿದರೆ ದೊಡ್ಡದೆಂದೇ ಹೇಳಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾವ್ಯದ ಗಾತ್ರದ ದೃಷ್ಟಿಯಿಂದ ನೋಡಿದಾಗ ಈ ಕಾವ್ಯ ಹೇಳುವ ಕತೆ ಬಹಳ ಸಣ್ಣದು. ಉಡುತಡಿಯ ಅಕ್ಕ ಮಹಾದೇವಿಯ ಕತೆ ಮೊದಲ 'ಕಲ್ಯಾಣಕಾಂಡ'ವನ್ನು ತುಂಬಿಕೊಂಡಿದೆ. ಉಡುತಡಿಯಲ್ಲಿ ಅಕ್ಕನ ಜನನ, ಶೈಶವ, ಯೌವ್ವನಗಳ ಹಿತಮಿತವಾದ ವರ್ಣನೆಯಿದೆ. ಬಾಲ್ಯದಲ್ಲಿ ಆಡುತ್ತಿದ್ದ ಮದುವೆಯಾಟದಲ್ಲಿ ಗೆಳತಿಯಾದ ಚಂಪೆ ಅವಳಿಗೆ ಮಲ್ಲಿಕಾರ್ಜುನನ ವಧುವೆಂದು ಚೇಷ್ಟೆಗಾಗಿ ನುಡಿದದ್ದು ಅಕ್ಕನ ಜೀವನದ ದಿಕ್ಕನ್ನು ಬದಲಿಸುತ್ತದೆ. ಉಡುತಡಿಗೆ ಆಕಸ್ಮಿಕವಾಗಿ ಬಂದಿದ್ದ ಚನ್ನಮಲ್ಲ ಶಿವಪೂಜೆಯ ಹೊತ್ತಿನಲ್ಲಿ ಅಕ್ಕನ ಕನ್ನೆ ಹೃದಯದಲ್ಲಿ ಭಕ್ತಿಯ ಆಂತರಿಕ ವಿಕಾಸವನ್ನು ಗಮನಿಸುತ್ತಾನೆ. ಭಕ್ತಿಯ ಕಿಚ್ಚನ್ನು ಅವಳ ಅಂತರಂಗದಲ್ಲಿ ಪ್ರಜ್ವಲಿಸಿ ಹೊರಟು ಹೋಗುತ್ತಾನೆ. ಅವಳ ಹೃದಯದಲ್ಲಿಯ ಭಕ್ತಿಯಂತೆಯೇ ಅವಳ ದೈಹಿಕ ಸೌಂದರ್ಯ ಕೂಡ ಅವಳ ಅಪ್ಪಣೆ ಇಲ್ಲದೆ ವಿಕಾಸಗೊಂಡು ಊರ ದೊರೆಯಾಗಿದ್ದ ಕೌಶಿಕನನ್ನು ಆಕರ್ಷಿಸುತ್ತದೆ. ತಂದೆತಾಯಿಗಳ ಅನುಮಾನವನ್ನು ಲೆಕ್ಕಿಸದೆ ಅಕ್ಕ ಕೌಶಿಕನ ಅರಮನೆಗೆ ಹೋಗಿ ಈ ಮದುವೆಯ ವಿಫಲತೆಯನ್ನು ಅವನಿಗೆ ಮನಗಾಣಿಸಿ ದಿಗಂಬರಳಾಗಿ ಊರು ಬಿಟ್ಟು ಹೊರಟು ಹೊಗುತ್ತಾಳೆ. ಇನ್ನು ಅವಳ ಬದುಕಿಗೆ ಗುರಿಯೊಂದೇ, ಮಲ್ಲಿಕಾರ್ಜುನನನ್ನು ಪಡೆಯುವುದು. ಅಲ್ಲಿಂದ ಕಲ್ಯಾಣಕ್ಕೆ ಬಂದು ಅಲ್ಲಮಪ್ರಭು ಬಸವಣ್ಣನವರೊಡನೆ ಶಿವಾನುಭವ ಗೋಷ್ಠಿಗೆ ತೊಡಗಿ ಅಕ್ಕ ಶ್ರೀಶೈಲದೆಡೆಗೆ ಬರುತ್ತಾಳೆ. ಅಲ್ಲಿ ಗುರುಚೆನ್ನಮಲ್ಲ ಹಾಗೂ ಅವನ ಶಿಷ್ಯ ಗಿರಿಮಲ್ಲನೊಡನೆ ಮುಂದಿನ ಐದು ಕಾಂಡಗಳ ತುಂಬ ಚರ್ಚೆ ನಡೆಸುತ್ತಾಳೆ.

ಅಕ್ಕಮಹಾದೇವಿಯ 'ರೂಹಿಲ್ಲದ ಕೇಡಿಲ್ಲದ ಚಲುವ' ಮತ್ತು ಅಲ್ಲಮನ 'ನುಡಿದರೆ ನಿಶ್ಶಬ್ದ' ಎಂಬ ಹೇಳಿಕೆಗಳು ಒಂದೇ ಜಾತಿಗೆ ಸೇರಿದವುಗಳಾಗಿವೆ. ಅಕ್ಕ ಲೌಕಿಕವಾಗಿರುವ ಮದುವೆಯನ್ನು ನಿರಾಕರಿಸುತ್ತಾಳೆ, ಅಲ್ಲಮ ಶಬ್ದವನ್ನು ನಿರಾಕರಿಸುತ್ತಾನೆ. ಆದರೆ ಭಾಷೆಯ ದೃಷ್ಟಿಯಿಂದ ಅಕ್ಕ ಮದುವೆಯನ್ನು ಮತ್ತು ಅಲ್ಲಮ ನಿಶ್ಶಬ್ದವನ್ನು ರೂಪಕವೆಂದು ಸ್ವೀಕರಿಸುತ್ತಾರೆ. ಅಂದರೆ ವಸ್ತುವನ್ನು ಬೇಡವೆಂದರೂ ವಸ್ತುವಿನ ನಾಮ ಮತ್ತು ರೂಪ ಎರಡೂ ಉಳಿಯುತ್ತವೆ. ಅಕ್ಕನಿಗೆ ದೇವರೊಡನೆ ಮದುವೆ ಬೇಕು. ಅಲ್ಲಮನಿಗೆ ನಿಶ್ಶಬ್ದದ ಶಬ್ದ ಬೇಕು. ಭಕ್ತಿಯಾಗಲಿ, ಸಂವಾದವಾಗಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂವಹನದ ರೂಪಗಳೆಂದ ಮೇಲೆ ಸಂವಹನದ ನಿಯಮಗಳಿಗೆ ಅವು ಒಳಗಾಗದೇ ವಿಧಿಯಿಲ್ಲ. ಅಭಿವ್ಯಕ್ತಿಯ ಸಲುವಾಗಿಯಾದರೂ ಭೌತಿಕವನ್ನು ರೂಪಕದ ರೂಪದಲ್ಲಿ ಸ್ವೀಕರಿಸಬೇಕಾಗುವದು ಇಲ್ಲಿ ಮಹತ್ವದ್ದಾಗಿದೆ.

ಶಿವಶರಣರ ಅಭಿವ್ಯಕ್ತಿಯ ಮೀಮಾಂಸೆ ಕ್ಲಿಷ್ಟವಾಗಿರುವಂತೆ ಗಹನವೂ ಆಗಿದೆ. ಶಬ್ದವನ್ನು ಅರ್ಥ ಮೂಡುವ ಪ್ರಕ್ರಿಯೆ ಮತ್ತು ಪರಮತತ್ವದಿಂದ ಜಗತ್ತು ಹುಟ್ಟುವ ಪ್ರಕ್ರಿಯೆ ಇವೆರಡರಲ್ಲಿ ಅಲ್ಲಮ ಸಮಾನ ಧರ್ಮವನ್ನು ಕಾಣುತ್ತಾನೆ. ಲೌಕಿಕ ಮತ್ತು ಅಲೌಕಿಕ ಇವೆರಡರ ನಡುವಿನ ಸಂಬಂಧ ಈ ಬಗೆಯದಾಗಿದೆ. ಬಸವಣ್ಣನ ಅನುಭವ ಮಂಟಪದಲ್ಲಿ ಈ ಮಾತಿನ ಚರ್ಚೆ ಮತ್ತೆ ಮತ್ತೆ ನಡೆಯುತ್ತದೆ. ಅಕ್ಕನ ವಚನಗಳಲ್ಲಿಯ ವೇದನೆಯ ಕಾವ್ಯಮಯತೆ, ಬಸವಣ್ಣನ ವಚನಗಳಲ್ಲಿ ಪ್ರತಿಮಾನಿಷ್ಠತೆ, ಅಲ್ಲಮನ ವಚನಗಳಲ್ಲಿಯ ರಹಸ್ಯಮಯತೆ, ಮುಕ್ತಾಯಕ್ಕನ ಮಾತುಗಳಲ್ಲಿಯ ಒಗಟಿನಿಂದ ಮತ್ತು ದೇವರ ದಾಸಿಮಯ್ಯನ ವಚನಗಳಲ್ಲಿಯ ಸ್ವಭಾವೋಕ್ತಿ ಇಂಥ ಕಾವ್ಯಗುಣಗಳು ಅವರವರ ಅನುಭಾವದ ಸ್ವಭಾವವನ್ನು ಅದಕ್ಕೆ ತಕ್ಕ ಶೈಲಿಯನ್ನು ಸೂಚಿಸುತ್ತವೆ. ಪ್ರತಿಯೊಬ್ಬ ಶರಣನೂ ಉಪಯೋಗಿಸುವ ಶಬ್ದ ನಿರ್ಲೇಪವಾಗಿದ್ದು, ಪಾರದರ್ಶಕವಾಗಿರುವಂತೆ ನೋಡಿಕೊಂಡಿದ್ದಾನೆ.

ಮಹಾಕಾವ್ಯದ ಸಾಮಗ್ರಿ ಮತ್ತು ಭಾಷೆಯಲ್ಲಿ ಅದು ತಳೆಯುವ ರೂಪ ಇವುಗಳನ್ನು ತಿಳಿಯಲು ಹಿಂದಿನ ಕೃತಿಗಳ ಅಧ್ಯಯನ ಅಗತ್ಯ. ನಮ್ಮ ಹಳೆಯ ನಾಟಕಗಳಲ್ಲಿ ಸಮೃದ್ಧವಾಗಿದ್ದ ಕ್ರಿಯೆಯ ವಿರುದ್ಧವಾಗಿ ಮತ್ತು ಹಳೆಯ ಕಾವ್ಯಗಳಲ್ಲಿಯ ಭೌತಿಕತೆಯ ವಿರುದ್ಧವಾಗಿ ಆಗಾಗ ಪ್ರತಿಕ್ರಿಯೆ ಏಳುತ್ತಲೇ ಇರುತ್ತದೆ. ಭೂಸನೂರಮಠರ 'ಭವ್ಯಮಾನವ' ಇಂಥ ಪ್ರತಿಕ್ರಿಯೆಯ ವಾತಾವರಣದಲ್ಲಿ ಬೆಳೆದುಬಂದ ಕಾವ್ಯವಾಗಿದೆ. ಈ ದೀರ್ಘಕವಿತೆಯ ಮೊದಲಿನ 'ಕಲ್ಯಾಣಕಾಂಡ' ಮತ್ತು 'ಶ್ರೀಶೈಲಕಾಂಡ' ಗಳಲ್ಲಿ ಅಕ್ಕಮಹಾದೇವಿಯ ಕತೆ ವಿಸ್ತಾರವಾಗಿ ಬಂದಿದೆ. ಆದರೆ ಎಷ್ಟೇ ವಿಸ್ತಾರವಾಗಿದ್ದರೂ ಅಕ್ಕನ ಕತೆ ಕೂಡ ಒಂದು ನಿಮಿತ್ತವಾಗುವುದರಿಂದ ಕತೆಗೆ, ಬೇಸಾಗಿ ಮನಬಂದಂತೆ ಬೆಳೆದು ಬರಲು ಸ್ವಾತಂತ್ರ್ಯವಿಲ್ಲ.

ಉದಾಹರಣೆಗೆ ಅಕ್ಕಮಹಾದೇವಿ ಮತ್ತು ಕೌಶಿಕ ರಾಜ ಒಬ್ಬರಿಗೊಬ್ಬರು ಎದುರಾಗುವ ಸನ್ನಿವೇಶವನ್ನು ಪರಿಶೀಲಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಮಕ್ಕೆ ಬದುಕಿ ತೃಪ್ತಿಗೆ ಸತ್ತು ಹೋಗುವ
ಗಂಡ ಗಂಡರನ್ನೆಲ್ಲ ಅತ್ತಾಚೆ ಕೆಡೆನೂಕಿ
ಸಾವಿಲ್ಲ ಕೇಡಿಲ್ಲ ರೂಹಿಲ್ಲದಾ ಗಿರಿಯ
ಶ್ರೀ ಚೆನ್ನಮಲ್ಲಿಕಾರ್ಜುನನ ಕೈ ಹಿಡಿದೆ.
ಸಕಲ ಕಾಮಕೆ ತಾನೆ ಸಂತೃಪ್ತಿ ಸಾಗರ
ಕೈ ಹಿಡಿದೆನರಸಾ- ಬ್ರಹ್ಮಗಂಟು!
ಬಿಚ್ಚಬಾರದು ದೊರೆಯೆ ಬಿಡಿಸಬಾರದ ನಂಟು
ಹವಣಲ್ಲ ಹವಣಲ್ಲ ನನ್ನ ನಿನ್ನ
....
.... ಕಲ್ಯಾಣವೇ ಎನ್ನ,
ವಂದಿಸುವೆ ಕೌಶಿಕನೆ ನೀ ಮಾಡಿದುಪಕಾರ,
ಮೇರು ಪರ್ವತ ಮೀರಿ ಭಾರವಾಗಿಹುದಯ್ಯ,
ವಿಷಯ ಸಂಸಾರವನು ಕಿತ್ತೊಗೆವ ಶಕ್ತಿಯನು
ದಯಪಾಲಿಸಿದೆ ದೊರೆಯೇ ವಂದಿಸುವೆ ನಾನಯ್ಯ.

ಅಕ್ಕ ಮತ್ತು ಕೌಶಿಕ ದೊರೆಯ ನಡುವೆ ನಡೆದ ಕೊನೆಯ ಮಾತು ಇದಾಗಿದೆ. ಸಂಭಾಷಣೆಯ ಉದ್ದಕ್ಕೂ ಅಕ್ಕ ತನ್ನ ವೈರಾಗ್ಯವನ್ನು, ನಿಶ್ಚಯವನ್ನು ಸರಿಯಾದ ರೀತಿಯಲ್ಲಿ ಪ್ರಕಟಿಸುತ್ತಾಳೆ. ಕೌಶಿಕನದು ವಿಷಯಾಂಧ ದೃಷ್ಟಿ ಎಂಬುದನ್ನು ಅವನಿಗೆ ಮನವರಿಕೆ ಮಾಡಿಕೊಡುತ್ತಾಳೆ. ಅಲ್ಲಮನನ್ನು ಹೊರತುಪಡಿಸಿದರೆ ಶರಣರಲ್ಲಿ ಮಹಾದೇವಿಯದು ಅತ್ಯಂತ ಸ್ವತಂತ್ರವಾದ ಚೇತನ ಮತ್ತು ಅವಳದು ತೀರ ನಿಷ್ಕಲ್ಮಷವಾದ ತಿಳುವಳಿಕೆಯಾಗಿದೆ. 'ಕಾಮಕ್ಕೆ ಬದುಕಿ ತೃಪ್ತಿಗೆ ಸತ್ತು ಹೋಗುವ' ಗಂಡಂದಿರನ್ನು ಬಿಟ್ಟು 'ಸಾವಿಲ್ಲದ ರೂಹಿಲ್ಲದ' ಚನ್ನಮಲ್ಲಿಕಾರ್ಜುನನ್ನು ವರಿಸುವ ಅವಳ ಧೃಡವಾದ ನಿಲುವು ಬೆರಗು ಹುಟ್ಟಿಸುವಷ್ಟು ಅಪೂರ್ವವಾಗಿದೆ. ಅದಕ್ಕಿಂತ ಹೆಚ್ಚಾಗಿ ಇಂಥ ಸನ್ನಿವೇಶವನ್ನು ಒದಗಿಸಿದ್ದಕ್ಕಾಗಿ ಅವಳು ಕೌಶಿಕನ ಉಪಕಾರವನ್ನು ಸ್ಮರಿಸುವದು ಅವಳ ನಿರ್ಭಯವಾದ ನಿಲುವನ್ನು ಬೆಳಗಿಬಿಡುತ್ತದೆ. ಶರಣನಾದವನು ಇಂಥ ಅಗ್ನಿದಿವ್ಯವನ್ನು ಮತ್ತೆ ಮತ್ತೆ ಎದುರಿಸಬೇಕಾಗುತ್ತದೆ.

ಅಕ್ಕನ ಮಾತುಗಳಲ್ಲಿ ಪ್ರಕಟವಾಗುವ ಭಾವದ ಸಾಮರಸ್ಯ ಇನ್ನೂ ಅಚ್ಚರಿಯನ್ನುಂಟು ಮಾಡುತ್ತದೆ. ಮದುವೆಯೆಂಬ ಅನಿವಾರ್ಯವಾದ ವಿಧಿಯನ್ನು ಮೋಕ್ಷಸಾಧನೆಗೆ ಉಪಾಯವನ್ನಾಗಿ ಮಾಡಿಕೊಳ್ಳುವ ಮಹಾದೇವಿಯ ನಿಲುವು ಸಾಮಾನ್ಯವಾದದ್ದಲ್ಲ. ಅನುಭಾವ ಅನುಭವವಾಗಬೇಕಾದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿದುಕೊಂಡದ್ದೆಲ್ಲ ಆಚರಣೆಯ ಮತ್ತು ಸಂವೇದನೆಯ ಮಟ್ಟಕ್ಕೆ ಬರಬೇಕು. ಮಹಾದೇವಿ ಮಲ್ಲಿಕಾರ್ಜುನನ ಭಕ್ತಿಯನ್ನು ಪ್ರೀತಿಯನ್ನಾಗಿ ಮಾಡಿಕೊಂಡವಳು. ಆ ಪ್ರೀತಿ ಅವಳಲ್ಲಿ ಕಾವ್ಯಸಂವೇದನೆಯಾಗಿ ಉಕ್ಕಿ ಬಂದರೆ ಆಶ್ಚರ್ಯವೇನಿಲ್ಲ. 'ಕಾಮಕ್ಕೆ ಬದುಕಿ ತೃಪ್ತಿಗೆ ಸತ್ತುಹೋಗುವ ಗಂಡ ಗಂಡರು' ಎಂಬ ಬಣ್ಣನೆಯಲ್ಲಿ ಈ ಇಹಜೀವನದ ನಿರ್ವೀರ್ಯತೆಯ ವೇಧಕವಾದ ಚಿತ್ರವಿದೆ.

ಆದರೆ ಕಾವ್ಯಸ್ವರೂಪದ ದೃಷ್ಟಿಯಿಂದ ವಿಚಾರ ಮಾಡಿದಾಗ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. 'ಪ್ರಭುಲಿಂಗಲೀಲೆ' ಯಲ್ಲಿ ಈ ಸನ್ನಿವೇಶ ಕಾವ್ಯಸಮಯವನ್ನು ಅನುಸರಿಸುತ್ತದೆ. ಮಾಯೆ ಪೈಜೆಗಟ್ಟುವಂತೆ ಮಹಾದೇವಿಯೂ ಪೈಜೆಗಟ್ಟಿದ್ದಾಳೆ. ಕೌಶಿಕ ಭವಿಯಾಗದ ಶಿವಭಕ್ತನಾಗಬೇಕೆಂದು ಪಣವೊಡ್ಡಿದ್ದಾಳೆ. ಒಂದು ವೇಳೆ ಕೌಶಿಕ ಅವಳ ಮಾತಿಗೊಪ್ಪಿ ಶಿವಭಕ್ತನಾದರೇನು ಗತಿ ಎಂಬ ಆತಂಕ ಅಲ್ಲಿ ಹುಟ್ಟುತ್ತದೆ. ಹಲವಾರು ಸಂಭಾವ್ಯತೆಗಳನ್ನು ಹುಟ್ಟಿಸಿಕೊಳ್ಳುತ್ತ ಮುಂದುವರಿಯುವದು ಮಹಾಕಾವ್ಯದ ಸಹಜಗತಿಯಾಗಿದೆ. ಕೌಶಿಕನನ್ನು ಸೋಲಿಸುವ ನಿಶ್ಚಯವನ್ನು ಮಹಾದೇವಿ ಕೈಕೊಂಡಂದಿನಿಂದ ಹಿಡಿದು ಅವಳು ದಿಗಂಬರಳಾಗಿ ಉಡುತಡಿಯನ್ನು ಬಿಟ್ಟು ಹೊರಡುವವರೆಗೆ ಇಡೀ ಸನ್ನಿವೇಶ ಯಾರು ಗೆಲ್ಲುತ್ತಾರೆಂಬ ಆತಂಕದೊಂದಿಗೆ ಮುಂದುವರೆಯುತ್ತದೆ.

ಭೂಸನೂರಮಠರ 'ಭವ್ಯಮಾನವ'ದ ಇದೇ ಸನ್ನಿವೇಶದಲ್ಲಿ ಆತಂಕಕ್ಕೆಡೆಯಿಲ್ಲ. ಕಾವ್ಯದ ಸಾಲುಗಳೆಲ್ಲ ಬಾಣಬಿಟ್ಟಂತೆ ಪೂರ್ವನಿಶ್ಚಿತವಾದ ಗುರಿಯ ಕಡೆಗೆ ಸಾಗುತ್ತವೆ. ಆ ಗುರಿಯನ್ನು ಭೇದಿಸಿಯೇ ತೀರುತ್ತವೆ. ಬಿಲ್ಲುಗಾರನ ಗುರಿಗಾರಿಕೆಯ ಬಗ್ಗೆ ಮತ್ತು ಬಾಣದ ಪರಿಣಾಮದ ಬಗ್ಗೆ ಸಂಶಯಕ್ಕೆ ಎಡೆಯೇ ಇಲ್ಲ. ಅಲ್ಲದೆ ಈ ಬಾಣ ಮಂತ್ರಾಸ್ತ್ರವೆಂಬುದೂ ನಿಜ. ಮಹಾದೇವಿಯ ವಾದಗಳಲ್ಲಿ ಹುರುಳು ಬೇಕಾದಷ್ಟಿದೆ. ಭಾವಗಳು, ವಿಚಾರಗಳು ಅವೂ ಸಾಲದಾದರೆ ಉಪಮೆ ಮತ್ತು ದೃಷ್ಟಾಂತಗಳಂಥ ಅಲಂಕಾರಗಳು ಸಾಲುಸಾಲಾಗಿ ಬಂದು ವಾದವನ್ನು ಸಮರ್ಥವಾಗಿಸುತ್ತವೆ. ಚಾಮರಸ ಉಪಯೋಗಿಸುವ ಕಾವ್ಯತಂತ್ರ ಬೇರೆಯಾಗಿದೆ. ಅಲ್ಲಿ ಕೌಶಿಕ ಮಹಾದೇವಿಯ ಬಗ್ಗೆ ಮೋಹಗೊಂಡು ಮೊದಲೇ ದುರ್ಬಲನಾಗಿದ್ದಾನೆ. ಅವಳು ಒಡ್ಡುವ ಸಮಯಗಳನ್ನು ಮರುಮಾತಿಲ್ಲದೇ ಒಪ್ಪಿಬಿಡುತ್ತಾನೆ. ಆ ಸಮಯಗಳನ್ನೊಡ್ಡಿ ಅವುಗಳ ಮೂಲಕವಾಗಿ ಮಹಾದೇವಿ ಕೌಶಿಕನನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೆಲ್ಲುತ್ತಾಳೆ. ಪಂಜರದಿಂದ ಬಿಡುಗಡೆ ಪಡೆದ ಗಿಳಿಯಂತೆ ಸ್ವತಂತ್ರವಾಗಿ ಹೊರಟು ಹೋಗುತ್ತಾಳೆ. ಮಹಾದೇವಿಯ ದಿಗಂಬರ ಸ್ಥಿತಿ ಅವಳ ಸ್ವಾತಂತ್ರ್ಯದ ಒಂದು ಆತ್ಯಂತಿಕವಾದ ಪ್ರತೀಕವಾಗುತ್ತದೆ.

ಚಾಮರಸನಿಗೆ ಸನ್ನಿವೇಶ ರಚನೆಯಲ್ಲಿ ಆಸಕ್ತಿ ಇರುವದರಿಂದ ಅವನು ಆ ಸನ್ನಿವೇಶವನ್ನು ಕಾವ್ಯದ ಲೋಕದಲ್ಲಿ ಪುನಃ ಸೃಷ್ಟಿಸುತ್ತಾನೆ. ಈ ಬಗೆಯ ಆಸಕ್ತಿ ಭೂಸನೂರಮಠರ ಕಾವ್ಯದಲ್ಲಿ ಕಾಣುವದಿಲ್ಲ. ಮಹಾದೇವಿಯ ತಿಳುವಳಿಕೆಯನ್ನು ನಿರೂಪಿಸುವದು ಇಲ್ಲಿ ಮುಖ್ಯವಾಗುತ್ತದೆ. ಆ ತಿಳುವಳಿಕೆ ಮೂಡಿ ಬರಲು ಯಾವ ಸನ್ನಿವೇಶ ಬೇಕೋ ಅಷ್ಟನ್ನು ಚಿತ್ರಿಸಿ ಮುಂದೆ ಆ ತಿಳುವಳಿಕೆಯಷ್ಟನ್ನೇ ನಿರೂಪಿಸಲಾಗಿದೆ. ಉಡುತಡಿಯ ನಿಸರ್ಗ-ಸೌಂದರ್ಯದ ವರ್ಣನೆ ಕೂಡ ಅದೇ ಉದ್ದೇಶಕ್ಕಾಗಿ ಬಂದದ್ದಾಗಿದೆ. ಮಹಾದೇವಿಯ ವಚನಗಳಲ್ಲಿಯ ಕಾವ್ಯಸೌಂದರ್ಯಕ್ಕೆ ಮೂಲ ಪ್ರೇರಣೆಯೆಂದರೆ ಉಡುತಡಿಯ ನಿಸರ್ಗ ಮತ್ತು ಶ್ರೀ ಶೈಲದ ಕದಳಿಯ ರಮ್ಯ ನಿಗೂಢತೆ, ಮಹಾದೇವಿಯ ತಾತ್ವಿಕತೆಯ ಶೈಲಿಯಲ್ಲಿ ಇವೆರಡೂ ಗುಣಗಳೂ ಇವೆಯಾದ್ದರಿಂದ ಈ ಕವಿತೆಯಲ್ಲಿ ಅವುಗಳ ಅವಶ್ಯಕತೆ ಇದೆ.

ಉಡುತಡಿಯಿಂದ ಅಕ್ಕ ಕಲ್ಯಾಣಕ್ಕೆ ಬರುತ್ತಾಳೆ. ಕೌಶಿಕ ಒಡ್ಡಿದ್ದ ಅಗ್ನಿದಿವ್ಯದಲ್ಲಿ ಪಾರಮಾರ್ಥಿಕವಾಗಿ ಪುನರ್ಜನ್ಮವನ್ನು ಪಡೆದಿದ್ದ ಅಕ್ಕನ ತಿಳುವಳಿಕೆಯಷ್ಟೇ ಅಲ್ಲ, ಅವಳ ಜೀವನವೇ ಇನ್ನೊಂದು ಪರೀಕ್ಷೆಯನ್ನು ಎದುರಿಸಬೇಕಾಗಿದೆ. ಅಕ್ಕ ಎಲ್ಲ ಬಂಧನಗಳನ್ನು ಕೊನೆಗೆ ಉಟ್ಟ ಬಟ್ಟೆಯನ್ನೂ ಬೀಸಾಡಿ ಬಂದವಳು. ಇವೆಲ್ಲವನ್ನೂ ಪರೀಕ್ಷಿಸಿ ನೋಡುವ ಅನಿಮಿಷ ದೃಷ್ಟಿ ಅಲ್ಲಮನಿಗೆ ಮಾತ್ರ ಇದೆ. ಉಳಿದ ಶರಣರಿಗೆ ಲೋಕದ ಆಚೆ ಇರುವ ಸತ್ಯವನ್ನು ಮಾತ್ರ ನೋಡುವ ತವಕ ಇದೆ. ಆದರೆ ಕಣ್ಣೆದುರಿಗೇ ಇರುವ ಸತ್ಯವನ್ನು ಕಾಣಬೇಕಾದರೆ ಅಲ್ಲಮನಂತೆ, ದೃಷ್ಟಿ ಮತ್ತು ನೋಟಗಳ ನಡುವಿನ ಭೇದವನ್ನು ಇಲ್ಲವೆನಿಸುವ ಕಣ್ಣು ಪಡೆದಿರಬೇಕಾಗುತ್ತದೆ. ಅಕ್ಕನ ಜೀವನದ ಪರಿಪಾಕ ಅವನಿಗೆ ಕಾಣುತ್ತದೆ, ಆದರೂ ಉಳಿದವರಿಗೂ ಅದರ ಅರಿವಾಗಲೆಂದು ಅವಳನ್ನು ಪರೀಕ್ಷಿಸುತ್ತಾನೆ, ಪ್ರಶ್ನೆ ಮಾಡುತ್ತಾನೆ. ಅವನ ಪ್ರಶ್ನೆಗಳಿಗೆ ಉತ್ತರವೀಯುವುದೇ ಅಲ್ಲದೆ ತನ್ನ ಬಾಳಿನ ಕತೆಯನ್ನು ಶರಣರೆದುರಿಗೆ ಬಿಚ್ಚಿ ಇಡುತ್ತಾಳೆ. ಅಕ್ಕನ ಜೀವನದಲ್ಲಿ ಇದೊಂದು ಮಹತ್ವದ ಘಟ್ಟವಾಗಿದೆ. ಅದಕ್ಕಿಂತ ಹೆಚ್ಚಾಗಿ ಶರಣರ ಪಾಲಿಗೂ ಇದೊಂದು ಅಪೂರ್ವವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಭವವಾಗಿದೆ. ಭೂಸನೂರಮಠರ ಕಾವ್ಯದಲ್ಲಿ ಈ ಸನ್ನಿವೇಶ ಸಮರ್ಪಕವಾಗಿ ಮೂಡಿ ಬಂದಿದೆ. ಇಷ್ಟೇ ಮಹಾದೇವಿಯಕ್ಕ ಇಲ್ಲಿಯ ಪ್ರಮುಖ ಪಾತ್ರವಾಗಿರುವದರಿಂದ ಅವಳ ಪಾರಮಾರ್ಥಿಕ ಅನುಭವದ ಬೆಳವಣಿಗೆ ಮುಖ್ಯವಾಗಿ ನಿರೂಪಿತವಾಗಿದೆ. ಹಾಗೆ ನೋಡಿದರೆ ಅಕ್ಕನಂತೆ ಉಳಿದ ಶರಣರೂ ಕೂಡ ತಂತಮ್ಮ ಪರಿಪಾಕದ ಅವಸ್ಥೆಯನ್ನು ಮುಟ್ಟಿದವರಾಗಿದ್ದಾರೆ. ಸಮುದ್ರವನ್ನು ಸೇರುವ ಮೊದಲಲ್ಲಿ ನೀರಿನ ಹರವು ಅತ್ಯಂತ ವಿಶಾಲವಾಗಿರುವಂತೆ ಈ ಶರಣರೆಲ್ಲರ ಅನುಭಾವ ತನ್ನ ಉತ್ಕರ್ಷದ ಸ್ಥಿತಿಯನ್ನು ಮುಟ್ಟಿದ್ದಾಗಿದೆ. ಅಕ್ಕ ಕಲ್ಯಾಣವನ್ನು ಬಿಟ್ಟು ಕದಳಿಯೆಡೆಗೆ ಹೋಗುತ್ತಿರುವ ಚಿತ್ರವೊಂದೇ ಕಣ್ಣಿಗೆ ಕಟ್ಟುತ್ತದೆ.

'ಶ್ರೀಶೈಲಕಾಂಡ'ದಲ್ಲಿ ಅಕ್ಕನ ಬಾಳಿಗೆ ಇನ್ನೊಂದು ತಿರುವು ಬಂದಿದೆ. ಮಗನನ್ನು ಕಳೆದುಕೊಂಡ ಗುರುಚನ್ನಮಲ್ಲ ಅವನ ಹಿಂದೆ ಓಡಿ ಬಂದ ಅವನ ಶಿಷ್ಯ ಗಿರಿಮಲ್ಲ ಇವರನ್ನು ಅಕ್ಕ ಕಾಣುತ್ತಾಳೆ. ಅಕ್ಕ ಉಡುತಡಿಯಲ್ಲಿ ಇನ್ನೂ ಹುಡುಗಿಯಾಗಿದ್ದಾಗಲೇ ಶಿವಭಕ್ತಿಯ ಬೀಜ ಮೊಳೆತದ್ದು ಈ ಗುರುವಿನ ಅನುಗ್ರಹದಿಂದ. ಅದೇ ಗುರು ಈಗ ವಿಪನ್ನಾವಸ್ಥೆಯಲ್ಲಿದ್ದಾನೆ. ಪುತ್ರ- ಪತ್ನಿ ಶೋಕದ ಮೋಹ ಆವರಿಸಿ ಗತಿಗಾಣದವನಾಗಿದ್ದಾನೆ. ಈಗ ಅವನ ಮೋಹದ ಕತ್ತಲೆಯನ್ನು ಬೆಳಗುವ ಕೆಲಸ ಶಿಷ್ಯಳಾಗಿದ್ದ ಅಕ್ಕನದು. ಪರಿಪಾಕದ ಚರಮಸೀಮೆಯಲ್ಲಿರುವ ಅಕ್ಕನಿಗೆ ಇದು ಸಹಜವಾಗಿದೆ. ಉಡುತಡಿಯ ನೆನಪಿನಿಂದ ಗುರುಮಲ್ಲ ಚೇತರಿಸಿಕೊಂಡು ಕ್ರಮವಾಗಿ ತನ್ನ ಮೋಹದ ಗವಿಯಿಂದ ಬೆಳಕಿಗೆ ಬರುತ್ತಾನೆ. ಸಮಾಧಾನವನ್ನು ಪಡೆಯುತ್ತಾನೆ. ಮುಂದೆ ಈ ಮೂವರ ನಡುವೆ ತಾತ್ವಿಕ ಚರ್ಚೆ ನಡೆಯುತ್ತದೆ. ಈ ಮೂವರೂ ಮೂರು ತಲೆಮಾರುಗಳಿಗೆ ಸೇರಿದವರಾಗಿದ್ದು ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು ಪ್ರತಿನಿಧಿಸುವಂತಿದ್ದಾರೆ. ಆದರೆ ಮೂವರಿಗೂ ಇರುವ ಆಸಕ್ತಿ ಎಂದರೆ ಸತ್ಯಶೋಧನೆ. ವಿಶ್ವಚಕ್ರದಲ್ಲಿ ಮನುಷ್ಯ ಜೀವನದ ಸ್ಥಾನದಿಂದ ಹಿಡಿದು ಮನುಷ್ಯನ ಸಂಬಂಧ ಪರತತ್ವದೊಡನೆ ಯಾವ ಬಗೆಯದು ಎಂಬುದರವರೆಗೆ ಈ ಚರ್ಚೆಯ ವ್ಯಾಪ್ತಿಯಿದೆ. ಒಂದು ದೃಷ್ಟಿಯಲ್ಲಿ ಇದು ನಿರೀಹವಾದ ಸ್ವಾರ್ಥದ ಲೇಪವಿಲ್ಲದ ಚರ್ಚೆ. ವೈಯಕ್ತಿಕ ಮೋಕ್ಷ ಇವರಾರಿಗೂ ಒಂದು ಸಮಸ್ಯೆಯಲ್ಲ. ಆದರೆ ಈ ಶರಣರು ತಾತ್ಕಾಲಿಕವಾಗಿಯೇ ಆಗಲಿ ಆಶ್ರಯವನ್ನು ಪಡೆದಿರುವ ಈ ಜಗತ್ತಿನ ಗತಿಯೇನು? ವಿಚಾರ ಮಾಡುತ್ತ ಹೋದಂತೆ ಜಗತ್ತಿನ ತಾತ್ವಿಕ ಇತಿಹಾಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಣ್ಣೆದುರು ಬಿಚ್ಚುತ್ತ ಹೋಗುತ್ತದೆ. ಈ ಸೃಷ್ಟಿ ದೇವರಿಂದ ನಿರ್ಮಿತವಾಗಿದ್ದರೂ ಪರತತ್ವದಿಂದ ದೂರ ಸರಿದದ್ದು ಹೇಗೆಂಬುದೇ ಇಲ್ಲಿ ಮುಖ್ಯ ಪ್ರಶ್ನೆಯಾಗುತ್ತದೆ. ದೇವರು ತನ್ನಿಂದ ನಿರ್ಮಿತವಾದ ವಿಶ್ವವನ್ನೆಲ್ಲ ವ್ಯಾಪಿಸಿ ಅದನ್ನೂ ಮೀರಿ ನಿಂತಿರುವನೆಂಬ ಮಾತು ಈ ಕಾವ್ಯಕ್ಕೂ ಒಪ್ಪಿಗೆಯಾಗಿದೆ. ಸಚರಾಚರ ಸೃಷ್ಟಿ- ಪ್ರಕೃತಿಮಾತೆ ನಿರಂತರವಾಗಿ ಈ ವಿಶ್ವದ ಪ್ರತಿಯೊಂದು ವಸ್ತುವನ್ನೂ ಹಡೆಯುತ್ತ, ಹಡೆಯುತ್ತಿರುವಂತೆಯೇ ತನ್ನೊಡೆಯನನ್ನು ಕಾಣಲು ಹಂಬಲಿಸುತ್ತಿರುವ ಹೃದಯವೇಧಕವಾದ ಚಿತ್ರ ಈ ಕಾವ್ಯದಲ್ಲಿದೆ. ಹಾಗಾದರೆ ಪ್ರಕೃತಿಯನ್ನು ಆ ಪರತತ್ವದಿಂದ ಬೇರೆ ಮಾಡಿದವರಾರು? 'ಚಿಜ್ಯೋತಿ ಚಿತ್‌ಪ್ರಕಾಶದ ಪರಬ್ರಹ್ಮವನು/ ತನಗೆ ತಾ ಕತ್ತಲಿಸಿ ಇರುವ ಕತ್ತಲೆಯುಡಿಸಿ/ ಕತ್ತಲೆಯ ಕತ್ತಲೆಯ ನೃತ್ಯವಾಡಿಹೆ ರಮಣಿ' ಎಂಬ ವರ್ಣನೆಯಲ್ಲಿ ಮಾಯೆಯ ಸುಂದರವಾದ ವರ್ಣನೆಯಿದೆ. ಪರತತ್ವದಿಂದ ಅಗಲಿಸುವದೂ ಮಾಯೆ, ತಿರುಗಿ ಪರತತ್ವದೊಂದಿಗೆ ಕೂಡಿಸುವದೂ ಮಾಯೆಯೇ, ಮಾಯೆಯ ಶಕ್ತಿಯಿಂದ ಸೃಷ್ಟವಾದ ಈ ಜಗತ್ತು ತನಗರಿಯದಂತೆಯೇ ತಿರುಗಿ ಪರತತ್ವಕ್ಕಾಗಿ ಹಂಬಲಿಸುವ ವಿರೋಧಾಭಾಸದ ಚಿತ್ರ ಕಾಣುತ್ತದೆ. ಅಲ್ಲಿಂದ ಮುಂದೆ ಮಾನವಪ್ರಾಣಿಯ ವಿಸ್ಮಯದ ಇತಿಹಾಸ, ಬೆಳಕು ಕತ್ತಲೆಗಳ ಮುಗಿಯದ ಸಂಘರ್ಷ ನಡೆಯುತ್ತಿರುವುದು ಈ ಮಾನವನ ಅಂತರಂಗ ಮತ್ತು ಬಹಿರಂಗಗಳ ಇತಿಹಾಸದಲ್ಲಿ, ನಡು ನಡುವೆ ಈ ಕತ್ತಲೆಯ ಸಾಗರವನ್ನು ದಾಟಿ ಅಖಂಡವಾದ ಬೆಳಕಿನ ಕಡೆಗೆ ನಡೆದಿರುವ ಕಶ್ಚಿತ್ ಧೀರರ ವ್ಯಕ್ತಿಗತ ಚರಿತ್ರೆಗಳು ಬೆಳಕಿನ ದ್ವೀಪಗಳಾಗಿ ಬೆಳಗುತ್ತಿರುವ ದೃಶ್ಯಗಳೂ ಇವೆ. ಇದನ್ನು ಬಿಟ್ಟರೆ ಕತ್ತಲೆಯ ಜಗತ್ತಿನ ಇತಿಹಾಸ ಕೂಡ ಕಡಿಮೆ ವಿಸ್ಮಯವನ್ನು ಹುಟ್ಟಿಸು-ವಂಥದಲ್ಲ.

ಕತ್ತಲೆಯ ಜಗತ್ತಿನ ಸಣ್ಣ ದೊಡ್ಡ ಕತೆಗಳು ಕೂಡ ಈ ಕಥನದಲ್ಲಿ ಪವಣಿಸಿಕೊಂಡು ಬಂದಿವೆ. ದೊಡ್ಡ ಮನೆಯ ವೀರಣ್ಣನ ಕತೆ, ಪರೋಪಕಾರಿ ಮುದ್ದಣ್ಣನ ಕತೆ, ಅಪ್ರತಿಮ ವೀರ ಮತ್ತು ವೈಣಿಕ ಸಿಂಘಣ್ಣನ ಕತೆ ಇವೆಲ್ಲ ಮನುಷ್ಯನ ಆಳ ಎತ್ತರಗಳನ್ನು ಅದರಂತೆ ದೌರ್ಬಲ್ಯ ಪರಿಮಿತಿಗಳನ್ನು ಗೆರೆ ಹಾಕಿದಂತೆ ಸೂಚಿಸುವ ಕತೆಗಳಾಗಿವೆ. ಇವು ಅಮೂರ್ತವಾದ ಸತ್ಯವನ್ನು ಸೂಚಿಸುವ ಒಡಗತೆಗಳಲ್ಲ, ವಾಸ್ತವ ಲೋಕದ ವಾಸ್ತವ ಕತೆಗಳೇ ಆಗಿವೆ. ಆದರೂ ಇವು ಕಾವ್ಯದಲ್ಲಿ ಒಡಗತೆಗಳಂತೆಯೇ ಕೆಲಸ ಮಾಡುತ್ತವೆ. ಇದಲ್ಲದೆ ರಾಮಾಯಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಮಹಾಭಾರತಗಳ ಪ್ರಸ್ತಾಪ ಕೂಡ ಈ 'ಕತ್ತಲೆಯ ಕಾಂಡ' ದಲ್ಲಿದೆ. ಒಂದು ಕಾಲಕ್ಕೆ ಪುಣ್ಯಕತೆಗಳಾಗಿದ್ದ ಇವು ಕತ್ತಲೆಯ ಕಾಂಡದಲ್ಲಿರುವದರ ಔಚಿತ್ಯವನ್ನು ಕೆಲವರು ಪ್ರಶ್ನಿಸಬಹುದು. ಆದರೆ ಈ ಕತೆಗಳ ಕಾವ್ಯಮಯತೆಗೆ ಮಾತ್ರ ಇಲ್ಲಿ ಅನ್ಯಾಯವಾಗಿಲ್ಲ. ಎಷ್ಟು ದೊಡ್ಡ ಕಾವ್ಯವಾದರೂ ಏನು ಅದೂ ಒಂದು ಲೌಕಿಕ ಕೃತಿ ಎಂಬ ಧ್ವನಿ ಇಲ್ಲಿದೆ. ಇಲ್ಲಿ ಸ್ವಾರಸ್ಯದ ಸಂಗತಿ ಎಂದರೆ ಈ ಎಲ್ಲ ಕತೆಗಳ ನಡುವೆ ಲಿಂಗಣ್ಣನೆಂಬ ಕವಿಯ ಕತೆಯೂ ಒಂದಿದೆ. ಲಿಂಗಣ್ಣ ಬಹಳ ದೊಡ್ಡ ಕವಿಯಾಗಿದ್ದ ಎಂದು ಈ ಕಾವ್ಯ ಸಾರಿ ಹೇಳುತ್ತಿದೆ. ಲಿಂಗಣ್ಣನ ಸೌಂದರ್ಯಪ್ರಜ್ಞೆ, ಜೀವನದೃಷ್ಟಿ, ಜಗತ್ತಿನ ಬಗ್ಗೆ ಅವನಿಗಿರುವ ಅನುಕಂಪ, ಕಾವ್ಯದ ಮೂಲಕ ಇನ್ನೊಂದು ಜಗತ್ತನ್ನು ಸೃಷ್ಟಿಸುವ ಅವನ ಅನ್ಯಾದೃಶ್ಯವಾದ ಪ್ರತಿಭೆ ಇವೆಲ್ಲದರ ದೀರ್ಘವಾದ ವರ್ಣನೆ ಇಲ್ಲಿದೆ. ವಿಶ್ವಕ್ಕೆ ಮುಚ್ಚಿರುವ ಮುಚ್ಚಳವ ತೆಗೆದಿಟ್ಟು/ ಹೊಸದೊಂದು ಸತ್ಯ ಸೃಷ್ಟಿಯ ಜಗವ ಹಡೆದು/ ಕಾವ್ಯಕ್ಕೆ ಮಾನವನ ಎದೆಯ ನಿಲುಕಿಸಿಕೊಟ್ಟು/ ಕುಲವನೆತ್ತಿದ ತಂದೆ ಎಂಥ ಸತ್ತ!'. ಕವಿಯ ಪ್ರತಿಭೆ ಎಷ್ಟು ಅದ್ಭುತವಾಗಿದ್ದರೂ ಅದಕ್ಕೆ ಮರಣವನ್ನು ಗೆಲ್ಲುವ ಶಕ್ತಿಯಿಲ್ಲ. 'ಲಿಂಗಣ್ಣ ಕವಿಯೊಂದು ನಕ್ಷತ್ರ ಮಾನವ/........... ಎಂಥ ಸತ್ತಾ ತಂದೆ ಹೇಗೆ ಕತ್ತಲೆಯಾದ?/ ಕತ್ತಲೆಗೆ ನಕ್ಷತ್ರ ನಂದಿದರೆ ಬೆರಗಾದೆ'/ ಎನ್ನುತ್ತಾಳೆ- ಕತೆಯನ್ನು ಕೇಳುತ್ತಿರುವ ಮಹಾದೇವಿ. ಕವಿ ಎಷ್ಟು ದೊಡ್ಡವನಾದರೂ 'ಸಾವಿಂಗೆ ಸತ್ತಿರುವ' ಶರಣನಿಗೆ ಸಮನಾಗುವದಿಲ್ಲ. 'ಭವ್ಯಮಾನವ' ಕೃತಿಯ ಸಂದರ್ಭದಲ್ಲಿ ಈ ಮಾತನ್ನು ಒಪ್ಪಬಹುದೇನೋ! ಆದರೆ ಕವಿಯಾದವನು ಶರಣನೂ ಆಗಿದ್ದರೆ ಆಗ ಅವನ ಕಾವ್ಯದ ಬೆಲೆ ಎಂಥದು ಎನ್ನುವದರ ಬಗ್ಗೆ ಈ ಕೃತಿ ಯೋಚಿಸುವದಿಲ್ಲ. ಕಾವ್ಯ ಮತ್ತು ಅನುಭಾವ ಇವುಗಳಲ್ಲಿ ಯಾವದು ಮಹತ್ವದ್ದು ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗಿದೆಯೆಂಬ ಮಾತು ನಿಜವೇ. ಆದರೆ ಈ ಕೃತಿಯ ಮಟ್ಟಿಗೆ ಹೇಳುವದಾದರೆ ಕವಿ ಮತ್ತು ಶರಣ ಇವರಲ್ಲಿ ತಾರತಮ್ಯ ಒಂದು ಸುಲಭೀಕರಣದ ಮಾತಾಗುತ್ತದೆ.

ಆದರೆ ಇದಕ್ಕಿಂತ ಮಹತ್ವದ ಸಮಸ್ಯೆಯೊಂದಿದೆ. 'ಶ್ರೀಶೈಲ ಕಾಂಡ' ದಿಂದ ಹಿಡಿದು ಕಾವ್ಯದ ಕೊನೆಯವರೆಗೆ ತಿಳುವಳಿಕೆಯ, ಅನುಭಾವದ ನಿರೂಪಣೆ ಇದೆ. ಒಂದು ಮಹಾಕಾವ್ಯದ ಅಭಿವ್ಯಕ್ತಿಯ ಪರಿಪ್ರೇಕ್ಷ್ಯದಲ್ಲಿ ತಿಳುವಳಿಕೆಯನ್ನು ನಿರೂಪಿಸುವುದು ಹೇಗೆಂಬುದೇ ಇಲ್ಲಿಯ ಸಮಸ್ಯೆಯಾಗಿದೆ. ಒಂದು ಮಹಾಕಾವ್ಯದ ಅಭಿವ್ಯಕ್ತಿಯ ಕ್ರಮ ಕತೆಯ ಕಥನಕ್ಕೆ ಹೇಳಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿಸಿದಂಥ ಕ್ರಮವಾಗಿದೆ. ತಿಳುವಳಿಕೆ ಕಥೆಯ ಸ್ವರೂಪವನ್ನು ತಾಳುವುದಾದರೂ ಹೇಗೆ? ಈ ಸಮಸ್ಯೆಗೆ ಉತ್ತರಿಸಲು 'ಭವ್ಯಮಾನವ' ಎರಡೊಂದು ರೀತಿಯಲ್ಲಿ ಪ್ರಯತ್ನ ಮಾಡುತ್ತಿರುವಂತೆ ತೋರುತ್ತದೆ. ಮೊದಲನೆಯದಾಗಿ ತಿಳುವಳಿಕೆಯೇ ಮೂರ್ತಿವೆತ್ತಂತಿರುವ ಶರಣರ ವ್ಯಕ್ತಿತ್ವಗಳು ಇಲ್ಲಿಯ ತಿಳುವಳಿಕೆಗೆ ಆಧಾರವಾಗಿದ್ದಾರೆ. ಕತೆ ಹೇಳುತ್ತಿರುವ ಗುರು ಚನ್ನಮಲ್ಲ ಮತ್ತು ಕತೆ ಕೇಳುತ್ತಿರುವ ಅಕ್ಕ ಮತ್ತು ಗಿರಿಮಲ್ಲ ಇವರು ಸಾಮಾನ್ಯ ಜ್ಞಾನಿಗಳಲ್ಲ. ಅಲ್ಲಮನಂತೆ ಬಯಲು- ದೇಹಿಗಳಾಗದಿದ್ದರೂ ನಿರ್ವಯಲನ್ನು ಅನುಭವಿಸಿ ಲೋಕದ ಉದ್ಧಾರಕ್ಕಾಗಿ ಜೀವ ಹಿಡಿದುಕೊಂಡು ನಿಂತಿರುವರು. 'ಶರಣ ನಡೆದರೆ ನಿರ್ಗಮನಿ ನುಡಿದರೆ ನಿಶ್ಶಬ್ದ' ಎಂದ ಅಲ್ಲಮನ ಮಾತಿಗೆ ಇವರು ಉದಾಹರಣೆಯಾಗುತ್ತಾರೆ. ಗಮನ ಮತ್ತು ಶಬ್ದ ಇವೆರಡೂ ಅವರಿಗೆ ಇರುವದರಿಂದ ಅವರು ಹೇಳಿದ್ದು ತಿಳುವಳಿಕೆಯ ಕತೆಯಾಗುತ್ತದೆ.

'ಭವ್ಯಮಾನವ'ನ ಸಮಸ್ಯೆಗೆ ಇನ್ನೊಂದು ರೀತಿಯಲ್ಲಿಯೂ ಉತ್ತರ ಕೊಡುವಂತಿದೆ. ತಿಳುವಳಿಕೆಯ ಸ್ವರೂಪ ಮತ್ತು ಸ್ವಭಾವಗಳೇನೆಂದು ಕೇಳಿದರೆ ಉತ್ತರ ಹೇಳುವುದು ಕಷ್ಟವಾಗಬಹುದು. ತಿಳುವಳಿಕೆಯನ್ನುವುದು 'ಪಳಚ್ಚನೆ ಮಿಂಚಿ'ದರೆ, ಕ್ಷಣದ ಅವಕಾಶದಲ್ಲಿ ಕತ್ತಲೆಯನ್ನೆಲ್ಲ ಬೆಳಗಿದರೆ ಅದಕ್ಕೆ ಕತೆ ಇಲ್ಲ, ಇತಿಹಾಸವಿಲ್ಲ. ಅದಕ್ಕೆ ಬದಲಾಗಿ ತಿಳುವಳಿಕೆಯೆನ್ನುವುದು ಕತ್ತಲೆಯ ಬಸಿರನ್ನೊಡೆದು ಕ್ರಮವಾಗಿ ಮೂಡುತ್ತಿರುವ ಬೆಳಗಾದರೆ ಅದಕ್ಕೊಂದು ಕ್ರಮವಿದೆ, ಗಮನವಿದೆ, ಇತಿಹಾಸವಿದೆ, ಆದ್ದರಿಂದ ಕತೆಯೂ ಇದೆ ಎಂದು ಹೇಳಿದ ಹಾಗಾಯಿತು. 'ಭವ್ಯಮಾನವ' ಕಾವ್ಯದಲ್ಲಿ ತಿಳುವಳಿಕೆಯ ನಿರೂಪಣೆ ಇಂಥ ಕ್ರಮವನ್ನು ಅನುಸರಿಸಿದ್ದು ಸ್ಪಷ್ಟವಾಗಿದೆ. ಮೊದಲಿನ ಎರಡು ಅಧ್ಯಾಯಗಳು- 'ಕಲ್ಯಾಣಕಾಂಡ' ಮತ್ತು 'ಶ್ರೀಶೈಲ ಕಾಂಡ'- ನಿರೂಪಿಸುವ ಸಂಗತಿಗಳಿಗೆ ಭೌಗೋಲಿಕತೆ ಮತ್ತು ಐತಿಹಾಸಿಕತೆಗಳು ಗಟ್ಟಿಮುಟ್ಟಾಗಿವೆ. ಮನುಷ್ಯನ ಆಧ್ಯಾತ್ಮಿಕ ಸಂಸ್ಕೃತಿಗೆ ಉಕ್ಕು ಬಂದ ಕಾಲದ ಒಂದು ಪ್ರಸಂಗಮಾಲೆಯನ್ನು ಈ ಕಾಂಡಗಳು ಚಿತ್ರಿಸುತ್ತವೆ. ಮುಂದೆ ನಡೆಯಲಿರುವ ತಿಳುವಳಿಕೆಯ ನಿರೂಪಣೆಗೆ ಇವು ತಕ್ಕದಾದ ಕಾವ್ಯ ಸಂದರ್ಭವನ್ನು ನಿರ್ಮಿಸುತ್ತವೆ. ನಮ್ಮ ಇತಿಹಾಸದಲ್ಲಿಯ ಈ ಪಾರಮಾರ್ಥಿಕವಾದ ವಸಂತಕಾಲವನ್ನು ನಿಮಿತ್ತವಾಗಿಸಿಕೊಂಡು ಅದರ ಮೂಲಕ ತಿಳುವಳಿಕೆಯ ಕತೆಯನ್ನು ಬಿತ್ತರಿಸುವ ಕೆಲಸವನ್ನು ಮುಂದಿನ ಕಾಂಡಗಳು ಮಾಡುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಮ, ಬಸವಣ್ಣ, ಚನ್ನಬಸವಣ್ಣ, ಮಹಾದೇವಿ ಇಂಥ ಧೀರಶರಣರ ನಡುವೆ ನಡೆದ ಸಂವಾದ ಕತೆಯೆಂದರೆ ಕತೆ, ನಾಟಕವೆಂದರೆ ನಾಟಕ.

ಮುಂದಿನ ಕಾಂಡಗಳ ಹೆಸರುಗಳು ಸೂಚಿಸುವಂತೆ ತಿಳುವಳಿಕೆಯ ಆವಿರ್ಭಾವದ ಕ್ರಮ ತಾನಾಗಿಯೇ ಸೂಚಿತವಾಗಿದೆ. 'ಕತ್ತಲೆಯ ಕಾಂಡ', 'ಉದಯಕಾಂಡ' ಮತ್ತು 'ಉಜ್ವಲಕಾಂಡ'- ಈ ಹೆಸರುಗಳು ಕತ್ತಲೆಯಿಂದ ಉಜ್ವಲವಾದ ಬೆಳಕಿಗೆ ಸಾಗುವ ಪ್ರಕ್ರಿಯೆಯನ್ನು ಸೂಚಿಸುತ್ತವೆ. ಕೊನೆಯದು 'ಭವ್ಯ ಕಾಂಡ' ಭವಿಷ್ಯತ್ತಿಗೆ ಸಂಬಂಧಿಸಿದ್ದಾಗಿದೆ. ಹನ್ನೆರಡನೆಯ ಶತಮಾನದ ಶರಣರ ದಿವ್ಯವಾದ ಗೋಷ್ಠಿ ಕೂಡ ಕಾಲ- ದೇಶಗಳ ಪರಿಮಿತಿಯಲ್ಲಿ ಪ್ರಕಟವಾಗಿದ್ದರಿಂದ ಅದಕ್ಕೂ ಒಂದು ಪ್ರಾರಂಭ ಮತ್ತು ಮುಗಿತಾಯ ಇವೆ. ಕಪ್ಪಡಿಸಂಗಮದ ನೀರು, ಘೋರಾರಣ್ಯದೊಳಗಿನ ಕದಳಿ, ಗೊಹೇಶ್ವರನ ನಿಶ್ಚಲ ಪೀಠವಾಗಿರುವ ಮಹಾಶೂನ್ಯ ಇವು ಎಂಥ ಕತೆಗೂ ನಿಲುಗಡೆಯ ಸ್ಥಾನವಾಗಿವೆ. ಇಲ್ಲಿಗೆ ಗಮನ ನಿಲ್ಲಬೇಕು, ಶಬ್ದ ನಿಶ್ಯಬ್ದವಾಗಬೇಕು. ಇದನ್ನು ದಾಟಿ 'ಭವ್ಯಮಾನವ' 'ಭವ್ಯಕಾಂಡ' ವನ್ನೂ ಕೊಟ್ಟಿದೆ. ಇಲ್ಲಿ ಬರುವದೆಲ್ಲ ಸಂಭಾವ್ಯತೆಯ, ಅನನುಭವದ ಕ್ಷೇತ್ರ.

ಇಲ್ಲಿ ಇನ್ನೊಂದು ಸಮಸ್ಯೆಯೆಂದರೆ ತಿಳುವಳಿಕೆಯನ್ನು ಶಬ್ದಗಳಲ್ಲಿ ಸಾಕಾರ ಗೊಳಿಸುವುದು ಹೇಗೆ? ಈ ಮೊದಲೇ ಸೂಚಿಸಿದಂತೆ ಈ ಕಾವ್ಯ ಮಾಲೆ-ಮಾಲೆಯಾಗಿ ಉಪಮೆ, ಉತ್ಪ್ರೇಕ್ಷೆ, ದೃಷ್ಟಾಂತಗಳಂಥ ಅಲಂಕಾರಗಳನ್ನು ಬಳಸಿಕೊಂಡು ಅಮೂರ್ತವಾದದ್ದನ್ನು ಮೂರ್ತವಾಗಿಸಲು ಸಾಕಷ್ಟು ಪ್ರಯತ್ನಿಸಿದೆ. ಈ ಅಲಂಕಾರಗಳಲ್ಲಿ ಕೂಡ ಒಂದು ವೈಶಿಷ್ಟ್ಯವಿದೆ. ಬೆಳಕು, ಕತ್ತಲೆ, ಬೆಳದಿಂಗಳು, ಕಪ್ಪುರ, ಅರಗು, ಉರಿ, ಪರಿಮಳ, ಜೇನು ಇಂಥ ಪ್ರತಿಮೆಗಳನ್ನೇ ಇಲ್ಲಿ ಮತ್ತೆ ಮತ್ತೆ ಉಪಯೋಗಿಸಲಾಗಿದೆ. ಈ ಪ್ರತಿಮೆಗಳಿಗೆ ಒಂದು ಇತಿಹಾಸವೂ ಇದೆ. ಕಾವ್ಯವೇ ಆಗಲಿ, ತತ್ವಜ್ಞಾನವೇ ಆಗಲಿ ತನಗೇ ವಿಶಿಷ್ಟವಾಗಿರುವ ಒಂದು ಉಪಭಾಷೆಯನ್ನು, ಪಡೆನುಡಿಯನ್ನು ನಿರ್ಮಿಸಿಕೊಳ್ಳುವದು ನಮ್ಮಲ್ಲಿ ಒಂದು ಮಹತ್ವದ ಸಂಪ್ರದಾಯವಾಗಿದೆ. ಉಪನಿಷತ್ತಿನ 'ಊರ್ಣನಾಭ' ಮಹಾದೇವಿಯಕ್ಕನ ವಚನದಲ್ಲಿ 'ತೆರಣಿಯ ಹುಳು' ವಾಗುವದು ಈ ಪಡೆನುಡಿಗೆ ಒಂದು ಉದಾಹರಣೆಯಾಗಿದೆ. ಬಯಲೇ ದೇಹವಾಗಿದ್ದ ಅಲ್ಲಮನಿಗೆ ಕಪ್ಪುರದ ಗೊಂಬೆ, ಜಲದ ಗೊಂಬೆ, ಅರಗಿನ ಗೊಂಬೆ- ಹೀಗೆ ಗೊಂಬೆ ಅವನ ಪ್ರಿಯವಾದ ಪ್ರತಿಮೆಯಾಗುವದು ಅರ್ಥಪೂರ್ಣವಾಗಿದೆ. ಬಸವಣ್ಣನ ವಚನಗಳಲ್ಲಿ 'ಮನೆ'ಯ ಪ್ರತಿಮೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂರಾರು ಅರ್ಥಗಳನ್ನು ಪಡೆಯುತ್ತದೆ. ಭೂಸನೂರಮಠರು ತಮ್ಮ ಕಾವ್ಯಕ್ಕಾಗಿ ಉಪಯೋಗಿಸಿದ ಪ್ರತಿಮೆಗಳಲ್ಲಿ ಬಹಳಷ್ಟು ವಚನಕಾರರ ಸಂಗ್ರಹದಿಂದ ತೆಗೆದುಕೊಂಡವುಗಳಾಗಿವೆ. ಅಂದರೆ ಈ ಪ್ರತಿಮೆಗಳಿಗೆ ಒಂದು ಸಾಂಕೇತಿಕ ಇತಿಹಾಸವಿದೆ. ಈ ಪ್ರತಿಮೆಗಳನ್ನು ದಿನನಿತ್ಯದ ಭಾಷೆಯಂತೆ ಉಪಯೋಗಿಸುತ್ತ ಅರ್ಥಪ್ರಪಂಚವನ್ನು ಕಾವ್ಯಕ್ಕೆ ಅನುಕೂಲವಾಗುವಂತೆ ನಿರ್ಮಿಸಿಕೊಳ್ಳಬಹುದು. ಈ ಕಾವ್ಯದಲ್ಲಿ ಅಭಿವ್ಯಕ್ತವಾಗುವ ತಾತ್ವಿಕವಾದ ಅರ್ಥ ವಚನಕಾರರ ಪಾರಿಭಾಷಿಕತೆಯನ್ನು ಮೀರಿ ಹೋಗುವುದಿಲ್ಲವೆಂಬ ಮಾತು ನಿಜವಾಗಿದ್ದರೂ ಅದು ಅನಿವಾರ್ಯವಾಗಿದೆ. ಬಯಲು, ಲಿಂಗ, ಶರಣ ಮೊದಲಾದ ಶಬ್ದಗಳಿಗೆ ಇರುವ ಅರ್ಥದ ಇತಿಹಾಸ ದೀರ್ಘವಾಗಿದೆ. ಅದನ್ನು ಕಡೆಗಣಿಸದೆ ನವೀನ ಅರ್ಥವನ್ನು ತುಂಬುವದು ಸಾಧ್ಯವಿದೆ.

'ಭವ್ಯಮಾನವ' ಕಾವ್ಯದಲ್ಲಿ ಸ್ವತಂತ್ರವಾದ ಪ್ರತಿಮೆಗಳೂ ಇವೆ. ಉದಾಹರಣೆಗೆ 'ಕತ್ತಲೆಯ ಕಾಂಡ' ದಲ್ಲಿ 14 ನೆಯ ಕಾವ್ಯಭಾಗವನ್ನು ನೋಡಬಹುದು. 'ಜಗದಾಟ ರಾತ್ರಿ ಕತ್ತಲೆಗೆ ಮೇಳ' ಎಂದು ಹೆಸರಿರುವ ಈ ಭಾಗ ಜಗತ್ತಿನ ಜೀವನದ ಮಾಯೆಯನ್ನು ಒಂದು ದೊಡ್ಡಾಟದ ಪ್ರತಿಮೆಯ ಮೂಲಕವಾಗಿ ಬಣ್ಣಿಸುತ್ತದೆ. 'ಹಗಲು ಬೆಳಗಾದರೆ ಬಣ್ಣ ಬಣ್ಣವು ಹಾರಿ/ ಸೀರೆ ಕುಪ್ಪಸ ಕಡಗ ಹಾರೆ ಗೆಜ್ಜೆ/.......... ಎಲೆಲೆಲೆಲೆ ಸಾರಥಿ ಭಳಿರೆ ಭಾಪುರೆ/ ಪ್ರಿಯಕಾಂತೆ ಪ್ರಾಣವಲ್ಲಭ ಮಂತ್ರಿಯರಸು/ .... ಮಾತುಕತೆಯಾಳಾಪ ತಾಳ ಮದ್ದಳೆ ಹಾಡು/ ಮಾಯವಪ್ಪವು ಮಗಳೇ ಹಗಲು ಬೆಳಗಾದರೆ/ ನೋಟಕರ ನಾಟಕರು ನೋಟಕರು/ ಗುರುತು ಹಿಡಿದರೆ ತಾಯೆ ನಾಟಕ ಸಮಾಪ್ತ'. ಈ ದೀರ್ಘವಾದ ಪ್ರತಿಮೆ ಬಹುಶಃ ಕವಿಯ ಸ್ವಾನುಭವದಿಂದ ಬಂದದ್ದಾಗಿರಬಹುದು. ವಿವರಗಳೆಲ್ಲ ಸಜೀವವಾಗಿ ಕಾವ್ಯ ಹೇಳಬೇಕಾದದ್ದನ್ನು ಸರಿಯಾಗಿ ಪ್ರತಿಬಿಂಬಿಸುತ್ತದೆ. ಇಂಥ ಎಷ್ಟೋ ಪ್ರತಿಮೆಗಳು ಕಾವ್ಯದುದ್ದಕ್ಕೂ ದೊರೆಯುತ್ತವೆ, ಹೇಳಬೇಕೆಂದಿರುವ ಅರ್ಥ ಕಣ್ಣಿಗೆ ಕಟ್ಟುವಷ್ಟು ಮೂರ್ತವಾಗುತ್ತದೆ.

'ಉಜ್ವಲ ಕಾಂಡ'ದ 42 ನೆಯ ಕಾವ್ಯಭಾಗ ಮೋಳಿಗೆಯ ಮಾರಯ್ಯನ ಕತೆಗಾಗಿ ಮೀಸಲಾಗಿದೆ. 'ನೆನಪಿದೆಯೇ ಮಲ್ಲಯ್ಯ?/ ಕಾಶ್ಮೀರ ದೊರೆ ಮಹಾದೇವ ಭೂಪಾಲ/ ಮಾಂಡವ್ಯಪುರ ತನ್ನ ರಾಜಧಾನಿಯ ಬಿಟ್ಟು/ ನಡೆದಿಹನು ಪಟ್ಟದ ಮಹಾರಾಣಿಯೊಡಗೂಡಿ/' ಎಂದು ಬಹಳ ಸರಳವಾಗಿ ಪ್ರಾರಂಭವಾಗುತ್ತದೆ ಈ ಕಥೆ. ಕಾಶ್ಮೀರದ ರಾಜ ಕಲ್ಯಾಣಪಟ್ಟಣಕ್ಕೆ ಬಂದಿರುವದೇ ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶ್ಚರ್ಯ. ಬಸವಣ್ಣನ ಖ್ಯಾತಿಯನ್ನು ಕೇಳಿದ ಈ ದೊರೆಗೆ ವೈರಾಗ್ಯದ ಚಿಂತೆ ತಾನೇ ತಾನಾಗುತ್ತದೆ. ಒಂದು ದೃಷ್ಟಿಯಲ್ಲಿ ಮಾರಯ್ಯನದು ಆಧ್ಯಾತ್ಮಿಕ ಪುನರ್ಜನ್ಮ. 'ಕಾಶ್ಮೀರ ಭೂಪಾಲನೊಳು ಭೂಪ ಸತ್ತು/ ಶರಣನಂಕುರಿಸಿದ್ದ ಮೋಳಿಗೆಯ ಮಾರಯ್ಯ/' ಈ ಪುನರ್ಜನ್ಮದ ಪೂರ್ವಸಿದ್ಧತೆಯಾಗಿ ಆ ದೊರೆಯ ಮನಸ್ಸಿನಲ್ಲಿ ನಡೆದಿದ್ದ ಭಾವಮಂಥನವನ್ನು ಬೇಸರವಿಲ್ಲದೆ ದೀರ್ಘವಾಗಿ ಕಾವ್ಯ ಚಿತ್ರಿಸುತ್ತದೆ.

ಚಿಂತಿಸಿದ ಭೂಪಾಲ ಒಳಗೆ ಇನ್ನೂ ಆಳ!
ಹೆಣ್ಣು ಸುಖವೆಂದು ಹೆಣ್ಣನೊಳು ಮಲಗಿಹ ತನ್ನ
ಬಿಚ್ಚಿ ನೋಡಿದ ಹೆಣ್ಣ, ಹೆಣ್ಣನೊಳು ಸುಖವ
ಮಣ್ಣು ಸುಖವೆಂದು ಮಣ್ಣನೊಳು ಮಲಗಿಹ ತನ್ನ
ಬಿಚ್ಚಿನೋಡಿದ ಮಣ್ಣ, ಮಣ್ಣನೊಳು ಸುಖವ
ಹೊನ್ನು ಸುಖವೆಂದು ಹೊನ್ನಿನೊಳು ಮಲಗಿಹ ತನ್ನ
ಕಡಿದು ನೋಡಿದ ಹೊನ್ನ, ಹೊನ್ನಿನೊಳು ಸುಖವ,
....
ಮುಂದೇನು? ಮುಂದಿನಾ ಮಾರ್ಗವೇನು?
ಸಾವನಕ ಸರಸವೇ ನಿದ್ದೆ ಕತ್ತಲೆಯೊಡನೆ?
ಕತ್ತಲೆಯ ನಿದ್ದೆಯೊಳು ನಡೆದಂತೆ ನಡೆದರೆ,
ಮರಣಕ್ಕೆ ಕಟ್ಟಾಯ್ತು ಮುಗಿದು ಹಾಡಿ
ನಿದ್ರೆಯೊಳಗತ್ತಿತ್ತು ಕತ್ತಲೆಗೆ ಸತ್ತಿತ್ತು!

ಮನಸ್ಸು ಮತ್ತು ವಿಷಯಗಳ ಕೂಟದಿಂದ ತನ್ನನ್ನು ಬಿಡಿಸಿಕೊಳ್ಳುವ ಕಷ್ಟದ ಕೆಲಸವನ್ನು ಈ ಭೂಪಾಲ ಮಾಡುತ್ತಿದ್ದಾನೆ. ಆದರೆ ಇಲ್ಲಿ ಮುಖ್ಯವಾಗಿರುವುದು ಅರ್ಥದ ಅಭಿವ್ಯಕ್ತಿಯಲ್ಲ, ಕಥನಕ್ರಮದ ಮಹಿಮೆ. ಹೊನ್ನು, ಹೆಣ್ಣು, ಮಣ್ಣು, ನಿದ್ದೆ, ಕತ್ತಲೆ ಮರಣದಂಥ ಶಬ್ದಗಳನ್ನು ಇದೇ ಕೃತಿಯಲ್ಲಿ ಸಾವಿರ ಸಲ ಉಪಯೋಗಿಸಿದ್ದಾಗಿದೆ. ಆರು ಕವಡೆಗಳು, ತೂರಿದಾಗೊಮ್ಮೆ ಹೊಚ್ಚ ಹೊಸದಾದ ಬೆಲೆಯನ್ನು ಪಡೆಯುವಂತಾಗಿದೆ. ಕಾವ್ಯ ನವ್ಯವಾಗುವ ಈ ಗ್ರಂಥದ ಕೌಶಲ ಮೆಚ್ಚುವಂಥದ್ದಾಗಿದೆ. ಒಳ್ಳೆಯ ಶಬ್ದಗಳು ಒಳ್ಳೆಯ ವ್ಯವಸ್ಥೆಯಲ್ಲಿ ಬಂದರೆ ಶ್ರೇಷ್ಠ ಕಾವ್ಯ ಹುಟ್ಟುತ್ತದೆಂದು ಹೇಳುತ್ತಾರೆ. ಆದರೆ ಈ ಒಳ್ಳೆಯ ವ್ಯವಸ್ಥೆ ಯಾರದೇ ಕೈಯೊಳಗಿನ ಮಾತಲ್ಲ. ಕಾವ್ಯಕ್ಕೆ ಒಳ್ಳೆಯದಾಗುವ ಪುಣ್ಯವಿದ್ದರೆ ಮಾತ್ರ ಅಂಥ ವ್ಯವಸ್ಥೆ ತಾನಾಗಿ ಮೂಡಿ ಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಳಿಗೆಯ ಮಾರಯ್ಯನ ಕಾಯಕ ಕಟ್ಟಿಗೆ ಕಡಿದು ಆ ಮೋಳಿಗೆಯನ್ನು ಮಾರಿಕೊಂಡು ತಂದ ಭತ್ತದಿಂದ ಗುರು-ಲಿಂಗ- ಜಂಗಮ ದಾಸೋಹವನ್ನು ತೃಪ್ತಿಯಿಂದ ನಿರ್ವಹಿಸುವದು. ಅವನ ಕಾಯಕದ ವರ್ಣನೆ ಹೀಗಿದೆ.

ಘೋರ ಕಾಂತಾರಕ್ಕೆ ಮಾರಯ್ಯ ನಡೆದರೆ
ಮನಭಾವ ನಡೆಯಿತ್ತು ಲಿಂಗದತ್ತ
ಕೊಡಲಿಯೊಳು ಕಟ್ಟಿಗೆಯ ಕಡಿದರೆ ಮಾರಯ್ಯ
ಕೊಡಲಿ ಕಡಿಯಿತು ಲಿಂಗದತ್ತ ಮುಖವಾಗಿ.
ಕಡಿದ ಕಟ್ಟಿಗೆಯುರುಳಿ ಲಿಂಗಮುಖವಾಗಿ,
ಕಟ್ಟಿಗೆಯ ದೊಡ್ಡ ಹೊರೆ ಹೊತ್ತು ಮಾರಯ್ಯ
ಮನೆಯ ಕಡೆ ನಡೆದ-' ಮನದೊಳಗೆ ಲಿಂಗಮುಖ
ಮೋಳಿಗೆಯ ಮಾರಿ ಒಕ್ಕುಳ ಭತ್ತದೊಳಗೆ
ಮನೆಯರಸಿ ಮಹದೇವಿಯಂಬಳಕ ಮಾಡಿದರ
ತಾನಡಿಗೆ ಮಾಡಿದಳು ಲಿಂಗ ಜಂಗಮ ಮುಖಕೆ.

ಇದಕ್ಕಿಂತ ಮೊದಲು ಉದಾಹರಿಸಿದ ಕಾವ್ಯಭಾಗದ ಕಥನಕ್ರಮಕ್ಕೂ ಇಲ್ಲಿಯದಕ್ಕೂ ಏನೂ ವ್ಯತ್ಯಾಸವಿಲ್ಲ. ಪುನರುಕ್ತಿಯಾದೀತೆಂಬ ಅಳುಕಿಲ್ಲದೆ ಅವಶ್ಯವಿದ್ದಷ್ಟು ಶಬ್ದಗಳನ್ನು ಆರಿಸಿಕೊಂಡು, ಅವುಗಳ ಸಂಯೋಜನೆಯನ್ನು ಸಾಧ್ಯವಿದ್ದಷ್ಟು, ಬದಲಿಸುತ್ತ ಕಥನ ತನ್ನ ಅರ್ಥವನ್ನು ನಿರ್ಮಿಸಿಕೊಳ್ಳುತ್ತದೆ. ಮೊದಲಿನ ಕಾವ್ಯಭಾಗಕ್ಕಿಂತ ಇಲ್ಲಿಯ ಪದಸಂಯೋಜನೆ ಮತ್ತು ಅರ್ಥವಿರಚನೆ ಇವು ಭಿನ್ನವಾಗಿವೆ. ಮಾರಯ್ಯನ ಕಾಯಕದ ವಿವರಗಳಲ್ಲಿ ಭಿನ್ನತೆಯಿದೆ. ಘೋರಕಾಂತಾರ, ಕೊಡಲಿ, ಕಟ್ಟಿಗೆ, ಮೋಳಿಗೆ, ಭತ್ತ, ಅಂಬಲಿ ಹೀಗೆ ವೈವಿಧ್ಯವಿದೆ. ಆದರೆ ಈ ಕಾಯಕದ ಪ್ರತಿಯೊಂದು ವಿವರದ ಗುರಿ ಮಾತ್ರ ಒಂದೇ ಆಗಿದೆ, ಅದು ಲಿಂಗ. ಈ ವೈವಿಧ್ಯ ಮತ್ತು ಏಕಮುಖತೆ ಇವುಗಳಲ್ಲಿ ವಿರೋಧವಾಗದಂತೆ ನೋಡಿಕೊಳ್ಳುವ ಕಥನಶೈಲಿ ಶರಣರ ತಾತ್ವಿಕತೆಯ ಪ್ರತೀಕವಾಗುತ್ತದೆ.

ಮಾರಯ್ಯನ ಕತೆ ಮುಂದುವರಿಯುತ್ತದೆ. ಅವನ ಕಾಯಕದ ಮಹತಿಯನ್ನು, ಅಂಬಲಿಯ ರುಚಿಯನ್ನು ಸವಿದ ಶರಣರು ಬಸವಣ್ಣನಿಗೆ ಈ ಸುದ್ದಿಯನ್ನು ತಿಳಿಸುತ್ತಾರೆ. ಆದರಿಂದ ಚಕಿತನಾದ ಬಸವಣ್ಣ ಮಾರಯ್ಯನಿಲ್ಲದಿದ್ದಾಗ ಆವನ ಮನೆಗೆ ಬಂದು ಅಂಬಲಿಯನ್ನು ಸವಿಯುತ್ತಾನೆ. ಬಸವಣ್ಣನ ಮನಸ್ಸು ರಾಜನಾಗಿದ್ದವನ ಬಡತನವನ್ನು ಕಂಡು ಮರುಗುತ್ತದೆ. ಯಾರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಯದಂತೆ ಹೊಂಜಾಳಿಗೆಯನ್ನು ಇಟ್ಟು ಹೋಗುತ್ತಾನೆ. ತಿರುಗಿ ಬಂದ ಮಾರಯ್ಯ ಹೊನ್ನನ್ನು ಕಂಡು ಸಿಟ್ಟಿಗೆದ್ದು ಬಸವಣ್ಣನ ಮಹಾಮನೆಗೆ ಹೋಗಿ ಹೊನ್ನನ್ನು ದಾನ ಮಾಡುತ್ತಾನೆ. ತನ್ನ ತಪ್ಪಿನ ಅರಿವಾಗಿ ಬಸವಣ್ಣ ಕ್ಷಮೆ ಕೇಳುತ್ತಾನೆ. ಮಾರಯ್ಯನ ಶರಣ ಜೀವನದ ಮಹಾಂತವನ್ನು ಗುರುತಿಸಿ ಎಲ್ಲರೂ ಅವನನ್ನು ಪ್ರಶಂಸೆ ಮಾಡುತ್ತಿರುವಾಗ ಮಾರಯ್ಯ ಬಯಲಾಗುತ್ತಾನೆ.

ಇಲ್ಲಿಯ ಕಥನಕ್ರಮ ಹೀಗೆ ನೇರವಾಗಿ ತನ್ನ ಗುರಿಯ ಕಡೆಗೇ ಸಾಗುತ್ತದೆ. ಅದರ ಗಮನ ಸಾವಕಾಶವಾಗಬಹುದು, ಆದರೆ ಅದು ಅಡ್ಡ ಒಡೆಯುವದಲ್ಲ. ಆದರೆ ಇಂಥಲ್ಲಿ ಒಂದು ಸಮಸ್ಯೆ ಏಳುತ್ತದೆ. ಮಾರಯ್ಯ ಬಸವಣ್ಣನಿಗೆ ಒಂದು ತೀಕ್ಷ್ಣವಾದ ಮಾತಾಡುತ್ತಾನೆ. 'ನಾನು ಧನಿಕನು ನೀನು ಬಡವರೆಂದೆಂಬ/ ಆತ್ಮತೇಜದಿ ಕೊಟ್ಟು ಕೆಟ್ಟೆ ಬಸವಣ್ಣಾ'/ ಎನ್ನುತ್ತಾನೆ. 'ಜಗದ ಜತ್ತಿಗೆ ಹಾದರಗಿತ್ತಿಯನು ತಂದು/ ಹೊಗಿಸುವದೆ ಕಾಯಕದ ಶರಣನಾಮಠದೊಳಗೆ?' ಎಂದು ಚನ್ನಬಸವಣ್ಣನೂ ಬಸವಣ್ಣನಿಗೆ ಹಂಗಿಸುತ್ತಾನೆ. ಇವರಿಬ್ಬರ ಮಾತೂ ನಿಜ. ಭೂಪಾಲ ಸತ್ತು ಶರಣನಂಕುರಿಸಿದ್ದನ್ನು ಬಸವಣ್ಣ ಗುರುತಿಸಲಿಲ್ಲ. ತಪ್ಪು ತಿಳಿದೊಡನೆ ಬಸವಣ್ಣ ಕ್ಷಮೆಯನ್ನು ಕೇಳಿಕೊಳ್ಳುತ್ತಾನೆ. ಅಂದರೆ ತಪ್ಪಾದದ್ದು ನಿಜವಾಗಿದೆ. ಆದರೆ ಇಲ್ಲಿಯ ಸಮಸ್ಯೆ ಎಂದರೆ ಬಸವಣ್ಣನ ತಪ್ಪಿಗೂ ಮಾರಯ್ಯನ ಕಾಯಕದ ಗುರಿತಪ್ಪದ ಧೃಡತೆಗೂ ಏನು ಸಂಬಂಧ? ಶರಣನೀತಿಯೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡರೆ ಬಸವಣ್ಣನಿಗಿಂತ ಮಾರಯ್ಯ ಶ್ರೇಷ್ಠನಾದ ಶರಣನಾಗುತ್ತಾನೆ. ಅಥವಾ ಈ ತಾರತಮ್ಯದ ಮೌಲ್ಯಮಾಪನ ಸರಿಯಲ್ಲವೆಂದರೆ ಕಾವ್ಯಕೂಡ ಅದೇ ಮೌಲ್ಯಮಾಪನದ ಭಾಷೆಯನ್ನು ಮಾತಾಡುತ್ತದೆ. ಹಲವಾರು ಸಾರೆ ಬಸವಣ್ಣ ಇಂಥ ತಪ್ಪುಗಳನ್ನು ಮಾಡಿದ್ದಾನೆ. ಅನುಭವಮಂಟಪಕ್ಕೆ ಪ್ರಭುದೇವರು ಬಂದಾಗ ಶಿವಪೂಜೆಯಲ್ಲಿ ತೊಡಗಿದ್ದ ಬಸವಣ್ಣ ಕೂಡಲೇ ಎದ್ದು ಬಂದು ಅವನನ್ನು ಎದುರುಗೊಳ್ಳಲಿಲ್ಲ. ಬಯಲಲ್ಲಿ ಹೂಳಿದ್ದ ನಿಧಿಯಂತಿದ್ದ ಮರುಳುಶಂಕರದೇವರ ಮಹತಿಯನ್ನು ಅರಿಯಲ್ಲಿಲ್ಲ. ಇಂಥ ತಪ್ಪುಗಳನ್ನು ಉಳಿದ ಶರಣರು ಯಾರೂ ಮಾಡಿದಂತೆ ಕಂಡು ಬರುವುದಿಲ್ಲ. ಈ ಶರಣರೆಲ್ಲ ಬಿಟ್ಟ ಬಾಣದಂತೆ ಗುರಿಯ ಕಡೆಗೇ ಸಾಗುವವರು. ಅವರ ಭಕ್ತಿಯ ಏಕಾಗ್ರತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಕಾಯಕದ ನಿಷ್ಟಲತೆ ಅನನ್ಯವೆಂದು ಹೇಳಬೇಕಾಗುತ್ತದೆ. ಇಷ್ಟಾಗಿಯೂ ಬಸವಣ್ಣನ ಸರ್ವಗ್ರಾಹಿತ್ವ ಯಾವ ಶರಣನಿಗೂ ಇಲ್ಲ. ಬಸವಣ್ಣನ ತಪ್ಪಿನ ಅರಿವಿನಲ್ಲಿರುವ ಸಮತೂಕ ಮತ್ತು ಸ್ಥಿರ ಪ್ರಜ್ಞೆ, ಬೇರೆ ಯಾರಲ್ಲಿಯೂ ಕಾಣುವದಿಲ್ಲ. ತನ್ನನ್ನು ತಾನು ಒರೆದು ನೋಡಿಕೊಳ್ಳುವಾಗ ಬಸವಣ್ಣ ವಜ್ರಕ್ಕಿಂತ ನಿಷ್ಠುರ, ಆದರೆ ಇನ್ನೊಬ್ಬರನ್ನು ನೋಡಿಕೊಳ್ಳುವಾಗ ಹೂವಿಗಿಂತ ಕೋಮಲ. ಬಸವಣ್ಣನ ವಚನಗಳಲ್ಲಿಯ ಪ್ರತಿಮೆಗಳನ್ನು ಒಮ್ಮೆ ಪರೀಕ್ಷಿಸಿದರೂ ಈ ಮಾತಿನ ಸತ್ಯ ಗೊತ್ತಾಗುತ್ತದೆ. 'ನೂಲಿನೊಳಗೊಂದೆಳೆಯ, ಹೊನ್ನಿನೊಳಗೊಂದೊರೆಯ', 'ತನುವನಲ್ಲಾಡಿಸಿ ನೋಡುವೆ ನೀನು, ಮನವನ್ನಲ್ಲಾಡಿಸಿ ನೊಡುವೆ ನೀನು' ಇತ್ಯಾದಿ ವಚನಗಳನ್ನು ಪರಿಶೀಲಿಸಿ ನೋಡಬೇಕು. ಈ ಮೊದಲೇ ಹೇಳಿದಂತೆ ಶರಣರ ಭಕ್ತಿ ಬಿಟ್ಟ ಬಾಣದಂತೆ ನೇರ ಮತ್ತು ತನ್ಮಯವಾಗಿದ್ದರೆ, ಭಕ್ತಿಯೆಂದರೆ ಗರಗಸದಂತೆ ಹೋಗುತ್ತ ಬರುತ್ತ ಕೊಯ್ಯುತ್ತದೆಂಬುದನ್ನು ಬಸವಣ್ಣ ಮಾತ್ರ ಬಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ ಮಹಾಕಾವ್ಯ- ವಸ್ತುವಿನ್ಯಾಸ

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯಗಳ ಮಹಾಪೂರವೇ ಬಂದಂತಿದೆ. ಮಹಾಕಾವ್ಯ ಸತ್ವದ ಕಿರುಕೃತಿಗಳು ಮಾಸ್ತಿಯವರ ಶ್ರೀರಾಮಪರೀಕ್ಷಣಂ, ಗೋವಿಂದ ಪೈಗಳ ಗೊಲ್ಗೊಥಾ- ವೈಶಾಖಿ ಮುಂತಾದವುಗಳು. ಅವುಗಳನ್ನು ಬೆಂಬಳಿಯಾಗಿಟ್ಟುಕೊಂಡು ಕುವೆಂಪು ಶ್ರೀ ರಾಮಾಯಣ ದರ್ಶನಂ, ವಿ. ಕೃ. ಗೋಕಾಕರ 'ಭಾರತ ಸಿಂಧು ರಶ್ಮಿ' ಪ್ರೊ. ಸಂ. ಶಿ. ಭೂಸನೂರಮಠ ಅವರ 'ಭವ್ಯಮಾನವ'- ಆಧುನಿಕ ಕನ್ನಡ ಭಾಷೆ- ಸಾಹಿತ್ಯ ಸತ್ವಗಳ ಸಮಗ್ರ ಸಮನ್ವಯ ಅಭಿವ್ಯಕ್ತಿ ಶ್ರೀ ರಾಮಾಯಣ ದರ್ಶನಂ. ಇದಕ್ಕೆ ಪ್ರೇರಣೆ- ಪೋಷಣೆ ನೀಡಿದ ಕನ್ನಡ ಸಾಹಿತ್ಯ ಪರಂಪರೆ, ಸಂಸ್ಕೃತ- ಇಂಗ್ಲೀಷ್ ಸಾಹಿತ್ಯಿಕ ವಿಶೇಷ. ಭಾರತೀಯ ಜೀವನ ದೃಷ್ಟಿ, ಪರಿಷ್ಕೃತ ಪರಂಪರೆಯ ಮೌಲ್ಯಗಳು, ಸಮಕಾಲೀನ ವೈಜ್ಞಾನಿಕ ಪ್ರಭಾವಗಳ ಸಮನ್ವಯ ಅಭಿವ್ಯಕ್ತಿ, ಶ್ರೀ ರಾಮಾಯಣ ದರ್ಶನಂ. ಮಾನವೀಯ ಆಸೆ- ಆದರ್ಶ- ವೈರ- ಸ್ನೇಹ, ಪ್ರೇಮ- ಕಾಮ, ಯುದ್ಧ-ಶಾಂತಿ, ಸಮಗ್ರ ಮಾನವತೆಯ ಸತ್ಯಸ್ಯ -ಸತ್ಯಕಥನಂ! ಸಮಗ್ರ ಕಾವ್ಯ- ಸೌಂದರ್ಯಾಂಶಗಳನ್ನೊಳಗೊಂಡ ಮಹಾಕಾವ್ಯ.

ಆದರೆ, 'ಭಾರತ ಸಿಂಧು ರಶ್ಮಿ' ಕನ್ನಡ ಸಾಹಿತ್ಯ ಪರಂಪರೆಗೆ ಬಹುಶಃ ಪರಕೀಯ- ವಾದ ವೇದಕಾಲೀನ ಸಂಸ್ಕೃತಿ- ಜೀವನ ಮೌಲ್ಯಗಳನ್ನು ಬಿಂಬಿಸುವ ಕೃತಿ. ಸಮಕಾಲೀನ ಪ್ರೇರಣೆ- ಪ್ರಭಾವ- ಚಿಂತನೆ- ಸಂಶೋಧನೆಗಳಿಗೆ ವಿಮುಖವಾದ, ಕನ್ನಡ ಕಾವ್ಯಮರಂಪರೆ (ಜೈನ, ವೀರಶೈವ, ವೈಷ್ಣವ ಸಾಹಿತ್ಯ) ಯನ್ನು ಒಳಗೊಳ್ಳದ, ಪ್ರಯತ್ನಪೂರ್ವಕವಾದ ವಿಚಿತ್ರ ಸೃಷ್ಟಿ ಆದಾಗಿದೆ.

ಆದರೆ, ಕನ್ನಡ ಭಾಷಾ- ಸಾಹಿತ್ಯ ಪರಂಪರೆಯ ವಿಶೇಷ ಕೊಡುಗೆಯಾದ ವೀರಶೈವ ಸಾಹಿತ್ಯ- ಶಿವಶರಣರ ಜೀವನಸಾಧನೆ- ಸಿದ್ಧಿ, ನೂತನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನಮೌಲ್ಯ, ಭಾಷಿಕ ಸಾಧನೆ,- ಸಾಧ್ಯತೆಗಳನ್ನು ಮೇಲಿನ ಎರಡು ಮಹಾಕೃತಿಗಳು ಹೆಚ್ಚಾಗಿ ಬಳಸಿಕೊಂಡಿಲ್ಲ, ಬರಿದುಗೈದಿಲ್ಲ. ಶಿವಶರಣರ ವಿನೂತನ ವಿಚಾರಧಾರೆ, ಜೀವನದೃಷ್ಟಿ, ತಾತ್ವಿಕ ಚಿಂತನೆಗಳನ್ನು ಉಂಡುಂಡೆಯಾಗಿ ಎತ್ತಿಕೊಂಡು, ಸಮಕಾಲೀನತೆಗೆ ತಿಕ್ಕಿನೋಡಿ, ಸಾರ್ವಕಾಲೀನತೆ ಅಥವಾ ವಿಶ್ವಮಾನವೀಯತೆಯತ್ತ ಕೈಚಾಚಿ ನಿಲ್ಲುವ ಸಾಹಸ ಮಾಡಿದೆ ಈ 'ಭವ್ಯಮಾನವ'. ಲೇಖಕರೆನ್ನುವಂತೆ 'ಸಕಲ ಕಾಲದೇಶ ಮಾನವಕುಲದ ಲೋಕ ಚರಿತವನ್ನು, ಲೌಕಿಕ ವೃತ್ತಾಂತವನ್ನು ವಿಸ್ತಾರವಾಗಿ ವಿವೇಚಿಸಿ ನೋಡಿರುವ ಮಹಾಕಾವ್ಯ, ಇದು. ಈ ಕೃತಿ 'ಗಂಭೀರ ಆಲೋಚನೆ-ವಿಚಾರಗಳಿಂದ ಪರಿಪ್ಲುತ, ರಸಭಾವ ಸಂಪೃತ, ಸರಳ ಭಾಷಾ ಶೈಲಿ ಸಮನೋಜ್ಞತೆಗಳಿಂದ ಕೂಡಿದ 'ಸಮ್ಯಕ್ ದೃಷ್ಟಿಯ ಮಹಾದರ್ಶನ', 'ಆಧ್ಯಾತ್ಮಾನುಭವ'ಗಳ, ಶ್ರೇಷ್ಠ ಕಾವ್ಯ- ಕಾರಣ, ಇದು ವಿಶ್ವಮಾನವದೇವ ಕಾವ್ಯ- ವಿಶ್ವಕಾವ್ಯ.

'ವಿಶ್ವಲೋಕದನಂತ ಸತ್ಯಸೌಂದರ್ಯದೊಳು
ಕರಗಿ ಮೃದುವಾಗಿ ಬಾಳುವರೆ ವಿಸ್ತಾರ
ವಿಶ್ವದೊಳಗಿರ್ದು ದಿವ್ಯಕೆ ನಿಲುಕಿ
ಬದುಕುವರೆ ಆನಂದ ನಿತ್ಯ ಪರಿಪೂರ್ಣ
ಕರಲೇಸು, ಕರಸೊಗಸು, ಬದುಕು ಬಾಳುವೆಯೆಲ್ಲ'

(ಪು- 63)

ಈ ದಿವ್ಯ ಆದರ್ಶ ಸಾಧನೆಯ ಸೂತ್ರಧಾರಿಗಳು, ಬಸವ, ಪ್ರಭು, ಮಹಾದೇವಿ ಮುಖ್ಯರಾದ ಶಿವಶರಣರು ಅವರು.

ಮರ್ತ್ಯ ಮಾನವರ ಬಲ್ಗತ್ತಲೆಯ ತೊಡೆದು
ಸತ್ಯನಿತ್ಯಾನಂದ ಪರಿಪೂರ್ಣ ಪ್ರಭೆಯೊಳಗೆ
ನಿರಿಸುವ ಸ್ವಯಂ ಜ್ಯೋತಿಗಳು..........'

(ಪುಟ- 20)

ಈ 'ಶರಣರನುಭಾವ ಪಥವೇ ಮಹಾಮಾರ್ಗವದೆ ನವ್ಯ ಭವ್ಯ' (ಪು- 7) ಇದರ ಚಿತ್ರಣವೇ, ಈ 'ಭವ್ಯಮಾನವ' ಕಾವ್ಯದ ಗುರಿ. ಅವನ್ನು ಸಾಧಿಸುವ ಕೇಂದ್ರ ಶಕ್ತಿಯಾದ ಅಕ್ಕಮಹಾದೇವಿಯನ್ನು 'ಪೂರ್ವ ಪೀಠಿಕೆ'ಯಲ್ಲಿ ಭಕ್ತಿಯಿಂದ ಸ್ಮರಿಸಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಮಹಾಭವ್ಯವೇ
ಎಲೆ ವಿಶ್ವಲೋಕದ ಮಹಾಭವಿಷ್ಯಂತಿಯೆ,
ಎದ್ದೇಳು, ಎದ್ದೇಳು, ಎಲೆ ಮಹಾದೇವಿ'-

ಎಂದು ಕಾವ್ಯ ಶರೀರಕ್ಕೆ 'ಆವಾಹನ, ಆಕೆಯ ದಿವ್ಯಾನುಭಾವದ
ಮಹಾಚರಿತವಾದ ಈ ಕಾವ್ಯದಿಂದ
ಕಲ್ಯಾಣ ವಿಶ್ವತೋ ದನಿಯೇಳಲಿ

ವಿಶ್ವತೋ ಕಲ್ಯಾಣ ಸುಖ ಹರವಲಿ' ಎಂದು ಬೇಡಿರುವನು 'ಭವ್ಯಮಾನವ'ದ ಹೆಸರು ಹೇಳದ 'ಕವಿ ಮಹಾಶಯ'

ಹೀಗೆ, 'ಭವ್ಯಮಾನವ' ಕಾವ್ಯದ ಮಹಾನಾಯಕ ವಿಶ್ವಮಾನವ, '......... ಲಕ್ಷಾಂತರ ವರುಷಗಳ ಹಿಂದೆ ಮಣ್ಣಿನಲ್ಲಿ ಒಡೆದು ಮೂಡಿ ಇಂದಿನವರೆಗೆ ಸತ್ತು ಹುಟ್ಟಿ ಬೆಳೆಯುತ್ತಾ ಬಂದಿರುವ, ಮತ್ತು ಮುಂದೆ ಬೆಳಯಲಿರುವ ಮಾನವನೆ ಈ ಮಾನವ ಮಹಾಕಾವ್ಯದ ಸ್ವತಂತ್ರ ನಾಯಕ. ಈತನ ರಂಗಸ್ಥಲ ವಿಶ್ವವಿಶಾಲ ವಿಶ್ವಪ್ರಪಂಚ' (ಪು- 18)

ಇಷ್ಟು ವಿಸ್ತಾರವಾದ ವಸ್ತುವನ್ನೊಳಗೊಂಡ ಈ ಭವ್ಯಮಾನವ ಕಾವ್ಯದ ಹರಹು, ಆಳ, ಎತ್ತರ ಮೇಲು ನೋಟಕ್ಕೆ ದಂಗು ಬಡಿಸುತ್ತದೆ; ಡೆಮ್ಮಿ; 833 ಪುಟಗಳ 27,500 ಸಾಲುಗಳ ಈ ಕಾವ್ಯದ ವಿಸ್ತಾರವೇ ಸಾಮಾನ್ಯ ಓದುಗರಿಗೆ 'ಅಬ್ಬಾ' ಎನಿಸುವಂತಿದೆ. (ಶ್ರೀ ಕುವೆಂಪು ಅವರ ರಾಮಾಯಣ ದರ್ಶನಂ ಕ್ರೌನ್- 900 ಪುಟಗಳಲ್ಲಿ 22,283 ಸಾಲುಗಳ ಹರವನ್ನು ಪಡೆದಿದೆ) ಆದರೆ ಒಳಹೊಕ್ಕು ನೋಡುವ ಅಭಿಮನ್ಯು ಸಾಹಸಿಗಳಿಗೆ, ವಿಶ್ವೇಮಾನವ ಮಹಾಭಾರತವೇ ಎದುರಾಗುತ್ತದೆ. ಅಲ್ಲಿ ಹನ್ನೆರಡನೆಯ ಶತಮಾನದ ಶಿವಶರಣ ಸಮುದಾಯವೆಲ್ಲ ಕಾಣಸಿಗುತ್ತದೆ. ಅಷ್ಟೇ ಅಲ್ಲ, ಜಗತ್ತು ಇತಿಹಾಸದಲ್ಲಿ ಗುರುತಿಸಿರುವ ಮಾನವನ ಸಾಧನೆಗಳನ್ನೆಲ್ಲ, ಮಾನವ ಮಹಾಪುರುಷರ ಸಾಹಸಗಳನ್ನೆಲ್ಲ, ಉಪನಿಷತ್, ಗೀತೆ, ಬೈಬಲ್, ಖುರಾನ್, ಅವೆಸ್ತಾಗಳನ್ನೆಲ್ಲ, ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳನ್ನೆಲ್ಲ, ತಿಕ್ಕಿ ನೋಡಿ, ಹೊಕ್ಕು ನೋಡಿ- ಒಟ್ಟಿನಲ್ಲಿ ಈ ವಿಶ್ವೇಮಾನವನ ಸಾಧನೆ- ಸಾಹಸ- ಸೋಲುಗಳನ್ನು ಗುರುತಿಸಿ, ಮಾನ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೋದ್ಧರಣಕ್ಕೆ 'ಶರಣರನುಭಾವ ಪಥವೇ ಮಹಾಮಾರ್ಗವದೇ ನವ್ಯ ಭವ್ಯ' ಎಂಬ ತೀರ್ಮಾನಕ್ಕೆ ಬಂದು ನಿಲ್ಲುವಂತೆ ತೋರುತ್ತದೆ. ಈ ಕಾವ್ಯದ ಕೊನೆಯ ಸಾಲುಗಳು ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತವೆ. ಸರ್ವಸಿದ್ಧಿಯನ್ನು ಪಡೆದ ಮಹಾದೇವಿ- ತನ್ನ ಮರ್ತ್ಯದ ಮಣಹವಿನ್ನೂ ಮುಗಿದಿಲ್ಲ, ನನಗೇಕೆ ಮುಕ್ತಿ-ಬಿಡುಗಡೆ- ಲಿಂಗೈಕ್ಯಸ್ಥಿತಿ-ಎನ್ನುತ್ತ ಇಹದಲ್ಲಿಯೇ ಇರುವೆನ್ನೆನ್ನುತ್ತಾಳೆ.

> 'ಮರ್ತ್ಯಲೋಕ ಮಹಾಮನೆಯಾಗದನ್ನಕ್ಕ ಜಿಡೆನಯ್ಯಾ
> ಶ್ರೀ ಚೆನ್ನನೊಳಗಾನು ಪುಷ್ಪ ಪರಿಮಳವಾಗಿ
> ಮರ್ತ್ಯಲೋಕದ ಮನುಜ ಶಿವಗಣಂಗಳಿಗೆ
> ನೀಡಿಹೆನು ಜೋನವನು ಕಲ್ಯಾಣಕಲ್ಪ.
> ವಿಶ್ವಲೋಕವೆ ಎನಗೆ ಗುರುಲಿಂಗಜಂಗಮ
> ವಿಶ್ವವಿಸ್ತಾರವೇ ನೀವಯ್ಯ ತಂದೆ,
> ಇದೆ ವಿಶ್ವಕಲ್ಯಾಣ ಭವ್ಯ ಶಿವಪೂಜೆ
> ಇದೆ ಮಹಾಮಂಗಲಾರತಿ ಬ್ರಹ್ಮಭವ್ಯಕ್ಕೆ!

(ಪುಟ- 832)

ಹೀಗೆ ವ್ಯಕ್ತಿ, ಸಮಾಜ, ವಿಶ್ವವೇ ಭವ್ಯತೆಯನ್ನು ಸಾಧಿಸಬಹುದೆಂಬ ಸುಂದರ ಸ್ವಪ್ನ, 'ಭವ್ಯಮಾನವ' ಕಾವ್ಯದ ನೆಲೆ. ಇದನ್ನೆಲ್ಲ- ಮಾನವ ಜನಾಂಗದ ಹಿಂದಿನವರು ಸಾಧಿಸಿರಲ್ಲಿಲ್ಲ, ಶಿವಶರಣರು ಸಾಧಿಸಿದರು, ಮುಂದಿನವರೂ, ಇಂದಿನವರೂ ಸಾಧಿಸಲು ಸಾಧ್ಯವಿದೆಯೆಂಬ ವಿಚಾರ- ಹೇಗೆ ಸಾಧಿಸಿದರೆಂಬ ವಿವರ- ಹಂತಗಳಿಗಿಂತ ಹೆಚ್ಚಾಗಿ, ಓತಪ್ರೋತವಾಗಿ ಮೂಡಿ ಬಂದಿದೆ ಇಲ್ಲಿ. 'ಎಚ್ಚತ್ತ ಮಾನವ ಜೀವಂತ ಬದುಕಲಿ ಆಕಾಶದೆತ್ತರ, ಜೀವಂತ ಬೆಳಗಲಿ ನಕ್ಷತ್ರಕೋಟಿ............ ಎಲ್ಲಿದೆ ಆತ್ಮ ಕಲ್ಯಾಣ, ಲೋಕಕಲ್ಯಾಣ ತಾನು ಕಲ್ಯಾಣ ಒಂದು ಪೂರ್ಣ, ಅಖಂಡ ಪರಿಪೂರ್ಣ'. ಇದೇ ಭವ್ಯಮಾನವ ತೆರೆದು ತೋರುವ ಜೀವನದರ್ಶನ ಇತರರು ಒಪ್ಪಲಿ- ಬಿಡಲಿ, ಕವಿ ಮಾತ್ರ ಜಪ್ಪಯ್ಯಾ ಅಂದರೂ ಇದನ್ನು ಬಿಡುವುದಿಲ್ಲ. ಅವರಿಗದೇ 'ದಿವ್ಯ-ಭವ್ಯ'

2

'ಭವ್ಯಮಾನವ' ಕಾವ್ಯದ ವಸ್ತು ವೈಶಾಲ್ಯವನ್ನು, ಅಷ್ಟೇ ವಿಶಾಲವಾಗಿ ವಿವೇಚಿಸದಿದ್ದರೆ ಗತಿಯಿಲ್ಲ, ಸಾರ್ಥಕತೆಯಿಲ್ಲ. ಕವಿ ಅನ್ನುವಂತೆ, 'ಮಲಗಿದ ಮಾನವನ ವಿಷಯ ಸಂಸಾರ, ಹಗಲುಗತ್ತಲೆಯ ದ್ವೈತ- ಪ್ರಪಂಚ ಮತ್ತೆ ಎಚ್ಚತ್ತ ಮಾನವನ ಲಿಂಗ ಗಭೀರದ ಬ್ರಹ್ಮ ವಿಸ್ತಾರಗಳೇ ಕಾವ್ಯದ ಕಥಾ ವಸ್ತು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವೈತಾದ್ವೈತಗಳ ಸೀಮೆಯನ್ನು ದಾಟಿದ ನಿರಾಲಂಬ ನಿ- ಸ್ಥಲವೆ ಈ 'ಕಾವ್ಯದ ಪರವಸ್ತು' ಈ ಮಾತುಗಳು ಬಿಂಬಿಸುವ ಭಾವಾರ್ಥದ ಪರಿಕಲ್ಪನೆ ನೇರಗಮ್ಯವಲ್ಲ, ಮೊದಲು ನಾವು ಇವುಗಳ 'ಅರ್ಥ'ವನ್ನು ನಂಬಬೇಕು, ನಂತರವೇ ಆ ವಿಚಾರದ ವಿವೇಚನೆ. ಕಾವ್ಯವಸ್ತು ಶಿವಶರಣರು ಸಾಧಿಸಿದ್ದರೆಂಬ ದಿವ್ಯದ ಬೆಳಕನ್ನು- ನಿರೂಪಿಸಿದೆ. ಈ ವಿವರ ಆರು ಕಾಂಡಗಳ ಹರವು ಪಡೆದಿದೆ. ಪೂರ್ವಪೀಠಿಕೆಯ ನಂತರ ಬರುವುದು ಕಲ್ಯಾಣಕಾಂಡ- ಅದು ಮಹಾದೇವಿಯ ಜೀವನೇತಿಹಾಸವನ್ನು ಅನುಭಾವ ಮಂಟಪದಲ್ಲಿ, ಶರಣರ ಮುಂದೆ ತಾನೇ ನಿರೂಪಿಸುವ ತಂತ್ರದಲ್ಲಿ ಮೂಡಿದೆ. ಅತ್ಯಂತ ರಸವತ್ತಾಗಿ, ರಮ್ಯೋಜ್ವವಾಗಿ ಮೂಡಿ ನಿಂತಿದೆ. ಎರಡನೆಯದು ಶ್ರೀಶೈಲಕಾಂಡ. ಇಲ್ಲಿನವರೆಗೆ ನೆನಪಾಗಿ, ಭಾವನಯಾಗಿ, ಕನಸಾಗಿ ಕಾಣಿಸಿಕೊಂಡ ಗುರುಚೆನ್ನಮಲ್ಲಯ್ಯ, ಆತನ ಶಿಷ್ಯ ಗಿರಿಮಲ್ಲ- ಇವರನ್ನು ಶ್ರೀಶೈಲದ ನಿರ್ಜನ ಪರ್ವತಾರಣ್ಯದಲ್ಲಿ ಅಕ್ಕಮಹಾದೇವಿ ಸಂಧಿಸುವ- ಸಂವಾದಿಸುವ ಭಾವ-ಪೂರ್ಣ ಪ್ರಸಂಗ ಇದು. ಅಲ್ಲಿ ಈ ವಿಶ್ವದ ಸೃಷ್ಟಿ- ಸ್ಥಿತಿ, ಮರಣ-ಗಿರಣ, ಕಾಲ-ಗೀಲ, ಕತ್ತಲೆ- ಬೆಳಕು, ಒಟ್ಟಿನಲ್ಲಿ, ಈ ವಿಶ್ವಮಾನವ ಪ್ರಪಂಚದ ಕತ್ತಲೆ- ದುಃಖ ಮರೆವುಗಳನ್ನು ಭೇದಿಸಿ, ದಿವ್ಯ ಬೆಳಕಿನ ಲೋಕವೊಂದರ ಅವತರಣವಾಗಿದೆ, ಆಗಲಿದೆ ಎಂಬ ಪ್ರಕೃತಿಮಾತೆಯ ಒಡಲಾಳದನಿಗೆ- ನಿದರ್ಶನವಾಗಿ ಕಲ್ಯಾಣದ ಶರಣಗಣ ಮಹಾದ್ಭುತ ಸಾಧನೆಗಳ ಭವ್ಯ ನಿರೂಪಣೆ- ಅಕ್ಕನು ಕಂಡುಕೊಂಡ ಲೌಕಿಕದ ಕುಲಕೆಲ್ಲ ಕಲ್ಯಾಣ- ಸಾಧನೆಯ ಚಿತ್ರ, ಅದೆಷ್ಟು ಅದ್ಭುತವಾಗಿದೆಯೆಂದರೆ, ಅದ್ಭುತವೆಂಬ ಮಾತೇ, ತನ್ನ ಅಸಹಾಯಕತೆಗೆ ನಾಚುತ್ತದೆ.

'ಬೆಳಗು ಕತ್ತಲೆಯಾಗಿ ಬೆಂಕಿಯೇ ಜಲವಾಗಿ
ಹರಿದಿಹುದು ಹರಿದಿಹುದು ಸಂಸಾರಸಾಗರ
ನಡೆದಿಹುದು ನಡದಿಹುದು ಸಂಸಾರ ನಾಟಕ'

ಈ ಶ್ರೀ ಶೈಲಕಾಂಡ ಕಾವ್ಯಸ್ಥರವನು ದಾಟಿ ಮೀಟಿ ರಮ್ಯೋಜ್ವಲವಾದ ತತ್ವ -ನಿರೂಪಣೆಯಾಗಿ ಮೂಡಿದೆ. ಅದನ್ನು ಸಂಗ್ರಹಿಸಿ, ನಿರೂಪಿಸುವ ಸಾಹಸ, ಸಾಧ್ಯವಾಗದ್ದು. ವಿಶ್ವಪ್ರಪಂಚದ ಸೃಷ್ಟಿಯ ಈ ನಿರೂಪಣೆಯ 'ಧಾಟಿ'ಯನ್ನು ಭೌತಶಾಸ್ತ್ರಜ್ಞರು, ಸೃಷ್ಟಿವಿಕಾಸ- ಜೀವನವಿಕಾಸವಾದಿಗಳು ಒಪ್ಪಲಾರರು. ಆದರೆ, ಅನುಭಾವಿಗಳು- ಶಿವಶರಣರು ಈ ಸತ್ಯದ ಬೆಳಕನ್ನು ಕಂಡ ಧೀರರೆಂಬುದು ಸತ್ಯ. ಆಧುನಿಕ ವಿಜ್ಞಾನವೂ ಸೃಷ್ಟಿಯ ಅಪರಿಮಿತ ಕತ್ತಲೆಯನ್ನು, ಪ್ರಯೋಗ ಕಿರಣಗಳಿಂದ ಬೆಳಗಿಸಲು ಹೊರಟ ಒಂದು ಪ್ರಯತ್ನ ಮಾತ್ರ ಅಲ್ಲವೆ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' ಕಾವ್ಯದ ಮೂರನೆಯದು 'ಕತ್ತಲೆಯ ಕಾಂಡ'; 200 ಪುಟಗಳ ಸವಿಸ್ತಾರ ಕಾಂಡ. ಶತಶತಮಾನಗಳಿಂದ ಬ್ರಹ್ಮದ ಬೆಳಗಿನ ಪರಮಶಾಂತಿಯ ಪುಣ್ಯದ ನೆಲೆಯಾದ ಈ ವಿಶ್ವಪ್ರಪಂಚವನ್ನು, ಮಾನವ ತನ್ನ ಅಹಂಕಾರ, ಅಜ್ಞಾನ, ಸ್ವಾರ್ಥ, ಕಾಮ, ಮರೆವುಗಳ ತಾಕಲಾಟ- ಪೀಕಲಾಟಗಳಲ್ಲಿ ಅದೆಷ್ಟು ಕತ್ತಲೆಕವಿಯಿಸಿದ್ದಾನೆ ಎಂಬ ಎದೆ ನಡೆಗಿಸುವ ಕರಾಳ ಭವ್ಯ ಚಿತ್ರಣ ಇಲ್ಲಿದೆ. ಗಿರಿಮಲ್ಲ, ಮಹಾದೇವಿಯರಿಗೆ ಮಾರ್ಗದರ್ಶಕನಾಗಿ ಚೆನ್ನಮಲ್ಲ ತೋರುವ, ವರ್ಣಿಸುವ ಈ ರೌದ್ರರಾತ್ರಿಯ ಚಿತ್ರ ಡಾಂಟೆ ಡಿವೈನ್ ಕಾಮಿಡಿಯ 'ಅಧೋಲೋಕ', ಮಿಲ್ಟನ್ನನ ಪ್ಯಾರಾಡೈಸ ಲಾಸ್ಟನ ನರಕ ಲೋಕದ ಭೀಕರತೆಯನ್ನು ಮೀರಿಸಬಲ್ಲಂಥ ಅಷ್ಟೇ ಅಲ್ಲ, ಸಹನೀಯ-ಮಾನವೀಯ ವರ್ಣನೆ ಇಲ್ಲಿದೆ. ಅದು 'ಬೆಳಗ ನುಂಗಿದ ಕಾಳುಗತ್ತಲೆಯ ಮಹಾಚಿತ್ರ'! ಜಗತ್ತಿನ ಮಾನವೀಯ ಜೀವನಚಿತ್ರಮಾಲೆಗಳನ್ನು ಬಳಸಿ, ಮಾನವತ್ವದ ಮಹಾನಷ್ಟ ಒದಗಿದ ಕರಾಳತೆಯನ್ನು ಕಾವ್ಯಮಯವಾಗಿ ವರ್ಣಿಸಲಾಗಿದೆ. ನಮ್ಮ ಪುರಾಣ ಕಾವ್ಯಗಳ ನರಕದ ವರ್ಣನೆಗಿಂತಲೂ ಇಲ್ಲಿನ ಕರಾಳಚಿತ್ರ ಪರಿಣಾಮಕಾರಿಯಾಗಿದೆ. ವೀರಪ್ಪ- ವೀರಮ್ಮನ ಸಂಸಾರ, ಗಂಗಮ್ಮ- ಚೆನ್ನರಾಯ- ನಂದಿನಿಯರ ಪ್ರೇಮ- ಕಾಮವಿಲಾಸ, 'ಮಣ್ಣೂರು' 'ಪಂಚಭೂತ ಗ್ರಾಮಗಳ ಘರ್ಷಣೆ, ಮಾರಪ್ಪ, ಮುದ್ದಪ್ಪ, ದರೋಡೆಕಾರ ಬೇಡರುಗಳ ವ್ಯವಹಾರ -ಪರಿವರ್ತನೆಗಳು ಈ ಕತ್ತಲೆಯ ಕಾಂಡದಲ್ಲಿ ಚಲ್ಲುವರಿದು ಮೂಡಿವೆ. ಇವೆಲ್ಲ ಮಾನವೀಯತೆಯ ಪ್ರತೀಮ, ಪ್ರತೀಕಗಳು.

'ಒಬ್ಬ ಮಾನವನೊಂದು ಗುಂಜಿಕಾಮನಕತೆಗೆ
ಪ್ರಾಣಕ್ಕೆ ಎರವಾಯ್ತು ಲಕ್ಷಪ್ರಾಣ
ಪ್ರಾಣಕ್ಕೆ ಎರವಾಯ್ತು ಪ್ರಾಣಬ್ರಹ್ಮ'

(313)

ಅಂತೆಯೇ, ವಿಶ್ವದ ವಿಶೇಷ ಕಿಡಿ ವೀಣೆಯ ಸಿಂಘಣ್ಣ. ಸೌಂದರ್ಯಪ್ರಿಯ ಕವಿ ಲಿಂಗಣ್ಣ. ಅವರಿಂದ, ಈ ಕತ್ತಲೆಯ ಲೋಕ ಬೆಳಕಿನ ಕಿರಣಗಳನ್ನು ಪಡೆದುವು. ಅವರು ಮಾನವ ಮಹಾಪುಣ್ಯರು. ಅವರಿಂದ 'ಹಿಗ್ಗಿತು ಮಾನವ್ಯ'- ಬೆಳಕಾಯ್ತು ಕರಾಳ ಲೋಕ! ಅದೇ ರೀತಿ, ಮಾನವ ಮಹಾಸಾಧನೆಗಳೆನ್ನಬಹುದಾದ ಮಹಾರಾಮಾಯಣ, ಮಹಾಭಾರತಗಳೂ ವಿಶ್ವಪ್ರಪಂಚಕ್ಕೆ ಮೆತ್ತಿದುವು ಕತ್ತಲನ್ನು ಈ ಮಹಾಕಾವ್ಯಗಳ ಮನೋಜ್ಞ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಮರ್ಶೆ- ಹಿಂದಿನವರಾರೂ ಬೀರದ ದೃಷ್ಟಿಯ ಪ್ರತೀಕ. ಆದರೆ, ಕೋಟಿ ಕಾಲದ ಜಗದ ಡೊಂಕ ತಿದ್ದುವವರಾರು' ಎಂಬ ಮಹಾದೇವಿಯ ಶಂಕೆಗೆ ಗುರುಚೆನ್ನಮಲ್ಲನ ಉತ್ತರ ''ಮಾನವಾಂತರ ಗುಹೆಯ ಅನಿಮಿಷಯ್ಯ'......... ಆತ.

ಸರ್ವಶೂನ್ಯ ಸಮಾಧಿಯೊಳು ನಿಂದು ನೋಡಿ
ಕತ್ತಲೆಯ ಪರಿಹಾರ, ಪೂರ್ಣ ಪರಿಹಾರಕ್ಕೆ
ಲೆಕ್ಕವನು ಹಾಕಿಹನು, ಜಗದಮ್ಮೈಯೊಳಗೆಲ್ಲ
ಲೆಕ್ಕ ನಡೆದಿದೆ ತಾಯ, ಹಗಲು ರಾತ್ರಿ
ಲೆಕ್ಕ ನಡೆದಿದೆ ತಾಯ ಶತಮಾನ, ಯುಗಮಾನ

(ಪುಟ- 431)

ಮುಂದಿನ ಉದಯ, ಉಜ್ವಲ, ಭವ್ಯಕಾಂಡಗಳಲ್ಲಿ ವಿಶ್ವಮಾನವೇತಿಹಾಸದ ಬೆಳಕಿನತ್ತ ನಡೆದ ಸಾಹಸ ಚಿತ್ರಣವಿದೆ. ಶಿವಶರಣರ ಅನುಭಾವ ವೈವಿಧ್ಯ, ವಿಶ್ವ ಪ್ರಪಂಚದೀ ಭವ್ಯ- ಭವಿಷ್ಯ, ಕತ್ತಲೆಯ ಬೆಳಗು ಮಾಡುವ ತಂತ್ರ, ಮಾನವಕುಲದ ಪ್ರಾತಃಕಾಲವಾಗಿ ಬರುವ ಭಕ್ತ- ಭಕ್ತಿ, ಶಿವಯೋಗ, ಜಗದಗಲ ಕಲ್ಯಾಣವಾಗಿ ಬೆಳಗಿದ ಭವ್ಯ ಸಾಧನೆಯ ನೂರಾರು ಚಿತ್ರ, ವ್ಯಕ್ತಿ ಘಟನೆಗಳ ಹಿನ್ನೆಲೆಯಲ್ಲಿ ಬೆಳೆದುನಿಂತು, ಮಾನವತೆ ಉಜ್ವಲಕಾಂಡದಲ್ಲಿ ನಿಗಿನಿಗಿ ಕೆಂಡವಾಗಿ ಬೆಳಗಿರುವುದನ್ನು ಕಂಡು, ಓದುಗ ದಿಂಙ್ಮೂಢನಾಗದೆ ವಿಧಿಯಿಲ್ಲ. ಶಿವಾದ್ವೈತ ತತ್ವ, ಶರಣರ ಭಕ್ತಿ- ಪೂಜೆ- ಅರ್ಪಣೆ- ಪ್ರಸಾದ- ಆನಂದ- ಶೂನ್ಯ ಸಿದ್ಧಿಗಳ ವರ್ಣನೆ- ವಿವರಗಳ ತಾತ್ವಿಕತೆಯನ್ನು ಒಪ್ಪದಿರುವವರಿದ್ದರೂ, ಕಾವ್ಯ ಚಿತ್ರಣದ ಮನೋಜ್ಞತೆಯನ್ನು ಮೆಚ್ಚದವರಾರು? ತತ್ವವಿವೇಚನೆ ತಲೆಭಾರವೆನಿಸಿದರೂ, ಸಮಾಧಾನಿಗೆ ರಸಪೂರ್ಣವಾಗಿಯೇ ತೋರುವುದು.

ಆರನೇಯದಾದ, ಭವ್ಯಕಾಂಡ ಭವ್ಯಮಾನವ ಕಾವ್ಯದ ಸುವರ್ಣಕಲಶ, ಹಿರಣ್ಮ- ಯೇನ ಪಾತ್ರೆಗಿಕ್ಕಿದ ಸುವರ್ಣದ ಮುಚ್ಚಳ, ಮಾನವತೆ ಭವ್ಯತೆಗೇರುವ ಸಾಧ್ಯತೆಗಳನ್ನು ಸಾಬೀತುಗೊಳಿಸುವ 'ಮುಚ್ಚಳಿಕೆ' ಬರಹ. A promise for the ushering Divine Life, not only that- LIFE-DIVINE' ನಮ್ಮ ಲಿಂಗ ವಿಜ್ಞಾನಿಗಳು ಮಾನವ ಕಲ್ಯಾಣ ಶಕ್ತಿಗಳ ಸಂಶೋಧನೆಯಲ್ಲಿ ತೊಡಗಿರುವರು. ಅವರ ಪಥ ಇದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಮಾನವನ ಒಳಗೆ ಮನೆಮಾಡಿಕೊಂಡಿರ್ದು
ಮಾನವನ ಕೊಂದು ತಿನುತಿರುವ ರಾಕ್ಷಸಕುಲವ
ಬ್ರಹ್ಮರಾಕ್ಷಸಧರ್ಮ ಗುಣಧರ್ಮ ಕರ್ಮಗಳ
ಕೆಡಿಸಿಕೊಂದಿಕ್ಕಿ, ರಾಕ್ಷಸರ ಗರ್ಭದೊಳು
ಮಲಗಿರುವ ಕಲ್ಯಾಣ ಶಕ್ತಿಗಳನ್ನೆಚ್ಚರಿಸುವ ಕಾರ್ಯ'.

ಅಲ್ಲಲ್ಲಿ ಎಲ್ಲೆಲ್ಲಿ ಈ ಕೆಲಸ ನಡೆದಿಹುದೆಂಬುದರ ಆಗಾವಾದನ್ನು ಚಿತ್ರಿಸಿದೆ. ಹಿಂದೆಂದು ಜಗವು ಕಾಣದ ಭವ್ಯನವ್ಯಗಳು ಅವು.

'ಒಂದು ಕಣ್ಣೊಳಗೊಂದು ಕಂಬನಿಯ ತೂಡದರೆ
ಆಯಿತ್ತು ಅದೆ ಪೂಜೆ, ನಿನ್ನವರ ಶಿವಪೂಜೆ
ವಿಶ್ವದೊಳು ಕಲ್ಯಾಣ ಕಾಲಿಡುತ ನಡೆದರೆ
ಅದೆ ಬ್ರಹ್ಮ ಶಿವಪೂಜೆಯದೆ ಪ್ರಾಣಪೂಜೆ,
ಅದೆ ಭಾವಲಿಂಗದ ಮಹಾಭವ್ಯಪೂಜೆ',

ಅಜ್ಞಾನ, ವಿಜ್ಞಾನ, ಆತ್ಮಜ್ಞಾನ, ಭೌತಜ್ಞಾನ, ಅಹಂಜ್ಞಾನ, ಸ್ವಾಹಂಜ್ಞಾನ-ಗಳ ಕತ್ತಲೆಯಲ್ಲಿ, ದೇಹೋಹಂ, ದಾಹೋಹಂ ಎಂದೇ ಒದ್ದಾಡುತ್ತಿರುವ ವಿಶ್ವಮಾನವ, ಮಾನವ್ಯತೆ, ಈ ಮಹಾಭವ್ಯ ಪೂಜೆಯತ್ತ ನಡೆದಾಗ ಮಾತ್ರ ಆತ ಭವ್ಯಮಾನವ. ಆ ಪ್ರಪಂಚವೇ ಭವ್ಯ. ವಿಶ್ವಮಾನ್ಯ ತತ್ವಗಳಾದ 'ಸರ್ವದಲ್ಲಿ ಶಿವ, ಸರ್ವವೂ ಶಿವಮಯ' 'ಗುರು, ಭಕ್ತಿ, ಪೂಜೆ, ಅರ್ಪಣ, ಕಾಯಕ, ಅನುಭಾವ ಸೂತ್ರ', ವಿಶ್ವವೆಲ್ಲ ಶಿವಪ್ರಕಾಶ, ಜೀವನ ವ್ಯವಹಾರವೆಲ್ಲ ಲೀಲೆ, ಪೂಜೆ, ಕೊನೆಗೆ ಎಲ್ಲ ಸತ್ಯಂ ಶಿವಂ ಸುಂದರಂ, ಆಗಲೇಬೇಕೆಂಬ ವಿಶ್ವಮಾನ್ಯ ಸಂದೇಶ ಬೀರುವ- 'ಭವ್ಯಮಾನವ' ಕಾವ್ಯ ಒಂದು ಸಾಹಸಮಯ ವಿಶ್ವಕಾವ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ- ಮಹಾಕಾವ್ಯದಲ್ಲಿ ವಿಶ್ವಪ್ರತಿಮೆಗಳು

-ಡಾ. ಬಸವರಾಜ ನಾಯ್ಕರ.

ಪ್ರತಿಮ ಎನ್ನುವುದು ಪ್ರಜ್ಞೆಯ ಮೂರ್ತರೂಪವೆಂದು ಆಧುನಿಕ ಜಗತ್ತಿನ ಮಹಾನ್ ತತ್ವಜ್ಞಾನಿಯಾದ ಸಾರ್ತ್ರ್ ಹೇಳಿದ್ದಾನೆ. ಪ್ರತಿಮೆಯೊಂದನ್ನು ಸೃಜಿಸಿದಾಗ ಅದರಲ್ಲಿ ಪಾತ್ರಗಳ ಪ್ರಜ್ಞೆ, ಮತ್ತದರ ಹಿಂದೆ ಲೇಖಕನ ಪ್ರಜ್ಞೆಯೆಲ್ಲ ವ್ಯಕ್ತವಾಗಿದ್ದು ಅವರ ದೃಷ್ಟಿಕೋನಗಳನ್ನು ನಿರ್ದಿಷ್ಟಗೊಳಿಸುತ್ತದೆ. ಪ್ರತಿಮೆಗಳನ್ನು ನಾವು ಮೂರು ವಿಭಾಗಗಳಲ್ಲಿ ವಿಭಜಿಸಬಹುದು; ಒಂದು, ಸಾಮಾನ್ಯ ಪ್ರತಿಮೆಗಳು; ಎರಡು, ಆದಿಪ್ರತಿಮೆಗಳು (archetypes); ಮೂರು, ವಿಶ್ವಪ್ರತಿಮೆಗಳು (Cosmic Imagaes). ಕೆಲವೊಮ್ಮೆ ಆದಿಪ್ರತಿಮೆಗಳು ವಿಶ್ವಪ್ರತಿಮೆಗಳೂ ಆಗಿರಬಹುದು. ಭೂಸನೂರಮಠ ಅವರ ಭವ್ಯಮಾನವನೆಂಬ ಆಧುನಿಕ ಮಹಾಕಾವ್ಯದಲ್ಲಿ ಈ ಮೂರು ತರಹದ ಅಸಂಖ್ಯಾಕ ಪ್ರತಿಮೆಗಳು ಚಿತ್ರಣಗೊಂಡಿವೆ. ಅವುಗಳಲ್ಲಿ ಒಂದಾದ ವಿಶ್ವಪ್ರತಿಮೆಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ.

ಜಗತ್ತಿನ ಸಾಹಿತ್ಯದಲ್ಲೆಲ್ಲ ಮಹಾಕವಿಗಳು (epic poets) ಮತ್ತು ಮಹಾನ್ ಕವಿಗಳು (great poets) ತಮ್ಮ ಕಾವ್ಯದರ್ಶನದ ಶಿಖರವನ್ನೇರಿದಾಗ ವಿಶ್ವಪ್ರತಿಮೆಗಳನ್ನು ಉಪಯೋಗಿಸಿದ್ದಾರೆ. ಅಂಥವರು ಅನೇಕ ಸಲ ಅನುಭಾವ ಕವಿಗಳಾಗಿ ಬಿಡುತ್ತಾರೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ಹೋಮರ್, ಮಿಲ್ಟನ್, ದಾಂತೆ, ಗಯಟೆ, ಬ್ಲೇಕ್, ಕೋಲೆರಿಜ್ ಮುಂತಾದ ಕವಿಗಳು ತಮ್ಮ ಕಾವ್ಯದಲ್ಲಿ ವಿಶ್ವಪ್ರತಿಮೆಗಳನ್ನು ಉಪಯೋಗಿಸಿದ್ದಾರೆ. ಅವರೆಲ್ಲ ಪ್ರಥಮದರ್ಜೆಯ ಕವಿಗಳಾಗಿದ್ದರಿಂದ ಅವರ ಕಾವ್ಯದರ್ಶನವು ಆಳವಾದದ್ದೂ, ವಿಸ್ತಾರವಾದದ್ದೂ ಆಗಿತ್ತು. ಅದರ ಪರಿಣಾಮವಾಗಿಯೆ ಅವರು ಉಪಯೋಗಿಸುವ ಪ್ರತಿಮೆಗಳು ಕೇವಲ ಸ್ಥಾನಿಕ ಜೀವನಕ್ಕೆ ಅಂಟಿಕೊಳ್ಳದೆ ಸಾರ್ವಕಾಲಿಕ ವ್ಯಾಪ್ತಿಯನ್ನು ಪಡೆದುಕೊಂಡಿವೆ. ಭೂಸನೂರಮಠ ಅವರ ಭವ್ಯಮಾನವ ಮಹಾಕಾವ್ಯದಲ್ಲಿಯೂ ಇಂಥ ಅನೇಕ ಪ್ರಮುಖ ವಿಶ್ವಪ್ರತಿಮೆಗಳನ್ನು ಕಾಣಬಹುದು. ಈ ಕಾವ್ಯದ ನಾಯಕಿಯಾದ ಮಹಾದೇವಿಯು ಮೇಲುನೋಟಕ್ಕೆ ಹೆಣ್ಣಾದರೂ, ಅಂತರಂಗದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಪಾಧಿಗಳನ್ನು ಮೀರಿದ ಜೀವಿಯಾಗಿದ್ದು ಬ್ರಹ್ಮದಲ್ಲಿ ಲೀನವಾಗುವಂಥ 'ಭವ್ಯಮಾನವ' ಳಾಗಿದ್ದಾಳೆ. ಅಂಥ ಮಹಾನ್ ವ್ಯಕ್ತಿಯನ್ನು ಕುರಿತ ಈ ಮಹಾಕಾವ್ಯದಲ್ಲಿ ಪಿಂಡಾಂಡ ಮತ್ತು ಬ್ರಹ್ಮಾಂಡಗಳನ್ನು ಕಾವ್ಯದರ್ಶನದ ಗಾಂಭೀರ್ಯವನ್ನೂ, ವ್ಯಾಪ್ತಿಯನ್ನೂ ತೋರಿಸುತ್ತವೆ.

ಈ ಮಹಾಕಾವ್ಯವನ್ನೋದಿದಾಗ ಮೊಟ್ಟಮೊದಲು ನಮ್ಮ ಗಮನ ಸೆಳೆಯುವ ವಿಶ್ವ-ಪ್ರತಿಮೆಯೆಂದರೆ ಈ ಬ್ರಹ್ಮಾಂಡದಲ್ಲಿ ನಡೆದಿರುವ ಕತ್ತಲೆ -ಬೆಳಕಿನಾಟ. ಇಲ್ಲಿ ಕತ್ತಲೆ ಮತ್ತು ಬೆಳಕು ವಾಸ್ತವ ಸಂಗತಿಗಳಾಗಿರದೆ ಆಧ್ಯಾತ್ಮಿಕ ಶಕ್ತಿಗಳ ಸಂಕೇತಗಳಾಗಿ ಬಂದಿವೆ. ಆದ್ದರಿಂದಲೇ ಕವಿಯು 'ತಮದ ರಾಕ್ಷಸ' ನೆಂದೂ 'ಬೆಳಗಿನೊಳು ಶಿವಮೂರ್ತಿ' (ಕಲ್ಯಾಣಕಾಂಡ ಪುಟ- 65)ಯೆಂದೂ ಬಣ್ಣಿಸುತ್ತಾನೆ. ಕತ್ತಲೆ ಮತ್ತು ಬೆಳಕು ಹೀಗೆ ಮೂಲ ವಿಚಾರವಾಗಿದ್ದು ಅದು ಮುಂದೆ ಮಾನವನ ಜೀವನದ ವಿಪರ್ಯಾಸಗಳನ್ನು ತೋರಿಸುವುದರ ಸಲುವಾಗಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತದೆ. ಉದಾಹರಣೆಗೆ ಕತ್ತಲೆಯು 'ಅಂಧಕಾರದ ಕಾಳರಾತ್ರಿ' (ಕತ್ತಲೆಯ ಕಾಂಡ- ಪುಟ.226) ಯಾಗುತ್ತದೆಯಲ್ಲದೆ. 'ಬೆಳಗ ನುಂಗಿದ ಕಾಳಗತ್ತಲೆ' (ಕತ್ತಲೆಯ ಕಾಂಡ- ಪುಟ-224) ಯಾಗುತ್ತದೆ. ಇಲ್ಲಿ ಕತ್ತಲೆ ಮತ್ತು ಕಾಳರಾತ್ರಿ ಮುಂತಾದವು ಮಾನವನ ಅಂತರಂಗದ ಅಜ್ಞಾನವನ್ನೂ, ಕಳವಳವನ್ನೂ, ತೊಳಲಾಟವನ್ನೂ ಸಾಂಕೇತಿಸುತ್ತವೆ. ಜಗತ್ತಿನ ಎಲ್ಲ ಅನುಭಾವ ಸಾಹಿತ್ಯದಲ್ಲಿಯೂ Dark Night of the Soul ಎಂಬ ಕಲ್ಪನೆಯು ಸುಪ್ರಸಿದ್ಧವಾಗಿದೆ. ಇಂಥ ಪ್ರತಿಮಾ ಸಾದೃಶ್ಯದಿಂದಾಗಿಯೇ ಭವ್ಯಮಾನವವನ್ನು ಜಗತ್ತಿನ ಇತರ ಕಾವ್ಯಗಳಿಗೆ, ಅದರಲ್ಲಿಯೂ ವಿಶೇಷತಃ ಮಹಾಕಾವ್ಯಗಳಿಗೆ ಹೋಲಿಸುವುದು ಅನಿವಾರ್ಯವಾಗುತ್ತದೆ. ಕಾಳರಾತ್ರಿಯಾದನಂತರ ಬೆಳಕು ಬರುವದೆಂಬ ಪ್ರಾಕೃತಿಕ ನಿಯಮವು ಆಧ್ಯಾತ್ಮಿಕರಂಗದಲ್ಲಿಯೂ ಇದೆಯೆಂಬುದನ್ನು ತೋರಿಸಲು ಕವಿಯು 'ಬೆಳಗಿನ ಸ್ವರಾಜ್ಯ' (ಕತ್ತಲೆಯ ಕಾಂಡ- ಪುಟ, 260) ವೆಂಬ ವಿಶ್ವವ್ಯಾಪ್ತಿಯನ್ನು ಸೂಚಿಸುವ ಪ್ರತಿಮೆಯನ್ನುಪಯೋಗಿಸಿದ್ದಾನೆ.

ಇಡೀ ಜಗತ್ತೆ ದೇವನ ದೇಹ ಮತ್ತು ಉಪಕರಣಗಳೆಂಬ ಭವ್ಯಕಲ್ಪನೆಯನ್ನು ಕವಿಯು ಒಂದು ಸುದೀರ್ಘ ವಿಶ್ವಪ್ರತಿಮಾವಳಿಯ ಮೂಲಕ ಅಭಿವ್ಯಕ್ತಿಸಿದ್ದಾನೆ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏನು ಪರಮಾದ್ಭುತವು ಎಂಥ ಬ್ರಷ್ಮ:
ತಳವಿತಳ ಪಾತಾಳದಿಃ ಕೆಳಗೆಪಾದ
ಅತ್ತಾಚೆ ಆ ಸುವರ್ಲೋಕದಿಂ ಮೇಲೆ
ತಾ ನಿಂದ ಎತ್ತರಕೆ ಉತ್ತಮಾಂಗ,
ಉತ್ತಮಾಂಗಕೆ ಬ್ರಹ್ಮ ಬ್ರಹ್ಮಾಂಡವೇ ಮುಕುಟ,
ಗಗನವೇ ಮುಖದ ಮಂಡಲ, ಚಂದ್ರ ಸೂರ್ಯಾಗ್ನಿ
ಮೂರು ಕಣ್ಣಾಗಿ ಹೊಳೆದಿವೆ ಅಲ್ಲಿ; ಮುಖದಲ್ಲಿ,
ದಶದಿಕ್ಕೆ ಬಾಹು, ಮಹದಾಕಾಶವೆ ದೇಹ
ತರುಗುಲ್ಮ ತೆಗಳೇ ರೋಮರಾಜಿ
ಮೇಘ ಮೇಘದ ಮಾಲೆ ತಾನೆ ಜಟಾಜೂಟ
ಪರಿಪೂರ್ಣ ಶೂನ್ಯವೇ ಕರದಿಷ್ಟಲಿಂಗ
ನಕ್ಷತ್ರಕೋಟಿಯೇ ಲೆಕ್ಕವಿಲ್ಲದ ಪುಷ್ಪ
ಸಾವಿಲ್ಲ ಕೇಡಿಲ್ಲ ನಿತ್ಯವೆ ಮಹಾಪೂಜೆ
ಚಂದ್ರಾಮ ಹರವಿ ಬೆಳದಿಂಗಳ ವಿಭೂತಿ
ನಿಬ್ಬೆರಗು ನಿಂದ ಪರ್ವತಪಂಕ್ತಿ ರುದ್ರಾಕ್ಷಿ
ಪಂಚಮುಖಿ ಬ್ರಹ್ಮವೇ ಪಂಚಾಕ್ಷರಿಯ ಮಂತ್ರ
ತತ್ವಕೋಟಿಯ ಕೋಟಿಜಪದ ಮಾಲೆ;
ಮೇರು ಪರ್ವತವೆ ತಾ ಧರಿಸಿದ ಮಹಾದಂಡ
ಸಪ್ತಸಾಗರವೆ ತಾ ಹಿಡಿದಿಹ ಕಮಂಡಲು
ಆರು ಋತುಗಳು ಆರುಸ್ಥಲದ ವಿವರ.
ಈ ಮಹಾಮಹಿಮಂಗೆ ಶೇಷನೆ ಕಟಿಸೂತ್ರ,
ಅನಂತ ಕೌಪೀನ, ಜಗವೆ ಕಂಥೆ
ತ್ರಿಗುಣ ಒಂದಾದುದೇ ಕರದ ಭಿಕ್ಷಾಪಾತ್ರ.
ನಾಲ್ಕು ಯುಗವೆ ಗಮನ ಮಿಂಚೇ ಅಂಗರುಚಿ
ಸಿಡಿಲೇ ಆತನ ಶಬ್ದ, ವೇದಾಗಮವೆ ವಾಕ್ಯ
ಜ್ಞಾನ ಮುದ್ರೆಯು ತಾನೆ ಉಪದೇಶ ಉಪದೇಶ.
ಒಂದನೊಂದನು ಗೆಲುವ ಹಗಲಿರುಳೆ ಅರಮನೆ,
ಪೃಥಿವಿಯ ಮಂಡಿಸಿದ ಸಿಂಹಾಸನ.

(ಶ್ರೀಶೈಲಕಾಂಡ- ಪುಟ- 180)

ಹೀಗೆ ವಿಶ್ವವೆ ದೇವನ ದೇಹ ಮತ್ತು ಸಾಮಗ್ರಿಗಳೆಂಬ ಕಲ್ಪನೆಯು ಅತ್ಯಂತ ಭವ್ಯವಾಗಿದ್ದು, ಉಪನಿಷತ್ತುಗಳು, ವಚನ ಸಾಹಿತ್ಯ, ಕ್ರಿಶ್ಚಿಯನ್ ಪುರಾಣ, ಬ್ಲೇಕನ ಕಾವ್ಯದಲ್ಲಿ ಕಂಡು ಬರುವ ಇದೇ ತೆರನಾದ ಪ್ರತಿಮೆಗಳನ್ನು ನೆನಪಿಗೆ ತರುತ್ತದೆ. ಇಂಥ ಭವ್ಯ ಪ್ರತಿಮಾವಳಿಯ ಮೂಲಕ ದೇವನು ಜಗತ್ತಿನಾಚೆಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದಕ್ಕೆ ಜಗತ್ತಿನಲ್ಲಿಯೆ ಅಭಿವ್ಯಕ್ತನಾಗಿದ್ದಾನೆಂಬ ಸಗುಣ ಬ್ರಹ್ಮದ ಕಲ್ಪನೆಯನ್ನು ಅಥವಾ immanent concept of God ನ್ನು ಕವಿಯು ಸೂಚಿಸಿದ್ದಾನೆ.

ಸಾಗರವೆಂಬುದೊಂದು ಜಾಗತಿಕ ಸಾಹಿತ್ಯದಲ್ಲಿ ಪುನಃ ಪುನಃ ಕಾಣಿಸಿಕೊಳ್ಳುವ ಆದಿಪ್ರಮೆಯಾದರೂ ಕೂಡ ಇಲ್ಲಿ ಕವಿಯು ಅದನ್ನು ಪರವಸ್ತುವಿಗೆ ಅನ್ವಯಿಸಿ 'ಬ್ರಹ್ಮಸಾಗರ'ವೆಂದು ಕರೆದದ್ದರಿಂದ ಅದು ವಿಶ್ವಪ್ರತಿಮೆಯಾಗಿ ಬಿಡುತ್ತದೆ. ಅನಂತರ ಸಾಗರಕ್ಕೆ ಸಂಬಂಧಿಸಿದ ಇತರ ಪ್ರತಿಮೆಗಳೆಲ್ಲ ಈ ವಿಶ್ವಪ್ರತಿಮೆಯ ಪರಿವಾರಕ್ಕೆ ಸೇರಿಕೊಳ್ಳುತ್ತವೆ. ದೇವರು ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧವನ್ನು ಸೂಚಿಸುವುದಕ್ಕಾಗಿ 'ಬ್ರಹ್ಮಸಾಗರ' ಮತ್ತು 'ಮಾನವ ತರಂಗ' (ಕತ್ತಲೆಯ ಕಾಂಡ- ಪುಟ- 252) ವೆಂಬ ಪ್ರತಿಮೆಯನ್ನುಪಯೋಗಿಸಿದ್ದಾನೆ ಕವಿ. ವೇದಾಂತದಲ್ಲಿ ಈ ಪ್ರತಿಮೆಯು ಉಕ್ತವಾಗಿದ್ದರೂ ಕೂಡ ಈ ಮಹಾಕಾವ್ಯದ ಸಾಂದರ್ಭಿಕ ಸೌಂದರ್ಯದ ಮೂಲಕ ಅದು ವಿಶೇಷ ಮಹತ್ವ ಪಡೆಯುತ್ತದೆ.

ಚೆನ್ನಮಲ್ಲಿಕಾರ್ಜುನದೇವನನ್ನು ಮದುವೆ ಮಾಡಿಕೊಂಡು 'ಮರ್ತ್ಯ ಲೋಕಕ್ಕೆ, ಶಿವಲೋಕಕ್ಕೆ/ ಮಾಡು ತಾಯೇ ಮಾಡಿ ಮಂಗಲವ ಕಟ್ಟು' (ಶ್ರೀಶೈಲಕಾಂಡ- ಪುಟ- 212) ಎಂದು ಗುರುಚೆನ್ನನು ಮಹಾದೇವಿಗೆ ಆಶೀರ್ವದಿಸುವ ಮಾತು ಅತ್ಯಂತ ಭವ್ಯವಾಗಿದ್ದು ತಟ್ಟನೆ ಬ್ಲೇಕ್ ಕವಿಯ The Marriage of Heaven and Hell ಎಂಬ ಕಲ್ಪನೆಯನ್ನು ನೆನಪಿಗೆ ತರುತ್ತದೆ.

ಪರವಸ್ತುವೆ ಅನೇಕ ರೂಪದಲ್ಲಿ ಅಭಿವ್ಯಕ್ತವಾದ ತತ್ವವನ್ನು 'ವಿಶ್ವರಂಗ ಸ್ಥಲದ ಬಯಲು ಮಂಟಪ' ವೆಂಬ ವಿಶ್ವಪ್ರತಿಮೆಯ ಮೂಲಕ ಸೂಚಿಸಿದ್ದಾನೆ:

ಎಲೆ ಬಯಲು ಬ್ರಹ್ಮಾ,
ಎಲೆ ವಿಯತ್ ಪುರುಷ ಎಲೆಲೆ ವಿರಾಟ್ ಪುರುಷಾ,
ವಿಶ್ವರಂಗಸ್ಥಲದ ಬಯಲು ಮಂಟಪದೊಳಗೆ
ನಕ್ಷತ್ರಕೋಟಿ ತೇಜದ ಮಹಾಬೆಳಗಿನೊಳು —
ನಟಿಸಿರುವ ನಟಿಸಿರುವ ವಿಶ್ವನಾಟಕವು
ಕಾಲವಿಲ್ಲದಕಾಲದಿಂದ ಮೊದಲಾಗಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗತಿಗೆಟ್ಟು ಕಾಲ ನಿಶ್ಚಲ ನಿಲ್ಲುವನ್ನಕ್ಕ
ಮೊದಲಿಲ್ಲ, ಕಡೆಯಿಲ್ಲ ನಡೆದ ನಾಟಕ ನಿನಗೆ
ಪ್ರತ್ಯಕ್ಷ ಪ್ರತ್ಯಕ್ಷ ಸರಮಾಲೆಗಟ್ಟಿ
ನಟಿಸಿ ತೋರುತ್ತಿಹುದೆ ಎಲ್ಲ ಅಂಕಗಳ?

(ಕತ್ತಲೆಯ ಕಾಂಡ- ಪುಟ- 262)

ಈ ಮಹಾಕಾವ್ಯದಲ್ಲಿ ಇದೇ ಪರಿವಾರದ ಇನ್ನೂ ಅನೇಕ ವಿಶ್ವಪ್ರತಿಮೆಗಳಿವೆ. ಮೇಲಿನ ಪ್ರತಿಮೆಯಲ್ಲಿ ಪರಮ ಪುರುಷನ ಬ್ರಹ್ಮಾಂಡ ನಾಟಕವು ಸೂಚಿತವಾಗಿದ್ದರೆ, ಮುಂದಿನ ಪ್ರತಿಮೆಯಲ್ಲಿ ಜೀವಾತ್ಮನಂತರಂಗದಲ್ಲಿ ನಡೆದ ನಾಟಕವು ಸೂಚಿತವಾಗಿದೆ:

ಮಾನುಷದ ಮನದರಿವು!-
ಒಳಗೆ ಹರವಿದ ಬಯಲು ವಿಸ್ತಾರ ವಿಸ್ತಾರ.
ಆಕಾಶವನು ನುಂಗಿ ಮೀರಿರುವ ವಿಸ್ತಾರ
ಆಕಾಶ ನಕ್ಷತ್ರ ಪೃಥಿವಿ ಜಲವಾಯು
ತಮ್ಮಿರವಿನರಿವಾರಿ ಅಜ್ಞಾನ ರಾತ್ರಿ.
ವಿಶ್ವರೂಪವ ತೊಟ್ಟು ವಿಶ್ವನಾಮವ ಧರಿಸಿ
ವಿಧವಿಧದ ಪ್ರಾಣ ಮನ ಭಾವ ಪಾತ್ರವ ನಟಿಸಿ
ವಿಶ್ವನಾಟಕ ನಡೆದು ಮನದ ಬಯಲೊಳಗೆ
ಮರಹುಗತ್ತಲೆಯಾಟ ಮನಕೆ ಮರೆಯಾಗಿ

(ಕತ್ತಲೆಯ ಕಾಂಡ- ಪುಟ- 262)

ಪಿಂಡಾಂಡವು (Microcosm) ಮೇಲುನೋಟಕ್ಕೆ ಚಿಕ್ಕದಾಗಿ ಕಂಡರೂ ಬ್ರಹ್ಮಾಂಡ (Macrocosm) ನಾಟಕದ ಕನ್ನಡಿಯಂತಿದ್ದು ವಿಶ್ವದ ರಹಸ್ಯವನ್ನೆಲ್ಲ ತನ್ನ ಒಡಲೊಳಗೆ ತುಂಬಿಕೊಂಡದ್ದನ್ನು ಈ ಪ್ರತಿಮೆ ಸೂಚಿಸುತ್ತದೆ.

ಇಡೀ ಭೂಲೋಕವೆ ಒಂದು ಬೃಹತ್ ರಂಗಭೂಮಿಯಾಗಿದ್ದು ಅದರ ಮೇಲೆ ಪರಸ್ಪರ ವಿರೋಧಾತ್ಮಕ ತತ್ವಗಳು ಅಥವಾ ಶಕ್ತಿಗಳು ಪಾತ್ರ ಧರಿಸಿ ನಾಟಕವಾಡುತ್ತವೆ ಎಂಬುದು ಒಂದು ಅತ್ಯಂತ ಸುಪ್ರಸಿದ್ಧವಾದ ವಿಶ್ವಪ್ರತಿಮೆಯಾಗಿದ್ದು ಅದು ಭವ್ಯಮಾನಸವ ಮಹಾಕಾವ್ಯದ ಗಾಂಭೀರ್ಯವನ್ನು ಎತ್ತಿಹಿಡಿಯುತ್ತದೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕ ಹೂಡಿರುವ ಸುಖದುಃಖ ನಾಟಕಕ್ಕೆ-
ಅಂಜಲೇತಕೆ ಮಗಳೆ ಅಂಜಿ ಹೋಗಲೆಲ್ಲಿ?
ಅಂಜಿ ಓಡಿದರೆ ಕತ್ತಲೆ ಹಿಡಿದು ಹಿಸುಕಿ
ನುಂಗಿತಲ್ಲಾ ಮಗನೆ ಜಗದ ಹಿರಿಯರನು.
ಸತ್ವರಜ ತಮದ ಮದಮತ್ಸರದ ಬೋಬೆಗಳ
ಕಾಮಕ್ರೋಧ ವಿಲಾಸ ರಕ್ತರಜನಿಯ ಲೀಲೆ
ಪುಣ್ಯಮರ್ಧಿನಿ ಪಾಪಕೂಪ ರಾಸಕ್ರೀಡೆ
ಸತ್ಯಸೌಂದರ್ಯವಧೆ ಅಂಧತಮದಾಟ,
ಪ್ರಳಯ ರಂಗಸ್ಥಲದ ಮೃತ್ಯು ಮಂಟಪದೊಳಗೆ
ಚೋಹ ಚೋಹದ ಬೊಂಬೆ ಬೊಂಬೆಗಳು ಕುಣಿದು
ಅರಿವು ಮರವೆಯ ಪಂಜು ಪಂಜುಗಳು ಉರಿದು
ನಾಟಕವು ನಾಟಕವು ಕತ್ತಲೆಗೆ ನಟಿಸಿ,
ನೋಟಕರು ತಾವೆಂದು ನಾಟಕವು ನಟಿಸಿ
ಹೋಗಿಹರು ಹೋಗಿಹರು ಬಯಲಾದ ಕತ್ತಲೆಗೆ
ಮೃತ್ಯುನಾಟಕ ಮುಗಿದು ಸೃಷ್ಟಿನಾಟಕ ನಡೆದು
ಸತ್ತುಹುಟ್ಟಿತು ಮತ್ತೆ ಕತ್ತಲೆಗೆ ಬೆಳಕು!-
ಅಂಜಲೇತಕೆ ಅಂಜಿ ಹೊಗಲೆಲ್ಲಿ? ಹೊಗಲೆಲ್ಲಿ?

(ಕತ್ತಲೆಯ ಕಾಂಡ- ಪುಟ- 307)

ಗುರುಚೆನ್ನನು ಗಿರಿಮಲ್ಲನಿಗೆ ಕೇಳುವ ಈ ಪ್ರಶ್ನಾವಳಿಯಲ್ಲಿ ವಿಶ್ವನಾಟಕದ ವರ್ಣನೆಯಿದ್ದು ಅದು ಗಿರಿಮಲ್ಲನಿಗೆ ಸೃಷ್ಟಿಯ ಸ್ವರೂಪದ ಬಗೆಗೆ ಮೂಲಭೂತ ಜ್ಞಾನವನ್ನೊದಗಿಸುತ್ತದೆ, ಅಷ್ಟೇ ಅಲ್ಲ ಆ ಅದ್ಭುತದ ಬಗೆಗೆ ವಿಸ್ಮಯವನ್ನೂ ಉಂಟುಮಾಡುತ್ತದೆ. ಮಾನವನು ಮರ್ತ್ಯಲೋಕದಲ್ಲಿ ಹುಟ್ಟಿ ಬಂದನಂತರ ಈ ಸೃಷ್ಟಿ ನಾಟಕದಲ್ಲಿ ತನ್ನ ಪಾಲಿಗೆ ಬಂದ ಪಾತ್ರವನ್ನು ನಟಿಸಿ ನಾಟಕದ ಯಶಸ್ಸಿಗೆ ಕಾರಣನಾಗುವ ಅನಿವಾರ್ಯತೆಯನ್ನು ಈ ಪ್ರತಿಮೆ ಚೆನ್ನಾಗಿ ಸೂಚಿಸುತ್ತದೆ.

ವಿಶ್ವವೊಂದು ನಾಟಕವಾದಂತೆ, ಅದೊಂದು ನಾಟ್ಯವೂ ಆಗಿದೆಯೆಂಬುದನ್ನು

''ಕುಣಿಯಿತ್ತು ನಾಟ್ಯ ನಡೆಯಿತ್ತು ನಾಟಕ;
ಅಣುಮೊದಲು ಆಕಾಶ ಕಡೆಯಾಗಿ ನಟಿಸಿತ್ತು
ತನ್ನ ಶಕ್ತಿಯನಂತಲೀಲೆಯಾಡಿತ್ತು.
ಆಕಾಶ ಕುಣಿಯಿತ್ತು ತನ್ನ ಮೈಮರೆದು,
ಜಗವನೆಲ್ಲವ ಮಾಡಿ ಜಗವ ನಡೆಸಿರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚೈತನ್ಯವಾರಾಶಿ ಸೂಕ್ಷ್ಮಾತಿ ಸೂಕ್ಷ್ಮ
ಹರುಕಿಲ್ಲ ಬಿರುಕಿಲ್ಲ ಸರ್ವಾಂಗದೊಳು ತುಂಬಿ,
ಹರವಿರುವ ವಿಸ್ತಾರ ಬಯಲೊಳಗೆ ಮಯವಾಗಿ
ಕುಣಿಯಿತ್ತು ಬಯಲು- ಆಕಾಶನಾಟ್ಯ.

(ಉದಯಕಾಂಡ- ಪುಟ- 453)

ಎಂಬ ಸಾಲುಗಳು ತೋರಿಸುತ್ತವೆ. ಈ ವಿಶ್ವವೆ ಒಂದು ಕುಣಿತವೆಂಬುದು ಅತ್ಯಂತ ಸುಂದರ ಕಲ್ಪನೆಯಾಗಿದ್ದು ಅದು ಶಿವನ ತಾಂಡವ ನೃತ್ಯವನ್ನು ನೆನಪಿಗೆ ತರುತ್ತವೆ.

ಮೂಲತಃ ಒಬ್ಬನೆ ಆದ ಶಿವನು (ಅಥವಾ ದೇವನು) ತನ್ನ ಲೀಲಾವಿನೋದ-ಕ್ಕಾಗಿ ಎರಡು ಭಾಗಗಳಾಗಿ ವ್ಯಕ್ತಗೊಂಡು ವಿಶ್ವನಾಟಕವನ್ನಾಡುವ ಕಲ್ಪನೆ ಭಾರತೀಯರಿಗೆ ಸುಪರಿಚಿತವಾದ ವಿಶ್ವಪ್ರತಿಮೆಯಾಗಿದೆ. ಅದನ್ನಿಲ್ಲಿ ಕವಿ ಹೀಗೆ ಚಿತ್ರಿಸುತ್ತಾನೆ:

ಅಪ್ಪತನುಮೂರ್ತಿ- ತನ್ನ ಲೀಲೆಗೆ ತಾನೆ
ವಿಶ್ವಮಯ ವಿಶ್ವೇಶ ವಿಶ್ವರೂಪ
ವಿಶ್ವನಾಮದ ವಿಶ್ವಕ್ರಿಯೆಯ ಅಂತರ್ಯಾಮಿ,
ತನ್ನ ಇಚ್ಛೆಗೆ ತಾನೆ ಶಕ್ತಿವಶಗತನಾಗಿ
ತನ್ನಯ ವಿನೋದಕ್ಕೆ ಅರಸು ಕಾರಣನಾದ;
....
ತನಗನ್ಯ ಭಿನ್ನವಿಲ್ಲದಖಂಡ ಏಕ
ಎರಡಿಲ್ಲದೊಂದ ತಾನಾಗಿರುವ ತನ್ನನ್ನು
ಲೀಲೆಯಾದೊಡ ಉಮಾಪತಿಯಾಗಿ ನಟಿಸಿದ;
ಮರಹುಗತ್ತಲೆಯೊಳಗೆ ಎರಡಾಗಿ ಕುಣಿದ
ಉಮೆಯಧೀನದ ವಿಶ್ವಪತಿಯಾಗಿ ಕುಣಿದ.

(ಉದಯಕಾಂಡ- ಪುಟ- 458)

ಈ ಪ್ರತಿಮೆಯಲ್ಲಿ ಸೂಚಿತವಾದ ಅದ್ವೈತ ತತ್ವವು ದ್ವೈತ ತತ್ವವಾಗಿದ್ದರಿಂದ ನಾಟಕವಾದ ಕಲ್ಪನೆಯು ಭಾರತೀಯ ತತ್ವಜ್ಞಾನದಲ್ಲಿ ಸುಪರಿಚಿತವಾಗಿದ್ದಂತೆ ಜರ್ಮನ್ ತತ್ವಜ್ಞಾನಿಯಾದ ಹೆಗೆಲ್‌ನ ಸಿದ್ಧಾಂತದಲ್ಲಿಯೂ ಕಂಡು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬರುತ್ತದೆ. Hegel maintained that the world develops due to the interaction of opposite forces, but connected that development with that of a certain absolute idea, "World Spirit" of "World Reason" (What's Philosophy, Calina Kirilenko, Progress Publishers, Moscow. 1985: P. 106) ಈ ವೈರುಧ್ಯಗಳು ನಾಟಕ ಜಗತ್ತಿನ ಕ್ರಿಯೆಗೆ ಅವಶ್ಯವೆಂಬುದು ಹೆಗೆಲ್‌ನ ವಾದ. ಅದರಂತೆ ಕಾವ್ಯವು ಶ್ರೇಷ್ಠ ಕಾವ್ಯವಾದಾಗ ಅಥವಾ ಮಹಾಕಾವ್ಯವಾದಾಗ ಅದು ತತ್ವಜ್ಞಾನದೊಡನೆ ಕೈಕುಲುಕುತ್ತದೆ. No man was ever yet a great poet without being at the same time a profound Philosopher (Biographia Literaria, Coleridge, Methuen, London, 1970, P. 110) ಎಂಬ ಕೋಲರಿಜ್ ಕವಿಯ ವಾಣಿಯನ್ನು ಈ ವಿಶ್ವಪ್ರತಿಮೆ ಸಾಬೀತುಮಾಡಿ ತೋರಿಸುತ್ತದೆ.

ಈ ಲೋಕವೆಲ್ಲ ಬ್ರಹ್ಮಾಂಡವೆಂಬ ತತ್ತಿಯೊಳಗಿಂದ ಹುಟ್ಟಿಬಂದಿತೆಂಬ ಕಲ್ಪನೆಯೂ ಒಂದು ವಿಶ್ವಪ್ರತಿಮೆಯಾಗಿದೆ.

ಗರ್ಭಿಣಿಯು ನವಮಾಸ ತುಂಬಿ ಅಬ್ಬರಿಸಿದರೆ
ನವಕೋಟಿ ಸಿಡಿಲೆರಗಿ ಕಂಪು ಹೊರಬರುವಂತೆ
ವಿಶ್ವಪ್ರಪಂಚದ ಮಹಾಬ್ರಹ್ಮ ತತ್ತಿ
ಭೇದಿಸಿತು ಮಗಳೇ ಭೇದಿಸಿತು, ಭೇದಿಸಿತು!
ಒಡೆಯಿತ್ತು ತತ್ತಿ- ಬ್ರಹ್ಮಾಂಡ ಗರ್ಭಿಣಿ.

(ಉದಯಕಾಂಡ- 452).

ಈ ಪ್ರತಿಮೆಯು Cosmic egg ಎಂಬ ವೈಜ್ಞಾನಿಕ ಕಲ್ಪನೆಗೆ ಸಂವಾದಿಯಾಗಿದ್ದು ಸೃಷ್ಟಿ ಶಾಸ್ತ್ರವು (Cosmogony) ಅನೇಕ ಮಹಾಕಾವ್ಯಗಳ ಅವಿಭಾಜ್ಯ ಅಂಗವಾಗಿದೆಯೆಂಬುದನ್ನು ಸಿದ್ಧಮಾಡಿ ತೋರಿಸುತ್ತದೆ. ಇಂಥ ಸೃಷ್ಟಿಶಾಸ್ತ್ರೀಯ ವರ್ಣನೆಗಳು ಭಾರತೀಯ ಪುರಾಣಗಳಲ್ಲಿ ಕಂಡು ಬಂದ ಹಾಗೆ ಪಾಶ್ಚಾತ್ಯ ಮಹಾಕಾವ್ಯಗಳಾದ Poems of Heaven and Hell, Epic of Gilgamesh & Pardise Lost ಮುಂತಾದವುಗಳಲ್ಲಿಯೂ ಕಂಡುಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವನಲ್ಲಿ ಶಿವಕಳೆ ಮರೆಮಾಚಿ ವಿಷಯಾಂಧಕಾರ ಮೆರೆಯುವ ದುರ್ದೈವದ ಸಂಗತಿಯನ್ನು ಖಗ್ರಾಸಗ್ರಹಣವೆಂಬ ವಿಶ್ವಪ್ರತಿಮೆಯ ಮೂಲಕ ಕವಿಯು ತಿಳಿಸುತ್ತಾನೆ. ಮಹಾದೇವಿಯು ಗಿರಿಮಲ್ಲನಿಗೆ ಹೀಗೆ ಹೇಳುತ್ತಾಳೆ:

ಆದರೆ ಅಣ್ಣಾ
ಅಣ್ಣಾ ಮಲ್ಲಯ್ಯ ದಿವ್ಯ ಸೋದರವೆ,
ನಿಬ್ಬೆಡಗು ಈ ಕಳೆ ಮಾನವನೊಳುರಿದಿರುವ
ಕತ್ತಲೆಯ ಮನೆಯೊಳಗೆ ಕತ್ತಲೆಯನೊರಸದೆ
ಬೆಳಗಿನದ್ಭುತ ಒಳಗೆ ಕತ್ತಲೆಯನುಟ್ಟು
ಕತ್ತಲೆಯೆ ದಿಟವಾಗಿ ಬೆಳಗು ತಾ ಸಟೆಯಾಗಿ
ನಿಂದಿಹುದು ಮಾನವನ ನಾನು- ಆಕಾರ
ಹಿಡಿಯಿತ್ತು ಶಿವಕಳೆಗೆ ಖಗ್ರಾಸ ಗ್ರಹಣ.

(ಉದಯಕಾಂಡ- ಪುಟ- 478)

ಈ ವಿಶ್ವಪ್ರತಿಮೆಯ ಮೂಲಕ ಶಿವಕಳೆಯು ಮರೆಮಾಚಿದ್ದು ತಾತ್ಕಾಲಿಕವಾದುದೆಂದೂ, ಕೆಲವು ಸಮಯದ ನಂತರ ಅದು ಮತ್ತೆ ಪ್ರಜ್ವಲಿಸುವುದೆಂಬ ಸತ್ಯವನ್ನು ಕವಿಯು ಸೂಚಿಸಿದ್ದಾನೆ.

ಭೂಸನೂರಮಠ ಅವರು ಕೆಲವು ಆಧುನಿಕ ಸಾಹಿತ್ಯ ವಿಮರ್ಶಾತ್ಮಕ ಪ್ರತಿಮೆಗಳನ್ನೂ ವಿಶ್ವಪ್ರತಿಮೆಗಳ ಮಟ್ಟಕ್ಕೇರಿಸಿದ್ದಾರೆ, ಉದಾಹರಣೆಗೆ:

ಎಂಥ ಅದ್ಭುತ ಮಹಾಬ್ರಹ್ಮಕಾದಂಬರಿಯ
ಬಿತ್ತರಿಸಿ ಓದಿಹುದು ಭೂಮಂಡಲ

(ಉದಯಕಾಂಡ- ಪುಟ- 490)

ಮತ್ತು

ವಿಶ್ವದ ಮಹಾಕೃತಿಯ ಲಿಪಿಯೊನೋದಿದರು
ಹಲವರ್ಥ ಮಾಡಿದರು ಸಾರಾಂಶ ಒಂದೇ.

ಉಜ್ವಲಕಾಂಡ ಪುಟ- 653)

ಎಂಬ ಸಾಲುಗಳಲ್ಲಿ ಬ್ರಹ್ಮಾಂಡವನ್ನೊಂದು 'ಮಹಾಕಾದಂಬರಿ'ಗೂ 'ಮಹಾಕೃತಿ'ಗೂ ಹೋಲಿಸಿದ್ದು ಕವಿಯ ಸಮಕಾಲೀನ ಪ್ರಜ್ಞೆಯನ್ನೂ, ಮತ್ತದನ್ನು ಔಚಿತ್ಯಪೂರ್ಣವಾಗಿ ಉಪಯೋಗಿಸುವ ಜಾಣ್ಮೆಯನ್ನೂ ತೋರಿಸುತ್ತದೆ. ಈ ಪ್ರತಿಮೆಗಳನ್ನು ಅವಲೋಕಿಸಿದಾಗ ಶ್ರೀ ಅರವಿಂದರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಮ್ಮ ಕವಿತೆಯೊಂದರಲ್ಲಿ ಇಡೀ ಜಗತ್ತನ್ನೊಂದು ಛಾಪಖಾನೆಗೆ ಹೋಲಿಸಿದ್ದರ ನೆನಪಾಗುತ್ತದೆ.

ಭವ್ಯಮಾನವದಲ್ಲಿ ಕಂಡು ಬರುವ ಇನ್ನೊಂದು ಸುಂದರವಾದ- ವಿಶ್ವಪ್ರತಿಮೆಯನ್ನು ಇಲ್ಲಿ ನೋಡಬಹುದು:

ಮಾನವ ಕ್ಷೇತ್ರದೊಳು ಶಿವಕಾಮವಂಕುರಿಸಿ
ಪಲ್ಲವಿಸಿ ಬೆಳೆದು-
ಆಕಾಶ ಪಾತಾಳವನು ದಾಟ ಬೆಳೆದು,
ವಿಶ್ವಬ್ರಹ್ಮಾಂಡಗಳ ಮೇಲೆ ಹರವಿನಿಂತಿರುವ-
ಪರಮ ಚಿಜ್ಯೋತಿರಾಕಾಶಕ್ಕೆ ಹಬ್ಬಿ
ಬೆಳೆಯಿತ್ತು ನಿಜಭಕ್ತಿ ನಿರ್ಮಳ ನಿಡಾಳ-

(ಉದಯಕಾಂಡ- ಪು- 528)

ಮೇಲಿನ ಸಾಲುಗಳಲ್ಲಿ ಶಿವಕಾಮವು ಬಳ್ಳಿಯಂತೆ ವಿಸ್ತಾರವಾಗಿ ಹಬ್ಬುತ್ತ ಹೋಗುವ ಪ್ರಕ್ರಿಯೆಯು ವರ್ಣಿತವಾಗಿದ್ದರೆ ಇನ್ನೊಂದು ಕಡೆಗೆ ಬ್ರಹ್ಮವೆ ಒಂದು ಬಳ್ಳಿಯಾಗಿದ್ದು ಈ ಜಗತ್ತೆ ಅದರ ಕಾಯಿಯಾಗಿದೆ ಎಂಬ ಕಲ್ಪನೆಯು ಅತ್ಯಂತ ನವುರಾದ ಕಲ್ಪನೆಯಾಗಿದೆ:

ತನ್ನ ಮರೆಯೊಳು ತುಂಬಿ ಬ್ರಹ್ಮಚೈತನ್ಯ
ಜಗದ ಭಾರವು ದಿಮ್ಮಿತ್ತೆ ಬ್ರಹ್ಮವಲ್ಲಿಗೆ

(ಉಜ್ವಲಕಾಂಡ, ಪುಟ- 704)

ಜಗತ್ತು ಎಷ್ಟೇ ಜಡವಾಗಿದ್ದರೂ ಅದು ತಾಯಿಯಾದ ಬಳ್ಳಿಗೆ ಭಾರವಾಗಲಾರದೆಂಬ ವ್ಯಾವಹಾರಿಕ ಸತ್ಯವನ್ನೆ ಅಧ್ಯಾತ್ಮ ಜೀವನಕ್ಕೆ ಅನ್ವಯಿಸಿರುವದು ಕವಿಯ ಕಲ್ಪನಾ ನಾವೀನ್ಯಕ್ಕೆ ಸಾಕ್ಷಿಯಾಗಿದೆ.

ಭವ್ಯಮಾನವದಲ್ಲಿ ಕಂಡು ಬರುವ ಈ ವಿಶ್ವಪ್ರತಿಮೆಗಳೆಲ್ಲ ಈ ಮಹಾಕಾವ್ಯದಲ್ಲಿ ಚಿತ್ರಿಸಲಾದ ವಿಶ್ವಮಾನವಪ್ರಜ್ಞೆಗೆ ಪೂರಕವಾಗಿದ್ದು ಕಾವ್ಯ ಸೌಂದರ್ಯ-ವರ್ಧಕಗಳಾಗಿವೆ. ಅವು ಕವಿಯ ಭವ್ಯ ಕಲ್ಪನೆಗೆ ಹಿಡಿದ ಕನ್ನಡಿಗಳಾಗಿವೆ. ಅದರಂತೆ ಕಾವ್ಯ ಮತ್ತು ತತ್ವಜ್ಞಾನಗಳ ಕೂಡಲ ಸಂಗಮಗಳಾಗಿಯೂ ಇವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ ಕಾವ್ಯಭಾಷೆ- ಒಂದು ವಿವೇಚನೆ

-ಡಾ. ಸಂಗಮೇಶ ಸವದತ್ತಿಮಠ.

'ಭವ್ಯಮಾನವ', ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ವಿಶಿಷ್ಟ ಸ್ಥಾನ ಪಡೆದ ಮಹಾಕೃತಿಯಾಗಿದೆ. ಪ್ರೊ. ಭೂಸನೂರಮಠ ಅವರು ಎಂಟುನೂರಕ್ಕೂ ಹೆಚ್ಚು ವರ್ಷಗಳವರೆಗೆ ನಡೆದು ಬಂದ ಶರಣರ ವಿಚಾರಧಾರೆಯನ್ನು 'ಮರುಚಿಂತನೆ'ಗೈದು ತಮ್ಮದೇ ಆದ ವಿಶಿಷ್ಟ ಭಾಷಾ ಶೈಲಿಯಲ್ಲಿ (ಆ ಮಂಥನವನ್ನು ಪಾಕಗೊಳಿಸಿ) ಅಭಿವ್ಯಕ್ತಿಸಿರುವುದು ಗಮನಾರ್ಹ ಅಂಶವಾಗಿದೆ. ಭವ್ಯಮಾನವದ 'ವಸ್ತು'ವನ್ನು-ಭಾವನಾಲಹರಿಗೆ, ಆಧ್ಯಾತ್ಮ ಸ್ಪಂದನಕ್ಕೆ ಅನುಗುಣವಾಗಿ ಹಿಗ್ಗಿಸಿ ಹೇಳುವಲ್ಲಿ ಅವರು ಬಳಸಿರುವ ಭಾಷೆಯೂ ತಾಳಹಾಕುವಂತೆ ಹೇಗೆ ಬೇಕೋ ಹಾಗೆ ಹಿಗ್ಗಿರುವುದೂ ಅದರ ಭವ್ಯತೆಗೆ ಮತ್ತೊಂದು ಬಗೆಯ ಮೆರುಗು ನೀಡಿದಂತಾಗಿದೆ. ಪ್ರೊ. ಭೂಸನೂರಮಠ ಅವರಿಗೆ ತಮ್ಮ ಕಾವ್ಯದ ಸಮರ್ಥ ಮಾಧ್ಯಮವಾದ ಭಾಷೆಯನ್ನು ದುಡಿಸಿಕೊಳ್ಳುವಲ್ಲಿ ಹೆಚ್ಚು ಕಾಳಜಿಯನ್ನು ವಹಿಸುವ ಅಗತ್ಯತೆ ಅಷ್ಟಾಗಿ ಕಂಡು ಬಂದಿಲ್ಲ. ಭವ್ಯಮಾನವಕ್ಕಾಗಿ ಅವರು ಭಾಷೆಯನ್ನು ಬಳಸಿಕೊಳ್ಳುವಾಗ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಆಡುನುಡಿ, ಗ್ರಂಥಸ್ಥ ಶಿಷ್ಟ ಭಾಷೆ ಇತ್ಯಾದಿ ಯಾವುದರ ಕಡೆಗೂ ಪ್ರಜ್ಞಾಪೂರ್ವಕವಾಗಿ ಗಮನಹರಿಸಿರುವಂತೆ ತೋರುವುದಿಲ್ಲ. ನಿರರ್ಗಳವಾಗಿ ಓತಪ್ರೋತವಾಗಿ, ವಸ್ತುವಿನ ಭವ್ಯತೆಯ ವಾತಾವರಣವು ನಿರ್ಮಾಣವಾಗುವಲ್ಲಿ ತಮಗೆ ಯಾವ ಭಾಷೆ ಅವಶ್ಯಕ ಎನಿಸುವುದೋ ಅದನ್ನು ತೀರ ಸಹಜವಾದ ರೀತಿಯಲ್ಲಿ ಬಳಸಿಕೊಂಡು ಬಿಡುತ್ತಾರೆ. ಇದು ಭವ್ಯಮಾನವದಲ್ಲಿ ಬಳಕೆಗೊಂಡ ಭಾಷೆಯ ಒಂದು ಎದ್ದು ಕಾಣುವ ವೈಶಿಷ್ಟವಾಗಿದೆ. ಇಷ್ಟು ಹಿನ್ನಲೆಯಲ್ಲಿ ಭವ್ಯ ಮಾನವ ಮಹಾಕೃತಿಯಲ್ಲಿ ಬಳಕೆಯಾಗಿರುವ ಭಾಷಾ ವೈಶಿಷ್ಟ್ಯಗಳನ್ನು ಸಂಕ್ಷಿಪ್ತದಲ್ಲಿ ಎತ್ತಿ ತೋರುವುದು ಈ ಲೇಖನದ ಉದ್ದೇಶ.

ಕನ್ನಡದಲ್ಲಿ ಸಹಜವಾಗಿರುವ ಐದು ಹ್ರಸ್ವ, ಐದು ದೀರ್ಘ ಸ್ವರಗಳು (ಅ, ಆ, ಇ, ಈ, ಉ, ಊ, ಎ, ಏ, ಒ ಹಾಗೂ ಓ) ಭವ್ಯಮಾನವ ಭಾಷೆಯಲ್ಲಿ ದೊರೆಯುತ್ತವೆ. ಇವಲ್ಲದೆ ಸಂಸ್ಕೃತದಿಂದ ಸ್ವೀಕೃತ ಶಬ್ದಗಳಲ್ಲಿ (ಋ, ಐ, ಔ) ಸ್ವರಗಳು, ವಿಸರ್ಗ, ಅನುಸ್ವಾರಗಳು ದೊರೆಯುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಂಜನಗಳಲ್ಲಿ ಕನ್ನಡಕ್ಕೆ ಸಹಜವಾದ ವರ್ಗೀಯ (ಕ್, ಗ್, ಚ್, ಜ್, ಟ್, ಡ್, ತ್, ದ್, ಪ್, ಬ್) ಅವರ್ಗೀಯ (ಯ್, ರ್, ಲ್, ವ್, ಸ್, ಹ್, ಳ್), ಅನುನಾಸಿಕ (ನ್. ಣ್, ಮ್, ಙ, ಞ್) ಹೀಗೆ ಒಟ್ಟು 22 ವ್ಯಂಜನಗಳು ಹಾಗೂ ಸಂಸ್ಕೃತದಿಂದ ಸ್ವೀಕರಿಸಲ್ಪಟ್ಟ ಖ್, ಘ್, ಛ್, ಝ್, ಠ್, ಢ್, ಥ್, ಧ್, ಫ್, ಭ್,ಶ್, ಷ್, ಕ್ಷ ಹಾಗೂ ಜ್ಞ್ಞ ಈ 14 ವ್ಯಂಜನಗಳು ಬಳಕೆಯಾಗಿವೆ.

ವ್ಯಂಜನಗಳಲ್ಲಿ ಸಂಸ್ಕೃತ ಹಾಗೂ ಅನ್ಯಭಾಷಾ ಶಬ್ದಗಳನ್ನು ಬಿಟ್ಟರೆ ಎಲ್ಲ ಅಲ್ಪ ಪ್ರಾಣಗಳು, ಅವರ್ಗೀಯ ವ್ಯಂಜನಗಳು, ಹಾಗೂ ಅನುನಾಸಿಕಗಳಲ್ಲಿ ನ್ ಮತ್ತು ಮ್ ಇವು ಶಬ್ದದ ಯಾವುದೇ ಸ್ಥಾನ (ಅಂದರೆ ಆರಂಭ, ಮಧ್ಯ, ಅಂತ್ಯ) ದಲ್ಲಿ ಬಳಕೆಯಾಗುತ್ತವೆ. ಮೂರ್ಧನ್ಯ ವ್ಯಂಜನಗಳಲ್ಲಿ 'ಟ್' ಮಾತ್ರ ಕ್ವಚಿತ್ತಾಗಿ ಶಬ್ದಾರಂಭದಲ್ಲಿದೆ. 'ಡ್' ಒಂದನ್ನು ಬಿಟ್ಟರೆ ಉಳಿದವು ಶಬ್ದಾರಂಭದಲ್ಲಿ ಬಳಕೆ ಇಲ್ಲ. 'ಙಂ' ಹಾಗೂ 'ಞ' ಇವು ಶಬ್ದಮಧ್ಯದಲ್ಲಿ ಮಾತ್ರ ಬಳಕೆಗೊಂಡಿವೆ. ಅನ್ಯಭಾಷಿಕ ವ್ಯಂಜನಗಳು ಅನ್ಯಭಾಷಾ ಸ್ವೀಕೃತ ಶಬ್ದಗಳಲ್ಲಿಯೇ ಸಾಮಾನ್ಯವಾಗಿ ಬಳಕೆಗೊಂಡಿವೆ. ಕನ್ನಡ ಭಾಷೆಯ ರಚನೆಗೆ ಅನುಗುಣವಾಗಿ ಅವುಗಳನ್ನು ಕಾವ್ಯಭಾಷೆಗೆ ತಕ್ಕಂತೆ ಹೊಂದಿಸಿಕೊಂಡೂ ಬಳಸಿಕೊಳ್ಳಲಾಗಿದೆ. ಉದಾ- 'ಸತ್‌ಚಿದಾನಂದ' ಇದನ್ನು 'ಸತ್ತು ಚಿದಾನಂದ' ಎಂದು ಬಳಸಲಾಗಿದೆ.

ಸಂಸ್ಕೃತದ ಮಹಾಪ್ರಾಣ, ದ್ವಿತ್ವಾಕ್ಷರಗಳನ್ನು ಕನ್ನಡದ ಪ್ರತಿಧ್ವನಿ, ಉದ್ಗಾರ, ಅನುಕರಣವಾಚಿ ಮುಂತಾದವುಗಳಲ್ಲಿ ಎಲ್ಲ ಸ್ಥಾನಗಳಲ್ಲಿ ಬಳಸಿಕೊಳ್ಳಲಾಗಿದೆ. ಉದಾ- ಥರಥರ, ಠಣಠಣಿಸಿ, ಧೋಧೋ, ಭಳಿರೆ, ಕ್ರಾಂಕ್ರಾಂ, ಧಿರ್ ಧಿಗಿಲ್ ಇತ್ಯಾದಿ-

ಸಬಿಂದುಕ ಶಬ್ದಗಳ ಬಳಕೆ ಭವ್ಯಮಾನವ ಭಾಷೆಯಲ್ಲಿ ಇದೆ. ಕನ್ನಡ ಭಾಷೆಯ ಮಟ್ಟಿಗೆ ಸಬಿಂದುಕ ಶಬ್ದಗಳು ಅಬಿಂದುಕ ಶಬ್ದಗಳಾಗಿ ಪರಿವರ್ತನೆಗೊಂಡು ಸುಮಾರು ಸಾವಿರವರ್ಷಕ್ಕೂ ಹೆಚ್ಚುಕಾಲ ಗತಿಸಿ ಹೋದರೂ ಭೂಸನೂರಮಠ ಅವರು ತಮ್ಮ ಕಾವ್ಯ ಭಾಷೆಯಲ್ಲಿ ಅವುಗಳನ್ನು ಬಳಸಿಕೊಂಡದ್ದು ವಿಶೇಷವೆನಿಸುತ್ತದೆ. ಕೆಲವು ಉದಾಹರಣೆಗಳನ್ನಿಲ್ಲಿ ಗಮನಿಸಬಹುದು- ದಾಂಟಿ, ಕೂಸಿಂಗೆ ನಾಂದು, ಬೇಂಟೆ, ಇತ್ಯಾದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಜಾತಿ ಹಾಗೂ ವಿಜಾತಿ ಎರಡೂ ಬಗೆಯ ದ್ವಿತ್ವಾಕ್ಷರಗಳು ಭವ್ಯಮಾನವ ಭಾಷೆಯಲ್ಲಿ ಬಳಕೆಯಾಗುತ್ತವೆ.

ಉದಾ- ಮಗುಳ್ದೊಮ್ಮೆ, ನಿಂದಿರ್ದ, ಜ್ವಲಿಸು, ಚಂಪೆ, ವಾಙ್ಮಹಾದೇವಿ, ಕೆರ್ಬೊನ್ನು, ಕಂದೆರೆ, ಒರ್ಮೊದಲು, ಹೇಳಲ್ಕೆ, ಕಾಲ್ಗೋಣ,

ಆಕೃತಿಮಾ ವಿಭಾಗಕ್ಕೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಭವ್ಯಮಾನವ ಭಾಷೆಯು ಶಿಷ್ಟಕನ್ನಡ ಭಾಷೆಯ ಎಲ್ಲ ಲಕ್ಷಣಗಳನ್ನು ಹೊಂದಿದ್ದರೂ ಶಿಷ್ಟಕನ್ನಡಕ್ಕಿಂತ ಕೆಲವು ಭಿನ್ನ ಅಂಶಗಳನ್ನೂ ಹೊಂದಿರುವುದನ್ನು ಗಮನಿಸಬಹುದು. ಅಂಥ ಮಹತ್ವದ ಕೆಲವು ಭಿನ್ನಾಂಶಗಳನ್ನು ಇಲ್ಲಿ ಸೂಚಿಸಲಾಗಿದೆ-

'ಗಳು' ಬಹುವಚನ ಪ್ರತ್ಯಯವನ್ನು ಸರ್ವನಾಮಗಳಿಗೆ ಅನ್ವಯಿಸಲಾಗಿದೆ, ಹಾಗೂ ನಾನು ನೀನು ಸರ್ವನಾಮಗಳನ್ನು ವಿಶಿಷ್ಟಾರ್ಥದಲ್ಲಿ ಬಳಸಲಾಗಿದೆ-

''ನೀನುಗಳ ಕಣ್ಣೊಳಗೆ ನಾನು ಕಣ್ಣಟ್ಟು''
''ನಾನು ನೀನುಗಳೆಲ್ಲ''
''ಗಂಡು ಹೆಣ್ಣಿನ ಸಂಗ- ನಾನು- ಭಾವವ ತೊಟ್ಟು''
''ಕೋಟ ಮಾನವ- ನಾನುಗಳ ಭಿನ್ನ ನಾಟಕ''
''ಬಿರುಕು [illegible]ಪ್ಪಡಿದನು ಭಿನ್ನ- ನಾನುಗಳು''
''ಜಗವೆಲ್ಲವನು ನುಂಗಿ 'ನಾನು' ತುಂಬುವ ಭರ''
''ನಾನು ಮಾನವ ಬ್ರಹ್ಮ ಸಂಸಾರ ಹೂಡಿದ''
''ನಾನುಗಳ ಗುಂಪು 'ಗುಂಪು ನಾನು'''
''ನಾನು ನಾನಿನ ಕೋಟಿಯಿರವಿಗಾಧಾರ''

ಅಂಕಿತ ನಾಮಗಳಿಗೆ ಹಾಗೂ ಸಂಬಂಧವಾಚಿ ನಾಮಗಳಿಗೆ 'ಗಳು' ಬಹುವಚನ ಪ್ರತ್ಯಯವನ್ನು ಗೌರವ ಸೂಚಕ ಅರ್ಥದಲ್ಲಿ ಬಳಸಲಾಗಿದೆ-
ನೀಲಮ್ಮಗಳ, ಅಕ್ಕಗಳ, ತಂದೆಗಳ, ಅಮ್ಮಗಳ. 'ಗಳು' ಪ್ರತ್ಯಯದ ಬದಲಾಗಿ ಕೆಲವೆಡೆ ಹಳಗನ್ನಡದ 'ವಿರ್' ಪ್ರತ್ಯಯವನ್ನು ಬಳಸಿದೆ.
ತಾಯ್ತಂದೆವಿರ್
ಹಳಗನ್ನಡ, ನಡುಗನ್ನಡ, ರೂಪಗಳು ಇಲ್ಲವೆ ಅವುಗಳನ್ನು ಹೋಲುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪಗಳನ್ನು ಬಳಸಿರುವುದೊಂದು- ಭವ್ಯಮಾನವ ಭಾಷೆಯ ವಿಶೇಷ ಅಂಶ.

ಉದಾ:- ಕರ್ಬೊಣೀನ್ನ, ಒರ್ಮೊದಲು; ಕಾಲ್ಕೋಣ, ಕರತಳ, ಕಣ್‌ಬೊಲದಾಚೆ, ನಾಡೋಜ, ಚಿತ್ರೈಸು, ಕೈಸೆಂಡು, ತಾಯ್‌ತಂದೆವಿರ್, ದಿಮ್ಮಿತ್ತೆ, ಭಾಪುರೆ, ಭಳಿರೆ ಶರಣಾರ್ಥಿ, ಎತ್ತಣ, ಠಾವು, ನೀನಾರ್ಗೆ, ಮಾಳ್ಕೆ, ಸಡಿಫಡಾ, ನಡೆಯಿತ್ತು, ಜಗಿಯಿತ್ತು; ಅವಧಾರು, ಅವರಾದುದಾನಪ್ಪೆ, ಹಾಹೆ, ಕೂಸು (ಹೆಣ್ಣು ಮಗಳು)

ಶಬ್ದಗಳನ್ನು ಸೃಷ್ಟಿಸುವಲ್ಲಿಯೂ, ಹಳತು- ಹೊಸತುಗಳನ್ನು ಹೆಣೆದಿರುವ ನಾವೀನ್ಯ ಕಾಣಬರುತ್ತದೆ-
ತೆಳುಗಲ್ಲಗನ್ನಡಿ, ಸಂಜೆಯಿಂದುಪ್ಪರಿಸಿ, ಹೊಂಬೊರ್ಗ, ಗೊರಖಬಲೆ, ನಿಜಕೆಚ್ಚರ, ಮಾನವಾಂತರ್ಗುಹೆ, ಹೋಲೋಕ, ಕುರುಡುನಡೆ, ಕನ್ನಡವ ಕಳೆ, ನೀರುಗಾಯ, ಬೆಂಚೆ ಹೆಣೆನೊಳೀಪಾಡು.

ಕ್ರಿಯಾಪದಗಳನ್ನು ರೂಢಿಗೆ ಮೀರಿದ ರೀತಿಯಲ್ಲಿ ಬಳಸುವಲ್ಲಿಯೂ ಭಾಷೆ ಅಸಹಜವಾಗದಂತೆ ನೋಡಿಕೊಂಡಿರುವುದನ್ನೂ ಕಾಣಬಹುದು-

> ನಿಮ್ಮನೋದಿದ ತಾಯೆ, ಎನ್ನನೋದಿದ ತಾಯೆ,
> ಹಳ್ಳಹರಿದೆನು. ನಿಂದಳಿಗೆ (ನಿಂತಥವಳಿಗೆ), ಸಾಪಳಿಗೆ
> ಚುಟುಕುಮುರಿಯುತ್ತ ಬಯ್ದುದರು, ಶಬ್ದಶಬ್ದಿಸಲಿಲ್ಲ
> ಬುದ್ಧಿ ಬುದ್ಧಿಸಲಿಲ್ಲ, ಬೆಂಕಿಹತ್ತಿತು ಹಗಲು, ಹೆಪ್ಪುಗಟ್ಟಿತು
> ರಾತ್ರಿ, ಆಕಾಶವತ್ತರ ಭೂಮಿನಕ್ಕಿತು, ಕತ್ತಲೆಗೆ ಕುಣದಳು
> ವಲ್ಲಭನೊಲಿಸಲಿಕೆ,

ಭವ್ಯಮಾನವದಲ್ಲಿ ಬಳಕೆಗೊಂಡ ಭಾಷೆಯ ಮೇಲೆ ಶಿವಶರಣರ ವಚನಗಳ ಭಾಷೆಯ ಅತ್ಯಂತ ದಟ್ಟ ಹಾಗೂ ನೇರ ಪ್ರಭಾವ ಇದೆ. ಭವ್ಯಮಾನವವನ್ನು ಓದುತ್ತ ಸಾಗಿದಂತೆ ವಚನಕಾರರ ನೇರ ನುಡಿಗಳೇ ಇದ್ದಕ್ಕಿದ್ದಂತೆ ಇಲ್ಲವೆ ಅಲ್ಪಸ್ವಲ್ಪ ಬದಲಾವಣೆಯ ಮೂಲಕ ಪೂರ್ಣ ಅಥವಾ ಭಾಗಶಃ ಕಾಣಿಸಿಕೊಳ್ಳತೊಡಗುತ್ತವೆ.
ಕೆಲವು ಉದಾಹರಣೆಗಳು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಒಲೆ ಹತ್ತಿಯುರಿದಡೆ ನಿಲ್ಲಬಹುದಲ್ಲದೆ
ಧರೆಹತ್ತಿಯುರಿದೊಡೆ ನಿಲಬಾರದು''
''ಬಳ್ಳಿಗ ಕಾಯಿ ದಿಮ್ಮಿತ್ತೆ''
''ಉದಕದೊಳು ಬೈಚಿಟ್ಟ ಬಯಕೆಗಿಚ್ಚಿನ ರೀತಿ''
''ಜಗದಗಲ ಮಿಗೆಯಗಲ ನಿರಾಕಾರಕ್ಕೆ''
''ಆಕಾಶದತ್ತತ್ತ ನೀವೆ ದೇವಾ,
ಪಾತಾಳದಪ್ಪಾಚೆ ನೀವೆ ದೇವಾ''
''ಹೇರಸೊಪ್ಪಿಸಿದಂಗೆ ಸುಂಕಿಗನ ಹಂಗೇನು?''
''ಬೇಡವ್ವೋ ಕುಡಬೆಳದಿಂಗಳ ಸಿರಿಯು ಸ್ಥಿರವಲ್ಲ''
''ಮಡಕೆಯನು ಮಾಡುವರೆ ಮಣ್ಣೆಮೊದಲು, ಬ್ರಹ್ಮಾಂಡವನು
ಮಾಡುವರೆ ಪಂಚಭೂತವೆ ಮೊದಲು''
''ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ''
''ಕಳಬೇಡ ಕೊಲಬೇಡ''
''ಕರಿಘನ ಅಂಕುಶ ಕಿರಿದೆನ್ನಬಹುದೆ''
''ಕಲ್ಯಾಣವೆಂಬುದೇ ಪ್ರಣತಿಯಾಯಿತ್ತು........
ತೊಳಗಿ ಬೆಳಗಿತ್ತಯ್ಯ ಶಿವನ ಪ್ರಕಾಶ''
''ಅಜಕೋಟಿ ವರುಷದವರಲ್ಲ ಹಿರಿಯರೆ ಅಯ್ಯ''
''ಪರವಧುವ ಕಂಡರೆ ಮಹಾದೇವಿಯೆಂಬೆ''

ಹೀಗೆ ಶಿವಶರಣರ ವಚನ ಸಂಪದ ಹಲವು ಹಂತಗಳಲ್ಲಿ ಭವ್ಯಮಾನವದ ಭಾಷೆಯನ್ನು ಆಲಂಗಿಸಿದೆ. ಆದರೆ ಭವ್ಯಮಾನವ ಭಾಷೆ ಇದನ್ನಷ್ಟೆ ಅವಲಂಬಿಸಿ ಮೈ ಕೈ ತುಂಬಿಕೊಂಡಿಲ್ಲ. ವಚನಕಾರರ ಭಾಷೆಯ ಸೌಷ್ಠವಕ್ಕೆ ಹರಿಹರನ ಭಾಷೆಯ ಸೊಗಡೂ ಅಲ ಲ್ಲಿ ಸೇರಿಕೊಂಡು ಭವ್ಯಮಾನವದ ವಿಶಿಷ್ಟ ಭಾಷಾ ಶೈಲಿಯನ್ನು ರೂಪಿಸುತ್ತದೆ. ಈ ಬಗೆಯ ಕೆಲವು ಸಾಲುಗಳನ್ನಿಲ್ಲಿ ಗಮನಿಸಿರಿ-

''ಸಲಹಿದಿರಿ ಸಲಹಿದಿರಿ ಹೋಗಿ ಬಂದಹನಯ್ಯ''
''ಹರಿಯಮ್ಮ ಹರಿಯಮ್ಮ ಮುಂದು ಮುಂದಕೆ ಹರಿಯಮ್ಮ''
''ಕಲ್ಲು ಕಿವಿ ಕಲ್ಲು ಕಣ್ ಕಲ್ಲೆದೆಯ ಕಲ್‌ದೊವಲ''
''ಆಲೋಕ ಈ ಲೋಕ ಹೋಲೋಕಗಳನೆಲ್ಲ''
''ತಾಯೆ, ತವರೆ ಎಲೆಲೆ ಮಹಾದೇವಿ''
''ಎಲೆ ತಾಯೆ, ಎಲೆ ತವರೆ, ಎಲೆ ಬಯಲೆ, ಬೆಳಗೆ ಎಲೆ ನಿರಾಳವೆ''
''ನುಡಿ ನುಡಿವುದೇ ಬೇಡವೆಂದು ತಲೆ ನುಡಿಯುತಿದೆ''
''ಶೀಲವಾಕೆಯ ಶೀಲ ಚರಿತವಾಕೆಯ ಚರಿತ''
''ಮರ್ತ್ಯದ ಕರ್ತ್ತಲೆಗರ್ಥವ ತಂದ''
''ಲಿಂಗದ ನಾಡಿನ ನಾಡೋಜ ಬಂದ''

ಗುರುಚೆನ್ನಮಲ್ಲಯ್ಯ: ಪೂರ್ವ ಸಾಂಗತ್ಯ ಭಾಗವಂತೂ ಹರಿಹರನ ಭಾಷಾ ಶೈಲಿಯ ತದ್ರೂಪವೇ ಎನಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವ ಭಾಷೆಗೆ ಸಂಸ್ಕೃತ ಕವಚವೂ ಸೇರಿ ಅದನ್ನು ಭವ್ಯವಾಗಿರಿಸಿದೆ ಮುತ್ತು-ಮಣಿಸು ಪೋಣಿಸಲು ನಮ್ಮ ಹಿಂದಿನ ಕವಿಗಳು ಹಿಂಜರಿದಿರಬಹುದು ಆದರೆ ಪ್ರೊ. ಭೂಸನೂರಮಠ ಅವರು ಅದನ್ನು ಸಾಧಿಸಿ ತೋರುತ್ತಾರೆ.

''ಹೆಣೆದಿರುವ ಅದೃಶ್ಯ ರಮಣೀಯ ಜಾಲ''
''ಅಂಧೇನ ತಮಸಾವೃತವಾದ ಲೋಕದೊಳು''
''ನಿಶ್ಶೂನ್ಯ ಪ್ರಳಯಾಂಧ ದುಃಖವಾರಾಶಿ''.
''ಸರ್ವಾಣಿ ಭೂತಾನಿ ಆತ್ಮನ್ಯೆವಾನುಪಶ್ಯತಿ''
''ಸರ್ವಭೂತೇಷುಚಾತ್ಮನಂ''
''ಜಾತಸ್ಯ ಹಿ ಧ್ರುವೋ ಮೃತ್ಯು:''
''ಗಂಧವತಿ ಪೃಥಿವಿಯು ಮಹಾಪೃಥುಲವಿರಬಹುದು''
''ಒಬ್ಬಳೇ ಬೆಳಗಾಗಿ ಸತ್ತುಚಿತ್ತಾನಂದ''
''ಈಸಿದನು ಕಶ್ಚಿನ್ ಮಹಾಲಿಂಗಸಾಹಸ''
''ದುಃಖರಾಶಿ, ವಾರಾಶಿ, ವೈರರಾಶಿ, ದ್ವೇಷರಾಶಿ, ಅಧಮರಾಶಿ
ಪಾಪರಾಶಿ, ಆ ಚಂದ್ರಸೂರ್ಯತಾರಾಂಬರಂ''
''ಖಲ್ವಿದಂ ಸರ್ವಮಂಥಂಬ್ರಹ್ಮ''
''ನೈನಂ ಛಿಂದಂತಿ ಶಸ್ತ್ರಾಣಿ''
''ಯಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ''

ಈ ಬಗೆಯ ನುಡಿಗಟ್ಟುಗಳಲ್ಲದೆ ಅಸಂಖ್ಯಾತ ಸಂಸ್ಕೃತ ಶಬ್ದಗಳು ನೇರವಾಗಿ ಇಲ್ಲವೆ ತದ್ಭವವಾಗಿ ಭವ್ಯಮಾನವ ಭಾಷೆಯಲ್ಲಿ ಹಾಸುಹೊಕ್ಕಾಗಿ ಬಳಕೆಗೊಂಡಿವೆ.-

ಮಾನವಾಂತರ್ಗುಹೆ, ದಾನ-ಧರ್ಮ, ಜಪ-ತಪ, ಜ್ವಲಿಸು, ವಿರಾಟ್‌ಪುರುಷ, ಫಲ, ಶರಧಿ, ಬ್ರಹ್ಮಾಂಡ, ಸತ್‌ಚಿತ್‌ಆನಂದ, ಅತ್ಯತಿಷ್ಠದ್ದಶಾಂಗುಲ, ಕಶ್ಚಿದ್ಧೀರ, ಪ್ರಳಯ, ನಿಶ್ಶೂನ್ಯ, ಅಂಧಕಾರ, ಸಂಪ್ಲುತ, ಮಹಾಭವಿಷ್ಯಂತಿ, ಭವ್ಯಬ್ರಹ್ಮೋಜ್ವಲ.

ಸರಳಗನ್ನಡ ರಚನೆಗಳಿಗೂ ಭವ್ಯಮಾನವದಲ್ಲಿ ಕೊರತೆ ಇಲ್ಲ- ನೆರವಣಿಗೆ, ಹೊಂಬೊಗರ, ಕಣ್‌ಬೊಲ, ಚೂಪು, ತೆಳುಗಲ್ಲಗನ್ನಡಿ, ಅಯ್ಯೋಹೋದ್ಯಾ, ಎಂಜಲಿಸಿದಳು ಚಂಪೆ, ಹೋದನೆಲ್ಲಿಗೆ- ಮತ್ತೆ ಬರಲೆಲ್ಲಿಗೆ, ಗೆಲಬಹುದು ದೇವರನು ಜಗವ ಗೆಲಲಾಗದು. ನೀರುಗಾಯವ ಮಾಡಿ ಕಿತ್ತು ಬೀಸಾಡಿದರೆ, ಯಾರು ಬಲ್ಲರು ಅಣ್ಣಾ, ತಂದೆ ಬಲ್ಲಾ? ಕೊಡಿ ನಮ್ಮ ಕೊಡಲಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲಿಂದ ಕೊಡಲಿ! ಬೆಂಕಿ ಹತ್ತಿತು ಹಗಲು ಹೆಪ್ಪುಗಟ್ಟಿತು ರಾತ್ರಿ, ಕಳೆದುಬ್ಬಿಕೊಟ್ಟೆ ತನುವ ಚನ್ನಂಗ್ಗೆ, ಕೆರೆಯ ಕಪ್ಪೆಯ ಹವಣೆ ಸಾಗರದಪಾರ, ಏನು ಮಾಡಲಿ ತಂದೆ ದಾರಿ ಬಿಟ್ಟಿಯೆ ಇಲ್ಲ, ಕಿವುಡು ಹೋಗಿದೆಯಲ್ಲಾ ನಿನ್ನ ಉತ್ತರವೇನು? ಒದರಿದರೆ ಓ ಇಲ್ಲ.

ಭವ್ಯಮಾನವ ಭಾಷೆಯಲ್ಲಿ ಅನುಕರಣವಾಚಕಗಳೂ ಹರಿಹರನ ಭಾಷೆಯಂತೆ ಭೋರ್ಗರೆದು ಬೀಳುತ್ತವೆ- ಥರ್, ಥಗಿಲ್, ಧಿರ್, ಧಿಗಿಲ್, ಭುರ್, ಭುಗಿಲ್, ಕ್ರಾಂಕ್ರಾಂ, ಧೋಧೋ, ಚಿಂವ್ ಚಿಂವ್, ಕುಹೂ ಕುಹೂ, ಟಿಂವ್ ಟಿಂವ್, ಚಿಲಿಮಿಲಿ ಚಿಲಿಮಿಲಿಲಿ, ಥಕಥಕ. ಅನೇಕ ದ್ವಿರುಕ್ತಿಗಳ ಹಾಗೂ ಪ್ರತಿಧ್ವನಿ ಶಬ್ದಗಳ ಬಳಕೆ ಭವ್ಯಮಾನವ ಭಾಷಾ ಸೌಧಕ್ಕೆ ಚೀಪುಗಲ್ಲಾಗಿ ನಿಂತಿವೆ-
ದ್ವಿರುಕ್ತಿಗಳು : ಯುಗಮಾನ ಯುಗಮಾನ, ಶರಣಾರ್ಥಿ ಶರಣಾರ್ಥಿ, ಮುಂದಕ್ಕೆ ಮುಂದಕ್ಕೆ, ಕೆಟ್ಟಿರ್ದ ಕೆಟ್ಟಿರ್ದ, ತಾನಿಲ್ಲತಾನಿಲ್ಲ, ಇನ್ನೇನು ಇನ್ನೇನು, ನೆನೆನೆನೆದು, ಒಲಿದೊಲಿದು, ಅಹುದಹುದು, ತೇಲಾಡಿ ತೇಲಾಡಿ-
ಪ್ರತಿಧ್ವನಿತ ಶಬ್ದಗಳು : ಶಬ್ದಗಿಬ್ದ, ದಿಟಗಿಟ, ಹಕ್ಕಿವಕ್ಕಿ.
ಭವ್ಯಮಾನವ ಭಾಷೆಯಲ್ಲಿ- ಕವಿ ತನ್ನ ಕಲ್ಪನೆಯನ್ನು ಸಾಕಾರಗೊಳಿಸ-ಲೋಸುಗ ಹೆಣೆದ ಕೆಲವು ವಿಶಿಷ್ಟ ಪದಗಳು ಪದಸಮುಚ್ಚಯಗಳು, ನುಡಿಗಟ್ಟುಗಳು, ಗಮನಾರ್ಹವಾಗಿವೆ-

ವಾ:ಮಹಾದೇವಿ, ಮಹಾಭವಿಷ್ಯಂತಿ,ನೆರವಣಿಗೆ, ಮೊದಲುಗರ್ತಿ, ಮಾನವಾಂತರ್ಗುಹೆ, ಗೋರಖಬಲೆ, ನಿಜಕ್ಕೆಚ್ಚರ, ಲಿಂಗನಾಡಿನ ನಾಡೋಜ, ಕಿವುಡುವೋಗು, ಕೋಟಿಹರವಿನ ಬಯಲು,

"ಕೈಗಡಗ ಕಾಂಬುದಕ್ಕೆ ಕನ್ನಡಿಯ ಹಂಗೇಕೆ?"
"ಕತ್ತಲೆಯ ಪುತ್ಥಳಿಗೆ ಬೆಳಗುಗಂಡ ಮಾಂಬಣ್ಣ"
"ಧರೆಯೊಂದು ಕನ್ನೆಯಾಟದ ಸಣ್ಣ ಕೈಸೆಂಡು"
"ತಿಲವ ಹಳಿದರೆ ತೈಲ- ಫಲವ ಹಳಿದರೆ ರಸ"
"ಲೋಕದ ಡೊಂಕ ಲೋಕಕ್ಕೆ ಸಸಿನ"
"ಮಾನವನ ಮೂಗೊಂದು ಸರ್ವಾಧಿಕಾರಿಯೇ"
"ಮಾಳಿಗೆಯ ಹವಣು ಹಲ್ಲಿನಾ ನಿಚ್ಚಣಿಕೆ
ಗಗನಗೆತ್ತರಕಿಡುವ ಗರುವರಾರು"
"ಉರಿಯ ಶರಧಿಯ ಮೇಲೆ ಅರಗಿನಾ ಬೊಂಬೆಗಳು"
"ಬೆಂಚೆ ಬಯಸಿದರುಂಟೆ ಸಾಗರದ ವಿಸ್ತಾರ"
"ಸುಖವತ್ತುದೇ ದುಃಖ ದುಃಖನಕ್ಕುದೆ ಸುಖ"
"ಮಾನವನ ಮಾನುಷದ ಕನ್ನಡವ ಕಳೆದು"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭವ್ಯಮಾನವದಲ್ಲಿ ಬೆಡಗಿನ ಭಾಷೆಯೂ ಬಳಕೆಗೊಳ್ಳದೆ ಹೋಗಿಲ್ಲ. ಭವ್ಯತೆಗೆ ಅದು ಕಳಸವಿಟ್ಟಂತಾಗಿದೆ--

"ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ"
ತಾನಿಟ್ಟ ಬೇತಾಳ ತನ್ನನ್ನೇ ನುಂಗಿತ್ತು".
ತಳವಿಲ್ಲ ಬುಡವಿಲ್ಲ ಹಗೆಯಕ್ಕೆ ಹಾಕಿದರೆ
ಬರಿದಾಗಿ ಬರಿದಾಗಿ ಬಾಯ್ದೆರೆದು 'ಆ' ಎಂದು
ಹಸಿದ ಹೊಟ್ಟೆಯ ಬಾಯಿ ಹಿಗ್ಗಿ ಅಗಲಾಯಿತ್ತು.....'

"ಪ್ರಾಣಯಾಟದ ಕತೆಗೆ ಬಯಲು ಅತ್ತಿತ್ತು"
"ಕತ್ತಲೆಗೆ ನಕ್ಷತ್ರ ನಂದಿದರೆ ಬೆರಗಾದೆ"
"ನಾನು-ಮಾನವ ಸತ್ತು ಬೆಳಗೆದ್ದು ಬದುಕಿದರೆ"
"ಬೆಳಗಿತ್ತು ಭವ್ಯ, ಅತ್ತಿತ್ತು ಕತ್ತಲೆ"
"ಕತ್ತಲೆಗೆ ಕುಣಿದಳು ವಲ್ಲಭನನೊಲಿಸಲಿಕೆ"
"ಮರಣಮಡಿದವು"-

ಭವ್ಯಮಾನವದಲ್ಲಿ-
ಹಗಲು, ರಾತ್ರಿ, ಕತ್ತಲೆ, ಬೆಳಕು, ಬಯಲು, ಸಾಸುವೆ, ಸಾಗರ, ನಾನು, ಲೋಕ, ಬೆಳಗು, ಮಾನವ, ಅಗಲ, ರತಿ, ನಿಚ್ಚಣಿಕೆ ಇವೇ ಮುಂತಾದ ಪದಗಳು ಧ್ವನ್ಯಾರ್ಥದಲ್ಲಿ, ಬೆಡಗಿನೋಪಾದಿಯಲ್ಲಿ ಬಳಕೆಗೊಂಡಿವೆ. ಆಯಾ 'ಸಂದರ್ಭ'-ಗಳಲ್ಲಿ ಇಂಥ ಪದಗಳು ವಿಶಿಷ್ಟಾರ್ಥಗಳನ್ನು ನೀಡುವುದರ ಮೂಲಕ ಇಡೀ ಕಾವ್ಯಭಾಷೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿವೆ-
ಜನಪದ ಭಾಷೆಯ ತುಣುಕುಗಳೂ ಇಣುಕಿರುವುದನ್ನಿಲ್ಲಿ ಕಾಣಬಹುದು.

"ಇವನ ಹೆಣ ಸಿಂಗಾರವಾಗಲಿ"
"ಸಿದಿಗೆಯೊಳಗಿಡಲಿವನ ಸುಡುಗಾಡಿಗಿಕ್ಕಲಿ"

ಹರಿದಾಸರ ಪ್ರಸಿದ್ಧ ಹಾಡುಗಳ ಪ್ರಭಾವವನ್ನೂ ಕೆಲವೆಡೆಗಳಲ್ಲಿ ಗುರುತಿಸಬಹುದು-

"ಗುರುಬಂದ ಗುರುಬಂದ ಗುರುರಾಯ ಬಂದ
ಗುರುಬಂದ ರಮಣೀ ಗುರುರಾಯ ಬಂದ"

"ಬಸವಣ್ಣ ಬಂದ ನೆಲದೊಳಗೆ ನಿಂದ
ಮಾನವನ ಕುಲವತ್ತಲಿಕೆ ದಿವ್ಯಕ್ಕೆ
ನಿತ್ಯಕ್ಕೆ ನಿಚ್ಚಣಿಕೆಯಾಗಿ ತಾ ನಿಂದ
ಬಸವಣ್ಣ ಬಂದ........"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನು ಕೆಲವೆಡೆ ಮಾತ್ರ ಬಂದಿರುವ ಭವ್ಯಮಾನವದ ಗದ್ಯ ಭಾಷೆಯ ಸೌಷ್ಠವದ ರೀತಿಯೇ ಇನ್ನೊಂದು ಬಗೆಯದು. ಎಷ್ಟೋ ಸಲ ಕ್ರಿಯಾಪದಗಳೇ ಇಲ್ಲದ ಚಿಕ್ಕಚಿಕ್ಕ ವಾಕ್ಯಗಳು ಸಂಸ್ಕೃತ ಭೂಯಿಷ್ಠ ಶೈಲಿ- ಇದರ ಮುಖ್ಯ ವೈಶಿಷ್ಟ್ಯಗಳು.

''ವಸಂತದ ಪ್ರಾತಃಯೌವನೋದಯ. ಶ್ರೀಶೈಲಪರ್ವತ. ಬಯಲ ವಿಸ್ತಾರವನ್ನು ಗಗನದ ಔನ್ನತ್ಯವನ್ನೂ ಆಳೆವಂತಿರುವ ಆ ಪರ್ವತದ ಬೃಹದ್ದೇಹವನ್ನು ವರ್ಣಸೌಂದರ್ಯದಿಂದ ಸಿಂಗರಿಸುವ ನಿರ್ಝರಾನಂದದಲ್ಲಿ ನಲಿಯುತ್ತಿದ್ದಾಳೆ ಬನದೇವಿ''

''ಕಲ್ಯಾಣ ಪಟ್ಟಣ. ಶರಣರು ಅನುಭಾವಗೋಷ್ಠಿಯಲ್ಲಿರ್ದ ಅನುಭಾವಮಂಟಪ'. .... ನಿಜದರಿವು ಕಂದೆರವಿಯಾದ ಅನುಭಾವ ದೃಷ್ಟಿ''.

ಭವ್ಯಮಾನವದ ಕಾವ್ಯಭಾಷೆ- ಪಂಪನ ಗಾಂಭೀರ್ಯ, ಶರಣರ ಸರಳತೆ, ಹರಿಹರನ ಓಜ ಹರಿದಾಸರ ಗೇಯತೆ, ಕುಮಾರವ್ಯಾಸನ ದೇಸಿ, ರತ್ನಾಕರ ವರ್ಣಿಯ ಲಾಲಿತ್ಯ- ಇವುಗಳನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಯಾವುದು, ಹೇಗೆ, ಎಷ್ಟು ಬೇಕೋ ಅಷ್ಟನ್ನು ತದ್ರೂಪಿಯೆನಿಸಿಯೂ ಎನಿಸದಂತೆ ಪಾಕಗೊಳಿಸಿಕೊಂಡು ಹೊಸ ಕಾವ್ಯಭಾಷೆಯ ಶೈಲಿಯಾಗಿ ಹೊರ ಹೊಮ್ಮಿದೆ. ಇದರಲ್ಲಿ ಸುಪ್ರಭಾತವಿದೆ. ಪ್ರಾರ್ಥನೆ ಇದೆ, ಉಪದೇಶವಿದೆ. ಭಾವಗೀತೆ ಇದೆ, ಗದ್ಯವಿದೆ, ರಗಳೆ ಇದೆ, ವಚನಗಳಿವೆ, ದಾಸರ ಹಾಡುಗಳಿವೆ, ರಾಮಾಯಣ ಮಹಾಭಾರತಗಳಿವೆ- ಒಟ್ಟಿನಲ್ಲಿ ಮಾನವನು ಕಂಡ ಸತ್ಯಗಳ ಹಲವು ಮುಖಗಳಿವೆ. ಆಯಾ ಸತ್ಯನಿರೂಪಣಗೆ ಬೇಕಾಗುವ ಭಾಷೆಯನ್ನು ಸಂದರ್ಭಕ್ಕೆ ತಕ್ಕುದಾದ ರೀತಿಯಲ್ಲಿ ಭೂಸನೂರಮಠರು ಎರಕಹೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ.

ಭೂಸನೂರಮಠ ಅವರು ತಮ್ಮ ಕಾವ್ಯ ಶರೀರಕ್ಕೆ ಬಳಸುವ ಭಾಷೆಯ ಕುರಿತು ಗಂಭೀರ ಚಿಂತನೆ ಮಾಡಿದಂತಿಲ್ಲ (ಈ ಮಾತನ್ನು ಈ ಮೊದಲೇ ಸೂಚಿಸಿದ್ದೇವೆ) ಆದರೂ ಓತಪ್ರೋತವಾಗಿ ಸಹಜವೆಂಬಂತೆ ಭಾಷೆ ಮೂಡಿ ಬಂದಿದೆ. ತಮ್ಮ ಭಾವಾಭಿವ್ಯಕ್ತಿಗೆ ಭಾಷೆ ಅಡ್ಡಿಯೆನಿಸುವುದೇ ಇಲ್ಲ. ಆದರೂ ಭಾಷೆಯ ಮೂಲಕ ಎಷ್ಟು ಹೇಳಿದರೂ ಮಾನವನ ಕರ್ಮಕಥೆ ಮುಗಿಯಬಹುದೇ? ಎಂಬುದು ಪ್ರೊ. ಭೂಸನೂರಮಠ ಅವರ ಪ್ರಶ್ನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಯಾವ ಭಾಷೆಯು ನುಡಿದು ಏನ ಬಣ್ಣಿಸಬಹುದು?
ಮೂಡಿ ನಾಲಗೆ- ಬಯಲು ನುಡಿ ನುಡಿದು ಹೇಳಿದರ
ಮಾನವನ ಕರ್ಮಕಥೆ ಮುಗಿಯಬಹುದೇ ತಂದೆ?''

ಇಷ್ಟಾದರೂ ತನ್ನ ಭಾಷೆಯಲ್ಲಿ ತನ್ನ ಭಾವವನ್ನು ಕವಿ ಹೇಳಲೇ ಬೇಕು, ಹೇಳಿಯೇ ಹೇಳುತ್ತಾನೆ. ತನ್ನ ಕಾವ್ಯನುಭವದ ನವೀನ ಲೋಕವನ್ನೇ ಸೃಷ್ಟಿಗೈದು ಆದರಿಂದಲೇ ಸಂಪೂರ್ಣ ಸಂತೃಪ್ತಿಯನ್ನು ಪಡೆದು ಧನ್ಯನಾಗುತ್ತಾನೆ. ಪ್ರೊ. ಭೂಸನೂರಮಠರ ಮಾತೂ ಇದನ್ನೇ ಸಮರ್ಥಿಸುತ್ತದೆ-

''ತಾನೆಂಬ ಕವಿಯೆಂಬ ಎರಡಳಿದು ಕಾವ್ಯಾನುಭವಲೋಕ ಸೃಷ್ಟಿ
ಮಾನವನ ಎದೆಯೊಳಗೆ ಸೃಷ್ಟಿಯಾದರ ಮತ್ತೆ
ಮಾನವನ ಕುಲಭಾಗ್ಯ ತೆರೆಯಿತ್ತು ತೆರೆಯಿತ್ತು
ಮಾನವ ಹೃದಯಕ್ಕೆ ನಿರ್ವಾಣ ಸುಖವಾಯ್ತು......''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಮಾನವ' ಮಹಾಸಾಗರ - 'ಭವ್ಯಮಾನವ'

ಚಂದ್ರಕಾಂತ ಕುಸನೂರ

ಆಧುನಿಕ ಮಹಾಕಾವ್ಯದ ಪರಂಪರೆಯಲ್ಲಿ ಪ್ರೊ. ಸಂ. ಶಿ. ಭೂಸನೂರಮಠ ಅವರ 'ಭವ್ಯಮಾನವ' ಒಂದು ಮಹಾಕಾವ್ಯ. ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿದರೆ, ಇದು ಮಹಾಕಾವ್ಯದ ಎಲ್ಲ ಗುಣ- ಲಕ್ಷಣಗಳನ್ನೂ ಹೊಂದಿದ ಕಾವ್ಯವಲ್ಲ. ಆದರೂ ನಿರೂಪಣಾ ಪದ್ಧತಿ ಮತ್ತು ಶೈಲಿಗತ ಸಾಮಿಪ್ಯದಿಂದ ಇದು ಮಹಾಕಾವ್ಯದ ಚೌಕಟ್ಟಿನಲ್ಲಿ ಸೇರಬಹುದಾಗಿದೆ.

ಮಾನವೀಯ ಮೌಲ್ಯಗಳನ್ನು ಮತ್ತೊಮ್ಮೆ ಪ್ರತಿಷ್ಠಾಪಿಸಲು, ಬ್ರಹ್ಮಾಂಡದ ಆಗು-ಹೋಗುಗಳ ಕೇಂದ್ರದಲ್ಲಿ ಮಾನವನನ್ನು ತಂದು ನಿಲ್ಲಿಸಲು, ಮಾನವನ ಮುಕ್ತ ಮತ್ತು ಸ್ವತಂತ್ರ ಅಸ್ತಿತ್ವವನ್ನು ಗುರುತಿಸಲು, ಭವ್ಯಮಾನವದಲ್ಲಿ ಪ್ರಯತ್ನ ಮಾಡಲಾಗಿದೆ.

ಈ ಕಾವ್ಯದಲ್ಲಿ ಬರುವ ಪಾತ್ರಗಳು, ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿದ್ದರೂ, ಇಲ್ಲಿ ಆಯಾ ವಲಯದಿಂದ ಹೊರಬಂದು ನಿಂತು, ಕೇವಲ ಮಾನವರಾಗಿ ನಿಂತಿರುವದು ಮಹತ್ವದ ವಿಷಯವೆಂದೇ ಹೇಳಬಹುದು.

ಬೃಹದಾಕಾರದ ಮಾನವ ಸಮಾಜದಲ್ಲಿ, ಆದಿ- ಅಂತ್ಯವಿಲ್ಲದ ಕಾಲ ಪ್ರವಾಹದಲ್ಲಿ ವ್ಯಕ್ತಿ-ಗಳನ್ನು ಗುರುತಿಸುವದು ಸಾಧ್ಯ, ಆದರೆ, ಮಾನವ ಕುಲದಲ್ಲಿ 'ಮಾನವ'ನನ್ನು ಗುರುತಿಸುವುದು ತುಂಬ ಕಷ್ಟದ ಕೆಲಸವೇ ಸರಿ. ಎಲ್ಲ ಉಪಾಧಿಗಳನ್ನು ಕಳಚಿ ಕೇವಲ ಮಾನವನಾಗಿ ಉಳಿಸಿಕೊಳ್ಳುವದು, ಸಹಜ ಮತ್ತು ಸುಲಭವಾದಂಥ ಮಾತಲ್ಲ. ಸಮಾಜದಲ್ಲಿ ಇಂಥವರು ಇರಬಹುದೇ? ಎಂಬ ಸಂಶಯ ಬರುವದು ಸಾಧ್ಯ. ಆದರೆ, ತಮ್ಮ ಬದುಕಿನಿಂದ ಹಾಗಿರುವುದು ಸಾಧ್ಯ ಎಂದು ತೋರಿಸಿದ, ಗಂಡು- ಹೆಣ್ಣಿನ ವೃತ್ತಾಂತವನ್ನು ಈ ಮಹಾಕಾವ್ಯದಲ್ಲಿ ನೋಡಬಹುದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' ಯಾವ ಮತ ಮತ್ತು ಸಂಪ್ರದಾಯಕ್ಕೆ ಬದ್ಧವಾಗದ ಕಾವ್ಯ. ಇಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳು, ಒಂದು ವಿಚಾರಧಾರೆಯನ್ನು ಪ್ರತಿಪಾದಿಸುವಂತೆ ಕಾಣಿಸುವದು ಕೇವಲ ಆಕಸ್ಮಿಕವೇ ಹೊರತು, ಉದ್ದೇಶ ಪೂರ್ವಕವಲ್ಲ. ಸಿದ್ಧ ಕಥಾವಸ್ತು ಮತ್ತು, ಪರಂಪರಾಗತ ಸಿದ್ಧಾಂತಗಳನ್ನು ಮತ್ತೆ ಮತ್ತೆ, ಸಾಹಿತ್ಯದ ಮಾಧ್ಯಮದಿಂದ ಪ್ರಕಟಪಡಿಸುವಲ್ಲಿ ಅಷ್ಟೊಂದು ಕಷ್ಟವಾಗುವದಿಲ್ಲ, ಆಧರೆ, ಕ್ಷಿತಿಜದ ಅಂಚಿನವರೆಗೆ ಹೋಗಿಬರುವ ಆಕಾಂಕ್ಷೆಯ ವಿಚಾರಗಳನ್ನು ಕಾವ್ಯದ ಮುಖಾಂತರ ಪ್ರಸ್ತಾಪಿಸುವದು ತುಂಬ ಕಷ್ಟದ ಕೆಲಸ. ಆದರೆ ಭೂಸನೂರಮಠ ಅವರ ಚಿಂತನೆಯ ಪ್ರಖರತೆ, ಬಾನಿನೆತ್ತರಕ್ಕೆ ಮತ್ತು ಕ್ಷಿತಿಜದ ವಿಸ್ತಾರಕ್ಕೆ ತಲುಪುವ ಶಕ್ತಿಯನ್ನು ಪಡೆದಿದ್ದು, ತುಂಬ ಅಚ್ಚರಿಯನ್ನು ಹುಟ್ಟಿಸುವಂಥ ವಿಷಯವೆಂದೇ ಹೇಳಬೇಕು.

'ಮಾನವನೊಳಗೆ ಪ್ರವೇಶ- ನಿರ್ಮೊಡನೆ' ಎಂಬ ಮೊದಲ ಮಾತಿನಲ್ಲಿ ಭೂಸನೂರಮಠರು 1957 ರ ಸಾಹಿತ್ಯ ಸಮ್ಮೇಳನದ ನೆನಪು ಮಾಡಿಕೊಂಡಿದ್ದಾರೆ. ವಿಚಾರ ಸಂಕಿರಣದ ಅಲ್ಲಿನ ವಿಷಯ, ''ಅಧ್ಯಾತ್ಮ ಕಾವ್ಯವಾಗಬಲ್ಲುದೆ?'' ಎಂದಿತ್ತೆಂದು ಹೇಳಿದ್ದಾರೆ. ಹಾಗೆ ನೋಡಿದರೆ, ಇಡೀ ಬ್ರಹ್ಮಾಂಡ, ಸಕಲಚರಾಚರವಸ್ತು, ದೃಶ್ಯ- ಅದೃಶ್ಯ ಅಸ್ತಿತ್ವ, ಎಲ್ಲವೂ ಪರಮಾತ್ಮನ ಕಾವ್ಯವೆಂದೇ ಹೇಳಬಹುದು- ಮತ್ತು ಕಾವ್ಯ ಅಥವಾ ಕಲೆಯ ಉದ್ದೇಶವೇ ಅಧ್ಯಾತ್ಮ.

ಅಂಟೋನ್ ಚೆಕಾವ್ ಹೇಳುತ್ತಾರೆ - Everything about a person must be beautiful; his face, his clothes, his soul and his thouhts''- ಹೀಗಾಗಿ ಸಾಹಿತ್ಯದ ಉದ್ದೇಶ ಕೇವಲ ಭೌತಿಕ ಆನಂದಕ್ಕಾಗಿ ಅಲ್ಲ ಅದು ಇರುವದೇ ಆಧ್ಯಾತ್ಮಿಕ ಆನಂದಕ್ಕಾಗಿ-

The concept of the aesthetic culture of the individual must not, therefore, be restricted to the externals of human life, such as possessions and behaviour etc, although these are extremely important for the aesthetic culture of man and society as a whole, the true aesthetic culture of the individual is to be found only in the dialectical unity of external beauty with beauty of soul, human is, whole thoughts and actions''- A. A. Bazhenova. ಎಂದು ತಮ್ಮೊಂದು ಲೇಖನದಲ್ಲಿ ಬರೆದಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನದ ಸಮಗ್ರ ಸೌಂದರ್ಯವನ್ನು ಅರ್ಥಮಾಡಿಕೊಂಡು, ಆತ್ಮಸಾತ್ ಮಾಡಿಕೊಂಡು ತಮ್ಮ ಕೃತಿಯ ಮುಖಾಂತರ ಸಹೃದಯರಿಗೆ ನೀಡುವ ಪ್ರಾಮಾಣಿಕ ಪ್ರಯತ್ನ ಶ್ರೀ ಭೂಸನೂರಮಠರು ತಮ್ಮ 'ಭವ್ಯಮಾನವ' ದಲ್ಲಿ ಮಾಡಿದ್ದಾರೆ. ಈ ದೃಷ್ಟಿಯಿಂದ ಸಮ್ಮೇಳನ ವಿಷಯ 'ಆಧ್ಯಾತ್ಮ' ಆಗಿದ್ದರೂ, ಅಧ್ಯಾತ್ಮ ಬದುಕಿನಿಂದ ಹೊರತಿಲ್ಲೆಂದು ಬದುಕು, ಕಾವ್ಯದಿಂದ ಹೊರತಿಲ್ಲವೆಂದು, ತಿಳಿದು, ಆ ನೆಟ್ಟಿನಲ್ಲಿಯೇ ಬದುಕಿದ ಭೂಸನೂರಮಠರ, ಈ ಕಾವ್ಯ ಮನುಷ್ಯನ ಬದುಕಿನತ್ತ ಗಮನ ಹರಿಸಿದೆ. ಅಂದರೆ ಪರ್ಯಾಯದಿಂದ ಅಧ್ಯಾತ್ಮದತ್ತ ನೇರ ಮುಖ ಮಾಡಿ ನಿಂತಿದೆ. ಇರಲಿ.

ಕಥೆಯ ಪ್ರಾರಂಭವೇ ತುಂಬ ನಾಟಕೀಯವಾಗಿದೆ. ಈ ನಾಟಕೀಯ ಶೈಲಿಯಿಂದ ಕಾವ್ಯಕ್ಕೆ ರಮ್ಯತೆ ಉಂಟಾಗಿದೆ- ಗುರುಚೆನ್ನಮಲ್ಲಯ್ಯ ಮತ್ತು ಮಹಾದೇವಿ ಅಕ್ಕ ಇಬ್ಬರೂ ಮಹಾಜ್ಞಾನಿಗಳೇ. ಆದರೆ, ಗುರುಚೆನ್ನಮಲ್ಲಯ್ಯನ ಜೀವನದಲ್ಲಿ ಸಂಭವಿಸಿದ ಘಟನೆಗಳು, ಅವನನ್ನು ದಿಗ್‌ಭ್ರಾಂತಗೊಳಿಸಿವೆ. ಈ ಸ್ಥಿತಿಯಿಂದಲೇ ಗುರುಚೆನ್ನಮಲ್ಲಯ್ಯನಲ್ಲಿ ತನಗೆ ಗೊತ್ತಾಗದಂತೆಯೇ ಸಮಷ್ಟಿ ಪ್ರಜ್ಞೆ ಮೂಡಿದ್ದು ತುಂಬ ಮಹತ್ವದ ವಿಷಯ. ಈ ಪ್ರಜ್ಞೆ ಅವರಲ್ಲಿ ಮೂಡುವದಕ್ಕೆ ಮಹಾದೇವಿ ಅಕ್ಕನ ಅತಿಶಯ ವೈರಾಗ್ಯವೇ ಕಾರಣವೆಂದು ಅಪರೋಕ್ಷವಾಗಿ, ಕವಿ ತೋರಿಸಿಕೊಡುತ್ತಾರೆ. ವಿಶ್ವದ ತುಂಬೆಲ್ಲ ಕತ್ತಲೆಯನ್ನು ಕಂಡ ಗುರುಚೆನ್ನಮಲ್ಲಯ್ಯ ಅದನ್ನು ಎದುರಿಸುವ ಮಾರ್ಗವನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. ಎಲ್ಲವನ್ನು ತ್ಯಜಿಸಿ, ಅಂದರೆ ಸ್ವ ಮತ್ತು ಪರಗಳಿಂದ ಮುಕ್ತಳಾಗಿ- ನಿಶ್ಚಿಂತ ಸಮಾಧಿಯಲ್ಲಿ, ಕೇವಲ, ಬೆಳಕಿನಲ್ಲಿ ತೇಲಾಡುತ್ತಿದ್ದ ಅಕ್ಕ ಕತ್ತಲೆಯ ಕಡೆಗೆ ಬೆನ್ನು ಮಾಡುವುದನ್ನು ಬಿಟ್ಟು ಮುಖ ಮಾಡಿ, ಅರುವಿನ ಅಸೀಮ ಸಾಹಸದಿಂದ, ದುಃಖ, ನೋವು, ಸಾವುಗಳಂಥ ಕತ್ತಲೆಯ ಕಡೆಗೆ ಕಣ್ತೆರೆದು ನೋಡುವ ಸಾಹಸ ಅಕ್ಕ ಮಾಡುತ್ತಾಳೆ. ಇಲ್ಲಿ ವ್ಯಷ್ಟಿ ಸಮಷ್ಟಿಯ ದ್ವಂದ್ವದಿಂದ ಅಕ್ಕ ಮುಕ್ತಳಾಗುತ್ತಾಳೆ. ಇದರಿಂದ ಇನ್ನಷ್ಟು ನಿಚ್ಚಳ ಆಗುತ್ತಾಳೆ.

ದಿವ್ಯಜ್ಞಾನಿಗಳಾದ ಅಲ್ಲಮಪ್ರಭುಗಳು ಅಕ್ಕನನ್ನು ನೋಡಿದ ಕೂಡಲೇ, ಅವಳ ಅಂತರಂಗ ಬಹಿರಂಗವನ್ನು ತಿಳಿದುಕೊಂಡರು.

> ''ತನ್ನ ತಾನರಿದು ತನ್ನಾನಂದದೊಳು ಮುಳುಗಿ
> ಎಲ್ಲ ತಾನಾಗಿರುವ ದಿವ್ಯದೀಪ್ತಿ
> ಕತ್ತಲೆಯ ಮುಸುಕವನು ಕಳೆದಿಟ್ಟು ಬೆಳಗುತಿದೆ''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಮನಸ್ಸಿನಲ್ಲಿಯೇ ಅಂದುಕೊಂಡು--
''ಧನ್ಯ ಕಲ್ಯಾಣ ನೀ ಧನ್ಯ ಬಸವಣ್ಣ'' ಎಂದು ಅರ್ಥಮಾಡಿಕೊಳ್ಳುತ್ತಾರೆ. ಅಂದರೆ ಮೊದಲನೇ ಕಾಂಡದಲ್ಲಿಯೇ- ಬಸವಣ್ಣನ ಮಹತ್ವವನ್ನು ತೋರಿಸುತ್ತಲೆ. ಅಕ್ಕನ ಮಹತ್ವವನ್ನು, ಅವಳ ಹಿರಿಮೆಯನ್ನು ಮತ್ತು ಅವಳ ದಿವ್ಯತ್ವವನ್ನು ಸುಭದ್ರಗೊಳಿಸುತ್ತಾರೆ. ಇಲ್ಲಿ ಭೂಸನೂರಮಠರು ತಮ್ಮ ಕೇಂದ್ರದಲ್ಲಿರಬೇಕಾದ ಪಾತ್ರಗಳನ್ನು, ಓದುಗರ ಮನಸ್ಸಿನ ಮೇಲೆ ಭಿಂಬಿಸುವ ಪ್ರಯತ್ನ ಮಾಡುತ್ತಾರೆ.

ಪೂರ್ವ ಪೀಠಿಕೆಯಲ್ಲಿ ದೇವತಾ, ಸರಸ್ವತಿ, ಮುಂತಾದ ದೇವತೆಗಳ ಸ್ತುತಿ, ಸಾಂಪ್ರದಾಯಿಕವಾಗಿದ್ದು ಅಲ್ಲಿ ಕಲಾತ್ಮಕತೆಯ ಅಭಾವ ಕಾಣಸುತ್ತದೆ. ಕಲ್ಪನೆ ಸೀಮಿತವಾದಂತೆ ದೃಷ್ಟಿಗೋಚರವಾಗುತ್ತದೆ. ಆದರೆ ಸ್ತುತಿಪ್ರಾರ್ಥನೆಯಲ್ಲಿ ತಮ್ಮ ಕಾವ್ಯಕ್ಕೆ ಸತ್ವವನ್ನೇ ಕವಿ ಬಯಸುತ್ತಾರೆ. ಇದು ಸ್ವಾಭಾವಿಕವೆಂದೇ ಭಾವಿಸಬಹುದು. ತಮ್ಮ ಕಾವ್ಯಕ್ಕೆ ಭಾವ, ಧ್ವನಿ, ಅರ್ಥ, ಅಧ್ಯಾತ್ಮ ಚೆಲುವು ಬರಲೆಂದು ಬೇಡಿಕೊಳ್ಳುವದರಲ್ಲಿ ಮುಂಡೆ ಮೂಡಿಬರುವ ಕಾವ್ಯ ವಸ್ತುವಿನಲ್ಲಿ ಇದೆಲ್ಲ ನೋಡಬಹುದೆಂಬ ಸಂಕೇತವನ್ನು ನೀಡುತ್ತಾರೆಂದು ಅನ್ನಿಸುತ್ತದೆ. ಜಗದಗಲ- ಮುಗಿಲಗಲ ಮುಂತಾದ ಶರಣ ಶಬ್ದಗಳನ್ನು ಬಳಸುತ್ತ ಸಾಂದರ್ಭಿಕವಾಗಿ ಕಥೆಯ ನೆಲಗಟ್ಟನ್ನು ಗುರುತಿಸುತ್ತ ಹೋಗುವ ಜಾಣ್ಮೆಯನ್ನು ಕವಿ ತೋರಿಸಿದ್ದಾರೆ.

ಸ್ವಯಂ ಸ್ಫೂರ್ತವಾಗಿ ಬಂದ 'ಎಲೆ ಭವ್ಯವೇ' ಎಂಬ ಸಾಲಿನಿಂದಲೇ ಬಹುಶಃ ಕವಿಗೆ 'ಭವ್ಯಮಾನವ' ಎಂಬ ಹೆಸರು ಹೊಳೆದಿರಬೇಕೆಂಬ ಸಂದೇಹವೂ ಓದುಗರ ಮನಸ್ಸಿನಲ್ಲಿ ಮೂಡುತ್ತದೆ.

ಕವಿಯ ಅಂತರಂಗದಲ್ಲಿ ಅವರಿಗೆ ತಿಳಿಯದಂತೆಯೇ ರೂಪುಗೊಳ್ಳುತ್ತಿರುವ ಭವ್ಯ-ಮಾನವನ ಅವತಾರ ಅವರಿಗೆ ಭಾಷೆಯನ್ನೂ ಸೂಚಿಸುತ್ತಿರಬೇಕಲ್ಲವೆ? ಚಿಂತನ, ಮನನ, ಅಧ್ಯಯನ ಮತ್ತು ಅವಲೋಕನದಿಂದ, ಕವಿಗೆ ತಾನು ತಾನಾಗಿಯೇ ಸಾಲುಗಳು ಹೊಳೆದಿರಬೇಕೆಂದು ಅನ್ನಿಸುತ್ತದೆ. ಕವಿಯ ಅತೀಂದ್ರಿಯ ಮಾನಸ ಪಕ್ಕಾಗಿ, 'ಭವ್ಯಮಾನವ'ನ ಜನ್ಮಕ್ಕೆ ನಾಂದಿ ಹಾಡಿದಂತಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕಲ ಲೋಕದ ಕಲ್ಯಾಣಕ್ಕಾಗಿಯೇ ಶರಣ- ಶರಣೆಯರು ಜನ್ಮವೆತ್ತಿರಬಹುದಲ್ಲವೆ? ಆದ್ದರಿಂದಲೇ ಕಥಾಪ್ರವೇಶವೇ ಕಲ್ಯಾಣಕಾಂಡದಿಂದ ಪ್ರಾರಂಭವಾಗುವದು ಸಹಜ.

ಕೊರೆದರೂ ಸಿರಿಗಂಧ ತನ್ನ ಪರಿಮಳ ಬಿಡುವದಿಲ್ಲ. ಸಿರಿಗಂಧದ ಸ್ವಭಾವ ಮತ್ತು ಧರ್ಮವೇ ಪರಿಮಳ ಸೂಸುವದಾಗಿದ್ದರಿಂದ, ಯಾವ ಸ್ಥಿತಿ-ಪರಿಸ್ಥಿತಿಯಲ್ಲಿಯೂ ಸಿರಿಗಂಧ ತನ್ನ ಸ್ವಭಾವ ತ್ಯಜಿಸುವದಿಲ್ಲ.

ಕೊರಕೊರೆದು ನೋಡುವೆನು
ನಿನ್ನಂತರಂಗವನು ಹಿಳಿ ಹಿಳಿದು ನೋಡುವೆನು''

ಎಂದು ಪರೀಕ್ಷೆಗೆ ಒಡ್ಡುವ ಕಾರಣವೇನು? ಪ್ರಭುದೇವರು ಮೊದಲೇ ತಿಳಿದುಕೊಂಡಿದ್ದರು. ಮಹಾದೇವಿ ಅಕ್ಕನ ಯೋಗ್ಯತೆಯನ್ನು ತಾವೇ ಅನುಭವ ಮಂಟಪದಲ್ಲಿದ್ದವರ ಮುಂದೆ ಹೇಳಿದರೆ, ಒಪ್ಪುತ್ತಿರಲಿಲ್ಲವೆ? ಒಪ್ಪುತ್ತಿದ್ದರು. ಆದರೆ, ಪ್ರಭುವಿನಲ್ಲಿಯೂ ಸಾಮಾಜಿಕ ದೃಷ್ಟಿ ಎಷ್ಟೊಂದು ಉಜ್ವಲವಾಗಿತ್ತೆಂದರೆ, ತಾವು ಸಹ ನಂಬಿದ ವಿಚಾರ, ಪರೀಕ್ಷೆಗೆ ಒಳಪಡಿಸಿಯೇ ಧೃಢಪಡಿಸುತ್ತಿದ್ದರು. ಈ ಉದ್ದೇಶದಿಂದಲೇ ಅಕ್ಕ ಕೂಡ ಅವರ ಪರೀಕ್ಷೆಗೆ ಎದುರಾಗಬೇಕಾಯಿತು. ಶರಣರ ಈ ಲೋಕಾಭಿಮುಖಿ ದೃಷ್ಟಿ ತುಂಬ ಜ್ವಲಂತವಾಗಿತ್ತು. ಇದರಿಂದಲೇ ಅವರು ವಿಶ್ವವಂದ್ಯವಾಗುವ ಸಾಮರ್ಥ್ಯವನ್ನು ಪಡೆದುಕೊಂಡರು. ಇಂದಿಗೂ ಈ ಶರಣರವಾಣಿ ಪ್ರಸ್ತುತವಾಗಿದೆ. ಕಾರಣ, ಅವರು ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರಗಳನ್ನು ಸೂಚಿಸಿಲ್ಲ. ಸತ್ಯ ತಾತ್ಕಾಲಿಕ ಸತ್ಯವಾಗಿರುವದಿಲ್ಲ, ಸತ್ಯ ಸದಾಕಾಲ ಸತ್ಯವಾಗಿರುತ್ತದೆ. ಮತ್ತು ಅಸತ್ಯ ಯಾವ ಕಾಲಕ್ಕೂ ಅಸತ್ಯವಾಗಿಯೇ ಇರುತ್ತದೆ. ಶರಣರು ಸತ್ಯವನ್ನು ಪ್ರತಿಪಾದಿಸಲು ತರ್ಕವನ್ನು (ಲಾಜಿಕ) ಮುಂದೆ ಇಡುವುದಿಲ್ಲ, ಅವರು ಸತ್ಯವನ್ನು ಎತ್ತಿ ಹಿಡಿಯಲು ಕ್ರಿಯೆಯಲ್ಲಿ ತೊಡಗುತ್ತಾರೆ. ಈ ವಿಷಯವನ್ನೇ ತೋರಿಸುವ ಪ್ರಯತ್ನ 'ಭವ್ಯಮಾನವ'ದಲ್ಲಿ ಮಾಡಲಾಗಿದೆ. ಕೆಲವು ಕಡೆಗೆ ಭಾಷೆ ಪುರಾಣಶೈಲಿಗೆ ಹತ್ತಿರವಾಗಿದ್ದರೂ, ಪ್ರಜ್ಞೆ ಮಾತ್ರ ಹೊಸದೆಂದು ಗುರುತಿಸಬಹುದು. ಕವಿಗಳು ತಮ್ಮ ಭಾಷೆಯ ಬಗ್ಗೆಯೇ ''ರೋಮ್ಯಾಂಟಿಕ್'' ಆದಾಗ್ಗೆ, ಈ 'ರೀತಿ' ವಸ್ತುವಿಗೆ ಯೋಗ್ಯವಲ್ಲವೆಂದೂ ಅನ್ನಿಸುತ್ತದೆ. 'ಕತ್ತಲೆಯ ಕಾಂಡ'ದಲ್ಲಿ ಈ ತರಹದ 'ಶೈಲಿ' ಗಮನಿಸಬಹುದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮಾಂಧತಮದ ಗಂಭೀರ ದರ್ಶನ, ಬ್ರಹ್ಮಕತ್ತಲೆ, ಸುಪ್ತ- ಚೈತನ್ಯಗಳ ಅನಂತ-ಕೋಟಿವಿಲಾಸ, ವಾಯುಗಂಭೀರ ಮುಂತಾದ- ನಿರ್ಮ್ಮೊಡನೆಯಲ್ಲಿನ ಪದ ಪ್ರಯೋಗಗಳು, ಓದುಗನ ಬುದ್ಧಿಮತ್ತೆಗೆ ಸವಾಲಾಗಿ ನಿಲ್ಲುತ್ತವೆ. ಯಾವದೇ ಕೃತಿ ರಸಿಕನಿಗೆ ಸವಾಲಾಗಿ ನಿಂತರೆ, ಅಲ್ಲಿ ಆ ಕೃತಿ- ಅಥವಾ ಸನ್ನಿವೇಶ, ಅಷ್ಟರಮಟ್ಟಿಗೆ ರಸಿಕನೊಂದಿಗಿರುವ ಸಹಜ ಸಂಬಂಧವನ್ನು ಕಳಚಿಕೊಳ್ಳುತ್ತದೆ.

ಧರ್ಮ, ಜಾತಿ, ಸಂಪ್ರದಾಯ, ನಂಬಿಕೆ, ಎಲ್ಲ ತತ್ವಸಿದ್ಧಾಂತಗಳನ್ನು ಅವುಗಳ ಮಿತಿಯಲ್ಲಿಯೇ ನೋಡುವ ಭೂಸನೂರಮಠರ ಸಾಹಸ ಮೆಚ್ಚುವಂತಥದು ಎಲ್ಲರೂ ತಮ್ಮ ತಮ್ಮ ಧರ್ಮವೇ ಶ್ರೇಷ್ಠವೆಂದು, ಆ ಧರ್ಮದ ಹೆಸರಿನಲ್ಲಿ, ಬೇರೊಂದು ಧರ್ಮಿಯರ ಮೇಲೆ ಮಾಡುವ ದೌರ್ಜನ್ಯದ ಜೊತೆಗೆ, ತಮ್ಮ ಧರ್ಮದವರ ಮೇಲೆಯೂ ಅತ್ಯಾಚಾರ ಮಾಡುವಂಥ ಜನರ ಧರ್ಮವನ್ನೇ ಅತಿ ದಿಟ್ಟತನದಿಂದ ತಿರಸ್ಕರಿಸುವ ಸಾಹಸ ಭೂಸನೂರಮಠ ಅವರು ತೋರಿಸಿದ್ದಾರೆ.

ಮನುಷ್ಯನಲ್ಲಿ 'ನಾನು' ಎಂಬ ತಿಳುವಳಿಕೆ ಹುಟ್ಟಿನಿಂದ ಬರುವುದಿಲ್ಲ- 'ನಾನು' ಸಾಮಾಜಿಕ ಸಂಬಂಧಗಳನ್ನು ನಿಚ್ಚಳಗೊಳಿಸುವದಕ್ಕೆ ಮತ್ತು ಒಂದು ಸೂತ್ರಬದ್ಧ ಕ್ರಿಯೆಗೆ ಅನುಕೂಲವಾಗುವುದಕ್ಕೆ ಪ್ರಜ್ಞಾಪೂರ್ವಕ ಆಯಾತ ಮಾಡಿಕೊಂಡ, ಅಥವಾ ನಿರ್ಮಿಸಿಕೊಂಡ ಶಬ್ದ, ಈ ''ನಾನು'' ಎಂಬ ಶಬ್ದ. ವ್ಯಕ್ತಿಯ ವಿಕಾಸಕ್ಕೆ ದಾರಿ ಮಾಡಿಕೊಡುವುದರ ಜೊತೆಗೇ ಇದರ ಅತಿರೇಕದಿಂದ ಮನುಷ್ಯನಲ್ಲಿ ಅಹಂಕಾರವನ್ನು ಹುಟ್ಟಿಸಿ, ಅವರ ಪತನದ ದಾರಿಯನ್ನು ಸಿದ್ಧಗೊಳಿಸುತ್ತದೆ. ''ನಾನು'' ಮಾಡಿದ ಅವಾಂತರಗಳಿಂದ ಸಮಾಜದ ಮತ್ತು ಸೃಷ್ಟಿಯ ಸಾಂಗತ್ಯ ತಪ್ಪುತ್ತದೆ. 'ನಾನು' ವ್ಯಕ್ತಿಗೆ ಅನಿವಾರ್ಯವಾಗಿದ್ದರೂ, ವಿನಯದ ಕಕ್ಷೆಯಲ್ಲಿನ ಇದರ ಭ್ರಮಣ ಅವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ. ಈ ಮಾತು ಮಹಾದೇವಿಯಕ್ಕನ ಬಾಯಿಂದ ಈ ರೀತಿಯಾಗಿ ಬಂದಿದೆ.

ಕಾಯಕರಣಗಳೆಲ್ಲ ಮಣಿದರೇನೋ ತಂದೆ
ನಾನೆಂಬ ಭಾವ ತಾ ಮಿದುವಾಗಿ ಮಣಿಯದಿರೆ?
'ನಾನು' ಮಣಿದರೆ ನಿಮಗೆ ತಾನೆ ಅರ್ಪಿತವಾಯ್ತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪೂರ್ಣ ಸಮರ್ಪಣೆಯಿಂದಲೇ ನಾನೆಂಬ ಭಾವ ಮಾಯವಾಗುತ್ತದೆ. ಆಗ ಪ್ರಶ್ನೆಗಳಿಗೆ ಉತ್ತರವಿಲ್ಲದಂತಾಗುತ್ತದೆ. ಎಲ್ಲವೂ ನೀನಿದ್ದಾಗ ನಾನೆಲ್ಲಿಂಬ ಭಾವವೇ ಅನುಭಾವವೆಂದು ಹೇಳಬಹುದಾಗಿದೆ. ಆದ್ದರಿಂದಲೇ,

ಮನವ-ಚೆನ್ನನಿಗಿತ್ತು ಮನವಿಲ್ಲದವಳನ್ನು
ಏನ ಕೇಳಿಹಿರಯ್ಯ ಮತ್ತೇನ ಹೇಳುವದು?

ಎಂದು ಪ್ರಭುದೇವರ ಪ್ರಶ್ನೆಗೆ, ಮಹಾದೇವಿಯ ಉತ್ತರ ಪ್ರಶ್ನೆಯಾಗಿಯೇ ಮರುಕಳಿಸಿತ್ತು. ಇಲ್ಲಿ ಮಹಾದೇವಿಯ ವಿನಯದ ಜೊತೆಗೇ ಅವಳ ದಿಟ್ಟತ-ನವೂ ಗೋಚರವಾಗುವುದಲ್ಲವೆ? ವಿನಯದ ದಿಟ್ಟತನ, ಅಹಂಕಾರದ ಉದ್ಧ-ಟತನದಿಂದ ಭಿನ್ನವಾಗಿರುವ ನಿದರ್ಶನ ಇಲ್ಲಿದೆಯೆಂದು ಹೇಳಬಹುದಾಗಿದೆ.

ಇಲ್ಲಿ ಮಹಾದೇವಿಯ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡಿದ್ದರೂ ಪ್ರಭುದೇವರು, ಅವಳನ್ನು ಇನ್ನಷ್ಟು ಪರೀಕ್ಷೆಗೆ ಒಡ್ಡುವ ಆಸೆಯಿಂದ, ಅವಳ ಘನತೆ -ಗೌರವದ ಮಿತಿಯನ್ನು ಸೂಚಿಸುವ ಹಂಬಲದಲ್ಲಿ ಹೇಳಬಾರದ್ದನ್ನು ಹೇಳುತ್ತಾರೆ- ತರತರದ ಪದ ಪ್ರಯೋಗಗಳನ್ನು ಮಾಡುತ್ತ ಅವಳನ್ನು ಹೀಯಾಳಿಸುತ್ತಿರುವಾಗ ತಾವು ಮಾಡುತ್ತಿರುವ ತಪ್ಪಿನ ಅರಿವು ಅವರಿಗಿರುತ್ತದೆ. ಅಂತೆಯೇ-

ಬೆಡಗು ಬಿನ್ನಾಣವನು ಶರಣರೊಪ್ಪುವರಲ್ಲ
ಆದ್ಯಂತವನು ಹೇಳು ಮುಚ್ಚು ಮರಬೇಡ
ಎಲ್ಲ ಎಲ್ಲವ ಹೇಳು ಜವನಿಕೆಯ ಬೇಡಿಲ್ಲ
ಅಲ್ಲದಿರೆ ತೊಲಗಾಚೆ .... ತಾಯೆ ....

ಕೊನೆಗೆ ಅವರು 'ತಾಯೆ' ಎಂದು ಸಂಬೋಧಿಸುವುದರಲ್ಲಿ ಕಲಾತ್ಮಕತೆ ಮತ್ತು ಕವಿಪ್ರಜ್ಞೆ ಎದ್ದು ಕಾಣಸುತ್ತದೆ. 'ತಾಯೆ' ಶಬ್ದ ಲೋಕವ್ಯವಹಾರದ ಶಬ್ದ ಬಳಕೆಯಲ್ಲ- ಇದು ಪ್ರಭುದೇವರ ದೃಷ್ಟಿಯಲ್ಲಿ ಮಹಾದೇವಿಯ ಅತ್ಯುಚ್ಚ ಸ್ಥಿತಿಯನ್ನು ಸೂಚಿಸುತ್ತದೆ. ಕವಿ ಇಂಥ ಸನ್ನಿವೇಶಗಳಲ್ಲಿ ತುಂಬ ಯಶಸ್ವಿಯಾಗಿದ್ದಾರೆಂದು ಹೇಳಬಹುದು.

ಮಹಾದೇವಿ--

ಶರಣರೀ ಕಲ್ಯಾಣದೊಳಗೆನ್ನ ಕಲ್ಯಾಣ
ಕಟ್ಟುವದು ದಿಟವೆಂದು ಚೆನ್ನನೇ ಹೇಳಿಹನು
ಆದ್ದರಿಂದ- ಎಲ್ಲ ಹೇಳುವೆನಯ್ಯಾ ಹೊರಹಾಕದಿರು ತಂದೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ತನ್ನ ವೃತ್ತಾಂತವನ್ನು ಪ್ರಸ್ತಾಪಿಸುತ್ತಾಳೆ- ತನ್ನ ಉಡುತಡಿ ಗ್ರಾಮದ ಸೌಂದರ್ಯವನ್ನು ಬಣ್ಣಿಸುತ್ತಾಳೆ.

ತಿಳಿದಾನ ನೀಲದೊಳು ಹಸಿರು ಸೌಂದರ್ಯದೊಳು
ಮಲಗಿಹುದು ಎದ್ದಿಹುದು ಉಡುತಡಿಯ ಗ್ರಾಮ

ಹೀಗೆ ಸೃಷ್ಟಿಸೌಂದರ್ಯವನ್ನು ವರ್ಣಿಸುವಲ್ಲಿ ನಿಸರ್ಗದ ಬಗ್ಗೆ ಕವಿಗಿದ್ದ ಆಸಕ್ತಿ ಪ್ರಕಟವಾಗುತ್ತದೆ. ಮನುಷ್ಯರ, ಪಶುಪಕ್ಷಿಗಳ, ಸಸ್ಯಸಂಪತ್ತಿನ ಉಡುತಡಿಯ ಲಾವಣ್ಯವನ್ನು ಬಣ್ಣಿಸುವಲ್ಲಿ ಕವಿ ತುಂಬ ಉದಾರ ಮನಸ್ಸಿನಿಂದ ಶಬ್ದಗಳನ್ನು ಉತ್ಸಾಹದಿಂದ ಚೆಲ್ಲಿದ್ದಾರೆ. ಒಂದು ರೀತಿಯ ಭಾವುಕತೆಯೂ ಈ ಸಂದರ್ಭದಲ್ಲಿ ಎದ್ದು ಕಾಣಸುತ್ತದೆ. ಮಹಾದೇವಿಯ ನಿಲುವು ಸಹ ಅಷ್ಟೊಂದು ಚೆಲುವು ಪಡೆದಿತ್ತೆಂದು ತೋರಿಸುವ ಕಲೆಗಾರಿಕೆ ಇಲ್ಲಿ ದೃಷ್ಟಿಗೋಚರವಾಗುತ್ತದೆ. ಆನಂದದ ಬುಗ್ಗೆಯಂತಿದ್ದ ಉಡುತಡಿಯಲ್ಲಿ ಮಹಾದೇವಿಯ ಆವಿರ್ಭಾವ ಬಹುಶಃ ನಿಸರ್ಗದ ಬಯಕೆಯಿಂದಲೇ ಸಾಧ್ಯವಾಯಿತೇನೋ ಎಂಬಂತೆ ಕಾಣಸುತ್ತದೆ.

ಈ ಪ್ರಸಂಗದಲ್ಲಿಯೇ ವೈರಾಗ್ಯಮೂರ್ತಿ ಮಹಾದೇವಿಯ ಮನದಲ್ಲಿ ಚೆನ್ನಮಲ್ಲಿಕಾರ್ಜುನನ ಬಗ್ಗೆ ಪ್ರೀತಿ ಹುಟ್ಟಿ ಅವಳಲ್ಲಿ ದಾಂಪತ್ಯ ಪ್ರೇಮ ಮೂಡಿದ್ದು, 'ಮಧುರಭಕ್ತಿ' ಗೆ ನಾಂದಿಯಾಗಿದ್ದು ಗಮನಾರ್ಹವಾದ ಪ್ರಸಂಗವೆಂದೇ ಹೇಳಬಹುದು. ಪರಮಾತ್ಮನೊಂದಿಗೆ ಏಕಾತ್ಮತೆಯನ್ನು ಸಾಧಿಸುವ ಈ ದಾಂಪತ್ಯಭಾವ ಭಾರತೀಯ ಪರಂಪರೆ ಮತ್ತು ಪದ್ಧತಿಗೆ ಹೊರತಾಗಿಲ್ಲ. ರಾಧ ''ಪರಕೀಯ ನಾರಿ'' ಅವಳ ಪ್ರೇಮ ಕೃಷ್ಣನೊಂದಿಗೆ, ಆದರೆ ಗಂಡ ಆನಯ. ರಾಧೆಯ ಪ್ರೇಮ, ಕ್ರೀಡೆ ಮತ್ತು ಸಮರ್ಪಣ ಎಲ್ಲವೂ ಆಧ್ಯಾತ್ಮದ ಮಟ್ಟದಲ್ಲಿ ಸ್ವೀಕರಾರ್ಹವಾದಂತಹ ವಿಷಯಗಳೇ. ಮಹಾದೇವಿಯೂ 'ಪರಕೀಯ ನಾರಿ' - ಆದರೆ ಅವಳ ಶರಣಾಗತಿ ಚೆನ್ನಮಲ್ಲಿಕಾರ್ಜುನನ ಪಾದಪದ್ಮಗಳಲ್ಲಿ. ಆದ್ದರಿಂದಲೇ ರಾಧೆಯಾಗಲಿ ಅಥವಾ ಮಹಾದೇವಿಯಾಗಲಿ, ಆತ್ಮ ಮತ್ತು ಪರಮಾತ್ಮರ ಸಂಯೋಗದ ಪ್ರತೀಕಗಳಾಗಿ ನಿಲ್ಲುತ್ತಾರೆ. ಉದ್ದೇಶದ ಪಾವಿತ್ರತೆಯ ಮೇಲೆ 'ಸ್ವಕೀಯ' ಅಥವಾ 'ಪರಕೀಯ ನಾರಿ' ಯರ ಪ್ರೇಮ -ಕಾಮಗಳ ಸಂಬಂಧಗಳನ್ನು ವಿಶ್ಲೇಷಿಸಿ ನೋಡುವದು ಅನಿವಾರ್ಯವಾಗುತ್ತದೆ. ಮಹಾದೇವಿಯು ತನ್ನ ಎಳೆ ವಯಸ್ಸಿನಲ್ಲಿಯೇ ಅಧ್ಯಾತ್ಮದ ಕಡೆಗೆ ''ಕ್ವಾಂಟಮ ಲೀಪ' ತೆಗೆದುಕೊಂಡಿದ್ದು ಗಮನಾರ್ಹವಾದಂತಹ ವಿಷಯವಾಗಿದೆ. ಆದರೆ ಕವಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವನಾ ಪರವಶನಾಗಿ ಬಳಸಿದ ಅನೇಕ ಶಬ್ದಗಳು- ಸಾಲುಗಳು, ಮತ್ತು ಮಾತುಗಳು, ಕೇವಲ ಚಮತ್ಕೃತಿಯಾಗಿ ಉಳಿಯುತ್ತವೆ. ಕಾವ್ಯದ ಅಂದವನ್ನು ಮಸುಕುಗೊಳಿಸುತ್ತವೆ. ಉದಾ-

'ನೀನೆ ಚೆನ್ನ ನಾನೆ ಚೆನ್ನ ಚೆನ್ನಮಲ್ಲಿಕಾರ್ಜುನ
ನನ್ನ ಚೆನ್ನ ನೀನೆ ಚೆನ್ನ ಚೆನ್ನಮಲ್ಲಿಕಾರ್ಜುನ'

ಇಂಥ ಸಾಲುಗಳು ಅರ್ಥಹೀನವಾಗುತ್ತವೆ. ವಾಚ್ಯತೆಯಿಂದ ಕಾವ್ಯದ ಚೆಂದ ಹಾಳಾಗುತ್ತದೆ.

ಕಲ್ಯಾಣಕಾಂಡದಲ್ಲಿ ಮಹಾದೇವಿಯಕ್ಕನ ಮಾನಸಿಕ ತುಮುಲವನ್ನು ತೋರಿಸಲು ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಯ ವರ್ಣನೆಯನ್ನು ಮಾಡಲಾಗಿದೆ. ಅಂದರೆ ಇಂಥ ಪರಿಸ್ಥಿತಿ ಮತ್ತು ಪರಿಸರಗಳಿಂದ ಮಹಾದೇವಿ ಬೇಸರಗೊಂಡಳೆಂದು, ಅದೆಲ್ಲ ಕರ್ಮಕಾಂಡದ ಜೀವನ ನಿರರ್ಥಕವೆಂದು ತೋರಿಸುವ ಉದ್ದೇಶ ಕವಿಯ ಮನಸ್ಸಿನಲ್ಲಿದ್ದಂತೆ ಕಂಡು ಬರುತ್ತದೆ. ಆದರೆ, ಆ ಎಲ್ಲ ಸಾಲುಗಳಲ್ಲಿ 'ಕಾವ್ಯ' ಕಾಣಸುವದೇ ಇಲ್ಲ. ಇಲ್ಲೊಂದು ಮಾತನ್ನು ಸ್ಪಷ್ಟಪಡಿಸಬೇಕೆಂದಿದ್ದೇನೆ--

ವ್ಯಕ್ತಿ'ಸಮಾಜ' ಎಂಬ ಸಂಸ್ಥೆಯನ್ನು ಕಟ್ಟಿಕೊಂಡಾಗಿನಿಂದ ಯಾವ ಕಾಲದಲ್ಲಿ, ಯಾವ ಯುಗದಲ್ಲಿ ಸಮಾಜ ಶಾಂತಿಯುತವಾಗಿತ್ತು? ಸಮಾಜದಲ್ಲಿ ಪ್ರೇಮ, ಶ್ರದ್ಧೆ, ಸೌಹಾರ್ದತೆ ಮುಂತಾದ ಗುಣ ಸಲಕ್ಷಣಗಳಿದ್ದವೆಂದು ಹೇಳುವದೇ ಸಾಧ್ಯವಿಲ್ಲ. ಮಾನವ ಸಮಾಜದ ಇತಿಹಾಸದುದ್ದಕ್ಕೂ ಯುದ್ಧ, ಶೋಷಣೆ, ಹಿಂಸೆ ಇತ್ಯಾದಿ ಘಟನೆಗಳು ನಡೆಯುತ್ತಲೇ ಬಂದಿವೆ. ಎರಡು ಯುದ್ಧಗಳ ನಡುವಿನ ಸಮಯಕ್ಕೆ, ಅಥವಾ ಕಾಲವಧಿಗೆ ನಾವು ಶಾಂತಿಯೆಂದು ಕರೆಯುತ್ತ ಬಂದಿದ್ದೇವೆ ಹೊರತು, ನಿಜವಾದ ಅರ್ಥದಲ್ಲಿ ಸಮಾಜದ ಹಣಬರಹದಲ್ಲಿ ಶಾಂತಿ ಇರುವದೇ ಇಲ್ಲ. ಧರ್ಮದ ಹೆಸರಿನಲ್ಲಿ, 'ಇಸಂ'ಗಳ ಹೆಸರಿನಲ್ಲಿ, ಕಾಯದೆ ಕಾನೂನಿನ ಹೆಸರಿನಲ್ಲಿ, ಅಧಿಕಾರ ಆಧಿಪತ್ಯದ ಹೆಸರಿನಲ್ಲಿ, ಜನಸಾಮಾನ್ಯರು ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾರೆ. ಹಿಂದೆಂದೂ, ದೇವರ, ಯಜ್ಞ- ಯಾಗಾದಿಗಳ ಹೆಸರಿನಲ್ಲಿ, ಜಾತಿ- ಮತಗಳ ಹೆಸರಿನಲ್ಲಿ ಶೋಷಣೆ ನಡೆದಿದ್ದರೆ, ಇಂದಿನ ಕಾಲದಲ್ಲಿ ಬೇರೆ ರೀತಿಯಿಂದ ಭಯಂಕರ ಶೋಷಣೆ ನಡೆದಿಲ್ಲವೆ? ಸಮಾಜದಲ್ಲಿ ಆರೋಗ್ಯವಿದೆಯೇ? ಜನ ನೆಮ್ಮದಿಯಿಂದ ಇದ್ದಾರೆಯೇ? ಇದರರ್ಥ ಇಷ್ಟೇ -ಸಾಧುಸಂತರ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಚಾರವಾದಿಗಳ, ತತ್ವಜ್ಞಾನಿಗಳ, ಪ್ರಜ್ಞರ ಕಲ್ಪನೆಯ ಸಮಾಜ ರಚನೆ ಎಂದೆಂದೂ ಆಗಿಲ್ಲ, ಇನ್ನು ಮುಂದಾದರೂ ಆಗುವುದಿಲ್ಲ. ಆದರೆ ಕಾಲಕಾಲಕ್ಕೆ ಅತಿಸಂವೇದನಶೀಲ ಮನಸ್ಸಿನ ವ್ಯಕ್ತಿ ತನ್ನ ಎಲ್ಲ ಸಾಹಸವನ್ನು ಒಟ್ಟುಗೂಡಿಸಿ, ಸಾಮಾಜಿಕ ನ್ಯೂನ್ಯತೆಗಳನ್ನು ಇಲ್ಲದಂತೆ ಮಾಡುವ ಪ್ರಯತ್ನ ಮಾಡುತ್ತಾನೆ. ಅವನು ಹೋರಾಟ ಮಾಡುತ್ತಾನೆ. ತಾನೊಬ್ಬನೇ ಬಂಡೇಳುತ್ತಾನೆ. ಎಂಥ ತ್ಯಾಗಕ್ಕೂ ಸಿದ್ಧನಾಗುತ್ತಾನೆ. ಆಗ ಸಾಹಸವಿಲ್ಲದ ವ್ಯವಸ್ಥೆಯಿಂದ ಜಿಗುಪ್ಸೆಗೊಂಡ ಪ್ರಜ್ಞಾವಂತ ಜನರು ಅಂಥ ವ್ಯಕ್ತಿಯ ಜೊತೆಗೆ ಬಂದು ಸೇರುತ್ತಾರೆ. ತರುವಾಯ ಸಮಾಜದಲ್ಲಿನ ಹೇಸಿತನ ತಕ್ಕಮಟ್ಟಿಗೆ ಇಲ್ಲದಂತಾಗುತ್ತದೆ. ಆದರೆ ದುರಂತವೇನೆಂದರೆ ಒಂದಿಷ್ಟು ಸಮಯದನಂತರ ಸಮಾಜ ಮತ್ತೆ ಹಳೆಯ ದಾರಿಯನ್ನೇ ತುಳಿಯಲು ಹಂಬಲಿಸುತ್ತದೆ. ಆಗ ಕ್ರಾಂತಿ ಇತಿಹಾಸದ ಪುಟಗಳಲ್ಲಿ ಸೇರಿ ಬಿಡುತ್ತದೆ. ವ್ಯಕ್ತಿ ಮತ್ತೆ 'ಪಶು' ಆಗುತ್ತಾನೆ. ಶರಣರಲ್ಲಿ ದಟ್ಟ ಸಾಮಾಜಿಕ ಪ್ರಜ್ಞೆ ಇದ್ದರೂ ಆತ್ಮೋನ್ನತಿಯ ಮಾರ್ಗವನ್ನು ಪ್ರಶಸ್ತಗೊಳಿಸಲು ಸಾಮಾಜಿಕ ಕಳಕಳಿಯನ್ನು ಮಾಧ್ಯಮವಾಗಿರಿಸಿಕೊಂಡದ್ದು ಇವರ ಅಪೂರ್ವ ಮತ್ತು ಅನನ್ಯವಾದಂಥ ತತ್ವವೆಂದು ಹೇಳಬಹುದಾಗಿದೆ.

ಮಹಾದೇವಿಯಲ್ಲಿನ ಆತ್ಮಪ್ರಕಾಶ ಕತ್ತಲೆಯನ್ನು ಹೋಗಲಾಡಿಸಲು ಕಾತರಗೊಂಡಿದ್ದು ಅದ್ಭುತವೇ ಸರಿ- ಪರಿಷ್ಕೃತ ಮನಸ್ಸಿನಲ್ಲಿ- ನಿರಂತರ ಕಾಯುವಿಕೆಯ ಸಾಹಸವಿರಬೇಕಾಗುತ್ತದೆ. ಈ ಕಾತರತೆಯ ಕಾಯುವಿಕೆಯಲ್ಲಿಯೇ, ಯಾವುದೋ ಒಂದು ಕ್ಷಣದಲ್ಲಿ ಪರಮಾತ್ಮನ ದರ್ಶನವಾಗುತ್ತದೆ. ಅಂಥ ಕ್ಷಣ ಮಹಾದೇವಿಯ ಜೀವನದಲ್ಲಿ ಬಂದು ತನ್ನ ತೇಜಸ್ಸಿನಲ್ಲಿ ಮಹಾದೇವಿಯ ಮೈಮನಸ್ಸುಗಳನ್ನು ಮುಳುಗಿಸಿಬಿಟ್ಟಿತು.

ಆಗ ಅವಳು-

> ಏಕೇನೊ ಎನ್ನದೆಡೆ ಬೆಳಗಿನಾ ಸವಿಸೋನೆ
> ಕರೆದಂತೆ ಅರಿವಾಯ್ತು ಆನಂದವಾಯ್ತು'

ಎಂದು ತನ್ನ ದಿವ್ಯ ಅನುಭವವನ್ನು ಪ್ರಸ್ತಾಪಿಸುತ್ತಾಳೆ.

ಗುರುಚೆನ್ನಮಲ್ಲನಿಗೆ ಸಲ್ಲಿಸಿದ ಪೂಜೆ, ಆನಂದದ ಪೂಜೆ- ಅದು ರಿಚ್ಯುಅಲಿಸ್ಟಿಕ್ ಪೂಜೆಯಲ್ಲ. ಪೂಜೆ ಮಾಡಿ ಕೈತೊಳೆದುಕೊಳ್ಳುವ ಕರ್ಮಕಾಂಡದ ಪೂಜೆ ಅದಿರಲಿಲ್ಲ. ಆನಂದಾನುಭೂತಿಗೆ ದಾರಿ ಮಾಡಿಕೊಡುವ ಪೂಜೆ ಅದಾಗಿತ್ತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಆಗ ಭಕ್ತಿಯೇ ಆನಂದ ಆನಂದವೇ ಭಕ್ತಿ'

ಎಂದು ಮಹಾದೇವಿ ತಿಳಿದುಕೊಳ್ಳುತ್ತಾಳೆ.

'We can all agree that our love, when it is thus regarded without relation to any external object, is both lovable for itself and completely free from desire or pain, and in this way we can begin to grasp the idea that love is God.

-Christopher Isherwood

ಇವರು ಹೇಳಿದಂತೆ, ಮಹಾದೇವಿಯ ಮೈ, ಮನಸ್ಸು, ಭಕ್ತಿ ಮತ್ತು ಪ್ರೀತಿಯಿಂದ ಪ್ರಜ್ವಲಿಸತೊಡಗಿತು. ಶ್ರೀ. ಭೂಸನೂರಮಠರು ಮಹಾದೇವಿಯ ಈ ಸ್ಥಿತಿಯನ್ನು ಸಮರ್ಥವಾಗಿ ಪ್ರಕಟಗೊಳಿಸಿದ್ದಾರೆ.

'ಶಾಂತಿರೂಪಾತ್ ಪರಮಾನಂದ ರೂಪಾಚ್ಚ'
'Its' (Bhakati) nature is peace and is supreme bliss.
ಎಂದು ನಾರದ ಭಕ್ತಿ ಸೂತ್ರದಲ್ಲಿ ಪ್ರಸ್ತಾಪಿಸಿದಂತೆ ಅಕ್ಕಮಹಾದೇವಿಯ ಭಕ್ತಿ ಮತ್ತು ಆನಂದವನ್ನು ಏಕೀಕರಿಸಿ ನೋಡುವುದು ಭಾರತೀಯ ಮನಃಸ್ಥಿತಿಗೆ ಪೂರಕವಾಗಿದೆ. ಬರವಣಿಗೆಯಲ್ಲಿ ವಚನಗಳ ಛಾಯೆ ಕಾಣಿಸುವುದು ಸಹಜ. ವಚನಕಾರರ ಪದ ಪ್ರಯೋಗ ಈ ಕಾವ್ಯದಲ್ಲಿಯೂ ಕಾಣಿಸುತ್ತದೆ.

ಕಲ್ಯಾಣಕಾಂಡದಲ್ಲಿನ Location static ಆಗಿದ್ದು ತುಂಬ ವಿಚಿತ್ರವೆನಿಸುತ್ತದೆ. ಕೂಡಲೇ ತತ್ವ ವಿಚಾರಕ್ಕೆ ವಿಷಯ ಇಳಿದರೆ ಈ ರೀತಿಯಾಗುವುದು ಸಹಜ-

ಗುರುಚೆನ್ನಮಲ್ಲನ ದರ್ಶನದಿಂದ ಮಹಾದೇವಿ ಹೊಸಜನ್ಮವನ್ನೇ ತಾಳಿದಂತೆ ಅನುಭವಿಸಿದಳು--

''ಎದ್ದಿತ್ತು ನಮ್ಮೂರು ಎಂದಿನಂತಿಂದು
ನಾನೆದ್ದ ಮತ್ತೊಮ್ಮೆ ಬೇರ ತೆರನಾಗಿ''

ಎಂದು ಮಹಾದೇವಿಯ ಮಾತಿನಲ್ಲಿ ಕವಿಯ ಸೂಚ್ಯಾರ್ಥ ವ್ಯಕ್ತವಾಗುವದಲ್ಲದೆ, ಮಹಾದೇವಿಯ ಹೊಸರೂಪದ ದರ್ಶನವೂ ನಮಗಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾವ್ಯದ ದೊಡ್ಡ ಹಂದರವನ್ನು ಹಾಕಿ, ಸಾಲುಗಳ ವಿವರಣೆಯಿಂದ ಅದನ್ನು ಸಿಂಗರಿಸಿ, ಒಂದೆರಡು ಸ್ಥಳಗಳಲ್ಲಿ ದೀಪದ ಹಣತೆಯಂತೆ ಪ್ರಜ್ವಲಿಸುವ ವಾಕ್ಯಗಳು ಇಡೀ ಪರಿಸರವನ್ನೇ ಮಂಗಲಮಯ ಮಾಡಿ ಬಿಡುತ್ತವೆ.

ಆದರೆ ಭೂಸನೂರಮಠರಂಥ ಪ್ರಬುದ್ಧ ಕವಿಗಳಿಗೂ ಭಾಷೆಯ ವ್ಯಾಮೋಹ ಕಾಡಿದ್ದು ಆಚ್ಚರಿಯನ್ನುಂಟುಮಾಡುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುವ ನದಿಯಂತೆ ಅವರ ವಿಚಾರ ಹರಿದಿದ್ದರೂ, ಅನೇಕ ಕಡೆಗಳಲ್ಲಿ -ನಿರ್ಬಲವಾಗಿದೆಯೆಂದು ನನ್ನ ಸೀಮಿತ ಬುದ್ಧಿಗೆ ಅನ್ನಿಸಿದೆ. ನನ್ನ ಈ ಮಾತು ತಪ್ಪು ಇರಬಹುದು. ರಸಗ್ರಹಣ ಪ್ರಕ್ರಿಯೆ ಪ್ರತಿಯೊಬ್ಬರಿಗೂ ಭಿನ್ನರೀತಿಯಿಂದ ಅನುಭವ ನೀಡುವದರಿಂದ, ಅನೇಕಸಲ ರಸಿಕ ತಟಸ್ಥನಾಗಿ ಉಳಿಯುವದಿಲ್ಲ- ಈ ತಾಟಸ್ಥ್ಯಹೀನತೆಯಿಂದ ಆನಂದಾನುಭೂತಿಯಲ್ಲಿ ವ್ಯತ್ಯಾಸವುಂಟಾಗುವುದು ಸಹಜ.

ಭೂಸನೂರಮಠ ಅವರಲ್ಲಿ ಶಬ್ದಗಳನ್ನು ತೂರುವ ಮೋಹ ಬಹಳಷ್ಟಿದೆ. ಇದರಿಂದಾಗಿ, ಅವಶ್ಯಕತೆಗೆ ಮೀರಿ ಅನೇಕ ಕಡೆಗಳಲ್ಲಿ ವಿಷಯ ವಿಸ್ತಾರವಾಗಿದೆ. ಒಂದು ಮಹಾಕಾವ್ಯ ಆಲೇಖನ ಮನಸ್ಸಿನಲ್ಲಿ ಮೂಡಿದಾಗ ಕವಿ ಒಂದು ರೀತಿಯ ಗುಂಗಿನಲ್ಲಿರುತ್ತಾನೆ. ಆ ಗುಂಗು ಕಾವ್ಯಕ್ಕೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದರೂ, ಕಾವ್ಯದ ಚೆಲುವಿಗೆ ಧಕ್ಕೆ ತರುವಂತೆಯೂ ಆಗುತ್ತದೆಂದು ಹೇಳಬಹುದಾಗಿದೆ. ಪ್ರಸ್ತುತ ಕವಿಗಳು ಇಂಥ ಅಪಾಯಕ್ಕೆ ಒಳಗಾಗಿದ್ದಾರೆ.

ಚಂಪೆಯ ಮಾತುಗಳನ್ನು ಕೇಳಿ--

'ಬನಗನಸು ಮತ್ತೊಮ್ಮೆ ಕುಣಿಯಿತ್ತು ಮನದೊಳಗೆ-
ಕಂಡ ಕನಸಿನೊಳಿದ್ದು ಚೆಲುವ ಚನ್ನಿಗರಾಯ
ಮೈದೂರಿ ಕೈಹಿಡಿದು ಬಿಗಿಯಪ್ಪಿ ಮುತ್ತಿಟ್ಟ
ರಸಚಿತ್ರ ಹೊಳೆಯಿತ್ತು ನಿಂದಿತ್ತು ಕಣ್ಮುಂದೆ'.

ಎಂಬ ಸಾಲುಗಳಲ್ಲಿ ತುಂಬ ಸುಂದರವಾದಂಥ ಚಿತ್ರಮೂಡಿ ಬಂದಿದೆ. ಆದರೆ, ಈ ಸಾಲುಗಳ ಹಿಂದಿನ ಮತ್ತು ಮುಂದಿನ ವರ್ಣನೆಗಳಲ್ಲಿ ಈ ಬಿಗುವು ಮೂಡುವುದಿಲ್ಲ. ಅಷ್ಟೇಕೆ- ಕವಿಗಳು ಕೇವಲ ''ಬಿಗಿಯಪ್ಪಿ- ಮುತ್ತಿಟ್ಟ'' ಕ್ಕೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಂತಿದ್ದರೆ, ಆ ವಿರಾಮದಲ್ಲಿನ ಆನಂದಾನುಭೂತಿಯ ಪ್ರಖರತೆ ಇನ್ನಷ್ಟು ಹೆಚ್ಚಾಗುತ್ತಿತ್ತು- ರಸಚಿತ್ರ ಹೊಳೆಯಿತ್ತು ನಿಂದಿತ್ತು ಕಣ್ಮುಂದೆ'' ಎಂಬ ಸಾಲಿನ ಅವಶ್ಯಕತೆಯೇ ಇರಲಿಲ್ಲ. ಈ ಸಾಲಿನಿಂದ ರಸಿಕರ ಮಾನಸ ಪಟಲದ ಮೇಲೆ ಮೂಡಿ ಬಂದ ಅದ್ಭುತ ಚಿತ್ರ ತತ್‌ಕ್ಷಣ ಮಂಕಾಗಿ ಬಿಡುತ್ತದೆ. ರಸಿಕನ ಆನಂದೋಲ್ಲಾಸದಲ್ಲಿ ಹಸ್ತಕ್ಷೇಪ ಮಾಡುವ ಈ ವಾಕ್ಯ, ತನ್ನ ಅಸ್ತಿತ್ವದ ಅಧಿಕಾರವನ್ನು ಕಳೆದುಕೊಳ್ಳುವದಲ್ಲದೆ, ರಸಿಕನ ಮನಸ್ಸಿನ ಮೇಲೆ ಅತಿಕ್ರಮಣ ಮಾಡುತ್ತದೆ. (ಇದು ನನ್ನ ಅಭಿಪ್ರಾಯ, judgement ಅಲ್ಲ)

ಕೌಶಿಕನ ಮನೆಗೆ ಹೋಗುವಾಗಿನ ದೃಶ್ಯ ವಿಚಿತ್ರವಾದುದೆ. ಬಲಾತ್ಕಾರದಿಂದ ಕರೆದೊಯ್ಯುತ್ತಿರುವ ಅಸಹಾಯಕ ಹೆಣ್ಣಿನ ಬಗ್ಗೆ ಪುರ ಜನರ ಪ್ರತಿಕ್ರಿಯೆ ಕೇವಲ ಸ್ಟೇಟಮೆಂಟ ಆಗಿಯೇ ನಿಂತಿರುವದು ರಸನಿಷ್ಪತ್ತಿಗೆ ಕುಂದು ತರುವಂಥದ್ದು. ಮೇಲಾಗಿ-

'ಕಳವಿನಿಂದರಮನೆಗೆ ಹೋಗಿ ಬಂದಿಹಳಿವಳು'

ಎಂಬ ಸಾಲಿನಲ್ಲಿ ಕೆಲವರ ಸಣ್ಣತನ ಹೇಗಿತ್ತೆಂದು ತೋರಿಸುವ ಉದ್ದೇಶವಿದ್ದಿರಬಹುದು. ಆದರೆ ಮಹಾದೇವಿಯನ್ನು ಇಷ್ಟೊಂದು ಅಸಹ್ಯಕರ ರೀತಿಯಿಂದ, ಕವಿಯ ಮಾತಿನಲ್ಲಿ 'ಸರ್ವಜ್ಞರಿಗೆ' ಅನ್ನಿಸಿದ್ದಾದರೂ ಏಕೆ? ಎಂದು ಪ್ರಶ್ನೆ ಉದ್ಭವಿಸುತ್ತದೆ. ಒಂದು ಕ್ಯಾರೆಕ್ಟರನ್ನು ಉದಾತ್ತೀಕರಿಸುವ ಹಂಬಲದಲ್ಲಿ, ಮತ್ತೊಂದು ಕ್ಯಾರೆಕ್ಟರ್‌ನ್ನು ಕೆಳಗಿಳಿಸುವ ಕ್ರಿಯೆ ಸ್ವಾಭಾವಿಕವಾಗಿದ್ದರೂ, ಬ್ಯಾಕ್ ಡ್ರಾಫಿನಲ್ಲಿದ್ದ 'ಕ್ಯಾರೆಕ್ಟರ್' ಅಸಹ್ಯ ಹುಟ್ಟಿಸುವಂಥವು ಇರಬಾರದು.' ಇದರಿಂದ ಮೂಲ ಕ್ಯಾರೆಕ್ಟರ್‌ಗೇ ಅವಕಳೆ ಬರುತ್ತದೆ. ಮಹಾದೇವಿ ಸಂಶಯಪಡುವಂಥ ಕೀಳುಮನಸ್ಸಿನಲ್ಲಿ ಏನಿದ್ದರೂ, ಅವಳ 'ದಿವ್ಯತ್ವ'ದ ಪ್ರಭಾವಲಯದಲ್ಲಿ ಕೀಳುಮನಸ್ಸೂ ಕೂಡ ಅಸಹ್ಯಕರ ವರ್ಣನೆಯನ್ನು ತೋರಿಸುವ ಸಾಹಸ ಮಾಡುವದಿಲ್ಲ- ಇದು ನನ್ನ ವೈಯಕ್ತಿಕ ಅನಿಸಿಕೆ. ಕವಿಗೆ ಸ್ವಾತಂತ್ರ್ಯವಿದೆಯಲ್ಲ! ಅದರ ಉಪಯೋಗ ಅವರು ಯಾವ ರೀತಿಯಿಂದ ಮಾಡಿಕೊಳ್ಳುತ್ತಾರೆಂಬ ವಿಷಯ ಅವರಿಗೇ ಬಿಟ್ಟದ್ದು. ಆದರೆ ''ಭೀಭತ್ಸ'' ತನದಿಂದ ಸಾಧ್ಯವಾದಷ್ಟು ದೂರಿರುವದೇ ಲೇಸೆಂದು ನನ್ನ ಭಾವನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೌಶಿಕನ ಮುಂದೆ ಜ್ಞಾನದ ಝರಿಯನ್ನೇ ಹರಿಸಿದ ಮಹಾದೇವಿಯ ಮಾತಿನಿಂದ ಕೌಶಿಕನ ಮನಸ್ಸಿನಲ್ಲಾದ ಬದಲಾವಣೆಗಳೇನು? ಕೌಶಿಕ ನಡೆದುಕೊಂಡ ರೀತಿ ಯಾವುದು? ಇದನ್ನು ಅಷ್ಟಕ್ಕೇ ನಿಲ್ಲಿಸಿದ ಕವಿ ತುಂಬ ಜಾಣತನದಿಂದ, ಸಂಯಮದಿಂದ ಮತ್ತು ನಿಚ್ಚಳ ಪ್ರಜ್ಞೆಯಿಂದ ಕೆಲಸ ಮಾಡಿದ್ದಾರೆಂದು ಹೇಳಬಹುದು. ಇಂಥಲ್ಲಿ ಕಾವ್ಯ ಪುಟಿದೇಳುತ್ತದೆ. ರಸ, ಪ್ರಕಾಶ-ಪುಂಜವಾಗುತ್ತದೆ. ಕೌಶಿಕ ಇಲ್ಲಿ ಕೇವಲ ಕಾಮಾಂಧ ದೊರೆಯಾಗದೆ, ಮಹಾದೇವಿಯ ಗಟ್ಟಿತನವನ್ನು ಪರೀಕ್ಷಿಸಲು ಬಂದ, ಅವಳ ಸಾಮರ್ಥ್ಯವೇನೆಂಬುದನ್ನು ತಿಳಿಸಲು ಬಂದ ಸಂಕಲ್ಪ ಶಕ್ತಿಯಾಗುತ್ತಾನೆ. ಕೌಶಿಕನ ಮುಂದೆ ಮಹಾದೇವಿ ಗಾಬರಿಗೊಳ್ಳುವದಿಲ್ಲ. ಬಂದ ಗಂಡಾಂತರವನ್ನು ನೆನೆದು ವಿಚಲಿತಗೊಳ್ಳುವುದಿಲ್ಲ- ಇಲ್ಲಿ ಅಜ್ಞಾನವೇ ಜ್ಞಾನಕ್ಕೆ ಸವಾಲಾಗಿ ನಿಂತಾಗ, ಜ್ಞಾನ ಅಜ್ಞಾನವನ್ನು ಯಾವ ರೀತಿಯಿಂದ ಸೋಲಿಸುತ್ತದೆಂಬುದನ್ನು ನಾವು ಅನುಭವಿಸುತ್ತೇವೆ, ಕಾಣುತ್ತೇವೆ.

ಮುಂದೆ, ಅಂದರೆ ಕಲ್ಯಾಣಕಾಂಡದಲ್ಲಿನ ಪ್ರಸ್ತಾಪವೆಲ್ಲ, ಸಾಮಾನ್ಯವಾಗಿ ಭಾವ-ಪರವಶತೆಗೆ ಸಂಬಂಧಿಸಿದ್ದಾಗಿದೆ. ಅನೇಕ ಕಡೆಗಳಲ್ಲಿ ಅತಿಶಯ ವರ್ಣನೆಯಿಂದಾಗಿ, ವಿಶೇಷಣಗಳ ಅತಿ ಪ್ರಯೋಗದಿಂದಾಗಿ, ಹಿಂದಿನ ಪುಟಗಳ ಧಾಟಿಯನ್ನೇ ಮುಂದೊರಿಸಿದ್ದಕ್ಕಾಗಿ ಈ ಕಾಂಡದಲ್ಲಿ ಪಾರಂಪರಿಕ ಪುರಾಣಗಳ ಛಾಯೆ ಮೂಡಿದ್ದು ಅಷ್ಟೊಂದು ಚಂದದ ವಿಷಯ ಅಲ್ಲವೆಂದೇ ನನ್ನ ಭಾವನೆ. ಆತ್ಯಂತಿಕ ವೈರಾಗ್ಯದ ಮನಃಸ್ಥಿತಿಯಲ್ಲಿರುವ ಮಹಾದೇವಿಯ ಭಾವುಕತೆ ಅವಳ ಸಹಜ ಸ್ತ್ರೀ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ ನಿಜ. ಆದರೆ, ಅವಳ ಬೆಂದು ಪಕ್ಕಾದ ಮನಸ್ಸಿನ ಮೇಲೆ ಈ ಭಾವುಕತೆ ಬಿರುಕುಗಳನ್ನೂ ಮೂಡಿಸುತ್ತದೆ.

ನಿಸರ್ಗ ವರ್ಣನೆಯಲ್ಲಿ ಭೂಸನೂರಮಠರು ತೋರಿಸಿದ ಕಲೆಗಾರಿಕೆ ಮತ್ತು ಕುಸುರಿನ ಕೆಲಸ ತುಂಬ ರಮ್ಯವಾಗಿದೆ.

ಮಾಮರದ ಗಿಳಿಯೊಂದು ಕೂಗಿ ಕರೆಯಿತ್ತು
ಹೊಸತೇನೂ ಹೇಳಲ್ಕೆ ತನ್ನ ಬಳಗಕ್ಕೆ
ಅಂತೆ ಕರೆದವು ಹಕ್ಕಿ ತಂತಮ್ಮ ಕುಲವ
ಕಾಗೆ ಕೋಗಿಲೆ ಗುಬ್ಬಿ ಕಾಜಾಣ ಗೀಜಗ
ಮರಕುಟಿಗ ಕಬ್ಬಕ್ಕಿ ನೆಲಗುಮ್ಮ ಟಿಟ್ಟಿಂವ
ಬಾನಾಡಿ ಕೊರವಂಜಿ ಬೆಳ್ಳಕ್ಕಿಯರ ಸಂಜೆ--
ಜಾತಿ ಜಾತಿಯ ಚಿತ್ರ, ಚಿತ್ರವರ್ಣದ ಪಕ್ಷಿ-
------- ------ ---------- --------

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

------ ------ -------- ---------

ವಾಸಂತಿ ರಸರಾಗ ಬಣ್ಣವಿಲ್ಲದ ನಾಗ

------- --------- ---------- ------

ಮರ-ಬಳ್ಳಿಗಳ ಲಕ್ಷ ಲಕ್ಷದಲೆಗಳ ಕುಣಿತ

ಮುಂತಾದ ಸಾಲುಗಳು ಭಾವ ಮತ್ತು ನಾದಸೌಂದರ್ಯವನ್ನು ಹುಟ್ಟಿಸುತ್ತವೆ. ಕಾವ್ಯದುದ್ದಕ್ಕೂ ಶಬ್ದ, ನಾದ, ಲಯ, ಭಾವ, ಅರ್ಥದ ತರತರದ ಚಿತ್ರಗಳು ಕಣ್ಮುಂದೆ ಕಟ್ಟಿದಂತೆ ನಿಲ್ಲುತ್ತವೆ. ಆದರೆ ಸಂತರ, ಅನುಭಾವಿಗಳ ಜೀವನವನ್ನು ಚಿತ್ರಿಸುವದು ತುಂಬ ಕಷ್ಟದ ಕೆಲಸವೆಂದೇ ನಾನು ಭಾವಿಸುತ್ತೇನೆ. ಅನೇಕ ಸಲ ಮನುಷ್ಯನ ಭಾಷೆ ಸಂತರ ದಿವ್ಯಾನುಭೂತಿಯನ್ನು ಬಣ್ಣಿಸುವಲ್ಲಿ ಸೋಲುತ್ತದೆ. ಆದರೂ ಇಂಥ ಕೃತಿ ರಚನೆಯಿಂದ ಕವಿಗಾಗುವ ಸಮಾಧಾನ ಮತ್ತೆ ಅವನ ''ಲಯ ಯೋಗ'' ದ ತೀವ್ರತೆ ಹೆಚ್ಚಾಗುವದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಟಿ. ಎಂ. ಪಿ. ಮಹಾದೇವನ್ ಅವರು ತಮ್ಮ ಪುಸ್ತಕ TEN SAINTS OF INDIA ದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ.

It is not easy to write about the saints. All good things are rare and- difficult; but because of the rarity and difficulty one ought not to turn away from seeking the good. It is better to attempt something magnificent and fail than to accomplish inconsequential ends. Most of us, most of the time, are busy with trivialities, not knowing that they are so. It is only when we put these aside and strive to rise to the dimension of eternity which is that of saints that we really begin to live Meditation in the lives of the saints and on their teachings is a potent means to elevating our own lives and for gaining sublimity.''

ಮೇಲಿನ ಮಾತುಗಳನ್ನು ಲಕ್ಷದಲ್ಲಿಟ್ಟುಕೊಂಡು ನೋಡಿದಾಗ ಶ್ರೀ ಭೂಸನೂರಮಠರ ಬದುಕಿನ ಸಾರ್ಥಕತೆ ಏನೆಂಬುದು ಸ್ಪಷ್ಟವಾಗುತ್ತದೆ. 'ಭವ್ಯಮಾನವ' ಭೂಸನೂರಮಠರ Meditation ಇದೆ, ಕಾವ್ಯವಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾವ್ಯಶಾಸ್ತ್ರದ ಚೌಕಟ್ಟಿನಲ್ಲಿ ಇದನ್ನಿಟ್ಟು ನೋಡುವುದೇ ದೊಡ್ಡ ತಪ್ಪು. ಅಭಿವ್ಯಕ್ತಿಗೆ ಬೇಕಾಗುವ formಕಾವ್ಯದ್ದಿದೆ ಹೊರತು, ಇದರ ಅಂತಃಸತ್ವ ಅನುಭಾವದ ಅಭಿವ್ಯಕ್ತಿಯೇ ಆಗಿದೆ.

ಮತ್ತೆ ವಿಷಯದತ್ತ ತಿರುಗಿದರೆ- ಮಹಾದೇವಿ ತನ್ನ ಸ್ಥಿತಿಯನ್ನು ಚೆನ್ನಮಲ್ಲಿಕಾರ್ಜುನ-ನಲ್ಲಿ ತಾನು ಲೀನವಾದುದನ್ನು ಬೇರೆ ಬೇರೆ ರೀತಿಯಿಂದ ಹೇಳುತ್ತಾಳೆ. ಇಲ್ಲಿ ಒಂದೆರಡು ಸಾಲುಗಳನ್ನು ಗಮನಿಸಬೇಕು.

ಸಾಗರದ ನಡುವಿರ್ದ ಘಟದುದಕ ತನ್ನ
ಪೂರ್ವ ಸ್ವರೂಪ ನಿಜಸಾಗರವ ಮರೆತು
ಘಟವೇ ತಾನೆಂದಿರಲು ನಾನು- ಘಟವೊಡೆದು
ತನ್ನ ನಿಜಮೂಲ ಸಾಗರದಿ ಬೆರೆವಂತೆ.......

ಅಸ್ತಿತ್ವದ, ಆ ದೇಹದ ಅಹಂಕಾರವನ್ನು ಮರೆತು, ಅದನ್ನು ಸಂಪೂರ್ಣ ಅಲ್ಲಗಳೆದು, ತನ್ನ ಆತ್ಮವನ್ನು ಪರಮಾತ್ಮನಲ್ಲಿ ಲೀನ ಮಾಡಿದ ಮೇಲೆ ನಾನ್ಯಾರು? ಅವನ್ಯಾರು? ಎಂಬ 'ದ್ವೈತ' ಮಾಯವಾದನಂತರ ಮಹಾದೇವಿಯ ವೈರಾಗ್ಯ ಆಕಾಶದಂತಾಗುವುದಲ್ಲದೆ, ಕಾವ್ಯದಲ್ಲಿ ಬಂದ ಮೇಲಿನ ಸಾಲುಗಳು ಕಬೀರರ ಈ ಸಾಲುಗಳೊಂದಿಗೆ ಹೋಲಿಸಿ ನೋಡಿ.

''ಜಲಮೇ ಕುಂಭ ಕುಂಭಮೇ ಜಲ ಹೈ
ಬಾಹರ್ ಭೀತರ ಪಾನೀ,
ಫಟಾ ಕುಂಭ ಜಲ ಜಲಹಿ ಸಮಾನಾ-
ಏ ತತ್ ಕಥ್ಯೊಗಿಯಾನಿ''

ಎಷ್ಟೊಂದು ಸಾಮ್ಯವಿದೆ- ಅಂದರೆ ಅನುಭಾವಿಗಳು ಯಾವ ದೇಶ, ಕಾಲ, ಭಾಷೆ, ಮತ- ಪಂಥ ಮತ್ತು ಪರಂಪರೆಯವರೇ ಆಗಿರಲಿ, ಒಂದು ಸ್ಥಿತಿಗೆ ತಲುಪಿದ ಮೇಲೆ ಅವರ ಅಭಿವ್ಯಕ್ತಿ, ಭಾವ ಮತ್ತು ಅರ್ಥಗಳಲ್ಲಿಯೂ ಸಾಮ್ಯ ಕಂಡುಬರುತ್ತದೆ.

"Sainthood has no distinction of caste, creed, sex or social status. The saint is he who rises above all narrow considerations. In the most unexpected places of the

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

lowliest of families saints have arisen - Even among the wealthy, which is probably a rare and more difficult phenomenon, there have appeared saints. The freedom of women in general, came under more and more of restriction during the middle ages. But no restriction could supress saints emerging out of Indian woman- hood.'' ಎಂಬ ಶ್ರೀ ಟಿ. ಎಂ. ಪಿ. ಮಹಾದೇವನ್ ಅವರ ಮಾತು ಮಹಾದೇವಿಯಕ್ಕನಿಗೆ ಅನ್ವಯಿಸುತ್ತದೆ.

ಪ್ರಭುದೇವರು, ಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಇವರೆಲ್ಲರಿಗೂ ಮಹಾದೇವಿಯ ನಿಜ ಪರಿಚಯವಾದಾಗ ಅವರಿಗಾದ ಆನಂದದ ಜೊತೆಗೇ ತಮ್ಮ ಸ್ಥಿತಿ ಯಾವುದೆಂದು ತಿಳಿಯಿತು- ಅವರು ಮುಕ್ತಮನಸ್ಸಿನಿಂದ ಪ್ರಶಂಸಿಸಿದರು.

''ಎನ್ನ ಮುಕ್ತಿಯ ಶಕ್ತಿ ನೀನೇ ತಾಯ''

ಎಂದು ಹೇಳಿದ ಮಾತಿನಲ್ಲಿ ಮಹಾದೇವಿಯ 'ಎತ್ತರ' ಏನೆಂಬುದು ಎಲ್ಲರಿಗೂ ಗೊತ್ತಾಗುತ್ತದೆ.

ಮಹಾದೇವಿ ಎಲ್ಲರೆದುರು ಮಣಿದು, ವಿನಯ, ಭಯ ಮತ್ತು ಭಕ್ತಿಯಿಂದ ಮಾತಾಡಿದ್ದು ನೋಡಿದರೆ, ತಾನು ಬಯಸಿದ ಪರಿಸರದಲ್ಲಿ ಬಂದು ಧನ್ಯಳಾದಳೆಂದು ಕಂಡರೂ, ಅವಳ ಬರವಿನಿಂದ ಸಕಲ ಶರಣರ, ಅನುಭವ ಮಂಟಪದ, ಅಷ್ಟೇ ಅಲ್ಲ, ಸಕಲ ಲೋಕದ ಕಲ್ಯಾಣವಾಯಿತೆಂದು ಹೇಳಬಹುದಾಗಿದೆ. ಜ್ಞಾನಕ್ಕೆ ಪರಾಕಾಷ್ಠೆ ಎಂಬುದು ಇರುವುದಿಲ್ಲ. ಜ್ಞಾನ, ಕಾಲ, ದೇಶಕ್ಕೇ ಏಕೆ, ಬ್ರಹ್ಮಾಂಡದ ಅನಂತರವೂ ಇರುತ್ತದೆ. 'ಜ್ಞಾನ' ಪರಮಾತ್ಮನ ಪರ್ಯಾಯವಾಚಿ ಶಬ್ದ- ಮಹಾದೇವಿ ಈ ಅತ್ಯಂತಿಕ ಜ್ಞಾನದ ಬೀಜಮಂತ್ರವನ್ನು ತಿಳಿದುಕೊಂಡಿದ್ದು ಅದ್ಭುತವೇ ಸರಿ. ಅಂತೆಯೇ ಬಸವಣ್ಣ:

ಥಳಥಳಿಸಿ ಹೊಳೆವ ತಳವೆಳಗಿನ ಸ್ವಯಂಜ್ಞಾನಿ
ಎನ್ನ ಕೂಡಲ ಸಂಗನಲ್ಲಿ ಬೆಳಗುವ ಜ್ಯೋತಿ.

ಎಂದು ಮಹಾದೇವಿಯಕ್ಕನನ್ನು ಬಣ್ಣಿಸುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಸೆಯ ಹಗ್ಗವನು ಹೊಸೆ ಹೊಸೆದು ಹುರಿಗೊಳಿಸಿ
ತಂತಮ್ಮ ತನುಮನವ ತಂತಾವ ಬಗಿ ಬಗಿದು
ಕಟ್ಟು ಕಟ್ಟುತೆ ಸತ್ತು ಹುಟ್ಟುವಾ ಬಾಳ್ವೆಗಾಗ
ಒಡನಾಟವೇತಕಯ್ಯ? ಹೊಲ್ಲ ಹೊಲ್ಲ!

ಲೌಕಿಕ ಜೀವನದೊಂದಿಗಿರುವ ಒಡನಾಟವನ್ನು ತ್ಯಾಗ ಮಾಡಿ ಶರಣರ ಸಂಗವನ್ನು ಬಯಸಿ ಬಂದಿರುವುದಾಗಿ ಮಹಾದೇವಿ ಹೇಳುತ್ತಾಳೆ. ಜೀವನದ ಸಾರ್ಥಕತೆ, ಜೀವನದಲ್ಲಿಟ್ಟುಕೊಂಡಿರುವ ಆಸಕ್ತಿಯಿಂದಲ್ಲ, ಅದರ ಬಗ್ಗೆ ಉಂಟಾದ ನಿರಾಸಕ್ತಿಯಲ್ಲಿದೆಯೆಂಬ ನಂಬಿಕೆ ಮಹಾದೇವಿಯಲ್ಲಿದೆ. ಈ ನಿರಾಸಕ್ತಿಯ ಭಾವ ನಿಷ್ಕ್ರಿಯತೆಗೆ ದಾರಿ ಮಾಡಿಕೊಡುವಂಥದಲ್ಲ. ಇದು ಪ್ರವೃತ್ತಿಮಾರ್ಗದ ವೈರಾಗ್ಯದ ರಹಸ್ಯವಾಗಿದೆ. ಮಹಾದೇವಿ ನಿಃಸಂಗವನ್ನು ಬಯಸಿದರೂ ಮುಕ್ತಾತ್ಮಗಳಂತಿರುವ ಶರಣರ ಸಮುದಾಯದ ಸಂಗವನ್ನು ಬಯಸುತ್ತಾಳೆ. ಈ ಬಯಕೆ 'ಬಯಲಿ'ಗೆ ಮಾರ್ಗವನ್ನು ಪ್ರಶಸ್ತ ಮಾಡಿಕೊಡುತ್ತದೆಯೆಂಬ ನಂಬಿಕೆ ಅವಳಲ್ಲಿದೆ. ಮಹಾದೇವಿಯ ಬಯಲು 'Void' (vacuum) ಅಲ್ಲ ಅದು ಚೈತನ್ಯದ, ಸತ್ಯದ, ಶಿವದ ಗರ್ಭದಿಂದ ಶ್ರೀಮಂತವಾದದ್ದು.

ತನ್ನ ಗಂಡನೆಂದು ವರಿಸಿದ ಚೆನ್ನಮಲ್ಲಿಕಾರ್ಜುನನ ನಿರಂತರ ಸಂಗವೇ ಮಹಾದೇವಿಗೆ ಅನಿವಾರ್ಯವೆಂದು ತಿಳಿದು, ಪ್ರಭುದೇವರು- 'ನಡೆ ತಾಯಿ ನಡೆ ಮುಂದೆ ಶ್ರೀಶೈಲ ಪರ್ವತಕೆ' ಎಂದು ಹೇಳುತ್ತಾರೆ. ಶ್ರೀಶೈಲ ಪರ್ವತ, ಅಲ್ಲಿನ ಕದಳಿವನದಲ್ಲಿ ಮಹಾದೇವಿಯ ಸ್ಥಾನವೆಂದು ಪ್ರಭುದೇವರು ಮನದಟ್ಟು ಮಾಡಿಕೊಳ್ಳುತ್ತಾರೆ. ತಾನಿದ್ದಲ್ಲಿಯೇ ತನ್ನ ಚೆನ್ನಮಲ್ಲಿಕಾರ್ಜುನ ಇರುವನೆಂದು ಭಾವಿಸಿದ ಮಹಾದೇವಿಗೆ, ಶ್ರೀಶೈಲಕ್ಕೆ ಹೋಗಲು ಹೇಳುತ್ತಿರುವ ಪ್ರಭುದೇವರ ಮಾತಿನಲ್ಲಿ, ಒಂದು ಮಹತ್ವದ ಸೂಚನೆಯೂ ಅಡಕವಾಗಿದೆಯೆಂದು ನಾನು ಭಾವಿಸುತ್ತೇನೆ. ಮನುಷ್ಯನಾಗಿ ಹುಟ್ಟಿದ ಮೇಲೆ, ದೇಹದ ಮತ್ತು ಮನಸ್ಸಿನ ಸ್ಪಂದನಕ್ಕೆ ಮಣಿಯುವುದು ಸಹಜ ಮತ್ತು ಸ್ವಾಭಾವಿಕ. ಮಹಾದೇವಿಯೂ ಈ ಭಾವದಿಂದ ಹೊರತಾಗಿಲ್ಲ. ಅವಳಲ್ಲಿದ್ದ ಶ್ರೀಶೈಲದ ಸೆಳೆತದಿಂದ ಅವಳು ಇನ್ನೂ ಮುಕ್ತವಾಗಿಲ್ಲವೆಂದು ಪ್ರಭುದೇವರು ಭಾವಿಸುತ್ತಾರೆ. ಆದ್ದರಿಂದ ಅವಳು ಅಲ್ಲಿ ಹೋಗಲೇಬೇಕು. ತನ್ನ ಆರಾಧ್ಯ ದೇವತೆಯನ್ನು ಕಾಣಲೇಬೇಕು. ತನ್ನ ಭೌತಿಕ ನೆಲೆ ಯಾವದೆಂದು ತಿಳಿದುಕೊಳ್ಳಲೇಬೇಕು. ಇಷ್ಟೆಲ್ಲ ತಿಳಿದನಂತರ ಅವಳಲ್ಲಾಗುವ ಪರಿವರ್ತನೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಳ ಶ್ರೇಯಸ್ಸಿಗಾಗಿಯೇ ಎಂದು ಭಾವಿಸಿ- ''ನಡೆ ತಾಯಿ ನಡೆ ಮುಂದೆ ಶ್ರೀ ಶೈಲ ಪರ್ವತಕೆ'' ಎಂದು ಹೇಳುವುದರಲ್ಲಿ ಸ್ವಾರಸ್ಯವಿದೆ. ಆದರೆ ಹಾಗೆ ಹೇಳಿ ಪ್ರಭುದೇವರು ತಮ್ಮ ಆತ್ಮವಂಚನೆಯನ್ನೂ ಮಾಡಿಕೊಳ್ಳುವದಿಲ್ಲ- ತುಂಬ ಜಾಣತನದಿಂದ-

ನಡೆತಾಯಿ ನಡ ಮುಂದೆ, ಶ್ರೀಶೈಲ ಪರ್ವತಕೆ
ಶ್ರೀ ಚೆನ್ನಮಲ್ಲಿಕಾರ್ಜುನನ ಕದಳಿ ಬನಕೆ,
ಅದೇ ನಿಮ್ಮ ಸಮರಸ್ಯೈಕ್ಯದ ಠಾವು ತಾಯೆ
ನೀನು ನಾನೆಂಬುಭಯ ಸಂಗವನು ಕಳೆದುಳಿದು
ತಾನು ತಾನಾಗಿಹ ತ್ರಿಕೂಟದ ಮಹಾಗಿರಿಯ
ತುಟ್ಟ ತುದಿಯನು ಮೆಟ್ಟಿ ನಿಂದು ನೋಡಿದರಲ್ಲಿ
ಬಟ್ಟ ಬಯಲೇ ಕಾಣಬಹುದು ನೋಡಮ್ಮ.

ಅಂದರೆ, ನೀನು, ಅಲ್ಲಿ ಹೋದರೂ ಕಾಣುವುದೇನು? ''ಬಟ್ಟ ಬಯಲೇ'' ಇದರಿಂದ ಅವಳು ಗಾಬರಿಗೊಳ್ಳಬಹುದೆಂದು ಭಾವಿಸಿ-

ಕದಳಿಯಾ ಕಳದಲ್ಲಿ ಒಳಹೊಕ್ಕು ನೋಡಿದರ
ತೊಳಗಿ ಬೆಳಗುವ ಜ್ಯೋತಿಯುಂಟು ನೋಡಮ್ಮ.

ಎಂದು ಹೇಳಿ, ಮಹಾದೇವಿಗೆ ಕಲ್ಯಾಣದ ದಾರಿ ತೋರಿಸಿಕೊಡುತ್ತಾರೆ. ಇಲ್ಲಿ ಕವಿ ಮನಃಶಾಸ್ತ್ರದ ಸೂಕ್ಷ್ಮ ಭಾವವನ್ನು ಅತ್ಯಂತ ಕಲಾತ್ಮಕತೆ ಮತ್ತು ಸಹಜತೆಯಿಂದ ತೋರಿಸಿಕೊಟ್ಟಿದ್ದಾರೆ.

''ಭವ್ಯಮಾನವ'' ಸಮುದ್ರದ ವಿಶಾಲತೆಯನ್ನು ಪಡೆದುಕೊಂಡ ಕಾವ್ಯ. ಎಲ್ಲರಿಗೂ ಗೊತ್ತಿದ್ದಂತೆ ಸಮುದ್ರದಲ್ಲಿ ಮುತ್ತು ಸಿಗುತ್ತವೆ. ಮುತ್ತು ಸಿಗುತ್ತವೆ ಎಂದು ಕೈ ಹಾಕಿದಲ್ಲೆಲ್ಲ ಮುತ್ತು ಸಿಗುವುದಿಲ್ಲ. ಮುತ್ತಿಗಾಗಿ ಆಳಕ್ಕೆ ಇಳಿಯಬೇಕಾಗುತ್ತದೆ. ಶ್ರಮಪಡಬೇಕಾಗುತ್ತದೆ, ನಂತರ ಬೊಗಸೆ ತುಂಬ ಮುತ್ತು ಕೈಗೆ ಸಿಗುತ್ತದೆ. ಮಹಾಸಾಗರದ ಒಂದು ತೀರದ ಮೇಲೆ ನಿಂತರೆ, ಸಾಗರದ ಇನ್ನೂ ಮೂರು ದಡಗಳು ಕಾಣಸುವುದಿಲ್ಲ. ಒಳಗೆ ಇಳಿಯದ ಹೊರತು ಆಳ ಗೊತ್ತಾಗುವುದಿಲ್ಲ. ಆಳಕ್ಕೆ ಹೋದ ಹೊರತು ಸಮುದ್ರದ ಒಡಲಿನಲ್ಲಿದ್ದ ಸಂಪತ್ತು ಕೈಗೆ ಸಿಗುವುದಿಲ್ಲ- ಹಾಗೆಯೇ 832 ಪುಟಗಳಲ್ಲಿ ಹರಡಿಕೊಂಡ ಕಾವ್ಯ ಒಂದು ಸಮುದ್ರದಂತಿದೆ. ನಾನು ಒಂದು ತೀರದ ತುಂಬ ಸುರಕ್ಷಿತ ಸ್ಥಾನದಲ್ಲಿ ನಿಂತು, ಅದನ್ನು ನೋಡಿದ್ದೇನೆ ಅಷ್ಟೆ. ನನ್ನ ಈ ಲೇಖನದಲ್ಲಿ ಮೊದಲಿನ ಒಂದು ನೂರು ಪುಟಗಳಲ್ಲಿ ನನಗೆ ಕಂಡಿದ್ದನ್ನು ಮಾತ್ರ ಹೇಳುವ ಪ್ರಯತ್ನ ಮಾಡಿದ್ದೇನೆ. ಉಳಿದ ಅಂದಾಜು 750 ಪುಟಗಳ ವಿಸ್ತಾರದುದ್ದಕ್ಕೂ ಸಂಚರಿಸುವ ಸಾಹಸ ನನಗಿಲ್ಲ, ಹಾಗಾಗಿ ನಾನು ಇಲ್ಲಿಗೆ ನಿಲ್ಲುತ್ತೇನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' - ಕಾವ್ಯಾವಲೋಕನ

ಕೀರ್ತಿನಾಥ ಕುರ್ತಕೋಟಿ

ಶ್ರೀ ಭೂಸನೂರಮಠರ ಭವ್ಯಮಾನವ ಎಂಬ ಕಾವ್ಯ ಒಂದು ದೃಷ್ಟಿಯಿಂದ ಐತಿಹಾಸಿಕ ಕಾವ್ಯ. ಅಂದರೆ ತಮ್ಮ ಇತಿಹಾಸದಲ್ಲಿಯ ಒಂದು ಯುಗದ ತಾತ್ವಿಕ ಚಿಂತನೆಯನ್ನು ಬಿತ್ತರಿಸುವ ಕೃತಿ. ಇನ್ನೊಂದು ದೃಷ್ಟಿಯಿಂದ ನೋಡಿದಾಗ ಅದಕ್ಕೆ ಒಂದು ಸಾರ್ವಕಾಲಿಕವಾದ ಸ್ವರೂಪವೂ ಇದೆ, ಅಂದರೆ ಮನುಷ್ಯನ ಅಂತರಂಗದಲ್ಲಿ ತಾತ್ವಿಕತೆಯ ಬೆಳವಣಿಗೆಯ ಚಿತ್ರವೂ ಅಲ್ಲಿದೆ. ಈ ತಾತ್ವಿಕ ಬೆಳವಣಿಗೆಗೂ ಇತಿಹಾಸಕ್ಕೂ ಸಂಬಂಧವೇ ಇಲ್ಲ. ಐತಿಹಾಸಿಕವಾಗಿ ಹನ್ನೆರಡನೆಯ ಶತಮಾನದ ವೀರಶೈವ ಶರಣರ ವಿಸ್ಮಯಕರವಾದ ತಾತ್ವಿಕ ಚಿಂತನ ಮತ್ತು ಸಂವಾದಗಳ ಚಿತ್ರ ಇಲ್ಲಿದೆ. ಆದರೆ ಕಾಲಾನುಕ್ರಮದಲ್ಲಿ ಮನುಷ್ಯನ ಮುಂದಿನ ಬೆಳವಣಿಗೆ ಯಾಕೆ ಅದೇ ರೀತಿಯಲ್ಲಿ ಮುಂದುವರಿಯಲಿಲ್ಲ ಎಂಬ ಪ್ರಶ್ನೆಯೂ ಇದೆ. ಮನುಷ್ಯನ ಜೀವ ವಿಕಾಸದ ನಿಯಮಗಳು ನಮಗಿನ್ನೂ ಅಜ್ಞಾತವಾಗಿಯೇ ಇವೆ.

'ಭವ್ಯಮಾನವ'ದ ದೀರ್ಘ ವಿಸ್ತಾರದಲ್ಲಿ ಮೊದಲ ಕಾಂಡ (ಕಲ್ಯಾಣಕಾಂಡ) ಮಹಾದೇವಿಯಕ್ಕನ ಆಧ್ಯಾತ್ಮಿಕ ವಿಕಾಸಕ್ಕೆ ಮೀಸಲಾಗಿದೆ. ಉಡುತಡಿಯಿಂದ ಹೊರಟ ಅಕ್ಕ ಇಹಲೋಕದ ಜಂಜಡವನ್ನೆಲ್ಲ ಕಳೆದುಕೊಂಡು ಕಲ್ಯಾಣಕ್ಕೆ ಬಂದು ಅನುಭವ ಮಂಟಪದ ಶಿವಶರಣರನ್ನೆಲ್ಲ ಕಂಡ ಅಕ್ಕ ವೈಯಕ್ತಿಕವಾಗಿ ತನ್ನ ಮಣಹವನ್ನೆಲ್ಲ ಪೂರೈಸಿದ್ದಾಳೆ. ಪ್ರಭು ದೇವರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತು ತನ್ನ ನಿಜವೇನೆಂಬುದನ್ನು ಪ್ರಾಮಾಣಿಕವಾಗಿ ನಿರೂಪಿಸಿದ್ದಾಳೆ. ಇನ್ನು ಕಲ್ಯಾಣದಿಂದ ಅವಳು ಹೋಗಬೇಕಾದದ್ದು ಶ್ರೀ ಶೈಲದ ಕದಳಿ ಬನಕ್ಕೆ, ಚೆನ್ನಮಲ್ಲಿಕಾರ್ಜುನನಲ್ಲಿ ಸಾಯುಜ್ಯವನ್ನು ಪಡೆಯುವದಕ್ಕೆ. ಪ್ರಭುದೇವರ ಅನಿಮಿಷ ದೃಷ್ಟಿಗೆ ಎಲ್ಲವೂ ಸ್ಪಷ್ಟವಾಗಿ ಕಾಣುತ್ತಿದೆ. ಆದರೆ, 'ಭವ್ಯಮಾನವ'ದ ಪ್ರಭುದೇವರು ಇತಿಹಾಸದ ಸರ್ವವ್ಯಾಪಿ ಪ್ರಕ್ರಿಯೆಯ ಆಚೆಗಿನ ಒಂದು ಕ್ಷಣವನ್ನು ಕಾಣುತ್ತಾನೆ. ಶ್ರೀಶೈಲದ ಕದಳಿ ಬನ ಅಕ್ಕನಿಗೆ 'ಸಮರಸೈಕ್ಯದ ಠಾವು' ಎಂಬುದು ಪ್ರಭುವಿಗೆ ಗೊತ್ತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀನು ನಾನೆಂಬುಭಯ ಸಂಗವನು ಕಳೆದುಳಿದು
ತಾನು ತಾನಾಗಿಹ ತ್ರಿಕೂಟದ ಮಹಾಗಿರಿಯ
ತುಟ್ಟತುದಿಯನು ಮೆಟ್ಟಿ ನಿಂದು ನೋಡಿದರಲ್ಲಿ
ಬಟ್ಟ ಬಯಲೇ ಕಾಣಬಹುದು ನೋಡಮ್ಮ
ಆ ಬಯಲ ಬೆರಸುವದೆ ಗಿರಿಯೊಳಗೆ ತಾನೊಂದು
ಕಾಣಬಾರದ ಕದಳಿಯುಂಟು ನೋಡಮ್ಮ.
ಕದಳಿಯಾ ಕಳವಲ್ಲಿ ಒಳಹೊಕ್ಕು ನೋಡಿದರೆ
ತೊಳಗಿ ಬೆಳಗುವ ಜ್ಯೋತಿಯುಂಟು ನೋಡಮ್ಮ
ನಡೆಯಲ್ಲಿ ನಡೆ ಗುಹೇಶ್ವರ ಲಿಂಗದಲಿ ತಾಯೆ
ಪರಮ ಪದವಿಯು ನಿನಗೆ ಸ್ವಯವಹುದು ನೋಡಮ್ಮ.

ಪ್ರಭುದೇವರ ಕಡುಬಿನ ಮಾತುಗಳಿವು. ಆದರ ಜೊತೆಗೆ ನಿರಾಕಾರದ ಆಕಾರವನ್ನು ಬಯಲಿನ ಭೌಗೋಲಿಕ ವಿವರಗಳಲ್ಲಿ ಹುದುಗಿಸಿ ಹೇಳುವ ಆವನ ಕಾವ್ಯಚಾತುರ್ಯ ಕೂಡ ಅಸದೃಶ್ಯವಾದದ್ದು. ಶರಣಜೀವದ ಕೃತಾರ್ಥತೆ ಇಲ್ಲಿ ಮಾತಾಗಿ ಮೂಡಿದೆ.

ಆದರೆ ಪ್ರಭುದೇವರು ಇಷ್ಟಕ್ಕೆ ನಿಲ್ಲುವುದಿಲ್ಲ. ಅಕ್ಕನ ಜೀವನದ ಊರ್ಧ್ವಗತಿ ಮನುಷ್ಯಜೀವನದ ಇತಿಹಾಸದ ಗತಿಗೆ ವ್ಯತಿರಿಕ್ತವಾದದ್ದು. ಇತಿಹಾಸ ಪಡೆದುಕೊಳ್ಳುವದು ಒಂದು ಪಾಲಾದರೆ ಕಳೆದುಕೊಳ್ಳುವದು ನೂರು ಪಾಲು. ಪ್ರಭುವಿನ ಅಂತಃಕರಣಕ್ಕೆ ಈ ಮಾತು ಗೊತ್ತಿದೆ. ಅಕ್ಕನಿಗೆ ಇನ್ನೊಂದು ಆದೇಶ ನೀಡುತ್ತಾನೆ.

ಮತ್ತೊಂದು ಮಾತು ತಾಯೆ,
ಲಿಂಗದಾಣತಿ ಗುಹೇಶ್ವರ ಲಿಂಗದಪ್ಪಣೆ
ಆದೇಶ ಬಂದಿಹುದು ಚೆನ್ನನ ನಿರೂಪ
ನಿನ್ನ ಬರವನೆ ಹಾರಿ ಗಿರಿಚೆನ್ನಮಲ್ಲಯ್ಯ
ನಿಂದಿಹನು ಪರ್ವತಮಹಾದ್ವಾರದೊಳು ಮುಂದೆ.
ಲೋಕದೊಳು ಮಾನವನ ಕುಲದೊಳಗೆ ನೀ ಹುಟ್ಟಿ
ಕುಲದ ಲೋಕದ ಋಣವ ತೀರಿಸುವ ಮಣಹ
ಪೂರೈಸಬೇಕೆಲೆಲೆ ಮಗಳೆ ಮಹಾದೇವಿ
ಭಾರ ನಿನ್ನದು ತಾಯಿ ಜಗದ ಭಾರ;
ನಿತ್ತರಿಸು ಶಕ್ತಿ ನೀನು ತಾಯೆ
ನಡೆ ತಾಯೆ ಮುಂದಕ್ಕೆ ಶರಣಾರ್ಥಿ ಶರಣಾರ್ಥಿ!

ಅಕ್ಕನ ಜೀವನದ ಇತಿಹಾಸದಲ್ಲಿ ಈ ಸಂಗತಿ ಇರಲಿಕ್ಕಿಲ್ಲ. ಆದರೆ 'ಭವ್ಯಮಾನವ'ದ ಕಾವ್ಯೋದ್ದೇಶ ಈ ಕ್ಷಣವನ್ನು ಹುಟ್ಟಿಸಿಕೊಂಡಿದೆ. ಪ್ರಭುದೇವರ ಅಂತಃಕರಣ ಗುಹೇಶ್ವರ ಲಿಂಗದ ಅಪ್ಪಣೆಯನ್ನು ಪಡೆದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ಒಂದು ಕಾಲಕ್ಕೆ ಅಕ್ಕನ ಗುರುವಾಗಿ ಚೆನ್ನಮಲ್ಲಿಕಾರ್ಜುನನ ಸುಳುವನ್ನು ತೋರಿಸಿಕೊಟ್ಟ ಗಿರಿಚೆನ್ನಮಲ್ಲಯ್ಯ ಈಗ ಹೆಂಡತಿ ಮಕ್ಕಳನ್ನು ಕಳೆದುಕೊಂಡು, ದುಃಖದ ಉರಿಯಲ್ಲಿ ಬೆಂದು ಹತಾಶನಾಗಿದ್ದಾನೆ. ಅಕ್ಕ ಅವನಿಗೆ ಸಮಾಧಾನ ನೀಡಬೇಕು. ತಿಳುವಳಿಕೆಯ ಕಣ್ಣುಕೊಟ್ಟು ನಿಜಸ್ಥಿತಿಯ ನೆಲೆಯನ್ನು ತೋರಿಸಬೇಕು. ಎಲ್ಲ ಹಂಗನ್ನೂ ಹರಿದುಕೊಂಡ ಅಕ್ಕನಿಗೆ 'ಕುಲದ ಲೋಕದ ಋಣವ ತೀರಿಸುವ ಮಣಿಹ' ಇನ್ನೂ ಇದೆಯೆಂದು ಪ್ರಭು ನೆನಪು ಮಾಡಿಕೊಡುತ್ತಾನೆ. ಪ್ರಭುದೇವರು ಮಾನವನ ಇತಿಹಾಸವನ್ನು ತಿದ್ದುವದಿಲ್ಲ, ಆದರೆ ಅದಕ್ಕೆ ದಿಕ್ಕು ತೋರಿಸುತ್ತಾನೆ. ಇದೇ ಮಣಿಹವನ್ನು ಬಸವಣ್ಣ ತನ್ನ ರೀತಿಯಲ್ಲಿ ಪೂರೈಸಿದ್ದು ಈಗ ಇತಿಹಾಸಕ್ಕೆ ಸೇರಿದ ಮಾತಾಗಿದೆ. 'ಆದಿಯ ಲಿಂಗವ ಮೇದಿನಿಗೆ ತಂದು ಮರ್ತ್ಯದೊಳು ಮಹಾಮನೆಯ ಕಟ್ಟಿದ ಬಸವಣ್ಣ' ಈ ಮಣಿಹದ ಉದ್ದೇಶವನ್ನೂ ಪ್ರಭುದೇವರು ಬಲ್ಲ. ಅಕ್ಕ ಅದನ್ನು ತನ್ನ ರೀತಿಯಲ್ಲಿ ಪೂರೈಸಬೇಕಾಗಿದೆ. ಅಕ್ಕನಿಗೆ ಅಂಥ ಯೋಗ್ಯತೆಯಿದೆ; ಅಕ್ಕನ ಭಾರ ಜಗದ ಭಾರ! ಅದನ್ನು ನಿಸ್ತರಿಸುವ ತ್ರಾಣ ಯೋಗ್ಯತೆಗಳು ಅಕ್ಕನಿಗೆ ಇವೆ. ಗಿರಿಚೆನ್ನಮಲ್ಲಯ್ಯನ ವೈಯಕ್ತಿಕ ದುಃಖದಲ್ಲಿ ಹುಟ್ಟುವ ಕಾವ್ಯದಲ್ಲಿ, ಆ ಕಾವ್ಯದ ಮೂಲಕವಾಗಿ ಅಕ್ಕ ತನ್ನ ಮಣಿಹವನ್ನು ಪೂರೈಸಿದ್ದಾಳೆ. 'ಭವ್ಯಮಾನವ'ದ ಮುಂದಿನ ಕಾಂಡಗಳಲ್ಲಿ ಈ ಮಣಿಹದ ವಿಸ್ತಾರವಿದೆ. 'ಶ್ರೀಶೈಲಕಾಂಡ' ದಲ್ಲಿ ಗಿರಿಚೆನ್ನಮಲ್ಲಯ್ಯನ ಮನಸ್ಸಿನ ಉರಿ ತಣ್ಣಗಾಗಿ, ಅವನ ಶಿಷ್ಯ ಗಿರಿಮಲ್ಲ ಮತ್ತು ಮಹಾದೇವಿಯಕ್ಕ ಇವರ ದೀರ್ಘ ಸಂವಾದದಲ್ಲಿ, ಪ್ರಭು ಅಕ್ಕನಿಗೆ ಕೊಟ್ಟ ಆದೇಶ ಮಾತಿನಲ್ಲಿ ಅಭಿವ್ಯಕ್ತಿ ಪಡೆದು ಸಫಲವಾಗುತ್ತದೆ.

ಕಾವ್ಯದಲ್ಲಿಯ ಕಥಾನಕದ ದೃಷ್ಟಿಯಿಂದ ಇದು ಒಂದು ಸ್ವಾರಸ್ಯವಾದ ತಿರುವಾಗಿದೆ. ಮಾನವನ ಇತಿಹಾಸದ ಗತಿಯನ್ನು ತಪ್ಪಿಸಿಕೊಂಡು ಊರ್ಧ್ವಗತಿಯನ್ನು ಅನುಸರಿಸಿದ್ದ ಅಕ್ಕನ ಜೀವನ ಮತ್ತೆ ಇತಿಹಾಸದ ಗತಿಯನ್ನು ಅನುಸರಿಸಬೇಕು. ಆದರೆ ಅಂತರವೆಂದರೆ ಅಕ್ಕ ಮನುಷ್ಯನ ಇತಿಹಾಸದಲ್ಲಿ ಪ್ರವೇಶಿಸುವದು ಪ್ರಜ್ಞಾಪೂರ್ವಕವಾಗಿ, ಸಂಪೂರ್ಣ ಅರಿವಿನಿಂದ. ಅಂಥ ನಿಲುವಿನಲ್ಲಿ ಮಾತ್ರ ಇತಿಹಾಸದ ಕತ್ತಲೆ ಮತ್ತು ಬೆಳಕುಗಳನ್ನು ವಿಂಗಡಿಸಿ ನೋಡಬಹುದು. ಅಕ್ಕನೇ ಹೇಳಿರುವಂತೆ ಇದು ಹಾವು ಹಾವಾಡಿಗನ ಸ್ನೇಹದಂತೆ. ಅಕ್ಕ ತನ್ನ ನಿರ್ವ್ಯಾಜ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತಿ ಮತ್ತು ಪ್ರೀತಿಗಳಿಂದ ಗುರುಚೆನ್ನಮಲ್ಲನ ಹೃದಯದುರಿಯನ್ನು ತಣಿಸಿ ಅವನ ಮನಸ್ಸನ್ನು ಸಂವಾದಕ್ಕಾಗಿ ಸಿದ್ಧಗೊಳಿಸುತ್ತಾಳೆ. ಗುರುವಿನ ಪ್ರಜ್ಞೆ ಮೊದಲೇ ಪರಿಣತವಾದದ್ದು, ಗ್ರಹಣ ಹಿಡಿದ ಚಂದ್ರನಂತೆ ಅದಕ್ಕೆ ಶೋಕದಿಂದ ತಾತ್ಪೂರ್ತಿಕವಾಗಿ ಮೋಹ ಮುಸುಕಿತ್ತು ಅಷ್ಟೇ. ಶೋಕದ ನೆರಳು ಸರಿದು ಹೋದ ಮೇಲೆ ಅವನು ಮೊದಲಿನ ಗುರುವಾದ. ಈ ಮೂವರ ಸಂವಾದ ಮುಂದೆ ಕಾವ್ಯದಲ್ಲಿ ಹೊನಲಾಗಿ ಹರಿಯುತ್ತದೆ.

2

'ಶ್ರೀಶೈಲಕಾಂಡ'ದ ಕೊನೆಗೆ ಕತ್ತಲೆಯ ಮಹಿಮೆಯನ್ನು, ಬೆಳಕು ಕತ್ತಲೆಗಳ ಒಡನಾಟವನ್ನು ಕುರಿತ ಮಾತು ಬರುತ್ತದೆ. ಇದೇ 'ಕತ್ತಲೆಯಕಾಂಡ' ಕ್ಕೆ ಒಂದು ರೀತಿಯಲ್ಲಿ ನಾಂದಿಯಾಗುತ್ತದೆ. ಕತ್ತಲೆಯ ಸಮಸ್ಯೆ ಬೇಗ ಬಗೆಹರಿಯುವಂಥದಲ್ಲ. ಆದ್ದರಿಂದ ಇಡಿಯ ಒಂದು ಕಾಂಡ ಅದಕ್ಕೆ ಮೀಸಲಾಗಿದೆ. ನಮ್ಮ ನಾಡಿನ ಇತಿಹಾಸದ ಅನೇಕ ಪ್ರಕರಣಗಳು ಇಲ್ಲಿ ಬಿತ್ತರಗೊಂಡಿವೆ. ಕತ್ತಲೆಯ ಬಾಳುವೆಗೆ ಕೂಡ ಒಂದು ಕ್ರಮವಿದೆ, ಅದರ ಶಕ್ತಿ ಸಾಮರ್ಥ್ಯಗಳಿವೆ, ಸಿದ್ಧಿ ಸಾಧನೆಗಳಿವೆ. ಮಾನವ- ಪ್ರಾಣಿಯ ವಿಕಾಸದ ಪ್ರಕ್ರಿಯೆ ನಡೆದದ್ದು ಇದೇ ಕತ್ತಲೆಯಲ್ಲಿ ಎಂಬುದನ್ನು ಮರೆಯುವಂತಿಲ್ಲ. ಈ ಲೋಕದಲ್ಲಿ ಕೂಡ ಒಂದು ಮೌಲ್ಯ ಪ್ರಪಂಚವಿದೆ, ಒಳಿತು-ಕೆಡುಕುಗಳ ತಾರತಮ್ಯವಿದೆ, ಅಂದರೆ ಒಂದು ಸಂಸ್ಕೃತಿಯ ಪ್ರಜ್ಞೆ ಇದೆ. ಆದರೆ ಈ ಲೋಕದ ಗತಿ ನೆಲದ ಗತಿಗೆ ಸಮಾನಾಂತರದಲ್ಲಿರುವದೇ ಈ ಲೋಕದ ಸಮಸ್ಯೆಯಾಗಿದೆ. ಕಾಲ ಮತ್ತು ದೇಶಗಳ ಪರಿಸೀಮೆಯಲ್ಲಿ ಬದ್ಧವಾಗಿದ್ದರೂ ತನ್ನ ಗತಿಯಲ್ಲಿ ಮುನ್ನಡೆದಿರುವ ಮನುಕುಲದ ಮಹಾಯಾತ್ರೆಗೆ ಹುಟ್ಟು-ಸಾವಿನ ಎರಡು ಧ್ರುವಗಳಾಚೆಗೆ ಏನೂ ಕಾಣುವುದಿಲ್ಲ. ತನ್ನ ನಿಜಸ್ಥಿತಿಯ ಅರಿವು ಈ ಲೋಕಕ್ಕಿಲ್ಲ. ತನ್ನ ನಿಜಸ್ಥಿತಿಯ ಅರಿವು ಹೊರಗಿನಿಂದೆಂಬಂತೆ ಬಂದು ಮಿಂಚುವ ಪರಿಸ್ಥಿತಿಗೆ ಈ ಕತ್ತಲೆಯೇ ಕಾರಣವಾಗಿದೆ. ತನ್ನ ನೋಟದಾಚೆಗೆ, ಅರಿವಿನ ಆಚೆಗೆ, ಅನುಭವದ ಆಚೆಗೆ ಇರುವ ಮಹಾಶಕ್ತಿಗಳು ತನ್ನ ಮೇಲೆರಗಿದಾಗ ಅವುಗಳನ್ನು ವ್ಯಾಖ್ಯಾನಿಸುವ, ಅರ್ಥವಿಸುವ ಕೆಲಸವನ್ನೇನೋ ಈ ಲೋಕ ಮಾಡುತ್ತದೆ. ಆದರೆ ತನಗೂ ಅವುಗಳಿಗೂ ಇರುವ ಸಂಬಂಧದ ಬಗ್ಗೆ ಯೋಚಿಸುವ ಗೊಡವೆಗೆ ಹೋಗುವದಿಲ್ಲ. ಇಹ ಮತ್ತು ಪರ ಇವುಗಳ ವಿಂಗಡಣೆ ಇಲ್ಲಿ ನಿಯತಿಯಷ್ಟು ನಿಷ್ಠುರವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂಥ ನಿಷ್ಠುರತೆಯನ್ನು ಮುರಿದು ಮುಂದೆ ಹೋದದ್ದೇ ಶರಣನ ಮಹಾಸಾಹಸ-ವೆಂಬುದನ್ನು 'ಉದಯಕಾಂಡ' ಮತ್ತು 'ಉಜ್ವಲಕಾಂಡ'ಗಳು ಪ್ರತಿಪಾದಿಸುತ್ತವೆ. ಇಂಥ ಕೆಚ್ಚಿದ್ದೀರರು ಹಿಂದೆ ಕೂಡ ಇದ್ದರು. ಆದರೆ ಅವರ ಸಂಖ್ಯೆ ವಿರಳವಾಗಿತ್ತು. ಕರ್ನಾಟಕದಲ್ಲಿ 12ನೆಯ ಶತಮಾನದಲ್ಲಿ ಒಂದು ಆಧ್ಯಾತ್ಮಿಕವಾದ, ಸಾಮೂಹಿಕ ಆಂದೋಲನ ನಡೆಯಿತೆಂಬುದು ಕೂಡ ಒಂದು ಐತಿಹಾಸಿಕ ಸಂಗತಿಯಾಗಿದೆ. ಈ ಆಂದೋಲನದ ಮೂಲಕಾರಣಗಳೇನೇ ಇರಲಿ ಇದರಿಂದಾಗಿ ಇಹ ಮತ್ತು ಪರಗಳ ವಿಂಗಡನೆಯ ಪರಿಪ್ರೇಕ್ಷ್ಯ ಬದಲಾದದ್ದು ಸುಳ್ಳಲ್ಲ. 'ತನ್ನ ನಿಜಗಂಭೀರಕೆಚ್ಚತ್ತ ಶರಣ! ತನ್ನ ವಿಶ್ವದ ಜಗಜ್ಜನ್ಮಭೂಮಿಯ ಕಂಡ'. ಐತಿಹಾಸಿಕ ಜಗತ್ತಿಗಿಂತ ಸಂಪೂರ್ಣ ಭಿನ್ನವಾಗಿರುವ ಇನ್ನೊಂದು ಜಗತ್ತು ತನ್ನ ನಿಜಸ್ಥಿತಿಗೆ ಎಚ್ಚತ್ತ ಶರಣನಿಂದ ಹುಟ್ಟಿಕೊಳ್ಳುತ್ತದೆ. ಇದು ಕೂಡ ವ್ಯರ್ಥವಾದ ಸಾಹಸವಲ್ಲವೇ ಎಂಬ ಪ್ರಶ್ನೆಯೂ ಇದೆ. 'ಉದಯಕಾಂಡ' ದಲ್ಲಿ ಗಿರಿಮಲ್ಲ ಈ ಪ್ರಶ್ನೆಯನ್ನು ಕೇಳಿದ್ದಾನೆ.

ಇಂಥ ನರವಿಂಧ್ಯದ ಕರಾಳ ಚರಿತಕ್ಕೆ
ಪೂಜೆಯನು ಭಕ್ತಿಯನು ಜೋಡಿಸುವದು
ಗಗನ ನಕ್ಷತ್ರಗಳ ಕೊಯ್ತಂದು ಮನೆಯ
ಮಾಡದೊಳಗಿಟ್ಟು ಕತ್ತಲೆಯ ಕಳೆವಂತೆ!
ಗಾಳಿಯನು ಬಲವಾಗಿ ಗುದ್ದಿ ಗುದ್ದಿ
ಮೈಹಣ್ಣು ಮಾಡಿಕೊಳ್ಳುವ ಹದನ ಶರಣನದು!

ಈ ಸಂಶಯಕ್ಕೆ ಉತ್ತರವೆಂದರೆ ಶರಣನ ದಿವ್ಯಸಾಹಸದ ಅನುಭವ ಮಾತ್ರ. 'ಭಕ್ತಿಯೆಂದರೆ ತನ್ನ ನಿಜಕೆ ಕಟ್ಟಿದ ಮಾರ್ಗ' ಎಂಬ ತಿಳುವಳಿಕೆ ಶರಣನದು. ಭಕ್ತಿಯೊಳಗಿನ ದ್ವೈತಭಾವ ಅದ್ವೈತವಾದ ಅನುಭವವಾಗುವ ಬಗೆ ಇಲ್ಲಿದೆ. ಪ್ರಭುದೇವರು, ಬಸವಣ್ಣ, ಮಹಾದೇವಿಯಕ್ಕ, ಚೆನ್ನಬಸವಣ್ಣ ಮೊದಲಾದ ಇನ್ನೂ ಅನೇಕ ಶರಣರ ಜೀವನದ ರೀತಿಯೇ ಇದಕ್ಕೆ ಪ್ರಮಾಣವಾಗುತ್ತದೆ. ಈ ಸಾಹಸದ ಉದ್ದೇಶವೆಂದರೆ ಅಲ್ಪವನ್ನು ಭೂಮತ್ವಕ್ಕೆ, ಮರ್ತ್ಯವನ್ನು ಅಮರ್ತ್ಯಕ್ಕೆ ಕೊಂಡೊಯ್ಯುವುದು. ಸುಖದುಃಖಗಳಿಂದ, ಕರ್ಮವಾಸನೆ-ಯಿಂದ ಕೂಡಿದ ಪ್ರಪಂಚವನ್ನು ನಿತ್ಯ ನಿರಂಜನಕ್ಕೆ ಎತ್ತಿಕೊಂಡೊಯ್ಯುವ ಶಕ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಕಿಗೆ ಇದೆಯೇ ಎಂಬುದು ಶರಣ ದೇವರಿಗೆ ಕೇಳುವ ಧೀರಪ್ರಶ್ನೆ. ಪ್ರಾಕೃತ ಲೋಕವನ್ನು ಅದರ ಪ್ರಾಕೃತತೆಯಿಂದ ಬಿಡಿಸುವದೇ ಒಂದು ಕಷ್ಟ. ಅದಕ್ಕೆ ಅಪ್ರಾಕೃತದ ಹಸಿವನ್ನು ಹುಟ್ಟಿಸುವದು ಇನ್ನೂ ಕಷ್ಟ. ಅದೂ ಸಾಧ್ಯವಾದರೆ ಆ ಹಸಿವನ್ನು ತೃಪ್ತಿಪಡಿಸುವ ಕೂಳನ್ನು ಒದಗಿಸುವದು ಅದಕ್ಕಿಂತ ಹೆಚ್ಚಿನ ಕಷ್ಟ. ಇಂಥ ಸಾಹಸ ಕಾರ್ಯಕ್ಕೆ ವಿಳ್ಳವತ್ತಿದವನು ಶರಣ. 'ಕತ್ತಲೆಯ ಬೆಳಗುಮಾಡುವ ತಂತ್ರವೇನಯ್ಯಾ' ಎಂದು ಪ್ರಶ್ನೆಮಾಡಿದ ಅಕ್ಕನಿಗೆ ಗುರುಚೆನ್ನಮಲ್ಲ 'ಇನ್ನಿದಕ್ಕೆ ಪರಮ ಪರಿಹಾರದುತ್ತರವ ಕೊಟ್ಟರೆ ಕೊಡಬಲ್ಲ ಗರುವರಾರು,ನೀನಲ್ಲದೇ ವಿಶ್ವಮಾನವ ಜಗನ್‌ಮಾತೆ?' ಎಂದು ಉತ್ತರವೀಯುತ್ತಾನೆ. ಈ ತಂತ್ರದ ವಿಚಾರ ಶರಣ ಸಮಯಕ್ಕೆ ಸೇರಿದ ಸಮಸ್ಯೆಯಾಗಿರುವದರಿಂದ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಕಾರಣ ಇಲ್ಲ. ಅದರ ಸಂಪೂರ್ಣವಾದ ಹೊಣೆ ಶರಣನದು, ಅದನ್ನು ನಿರ್ವಹಿಸುವ ಸಾಮರ್ಥ್ಯ ಅವನಿಗೆ ಅಗತ್ಯಕ್ಕಿಂತ ಹೆಚ್ಚಿಗೇ ಇದೆ.

ಶರಣನ ಸಾಹಸದ ಮಹತಿಯ ಬಗ್ಗೆ ಎರಡು ಮಾತಿಲ್ಲ ನಿಜ. ಆದರೂ ಅವನ ಹುಟ್ಟು ಜನಜಂಗುಳಿಯಿಂದ ಬೇರೆಯಾದದ್ದೇ? ಪ್ರಭುದೇವರು ಅಕ್ಕನಿಗೆ ಹೇಳಿದ್ದ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು. 'ಲೋಕದೊಳು ಮಾನವನ ಕುಲದೊಳಗೆ ನೀ ಹುಟ್ಟಿ। ಲೋಕದ ಕುಲದ ಋಣವ ತೀರಿಸುವ ಮಣಿಹ। ಪೂರೈಸಬೇಕೆಲೆಲೆ ಮಗಳೆ.......।' ಅಕ್ಕ ಕೂಡ ಇದೇ ಮಾನವ ಇತಿಹಾಸದ ಸೊತ್ತು. ಇತಿಹಾಸದ ಗತಿ ನೆಲದ ಸಮಾಂತರದ ಗತಿ ಎಂದು ಮೊದಲೇ ಹೇಳಿಯಾಗಿದೆ. ಆದರೆ ಈ ಇತಿಹಾಸದ ಒಂದು ದೊಡ್ಡ ಅನುಕೂಲತೆಯೆಂದರೆ ಅದು ಕೆಳಗೆ ಇಳಿಯುವಂತೆ ಮೇಲೆ ಕೂಡ ಏರಬಲ್ಲದಾಗಿದೆ. ಇತಿಹಾಸದ ಗತಿಯನ್ನು ತಡವದಿದ್ದರೆ ಅದು ಯಾಂತ್ರಿಕವಾಗಿ ತನ್ನ ಸಮಾಂತರ ಗತಿಯಲ್ಲಿಯೇ ಸಾಗಿ ಬಿಡುತ್ತದೆ. ಆದರೆ ಅದು ಮನಸ್ಸು ಮಾಡಿದರೆ ಕೆಳಗೆ ಇಳಿಯಬಲ್ಲದು, ಮೇಲೆಯೂ ಏರಬಲ್ಲದು. ಅಂದರೆ ಊರ್ಧ್ವಗತಿ, ಅಧೋಗತಿಗಳು ಇತಿಹಾಸದ ಸಂಕಲ್ಪಶಕ್ತಿಯನ್ನು ಅವಲಂಬಿಸಿವೆ. ಏನನ್ನೋ ಆಗಬಲ್ಲ ಸಂಭಾವ್ಯತೆಗಳು ಮನುಷ್ಯನಲ್ಲಿರುವದೇ ಒಂದು ವಿಸ್ಮಯದ ಮಾತಾಗಿದೆ. 'ಕತ್ತಲೆಯ ಕಾಂಡ' ದಲ್ಲಿ ಇಂಥ ಹಲವಾರು ಸಂಭಾವ್ಯತೆಗಳ ವಿಗಡ ಚಿತ್ರಗಳು ನಮಗೆ ಕಾಣುತ್ತವೆ. ಮಂಗನಿಂದ ಮಾನವನಾದ ಎಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಡಾರ್ವಿನ್ನನ ವಿಕಾಸಕ್ರಮವೇನೋ ನಮಗೆ ಹೇಳುತ್ತದೆ. ಆದರೆ ಮನುಷ್ಯನ ಉದಯ ಮಂಗನಲ್ಲಿ ಆದಂತೆ ಉಳಿದ ಪ್ರಾಣಿಗಳಲ್ಲಿ ಯಾಕೆ ಆಗಲ್ಲಿಲ್ಲ? ಎಂದರೆ ಉತ್ತರ ಸಿಗುವುದಿಲ್ಲ. 'ಅರಿತರೆ ಶರಣ, ಮರೆತರೆ ಮಾನವ' ಎನ್ನುವದು ವಾಸ್ತವಸ್ಥಿತಿಯ ಚಿತ್ರಣವೇ ಹೊರತು ಯಾಕೆ ಹಾಗಾಗುತ್ತದೆ ಎನ್ನುವದು ಗೊತ್ತಾಗುವುದಿಲ್ಲ. ಮನುಷ್ಯನಿಗಿರುವಂತೆ ಅವನ ಇತಿಹಾಸಕ್ಕೂ ಒಂದು ಸಂಕಲ್ಪಶಕ್ತಿ ಇದೆಯೇ? ಅಥವಾ ಇದೆಲ್ಲ ದೇವರಿಚ್ಛೆಯೇ? ಆದರೆ ಇವೆಲ್ಲ ಉತ್ತರದಂತೆ ಕಾಣುವ ಪ್ರಶ್ನೆಗಳೇ. ಇಷ್ಟೇ, ಶರಣನ ಉದಯವಾದರೆ ಅವನು ಮಣ್ಣನ್ನು ಬೆಳಗುಮಾಡದೇ ಇರಲಾರ. ಜಗದ ಕಬ್ಬಿನ ತೋಟದಲ್ಲಿ ಬಂದ ಶರಣರೆಂದರೆ ಶಿವನ ಮದಕರಿಗಳು ಎಂದು 'ಭವ್ಯಮಾನವ' ಈ ಶರಣರ ನಿಲುವನ್ನು ಬಣ್ಣಿಸುತ್ತದೆ. ಉಳಿದವರೆಲ್ಲ ಕುರಿಗಳಂತೆ ಕಬ್ಬಿನ ರವದಿ ಮತ್ತು ಸೋಗೆಗಳನ್ನು ಮೇಯ್ದರೆ ಶಿವನ ಈ ಮದಕರಿಗಳು ಕಬ್ಬಿನ ತನಿರಸವನ್ನು ಉಣ್ಣುತ್ತವೆಂದು ಈ ಕಾವ್ಯಕೃತಿ ಚಮತ್ಕಾರದ ಭಾವನೆಯಲ್ಲಿ ಹೇಳುತ್ತದೆ. ಶರಣನ ಅವತಾರದಿಂದ ಜಗತ್ತಿನ ಉದ್ಧಾರವಾಗುತ್ತದೆಂದ ಮೇಲೆ ಶರಣ ಪೂಜ್ಯನೆಂಬುದರಲ್ಲಿ ಸಂಶಯವಿಲ್ಲ. ಅಂದ ಮೇಲೆ ಅವನನ್ನೇ ಯಾಕೆ ಪೂಜಿಸಬಾರದು. ಆದರೆ ಮನುಷ್ಯನ ಚೈತನ್ಯಕ್ಕೆ ಇಂಥ ಆಲಸ್ಯ ಸರಿಯಾದದ್ದೇ ಎಂದು ಈ ಕಾವ್ಯ ಕೇಳುತ್ತದೆ. ಒಂದಲ್ಲ ಹತ್ತು ಮಾತುಗಳಲ್ಲಿ ಕೇಳುತ್ತದೆ. ಒಂದು ಹಣತೆಯಿಂದ ಇನ್ನೊಂದು ಹಣತೆ ದೀಪ ಹತ್ತಿಸಿಕೊಳ್ಳಬೇಕೇ ಹೊರತು ದೀಪದ ಸೌಂದರ್ಯವನ್ನು ಸ್ತುತಿಸಬಾರದು.

ಇನ್ನು ಶರಣನ ಜೀವನದಲ್ಲಿ ಸಮಸ್ಯೆಗಳೇ ಇಲ್ಲವೇ ಎಂದು ಕೇಳಿದರೆ ಬೇಕಾದಷ್ಟಿವೆ ಎಂದೇ ಹೇಳಬೇಕಾಗುತ್ತದೆ. ಎಲ್ಲ ಶರಣರೂ ಒಂದೇ ಎರಕದಲ್ಲಿ ಮೂಡಿ ಬಂದ ಗೊಂಬೆಗಳಲ್ಲ. ಅವರಲ್ಲಿ ವೈವಿಧ್ಯ ಬೇಕಾದಷ್ಟಿದೆ. ನಿಂತಲ್ಲಿ ನಿಂತರೂ ಚಟುವಟಿಕೆಯಾಗಿ ನಡೆದರೆ ವಿಶ್ರಾಂತಿಯಾದ ಅಲ್ಲಮನಂಥವರ ನಿಲುವು ಒಂದು ಬಗೆಯಾದರೆ ಕಾರಣಿಕ ಬಸವಣ್ಣನಂಥವರದು ಇನ್ನೊಂದು ನಿಲುವು. ಬಸವಣ್ಣನ ಜೀವಕ್ಕೆ ಹಗಲು ರಾತ್ರಿ ಎಚ್ಚರ. ಮಹದೇವಿಯಕ್ಕ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಮೊದಲಾದ ಇನ್ನೂ ಅನೇಕ ಶರಣರದು ವಿವಿಧ ರೂಪವಿನ್ಯಾಸ. ಆದರೆ ಎಲ್ಲರೂ ಸ್ವತಂತ್ರರು. ಯಾವಾವುದೋ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಆ ಕಾಯಕದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಂತ್ರವನ್ನೇ ಆಧ್ಯಾತ್ಮಿಕ ತಂತ್ರವನ್ನಾಗಿ ಮಾಡಿಕೊಂಡ ಅದ್ಭುತಚರಿತ್ರರು ಈ ಶರಣರು. ನಿಜದ ರಹಸ್ಯವನ್ನರಿಯಲು ಅವರ ಕಾಯಕ ಒಂದು ರೂಪಕವಾಗಿ ಕೆಲಸ ಮಾಡುತ್ತದೆ. ಅನಿಮಿಷಯ್ಯನ ಅನಿಮಿಷದೃಷ್ಟಿ, ಅಲ್ಲಮನ ನಿರಾಕಾರಬಿಂಬ, ಚೆನ್ನಮಲ್ಲಿಕಾರ್ಜುನನೊಡನೆ ಅಕ್ಕನ ಪ್ರಣಯ, ಬಸವಣ್ಣನ ಮಹಾಮನೆ, ಮಾರಯ್ಯ, ವೇಮಯ್ಯ, ಚಂದಯ್ಯ ಮೊದಲಾದವರ ಕಾಯಕಗಳು- ಇವುಗಳ ಉದ್ದೇಶ ಒಂದೇ ಆಗಿದ್ದರೂ ಆಯಾ ಶರಣನ ನಿಜವನ್ನು ಅವನ ಕಾಯಕದಿಂದ ಅರಿಯಬಹುದಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಮಾನವನ ಇತಿಹಾಸ ಒಮ್ಮೆಲೇ ಮಗ್ಗುಲು ಹೊರಳಿಸಿ, ತನ್ನ ಆತ್ಮದ ಇನ್ನೊಂದು ಮಗ್ಗುಲನ್ನು ತೋರಿಸಿತು. ಇದು ಕೂಡ ಒಂದು ಐತಿಹಾಸಿಕ ಘಟನೆ ನಿಜ, ಆದರೂ ಅದು ತೋರಿಸಿದ ಸತ್ಯ ಇತಿಹಾಸವನ್ನು ಮೀರಿದ ಸತ್ಯ, ಕಾಲಾತೀತವಾದ ಸತ್ಯ. ಇವೊತ್ತಿಗೂ ನೆನಪಾದರೆ ಸಾಕು ಅದರ ಹೊಳಪು ಕಣ್ಣು ಕುಕ್ಕಿಸುವಂಥದಾಗಿದೆ. ಆದರೆ ಇಲ್ಲಿ ಒಂದು ಪ್ರಶ್ನೆ ಮತ್ತೆ ಉಳಿಯುತ್ತದೆ, ಈ ಸತ್ಯದ ಪ್ರಭಾವ ಇತಿಹಾಸದ ಮೇಲೆ ಆಗಲಿಲ್ಲವೇ? ಶರಣರ ಗುರಿ ಕೂಡ ವೈಯಕ್ತಿಕವಾದ ಮೋಕ್ಷವೇ? ಬಸವಣ್ಣ ಅಂದು ಕಟ್ಟಿದ ಲಿಂಗ ನಿಜದ ಮಹಾಮನೆ ಇಂದಿಗೂ ಅದೇ ಸ್ಥಿತಿಯಲ್ಲಿದೆಯೆ? ಒಂದು ವೇಳೆ ಅದೇ ಸ್ಥಿತಿಯಲ್ಲಿದೆಯೆಂದರೂ ಅದೇ ಕೊನೆಯ ಮಾತೆ?

ಈ ಎಲ್ಲ ಪ್ರಶ್ನೆಗಳಿಗೆ 'ಭವ್ಯಮಾನವ'ದ ಕೊನೆಯ ಕಾಂಡ- 'ಭವ್ಯಕಾಂಡ'- ಸಾಧ್ಯವಿದ್ದ ಮಟ್ಟಿಗೆ ಉತ್ತರವೀಯಲು ಹವಣಿಸುತ್ತಿದೆ. ಅದಕ್ಕೂ ಮೊದಲು ಭಕ್ತನಾಗಲಿ, ಶರಣನಾಗಲಿ ಕೊನೆಯಲ್ಲಿ ಪಡೆದುಕೊಳ್ಳುವ ಗುರಿ ಮತ್ತು ಮನುಷ್ಯನ ಸಾಮಾನ್ಯವಾದ ಇತಿಹಾಸ ಇವುಗಳ ನಡುವಿನ ಅಂತರವನ್ನು ಅರಿಯಬೇಕಾಗುತ್ತದೆ. ಮನುಷ್ಯನ ಇತಿಹಾಸ- ಹುಟ್ಟು ಮತ್ತು ಸಾವುಗಳ ನಡುವೆ ನಡೆದಿರುವ ಒಂದು ಯಾತ್ರೆ- ಇದೊಂದು ಅರಿವಿಲ್ಲದ ಯಾಂತ್ರಿಕ ಕ್ರಿಯೆ ಹೌದು. ಇದರ ಬಂಧನದಿಂದ ತಪ್ಪಿಸಿಕೊಂಡು ಹೋದ ಶರಣ ಅಥವಾ ಭಕ್ತ ಪಡೆಯುವುದು ಸಂಪೂರ್ಣ ಅರಿವೇ ತಾನಾದ ಒಂದು ನಿರ್ವಾಣ ಸ್ಥಿತಿ, ಅಂದರೆ ಒಂದು ನಿಲುಗಡೆಯ ಸ್ಥಿತಿ. ಬಹುಶಃ ದೇವಾನುದೇವತೆಗಳ ಸ್ಥಿತಿಯೂ ಇದೇ ಎಂದು ಕಾಣುತ್ತದೆ. ಅದೇನೇ ಇದ್ದರೂ ಭೂಮಿಯ ಮೇಲಿನ ಮನುಷ್ಯನ ಬಾಳುವೆ, ಅದೆಷ್ಟೇ ಯಾಂತ್ರಿಕವಾಗಿರಲಿ, ಅದೊಂದು ಪ್ರಕ್ರಿಯೆಯೇ ಎಂಬುದನ್ನು ಮರೆಯುವಂತಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಷ್ಟಿಪ್ರಜ್ಞೆ - ಗುರುಚೆನ್ನಮಲ್ಲ

ಡಾ. ಎಸ್. ಜಿ. ಛವಾರಿ

1

ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಮಹಾಕಾವ್ಯಗಳಲ್ಲಿ ಕವಿ ಭೂಸನೂರಮಠರ 'ಭವ್ಯಮಾನವ' ಮಹಾಕಾವ್ಯವು ವಿಲಕ್ಷಣವಾಗಿದೆ, ಅಪೂರ್ವವಾಗಿದೆ. ಕಾವ್ಯದ ವಿಲಕ್ಷಣತೆ ಹಾಗೂ ಅಪೂರ್ವತೆ ಇರುವುದು ವಸ್ತು ಮತ್ತು ಅದರ ನಿರ್ವಹಣೆಯಲ್ಲಿ. ''ಅಧ್ಯಾತ್ಮ ಕಾವ್ಯದ ವಸ್ತುವಾಗಬಲ್ಲುದೇ?'' ಎಂಬ ಸಮಸ್ಯೆಗೆ ಈ ಕಾವ್ಯವೇ ಪರಿಹಾರವಾಗಿದೆ. ಈ ಸಂದರ್ಭಕ್ಕೆ ಸೂಕ್ತವೆಂದು ಅವರಿಗೆ ಹೊಳೆದದ್ದು ಅಕ್ಕಮಹಾದೇವಿಯ ಲೌಕಿಕ -ಅಲೌಕಿಕ ಜೀವನದ ಇತಿಹಾಸ. ಈವರೆಗಿನ ಕಾವ್ಯಗಳಲ್ಲಿ ನಿರೂಪಿತವಾದ ಅಕ್ಕನ ಪಾರಮಾರ್ಥಿಕ ಇಹ ಜೀವನವು ಶ್ರೀಶೈಲದ ಕದಳಿಯಲ್ಲಿ ಮುಕ್ತಿ ಪಡೆಯುವುದರೊಂದಿಗೆ ಮುಕ್ತಾಯ- ವಾಗುತ್ತದೆ. ಆದರೆ ಪ್ರಸ್ತುತ ಕಾವ್ಯದಲ್ಲಿ ಅಕ್ಕನ ಜೀವನ ಅಲ್ಲಿಗೆ ಮುಗಿಯದೆ ಹೊಸದೊಂದು ತಿರುವು ಪಡೆದು ಬೆಳೆಯುತ್ತದೆ; ಬೆಳಗುತ್ತದೆ. ಶರಣರು ಸಂತರು, ಸಾಧಕರು ಜೀವನದ ತುಂಬೆಲ್ಲ ಸಾಧನೆಯನ್ನು ಮಾಡಿ ಮುಕ್ತಿ, ಮೋಕ್ಷ, ಸಾಯುಜ್ಯ, ಸಾಮರಸ್ಯ ಸಂಪಾದಿಸಿದರೆ ಮರ್ತ್ಯದ ಮಾನವ ಜೀವನದ ಮಹೋದ್ದೇಶ ಈಡೇರಿತೆ? ಈ ಸಮಸ್ಯೆಯು ಮಾನವನು ಆವಿರ್ಭಾವಗೊಂಡಂದಿನಿಂದ ಇಂದಿನವರೆಗೆ ಸಮಸ್ಯೆಯಾಗಿಯೇ ಉಳಿದಿದೆ. ಈ ಚಿರಂತನ ಸಮಸ್ಯೆ ಕವಿ ಭೂಸನೂರಮಠರನ್ನು ಗಂಭೀರವಾಗಿ ಆಲೋಚಿಸುವಂತೆ ಮಾಡಿದೆ. ಈ ಎಲ್ಲದರ ಫಲವಾಗಿ ಪ್ರಸ್ತುತ ಮಹಾಕಾವ್ಯವು: ಕೇವಲ ವ್ಯಕ್ತಿ ಕಲ್ಯಾಣದ ಮೋಕ್ಷಕ್ಕೆ ವಿರಮಿಸದೆ ಲೋಕಕಲ್ಯಾಣದತ್ತ ಮುಖ ಮಾಡುತ್ತದೆ.

ಮಾನವ ಮಹಾಯಾತ್ರೆಯ ದಿವ್ಯ ಕಥನವೇ 'ಭವ್ಯಮಾನವ' ಮಹಾಕಾವ್ಯವಾಗಿ ರೂಪು- ಗೊಂಡಿದೆ. ಕವಿ ಭೂಸನೂರಮಠರು ಹೇಳುವಂತೆ- ''ಮಲಗಿದ ಮಾನವನ ವಿಷಯ ಸಂಸಾರ, ಹಗಲುಗತ್ತಲೆಯ ದ್ವೈತ ಪ್ರಪಂಚ ಮತ್ತೆ ಎಚ್ಚತ್ತ ಮಾನವನ ಲಿಂಗಗಂಭೀರದ ಬ್ರಹ್ಮವಿಸ್ತಾರಗಳೇ ಕಾವ್ಯದ ಕಥಾವಸ್ತು. ದ್ವೈತಾದ್ವೈತಗಳ ಸೀಮೆಯನ್ನು ದಾಟಿದ ನಿರಾಲಂಬ ನಿಃಸ್ಥಲವೇ ಕಾವ್ಯದ ಪರವಸ್ತು''.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಮಾನವನೇ ಈ ಭವ್ಯಮಾನವ ಮಹಾಕಾವ್ಯದ ನಾಯಕ. ಈತನು ಒಂದು ದೇಶ, ಪ್ರಾಂತ, ಕಾಲ, ಅವಧಿಯ, ಒಂದು ಧರ್ಮ-ದರ್ಶನ -ಜಾತಿ- ಕುಲ-ಪಕ್ಷ ಪಂಗಡದ ಮಾನವನಲ್ಲ- ಈ ಮಾನವ. ಲಕ್ಷಾಂತರ ವರ್ಷಗಳ ಹಿಂದೆ ಮಣ್ಣಿನಲ್ಲಿ ಒಡೆದು ಮೂಡಿ ಇಂದಿನವರೆಗೆ ಸತ್ತು, ಹುಟ್ಟಿ, ಬೆಳೆಯುತ್ತ ಬಂದಿರುವ, ಮತ್ತು ಮುಂದೆ ಬೆಳೆಯಲಿರುವ ಮಾನವನೇ ಈ ಮಾನವ ಮಹಾಕಾವ್ಯದ ಸ್ವತಂತ್ರ ನಾಯಕ. ಈತನ ರಂಗಸ್ಥಲ ವಿಶಾಲವಾದ ವಿಶ್ವಪ್ರಪಂಚ. ಈತನು ಆಡಿದ, ಆಡುತ್ತಿರುವ, ಆಡಲಿರುವ ಕಾಲಕ್ಕೆ ಪರಿಧಿ ಇಲ್ಲ. ಈತನ ನಾಟಕವಿಲಾಸ ಅನಂತವಿಧ; ಲೆಕ್ಕವಿಲ್ಲದ ಕೋಟಿ; ಆಡಿರುವ ಪಾತ್ರಗಳು ವಿಶ್ವೇಮಾನವರು- ಹೆಣ್ಣು- ಗಂಡೆನ್ನದೆ, ಜಾತಿ- ಕುಲ- ಕಾಲ- ದೇಶ- ಭಾಷೆ- ಧರ್ಮ- ಜನಾಂಗವೆನ್ನದೆ.''

ಈ ವಿಶ್ವಸೃಷ್ಟಿಯಲ್ಲಿ ಮಾನವನೇ ಮಹಾಂತ ಹಂತವನ್ನು ನಿಲುಕಿದವ. ಈ ಮಾನವನು ಮರ್ತ್ಯಲೋಕದಲ್ಲಿ, ಹುಟ್ಟಿದಂದಿನಿಂದ ತಾನು, ತನಗಿದಿರು ವಿಶ್ವಪ್ರಪಂಚದ ಮರೆಯಲ್ಲಿ ಹುದುಗಿಕೊಂಡು ಭೂತ ಪ್ರಪಂಚದ ವಿಶ್ವತೋಮುಖದ ಗತಿಗೆ ಕಾರಣವಾಗಿರುವ, ಅರಿವಿಲ್ಲದೆ ತೇಲಿ ಮುಳುಗುತ್ತಿರುವ, ಅಜ್ಞಾನಾಂಧಃ-ಕಾರದಲ್ಲಿ, ಮಾಯಾ ಪ್ರಪಂಚದಲ್ಲಿ ತಿರುಗುತ್ತಿರುವ ಮಾನವನಿಗೆ ತಾನೇ ಬ್ರಹ್ಮ ಎನ್ನುವ ಅರಿವಿಲ್ಲದೆ ವಿಷಯ ಸಂಸಾರ ಚಕ್ರದಲ್ಲಿ ಸಿಲುಕಿಕೊಂಡು ನರಳುತ್ತಿದ್ದಾನೆ. ತನಗಾಗಿ, ತನ್ನ ಸ್ವಾರ್ಥಕ್ಕಾಗಿ, ತನ್ನನ್ನು ಉಳಿಸಿ ಬೆಳೆಸಿಕೊಳ್ಳುವುದಕ್ಕಾಗಿ ನಿರಂತರ ಪ್ರಯತ್ನಶೀಲನಾಗಿದ್ದಾನೆ. ಕಾಮ-ಕ್ರೋಧ, ಲೋಭ-ಮೋಹ, ಮದ-ಮತ್ಸರ, ರಾಗ-ದ್ವೇಷ-ವೈರ, ಕಷ್ಟ, ಬಡತನ- ಇವುಗಳನ್ನು ನೀಗುವುದಕ್ಕಾಗಿ ಏನೆಲ್ಲ ಮಾಡಿ ಅನ್ಯಾಯ, ಮೋಸ, ಕಪಟ, ವಂಚನೆಯಲ್ಲಿ ಮುಳುಗಿ ತನ್ನ ಜೀವನದ ಪ್ರಳಯಾಂತ ನಾಟಕವನ್ನು ನಟಿಸುತ್ತಿದ್ದಾನೆ- ಈ ಅಜ್ಞಾನ ಮಾನವ. ಅಜ್ಞಾನಾಂಧಃಕಾರದಲ್ಲಿ ತೊಳಲಿ ಬಳಲುವ ಈ ಮಾನವನಿಗೆ ಮುನ್ನಡೆಯುವುದು ಸಾಧ್ಯವೆ? ''ದೇಹದೊಳಗಿದ್ದು ತಿಳಿದಿಲ್ಲ ದೇಹ ನನಗೆ. ಪ್ರಾಣಿಸುವ ಪ್ರಾಣದ ಪ್ರಾಣಮರ್ಮ ಹತ್ತಲಿಲ್ಲ ನನಗೆ. ಮನ- ಬುದ್ಧಿಯ ಮಹಾತಂತ್ರ ಕಂಡಿಲ್ಲ ನನಗೆ- ತಿಳಿದಿಲ್ಲ ನನಗೆ ನಾನು. ಕತ್ತಲೆಯ ಕಾವಳಕ್ಕೆ ಇನ್ನೂ ಮಿಗಿಲಾದ ಕಪ್ಪನ್ನು ಲೆಪ್ಪಿಸಬಹುದೆ? ಜಗದವರೊಡನೆ ಮತ್ತು ಜಗತ್ತಿನೊಡನೆ ನನ್ನ ನಂಟು ಬಾಂಧವ್ಯದ ನಿಜವಾದ ಅರ್ಥವೇನು? ''ಈ ಮರಹುಗತ್ತಲೆಯ ಮಾನವನು ಕತ್ತಲೆಯಿಂದ ಪಾರಾಗುವ ಬಗೆ ಹೇಗೆ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವನ ಈ ಜಿಜ್ಞಾಸೆಗೆ ಒದಗಿ ಬಂದ ಮಾರ್ಗಗಳು ಹಲವಾರು. ಅವುಗಳಲ್ಲಿ ಜ್ಞಾನ, ಯೋಗ, ಭಕ್ತಿ, ಕರ್ಮ, ಕ್ರಿಯೆ, ಯಜ್ಞ, ಯಾಗ, ಹೋಮ, ಹವನ, ಮಂತ್ರ, ತಂತ್ರ, ಜಪ-ತಪ- ಮೊದಲಾದವುಗಳು, ಇವುಗಳಿಂದ ಅವನ ಇಂಗಿತ ಈಡೇರಲಿಲ್ಲ. ಅಜ್ಞಾನದ ತಿಮಿರದಲ್ಲಿ ಅಲೆಯುತ್ತ, ತನ್ನನ್ನು ತಾನು ಅರಸುತ್ತ ತನ್ನಲ್ಲಿಯ ಆ ಕದಿರುಬೆಳಗಿನ ಸಹಾಯದಿಂದ ಮುಂದುವರಿಯುತ್ತಿರುವ ಮಾನವನಿಗೆ ಕಂಡ ಮಾರ್ಗ ವಿಲಕ್ಷಣ. ಮಾನವನಲ್ಲಿ ಹುದುಗಿರುವ ಬ್ರಹ್ಮಮಾನವನ ಭವ್ಯಕ್ಕೆ ಇಂಥ ಸಾಧಕ ಮಾನವರು ನಿರ್ಮಿಸಿದ ಮಾರ್ಗ ಅಥವಾ ನಿರ್‌ಮಾರ್ಗ ಕವಿಗಳಿಗೆ ಕಂಡಿದೆ. ಅದರ ವಿವರವಾದ ಕಥನಕವನ್ನು ಮನ ಒಪ್ಪುವಂತೆ ಕಾಣಿಸಿದ್ದಾರೆ. ''ಅಸತ್ಯದಿಂದ ಸತ್ಯಕ್ಕೆ, ಅಜ್ಞಾನದಿಂದ ನಿಜಜ್ಞಾನದ ವಿಸ್ತಾರಕ್ಕೆ, ಮೃತ್ಯುವಿನ ಸೀಮೆಯಿಂದ ಅಮರ್ತ್ಯದ ಅತಿಮಾನುಷಕ್ಕೆ, ಸ್ವಾರ್ಥದಿಂದ ಪರಮಾರ್ಥಕ್ಕೆ, ಕತ್ತಲೆಯ ಮಾನವನಿಂದ ಬ್ರಹ್ಮ ಭವ್ಯದ ಅನಂತ ಹರವಿಗೆ ಹರವಾಗಿ ಇರಬಲ್ಲೆವೆ? ಈ ಹರವನ್ನು ಉಂಡು, ತಿಂದು, ನಿದ್ರಿಸಿ, ಆತ್ಮಕಲ್ಯಾಣ ಮತ್ತು ವಿಶ್ವಕಲ್ಯಾಣದ ಮಹಾಸಂಗಮಸ್ಥಲದಲ್ಲಿ ನಿರಂತರವಾಗಿ, ನಾವು ವಾಸಿಸಬಲ್ಲೆವೆ? 'ಭವ್ಯ ಮಾನವ'ದ ಉದಯ, ಉಜ್ವಲ, ಭವ್ಯಕಾಂಡಗಳು ಇಲ್ಲಿ ನಿಜಪಥವನ್ನು ತೋರುತ್ತಿವೆ''............... ಮಾನವಗತ್ತಲೆಯಲ್ಲಿ ತಲೆಯೆತ್ತಿಕೊಂಡು ನಿಂತಿರುವ 'ಕರಿತಲೆ'ಯ ಅರಿವಿನ ಜನ್ಮದ ಮಾನವನ ತಲೆಯಲ್ಲಿ ಒಡಮೂಡುತ್ತಿರುವ ದಿವ್ಯ ಕಳೆ ಅತ್ಯಂತ ಉಜ್ವಲ ಪ್ರಕಾಶವುಳ್ಳದ್ದು. ಈ ದಿವ್ಯೋಜ್ವಲವಾದ ಪ್ರಭಾಕಾಂತಿಯನ್ನು ಸದ್ಗುರುವಿನ ಮುಖಾಂತರ ಎಚ್ಚರಿಸಿಕೊಂಡು ಮಾನವ ತನ್ನ, ತನ್ನವರ, ತನ್ನ ಜಗತ್ತಿನ, ಸರ್ವದರ ರಹಸ್ಯವನ್ನು ಅರಿಯಬಲ್ಲ. ತಾನೇ ವಿಶ್ವಪ್ರಪಂಚವಾಗಿ, ತನ್ನನ್ನು ತಾನು ಪೂಜಿಸಿಕೊಳ್ಳಬಲ್ಲ. ಈ ಪೂಜೆ ಅಥವಾ ಭಕ್ತಿ ಬ್ರಹ್ಮಕ್ಕೆ ಹೊರಗಾದ ಭಕ್ತಿ ಅಥವಾ ಪೂಜೆಯಲ್ಲ. ಈ ಆತ್ಮಲಿಂಗ ಪೂಜೆಯ ಗರ್ಭದೊಳಗೆ ಜಗತ್ ಪೂಜೆ. ಭಕ್ತಿಯ ಅಂತರ್ಯದೊಳಗೆ ಜಗತ್‌ಭಕ್ತಿ; ಜಗತ್‌ಪ್ರೇಮ; ಜಗತ್‌ಕಲ್ಯಾಣಭಾವ; ಕಾಯಕ, ಅರ್ಪಣ, ದಾಸೋಹ ಮುಂತಾದವು ಈ ಅರಿವನ್ನು ಮೂಡಿಸುವುದು ಭವ್ಯಮಾನವ ಮಹಾಕಾವ್ಯ. ಇಂಥ ಪೂಜೆ ಭಕ್ತಿಯಲ್ಲಿ ಸಾಮರಸ್ಯವನ್ನು ಪಡೆದಿರುವ ಇರವೇ ಪರಶಿವನಿರವು; ಭವ್ಯಮಾನವನ ಮಹಾಂತ ಇರವು''.

ಇದು ಕೇವಲ ಮನುಕುಲದ ಕಾವ್ಯವಲ್ಲ- ವಿಶ್ವಕಾವ್ಯ, ಮಾನವ ಮಾತ್ರ ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾವ್ಯದ ನಾಯಕನಲ್ಲ ಜೊತೆಗೆ ವಿಶ್ವ-ಪ್ರಕೃತಿ ಕೂಡ ಈ ವಸ್ತುಗಂಭೀರವಾಗಿ ತನ್ನ ಅಂತರಂಗವನ್ನು ಬಿಚ್ಚಿಕೊಂಡಿದೆ.

"ಆಕಾಶ ಜಲವಗ್ನಿ ವಾಯು ಭೂದೇವಿಯರೆ
ಎದ್ದೇಳಿ ಎದ್ದೇಳಿ ಕಾವ್ಯದೊಳು ಬೆಳಗಾಗಿ
ಹಾಡಿರ ನಿಮ್ಮಂತರಂಗದ ಮಹಾಕಥೆಯ"- ಈ ಮಾತುಗಳು ಕಾವ್ಯದ ವಿಶ್ವವ್ಯಾಪ್ತಿಯನ್ನು ಸೂಚಿಸುತ್ತವೆ.

2

ಇಲ್ಲಿ ಬರುವ ಮುಖ್ಯ ಪಾತ್ರಗಳು ಮೂರು : ಅಕ್ಕಮಹಾದೇವಿ, ಗುರುಚೆನ್ನ-ಮಲ್ಲಯ್ಯ, ಗಿರಿಮಲ್ಲ ಇಲ್ಲಿರುವ ಅಕ್ಕಮಹಾದೇವಿ ಕೇವಲ ಚಾರಿತ್ರಿಕ ಅಕ್ಕ ಮಹಾದೇವಿಯಲ್ಲ. ಜೊತೆಗೆ ಭೂಸನೂರಮಠರ ದರ್ಶನ- ಅನುಭಾವದ ಬೆಳಗಿನಲ್ಲಿ ಹೊಸದೊಂದು ರೂಪ ಪಡೆದ ಈ 'ಕಾವ್ಯದ ಅಕ್ಕಮಹಾದೇವಿ'. ಕೇವಲ ವ್ಯಕ್ತಿಕಲ್ಯಾಣದ ಹಂತಕ್ಕೆ ನಿಲ್ಲದೆ ಸಮಷ್ಟಿಕಲ್ಯಾಣದ ಹೊಣೆಗಾರಿಕೆ ಹೊತ್ತು ಮುನ್ನಡೆಯುವ ಮಹಾನಾಯಕಿಯಾಗಿ ತೋರುತ್ತಾಳೆ. ಇಲ್ಲಿಯ ಇನ್ನೆರಡು ಪಾತ್ರಗಳಾದ ಗುರುಚೆನ್ನಮಲ್ಲಯ್ಯ ಹಾಗೂ ಗಿರಿಮಲ್ಲ ಇವು ಕೂಡ ಐತಿಹಾಸಿಕ ಪಾತ್ರಗಳಲ್ಲ ಕವಿಯ ಸ್ವತಂತ್ರ ಸೃಷ್ಟಿಗಳು.

ಗಿರಿಮಲ್ಲ : ಗುರುಚೆನ್ನಮಲ್ಲಯ್ಯನ ಶಿಷ್ಯ. ಈ ಜಗದ ಜನಸಾಮಾನ್ಯರ ಪ್ರತಿನಿಧಿ. ಅನುಭಾವಪಥದಲ್ಲಿ ಎದುರಾಗುವ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಉತ್ತರ ಪಡೆಯುತ್ತ ತನ್ನ ಸಂಕೋಚ, ಸಂಶಯ, ಸಂದೇಹಗಳನ್ನು ಕಳೆದುಕೊಂಡು ಮಹಾನುಭಾವಿಯಾಗಿ ಭವ್ಯಮಾನವನಾಗಿ ಬೆಳೆಯುವ ಮಹಾಸಾಧಕ.

ಗುರುಚೆನ್ನಮಲ್ಲಯ್ಯ: ಕವಿ ಭೂಸನೂರಮಠ ಅವರ ಆಳ ಮತ್ತು ವಿಶಾಲವಾದ ಅಧ್ಯಯನ, ಚಿಂತನ, ಧ್ಯಾನ, ತಪಸ್ಸು, ಅನುಭಾವ- ಇವೆಲ್ಲವುಗಳ ಪ್ರತಿಫಲ ಹಾಗೂ ಪ್ರತಿರೂಪ ಗುರುಚೆನ್ನಮಲ್ಲಯ್ಯ. ಉಪನಿಷತ್, ಭಗವದ್ಗೀತೆ, ವಚನಸಾಹಿತ್ಯ, ಮತ್ತು ಟಾಲ್‌ಸ್ಟಾಯ್, ಹಕ್ಸಲಿ, ಮೆಟರ್‌ಲಿಂಕ್ ರಸೆಲ್- ಇತ್ಯಾದಿ ಪಾಶ್ಚಾತ್ಯ, ಪಾಶ್ಚಿಮಾತ್ಯ ತತ್ವಜ್ಞಾನದ ತಿಳಿವು- ಹೊಳಹು, ಸಂದೇಶ ಉಪದೇಶಗಳನ್ನು ಭೂಸನೂರಮಠರು ಗುರುಚೆನ್ನಮಲ್ಲಯ್ಯನ ಮೂಲಕ ಹಾಡಿ ನುಡಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಚೆನ್ನಮಲ್ಲಯ್ಯ ಕಲ್ಯಾಣದ ಶಿವಶರಣರ ಅಮರ ಸಂದೇಶವನ್ನು ನಡೆ-ನುಡಿಯಲ್ಲಿ ಮೈಗೂಡಿಸಿಕೊಂಡ ಮಹಾಸಾಧಕ. ಮತ್ತು ಶರಣರ ಅನುಭಾವದ ಬೆಳಗನ್ನು ಜನಮನದಲ್ಲಿ ಮೂಡಿಸುವ ಕಾಯಕ ಕೈಕೊಂಡ ಜ್ಞಾನದಾಸೋಹಿ.

ಕಾವ್ಯದ ಕೇಂದ್ರ ಪಾತ್ರ ಗುರುಚೆನ್ನಮಲ್ಲಯ್ಯ. ಬದುಕಿನ ಘೋರ ಅನುಭವಗಳಿಂದ ಮಾಗುತ್ತ ಬೆಳೆಯುವ ರೀತಿ ಗಮನಾರ್ಹ. ಮಗ ಬಾಲಸಂಗಯ್ಯ, ಮಡದಿ ಗಂಗಮ್ಮ ಇವರ ಮರಣದ ದುಃಖಾತಿಶಯವು ಕೆಲ ಹೊತ್ತು ಈ ಶರಣನನ್ನು ಗಂಭೀರವಾಗಿ ಅಂತರ್‌ಮುಖಿಯನ್ನಾಗಿ ಮಾಡುತ್ತದೆ. ಮರಣವನ್ನು ಗೆಲ್ಲಿದ ಶರಣಧರ್ಮದಲ್ಲಿ ಸಾಗಿದ ಮಾನವನನ್ನು ಮರಣ ತಬ್ಬದೆ ಬಿಟ್ಟಿಲ್ಲವೇಕೆ? ಈ ಧರ್ಮಾಚರಣೆಯ ಪ್ರತಿಫಲವಾದರೂ ಏನು? ಎಂಬ ಮಾನವನಿಗೆ ಬೆನ್ನಟ್ಟಿದ್ದ ಸಮಸ್ಯೆ ಮೋಕ್ಷಾಪೇಕ್ಷೆಯಿಂದ ವಿಮುಖನನ್ನಾಗಿಸು- ತ್ತದೆ. ಆಗ ಗುರುಚೆನ್ನಮಲ್ಲಯ್ಯನ ಜೀವನದಲ್ಲಿ ಹೊಸ ತಿರುವು ಮೂಡುತ್ತದೆ. ಈ ಸುಳಿವು ಸಾಕಾರಗೊಂಡು ನೂತನ ಪ್ರಜ್ಞೆಯನ್ನು ಆವಿಷ್ಕಾರಗೊಳಿಸುತ್ತದೆ. ಶ್ರೀಗಿರಿಯ ಚೆನ್ನಮಲ್ಲಯ್ಯನ ಆದೇಶವೊಂದು ಈತನ ಅಂತರಂಗದಲ್ಲಿ ಧ್ವನಿಸುತ್ತದೆ-

''ಎರಡು ಮರಣವ ಹೊತ್ತು ನಿತ್ತರಿಸುವಾ ಶಕ್ತಿ
ಮಾಯವಾಯಿತು ಮಗನೆ ಏಕೆ? ಹೇಗೆ?
....
....
ಕತ್ತಲೆಯ ಲಿಂಗವನು ಕತ್ತಲೆಯ ಕತ್ತಲೆಯ ಭಕ್ತಿಯನು
ಸಂಸಾರವೇ ಪೂಜೆ, ಪೂಜೆಯೇ ಸಂಸಾರ-
ವಾಗಿ ಕುದಿಯುತ್ತಿರುವ ಬಾಳುವೆಯ ನೋಡು''

ಶ್ರೀಗಿರಿಯ ಚೆನ್ನನ ಈ ನಿರ್ದೇಶನದಂತೆ ಗುರುಚೆನ್ನಮಲ್ಲಯ್ಯನು ಜಗವ ತುಂಬಿ ತುಳುಕುತ್ತಿರುವ ಕತ್ತಲೆಗೆ ಎದುರಾಗಿ ನಡೆಯುತ್ತಾನೆ. ಶಿಷ್ಯ ಗಿರಿಮಲ್ಲ ಬೆಂಬಳಿ ನಡೆದಂತೆ ಮಾರ್ಗ ಮಧ್ಯದ ಕದಳಿಯಲ್ಲಿಯ ಅಕ್ಕಮಹಾದೇವಿಯನ್ನು 'ವ್ಯಕ್ತಿ-ಮುಕ್ತಿ' ಸ್ಥಿತಿಯಿಂದ ಬಿಡಿಸಿ ಅವಳನ್ನೂ ಕರೆದುಕೊಂಡು ಮುನ್ನಡೆಯುತ್ತಾನೆ. ಮಾನವ ಮಾತ್ರನಲ್ಲ ಇಡೀ ವಿಶ್ವಪ್ರಪಂಚವೇ ಕತ್ತಲೆಯಲ್ಲಿ ತೇಲಿ ಮುಳುಗಿರುವ ಭಯಾನಕ ದೃಶ್ಯಗಳನ್ನು ತೋರಿಸುತ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಗುತ್ತಾನೆ- ಗುರುಚೆನ್ನಮಲ್ಲಯ್ಯ, "ಈ ಕತ್ತಲೆಯ ಕಾಂಡದಲ್ಲಿ ರೂಪಗೊಂಡಿರುವ ಅನೇಕ ಕಥಾ ಪ್ರಸಂಗಗಳು ಮಾನವನ ಒಳಗೆ ಹೊರಗೆ ಮೆತ್ತಿರುವ ಕತ್ತಲೆಯ,- ಹಗಲುಗತ್ತಲೆಯ ಬಹುಮುಖವಾದ ದರ್ಶನವನ್ನು ಮಾಡಿಕೊಡುವಂತಿವೆ. ಉದಯಮಾನಕ್ಕೆ ಹುಟ್ಟಿ ಅಸ್ತಮಾನಕ್ಕೆ ಅಳಿವ ಮಾನವಕೋಟಿಗೆ ಕವಿಯಿತ್ತು ಕತ್ತಲೆ"......... 'ಒಳಗೆ ಸತ್ತು ಹೊರಗಾಡುತ್ತಿದೇನೋ?'- (ಭವ್ಯಮಾನವ ಪು- 21)

ಕತ್ತಲಯೆಯಲ್ಲಿ ತಿರುಗಿ ನೂರು ಬಗೆಯಲ್ಲಿ ನೊಂದ ಮಹಾದೇವಿಯಕ್ಕ ಹಾಗೂ ಗಿರಿಮಲ್ಲರಿಗೆ ಈ ಘೋರ ಕತ್ತಲೆಯನ್ನು ನೀಗುವ ಬೆಳಗು ಉಂಟೆ? ಎಂಬ ಚಿಂತೆ ಕಾಡತೊಡಗುತ್ತದೆ. ಅವರ ಚಿಂತೆಗೆ ಗುರುಚೆನ್ನಮಲ್ಲಯ್ಯ ಪರಿಹಾರ ಸೂಚಿಸುತ್ತಾನೆ. ಅವನಿಗೆ ಇಲ್ಲಿ ಪ್ರಮಾಣ ಮಹಾಅನುಭಾವಿಯ ಅನುಭಾವದ ನುಡಿ-

'ಅಪರಿಮಿತ ಅಪರಿಮಿತ ಅಪರಿಮಿತ ಕತ್ತಲೆ
ವಿಪರೀತ ವಿಪರೀತ ವಿಪರೀತ ಬೆಳಗು'- ಈ ಬೆಳಗಿನತ್ತ ಸಾಗುವ ಪರಿಯನ್ನು ಗುರುಚೆನ್ನಮಲ್ಲಯ್ಯ . ಶರಣರ ಜೀವನ ದೃಷ್ಟಾಂತಗಳ ಹಿನ್ನಲೆಯಲ್ಲಿ ಅವರ ಅನುಭವಕ್ಕೆ ತರುತ್ತಾನೆ. ಇದೇ ಸಂದರ್ಭದಲ್ಲಿ ಮತ್ತೆ ಕೆಲವು ಸಮಸ್ಯೆಗಳು ಸಾಧಕರಿಗೆ ಒದಗುವ ಅಡ್ಡಿ- ಆತಂಕಗಳ ಬಗ್ಗೆ ಗಿರಿಮಲ್ಲ ಗುರುವಿನ ಗಮನ ಸೆಳೆಯುತ್ತಾನೆ. ಒಂದು ಚೇತನ ಮಹಾಚೇತನವಾಗಿ ವಿಶ್ವವ್ಯಕ್ತಿತ್ವ ಸಂಪಾದಿಸುವ ಮಾರ್ಗದಲ್ಲಿ ಎದುರಾಗುವ ಎಡರು-ತೊಡರುಗಳಿಗೆ, ವಿಪರೀತ ಸಂಶಯ- ವಿರೋಧಾಭಾಸಗಳಿಗೆ ಲೆಕ್ಕವಿಲ್ಲ. ಇವುಗಳಿಂದ ಪಾರಾಗಿ ವ್ಯಕ್ತಿ ವಿಶ್ವಜೀವನ ಸಾಧಿಸಲು ಗುರುಚೆನ್ನಮಲ್ಲಯ್ಯ ತೋರುವ ದಾರಿ ಮನನೀಯ. ಈ ಸಂದರ್ಭದಲ್ಲಿ ಕತ್ತಲೆಯ ಪ್ರಶ್ನೆಗಳಿಗೆ ಕವಿ- ಪ್ರಜ್ಞೆಯು ಕಂಡ ದರ್ಶನವು ಗುರುಚೆನ್ನಮಲ್ಲಯ್ಯನ ಮೂಲಕ ಹೊಮ್ಮುತ್ತದೆ.

"ತೆಕ್ಕೆ ಹಾಕುವ ಮಹಾಭಕ್ತನಾಗೆಲೆ ಕಂದ
ಕೋಟಿ ಮಾನವರೆದೆಯ ಬ್ರಹ್ಮಸ್ವಪ್ನವು ನೀನು
ಕೋಟಿ ಕಾಲದ ಕನಸು ನನಸು ನೀನಯ್ಯಾ...." ಎನ್ನುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಚೆನ್ನಮಲ್ಲಯ್ಯ ಗಿರಿಮಲ್ಲಯ್ಯನೊಳಗಿರುವ 'ಭವ್ಯ ಮಾನವ'ನನ್ನು ಎಚ್ಚರಿಸಿ ಆ ಮೂಲಕ ಇಡೀ ಮಾನವ ಕುಲದಲ್ಲಿ ಅಂತರ್ಗತವಾಗಿರುವ ದಿವ್ಯ ಚೈತನ್ಯವನ್ನು ಚೇತನಿಸುವ ದ್ರಷ್ಟಾರನಾಗುತ್ತಾನೆ.

ಸಮಸ್ತ ಮಾನವಕುಲವು ನಿತ್ಯ ಹಾಗೂ ನಿರಂತರವಾಗಿ ಅನುಭವಿಸುತ್ತಿರುವ ಹುಟ್ಟು-ಸಾವು, ದುಃಖ- ದುಮ್ಮಾನ ಹಾಗೂ ರೋಗ- ರುಜಿನಗಳಿಗೆ ಪರಿಮಾರ್ಜನೆ ಪಡೆಯಬಹುದೆಂಬ ಮಾನವ-ನಿರ್ಮಿತ ಮೂಲ ಗ್ರಹಿಕೆಗಳು- ಸಾಮರಸ್ಯ,ಮುಕ್ತಿ,ಮೋಕ್ಷ -ಅರ್ಥಶೂನ್ಯವಾಗಿ ತೋರುತ್ತವೆ. ಈ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಿ, ಅವುಗಳನ್ನು ಬಿಡಿಸುವ ಫಲಕಾರಿ ಹೆಜ್ಜೆಗಳನ್ನು ನಿಯೋಜಿಸಿಕೊಳ್ಳುವ ಪ್ರಯತ್ನ ಕೂಡ ಮಾನವನ ವ್ಯರ್ಥ ಡೊಂಬರಾಟವಾಗಿ ನಿಲ್ಲುತ್ತದೆ. ಈ ಅರ್ಥವಿಹೀನತೆಯನ್ನು ರಚನಾತ್ಮಕ ತಿರುವಾಗಿ ಪರಿವರ್ತಿಸುವ ದಿಟ್ಟವಾದ ದಾರಿದೀಪವನ್ನು ರೂಪಿಸುವ ಕವಿ ಭೂಸನೂರಮಠರ ನಿಲುವು ಅಪೂರ್ವವಾಗಿದೆ. ಗುರುಚೆನ್ನಮಲ್ಲಯ್ಯನ ವ್ಯಷ್ಟ್ಯಾತ್ಮಕ ಅನುಭವವು ಸಮಷ್ಟಿಯಲ್ಲಿ ಪರ್ಯವಸಾನ ಹೊಂದುತ್ತದೆ. ವ್ಯಕ್ತಿಗತ ಅನುಭವದ ಮುಖೇನ ಅವನು ಸಮಷ್ಟಿರೂಪವನ್ನು ತಾಳುವ ಪರಿಯು ನಿಜಕ್ಕೂ ಮಾನವಸಮಾಜಕ್ಕೆ ಸಮಂಜಸ ಬೆಳಕು ನೀಡುತ್ತದೆ. ತನಗಾದ ಅನುಭವದಿಂದಾಗಿ ಸಮಗ್ರ ಮಾನವ ಕುಲದ ಅನುಭವವೇ ಅವನಲ್ಲಿ ಘನೀಭೂತಗೊಳ್ಳುತ್ತದೆ. ಈ ಸಮಷ್ಟಿಪ್ರಜ್ಞೆಯ ಅರಿವು ಇಂದಿನ ಮಾನವ ಕುಲದ ಕುಲುಮೆಗೆ ಒಂದು ಕೊಡುಗೆಯೇ ಸರಿ.

ಈ ದಿಸೆಯಲ್ಲಿ 'ಭವ್ಯಮಾನವ' ಅಪೂರ್ವ ರಚನೆ; ವಿಲಕ್ಷಣ ರಚನೆಯೂ ಸರಿ.

★ ★ ★

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಭವ್ಯಮಾನವ' ಕಾವ್ಯದ ಆಶಯ ಮತ್ತು ದರ್ಶನ

-ಗುರುಲಿಂಗ ಕಾಪಸೆ

ಕನ್ನಡ ಕಾವ್ಯಸಂಪತ್ತಿನಲ್ಲಿ 'ಭವ್ಯಮಾನವ' ಒಂದು ಅನರ್ಘ್ಯರತ್ನ. ಅನ್ನಮಯ ಪ್ರಪಂಚದಿಂದ ಆನಂದಮಯ ಪ್ರಪಂಚಕ್ಕೆ ಮಾನವನು ಯಾತ್ರೆಗೈಯ್ಯುವದನ್ನು 'ಭವ್ಯಮಾನವ' ತನ್ನದೇ ಆದ ರೀತಿಯಲ್ಲಿ ಚಿತ್ರಿಸಿಕೊಂಡು ಹೋಗುತ್ತದೆ. ಕಾವ್ಯದ ಮೂಲ ಹಾಗೂ ಮುಖ್ಯ ಆಶಯವೇ ಆಧ್ಯಾತ್ಮ ವಸ್ತುವಿನ ನಿರೂಪಣೆಯಾಗಿರುವುದರಿಂದ ಇಂದ್ರಿಯ ಗ್ರಾಹ್ಯವಾದುದನ್ನೆಲ್ಲ ಪರೀಕ್ಷಿಸಿ, ಅಲ್ಲಿಗಲ್ಲಿಗೆ ವಿಶ್ಲೇಷಿಸಿ, ಅದರ ಅವಸ್ಥೆಗಳಿಗೆ ಕನಿಕರಿಸಿ, ಅತೀಂದ್ರಿಯದ ಕಡೆಗೆ- ಅಂದರೆ ಮಹಾಬೆಳಗಿನ ಕಡೆಗೆ- ನಮ್ಮನ್ನು ಕರೆದುಕೊಂಡು ಹೋಗುತ್ತದೆ. ತಾತ್ವಿಕ ಗಟ್ಟಿಯಾದ ನೆಲಗಟ್ಟಿನ ಮೇಲೆ ಕಾವ್ಯಸೌಧ ನಿರ್ಮಾಣವಾಗುವು- ದರಿಂದ, ಚಿರಂತನವಾದ ಸತ್ಯವನ್ನು ಕಂಡರಿಸುವ ನವೀನ ಆವಿಷ್ಕಾರವನ್ನು ಪಡೆಯುವುದರಿಂದ, ಶಬ್ದರೂಪವನ್ನು ಪಡೆದೂ ಶಬ್ದಾತೀತವಾದ ಅನುಭಾವವನ್ನು ಪ್ರತಿಧ್ವನಿಸುವುದರಿಂದ ಕಾವ್ಯಾಭ್ಯಾಸಿಗೆ ಬೆರಗುಗೊಳಿಸುವಂಥ ಅಭಿವ್ಯಕ್ತಿ ಅಲ್ಲಿಗಲ್ಲಿಗೆ ಕಂಡು ಬರುವುದು ಸ್ವಾಭಾವಿಕವಾಗಿದೆ. ಈ ಹಿಂದಿನ ಕಾವ್ಯಲಕ್ಷಣಗಳಿಗೆ ಭಿನ್ನವಾದ, ಕಾವ್ಯದ ವ್ಯಾಖ್ಯೆ- ವ್ಯಾಖ್ಯಾನಗಳಿಗೆ ಮೀರಿ ನಿಲ್ಲುವ, ತನ್ನದೇ ಆದ ಹೊಸ ಸ್ವರೂಪವೊಂದನ್ನು ಕಣ್ಣುಮುಂದೆ ತಂದು ನಿಲ್ಲಿಸುವ ಚಮತ್ಕಾರವೂ ಈ ಕಾವ್ಯಕ್ಕಿರುವುದರಿಂದ, ಕವಿಯ ಆಶಯ ಮತ್ತು ದರ್ಶನಗಳನ್ನು ಗಮನಿಸಿಯೇ ಕಾವ್ಯದ ಆಸ್ವಾದನೆಗೆ ತೊಡಗಬೇಕಾಗುತ್ತದೆ.

ಕಾವ್ಯ ನಡೆಯಲಿ ಪೂಜೆ ವಿಶ್ವಶಿವಪೂಜೆ
ಕಾವ್ಯವಾಗಲಿ ಸತ್ಯಸೌಂದರ್ಯ ಶಿವಪೂಜೆ
ಕಾವ್ಯ ಬರೆಯಲಿ ಬ್ರಹ್ಮ ಭವ್ಯಪೂಜೆ

(ಪೂರ್ವಪೀಠಿಕೆ, ಪು-2)

ಅಷ್ಟಾದಶವರ್ಣನೆ, ನವರಸಗಳ ಪ್ರತೀತಿಗೆ ಭಿನ್ನವಾದ ಈ ಆಶಯ ತೀರ ನವೀನವಾದದ್ದಾಗಿರದಿದ್ದರೂ, ಇಲ್ಲಿ ಪರಮಪ್ರಾಶಸ್ತ್ಯವನ್ನು ಪಡೆದು- ಕೊಂಡಿದೆ.

ಪಂಚ ಭೂತಗಳನ್ನು ಎಚ್ಚರಿಸುತ್ತ ಸ್ವಾಯಂಭೂಕಾವ್ಯ ಮೂಡಿಬರಲೆಂದು ಕವಿಯ ಮಹತ್ವಾಕಾಂಕ್ಷೆಯ ಸ್ತರದಲ್ಲಿ ತನ್ನ ಆಶಯವನ್ನು ಇನ್ನೊಂದು ರೀತಿಯಿಂದ ಅಭಿವ್ಯಕ್ತಗೊಳಿಸಿರುವುದನ್ನು ನಾವಿಲ್ಲಿ ನೋಡಬಹುದು:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಕಾಶ ಜಲವಗ್ನಿ ವಾಯು ಭೂದೇವಿಯರೆ
ಎದ್ದೇಳಿ ಎದ್ದೇಳಿ ಕಾವ್ಯದೊಳು ಬೆಳಗಾಗಿ
ಹಾಡಿರೇ ನಿಮ್ಮಂತರಂಗದ ಮಹಾಕಥೆಯ
ಶಬ್ದಶಬ್ದದೊಳಗೆಲ್ಲ ಆಕಾಶ ಹರವಿ
ಅರ್ಥ ಅರ್ಥದೊಳೆಲ್ಲ ನಕ್ಷತ್ರ ಬೆಳಗಿ
ಭಾವ ಬೀಸಲಿ ತೂರಿ ಜಗದ ಗಾಳಿಯ ಕೊಟ್ಟಿ,
ರಸಪೂರ ತಂಪಿಸಲಿ ಜಗದ ಬೆಂದೆದೆಯ,
ಮಣ್ಣನೊಳಗೊಡಮೂಡಿ ಸ್ವಾಯಂಭುಕಾವ್ಯ
ಬರೆಯಲಿ ಬರೆಯಲಿ ....

(ಪೂರ್ವಪೀಠಿಕೆ ಪುಟ- ೯)

ಮಹಾಭವ್ಯದಿವ್ಯಕ್ಕೆ, ನಿತ್ಯಶಾಶ್ವತಕ್ಕೆ ದೃಷ್ಟಿಯಿರಿಸಿದ ಕಾವ್ಯ ವ್ಯಾಕರಣ, ಛಂದಸ್ಸು ಅಲಂಕಾರ, ಕವಿಸಮಯಗಳ ನಿಯತಿಯ ಭಂಗಗೊಳಿಸುವ ಸಾಹಸವನ್ನು ಮಾಡಿದ್ದರೆ, ಅದು ಹಿಂದಿನ ಸವಕಳಿಯಾದ ದಾರಿಯನ್ನು ತ್ಯಜಿಸಿ ನೂತನವಾದುದೊಂದನ್ನು ಸಾಧಿಸಲು ಯತ್ನಿಸುತ್ತಿದೆಯೆಂದೇ ಭಾವಿಸಬೇಕು. ಈ ಸಾಧನೆಯಲ್ಲಿ ಪಡೆದ ಸಿದ್ಧಿಯೆಷ್ಟು? ಸೋಲು ಎಷ್ಟು? ಎಂಬುದನ್ನು ಗುರುತಿಸುವುದು ಕವಿಯ ಕೆಲಸವಲ್ಲ. ಆತನು ತನ್ನ ದಾರಿಯಲ್ಲಿ, ತನ್ನದೇ ಆದ ರೀತಿಯಲ್ಲಿ ಮುನ್ನುಗ್ಗುವವನು ಅಷ್ಟೆ. ಮಿಕ್ಕದ್ದೆಲ್ಲ ವಿಮರ್ಶಕರಿಗೆ ಬಿಟ್ಟುಕೊಟ್ಟ ವಿಷಯ.

ಶರಣರನುಭಾವ ಪಥವೇ ನವ್ಯ ಭವ್ಯವೆಂದು ನಂಬಿಕೊಂಡು, ಸತ್ತಾನುಭಾವದ ಪರಮಸಿದ್ಧಿಯನ್ನು ಸಾಕ್ಷಾತ್ಕರಿಸುವ ಕಾವ್ಯದರ್ಶನವನ್ನು ಮುಂದಿಟ್ಟುಕೊಂಡು ಮಹಾದೇವಿಯನ್ನು ನಿಮಿತ್ತಕ್ಕೆ ವಸ್ತುವಾಗಿರಿಸಿ, ವಿಶ್ವತೋಧ್ವನಿಯನ್ನು ಎಬ್ಬಿಸಿ, ವಿಶ್ವತೋಕಲ್ಯಾಣ ಸುಖದ ಆಕಾಂಕ್ಷೆಯನ್ನು ಹೊತ್ತುಕೊಂಡು ಕಾವ್ಯ ಕಲ್ಯಾಣಕಾಂಡದಿಂದ ಭವ್ಯಕಾಂಡದವರೆಗೆ ಹರವಿಕೊಳ್ಳುತ್ತದೆ.

''ಸಕೃದ್ದರ್ಶನಕ್ಕೆ 'ಭವ್ಯಮಾನವ' ಕಾವ್ಯದ ಕಥನಾಯಿಕೆ ಮಹಾದೇವಿಕ್ಕನೆಂದು ತೋರಬಹುದು. ಆದರೆ ಕಾವ್ಯದೊಳಗೆ ಪ್ರವೇಶಮಾಡಿ ಆಪೂರ್ಣವಾಗಿ ಅದನ್ನು ಓದಿದರೆ, 'ಮಾನವ'ನೇ ಕಾವ್ಯದ ಮಹಾನಾಯಕನೆಂಬ ಮಾತು ತಾನೆ ಮನವರಿಕೆಯಾಗುತ್ತದೆ'' ಅಷ್ಟಲ್ಲದೆ-

''ಒಂದು ದೇಶ- ಪ್ರಾಂತ- ಕಾಲ- ಅವಧಿಯ, ಒಂದು ಧರ್ಮದರ್ಶನ. ಜಾತಿ, ಕುಲ, ಪಕ್ಷ-ಪಂಗಡದ ಮಾನವನಲ್ಲ ಈ ಮಾನವ, ಲಕ್ಷಾಂತರ ವರುಷಗಳ ಹಿಂದೆ ಮಣ್ಣನಲ್ಲಿ ಒಡೆದುಮೂಡಿ, ಇಂದಿನವರೆಗೆ ಸತ್ತು ಹುಟ್ಟುತ್ತ ಬಂದಿರುವ ಮತ್ತು ಮುಂದೆ ಬೆಳೆಯಲಿರುವ ಮಾನವನೇ ಈ ಮಾನವ. ಮಹಾಕಾವ್ಯದ ಸ್ವತಂತ್ರನಾಯಕ.''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವತಃ ಕವಿಗಳೇ ಹೀಗೆ ಕಾವ್ಯದ ವಸ್ತುವಿನ್ಯಾಸವನ್ನು ಕುರಿತು ಸ್ಪಷ್ಟಪಡಿಸಿರುವುದರಿಂದ ಬೇರೆ ಆಲೋಚನೆಗೆ ಆಸ್ಪದವೇ ಇಲ್ಲ.

ಮಾನವನನ್ನು ಸುತ್ತಿಕೊಂಡಿರುವ ವಿಷಯಗಳು ಹಲವಾರು. ಅವೆಲ್ಲವನ್ನು ಚಿಂತನಶೀಲನಾದ ಕವಿ ಗಮನಿಸದೇ ಇರಲು ಸಾಧ್ಯವಿಲ್ಲ. ಸಂ. ಶಿ. ಭೂಸನೂರಮಠ ಅವರಿಗೆ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವುದು ಕಷ್ಟಸಾಧ್ಯವಾದ ಸಂಗತಿಯೇನೂ ಆಗಿಲ್ಲ. ಅವರದು ಅನುಭವದಿಂದ ಪಕ್ವವಾದ, ಅಭ್ಯಾಸದಿಂದ ಪರಿಣತವಾದ ವ್ಯಕ್ತಿತ್ವ. ವಚನಸಾಹಿತ್ಯ ಅವರಿಗೆ ಅಂಗೈ ನೆಲ್ಲಿ. ಅನುಭಾವದ ಪರಂಪರೆ ಅವರ ಅಂತರಂಗದ ಸೊತ್ತು. ರಾಮಾಯಣ, ಮಹಾಭಾರತ, ವೇದ, ಉಪನಿಷತ್ತು ಮುಂತಾದವುಗಳು, ಪಾಶ್ಚಾತ್ಯ ತತ್ತ್ವಜ್ಞಾನ, ವಿಜ್ಞಾನ ಇತ್ಯಾದಿಗಳು ಅವರ ವ್ಯಾಪಕವಾದ ಅಧ್ಯಯನದ ವಿಷಯಗಳು. ಹೀಗಾಗಿ ಅಕ್ಕಮಹಾದೇವಿ, ಗಿರಿಮಲ್ಲ, ಗುರುಚೆನ್ನಮಲ್ಲರನ್ನು ಮುಂದಿಟ್ಟುಕೊಂಡು ಕತೆ, ಉಪಕತೆಗಳ, ದೃಷ್ಟಾಂತ, ಸಾಮಿತಿಗಳ ಮೂಲಕ, ಹೆಜ್ಜೆ ಹೆಜ್ಜೆಗೆ ವಚನಗಳ ಅನುಭವ ಮತ್ತು ಅನುಭಾವ ಸಂಪತ್ತನ್ನು ಸ್ವೀಕರಿಸುವುದರ ಮೂಲಕ ಇರುವಿನ ಬಗ್ಗೆ, ಅರಿವಿನ ಬಗ್ಗೆ, ಸಾಕಾರದ ಬಗ್ಗೆ, ನಿರಾಕಾರದ ಬಗ್ಗೆ, ತೀರ ಸಾಮಾನ್ಯವೆನಿಸಬಹುದಾದ ಕಾಮ-ಕ್ರೋಧಾದಿಗಳ ಬಗ್ಗೆ, ವಿಶೇಷವೆನಿಸುವ ಕಾಂತಿ- ಆನಂದಗಳ ಬಗ್ಗೆ, ಬಡತನ- ಸಿರಿತನವನ್ನು ಕುರಿತೂ ಅವರು ಹೇಳಬೇಕಾದುದನ್ನೆಲ್ಲ ಈ ಮಹಾಕಾವ್ಯದಲ್ಲಿ ಹೇಳಿರುವುದನ್ನು ಗಮನಿಸಬಹುದು. ಪ್ರಚಲಿತವಾಗಿರುವ ಅಧಿಕಾರ, ಸನ್ಮಾನ, ಪ್ರಶಸ್ತಿಗಳಿಗಿರುವ ಬೆಲೆಯನ್ನು ಅವರು ಗುರುತಿಸುತ್ತಾರೆ. ಭಕ್ತಿ, ಯೋಗಗಳಂತಹ ಸಾಧನೆಯ ವೈಶಿಷ್ಟ್ಯವನ್ನೂ ಚಿತ್ರಿಸುತ್ತಾರೆ.

ಈ ಕಾವ್ಯದಲ್ಲಿ ಪಾತ್ರಗಳು ಬೆಳೆಯುತ್ತಲೇ ಹೋಗುವುದಿಲ್ಲ. ತಮ್ಮ ತಮ್ಮ ನಿಲುವುಗಳನ್ನು ಅರಿಯುತ್ತ, ಖಚಿತಪಡಿಸಿಕೊಳ್ಳುತ್ತ, ಲೌಕಿಕಕ್ಕೆ ಅಲೌಕಿಕದ ಬಣ್ಣವೀಯುತ್ತ ಕಾಲಕ್ಕೆ ಅನುವರ್ತಿಯಾಗಿಯೂ ಕಾಲಾತೀತವಾಗುತ್ತ, ಒಂದು ಪರಿಸರಕ್ಕೆ ಹೊಂದಿಕೊಂಡು ಪರಿಸರವನ್ನು ಮೀರಿ ನಿಲ್ಲುತ್ತ, ಅನುಭಾವದ ಚಿಂತನೆಯಲ್ಲಿ ಮಾನವನ ಆಲೋಚನಾಶಕ್ತಿಯನ್ನೇ ಅವು ಬೆಳೆಸುತ್ತವೆ. ಮಾನವನ ಭವ್ಯತೆಯನ್ನು ಬೆರಗುಗೊಳಿಸುವ, ಕಣ್ಣು ಕುಕ್ಕಿಸುವ ರೀತಿಯಲ್ಲಿ ಅವು ಚರ್ಚಿಸುತ್ತವೆ. ನಾಟಕೀಯ ಗುಣವನ್ನು ಪಡೆದುಕೊಂಡೂ ಸಹಜ ನಿರೂಪಣೆಯಾಗಿ ಕಾವ್ಯ ಮುನ್ನಡೆಯುತ್ತದೆ. ಒಮ್ಮೆ ಶರತ್ಕಾಲದ ತಿಳಿನೀರಾಗಿಯೂ ಇನ್ನೊಮ್ಮೆ ವರ್ಷಾಕಾಲದ ಭೋರ್ಗರೆವ ತುಂಬು ಹೊಳೆಯಾಗಿಯೂ ಕಾವ್ಯ ಪ್ರವಹಿಸುವದನ್ನು ಕಾಣಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವನ ಮೂಲಭೂತವಾದ ಇರುವನ್ನೂ, ಸಮಾಜ ವ್ಯವಸ್ಥೆಯಲ್ಲುಂಟಾದ ವೈವಿಧ್ಯವನ್ನೂ, ತತ್ತ್ವಸಿದ್ಧಾಂತಗಳ ಮೂಲಕ ರೂಪಗೊಂಡ ಮತತತ್ತ್ವಗಳನ್ನೂ ಅಂತಿಮವಾಗಿ ಒಂದೇ ಒಂದಾಗಿರುವ ಬೆಳಗಿನಲ್ಲಿ, ಶೂನ್ಯದಲ್ಲಿ ಬೆರೆಯುವ ಅದ್ವೈತವನ್ನು ಕಾವ್ಯ ಚಿತ್ರಿಸುತ್ತ ಹೋಗಿರುವುದು 'ಭವ್ಯಮಾನವ'ದ ವೈಶಿಷ್ಟ್ಯವಾಗಿದೆಯೆಂದು ಹೇಳಬಹುದು. ಕಾವ್ಯದಲ್ಲಿ ಅನೇಕ ಘಟ್ಟಗಳಿದ್ದು ಜೀವನದ ಆಳ, ಎತ್ತರ, ವಿಸ್ತಾರಗಳನ್ನು ತೆಕ್ಕೆಗೊಗ್ಗಿಸಿಕೊಳ್ಳುತ್ತ, ಪರಮೋನ್ನತವಾದ ಮಾನವ ಐಕ್ಯದ, ಮಾನವನ ಭವ್ಯತೆಯ ಸಂದೇಶವನ್ನೂ ನೀಡುತ್ತಿರುವುದು ಅದರ ದರ್ಶನವಾಗಿದೆ.

ಮಾನವನ ಊರು-ನಾಮ ಹಲವು
ಊರು ಹಲವಾದರೂ ಊರು ಒಂದು
ಆ ದೇಶ ಈ ದೇಶ ಹಳ್ಳಿ ಪಟ್ಟಣ ನಗರ
ಎತ್ತ ನೋಡಿದರತ್ತ ಊರುಊರೆಲ್ಲ
ಒಂದು ಜಾತಿಯ ಊರು ಒಂದು ಭಾಷೆಯ ಮಾತು
ಎಲ್ಲಿರಲಿ ಎಂತಿರಲಿ ಮಾನವನ ಕುಲಗೋತ್ರ
ಮಾನವನ ಗುಣಧರ್ಮ ಜಾತಿ ನೀತಿ
ಒಂದೆ ಮಾದರಿ ತಾಯೆ ಮರ್ತ್ಯಮಾನವಲೋಕ:
....
ಇರುವುದೊಂದೇ ಊರು 'ಮಣ್ಣೂರು'
ಇರುವುದೊಂದೇ ಗ್ರಾಮ 'ಭೂತಗ್ರಾಮ'
....
ಊರು ಲಕ್ಷದ ಸಂಖ್ಯೆ ತಿರುಗಿದರು ತಿರುಗಿದರು
'ಪಂಚಭೂತಗ್ರಾಮ' ಅದೆ ಒಂದು ಊರು
ನಗುವಳುವ, ಹಿಗ್ಗಿ- ಕುಗ್ಗುವ ಭಾಷೆ ಒಂದು
ಬಾಲ್ಯ ಯೌವ್ವನ ಭಾಷೆ ಮುಪ್ಪು ಸಾವಿನ ಭಾಷೆ
ವೈರ ಮೈತ್ರಿಯ ವಿವಿಧ ಭಾಷೆ ಒಂದು
ಎಲ್ಲಲ್ಲಿ ಅದೆ ಊರು ಅದೆ ಮಾತು ಅದೇ ಕತೆ

(ಕತ್ತಲೆಯ ಕಾಂಡ. ಪು- 281/282)

ಇಂಥ ಚರಣಗಳನ್ನು ಓದಿದಾಗ ಮಾನವ ವಿಶ್ವದ, ಅಥವಾ ಅಖಂಡವಾದ ಮಾನವತ್ವದ ಕಲ್ಪನೆ ನಮಗೆ ಬಂದು ಬಿಡುತ್ತದೆ. 'ಮಣ್ಣೂರು' 'ಭೂತಗ್ರಾಮ'ಗಳು ಪಂಚಭೂತಗಳ ಒಟ್ಟು ಪ್ರಕೃತಿಯನ್ನೇ ನಮ್ಮ ಕಣ್ಣಮುಂದೆ ತಂದು ನಿಲ್ಲಿಸಿ, ಪಂಚಭೂತಾತ್ಮಕವಾದ ಮಾನವ ದೇಹದ (ಅದು ಕೂಡ ಒಂದು ಮಣ್ಣೂರೆ) ಪರಿಕಲ್ಪನೆಯ ತಿರುಳನ್ನು ಧ್ವನಿಸುತ್ತ, ಭಾಷೆಯೆಂಬುದು ನಗುವ, ಅಳುವ, ಹಿಗ್ಗುವ, ಕುಗ್ಗುವ, ಬಾಲ್ಯ- ಮುಪ್ಪುಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವಗಳನ್ನು ಸ್ಪಂದಿಸುವ, ಈ ಮುಂತಾದವುಗಳ ವಾಹಕವೇ ಹೊರತು ಭೌಗೋಲಿಕ ಪರಿಸರದಲ್ಲಿ ಸಂಕೇತಗಳಾಗಿ ರೂಪುಗೊಂಡ ಕನ್ನಡ, ಇಂಗ್ಲಿಷ, ರಶಿಯಾ ಇತ್ಯಾದಿಗಳಲ್ಲ- ಎಂಬುದರ ಸಮ್ಯಕ್ ದರ್ಶನವು ನಮಗೆ ತಾನೇ ತಾನಾಗಿ ಉಂಟಾಗುತ್ತದೆ. ಕವಿಗಳು ಅಖಂಡವಾದ ಮಾನವತ್ವದ ವ್ಯಾಖ್ಯಾನ ಮಾಡುತ್ತಿರುವಂತೆ ರಚಿಸಿದ ಈ ಪದ್ಯಭಾಗದಲ್ಲಿಯೇ 'ಕೋಟಿಮನ ಕೋಟಿಬುದ್ಧಿಗಳ ತೆರೆದು, ಕೋಟಿದೇಹದ ಕೋಟಿ ಪ್ರಾಣಗಳ ಮುಸುಕನೋಸರಿಸಿ ಒಳಗಿಳಿದು ನೋಡಿದರೆ, ನೋಡಿದರೆ........'' ಎಂದು ಹೇಳಿಯೇ 'ಮಾನವನ ಊರು ಒಂದೂರು...........'' ಎಂಬಿತ್ಯಾದಿಗಳನ್ನು ಸ್ಪಷ್ಟಪಡಿಸಿರುವುದುಂಟು.

ಮಾನವನ ಭವ್ಯಕ್ಕೆ ಆತಂಕಕಾರಿಯಾಗಿರುವುದು 'ನಾನು' ಎಂಬ ಅಹಂಕಾರ. ಇದೊಂದು ಮಹಾರೋಗ. ಇದಕ್ಕೆ ಕಾಮ-ಕ್ರೋಧಾದಿಳ ರೋಗ, ಹೆಣ್ಣು ಗಂಡಿನ ರೋಗ, ಹೊನ್ನು ಮಣ್ಣಿನ ರೋಗ ಮುಂತಾದವುಗಳು ಸೇರಿ, ಉಲ್ಬಣಿಸಿ ಕತ್ತಲೆಯ ಗರ್ತಕ್ಕೆ ನೂಕಿ ಬಿಡುತ್ತವೆ. ಜೊತೆಗೆ ಕಳ್ಳಬೇಡರ ಪಡೆ, ಕಾಳರಕ್ಕಸರ ಪಡೆ ನಿರ್ಮಾಣವಾಗಿ ದುರಿತ, ದುರ್ಗುಣ, ದುರಾಚಾರಗಳು ಬೆಳೆಯುತ್ತ ಅರಿವಿನ ಮಾನವನನ್ನು ಮರೆವಿನ ಅಂಧಕಾರದಲ್ಲಿ ನೂಕಿಬಿಡುತ್ತವೆ. ಇದನ್ನೆಲ್ಲ ಗುರುತಿಸುತ್ತ ಸಂ. ಶಿ. ಭೂಸನೂರಮಠ ಅವರು 'ಕತ್ತಲೆಯಕಾಂಡ'ವನ್ನು ವಿಸ್ತಾರವಾಗಿಯೇ ನಿರೂಪಿಸಿದ್ದಾರೆ. ದಿನ ನಿತ್ಯದ ಪ್ರಪಂಚವನ್ನು ಇದ್ದ ಸ್ಥಿತಿಯಲ್ಲಿಯೇ ನೋಡುವ ನಮಗೆ ಅಚ್ಚರಿಯೆನಿಸುವಂಥ ಸಂಗತಿಗಳು ಇಲ್ಲಿ ಕಂಡು ಬರಲಿಕ್ಕಿಲ್ಲ. ಆದರೆ ಅದೆಲ್ಲ ಕಾವ್ಯದ ರೂಪದಲ್ಲಿ ಮೈತಳೆದು ಬಂದಾಗ, ಕವಿಯ ದರ್ಶನದ ಮೂಸೆಯಲ್ಲಿ ಹಾಯ್ದು ಬಂದಾಗ ನವೀನತೆಯನ್ನು ಪಡೆದುಕೊಳ್ಳುವುದು ಸಹಜವಾಗಿದೆ.

ಕತ್ತಲೆಯ ಕಥೆ ಇನ್ನೂ ಮುಗಿದಿಲ್ಲ ಮುಗಿದಿಲ್ಲ
ವರ್ತಮಾನದ ಮುಂದೆ ವರ್ತಿಷ್ಯಮಾನ
ನಾಳೆ ನಾಳೆಯಕಾಲ ಸಾಲುಗಟ್ಟಿದೆ ಮುಂದೆ
....

(ಕತ್ತಲೆಯ ಕಾಂಡ, ಪು-402)

ಮುಗಿಯದ ಕತ್ತಲೆಯ ಕತೆಯಲ್ಲಿ ಮಾನವನ ಸತ್ಯ ಮತ್ತು ಮಾನವನ ಸತ್ವಗಳು ನಾಶವಾಗಿರುವುದನ್ನು ಕಂಡುಕೊಂಡ ಕವಿ ತನ್ನ ಅಮಿತವಾದ ಕಳವಳವನ್ನು ಸೂಚಿಸುತ್ತ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಳಾಗಿ ಹಾಳಾಗಿ ಇನ್ನೂ ಹಾಳಾಗಿ
ಹಾಳಾಗಿ ಹೋಗಿಹುದು ಮರ್ತ್ಯಲೋಕ!
ಕೋಟಿ ಕಣ್ಣೊಳು ಕೋಟಿಕಾಲ ಅತ್ತರೆ ತಂದೆ
ದುಃಖ ದುಃಖದ ಕಡಲು ಒತ್ತರಿಸಿ ನುಗುತ್ತಿದೆ!

(ಅಲ್ಲೇ-ಪು- 408-9)

ಎಂದು ಪರಿತಪಿಸುತ್ತಾನೆ.

ಕತ್ತಲೆಯ ತೊಟ್ಟಿಲೊಳು
ಕತ್ತಲೆಯನಂತಕ್ಕೆ ನೇಣುಕಟ್ಟಿ
ವಿಶ್ವಮಾನವದ ಮಾಯಾಶಿಶುವ ಮಲಗಿಸಿ
ಕತ್ತಲೆಯ ಮೊಲೆಗೊಟ್ಟು ಕತ್ತಲೆಯ ಜೋಗುಳುಸಿ
ಸಾಕಿ ಸಲಹಿದಳವ್ವ ಕತ್ತಲೆಯ ಮಹಾತಾಯಿ!

(ಅಲ್ಲೇ-ಪು.416)

ಹೀಗೆಂದು ವರ್ಣಿಸುವಾಗ ''ಡಾರ್ಕ ನೈಟ ಆಫ್ ದಿ ಸೋಲ್'' ದ ನೆನಪಾಗದಿರದು. ಆತ್ಮನನ್ನು ಆವರಿಸಿದ ಈ ಕಾಳರಾತ್ರಿ ಹರಿಯದೆ ಬೆಳಗು ಬರಲಾರದು. ಆ ಬೆಳಗು ಕೂಡ ಹೊರಗಿನಿಂದ ಮೂಡಿ ಬರುವಂತಹದಲ್ಲ. ಒಳಗಿನಿಂದಲೇ ಎಚ್ಚತ್ತು ಹೊಳೆಯುವಂತಹದು.

ಕತ್ತಲೆಯ ಗುಹೆಯೊಳಗೆ ಚಿಜ್ಜ್ಯೋತಿಯಂಶ
ಅಂತರಾಳದಿ ಗುಹೇಶ್ವರಲಿಂಗ ಕಿರಣ

(ಅಲ್ಲ- ಪು. 420)

'ನಾನು' ಎಂಬುದು ಅಳಿದು, ಅರಿವು ಸ್ವಯವಾಗುವವರೆಗೆ ಕತ್ತಲೆ ಇರುವಂತಹದೆ. ತನ್ನೊಳಗಿನ ಚಿಜ್ಜ್ಯೋತಿ ಅಂಶ ಪ್ರಕಟಗೊಂಡಾಗ 'ತಮಂಧ ಘನ ಜ್ಯೋತಿ ಕಿರಿದೆನ್ನಬಹುದೇ! 'ಬಾರದಯ್ಯ' ಎಂಬುದುರ ಅನುಭವವಾಗುವುದು. ಹೀಗಿದ್ದರೂ, 'ನಾನು' ಎಂಬುದು ಬೆಳೆಯುತ್ತಲೇ ಇರುವುದನ್ನು 'ಭವ್ಯಮಾನವ'ದ ಕವಿ 'ಉದಯಕಾಂಡ' ದಲ್ಲಿಯೂ ಗುರುತಿಸುತ್ತಾರೆ. ಮಿತಿ-ಮೀರಿರುವ 'ನಾನಿನ' ಮಹತ್ವವನ್ನು ಮಿತಿಗೆ ಒಳಪಡಿಸುವುದು ಹೇಗೆ ತಾನೇ ಸಾಧ್ಯ? ಅಂತೆಯೇ ಕವಿಗಳು!

ನಾನು ಮಾನವನಾಸೆ ವಿಶ್ವತೋ ಕಣ್ಣಾಗಿ
ವಿಶ್ವತೋ ದಿಕ್ಕುಗಳ ಹುಡುಕುತ್ತ ನಡೆದಿಹುದು
ಮಾನವನ ಹಸಿವು ಹಿಂಗಿಲ್ಲ ಹಿಂಗಿಲ್ಲ.

(ಉದಯಕಾಂಡ, ಪು-471)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೆ ವಾಮನಮೂರ್ತಿ ನೆಲಮುಗಿಲ ಮೆಟ್ಟಿ
ಮೆಟ್ಟಲಿಕೆ ಮತ್ತೇನು? ಲೆಕ್ಕ ಹಾಕುತ್ತಿಹನು.
ತನ್ನ ದರ್ಪಕೆ ಮಣಿಯಬೇಕೆಲ್ಲ ಎಲ್ಲವರು
ಅಧಿಕಾರ ಪದವಿ ಸನ್ಮಾನ ಸತ್ಕಾರ
....
....

(ಅಲ್ಲೆ)

'ಎಲ್ಲ ಎಲ್ಲರ ತಲೆಯ ಮೇಲೆ ಕಾಲಿಟ್ಟು, ಮಾನ ಮನ್ನಣೆ ಪೂಜೆ ನಡೆಯಬೇಕು' ಎಂದು ಬಯಸುವ 'ನಾನು' ವ್ಯಕ್ತಿಯ ಸ್ತರದಿಂದ ಗುಂಪಿನ ಸ್ತರಕ್ಕೆ ವಿಸ್ತರಿಸಿಕೊಳ್ಳುತ್ತದೆ. ಅದನ್ನು ವಿವರವಾಗಿ ವರ್ಣಿಸಿದ ಭೂಸನೂರಮಠ ಅವರು 'ಜಾತಿಗುಂಪುಗಳಿಗೆ ಗುಂಪು ನಾನು, ವರ್ಣ ಆಶ್ರಮವೊಂದು ಗುಂಪುನಾನು' ಇತ್ಯಾದಿಗಳನ್ನೆಲ್ಲ ಗಮನಿಸಿ 'ನಾನು ನಾನಿನ ಸಂತೆ ವಿಶ್ವದ ವಿಚಿತ್ರ!' ಎಂದು ಉದ್ಗರಿಸುತ್ತಾರೆ.

ನಾನುಗಳ ನಾನುಗಳು ಹೊತ್ತಿಸಿದ ಉರಿಗೆ
ಸಿಕ್ಕರಲ್ಲಾ ಸೀದು ಹೋದರಲ್ಲಾ! ಎಲ್ಲ-
ಪಾಪದುರಿ ಪುಣ್ಯ ಸಜ್ಜನದ ಸಂತತಿಯಾ
ಕೊಂಡಿತ್ತು ಆಹುತಿಯ ....

(ಅಲ್ಲೆ ಪು-477)

ಹೀಗೆ 'ನಾನುಗಳ' ದುಷ್ಪರಿಣಾಮವನ್ನು ಚಿತ್ರಿಸಿದ ಮೇಲೆ ನಿದಾನವಾಗಿ ಎಚ್ಚತ್ತ ಮಾನವನೊಬ್ಬನನ್ನು ಗುರುತಿಸುತ್ತಾರೆ ಕವಿಗಳು:

ಅರಿವು ಜನ್ಮಕೆ ಬಂದ ಕೋಟಿ ಮಾನವರೊಳಗೆ
ಎತ್ತಾನಿಕೊಬ್ಬ ಎಚ್ಚತ್ತ ಮಾನವ-
ನಾನು ನಿದ್ರೆಯ ಹತ್ತಿ ಮಲಗಿರುವ ಮರಹೇ
ಪೂರ್ಣ ಎಚ್ಚರವೆಂಬ ತನ್ನ ನಾನು
ಜಾತಿ ನಿದ್ರೆಯೊಳಿರುವ ಮಾಯಾ ಮಾನವ
ನಾನು ಕೋಟಿಯ ಭಾವ ಭ್ರಾಂತಿಯನು ಕಳೆದು-
ಎತ್ತಾನಿಕೊಬ್ಬ ಎಚ್ಚತ್ತ ಮಾನವ
ತನ್ನೊಳಗೆ ಬೆಳಗಿರುವ ದಿವ್ಯ ಕಳೆ ಕಂಡ;

(ಅಲ್ಲೆ, ಪು- 478)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿಂದ ಕಾವ್ಯ ಬೆಳಕಿನೆಡೆಗೆ ಸಾಗುತ್ತದೆಂದು ಹೇಳಬೇಕು. 'ನಾನು' ಎಂಬುವರ ಮರವೆಯಲ್ಲಿ, ಕತ್ತಲೆಯಲ್ಲಿ ತೊಳಲಾಡುವ ಮಾನವನು ತನ್ನ ತಾನೇ ತಿಳಿಯಬೇಕಾಗಿದೆ.

ತನ್ನ ಬೀಗವ ತಾನೆ ತೆಗೆಯಬೇಕಲ್ಲದೆ
ತಾನೆ ಹಾಕಿದ ಕೀಲಿ ತನ್ನ ಕೈಯೊಳ ಕೀಲ
ಹವಣಲ್ಲ ಹವಣಲ್ಲ ಅನ್ಯರಾ ವಶವಲ್ಲ
ನಾನು- ಮಾನವನ ಮುದ್ರಿಸಿದ ಕತ್ತಲೆಯ
ಕಳವರ ನೀವು- ಬೆಳಗೆದ್ದು ಬರಬೇಕು.

(ಉದಯಕಾಂಡ, ಪು. 503)

ಹೀಗೆ ಬೆಳಗೆದ್ದು ಬಂದಾಗ ಮಾನವನ ದಿವ್ಯ, ಮಾನವನ ನಿಜನಿಲುವು ಭವ್ಯಲಿಂಗ, ನಿಜಸ್ಥಲದ ಪರಂಜ್ಯೋತಿ ಮೈದೋರುತ್ತದೆ. 'ತನ್ನ ಬೆಳಗೇ ತನ್ನ ಕತ್ತಲೆಯ ಕೆಡಿಸುವುದು' ಇದು ಕವಿ ಕಂಡ ಸತ್ಯ. ಅನುಭಾವ ಪರಂಪರೆಯ ಸತ್ಯವೂ ಇದು ಅಹುದು. ಇಂಥ ಬೆಳಗನ್ನು ಕಾಣುವುದು ಎಲ್ಲರಿಗೂ ಸಾಧ್ಯವಿದೆಯೇ? 'ಶತಮಾನ ಯುಗಮಾನ ಕಳೆದರೂ...... ಬಿದ್ದಿಲ್ಲ ಚಿದ್- ಬೆಳಗು ಮಾನವನ ಕಣ್ಣಿಗೆ' ಎಂಬುದನ್ನು ಒಪ್ಪಿಕೊಳ್ಳುವ ಕವಿಗಳು:

ಆದರೂ ಕಂಡರು ಕಚ್ಚಿದ್ಧೀರರು
ಆದರೂ ಕಂಡರು ಗಂಭೀರ ಮಾನವರು
ಅನುಭಾವಿಗಳು ಮತ್ತೆ ಲಿಂಗಗಂಭೀರರು.

(ಅಲ್ಲೆ, ಪು-510)

ಭೂತ ಭೌತಿಕ ವಿಶ್ವಪ್ರವಾಹದಲ್ಲಿಯ ಕಾಮ-ಕ್ರೋಧಾದಿಗಳನ್ನು, ಅನ್ಯಾಯ- ದ್ವೇಷಗಳನ್ನು ಎದುರಿಸುತ್ತಲೂ ಧೀರರಾದವರು ಸಾಗಬೇಕಾಗುವುದು. ಅದನ್ನು ಸ್ವಲ್ಪದರಲ್ಲಿ 'ಭವ್ಯಮಾನವ' ಕಾವ್ಯ ಹೀಗೆ ಬಣ್ಣಿಸುತ್ತದೆ:

ಜಗದಗಲ ಹರಿದಿರುವ ಪಾಪವಾರಾಶಿಗೆ
ಇದಿರಾಗಿ ಈಸಿದನು ಕಚ್ಚಿದ್‌ಧೀರ
ಪೂರವನು ಪ್ರತಿಭಟಿಸಿ ಕಚ್ಚಿದ್‌ವೀರ
ತಾನು ಬ್ರಹ್ಮದ ತನ್ನ ನಿಜದ ನಿಲುಕಡೆಗೆ
ಈಸಿದನು ಕಚ್ಚಿದ್ ಮಹಾಲಿಂಗ ಸಾಹಸಿ.

(ಅಲ್ಲೆ, ಪು. 530)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಂತರು, ಶರಣರು ಹೀಗೆಯೇ ಭವಸಾಗರವನ್ನು, ವಿಷಯಸಂಸಾರವನ್ನು ಈಸಿ ಆಚೆಯ ದಡವನ್ನು ಮುಟ್ಟಿದವರು. ಶ್ರೀರಾಮ, ಸಿದ್ಧಾರ್ಥ, ಬಸವಣ್ಣ ಇವರೆಲ್ಲ ಈ ಮಾಲಿಕೆಯವರು. ಓನಾಮದನುಭವ, ಭಕ್ತಿಯ ಪಾರಮ್ಯ ಮುಂತಾದವುಗಳ ಮೂಲಕ ಚಿದ್‌ಬೆಳಗು ವಿಶ್ವವಿಸ್ತಾರವಾಗಿ ವ್ಯಾಪಿಸಿಕೊಂಡು ದಿವ್ಯತೆಯ ಕನಸು ಸಾಕ್ಷಾತ್ಕರಿಸಿ:

ತನ್ನೊಳಗೆ ತಾನೊಡದು ಮೂಡಿತು ಸ್ವಯಂಭು
ನಾನು ಮಾನವನೊಳಗೆ ಮಾನವ ಮಹಾದೇವ

(ಅಲ್ಲೆ, ಪು, 534)

'ಭವ್ಯಮಾನವ'ದ ಪರಿಕಲ್ಪನೆ ಈ ರೀತಿ ಆಕಾರಪಡೆದು, 'ನಾನು, ನನ್ನದು, ನನಗೆ, ನನ್ನಿಂದಲೆಂಬ ಹುಲ್ಲು ಹೊರೆಗಟ್ಟಿ ಲಿಂಗದ ಕಿಚ್ಚಿಗರ್ಪಿಸಿದ' ಅಸಾಮಾನ್ಯವಾದ ಅರ್ಪಣದ ನಿಲುವೂ ಇಲ್ಲಿಯೇ ಕಂಡುಬರುತ್ತದೆ. ಭಕ್ತಿಯ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಈ ನಿಲುವು ಸತಿಪತಿಗಳ ಸಾಮರಸ್ಯವನ್ನೂ ಪ್ರತಿಮಿಸುತ್ತ, ಶರಣರ ಅನುಭವ ಸಂಪತ್ತನ್ನು ಸೂರೆಗೊಳ್ಳುತ್ತ ಅಗಾಧವಾಗಿ ಕಣ್ಮುಂದೆ ಬಂದು ನಿಲ್ಲುತ್ತದೆ.

ವಿಶ್ವ ಬ್ರಹ್ಮಾಂಡಗಳ ಭವ್ಯ ಸ್ವಪ್ನ
ಆಕಾರಗೊಂಡಿತ್ತು ಶರಣನಾಕಾರ

(ಅಲ್ಲೆ, ಪು-586)

ಕವಿಯ ಈ ದರ್ಶನಕ್ಕೆ ಶರಣ ಜೀವನ ಆಧಾರವಾಗಿರುವುದರಿಂದ ಕಾವ್ಯದ ಮುಂದಿನ ಭಾಗಗಳಲ್ಲಿ ಶರಣಜೀವನದ ವಿವಿಧ ಮುಖಗಳು 'ಭವ್ಯಮಾನವ'ದ ವಿವಿಧ ಸ್ವರೂಪಗಳಾಗಿ ಕಾಣಿಸಿಕೊಳ್ಳುತ್ತದೆ. ಕವಿ ಕಂಡ ದರ್ಶನವೆಂದರೆ ಶರಣ ಜೀವನದ ದರ್ಶನವೇ ಎಂದು ಬೇರೆ ಹೇಳಬೇಕಾಗಿಲ್ಲ.

ಇಡೀ ಮಾನವಕುಲವನ್ನೇ ಕಣ್ಣೆದುರಿಗಿರಿಸಿಕೊಂಡು, ಅದರ ಕತ್ತಲೆ ಬೆಳಕುಗಳ ಸ್ಥಿತಿ-ಗತಿಗಳನ್ನು ಚಿತ್ರಿಸಹೊರಟ 'ಭವ್ಯಮಾನವ' ಮಾನವಾಕಾರದ ಜ್ವಲಂತ ಲಿಂಗಗಳನ್ನೂ ಗುರುತಿಸುತ್ತದೆ, ಮಾನವನ ಮರೆಯೊಳಗೆ ಮಹಾಲಿಂಗವಿರುವುದನ್ನೂ ಕಂಡರಿಸುತ್ತದೆ. ಹೊರಗೆ ಲೋಕದ ಬೊಂಬೆಯಾಗಿರುವವನ್ನು ಒಳಗೆ ಶರಣನಾಗಿರುವುದನ್ನು ತಿಳಿಸಿಕೊಟ್ಟು:

ಕಾಲ ದೇಶಾತೀತ ಕುಲ ಜಾತ್ಯಾತೀತ
ಈ ಶರಣ ಈ ಮಹಾಸಿದ್ಧ ಬುದ್ಧ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬಿತ್ಯಾದಿ ಚರಣಗಳು ಸರ್ವಕಾಲಿಕವಾದ, ಸಾರ್ವತ್ರಿಕವಾದ ಘನವಾದ ಶರಣನ ನಿಲುವನ್ನು ಸ್ಪಷ್ಟಗೊಳಿಸುತ್ತದೆ. ಈ ಹಿಂದೆ ಹೇಳಲಾದ 'ಗಜಕೋಟಿಯೊಳಗೊಂದು ಐರಾವತ, ದ್ರುಮಕೋಟಿಯೊಳಗೊಂದು ಕಲ್ಪದ್ರುಮ, ರತ್ನಕೋಟಿಯೊಳಗೊಂದು ಚಿಂತಾರತ್ನ, ಪರ್ವತದ ಪಂಕ್ತಿಯೊಳಗೊಂದು ಮೇರು'' ಎಂಬಿತ್ಯಾದಿಯಾದ ವರ್ಣನೆಯು ಬರೀ ಅಲಂಕಾರದ ಬೆಡಗಿನಿಂದ ಕೂಡಿರದೆ, ಒಂದು ಸತ್ಯಸ್ಯ ಸತ್ಯ- ಕಥನವನ್ನು ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ. 'ಮಾನವನ ಕುಲದೊಳಗೆ ಜಾತಿಯೆರಡು-ಭವಿಯೊಂದು ಜಾತಿ, ಭಕ್ತನ ಜಾತಿ ಮತ್ತೊಂದು' ಎಂದು ಸುಲಭ ವಿಂಗಡನೆ ಮಾಡಿದ ಕವಿಗಳು 'ಭವಿಯೊಳಗೆ ಭಕ್ತ ಭಕ್ತನೊಳು ಭವಿಯಾಡಿಹನು, ಬೆಂಕಿ ಕಟ್ಟಿಗೆ ಕೂಡಿ ಆಟವಾಡಿದಂತೆ' ಎಂದು ವರ್ಣಿಸುತ್ತಾರೆ. ಭವಿಯೊಳಗೆ ಭಕ್ತನಿರುವುದನ್ನೂ ಅವನು ಯಾವುದೋ ಒಂದು ಘಟ್ಟದಲ್ಲಿ ಪ್ರಕಟವಾಗುವುದನ್ನೂ ನಾವು ಒಪ್ಪಿಕೊಳ್ಳಬಹುದು. 'ಭಕ್ತನೊಳು ಭವಿಯಾಡಿಹನು' ಎಂಬುದು ಒಗಟಿನಂತಿದೆ. ಅದನ್ನು ಸ್ಪಷ್ಟಪಡಿಸುವಂತೆ 'ಪ್ರಾಕೃತದ ಭವಿಯೊಳಗೆ ಭಕ್ತಮಂದಜ್ಯೋತಿ, ಈ ಬೆಳಗಿನೊಡಲು ಕಟ್ಟಿಗೆಯ ಭವಿಜಾತಿ' ಎಂದು ತಿಳಿಸಿಕೊಡಲಾಗಿದೆ. ಇಂಥ ಸಂದರ್ಭಗಳಲ್ಲಿ 'ಭವ್ಯಮಾನವ' ಕಾವ್ಯ ಬೆಡಗಿನ ವಚನಗಳಂತೆ ಚಿಂತನೆಗೆ ತೊಡಗಿಸುತ್ತದೆ. ಪ್ರಶ್ನೆಗಳನ್ನು ಹುಟ್ಟಿಸುತ್ತ, ಪರಿಹಾರಗಳನ್ನೂ ದೃಷ್ಟಾಂತಗಳ ಮೂಲಕ ಸೂಚಿಸುತ್ತ, ತತ್ತ್ವ ಜಿಜ್ಞಾಸೆಗೆ ಕೋಡುಮೂಡಿಸುತ್ತ ಮುಂದೆ ಸಾಗುತ್ತದೆ. ಇದು ಅದರ ನಿರೂಪಣಾ ವೈಶಿಷ್ಟ್ಯವೆನ್ನಬಹುದು. ದಾರ್ಶನಿಕ ಕಾವ್ಯಗಳೆಲ್ಲ ಈ ರೀತಿಯಾಗಿರುವುದು ಅನಿವಾರ್ಯವಾಗಿದೆ. ಯಾಕೆಂದರೆ ಅವು ಅಮೂರ್ತವಾದುದಕ್ಕೆ ಅಂದರೆ ಬಟ್ಟಬಯಲಿಗೆ, ಬರೀ ಶೂನ್ಯಕ್ಕೆ ಆಕಾರ ಕೊಡಬೇಕಾದ ಸಂದರ್ಭದಲ್ಲಿ ಬೆಡಗನ್ನು ಆಶ್ರಯಿಸದೆ ನಡೆಯುವಂತಿಲ್ಲ. ಅಂತೆಯೇ ಅಲ್ಲಮಪ್ರಭುವಿನ ಅನುಭಾವದ ವಚನಗಳು ಎಂಥ ಪಂಡಿತರಿಗೂ ಅರ್ಥವಾಗದ ಎತ್ತರದಲ್ಲಿ ನಿಂತಿರುವುದು, ಕೇವಲ ಅನುಭಾವದ ಸ್ಥಿತಿ ಪಡೆದವರಿಗೆ ನಿಲುಕುವಂತಾಗಿರುವುದು- ವಿದ್ವಾಂಸರಿಗೆಲ್ಲ ತಿಳಿದಿರುವ ವಿಷಯ. 'ಉಜ್ವಲಕಾಂಡ' 'ಭವ್ಯಕಾಂಡ'ಗಳಲ್ಲಿ ಶರಣರ ಜೀವನದ ಘಟನೆಗಳನ್ನು ಆಧರಿಸಿಯೂ ಕಾವ್ಯ ಆಕಾಶದಂತೆ ಆಕಾರವಿದ್ದೂ ನಿರಾಕಾರವಾಗಿ ನಿಂತುಬಿಡುತ್ತದೆ. ಇಲ್ಲಿಯ ಶಬ್ದಗಳು ಶಬ್ದಾತೀತವಾದುದನ್ನು ಧ್ವನಿಸುತ್ತಿರುವುದೂ ಅಲ್ಲಿಗಲ್ಲಿಗೆ ಕಂಡುಬರುತ್ತದೆ. ಸಂ. ಶಿ. ಭೂಸನೂರಮಠ ಅವರೇ ಒಂದೆಡೆಯಲ್ಲಿ ನಿರೂಪಿಸಿದುದು ಹೀಗೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಶ್ವಚೈತನ್ಯಗಳ ಚಲನೆಯನು ನುಂಗಿ
ಮಾತಿಲ್ಲ ಕತೆಯಿಲ್ಲ ಸುಮ್ಮಗೆ ಬಿಮ್ಮಗೆ
ನಿಶ್ಶಬ್ದ ನಿಂದಿರುವ ಈ ಶಾಂತಿಸಾಗರದ
ನಿಶ್ಚಲ ಮಹಾಶಕ್ತಿಗೆಲ್ಲಿ ಉಪಮಾನ?
ಪರ್ವತ ತರಂಗ ಕೋಟಿಯ ಹೊತ್ತಸಾಗರ,
ಸಾಗರವ ಹೊತ್ತ ಪೃಥಿವಿಗೆ ಹೋಲಿಕೆ.
ಕಾವ್ಯಾಲಂಕಾರಶಾಸ್ತ್ರದ ದರಿದ್ರ!
ಹಾಡುತ್ತ ಹಾಡುತ್ತ ಭಾವನಿರ್ಭರದೊಳಗೆ
ಆನಂದ ಸಾಗರದಿ ತೇಲಿ ಮುಳಗಯ್ಯ,

(ಉಜ್ವಲಕಾಂಡ, ಪು. 710)

ಇಂಥ ಅನುಭವದಲ್ಲಿ ಉಪಮಾತೀತವಾದುದು, ಕಾವ್ಯಾಲಂಕಾರಶಾಸ್ತ್ರಕ್ಕೆ ಮೀರಿದುದು, ಕೇವಲ ಭಾವ ನಿರ್ಭರತೆ ಉಂಟುಮಾಡುವುದು, ಅನುಭೈಕ ಸಾಕ್ಷಿಕವಾದುದು ಇರುತ್ತದೆಂದು ಹೇಳಬಹುದು. 'ಭವ್ಯಮಾನವ'ದ ಭವ್ಯತೆ ಇಂಥ ಸಂದರ್ಭಗಳಲ್ಲಿ ನಮ್ಮ ಕಣ್ಣನ್ನು ಕುಕ್ಕಿಸದಿರದು.

ಶರಣರ ವ್ಯಕ್ತಿತ್ವದ ವಿಶೇಷತೆಗಳನ್ನು ಕಂಡರಿಸುವ 'ಉಜ್ವಲಕಾಂಡ' ದಲ್ಲಿ ನವೀನ ದರ್ಶನವಿಲ್ಲದಿದ್ದರೂ ಬಸವ ದರ್ಶನಕ್ಕೆ ಬದ್ಧವಾಗಿದೆಯೆಂದು ಹೇಳಬಹುದು. 'ದಯವೇ ಧರ್ಮದ ಮೂಲ' 'ಸಕಲ ಜೀವಾತ್ಮರನು ತನ್ನಂತೆ ಬಗಿದಿಹುದು' 'ಕ್ಷಮೆ ಶಾಂತಿ ದಯೆ ಸದಾಚಾರ ಸದ್ಭಕ್ತಿ' ಇತ್ಯಾದಿಗಳೆಲ್ಲ ಶರಣರ ಬದುಕಿನ ಅವಿಭಾಜ್ಯ ಮೌಲ್ಯಗಳು.

ಮೋಳಿಗೆಯ ಮಾರಯ್ಯ, ಸೊನ್ನಲಗಿಯ ಸಿದ್ಧರಾಮ ಇವರ ಸಾಧನೆಗಳು ಇಲ್ಲಿ ಪುನರ್‌ಸೃಷ್ಟಿಗೊಂಡು ಭವ್ಯಮಾನವಕ್ಕೆ ಪೋಷಕ ಸಾಮಗ್ರಿಗಳಾಗಿ ನಿಲ್ಲುತ್ತವೆ. ಶರಣರ ವಚನಗಳೂ ಇಲ್ಲಿ ಕಾವ್ಯದ ರೂಪ ಪಡೆದು ನವೀಕರಣಗೊಳ್ಳುತ್ತವೆ. ಕಲ್ಯಾಣ ಪಟ್ಟಣಕ್ಕೆ ಆಗಮಿಸಿದವರೆಲ್ಲ ಹೊನ್ನಿನೊಳು ಹಾಯ್ದು, ಮಣ್ಣಿನೊಳು ಹಾಯ್ದು ಪಾರಾಗಿ ಬಂದವರು. ಅವರನ್ನು ಚೆನ್ನಬಸವಣ್ಣನವರ ಮೂಲಕ ವರ್ಣಿಸುತ್ತ:

ಕಾಯವೆಲ್ಲಾ ನಿಮ್ಮ ಕಪ್ಪಲಿಂಗ
ಪ್ರಾಣವೆಲ್ಲಾ ನಿಮ್ಮ ಬೆಳಗುಲಿಂಗ
ಭಾವವೆಲ್ಲಾ ನಿಮ್ಮ ದಾಸೋಹಲಿಂಗ
ಇಂಥ ಇರುವೇ ಮಹಾದೇವನಿರುವು!

(ಉಜ್ವಲಕಾಂಡ - ಪು. 757)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದಿರುವುದು ಶರಣರ ಸಹಜ ನಿಲುವನ್ನು ಸೂಚಿಸಿ, ಮಹಾದೇವನ ಅಸ್ತಿತ್ವವನ್ನೂ ನಮ್ಮೆದುರಿಗೆ ತಂದು ನಿಲ್ಲಿಸುತ್ತದೆ. 'ಕಾಯಕದ ಕೈಲಾಸ ಕೈಲಾಸ ಮೀರಿತ್ತು' (ಪು-768) ಎಂದು ಮುಂದಿನ ಕಾಂಡದಲ್ಲಿ ಹೇಳುವ ಮಾತು ಕಷ್ಟಲಿಂಗದ ಇನ್ನೊಂದು ಸ್ವರೂಪವನ್ನು ತಿಳಿಸಿ, ಅದರ ಭವ್ಯತೆಯನ್ನು ಧ್ವನಿಸುತ್ತದೆ.

'ನಾ ದೇವನಲ್ಲದ ನೀ ದೇವನೆ?
ತನ್ನ ಪ್ರಶ್ನೆಗೆ ರಾಯ ತಾನೆ ಉತ್ತರನಾದ
'ನಾ ದೇವ ಕಣಾ ಗುಹೇಶ್ವರಾ'
ಮತ್ತೆ ಎಚ್ಚರಿಸಿದ್ದ ಜಗದ ನರಕುಲವ
'ನರನೆಂಬ ದೇವ ತಾ ನಿರಾಳವೋ'
....
ಮಾನವನ ಬಿಟ್ಟು ಇಹವಿಲ್ಲ ಪರವಿಲ್ಲ
ಮಾನವನ ಬಿಟ್ಟು ಕೈಲಾಸ ಸ್ವರ್ಗಗಳಿಲ್ಲ
....
ಮಣ್ಣೊಳಗೆ ಮೂಡಿರ್ದ ಮಾನವ ಪ್ರಾಣಯೊಳು
ಅರಿವಿದ್ದು ತನ್ನ, ಸುತ್ತಿದ ಜಗವ ಬೆಳಗಿ
ನಿಂದುದು ನಿರಾಲಂಬ ಸರ್ವಶೂನ್ಯ

(ಭವ್ಯಕಾಂಡ-ಪು- 779-780)

'ಭವ್ಯಮಾನವ'ದ ಸ್ವರೂಪವು ಮೇಲಿನ ಚರಣಗಳಲ್ಲಿ ನಿಚ್ಚಳವಾಗಿಯೇ ಕಂಡುಬರುತ್ತದೆ. ಈ ಮೂಲಕ ಕಾವ್ಯ ಒಂದು ವಿಶೇಷ ದರ್ಶನವನ್ನು ನೀಡುತ್ತದೆ.

ಈ ಜಗದ ಬಡತನ, ಹಸಿವು, ಜಡ್ಡು ಇತ್ಯಾದಿಗಳು ಭವ್ಯತೆಗಿರುವ ತೊಡಕು-ಗಳೆಂಬುದನ್ನು ಬಲ್ಲ ಭೂಸನೂರಮಠ ಅವರು ವಾಸ್ತವ ದೃಷ್ಟಿಯಿಂದ ಅವುಗಳನ್ನು ಗಮನಿಸಿ, ಇಂಥ ಪರಿಸ್ಥಿತಿಗಳಲ್ಲಿ ಕಲ್ಯಾಣ ಬರುವುದೆಂತು ಎಂದು ಕನವರಿಸಿದ್ದನ್ನೂ ಇಲ್ಲಿ ಮರೆಯುವಂತಿಲ್ಲ. ಅವರ ಪಾಡನ್ನು ಅವರಷ್ಟಕ್ಕೆ ಬಿಟ್ಟು (ಇದು ಸೂಕ್ತವೆ?) ಮುಂದುವರೆಯುತ್ತ, ಸಮಸ್ಯೆಯನ್ನು ಕೆದಕುತ್ತ, ಪೃಥ್ವಿಯ ಅಗಾಧ ಕಾರ್ಯವನ್ನು ವರ್ಣಿಸುತ್ತ, ಶಿವಬುದ್ಧಿ ಶಿವಭಾವಗಳ ಕಡೆಗೆ ಹೊರಳುತ್ತ 'ಪರಿಹಾರವಾಗಲಿ ಜಗದ ದಾರಿದ್ರ್ಯ'ವೆಂದು ಹಾರೈಸುತ್ತ,

ನೆಲದ ಮಾನವ ತಾನು ಸಾಮಾನ್ಯನಲ್ಲ
ಏರುವರೆ ಆಕಾಶಕ್ಕೇರಬಲ್ಲ
ನಡೆದರೆ ಸಾಗರದಿ ನಡೆಯಬಲ್ಲ.

ಎಂಬಿತ್ಯಾದಿಯಾಗಿ ಹೇಳುವಲ್ಲಿ ನಮಗೆ ಗೊತ್ತಿದ್ದ ಮಾತುಗಳೇ ಇದ್ದರೂ 'ಭವ್ಯಮಾನವ'ದ ಕಲ್ಪನೆಯ ಕಡೆಗೆ ಬೆರಳು ಮಾಡಿ ತೋರಿಸುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಟ್ಟಂದದಲ್ಲಿ ಇಡೀ ಕಾವ್ಯ ಚಿಂತನೆಯಿಂದ ತುಂಬಿ ತುಳುಕುತ್ತಿದ್ದು, ತನ್ನದೇ ಆದ ವೈಶಿಷ್ಟ್ಯದಿಂದ ಬೆಳಗುತ್ತದೆ.

'ಮಾನವನೊಳಗೆ ಪ್ರವೇಶ- ನಿರ್ಮೂಡನೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಸುದೀರ್ಘ-ವಾದ ಪ್ರಸ್ತಾವನೆ ಬರೆದ ಪ್ರೊ. ಸಂ. ಶಿ. ಭೂಸನೂರಮಠ ಅವರು 'ಭವ್ಯಮಾನವ'ದ ಒಳಪದರುಗಳನ್ನು ಬಿಚ್ಚಿಟ್ಟು, ಅದರ ಅಗಾಧ ದರ್ಶವನ್ನು ಖಚಿತವಾದ ಮಾತುಗಳಲ್ಲಿಯೇ ಮಾಡಿಕೊಡುತ್ತಾರೆ. ಈ ಪ್ರಸ್ತಾವನೆ ಇನ್ನೊಂದು ಗದ್ಯಕಾವ್ಯವಾಗಿ 'ಭವ್ಯಮಾನವ' ಮಹಾಕಾವ್ಯದ ಅನುಭವವನ್ನೇ ನೀಡುತ್ತದೆ. ಕಾವ್ಯದ ಬಗೆಗೆ ಹೇಳಬೇಕಾದುದನ್ನೆಲ್ಲ ಹೇಳಿಯಾದ ಮೇಲೆ "ಆನೆ ಕೆಸರಲ್ಲಿ ಬಿದ್ದರೆ ತನ್ನ ತಾನೆತ್ತಿಕೊಳ್ಳಬೇಕು. ಕತ್ತಲೆಯಲ್ಲಿ ಬೀಳುತ್ತಿರುವ ಮಾನವ ತನ್ನನ್ನು ತಾನೆತ್ತಿಕೊಂಡು ಬೆಳಕಿನ, ಬೆಳಗಿನ, ಬಯಲಿನ ಸೀಮೆಗೆ ಬರಬೇಕು. ಆಪತ್ತಿನ ಕಾಲದಲ್ಲಿ 'ಸಖಿಯರನಾರನೂ ಕಾಣೆ'- ಎತ್ತಿಕೊಳ್ಳಬೇಕು- ತನ್ನನ್ನು ತಾನು. ಎಚ್ಚರಿಸಿಕೊಳ್ಳಬೇಕು ತನ್ನೊಳಗೆ ತನ್ನ ದಿವ್ಯವನ್ನು ಮತ್ತು ತನ್ನ ಭವ್ಯವನ್ನು. ದಿವ್ಯದಲ್ಲಿ ಸಮರಸೈಕ್ಯವನ್ನು ಪಡೆದು, ಲೋಕವನ್ನು ಬಿಡದೆ ಲೋಕ ತಾನೆಂಬ ಭವ್ಯ ಸಾಮರಸ್ಯಕ್ಕೆ ಹೆಣಗಬೇಕು. ನಾನು ನೀವೂ ಎಲ್ಲರೂ ...." ಇದು ಕವಿಯ ಆಶಯವೂ ಅಹುದು. ದರ್ಶನವೂ ಅಹುದು. "'ಭವ್ಯಮಾನವ'ದ ಭವ್ಯತೆಗೆ ಈ ಮಾತುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡುವುದು ತೀರಾ ಅಗತ್ಯವಾಗಿದೆ. ಅನಿವಾರ್ಯವೂ ಆಗಿದೆ.

'ಭವ್ಯಮಾನವ' ನಿಚ್ಚಳವಾಗಿ ದಿವ್ಯ ದರ್ಶನವನ್ನು ನೀಡುವುದರ ಜೊತೆಗೆ ಪಾಶ್ಚಾತ್ಯ ವಿದ್ವಾಂಸ ಲೀ ಹಂಟ ನೀಡುವ ಕಾವ್ಯದ ವ್ಯಾಖ್ಯೆಗೆ ಒಂದು ನಿದರ್ಶನವಾಗಿಯೂ ನಿಲ್ಲುತ್ತದೆ. ಆತನ ದೃಷ್ಟಿಯಲ್ಲಿ ಕಾವ್ಯವೆಂದರೆ ಸತ್ಯ, ಸೌಂದರ್ಯ ಮತ್ತು ಸಾಮರ್ಥ್ಯಗಳ ತೀವ್ರ ಅಭೀಪ್ಸೆಗೆ ಕೊಟ್ಟ ವ್ಯಕ್ತರೂಪ. ಇದನ್ನು ಲೀ ಹಂಟನ ಮಾತಿನಲ್ಲಿಯೇ ನೋಡುವುದು ಸೂಕ್ತ.

"Poetry is the utterance of a passion for truth, beauty and power, embodying and illustrating its conception by imagination and fancy, and modulating its language on the principle of variety in uniformity. Its means are whatever the universe contains and its ends pleasure and exaltation."

ಕಾವ್ಯದ ಧ್ಯೇಯ, ಧೋರಣೆ, ಆಶಯ, ಪರಿಣಾಮಗಳನ್ನು ಸ್ಪಷ್ಟಪಡಿಸುವ ಈ ವ್ಯಾಖ್ಯೆ 'ಭವ್ಯಮಾನವ' ಕ್ಕೆ ಯಥಾವತ್ತಾಗಿ ಅನ್ವಯಿಸುತ್ತಿದ್ದು, ಅದರ ಘನತೆಯನ್ನು ಸಾಬೀತುಗೊಳಿಸುತ್ತ- ದೆಂದು ಹೇಳಲು ಅನುಮಾನಿಸ-ಬೇಕಾದುದಿಲ್ಲ.

★ ★ ★

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

BHAWYA-MAANAWA:A Spiritual Quest

S. C. Bagi

In a sense 'Bhawya Maanawa' is 'born': it is not so much 'written', as much as 'reduced to writing'. To borrow a famous and oft- quoted and therefore a ready- made (yet inadequate) expression from Wordsworth: 'spontaneous overflow', could come nearer the meaning of my intention. Though it means admitting a lot of scope for controversies, I would hesitatingly say, that, the would-be mother has a remote 'sense' of a 'child' developing in her. But the exactness of what and how the child-in-the-womb be, shrouds the mystery, and continues to be so even in these days of the advanced and advancing scientific age. There is some far-off experiential awareness; but many more essentials remain deeply inexpressible, and only experiential to the 'mother'. That is why perhaps the word 'born' surfaced uppermost in my mind. (Vide Introduction to Bhawya - Maanawa) Looking at it from another angle, how does a flower 'attain' itself on a plant or a tree? Is the 'mother tree' or 'mother-plant' aware of it? It is the 'naturalness' in a process that 'makes' the flower come on a tree. But it is the intellectual side of the human mind that 'attributes' motives for anything that is perceived as happening. In a way, we, humans, 'seek a meaning through personification'; because it gives an illusion of an explanation, which satisfies the intellect-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

and intellect only. (Should we remind ourselves that man is among other things a 'reasoning animal'?)

Once, something has taken a shape and has been ushered into this phenomenal world, it has a reason to exist as it is. Why the leaf of a tall tree is small, and contrastingly, while other trees bear long ones or round ones or anything else is just a futile question. The only right 'explanation' if need be, would be that it is so because it is so. Again, here is another case, where human intellect is trying to 'attribute' the same kind of a reason or motive.

May be, what I intend was that it is the 'natural', effortless and therefore, a spontaneous growth, not from physical organism but from a fully mature, well-'educated' mind with a strong and basic understanding of the spiritual. That much for the word 'born', though not exhaustive; that is 'spontaneity' itself.

It is quite relevant to conclude from the above obvious statement that the work, 'Bhawya-Maanawa' alone has received recognition but not so much the 'brother'. ('the Father which is in Heaven; as such all others of His children will have to be 'Brothers' on the universal reckoning.) In this case the author of 'Bhawya-Maanawa'- the brother of mankind indeed. Incidentally, when I have said that it (the 'Bhawya-Maanawa') is 'spontaneity', perhaps I have implied the explanation as much as I have implied in the word 'born'.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

The author, Shri Bhoosnoormath is so much steeped in the Vachanas and other spiritual works, that he 'lives' what he 'reads'. In this connection, what was said by Sampson of Milton is pertinent: that Milton 'lived his books and wrote his life' is equally applicable to the spiritual life of Shri Bhoosnoormath. For nearly 3/4 of a century of studying and imbibing into himself what he 'read' from books and added to it by the family-upbringing,- Shri Bhoosnoormath has developed a life that feeds on Vachanas and lives.

A digression here, please:

Language, spoken, to begin with and later on written down, is basically meant to 'communicate': may be (1) facts through objects, (2) feelings through appropriate words and (3) spiritual experiences that transcend the every-day world of words. To my limited understanding, Vachanas are the 'stores' of spirituals and esoteric experiences of the sharanas and seers and the spiritual life of those saints and prophets of Veerashaivism, but in no way different from those of other seers of the world, from time immemorial.

Incidentally, in the Introduction to one of Shri Devadu's novels (Mahaa - Braahmana), there is an attention arrester for the seekers of spiritual life. The content of the novel, pleads the author Shri Devadu, is a simple story for some: to some others, an imaginary fantasy: but for a few enlightened minds, it is a reality itself- the only reality that counts and should count- the real reality in this illusory world of sense- perception.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

The Vachanas are the experiences- the other wordly esoteric experiences that those Vachanakaaraas had had in their everyday yogic practice. Shri Bhoosnoormath, having not only decoded the implications of those sometime enigmatic expressions, has also laid bare their hidden meaning. To Shri Bhoosnoormath the words of that Vachana Sahitya are not merely words but symbols of experiences- which he can, not only 'understand' but also feel and experience (gist from several informal and free sittings with Shri Bhoosnoormath)

I have been led to believe that language is born for satisfying the human thirst for communicating to some one else- to share his thoughts, at still higher level- his feelings and experiences. - Even THAT language which can explore and express or that which attempts to express the inexpressible (Bosanquet's: 'conquest of the medium of communication'). Perhaps this quality in language makes it ever fall short of its final goal of communication. Though, for everyday life language does fulfil the need to communicate- that is not the only end of any language. If that be so, it is only at the lowest level that this communicability is possible. But at the highest, it appears that what language does or strives to do is to 'express', if not communicate the rare and individual experiences of a yogic life.

The language of 'Bhawya-Maanawa' is pure and clear vachana language itself, but suitably turned out at its highest. Could it be said that 'Bhawya- Maanwa' is one long and sustained vachana composed of many many of such vachanas themselves?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

* * * * * * *

A reconsideration of the language of vachanas and the related works would shed better light and help better understanding of 'Bhawya-Maanawa'. The ease, the lilt and the effortless progress in theme and expression are the hall- mark of vachanas, which have found their rightful place in 'Bhawya Maanawa' too. Paradoxically the ease of expression (rather the container*) 'contains' the extra- ordinary experience of spiritual attainment (*like sponge retaining the juicy and life- sustaining water) that can yield the simulation of that particular spiritual saadhane, only if the reader has had or possesses at least its remote inkling. Most of the expressions symbolise spiritual experiences that are marvellous, entrancing and more often puzzling to the reasoning mind; thus they arrest attention by their strange and out-of- the - way expression. And adequate language, expressive of the sentiments, is hard to come by. As a result, the expressiveness is contradictory to its use in every-day life: for, the symbolic significance in the context alone will have to be conjectured and delineated to 'follow' what it means. Rather esoteric factors that constitute such experiences are all unique and unduplicable. Yet to express these, the language that we have developed is exceedingly inadequate. Whereas, 'Bhawya- Maanawa' which is the out- come of vachanas and such other esoteric experiences, is a masterly expression, the climactic to date, has come very near the experience itself (this statement is by one who has tried to approach the book through his intellectual probe, rather than through personal experience: hence his apologies for daring to say something without the necessary empathy)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Human language has been whetted for its capability of expression, through the intellectual process alone: minute logical distinctions can be made: but alas, where is the vibrant touch and the electrifying touch of 'enlivening' that occultic experience? What is more distressing is that there have been mere suggestions only, and only pointing towards a unique experience in the realm of the spirit and the soul. But no language has been able to convey the totality of experssion- in full (Is it an overstatement?)

But the milieu that weaves itself (like a creeper and not a thread) in 'Bhawya- Maanawa' the lofty plane that it maintains all through of spiritual solemnity and the collocation of onomatopaeic music and magic of words, among others of its distinguishing characteristics, lend the story element a spiritual aroma. One need remind oneself of what Aristotle said in another connection: 'the whole is more than merely the addition of all its parts, put together'.

Well, if spiritual experience could be precisely and exactly portrayed, perhaps there would not have been so many clashing interpretations as well as blinding controversies. The very existence of these in abundance, through the historical records, indicates that we are yet to be successful and fortunate in developing a sufficiently expressive medium for that spiritual feel. Yet, with the means now available, 'Bhawya- Maanawa' has profoundly risen high up in a sort of airy- concretising of an experience that is all possible, only for a saadhaka of spiritual life. After all, occult happenings are occult and remain so, defying any precision and thus, nullifying any attempt at guess.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

There are several layers of an experience- even in the same incident or episode in 'Bhawya- Maanawa': the same happening has been happening but it gains prismatic and kaleidoscopic effect of multiplicity and of different intensities- further a remote sense of order is glimpsed in the larger context of the story, like the uncharted vastness of life of this puzzling world- life. There is a hazily noticed semblance to life- a literary piece of a different order still essentially literary blending in it the ever enigmatic spiritual.

The easy flow may however mislead a reader effortlessly from one line to another lulled by the sheer beauty of its lilt but only if the reader allows himself to be drifted away from its main 'message'. We should not arrive at the end of the way; instead we should be ready to savour the joys on the way, like a swimmer not swimming alone, but to stay in the water to savour its feel, the joy: we must be willing to dive as well, in this elixirial eternal river that 'Bhawya- Maanawa' is. That is another way of saying that the simplicity is only seeming simplicity: to express the same in a paradox the simple is in reality the difficult.

* * * * * * * *

Technically in the dramatic tradition, 'Bhawya- Maanawa' is a poetic drama and follows slightly the tradition of dramatic representation of George Bernard Shaw; a thesis (in 'Bhawya- Maanawa' the introduction by the author, in the intial 48 pages) to be followed by 'dramatization'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

in brilliant dialogue. But Shaw wants to prove a thesis: but 'Bhawya -Maanawa' allows the historical event to **take its own course, develop its own individuality,** gathering on its 'journey' new dimensions at every stage. While Shaw controls and directs its course, 'Bhawya-Maanawa' allows free- will course: At some other tangential level, in an occultic flash, the message that is inherent is the unconsciously present, theory of Evolution of Darwin. Darwin's was of course mostly the physical transformation as ecologically dictated. Whereas 'Bhawya- Maanawa' sees far deep in- and suggests the spiritual evolution. Every man as a potential Bhawya -Maanawa- the maanawa that is YET to be. That is, man as he is today is not yet the maanawa: he is perhaps a human animal, not yet sufficiently 'awake' or evolved in the spiritual line. He is yet to be that 'Maanawa' of the future for which Akka Mahadevi is a practicable, ideal to gain from and to emulate. That is the evolution- the spiritual evolution of the future Man - the Bhawya Maanawa.

* * * * * * * * *

For those who are familiar with John Milton, the author of Bhawya- Maanawa, Shri. Bhoosnoormath strikes an immediate resemblance: Milton's dedication and his concept are obviously seen in Shri Bhoosnoormath's: In the case of Bhawya Maanawa it is both a Heaven (not merely a Paradise) to Gain and Regain. It is not Lost at all. For gaining it or regaining it depends on the evolution of man (in the case of Bhawya Maanawa- it is a woman

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

who is a universalised Man- merely a historical character for the sake of possibility)- the evolution that 'ripens' on this very earth and what is more, remains ever so thereafter, strangely enough without getting 'rotten' or stale.

It is already deducible from the above that this earth is the Heaven itself- not elsewhere and it is the spiritually awakened mind that ultimately transforms, in Milton's words: 'a Heaven of Hell and Hell of Heaven'.

Implying in this is the idea that every man is eligible for salvation and this earth is not only the field of activity but also the fruition of his attainments. It is the eerie-spiritualised and therefore unbodied presence of the soul, without any tangible existence that is empty. Therefore it is rich: and it is rich therefore it is empty.

* * * * * * * * *

The characters are all mere entities, only to give 'Bhawya Maanawa' a human touch of normal human existence. They are not merely individuals but universalised qualities, transcending the human weakness except the weakness of being human and therefore subjected to mortality.

In Death there is not annihilation but sublimation of the dross into the invaluable, that could be, for want of a better word described as,: 'pure- space- 'non- existent space. In some quarters there is an impression that only some 'chosen' people are meant for the favour of God's blessing, or protection.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Without mentioning this aspect the story in 'Bhawya Maanawa' brings out the non- discriminative blessings that every living creature gets and gets lovingly.

* * * * *

Rabindranath Tagore's essay "What is Art?" elucidates through a relevant comparison how a work of art is born. He speaks of a piece of iron being heated which passes through the stage of red-heat and then reaches to white heat. But as long as the iron piece is red- hot, it is not sufficiently saturated to yield back or irradiate: it goes on receiving still: Like-wise an artist gathers into himself all experience till it suffuses him to the full. Once that stage of saturation is reached, he starts giving out 'art product' in the form of irradiation of heat and light. While these art- pieces start irradiating, the absorbed material begins to undergo a remarkable change, with suitable shapes for concretising the idealised 'concepts' in human, as well as super- human characters and characteristics, with spiritual significance, all arranged in an orderly story-- even of a historical happening (as in 'Bhawya Maanawa')-- therefore multi- dimensional relevance as, attained by the same 'material' with a distinct entity and distinct interpretation.

* * * * *

Milton's nobility of purpose, sublimity of the theme and the grand- style of loftiness are easily reflected in this epical work- of Shri Bhoosnoormath: 'Bhawya Maanawa'. Is it not again a paradox that what is so simple is so noble, so dignified, and yet, be lofty and reverential?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

* * * * *

Nobility of the thinker, the thought and the theme are all evocative of similar feelings in the receptive readers as well ('Nobleness enkindles nobleness')

Loftiness is closely married to clarity, superfluity is waste and simplicity enhances not only clarity but also loftiness.

* * * * *

A work of an epic stature elevates itself by simulating simplicity, not reduced to bare nakedness but ennobling it by just the bare magical touch for its exposition. Because too colourful a language would draw the reader's attention to its own glitter, not to the work proper:

Obviously, too decorative a language would hinder and obstruct the attention from the main to the subsidiary. That way the ultimate of a tree- bearing fruit is to offer the gift-fruit with a covering- (=the container) containing the invaluable juice-. But one has to imagine a practically non-existing fruit that has no covering whatsoever to distract. Instead the fruity kernel is directly available for its savouring and imbibing, in a simple and clear manner without laying down any crippling or distorting limitations.

* * * * *

The ideal that 'Bhawya Maanawa' projects is, that this life itself is a preparation for the lofty- here-after, as indicated earlier. The fleshly body is essential for spiritual life. The body is not a disqualifying adjunct to man. It

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

is real and unavoidable: no-life- in- the- body, no-salvation. But salvation of an individual is not the final end according to 'Bhawya--Maanawa' but the beginning. Having attained salvation for the self, it qualifies one to spread the same level of attainment among others. Hence Akkamma returns to the earthly world. As expressed elsewhere in spiritual life, the candle once lit has to kindle other candles as well which, in their turn have to dispel the darkness and bring in the hopeful divine Light for others too. To put the same idea differently, personal salvation should lead that enlightened soul to enlighten other individuals of humanity at large. That is what Akkamma's attainment wisely guides her finally to renunciate personal 'gain': Humanity at large should be the inheritor of that Bhawya. That is how this very earthly life with the earthly body assumes the importance that is due to it. In this context Browning's simple but hopeful lines hold out the same promise, of course in another context:

> Grow old along with me
> The best is yet to be
> The last of life, for which the first was made!

Unlike the Socratean pessimistic view the promise of a Bhawya --extra- ordinary yet- to- be, is in the evolution towards that attainable God for one and all- to elevate one- self in every successive stage to that lofty height in the spiritual and occultic life. Like the caterpillar one has every rightful opportunity to transcend to the beautiful and flying butterfly, but at first it should be a caterpillar indeed. In support of this implied message there abound epic similes from the main character-itself all symbolised in Akkamma herself. The excellence manifests itself

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

in itself in the convincing analysis through the spiritual dialogues that pass between Akkamma and others. The inexhaustible and suggestive analysis reveal that every Maanawa is yet to be that real ideal-- the Bhawya Maanawa. Thus it is not an unattainable ideal when termed as ideal-, that way, that state of 'ideal' is 'practicable' indeed:

* * * * *

A survey of other world-epics and 'Bhawya Maanawa'- immediately points out to the absence of 'Fight' as an important ingredient: the traditional epics bring out the conflict- content. Whereas 'Bhawya Maanawa' distinguishes itself by the subtle exposition of the spiritual 'cream'. The time- honoured method of catechism subjects Akkamma to steer through the path of discussion and arrives at the goal that she represents, to the loftiest nobility and solemnity: contrary to the common belief and argument, the imperishable promise is brought forth again- though surrounded by the seemingly perishable and the mutable. Like the simple atom, in various 'bonds' and 'arrangements' it assumes the limitless variety that the whole expanding universe is filled with.

It is not at all necessary to point out that every work of artistic creation has to create (the Greek word poet= means a 'maker'- rather a 'creator') a medium of expression-- expression of that particular vision that flashes in the creator's 'inward eye'- The expression may get 'frozen' into an objective- correlative but it is so only for that individual context. The force with which the 'flash' assumes any 'shape' liberates the living 'meaning', the 'sense'. My impression is, that every great art-piece has its own revealing medium which may not operate as

SRI JAGADGURU VISHWARADHYA JNANA SIMHASAN JNANAMANDIR LIBRARY Jangamwadi Math, Varanasi Acc. No. 3254

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

efficiently with other works of art. That is its 'uniqueness'- particularly so when the theme happens to be the uncharted and unchartable esoteric experience.

Further, a spiritual experience cannot (and should not) be analysed since it is the sum- total of an anubhawa, in which there appears to be immeasurably converging of very many intensities of experiences; it is through the bodily organs alone that they are 'registerable'; again emphasising the importance of the body that man is. How can a body-less soul experience that? Hence the highest attainment is to eliminate the bodily requirements slowly and gradually; and thus a body which retains the human experience but not as a restrictive of the spiritual, so that only awareness resides with a body and then it would be the fitting instrument to experience the 'thrill' without the delimiting human range of experience.

This long-sustained sublimity that 'Bhawya Maanawa' contains is also simple in the ease- of- expression: one cannot separate the expression from the expressed theme. They are of organic and mutual growth: one developing with the other.

* * * * *

'Bhawya Maanawa' has allegory: for every literary work (for that matter every branch of fine- arts) bears ample signs of an epigram-- a condensation of many- in its widest connotation. It is the enigmatic seed of Nyaagrodha which was the pointer to all the spiritual and divine search for the divine. This 'Bhawya Maanawa' is that enigmatic 'seed'- in that sense epigrammatic and mystical.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8792

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಭವ್ಯಮಾನವದ ಶಿಲ್ಪಿ ಪ್ರೊ. ಸಂ. ಶಿ. ಭೂಸನೂರಮಠ
79 ರ ಅಂಚಿನಲ್ಲಿ

....

'ಭವ್ಯಮಾನವ' ಕುರಿತು

The supremacy of Man and of the vast world which is his habitation, is the central thesis of the work.

-Ahobal Shankar.

ಈ ಉದ್‌ಗ್ರಂಥದ ಗಾತ್ರ ಹಾಗೂ ಗುಣ ಬೆರಗುಗೊಳಿಸುವಂತಿದೆ .... ಇಲ್ಲಿನ ಸಾಲುಗಳ ಕಲಾವಂತಿಕೆ ನನ್ನನ್ನು ಮರುಳುಗೊಳಿಸಿದೆ. ತಿಳಿ ನೀರಿನ ರಸಭರಿತ ಪಂಕ್ತಿಗಳು ನಿಜವಾಗಿ ಕನ್ನಡಿಗರು ಹೆಮ್ಮೆ ಪಡಬಹುದಾದ ಮಹಾಕಾವ್ಯ.

-ಪು. ತಿ. ನರಸಿಂಹಾಚಾರ

One of the most striking features of this epic is its inwardness and spirituality. Although the archetypal theme of piligrimage is at the heart of the epic, it is more a mystic journey than a physical one. In a way the entire work is a poeticization of the entire mystical experience of man.

-World Literature Today.
(A literary Qurterly - U. S. A)

ಮಾಲಗತ್ತಿ ಆಫ್‌ಸೆಟ್ ಪ್ರಿಂಟರ್ಸ ಆ್ಯಂಡ ಪಬ್ಲಿಶರ್ಸ್, ಸದಾಶಿವನಗರ, ಬೆಳಗಾವಿ - 590001

CC0. In Public Domain. Jangamwadi Math Collection, Varanasi